ಸ್ವಾತಂತ್ರ್ಯ ಮತ್ತು ಏಕೀಕರಣ ಚಳುವಳಿಯಲ್ಲಿ ಮಂಡ್ಯ ಜಿಲ್ಲೆಯ ಪಾತ್ರ

ಕನ್ನಡ ವಿಶ್ವವಿದ್ಯಾಲಯ, ಹಂಪಿ ಚರಿತ್ರೆ ವಿಭಾಗಕ್ಕೆ ಪಿಎಚ್.ಡಿ
ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ

ಸಂಶೋಧಕರು
ಮಹಾಂತೇಶ ಕುತನಿ

ಮಾರ್ಗದರ್ಶಕರು
ಡಾ. ಎಸ್.ಶಿವರಾಮು, ಎಂ.ಎ., ಪಿಎಚ್.ಡಿ.
ಇತಿಹಾಸ ಸಹಾಯಕ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ನಂಜನಗೂಡು - 571 301, ಮೈಸೂರು ಜಿಲ್ಲೆ.

ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
ಕರ್ನಾಟಕ ಸಂಘ (ರಿ.), ಮಂಡ್ಯ
2017

ಸ್ವಾತಂತ್ರ್ಯ ಮತ್ತು ಏಕೀಕರಣ ಚಳುವಳಿಯಲ್ಲಿ ಮಂಡ್ಯ ಜಿಲ್ಲೆಯ ಪಾತ್ರ

ಕನ್ನಡ ವಿಶ್ವವಿದ್ಯಾಲಯ, ಹಂಪಿ ಚರಿತ್ರೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ

ಸಂಶೋಧಕರು

ಮಹಾಂತೇಶ ಕುತನಿ

ಮಾರ್ಗದರ್ಶಕರು

ಡಾ. ಎಸ್.ಶಿವರಾಮು, ಎಂ.ಎ., ಪಿಎಚ್.ಡಿ.,
ಇತಿಹಾಸ ಸಹಾಯಕ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ನಂಜನಗೂಡು–571301, ಮೈಸೂರು ಜಿಲ್ಲೆ.

ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
ಕರ್ನಾಟಕ ಸಂಘ (ರಿ,), ಮಂಡ್ಯ.
2017

ಸಂಶೋಧಕರ ಪ್ರಮಾಣ ಪತ್ರ

ಸ್ವಾತಂತ್ರ್ಯ ಮತ್ತು ಏಕೀಕರಣ ಚಳುವಳಿಯಲ್ಲಿ ಮಂಡ್ಯ ಜಿಲ್ಲೆಯ ಪಾತ್ರ ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ, ಹಂಪಿ ಚರಿತ್ರೆ ವಿಭಾಗದ ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ, ಕರ್ನಾಟಕ ಸಂಘ (ರಿ), ಮಂಡ್ಯ (ಕನ್ನಡ ವಿಶ್ವವಿದ್ಯಾಲಯ ಹಂಪಿಯಿಂದ ಮಾನ್ಯತೆ ಪಡೆದಿದೆ) ಈ ಸಂಸ್ಥೆಯ ಮೂಲಕ **ಡಾ. ಎಸ್.ಶಿವರಾಮು,** ಇತಿಹಾಸ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಂಜನಗೂಡು ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಈ ಮಹಾಪ್ರಬಂಧವು ನನ್ನ ಸ್ವಂತ ಸಂಶೋಧನೆಯಾಗಿದೆ. ಇದನ್ನು ಸಂಪೂರ್ಣವಾಗಿ ಆಗಲಿ ಅಥವಾ ಭಾಗಶಃ ಆಗಲಿ ಯಾವುದೇ ವಿಶ್ವವಿದ್ಯಾಲಯದ ಪದವಿ ಅಥವಾ ಡಿಪ್ಲೊಮಾಗೆ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ಮಂಡ್ಯ
ದಿನಾಂಕ : 09-03-2017

M.Y. Kutani
(ಮಹಾಂತೇಶ ಕುತನಿ)
ಸಂಶೋಧಕ

ಮಾರ್ಗದರ್ಶಕರ ದೃಢೀಕರಣ ಪತ್ರ

ಮಹಾಂತೇಶ ಕುತನಿ ಇವರು ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾಕೇಂದ್ರ, ಕರ್ನಾಟಕ ಸಂಘ (ರಿ), ಮಂಡ್ಯ. (ಕನ್ನಡ ವಿಶ್ವವಿದ್ಯಾಲಯ ಹಂಪಿಯಿಂದ ಮಾನ್ಯತೆ ಪಡೆದಿದೆ) ಈ ಸಂಸ್ಥೆಯ ಮೂಲಕ **ಸ್ವಾತಂತ್ರ್ಯ ಮತ್ತು ಏಕೀಕರಣ ಚಳುವಳಿಯಲ್ಲಿ ಮಂಡ್ಯ ಜಿಲ್ಲೆಯ ಪಾತ್ರ** ಎಂಬ ವಿಷಯವನ್ನು ಕುರಿತು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಂಶೋಧಕರಾಗಿ ಸಂಶೋಧನೆ ನಡೆಸಿ, ಈ ಮಹಾಪ್ರಬಂಧವನ್ನು ಸಿದ್ಧಪಡಿಸಿದ್ದಾರೆ. ಈ ಮಹಾಪ್ರಬಂಧವನ್ನು ಇಡಿಯಾಗಿ ಅಥವಾ ಬಿಡಿಯಾಗಿ ಈ ಮೊದಲು ಇವರು ಯಾವುದೇ ಪದವಿ ಅಥವಾ ಡಿಪ್ಲೊಮಾ ಪದವಿಗಾಗಿ ಬಳಸಿಕೊಂಡಿಲ್ಲ. ಈ ಅಭ್ಯರ್ಥಿ ನನ್ನೊಂದಿಗೆ ನಾಲ್ಕು ವರ್ಷಗಳು ಸಂಶೋಧನೆಯ ಕೆಲಸ ಮಾಡಿದ್ದಾರೆಂದು ಈ ಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ವಿಭಾಗಕ್ಕೆ ಸಾದರಪಡಿಸಲು ನಾನು ಸಮ್ಮತಿಸುತ್ತೇನೆಂದು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ : ಮಂಡ್ಯ
ದಿನಾಂಕ : 09-03-2017

ಡಾ. ಎಸ್.ಶಿವರಾಮು, ಎಂ.ಎ., ಪಿಎಚ್.ಡಿ.,
ಸಹಾಯಕ ಪ್ರಾಧ್ಯಾಪಕರು,
ಇತಿಹಾಸ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ನಂಜನಗೂಡು–571301, ಮೈಸೂರು ಜಿಲ್ಲೆ.

ಸ್ವಾತಂತ್ರ್ಯ ಮತ್ತು ಏಕೀಕರಣ ಚಳುವಳಿಯಲ್ಲಿ ಮಂಡ್ಯ ಜಿಲ್ಲೆಯ ಪಾತ್ರ

ಪರಿವಿಡಿ

ಅಧ್ಯಾಯ–ಒಂದು

ಪ್ರಸ್ತಾವನೆ

ಸ್ವಾತಂತ್ರ್ಯ ಮಹೋತ್ಸವದ ಅಮೃತವರ್ಷದ ಸನಿಹದಲ್ಲಿರುವ ಭಾರತ ದೇಶವು ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷರ ಅಧೀನಕ್ಕೆ ಒಳಪಟ್ಟಿತ್ತು. ಎರಡು ಶತಮಾನಗಳ ಕಾಲದ ಬ್ರಿಟಿಷರ ಆಳ್ವಿಕೆ, ವಸಾಹತುಶಾಹೀ ಧೋರಣೆ, ಕಂದಾಯನೀತಿ, ಗೃಹ ಕೈಗಾರಿಕೆಗಳ ಮೇಲೆ ಬೀರಿದ ಪ್ರಭಾವ, ಪತ್ರಿಕಾ ಸ್ವಾತಂತ್ರ್ಯ ಮೇಲಿನ ನಿರ್ಬಂಧ, ಶಸ್ತ್ರಾಸ್ತ್ರ ನಿಷೇಧ ಕಾಯ್ದೆ ಮುಂತಾದ ಕಾರಣಗಳಿಂದ ಕ್ರಮೇಣ ಭಾರತೀಯರಲ್ಲಿ ರಾಷ್ಟ್ರೀಯ ಭಾವನೆಗಳು ಬೆಳೆದು ಬ್ರಿಟಿಷರ ವಿರುದ್ಧ ಪ್ರತಿಭಟನೆಯನ್ನು ಆರಂಭಿಸಿದರು. ಲೋಕಮಾನ್ಯ ಬಾಲಗಂಗಾಧರ ತಿಲಕರ ಪ್ರಭಾವದಿಂದ ಆರಂಭವಾದ ಸ್ವಾತಂತ್ರ್ಯ ಹೋರಾಟವು ತರುವಾಯ ಗಾಂಧೀಜಿ ಅವರ ಪ್ರವೇಶದ ನಂತರ ಸ್ವಾತಂತ್ರ್ಯ ಚಳುವಳಿ ಅಹಿಂಸಾ ರೂಪದಲ್ಲಿ ದೊಡ್ಡನಗರಗಳಿಂದ ಸಣ್ಣ ಸಣ್ಣ ಪ್ರದೇಶಗಳ ಮೂಲಕ ದೇಶಾದ್ಯಂತ ವ್ಯಾಪಿಸಿತು. ಮಹಾತ್ಮಗಾಂಧೀಜಿ ಅವರು ಅನುಸರಿಸಿದ ಸತ್ಯ, ಅಹಿಂಸೆ, ಸತ್ಯಾಗ್ರಹ ತತ್ವಗಳ ಮೂಲಕ ಆರಂಭಿಸಿದ ಸ್ವಾತಂತ್ರ್ಯ ಚಳುವಳಿಯು ಜಾಗತಿಕ ಚರಿತ್ರೆಯಲ್ಲಿಯೇ ಅವಿಸ್ಮರಣೀಯವಾದುದು. ಅವರು ಚಳುವಳಿ ಆರಂಭಿಸುವ ಪೂರ್ವದಲ್ಲಿ ದೇಶೀಯ ಅರಸರು ಬ್ರಿಟಿಷರ ವಿರುದ್ಧ ಯುದ್ಧಗಳ ಮೂಲಕ ಪ್ರಾಣವನ್ನು ಪಣಕ್ಕಿಟ್ಟು ತಮ್ಮ ಸ್ವಾತಂತ್ರ್ಯಕ್ಕೆ ಪ್ರಯತ್ನಿಸಿದ್ದರು. ದೇಶೀಯ ಅರಸರ ಹೋರಾಟವು ಹಿಂಸಾತ್ಮಕವಾಗಿದ್ದು ತಮ್ಮ ರಾಜ್ಯವನ್ನು ಉಳಿಸಿಕೊಳ್ಳುವ ಪ್ರಯತ್ನದಾಗಿತ್ತು. ಭಾರತದಲ್ಲಿ ಮೊದಲು ಅಲ್ಪ ಯಶಸ್ಸು ಪಡೆದವರು ಹೈದರಾಲಿ ಮತ್ತು ಟಿಪ್ಪುಸುಲ್ತಾನ್ ಇವರು 18ನೇ ಶತಮಾನದ ಅಂತ್ಯದಲ್ಲಿ ಇಂದಿನ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡುತ್ತಿದ್ದರು. ಬ್ರಿಟಿಷ್ ಸೈನ್ಯಕ್ಕೆ ಭಾರತದ ನೆಲದಲ್ಲಿ ಮೊದಲ ಬಾರಿಗೆ ಸೋಲಿನ ರುಚಿಯನ್ನು ತೋರಿಸುವ ಮೂಲಕ ವ್ಯಕ್ತಿಗತ ನೆಲೆಯಲ್ಲಿ ಸ್ವಾತಂತ್ರ್ಯದ ಕಿಡಿಯನ್ನು ಹೊತ್ತಿಸಿದ್ದು ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದ ಭಾಗದಿಂದಲೇ ಎನ್ನಬಹುದು. 1799ರಲ್ಲಿ ಟಿಪ್ಪುವಿನ ವೀರಮರಣದ ನಂತರ ಮೈಸೂರು ರಾಜ್ಯವು ಹೈದರಾಬಾದ್ ನಿಜಾಮ, ಮರಾಠರು, ಬ್ರಿಟಿಷರು ಹಾಗೂ ಮೈಸೂರು ಒಡೆಯರ ಆಳ್ವಿಕೆಯಲ್ಲಿ ಕನ್ನಡದ ಪ್ರದೇಶಗಳಾಗಿ ಹರಿದು ಹಂಚಿಹೋಗಿದ್ದವು. ನಂತರ ಬ್ರಿಟಿಷರು ಲಾರ್ಡ್ ವೆಲೆಸ್ಲಿಯ ಸಹಾಯಕ ಸೈನ್ಯ ಪದ್ಧತಿ ಮತ್ತು ಗೌರ್ವನರ್ ಜನರಲ್ ಡಾಲ್ ಹೌಸಿಯ ದತ್ತು ಮಕ್ಕಳಿಗೆ ಹಕ್ಕಿಲ್ಲವೆಂಬ ನೀತಿ ಮತ್ತು ಮುಂತಾದ ಕಾನೂನುಗಳನ್ನು ಒತ್ತಾಯಪೂರ್ವಕವಾಗಿ ಭಾರತೀಯರ ಮೇಲೆ ಹೇರಿದ್ದರು. ಅಂತಹ ಹಲವು ಕುತಂತ್ರಗಳಿಂದ ಬೇಸತ್ತು ದಾಸ್ಯದ ಸಂಕೋಲೆಯನ್ನು ಕಿತ್ತೆಸೆದು, ಅವರನ್ನು ರಾಷ್ಟ್ರದಿಂದಲೇ ಹೊಡೆದೋಡಿಸಿ, ಸ್ವಾತಂತ್ರ್ಯವಾಗಲು ಹೋರಾಟಗಳು ನಡೆದವು.

ಹೀಗೆ ಭಾರತದಲ್ಲಿ ಸ್ವಾತಂತ್ರ್ಯದ ಕಿಡಿಯು 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೂ ಕಾರಣವಾಯಿತು. ಈ ಸಂದರ್ಭದಲ್ಲಿ ರಾಜಕೀಯ ಹೋರಾಟಗಳು ಕರ್ನಾಟಕದ ಕೆಲವು ಪ್ರದೇಶಗಳಲ್ಲಿ ಮುಂಚೂಣಿಗೆ ಬಂದವು. ಅಂತಹವುಗಳಲ್ಲಿ ಕಿತ್ತೂರು, ನರಗುಂದ, ಹಡಗಲಿ, ಕೊಡಗು, ಸುಳ್ಯ, ದಕ್ಷಿಣ ಕನ್ನಡ, ಬಾದಾಮಿ ಮುಂತಾದೆಡೆ ಹುಟ್ಟಿಕೊಂಡವಲ್ಲದೇ ರಾಷ್ಟ್ರೀಯತೆಯ ಹೊಸ ಪರಿಕಲ್ಪನೆ ಭಾರತೀಯ ಶಕ್ತಿಯ ಪ್ರದರ್ಶನಕ್ಕೆ ಇಂಬು ನೀಡಿದವು. 1858ರ ಮಹಾರಾಣಿ ಘೋಷಣೆ ನಂತರ ಬ್ರಿಟಿಷ್ ಇಂಡಿಯಾವು ಬ್ರಿಟಿಷ್ ಪಾರ್ಲಿಮೆಂಟ್‌ನ ನೇರ ಆಡಳಿತಕ್ಕೆ ಒಳಪಟ್ಟಿತು. 1857ರ ನಂತರ ಎಚ್ಚೆತ್ತುಗೊಂಡು ಬ್ರಿಟಿಷ್ ಸರಕಾರ ಭಾರತದ ಆಡಳಿತದಲ್ಲಿ ಭಾರತೀಯರು ಭಾಗವಹಿಸುವುದಕ್ಕಾಗಿ, ಹಂತ ಹಂತವಾಗಿ ಸುಧಾರಣೆಗಳನ್ನು ಪ್ರಾರಂಭಿಸಿತು. ಇದೇ ಸಂದರ್ಭದಲ್ಲಿ ಮೈಸೂರು ಸಂಸ್ಥಾನದಲ್ಲಿ ಬ್ರಿಟಿಷ್ ಸರ್ಕಾರವು ಅನೇಕ ನಿರ್ಬಂಧಗಳ ಷರತ್ತಿನ ಮೇರೆಗೆ ಅಧಿಕಾರವನ್ನು ಮೈಸೂರು ಒಡೆಯರು ಪಡೆದುಕೊಂಡರು. ಆಡಳಿತದ ಅನುಕೂಲಕ್ಕಾಗಿ ಹತ್ತನೇ ಚಾಮರಾಜ ಒಡೆಯರ್ ಸಲಹೆ ಮೇರೆಗೆ ದಿವಾನರಾದ ಸಿ.ರಂಗಚಾರ್ಯ ಪ್ರಜಾಪ್ರತಿನಿಧಿ ಸಭೆಯನ್ನು 1881ರಲ್ಲಿ ಸ್ಥಾಪಿಸಿದರು. ಇದು ಮುಖ್ಯವಾಗಿ ಜಮೀನ್ದಾರರು, ವರ್ತಕ ಪ್ರತಿನಿಧಿಗಳು, ಪ್ಲಾಂಟೇಷನ್ ಬೆಳೆಗಾರರ ಪ್ರತಿನಿಧಿಗಳಿಂದ ಕೂಡಿದದು, ದಸರಾ ಸಂದರ್ಭದಲ್ಲಿ ಮೈಸೂರಿನಲ್ಲಿ ಸೇರುತ್ತಿದ್ದಿತು. ಪ್ರಾರಂಭದಲ್ಲಿ ಕೇವಲ ಮನವಿ ಸಲ್ಲಿಕೆ ಸ್ವರೂಪದದಲ್ಲಿದ್ದ ಈ ಸಭೆಯ ಕ್ರಮೇಣ ಕೆಲವು ಅಧಿಕಾರಿಗಳನ್ನು ಪಡೆದುಕೊಂಡಿತು.[1] ಈ ಮೂಲಕ ಮೈಸೂರು ಸಂಸ್ಥಾನದಲ್ಲಿ ಆಡಳಿತದ ಬಗ್ಗೆ ಜನರು ಜಾಗೃತರಾದರು ಕ್ರಮೇಣ ದೇಶಾದ್ಯಂತ ಶಿಕ್ಷಣ ವ್ಯವಸ್ಥೆ, ವೃತ್ತ ಪತ್ರಿಕೆಗಳ ಬೆಳವಣಿಗೆ, 1885ರಲ್ಲಿ ಸ್ಥಾಪಿತವಾದ ರಾಷ್ಟ್ರೀಯ ಕಾಂಗ್ರೆಸ್ ಜನರಲ್ಲಿ ರಾಜಕೀಯ ಪ್ರಜ್ಞೆ ಮೂಡಿಸಲು ಪ್ರಮುಖ ಪಾತ್ರವಹಿಸಿದ್ದವು. ಬ್ರಿಟಿಷರ ನೇರ ಆಡಳಿತಕ್ಕೆ ಒಳಪಟ್ಟಿದ್ದ ಮುಂಬೈ ಕರ್ನಾಟಕ ಭಾಗಗಳಲ್ಲಿ ಪ್ರಥಮವಾಗಿ ಸ್ವಾತಂತ್ರ್ಯ ಚಳುವಳಿ ಆರಂಭವಾಯಿತು. ಕಾರಣ ಬಾಂಬೆ ಪ್ರೆಸಿಡೆನ್ಸಿಯ ಕೆಲವು ಪ್ರದೇಶಗಳು ಬ್ರಿಟಿಷರ ನೇರ ಆಡಳಿತಕ್ಕೆ ಒಳಪಟ್ಟಿದದ್ದು, ಮತ್ತು ಅಲ್ಲಿನ ರಾಜಕೀಯ ನಾಯಕರ ಪ್ರಭಾವ ಹೆಚ್ಚಾಗಿತ್ತು. ಮದ್ರಾಸ್ ಪ್ರಾಂತ್ಯದಲ್ಲಿ ಪ್ರದೇಶಗಳಲ್ಲಿ ಇದೇ ರೀತಿಯ ದೇಶೀಯ ಸಂಸ್ಥಾನವಾಗಿದ್ದು, ಇದು ಒಡೆಯರ ಆಡಳಿತದಲ್ಲಿತ್ತು. ಇಲ್ಲಿ ರಾಷ್ಟ್ರೀಯ ಹೋರಾಟವು ತೀವ್ರವಾಗಿರಲಿಲ್ಲ ಎಂದು ಹೇಳಬಹುದು. 1924ರಲ್ಲಿ ಬೆಳಗಾವಿಯಲ್ಲಿ ಮಹಾತ್ಮಗಾಂಧೀಜಿ ಅವರ ಅಧ್ಯಕ್ಷತೆಯಲ್ಲಿ ನಡೆದ ಅಧಿವೇಶನದ ನಂತರ ಸ್ವಾತಂತ್ರ್ಯ ಚಳವಳಿ ಹಾಗೂ ಕನ್ನಡ ಪ್ರದೇಶದ ಜನರನ್ನು ಒಂದುಗೂಡಿಸುವ ಏಕೀಕರಣ ಚಳುವಳಿ ಒಟ್ಟಿಗೆ ಆರಂಭವಾಗಿದ್ದವು. ತರುವಾಯ ಮೈಸೂರು ಸಂಸ್ಥಾನಕ್ಕೆ ಸ್ವಾತಂತ್ರ್ಯ ಚಳುವಳಿಯ ವ್ಯಾಪಿಸಿತು. ಹೀಗೆ ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಕನ್ನಡಿಗರಲ್ಲಿ ಭಾರತೀಯ ರಾಷ್ಟ್ರೀಯತೆಯೊಂದಿಗೆ ಕನ್ನಡ ಪ್ರಜ್ಞೆ ಅಭಿವ್ಯಕ್ತಗೊಂಡಿತ್ತು. ಹರಿದು ಹಂಚಿಹೋಗಿದ್ದ

ಕನ್ನಡಿಗರನ್ನು ಭಾವನಾತ್ಮಕವಾಗಿ ಒಂದು ಮಾಡುವಲ್ಲಿ ನಡೆದ ಚಳುವಳಿಯನ್ನು ಏಕೀಕರಣ ಚಳುವಳಿ ಎಂದು ಹೇಳಬಹುದು. ಸ್ವಾತಂತ್ರ್ಯ ಮತ್ತು ಏಕೀಕರಣ ಚಳುವಳಿಯಲ್ಲಿ ಸಕ್ರಿಯವಾಗಿ ತೊಡಗಿಕೊಂಡಿದ್ದ ರಂಗನಾಥ ದಿವಾಕರರು ಹೇಳಿರುವಂತೆ ಸುಮಾರು 1905–1920ರ ವರೆಗಿನ ಕಾಲದಲ್ಲಿ ಭಾರತದ ರಾಜಕೀಯ ರಂಗದಲ್ಲಿ ಕಾಲಿಟ್ಟ ಕರ್ನಾಟಕದ ಕಾರ್ಯಕರ್ತರು ಎರಡು ಉದ್ದೇಶಗಳನ್ನು ಹೊಂದಿದ್ದರು ಮತ್ತು ಎರಡು ಭೂಪಟಗಳನ್ನು ತಮ್ಮ ಮುಂದೆ ಇಟ್ಟುಕೊಂಡಿದ್ದರು. ಒಂದು ಸ್ವಾತಂತ್ರ್ಯ ಭಾರತದ ನಿರ್ಮಾಣ ಇನ್ನೊಂದು ಕರ್ನಾಟಕದ ಏಕೀಕರಣ ಈ ಮೂಲಕ ಪರಕೀಯರ ದಾಸ್ಯವನ್ನು ಕಿತ್ತೆಸೆಯುವುದು ಮತ್ತು ಹರಿದು ಹೋಗಿ ಹಂಚಿಹೋಗಿದ್ದ ಕನ್ನಡ ಪ್ರದೇಶಗಳನ್ನು ಒಂದುಗೂಡಿಸುವುದಾಗಿತ್ತು.[2] 19ನೇ ಶತಮಾನದ ಆರಂಭದಲ್ಲಿ ಮೈಸೂರು ಸಂಸ್ಥಾನವನ್ನು ನಾಲ್ವಡಿ ಕೃಷ್ಣರಾಜ ಒಡೆಯರ್ ಆಳ್ವಿಕೆ ಮಾಡುವ ಸಂದರ್ಭದಲ್ಲಿ ಮಹಾರಾಜರು ಬ್ರಿಟೀಷರ ಅಧೀನದಲ್ಲಿದ್ದರು. ಹಾಗಾಗಿ ಮೈಸೂರಿನ ಪ್ರಜೆಗಳು ಇಮ್ಮಡಿ ಗುಲಾಮರಾಗಿದ್ದರು.[3] ಆದರೆ ಮನುಷ್ಯನ ಮೂಲ ಸ್ವಭಾವದಲ್ಲೇ ಬಂಧನದ ನಿರಾಕರಣೆ ಹಾಗೂ ಸ್ವಾತಂತ್ರ್ಯದ ಹಪಾಹಪಿ ಇರುವುದನು ಕಾಣಬಹುದು.

ಮಾನವನು ಸ್ವತಂತ್ರ ಜೀವಿ. ಸ್ವಾತಂತ್ರ್ಯದ ಬಯಕೆ ಮನುಷ್ಯನ ಸ್ವಭಾವದಲ್ಲೇ ಆಳವಾಗಿ ಬೇರೂರಿರುವಂತಹದು. ಅನ್ಯರ ಅಧೀನದಲ್ಲಿ ಬದುಕಲು ಇಚ್ಚಿಸುವುದಿಲ್ಲ. ಆಕಸ್ಮಿಕವಾಗಿ ಅನ್ಯರ ಅಧೀನದಲ್ಲಿ ಅಥವಾ ಆಳ್ವಿಕೆಗೆ ಸಿಕ್ಕಿ ಕೆಲವು ಕಾಲ ತೋಳಲಾಡಬೇಕಾಗಿ ಬಂದರು ಸ್ವಾತಂತ್ರ್ಯದ ಅವಶ್ಯಕತೆ ಯಾವತ್ತೂ ಕಾಡುತ್ತಲೇ ಇರುತ್ತದೆ. ತನಗೆ ತೊಂದರೆಯಾದಾಗ ವ್ಯಕ್ತಿಯು ವ್ಯವಸ್ಥೆಯ ವಿರುದ್ಧ ಬಂಡೇಳಲು ಪ್ರಯತ್ನಿಸುತ್ತಾನೆ. ಈ ರೀತಿಯ ಬಂಡೇಳುವಿಕೆಗೆ ಸಾಮೂಹಿಕ ಒಪ್ಪಿಗೆ ದೊರೆತಾಗ ಅದೊಂದು ಚಳುವಳಿಯಾಗಿ ರೂಪುಗೊಳ್ಳುತ್ತದೆ[4].

ಮೈಸೂಗು ಸಂಸ್ಥಾನವು ನಾಲ್ವಡಿ ಕೃಷ್ಣರಾಜ ಒಡೆಯರ್ ರವರು ಹಾಗೂ ದಿವಾನರುಗಳ ಪ್ರಯತ್ನದ ಫಲವಾಗಿ ನ್ಯಾಯ ವಿಧೇಯಕ ಸಭೆ, ನೀರಾವರಿ, ಕೈಗಾರಿಕೆ, ಶೈಕ್ಷಣಿಕ, ಬ್ಯಾಂಕಿಂಗ್, ಸಾಂಸ್ಕೃತಿಕ ಚಟುವಟಿಗಳಿಂದ ಅಭಿವೃದ್ಧಿ ಪಥದಲ್ಲಿದ್ದ ಮೈಸೂರು ಸಂಸ್ಥಾನದಲ್ಲಿ ಕ್ರಮೇಣ ಅಧಿಕ ಕಂದಾಯ, ದಿವಾನರ ದಬ್ಬಾಳಿಕೆ ನೀತಿಯಿಂದಾಗಿ ಸ್ವಾತಂತ್ರ್ಯ ಚಳುವಳಿಯೊಂದಿಗೆ ಅದರ ಒಂದು ಭಾಗವಾದ ಜವಾಬ್ದಾರಿ ಸರ್ಕಾರ ಸ್ಥಾಪನೆ ಹೋರಾಟ ಆರಂಭವಾಯಿತು. ಈ ಸಂಸ್ಥಾನದ ಜಿಲ್ಲೆಗಳಲ್ಲಿ ಒಂದಾದ ಮಂಡ್ಯ ಜಿಲ್ಲೆಯಲ್ಲಿ ಕೂಡಾ ಸ್ವಾತಂತ್ರ್ಯ ಚಳುವಳಿ ಆರಂಭವಾಯಿತು.

ಮಂಡ್ಯ ಜಿಲ್ಲೆಯಲ್ಲಿ ಮೈಸೂರು ಸರ್ಕಾರ ಹೊರಡಿಸಿದ ಕಂದಾಯ ಕಾಯ್ದೆ ವಿರುದ್ಧ ಪ್ರತಿಭಟಿಸಿದ ಮೊದಲ ವ್ಯಕ್ತಿಗಳೆಂದರೆ ಇಂಡುವಾಳು ಹೊನ್ನಯ್ಯ,

ಎಚ್.ಕೆ.ವೀರಣ್ಣಗೌಡ ಹಾಗೂ ಹೊನಗಾನಹಳ್ಳಿ ಕೆ.ಪುಟ್ಟಣ್ಣ ಇವರಲ್ಲಿ ಎಚ್.ಕೆ.ವೀರಣ್ಣಗೌಡ ಅವರು 1924ರಲ್ಲಿ ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿದ್ದು ಅಧಿವೇಶದಿಂದ ಪ್ರಭಾವಿತರಾಗಿದ್ದರು. ರೈತರ ಸಮಸ್ಯೆ ಬಗೆಹರಿಸಲು ಸರಕಾರದ ಕಂದಾಯ ನೀತಿ ವಿರುದ್ಧ ಪ್ರತಿಭಟಿಸಲು 1931ರಲ್ಲಿ ಇರ್ವಿನ್ ನಾಲಾ ರೈತರ ಚಳುವಳಿ ನಡೆಸಿದ್ದರು[5].

ಇದೇ ಸಂದರ್ಭದಲ್ಲಿ ಭಾರತದ ಸ್ವಾತಂತ್ರ್ಯ ಚಳುವಳಿಯ ಸಾರಥ್ಯವನ್ನು ಮಹಾತ್ಮಗಾಂಧೀಜಿಯವರ ನೇತೃತ್ವವನ್ನು ವಹಿಸಿಕೊಂಡ ನಂತರ ಸ್ವಾತಂತ್ರ್ಯ ಚಳುವಳಿಯ ಗತಿಯು ಸಂಪೂರ್ಣವಾಗಿ ಬದಲಾಯಿತು. ಅವರು ಅಹಿಂಸೆ, ಸತ್ಯ, ಸತ್ಯಾಗ್ರಹ, ಪ್ರತಿಪಾದಿಸಿದ್ದು ರಾಷ್ಟ್ರೀಯತೆಗೆ ನೈತಿಕ ಬಲವನ್ನಷ್ಟೇ ಅಲ್ಲ ಸಾಮ್ರಾಜ್ಯಷಾಹಿ ನೀತಿಗೆ ನೈತಿಕ ಸವಾಲು ಹಾಕಿದಂತೆ ಆಯಿತು. ಈ ರೀತಿಯಾಗಿ ಗಾಂಧೀಜಿಯವರು ವೈಯಕ್ತಿಕ ಹಾಗೂ ರಾಷ್ಟ್ರೀಯ ನೆಲೆಯಲ್ಲಿ ಸ್ವಾತಂತ್ರ್ಯ ಚಳುವಳಿಗೆ ಚಾಲನೆ ನೀಡಿದ್ದರ ಪ್ರಭಾವ ದೇಶದಾದ್ಯಂತ ಪ್ರಭಾವ ಬೀರಿತು[6]. ಮಹಾತ್ಮ ಗಾಂಧೀಜಿಯವರ ಪ್ರಕಾರ ಭಾರತದ ಸ್ವಾತಂತ್ರ್ಯ ಚಳುವಳಿ ಎಂದರೆ ಪರದಾಸ್ಯಯಿಂದ ಎಲ್ಲ ರೀತಿಯಿಮದಲೂ ಬಿಡುಗಡೆಯ ಹೊಂದುವುದು. ನ್ಯಾಯಬದ್ಧವಾದ ಜನತೆಯ ಆಳ್ವಿಕೆಯನ್ನು ಅಸ್ತಿತ್ವಕ್ಕೆ ತರುವುದು ಹಾಗೂ ಹಳ್ಳಿಗಾಡಿನ ಸಾಮಾನ್ಯ ಜನತೆಯು ತನ್ನ ಭವಿಷ್ಯಕ್ಕೆ ತಾನೇ ಹೊಣೆ ಎಂಬುದನ್ನರಿತುಕೊಂಡು ತನ್ನ ಪ್ರತಿನಿಧಿಗಳ ಮೂಲಕ ತನಗೆ ಬೇಕಾದ ಕಾಯಿದೆ ಕಾನೂನುಗಳನ್ನು ರಚಿಸಿಕೊಳ್ಳುವಂತಾಗುವುದೇ ಸ್ವಾತಂತ್ರ್ಯ.[7]

1927 ಹಾಗೂ 1934ರಲ್ಲಿ ಹರಿಜನ ನಿಧಿ ಸಂಗ್ರಹಕ್ಕಾಗಿ ಮಹಾತ್ಮ ಗಾಂಧೀಜಿಯವರು ಮೈಸೂರು ಸಂಸ್ಥಾನದ್ಯಾಂತ ಪ್ರವಾಸಕೈಗೊಂಡಿದ್ದರು. ಈ ಸಂದರ್ಭದಲ್ಲಿ ಮಂಡ್ಯ ಜಿಲ್ಲೆಯ ಪ್ರವೇಶಗಳಾದ ಶ್ರೀರಂಗಪಟ್ಟಣ, ಮಂಡ್ಯ, ಸೋಮನಹಳ್ಳಿ, ಮದ್ದೂರುಗಳಿಗೆ ಭೇಟಿನೀಡಿದ್ದರು. ಈ ಭಾಗದ ಜನರ ಗಾಂಧೀಜಿಯವರ ಹರಿಜನ ನಿಧಿಗೆ ಅಪಾರವಾದ ಧನಸಹಾಯ ನೀಡಿದರು. ಈ ಸಂದರ್ಭದಲ್ಲಿ ಗಾಂಧೀಜಿಯವರ ತತ್ವಗಳಾದ ಸತ್ಯ, ಅಹಿಂಸೆ, ಸತ್ಯಾಗ್ರಹದ ತತ್ವಗಳ ಮಂಡ್ಯ ಜಿಲ್ಲೆಯ ಜನಸಾಮಾನ್ಯರ ಮೇಲೆ ಪ್ರಭಾವ ಬೀರಿ ಸ್ವಾತಂತ್ರ್ಯ ಚಳುವಳಿಗೆ ಪ್ರೇರೇಪಿಸಿತು[8]. ತರವಾಯ ಅದೇ ರೀತಿಯಲ್ಲಿ ಏಕೀಕರಣ ಚಳುವಳಿ ನಡೆಯಿತು. ಏಕೀಕರಣ ಎಂಬ ಪದವು ಒಂದುಗೂಡಿಸುವುದು ಎಂಬ ಅರ್ಥವನ್ನು ನೀಡುತ್ತದೆ. ಭಾರತದ ರಾಜ್ಯಗಳು ಎರಡು ಹಂತಗಳಲ್ಲಿ ರೂಪುಗೊಂಡವು. ಒಂದು ಹಂತ 1948ರಲ್ಲಿ ರಾಜ್ಯಗಳು ಸಂಯೋಜನೆಗೊಂಡ ಸಂದರ್ಭ. ಇನ್ನೊಂದು 1956ರಲ್ಲಿ ಭಾಷೆಯ ಆಧಾರದ ಮೇಲೆ ಪುನರಚನೆಗೊಂಡ ಸಂದರ್ಭ[9].

ಅಧ್ಯಯನದ ಉದ್ದೇಶಗಳು

* ಇಪ್ಪತ್ತನೇ ಶತಮಾನದಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿ ರಾಷ್ಟ್ರೀಯ ಆಂದೋಲನವಾಗಿದ್ದು, ಕರ್ನಾಟಕ ಏಕೀಕರಣ ಚಳುವಳಿಯ ಪ್ರಾಂತೀಯ ಚಳುವಳಿಯಾಗಿದೆ. ಈ ಎರಡು ಚಳುವಳಿಯಲ್ಲಿ ಮಂಡ್ಯ ಜಿಲ್ಲೆಯ ಪಾತ್ರವನ್ನು ಸ್ಥಳೀಯ ಚರಿತ್ರೆಯ ಹಿನ್ನೆಲೆಯಲ್ಲಿ ದಾಖಲಿಸಲಾಗಿದೆ. ಸ್ವಾತಂತ್ರ್ಯ ಮತ್ತು ಏಕೀಕರಣ ಬಹಳ ಮಹತ್ವಯುತವಾದ ವಿಷಯಗಳು ಒಂದು ಬ್ರಿಟಿಷ್ ವಸಾಹತುಶಾಹಿಯನ್ನು ವ್ಯವಸ್ಥೆಯಿಂದ ಮುಕ್ತಿಗೊಳಿಸಲು ನಡೆದ ಚಳುವಳಿಯಾದರೆ ಮತ್ತೊಂದು ಸ್ವಾತಂತ್ರ್ಯನಂತರ ನಡೆದ ಘಟನೆಯಾಗಿದೆ. ಸ್ವಾತಂತ್ರ್ಯ ಮತ್ತು ಏಕೀಕರಣ ಚಳುವಳಿಯಲ್ಲಿ ಹಲವು ಘಟನೆಗಳು ನಡೆದಿವೆ. ಚಳುವಳಿಯು ಹಲವು ಸಂಸ್ಥಾನಗಳಲ್ಲಿ ನಡೆದಿದೆ ಅದೇ ರೀತಿ ಮೈಸೂರು ಸಂಸ್ಥಾನದಲ್ಲಿನ ಎಂಟು ಜಿಲ್ಲೆಯಲ್ಲಿಯೂ ಚಳುವಳಿ ವ್ಯಾಪಕವಾಗಿ ನಡೆದಿದೆ.

ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಚಳುವಳಿಯು ಸ್ವಲ್ಪ ನಿಧಾನಗತಿಯಲ್ಲೇ ನಡೆಯಿತ್ತೆನ್ನಬಹುದು. ಏಕೆಂದರೆ ಮೈಸೂರು ಸಂಸ್ಥಾನದಲ್ಲಿ ಆಳುತ್ತಿದ್ದ ಒಡೆಯರು ಉಳಿದೆಲ್ಲಾ ಸಂಸ್ಥಾನಕ್ಕಿಂತ ಜನಪರವಾದ ಯೋಜನೆಗಳನ್ನು ಜಾರಿಗಳಿಸಿದ್ದರು. ಅಲ್ಲದೇ ಮೈಸೂರಿಗರು ಮಹಾರಾಜರೆಂದರೆ ಗೌರವ ಭಾವನೆಗಳನ್ನು ಹೊಂದಿದ್ದರು. ಮಹಾರಾಜರ ಬಗೆಗಿದ್ದ ಅವರ ಭಕ್ತಿಭಾವನೆಗಳಿಂದಲೇ, ಅರಸೊತ್ತಿಗೆಯ ಬಗ್ಗೆ ಅವರಿಗಿದ್ದ ಪ್ರೀತಿ ಗೌರವಾದರಗಳೇ ಚಳುವಳಿ ನಿಧಾನಗತಿಯಿಂದ ನಡೆಯಲು ಕಾರಣವಾಯಿತು. ಆದರೆ ದೇಶದೆಲ್ಲೆಡೆ ರಾಷ್ಟ್ರೀಯ ಆಂದೋಲನ ವ್ಯಾಪಕಗೊಂಡಂತೆ ರಾಷ್ಟ್ರೀಯ ನಾಯಕರುಗಳ ಪ್ರಚೋದನೆ ಸಂಸ್ಥಾನದ ಜನರೂ ಕೂಡ ಚಳುವಳಿಯಲ್ಲಿ ಹಂತ ಹಂತವಾಗಿ ದುಮುಕುವಂತೆ ಮಾಡಿತು. ಆ ವೇಳೆಗೆ ಮೈಸೂರು ಸಂಸ್ಥಾನದಲ್ಲಿ ಆಡಳಿತ ಸುಸೂತ್ರವಾಗಿ ನಡೆಸುವ ಸಲ್ಲುವ ಹಲವು ದೊಡ್ಡ ದೊಡ್ಡ ಆಡಳಿತಘಟಕಗಳನ್ನು ವಿಭಜಿಸಿ ಪ್ರತ್ಯೇಕ ಆಡಳಿತಘಟಕಗಳನ್ನಾಗಿ ಮಾಡಲು ಮುಂದಾದರು. 1939ರಲ್ಲಿ ಮೈಸೂರು ಜಿಲ್ಲೆಯಿಂದ ಮಂಡ್ಯ ಜಿಲ್ಲೆಯನ್ನು ವಿಭಜಿಸಿ ಪ್ರತ್ಯೇಕ ಜಿಲ್ಲೆಯನ್ನಾಗಿ ಮಾಡಲಾಯಿತು. ಜಿಲ್ಲೆಯಾದ ನಂತರ ಆ ವೇಳೆಗಾಗಲೇ ಚಳುವಳಿಯು ವ್ಯಾಪಕವಾಗಿ ನಡೆಯುತ್ತಿತ್ತು. ಆ ಸಂದರ್ಭದಲ್ಲಿ ಹೊಸದಾಗಿ ರಚನೆಯಾದ ಮಂಡ್ಯ ಜಿಲ್ಲೆಯ ಜನ ಮಹಾತ್ಮಗಾಂಧೀಯವರ ಪ್ರಭಾವಕ್ಕೆ ಒಳಗಾಗಿ ಸಂಸ್ಥಾನದ ಆಳರಸರ ಬಗೆಗೆ ಗೌರವವಿದ್ದರೂ ವಿಧಿ ಇಲ್ಲದೇ ಚಳುವಳಿಗೆ ದುಮುಕಿದರು ಮಂಡ್ಯ ಜಿಲ್ಲೆಯಲ್ಲೇ ಸಂಸ್ಥಾನದ ವಿರುದ್ಧ ದೊಡ್ಡ ಮಟ್ಟದ ಜನಾಂದೋಲನ ಆರಂಭಗೊಂಡಿದ್ದು ಮಂಡ್ಯ ನೆಲವಾದ ಶಿವಪುರದಲ್ಲಿ 1938ರಲ್ಲಿ ನಡೆಯಿತು ನಂತರ ಸಂಸ್ಥಾನದ ವಿದುರಾಶ್ವತ್ತದಲ್ಲಿ ಎರಡನೆಯ ಬಹುದೊಡ್ಡ ಜನಾಂದೋಲನ ನಡೆಯಿತು.

ನಂತರ ಸ್ವಾತಂತ್ರ್ಯ ಚಳುವಳಿಯಲ್ಲಿ ದಿವಾನರ ಹಲವು ಅಡ್ಡಿ ಆಂತಕಗಳ ನಡುವೆಯೂ ತೀವ್ರ ಸ್ವರೂಪವನ್ನು ಪಡೆಯಿತು.

ಮಂಡ್ಯ ಜಿಲ್ಲೆಯಲ್ಲಿ ಮಹಾತ್ಮ ಗಾಂಧೀಜಿಯವರ ಪ್ರಭಾವದಿಂದ ಅನೇಕ ಚಳುವಳಿಗಳು ಅಂದರೆ ಕ್ವಿಟ್‌ಇಂಡಿಯಾ ಚಳುವಳಿ, ಹ್ಯಾಮಿಲ್ಟನ್ ಸತ್ಯಾಗ್ರಹಗಳು ಮಾತ್ರವಲ್ಲದೇ ಗಾಂಧೀಜಿಯವರ ರಚನಾತ್ಮಕ ಕಾರ್ಯಗಳಿಂದ ಖಾದಿ, ಪಾನ ನಿರೋಧದಂತಹ ಅಸ್ಪೃಶ್ಯನಿವಾರಣೆಯಂತಹ ಕಾರ್ಯ ಗಳಲ್ಲೂ ಜನ ಬೆಂಬಲ ನೀಡಿದರು. ಜಿಲ್ಲೆಯ ಸ್ವಾತಂತ್ರ್ಯ ಹೋರಾಟದಲ್ಲಿ ಜನ ಸಾಮಾನ್ಯರು, ವಿದ್ಯಾರ್ಥಿಗಳು, ಅಲ್ಲದೆ ಕಾರ್ಮಿಕರು ಸಹಾ ತಮ್ಮ ಕೊಡುಗೆಯನ್ನು ನೀಡಿದ್ದು ಪರಿಣಾಮವಾಗಿ ಸ್ವಾತಂತ್ರ್ಯ ಪಡೆಯಲಾಯಿತು.

ಸ್ವಾತಂತ್ರ್ಯಾನಂತರ ಜಿಲ್ಲೆಯಲ್ಲಿ ಜರುಗಿದ ಮತ್ತೊಂದು ಪ್ರಮುಖ ಆಂದೋಲನವೆಂದರೆ ಏಕೀಕರಣ ಚಳುವಳಿ ಮೈಸೂರು ಸಂಸ್ಥಾನದ ಜನರು ಆರಂಭದಿಂದಲೂ ಮೈಸೂರು ಭಾಗವು ಬೇರೊಂದು ಭಾಗದಲ್ಲಿ ವಿಲೀನವಾಗುವುದನ್ನು ಇಷ್ಟಪಟ್ಟವರಲ್ಲ ಏಕೆಂದರೆ ಇಷ್ಟೊಂದು ಅಭಿವೃದ್ಧಿ ಹೊಂದಿದ ಈ ಭಾಗವನ್ನು ಅಷ್ಟೇ ಹಿಂದುಳಿದ ಉತ್ತರಕರ್ನಾಟಕದಲ್ಲಿ ವಿಲೀನಗೊಳಿಸುವುದು ಸರಿಯಲ್ಲವಂದು ವಾದಿಸುತ್ತಿದ್ದರು. ಅದಕ್ಕಾಗಿ ಮೈಸೂರು ವಿಲೀನ ವಿರೋಧಿ ಆಂದೋಲನವು ಮಂಡ್ಯ ಜಿಲ್ಲೆಯಲ್ಲಿ ಕೆ.ಲಕ್ಕಪ್ಪಗೌಡ, ಕೆ.ವಿ.ಶಂಕರಗೌಡ ಮೊದಲಾದವರ ನೇತೃತ್ವದಲ್ಲಿ ನಡೆಯಿತು. ಇಷ್ಟೇ ಅಲ್ಲದೇ ಜಿಲ್ಲೆಯಲ್ಲಿ ಏಕೀಕರಣದ ಪರವಾಗಿಯೂ ಸಭೆಗಳು ನಡೆದವು. ಆದರೆ ಕೆಂಗಲ್ ಹನುಮಂತಯ್ಯನವರಂತಹ ನಾಯಕರುಗಳು ಆರಂಭದಲ್ಲಿ ವಿಲೀನವಿರೋಧಿಯಾಗಿದ್ದು ನಂತರ ರಾಜ್ಯದ ಹಿತದೃಷ್ಟಿಯಿಂದ ಏಕೀಕರಣದ ಪರವಾಗಿ ನಿಂತಿದ್ದರಿಂದ ಮೈಸೂರು ವಿಲೀನ ವಿರೋಧೀ ಆಂದೋಲನವು ಅಪಯಶಸ್ಸು ಕಂಡಿತು. ಪರವಿರೋಧ ನಿಲುವುಗಳೇನೆ ಇದ್ದರೂ ಅಂತಿಮವಾಗಿ ಮೈಸೂರು ಒಳಗೊಂಡಂತಹ ಮೈಸೂರು ರಾಜ್ಯ ರಚನೆಯಾಯಿತು. ಈ ರೀತಿಯಾಗಿ ಜಿಲ್ಲೆಯಲ್ಲಿ ಜನರು ತಮ್ಮ ಅಭಿವ್ಯಕ್ತಿಯನ್ನು ಸ್ವಾತಂತ್ರ್ಯ ಹಾಗೂ ಏಕೀಕರಣದಂತಹ ಆಂದೋಲನಗಳಲ್ಲಿ ವ್ಯಕ್ತಪಡಿಸಿದರು. ಈ ಹಿನ್ನೆಲೆಯಲ್ಲಿ ಈ ಅಧ್ಯಯನವನ್ನು ಸಮಗ್ರವಾಗಿ ಅಧ್ಯಯನ ಮಾಡುವ ದೃಷ್ಟಿಯಿಂದ ಈ ಕೆಳಕಂಡ ಉದ್ದೇಶಗಳನ್ನು ಅವಲೋಕಿಸುವ ಪ್ರಯತ್ನವನ್ನು ಈ ಸಂಶೋಧನೆಯಿಂದ ಮಾಡಲಾಗಿದೆ.

* ಮಂಡ್ಯ ಜಿಲ್ಲೆಯ ಭೌಗೋಳಿಕ ಹಿನ್ನಲೆ, ಇತಿಹಾಸ, ಜಿಲ್ಲಯ ರಚನೆ, ರಚನೆ ಪೂರ್ವದ ರಾಜಕೀಯ ಸ್ಥಿತಿಗತಿಗಳು, ರಚನೆಯ ಸಂದರ್ಭದಲ್ಲಿ ಉಂಟಾದ ಪರ-ವಿರೋಧ ನಿಲುವುಗಳನ್ನು ತೌಲನಿಕ ಅಧ್ಯಯನ ಮಾಡಲಾಗಿದ. ಮಂಡ್ಯ ಜಿಲ್ಲೆಯಲ್ಲಿ

ಮಹಾತ್ಮಗಾಂಧೀಜಿಯವರ ಹೆಜ್ಜೆಯ ಗುರುತುಗಳನ್ನು ಗುರುತಿಸುವ ಮೂಲಕ ರಾಷ್ಟ್ರೀಯ ಚಳುವಳಿಗೆ ಜಿಲ್ಲೆಯ ಜನತೆ ತಮ್ಮನ್ನು ಹೀಗೆ ಬೆಸದುಕೊಂಡರೆಂಬುದನ್ನು ಸಂಶೋಧನೆಯಿಂದ ಅರಿಯಲಾಗಿದೆ.

* ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಮೈಸೂರು ಸಂಸ್ಥಾನದಲ್ಲಿ ನಡೆದ ಪ್ರಮುಖ ಚಳುವಳಿಗಳಾದ 1938ರ ಶಿವಪುರ ರಾಷ್ಟ್ರಕೂಟ, 1939ರ ಹ್ಯಾಮಿಲ್ಟನ್ ಸತ್ಯಾಗ್ರಹ, ರಾಷ್ಟ್ರೀಯ ಆಂದೋಲನವಾದ 1942ರ ಕ್ವಿಟ್ ಇಂಡಿಯಾ ಚಳುವಳಿ, 1947ರ ಮೈಸೂರು ಚಲೋ ಚಳುವಳಿಯಲ್ಲಿ ಮಂಡ್ಯ ಜಿಲ್ಲೆಯ ಪಾತ್ರವನ್ನು ವಿವಿಧ ಮಜಲುಗಳೊಂದಿಗೆ ವಸ್ತುನಿಷ್ಠವಾಗಿ ಅವಲೋಕಿಸಲಾಗಿದೆ. ಈ ಎಲ್ಲಾ ಸ್ವಾತಂತ್ರ್ಯ ಚಳುವಳಿಯಲ್ಲಿ ಮಂಡ್ಯ ಜಿಲ್ಲೆಯ ವಿದ್ಯಾರ್ಥಿಗಳು, ಯುವಜನರು, ರೈತರು, ಮಹಿಳೆಯರು, ಕಾರ್ಮಿಕರು, ಕೆಳವರ್ಗದವರು, ದಲಿತರು, ಜನಸಾಮಾನ್ಯರು ಏಕಕಾಲದಲ್ಲಿ ಭಾಗವಹಿಸಿದರೂ ಅಧ್ಯಯನದ ಖಚಿತ ಗ್ರಹಿಕೆಗಾಗಿ ಹಾಗೂ ಸ್ಪಷ್ಟ ವಿಶ್ಲೇಷಣೆಗಾಗಿ ಪ್ರತ್ಯೇಕ ವರ್ಗಗಳಾಗಿ ವಿಭಾಗಿಸಿಕೊಂಡು ಕೆಳಸ್ಥರದ ನೆಲೆಯಲ್ಲಿ ಅವರ ಪಾತ್ರವನ್ನು ಗುರುತಿಸಲಾಗಿದೆ.

* ಮಂಡ್ಯ ಜಿಲ್ಲೆಗೆ ಏಕೀಕರಣ ಚಳುವಳಿಯ ಪ್ರವೇಶ, ಮೈಸೂರು ವಿಲೀನ ವಿರೋಧಿ ಸಮ್ಮೇಳನ, ಅಖಂಡ ಮೈಸೂರು ರಾಜ್ಯದ ರಚನೆಯ ಪರ ಮತ್ತು ವಿರೋಧಿ ನಿಲಯವುಗಳನ್ನು ವಸ್ತು ನಿಷ್ಠವಾಗಿ ಚರ್ಚಿಸಲಾಗಿದೆ.

* ಸ್ವಾತಂತ್ರ್ಯ ಮತ್ತು ಏಕೀಕರಣ ಚಳುವಳಿಗೆ ಸಂಬಂಧಿಸಿದಂತೆ ಮಂಡ್ಯ ಜಿಲ್ಲೆಯ ಪಾತ್ರ ಕುರಿತು ಪ್ರಕಟಿತ ಮತ್ತು ಅಪ್ರಕಟಿತ ಗ್ರಂಥಗಳ ಅಧ್ಯಯನ ನಡೆಸಿದ್ದು ಸಮಗ್ರವಾದ ವಿವರಣೆ ನೀಡುವ ಕೃತಿ ಪ್ರಕಟಣೆಗೊಂಡಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಪ್ರಾಥಮಿಕ ಹಾಗೂ ಅನುಷಂಗಿಕ ಆಧಾರಗಳೊಂದಿಗೆ ಸ್ವಾತಂತ್ರ್ಯ ಮತ್ತು ಏಕೀಕರಣ ಚಳುವಳಿಯಲ್ಲಿ ಮಂಡ್ಯ ಜಿಲ್ಲೆಯ ಪಾತ್ರದ ಕುರಿತು ಸಮಗ್ರವಾಗಿ ಅಧ್ಯಯನ ಮಾಡಿದ್ದು ಸಂಶೋಧನೆಯ ಮುಖ್ಯವಾದ ಉದ್ದೇಶವಾಗಿದೆ.

ಅಧ್ಯಯನದ ವಿಷಯದ ವ್ಯಾಪ್ತಿ

ಮಂಡ್ಯ ಪ್ರದೇಶದ ಅಸ್ತಿತ್ವವನ್ನು ಸಾವಿರಾರು ವರ್ಷಗಳಿಂದ ಗುರುತಿಸಬಹುದಾದರೂ ಮಂಡ್ಯ ಜಿಲ್ಲೆಯಾಗಿ 1ನೇ ಜುಲೈ 1939ರಂದು ಅಸ್ತಿತ್ವಕ್ಕೆ ಬಂದಿತು[10]. ಇದಕ್ಕಿಂತ ಮುಂಚೆ ಅದು ಮೈಸೂರು ಜಿಲ್ಲೆಯ ಒಂದು ಭಾಗವಾಗಿತ್ತು. ಸ್ವಾತಂತ್ರ ಮತ್ತು ಏಕೀಕರಣ ಚಳುವಳಿಯಲ್ಲಿ ಮಂಡ್ಯ ಜಿಲ್ಲೆಯ ಪಾತ್ರವನ್ನು ಕುರಿತು ಸಂಶೋಧನಾ ವ್ಯಾಪ್ತಿಯು ಮಂಡ್ಯ ಜಿಲ್ಲೆಯ ಸ್ವಾತಂತ್ರ್ಯ ಮತ್ತು ಏಕೀಕರಣಕ್ಕೆ

ಸೀಮಿತಗೊಳಿಸಲಾಗಿದೆ. ಅದರ ಕಾಲಘಟ್ಟವನ್ನು 1934 ರಿಂದ 1956 ರವರೆಗೆ ನಿಗಧಿಗೊಳಿಸಲಾಗಿದೆ. 1939ರಲ್ಲಿ ಮಂಡ್ಯ ಜಿಲ್ಲೆಯಾಗುವ ಪೂರ್ವದಲ್ಲಿಯೇ ನಡೆದ ಘಟನೆಗಳು ಸಂಶೋಧನೆಯ ಮಹತ್ವವನ್ನು ಹೆಚ್ಚಿಸುತ್ತವೆ. ಅವುಗಳಲ್ಲಿ ಪ್ರಮುಖ ಘಟನೆಯೆಂದರೆ 1934ರಲ್ಲಿ ಮಹಾತ್ಮ ಗಾಂಧೀಜಿಯವರು ಮಂಡ್ಯ ಜಿಲ್ಲೆಗೆ ಭೇಟಿ ನೀಡಿದ ಸಂದರ್ಭದಿಂದ ಜನರು ಸ್ವಾತಂತ್ರ್ಯ ಚಳುವಳಿಯ ಬಗ್ಗೆ ಪ್ರಭಾವಿತರಾಗಿದ್ದರು. ಮಂಡ್ಯ ಜಿಲ್ಲೆಯ ವ್ಯಾಪ್ತಿಯಲ್ಲಿ ಕಂಡು ಬರುವ ಮದ್ದೂರು, ಮಳವಳ್ಳಿ, ಮಂಡ್ಯ, ಶ್ರೀರಂಗಪಟ್ಟಣ, ಪಾಂಡವಪುರ, ಕೆ.ಆರ್.ಪೇಟೆ, ನಾಗಮಂಗಲ ಸ್ವಾತಂತ್ರ್ಯದಲ್ಲಿ ಚಳುವಳಿಯು ಸ್ಥಳೀಯವಾಗಿ ರೂಪುಗೊಂಡು ರಾಷ್ಟ್ರೀಯ ಚಳುವಳಿಗೆ ಹಾಗೂ ಪ್ರಾಂತೀಯ ಚಳುವಳಿಯಾದ ಏಕೀಕರಣ ಚಳುವಳಿಗೆ ಸ್ಪಂದಿಸಿದ್ದನ್ನು ಅಧ್ಯಯನದಲ್ಲಿ ವಿಸ್ತೃತಪಡಿಸಲಾಗಿದೆ. ಈ ಹಿನ್ನೆಲೆಯಲ್ಲಿ ಸಂಶೋಧನೆಯ ಕಾಲಘಟ್ಟವನ್ನು 1934ರಲ್ಲಿ ಮಹಾತ್ಮ ಗಾಂಧೀಜಿಯವರು ಮಂಡ್ಯಕ್ಕೆ ಭೇಟಿನೀಡಿದ ಸಂದರ್ಭದಿಂದ ಆರಂಭಿಸಿ 1956ರಲ್ಲಿ ಏಕೀಕರಣಗೊಂಡ ನೂತನ ಮೈಸೂರು ರಾಜ್ಯದ ಉದಯವರೆಗೆ ನಿಗದಿಗೊಳಿಸಿ ಸಂಶೋಧನೆಯ ಅಧ್ಯಯನ ಮಾಡಲಾಗಿದೆ.

ಅಧ್ಯಯನದಲ್ಲಿ ಅನುಸರಿಸಿರುವ ಸಂಶೋಧನಾ ವಿಧಾನ

ಪ್ರಸ್ತುತ ಅಧ್ಯಯನ ಇತಿಹಾಸ ಸಂಶೋಧನಾ ಮಾರ್ಗದ ಚೌಕಟ್ಟಿಗೊಳಪಟ್ಟಿದೆ. ಈ ಅಧ್ಯಯನದಲ್ಲಿ ಚಾರಿತ್ರಿಕ ಸಂಶೋಧನಾ ವಿಧಾನಗಳನ್ನು ಅಳವಡಿಸಿಕೊಳ್ಳಲಾಗಿದ್ದು ವಿಷಯಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪರಾಮರ್ಶಿಸಿ, ಮಾಹಿತಿ ಸಂಗ್ರಹಿಸಿ ಅವುಗಳನ್ನು ಕಾಲಾನುಕ್ರಮಕ್ಕನುಗುಣವಾಗಿ ಜೋಡಿಸಿ, ವಿಮರ್ಶಿಸಿ, ವಿಶ್ಲೇಷಣಾ ಮಾರ್ಗದಲ್ಲಿ ನಿರೂಪಿಸಲಾಗಿದೆ. ತೌಲನಾತ್ಮಕ ಅಧ್ಯಯನ ಮಾಡಿ ಪ್ರಬಂಧದ ಸಮಗ್ರತೆ ಹಾಗೂ ವಸ್ತುನಿಷ್ಠತೆಗೆ ಒತ್ತುಕೊಡಲಾಗಿದೆ. ಈ ಅಧ್ಯಯನಕ್ಕಾಗಿ ಪ್ರಾಥಮಿಕ ಮತ್ತು ಅನುಷಂಗಿಕ ಆಧಾರಗಳ ಸಂಗ್ರಹಕ್ಕಾಗಿ ಬೆಂಗಳೂರಿನಲ್ಲಿರುವ ವಿಧಾನಸೌಧದ ಕರ್ನಾಟಕ ರಾಜ್ಯ ಪತ್ರಗಾರ ಇಲಾಖೆ ಹಾಗೂ ಮೈಸೂರಿನ ವಿಭಾಗೀಯ ಪತ್ರಗಾರ ಇಲಾಖೆಯಲ್ಲಿರುವ ಸ್ಪೆಷಲ್ ಬ್ರಾಂಚ್ ಆಬ್‌ಸ್ಟ್ರಾಕ್ಟ್ ವರದಿಗಳು (1937 ರಿಂದ 1956 ರವರೆಗೆ), ಮೈಸೂರು ಆಡಳಿತ್ಮಾಕ ವರದಿಗಳು (1937 ರಿಂದ 1956 ರವರೆಗೆ) ಮೈಸೂರು ಕಾಂಗ್ರೆಸ್ ಅಧಿವೇಶನದ ವರದಿಗಳು, ಮೈಸೂರು ಪೊಲೀಸ್ ಕಡತಗಳು, ನ್ಯಾಯಾಲದ ಕಡತಗಳು, ಶಾಸನ ಸಭೆಯ ನಡಾವಳಿಗಳು, ಆದೇಶ ಪ್ರತಿಗಳು, ಸತ್ಯಾಗ್ರಹಿಗಳ ಹೊರಡಿಸಿದ ಕರಪತ್ರಗಳನ್ನು ಸಂಗ್ರಹಿಸಿ ಕಾಲಾನುಕ್ರಮದಲ್ಲಿ ಟಿಪ್ಪಣಿ ಮಾಡಿಕೊಂಡು ವಸ್ತುನಿಷ್ಠವಾಗಿ ಅಧ್ಯಯನ ಮಾಡಲಾಗಿದೆ. ಮೈಕ್ರೋ ಫಿಲ್ಮ್ ವಿಭಾಗದಲ್ಲಿನ ಪತ್ರಿಕೆಗಳಾದ ಸಾಧ್ವಿ, ತಾಯಿನಾಡು, ಕಂಠೀರವ, ಸತ್ಯವಾದಿ ಮುಂತಾದವುಗಳನ್ನು ಪರಾಮರ್ಶಿಸಿ ಮಾಹಿತಿ ಸಂಗ್ರಹಿಸಲಾಗಿದೆ.

ವಿಕಾಸ ಸೌಧದಲ್ಲಿರುವ ಸ್ವಾತಂತ್ರ್ಯ ಹೋರಾಟಗಾರರ ಸಂಬಂಧಿಸಿದ ಖಾಸಗಿ ದಾಖಲೆಗಳನ್ನು, ಕರಪತ್ರಗಳು, ಜಿಲ್ಲಾ ನಾಯಕರ ಪ್ರವಾಸ ವರದಿಗಳು, ದಾಖಲೆಗಳನ್ನು ಪರಾಮರ್ಶಿಸಿ ಮಾಹಿತಿ ಸಂಗ್ರಹಿಸಿ ಸಂಶೋಧನೆಯಲ್ಲಿ ಬಳಸಿಕೊಳ್ಳಲಾಗಿದೆ. ಬೆಂಗಳೂರಿನ ಮಿಥಿಕ್ ಸೊಸೈಟಿಯಲ್ಲಿನ ಜರ್ನಲ್ಸ್‌ಗಳು, ಕಿರುಹೊತ್ತಿಗೆ ಹಾಗೂ ಐ.ಸಿ.ಹೆಚ್.ಆರ್. ನಲ್ಲಿರುವ ಭಾರತೀಯ ಇತಿಹಾಸ ಕಾಂಗ್ರೆಸ್ ನಡಾವಳಿಗಳನ್ನು ಪರಾಮರ್ಶಿಸಲಾಗಿದೆ. ಅಲ್ಲದೇ ಬೆಂಗಳೂರಿನ ಬಸವನಗುಡಿಯಲ್ಲಿರುವ ಗೋಖಲೆ ಅಧ್ಯಯನ ಕೇಂದ್ರ, ಚಾಮರಾಜಪೇಟೆಯಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಗ್ರಂಥಾಲಯದಲ್ಲಿರುವ ಸಾಹಿತ್ಯಾಧಾರಗಳೊಂದಿಗೆ, ಕನ್ನಡ ಸಾಹಿತ್ಯ ಪರಿಷತ್ತಿನ ಸ್ಮರಣ ಸಂಚಿಕೆಗಳನ್ನು ಪರಿಶೀಲಿಸಲಾಗಿದೆ. ಹುಬ್ಬಳ್ಳಿಯಲ್ಲಿರುವ ಲೋಕಶಿಕ್ಷಣ ಟ್ರಸ್ಟ್ ಹಾಗೂ ಗ್ರಂಥಾಲಯದಲ್ಲಿರುವ ಸ್ವಾತಂತ್ರ್ಯ ಮತ್ತು ಏಕೀಕರಣ ಪೂರ್ವದ ಸಂಯುಕ್ತ ಕರ್ನಾಟಕ ಪತ್ರಿಕೆಗಳನ್ನು ಪರಾಮರ್ಶಿಸಿ ಪೂರಕವಾಗಿ ಬಳಸಿಕೊಳ್ಳಲಾಗಿದೆ. ಮೈಸೂರು ಮತ್ತು ಬೆಂಗಳೂರು ವಿಶ್ವವಿದ್ಯಾಲಯದ ಗ್ರಂಥಾಲಯಗಳಲ್ಲಿ ಪ್ರಕಟಿತ ಹಾಗೂ ಅಪ್ರಕಟಿತ ಪ್ರೌಢ ಪ್ರಬಂಧಗಳನ್ನು ಪರಿಶೀಲಿಸಲಾಗಿದೆ. ಹಾಗೂ ಜಿಲ್ಲೆ ಮತ್ತು ತಾಲ್ಲೂಕುಮಟ್ಟದ ಗ್ರಂಥಾಲಯಗಳಲ್ಲಿ ಅಮೂಲ್ಯವಾದ ಆಕರ ಗ್ರಂಥಗಳನ್ನು ಪರಾಮರ್ಶನ ಮಾಡಲಾಗಿದೆ. ಮಂಡ್ಯದಲ್ಲಿರುವ ಗಾಂಧೀಭವನ ಹಾಗೂ ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಗ್ರಂಥಾಲಯ ಮತ್ತು ಪಾಂಡವಪುರದಲ್ಲಿರುವ ಅಂಕೇಗೌಡ ಪುಸ್ತಕ ಮನೆಯನ್ನು ಜಿಲ್ಲೆಗೆ ಸಂಬಂಧಿಸಿದ ಗ್ರಂಥಗಳನ್ನು ಸಂಗ್ರಹಿಸಿ ಟಿಪ್ಪಣಿ ಮಾಡಿಕೊಂಡು ಸಂಶೋಧನಾ ಮಹಾಪ್ರಬಂಧದಲ್ಲಿ ಅಳವಡಿಸಲಾಗಿದೆ. ಮೌಖಿಕ ಸಂದರ್ಶನದಲ್ಲಿ ಮುಖ್ಯವಾಗಿ ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀರಂಗಪಟ್ಟಣದ ಸಿ.ಬಂದೀಗೌಡ, ಸಂದರ್ಶನ ಮಾಡಿ ಮಾಹಿತಿ ಸಂಗ್ರಹಿಸಿದ್ದೇನೆ. ಗಾಂಧೀಜಿಯವರು 1934ರಲ್ಲಿ ಮಂಡ್ಯ, ಮದ್ದೂರು ಸೋಮನಹಳ್ಳಿಗಳಿಗೆ ಭೇಟಿ ನೀಡಿದ್ದು, ಈ ಸ್ಥಳಗಳಿಗೆ ಭೇಟಿನೀಡಿ ಕ್ಷೇತ್ರಕಾರ್ಯ, ಛಾಯಾಚಿತ್ರ ಸಂಗ್ರಹಣೆ ಮೂಲಕ ಮಾಹಿತಿ ಸಂಗ್ರಹಿಸಲಾಗಿದೆ. ಗುಣಾತ್ಮಕ ಸಂಶೋಧನಾ ಆಶಯಗಳನ್ನು ಗಮನದಲ್ಲಿಟ್ಟುಕೊಂಡು ಕ್ಷೇತ್ರಕಾರ್ಯ, ಛಾಯಾಚಿತ್ರ ಸಂಗ್ರಹಣೆ, ಸ್ಥಳ ಪರಿಶೀಲನೆ ನಡೆಸಲಾಗಿದೆ. ಪ್ರಾಥಮಿಕ ಆಕರಗಳ ಜೊತೆಗೆ ಅನುಷಂಗಿಕ ಆಕರಗಳನ್ನು ಬಳಸಿಕೊಂಡು ಸ್ವಾತಂತ್ರ್ಯ ಹಾಗೂ ಏಕೀಕರಣ ಚಳುವಳಿ ಮಂಡ್ಯ ಜಿಲ್ಲೆಯಲ್ಲಿ ಹೀಗೆ ಹರಡಿತ್ತೆಂಬುದನ್ನು ಪ್ರಸ್ತುತ ಪಡಿಸಲಾಗಿದೆ. ಒಟ್ಟಾರೆಯಾಗಿ ಪತ್ರಾಗಾರ ಇಲಾಖೆಗಳಿಂದ ಸಂಗ್ರಹಿಸಿದ ದಾಖಲೆಗಳು ಅಧ್ಯಯನಕ್ಕೆ ಮಹತ್ವಪೂರ್ಣವಾಗಿ ಮಾಹಿತಿಯನ್ನು ಒದಗಿಸಿವೆ. ಈ ಮೂಲಕ ಅಧ್ಯಯನಕ್ಕೆ ಒಂದು ವಸ್ತುನಿಷ್ಠವಾದ ನ್ಯಾಯ ಒದಗಿಸಲು ಪ್ರಯತ್ನಿಸಲಾಗಿದೆ.

ಅಧ್ಯಯನ ವಿಷಯದ ಮಹತ್ವ

ಈ ಸಂಶೋಧನಾ ವಿಷಯವು ಸ್ವಾತಂತ್ರ್ಯ ಮತ್ತು ಏಕೀಕರಣ ಚಳುವಳಿಯಲ್ಲಿ ಮಂಡ್ಯ ಜಿಲ್ಲೆಯ ಪಾತ್ರ ಕುರಿತದ್ದಾಗಿದ್ದು, ಸ್ವಾತಂತ್ರ್ಯ ಮತ್ತು ಏಕೀಕರಣ ಚಳುವಳಿಯಲ್ಲಿ ಜಿಲ್ಲೆಯ ಪಾತ್ರದ ಚಿತ್ರಣವನ್ನು ನೀಡಲು ಪ್ರಯತ್ನಿಸಿದೆ. ಸ್ವಾತಂತ್ರ್ಯ ಮತ್ತು ಏಕೀಕರಣದ ಕುರಿತು ಇದುವರೆಗೆ ರಾಷ್ಟ್ರ ಹಾಗೂ ರಾಜ್ಯ ಮಟ್ಟದಲ್ಲಿ ಅಧ್ಯಯನಗಳು ನಡೆದಿವೆ. ಈ ಸಂಶೋಧನಾ ಮಹಾಪ್ರಬಂಧದಲ್ಲಿ ಸ್ಥಳೀಯ ಚರಿತ್ರೆಗೆ ಸಂಬಂಧಿಸಿದಂತೆ ಮಂಡ್ಯ ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಮತ್ತು ಏಕೀಕರಣ ಚಳುವಳಿ ಬಗ್ಗೆ ಸಂಶೋಧನಾ ನೆಲೆಯಲ್ಲಿ ದಾಖಲಿಸಲಾಗಿದೆ. ಸಬಾಲ್ಟರ್ನ್ ಅಧ್ಯಯನಕ್ಕೆ ಸಂಬಂಧಿಸಿದಂತೆ ಜಿಲ್ಲೆಯ ಜನ ಸಾಮಾನ್ಯರು, ವಿದ್ಯಾರ್ಥಿಗಳು, ಮಹಿಳೆಯರು, ಕಾರ್ಮಿಕರು, ರೈತರು, ಸ್ವಾತಂತ್ರ್ಯ ಮತ್ತು ಏಕೀಕರಣ ಚಳುವಳಿಯಲ್ಲಿ ಪಾಲ್ಗೊಳ್ಳುವ ಕುರಿತು ವ್ಯಾಪಕ ಮತ್ತು ಸಮಗ್ರವಾದ ಸಂಶೋಧನಾ ಚರ್ಚೆಗೆ ಒಳಪಡಿಸಿದ್ದು, ಜಿಲ್ಲೆಯ ಇತಿಹಾಸಕ್ಕೆ ಸಂಬಂಧಿಸಿದಂತೆ ಮಹತ್ವದ ದಾಖಲೆಯಾಗಿದೆ.

ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ 1934ರಲ್ಲಿ ಮಹಾತ್ಮ ಗಾಂಧೀಜಿಯವರ ಭೇಟಿ ನೀಡಿದ ನಂತರ ಜಿಲ್ಲೆಯ ಜನಗಳಲ್ಲಿ ರಾಷ್ಟ್ರೀಯ ಪ್ರಜ್ಞೆ, ಸ್ವಾತಂತ್ರ್ಯ, ಹಾಗೂ ಕಾಂಗ್ರೆಸ್ ಬಗ್ಗೆ ಜಾಗೃತಿ ಮೂಡಿತು. 1938ರಲ್ಲಿ ಮೈಸೂರು ಕಾಂಗ್ರೆಸ್ ಸ್ಥಾಪನೆ ನಂತರ ಮೈಸೂರು ಕಾಂಗ್ರೆಸ್ಸಿನ ಮೊದಲ ಅಧಿವೇಶನ ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಶಿವಪುರದಲ್ಲಿ 1938 ಏಪ್ರಿಲ್ 11, 12 ಮತ್ತು 13 ರಂದು ಅಧಿವೇಶನ ನಡೆಯಿತು[11]. ಅನಂತರ 1939 ಹಾಮಿಲ್ಟನ್ ಸತ್ಯಗ್ರಹದಲ್ಲಿಯೂ ಮಂಡ್ಯ ಜಿಲ್ಲೆಯ ಸತ್ಯಗ್ರಹಿಗಳು ಭಾಗವಹಿಸಿದರು. ವಸಾಹುತಶಾಹಿ ನೀತಿಯನ್ನು ಮಂಡ್ಯ ಜಿಲ್ಲೆಯ ಸತ್ಯಾಗ್ರಹಿಗಳ ಪ್ರತಿಭಟಿಸಿದ್ದು ಮೈಸೂರು ಸಂಸ್ಥಾನ ಇತಿಹಾಸದಲ್ಲಿ ಮಹತ್ವದ್ದಾಗಿದೆ.

ತರುವಾಯ 1942ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಹಾಗೂ 1947ರ ಮೈಸೂರು ಚಲೋ ಚಳುವಳಿಯಲ್ಲಿ ಮಂಡ್ಯ ಜಿಲ್ಲೆಯ ತಾಲ್ಲೂಕುಗಳಾದ ಮದ್ದೂರು, ಮಳವಳ್ಳಿ, ಮಂಡ್ಯ, ಶ್ರೀರಂಗಪಟ್ಟಣ, ಕೆ.ಆರ್.ಪೇಟೆ, ನಾಗಮಂಗಲಗಳಲ್ಲಿ ಚಳುವಳಿ ನಡೆಯಿತು. ಸ್ವಾತಂತ್ರ್ಯ ನಂತರ ಅಖಂಡ ಮೈಸೂರು ರಾಜ್ಯ ರಚನೆಗೆ ಸಂಬಂಧಿಸಿದಂತೆ 1956ರಲ್ಲಿ ಮಂಡ್ಯ ಜಿಲ್ಲೆಯಲ್ಲಿ ನಡೆದ ಮೈಸೂರು ವಿಲೀನ ವಿರೋಧಿ ಚಳುವಳಿ ಅಧ್ಯಯನ ದೃಷ್ಟಿಯಿಂದ ಮಹತ್ವದ್ದಾಗಿದೆ[12].

ಮೈಸೂರು ಯಥಾಸ್ಥಿತಿ ಉಳಿಯಲಿ ಎಂದು ಸಂಸ್ಥಾನದ ಎಂಟು ಜಿಲ್ಲೆಗಳಲ್ಲಿ ಮಂಡ್ಯ ಜಿಲ್ಲೆಯಲ್ಲಿ ಮಾತ್ರ ಸಮ್ಮೇಳನ ನಡೆಸಿ ಅಖಂಡ ರಾಜ್ಯ ರಚನೆಯನ್ನು ವಿರೋಧ

ವ್ಯಕ್ತಪಡಿಸಿದ್ದು ಸಂಶೋಧನೆಯಲ್ಲಿ ವಿಮರ್ಶಾತ್ಮಕವಾಗಿ ಅಧ್ಯಯನ ಮಾಡಲಾಗಿದ್ದು, ಇದು ಮಹತ್ವದ ವಿಷಯವಾಗಿದೆ. ಏಕೀಕರಣ ವಿಷಯದಲ್ಲಿ ಮಂಡ್ಯ ಜಿಲ್ಲೆಯಲ್ಲಿ ಉಂಟಾದ ಪರ-ವಿರೋಧ ಅಭಿಪ್ರಾಯವನ್ನು ಹಾಗೂ ಶಾಸನ ಸಭೆಯಲ್ಲಿ ನಡೆದ ರಾಜ್ಯ ಪ್ರಾಂತ್ಯ ವಿಂಗಡಣೆಯ ಆಯೋಗ ವರದಿಯ ಮಸೂದೆ ಕುರಿತು ನಡೆದ ಚರ್ಚೆಯಲ್ಲಿ ಮಂಡ್ಯ ಜಿಲ್ಲೆಯ ಶಾಸನ ಸಭಾ ಸದಸ್ಯರಾದ ಮದ್ದೂರಿನ ಹೆಚ್.ಕೆ.ವೀರಣ್ಣಗೌಡ, ಶ್ರೀರಂಗಪಟ್ಟಣದ ಶಾಸಕರಾದ ಕೆ.ಪುಟ್ಟಸ್ವಾಮಿ ಅವರ ಮೈಸೂರು ಯಥಾಸ್ಥಿತಿ ಉಳಿಯಲಿ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.[13] ಏಕೀಕರಣದ ಕುರಿತು ಶಾಸನ ಸಭೆಯಲ್ಲಿ ನಡೆದ ಚರ್ಚೆ, ಕರ್ನಾಟಕ ಚರಿತ್ರೆಯಲ್ಲಿ ಮಹತ್ವದ ಕಾಲಘಟ್ಟವಾಗಿದೆ. ಏಕೀಕರಣದ ಕುರಿತು ಸಾಧಕ ಭಾದಕಗಳನ್ನು ಸಮಗ್ರವಾದ ಚರ್ಚೆಗೆ ಅನುವು ಮಾಡಿಕೊಟ್ಟಿದ್ದು, ಪ್ರಸ್ತುತ ದಿನಗಳಲ್ಲಿ ಕೂಡ ಉಪಯುಕ್ತವಾದ ಚರ್ಚೆಯಾಗಿದ್ದು ಅಧ್ಯಯನದ ದೃಷ್ಠಿಯಿಂದ ಇದು ಮಹತ್ವವನ್ನು ಪಡೆದುಕೊಂಡಿದೆ.

ಅಧ್ಯಯನ ವಿಷಯಕ್ಕೆ ಸಂಬಂಧಿಸಿದ ಗ್ರಂಥಗಳ ಸಮೀಕ್ಷೆ

ಭಾರತದ ಸ್ವಾತಂತ್ರ್ಯ ಚಳುವಳಿ ಮತ್ತು ಕರ್ನಾಟಕ ಏಕೀಕರಣ ಚಳುವಳಿಗೆ ಸಂಬಂಧಿಸಿದಂತೆ ಅನೇಕ ಕೃತಿಗಳು, ಗ್ರಂಥಗಳು, ಸ್ಮರಣ ಸಂಚಿಕೆಗಳು ಹೊರ ಬಂದಿವೆ. ಆದರೆ ಸ್ವಾತಂತ್ರ್ಯ ಮತ್ತ ಏಕೀಕರಣ ಚಳುವಳಿಯಲ್ಲಿ ಮಂಡ್ಯ ಜಿಲ್ಲೆಯ ಪಾತ್ರದ ಕುರಿತು ಸಮಗ್ರ ಮಾಹಿತಿ ನೀಡುವ ಕೃತಿ ಪ್ರಕಟವಾಗಿಲ್ಲ. ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಪೂರ್ವ ಹಾಗೂ ನಂತರ ನಡೆದ ಏಕೀಕರಣ ಚಳುವಳಿ ಕುರಿತು ಕೆಲವು ವರದಿಗಳು, ಲೇಖನಗಳು, ಕಿರುಹೊತ್ತಿಗೆಗಳು ಪ್ರಕಟವಾಗಿವೆ. ಇದುವರೆಗೂ ಪ್ರಕಟಗೊಂಡ ಕೃತಿಗಳ ಮೂಲಕ ಸ್ವಾತಂತ್ರ್ಯ ಮತ್ತು ಏಕೀಕರಣ ಚಳುವಳಿಯಲ್ಲಿ ಮಂಡ್ಯ ಜಿಲ್ಲೆಯ ಪಾತ್ರವನ್ನು ಸಂಶೋಧನೆಯ ಸಂಶೋಧನಾ ಹಿನ್ನೆಲೆಯಲ್ಲಿ ವಿಶ್ಲೇಷಿಸುವ ಪ್ರಯತ್ನವನ್ನು ಮಾಡಲಾಗಿದೆ.

1956 ನವೆಂಬರ್ 1 ರಂದು ಅಖಂಡ ಮೈಸೂರು ರಾಜ್ಯ ಜಾರಿಗೆ ಬಂದ ದಿನದಂದು **ರಂಗನಾಥ ದಿವಾಕರ** ಸಂಪಾದಕತ್ವದಲ್ಲಿ **ಕರ್ನಾಟಕ ಏಕೀಕರಣದ ಕಥೆ** ಕೃತಿಯು ಹೊರ ಬಂದಿದೆ. ಈ ಕೃತಿಯು ಕರ್ನಾಟಕದ ಏಕೀಕರಣ ಚಳುವಳಿ ಬಗ್ಗೆ ಬೆಳಕು ಚೆಲ್ಲುವ ಪ್ರಥಮ ಪ್ರಯತ್ನವಾಗಿದೆ. ಈ ಕೃತಿಯಲ್ಲಿ ಏಕೀಕರಣ ಚಳುವಳಿಯ ಉಗಮ, ಹಂತಗಳು, ಮೈಸೂರು ಸಂಸ್ಥಾನದ ಪ್ರತಿಕ್ರಿಯೆ, ಭಾರತ ಸರಕಾರದ ನಿರ್ಣಯದ ಬಗ್ಗೆ ಮಹತ್ವಪೂರ್ಣವಾದ ಮಾಹಿತಿಯನ್ನು ಒಳಗೊಂಡಿದೆ. ಆದರೆ ಮಂಡ್ಯ ಜಿಲ್ಲೆಯಲ್ಲಿ ನಡೆದ ಮೈಸೂರು ವಿಲೀನ ವಿರೋಧಿ ಚಳುವಳಿ ಬಗ್ಗೆ ಉಲ್ಲೇಖವಿರುವುದಿಲ್ಲ.

1964ರಲ್ಲಿ ಆಂಗ್ಲ ಆವೃತ್ತಿಯಲ್ಲಿ ಪ್ರಕಟವಾದ **ಹಾಲಪ್ಪ, ಜಿ.ಎಸ್**. ಸಂಪಾದಿಸಿರುವ **ಹಿಸ್ಟರಿ ಆಫ್ ಫ್ರೀಡಂ ಮೂವ್‌ಮೆಂಟ್ ಇನ್ ಕರ್ನಾಟಕ** ಗ್ರಂಥವು ಎರಡು ಸಂಪುಟಗಳಲ್ಲಿ ಪ್ರಕಟಗೊಂಡಿದ್ದು, ಕರ್ನಾಟಕ ವಿವಿಧ ಪ್ರದೇಶಗಳಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿಯ ವಿವಿಧ ಘಟನೆಗಳ ವಿವರಣೆಯನ್ನು ನೀಡುತ್ತದೆ. 1968ರಲ್ಲಿ **ಆರ್.ಆರ್. ದಿವಾಕರ್** ಅವರು ಸಂಪಾದಿಸಿರುವ **ಕರ್ನಾಟಕ ಥ್ರೂ ದ ಏಜಸ್** ಕೃತಿಯು ಆಂಗ್ಲ ಆವೃತ್ತಿಯಲ್ಲಿ ಪ್ರಕಟಗೊಂಡಿದ್ದು. ಇದರ ಕನ್ನಡ ಆವೃತ್ತಿ **ಕರ್ನಾಟಕದ ಪರಂಪರೆ** ಎರಡು ಸಂಪುಟಗಳಲ್ಲಿ 1992 ರಲ್ಲಿ ಪ್ರಕಟಗೊಂಡಿವೆ. **ಸಂಪುಟ–02** ರಲ್ಲಿ ಸ್ವಾತಂತ್ರ್ಯ ಮತ್ತು ಏಕೀಕರಣ ಚಳುವಳಿಗೆ ಸಂಬಂಧಿಸಿದ ಅನೇಕ ಲೇಖನಗಳನ್ನು ಒಳಗೊಂಡಿದೆ. ಅವುಗಳಲ್ಲಿ ಪ್ರಮುಖವಾಗಿ ಕಾಂಗ್ರೆಸ್ ಮತ್ತು ಕರ್ನಾಟಕ ದೇಶೀಯ ಸಂಸ್ಥಾನಗಳು, ಸ್ವಾತಂತ್ರ್ಯದ ಪ್ರಮುಖ ಆಂದೋಲನಗಳು, ಭಾರತ ಬಿಟ್ಟು ತೊಲಗಿ ಚಳುವಳಿ, ಮೈಸೂರು ಏಕೀಕರಣಕ್ಕೆ ಮುಂಚೆ ಮತ್ತು ಅನಂತರ, ಕರ್ನಾಟಕ ಏಕೀಕರಣ ಕುರಿತ ಲೇಖನಗಳು ಅಧ್ಯಯನ ದೃಷ್ಟಿಯಿಂದ ಮಹತ್ವದ್ದಾಗಿದೆ. ಇದೇ ವರ್ಷದಲ್ಲಿ ಪ್ರಕಟಗೊಂಡಿರುವ **ಬಿ.ಪುಟ್ಟಸ್ವಾಮಯ್ಯ** ಅವರ **ಸಿ.ನಿಜಲಿಂಗಪ್ಪನವರ ಜೀವನ ದರ್ಶನ** ಕೃತಿಯಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಮೈಸೂರು ಕಾಂಗ್ರೆಸ್ ಅಧಿವೇಶನಗಳು, ಸಭೆಗಳು ಅವುಗಳ ನಿರ್ಣಯಗಳು, ಕಾಂಗ್ರೆಸ್ ಚಟುವಟಿಕೆಗಳ ಕುರಿತು ಚಿತ್ರಣವನ್ನು ನೀಡುತ್ತದೆ. ಅಲ್ಲದೆ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನಗಳಲ್ಲಿ ಕನ್ನಡಿಗರು ಪಾಲ್ಗೊಳ್ಳುವಿಕೆಯ ಬಗ್ಗೆ ವಿವರಣೆ ನೀಡುತ್ತದೆ. ಪ್ರಮುಖವಾಗಿ ಸ್ವಾತಂತ್ರ್ಯ ನಂತರ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದ ನಿರ್ಣಯಗಳು, ಭಾಷಾವಾರು ಪ್ರಾಂತ ನಿರ್ಮಾಣ ಕಾಯಕ್ಕೆ ವಿಳಂಬವಾಗಿದ್ದನ್ನು ದೃಢೀಕರಿಸುತ್ತವೆ. ಇವು ಕರ್ನಾಟಕ ಏಕೀಕರಣ ಚಳುವಳಿಗೆ ಸಂಬಂಧಿಸಿದಂತೆ ಪೂರಕವಾದ ಮಾಹಿತಿಯನ್ನು ನೀಡುತ್ತವೆ.

ಈ ಮೊದಲೇ ಮೈಸೂರು ಸರ್ಕಾರವು ಜಿಲ್ಲೆಗಳು ಕುರಿತು ಮಾಹಿತಿ ನೀಡುವ ಗ್ಯಾಸೆಟಿಯರ್ ಕಾರ್ಯವನ್ನು ಆರಂಭಿಸಿತ್ತು. ಅದರಂತೆ ಮಂಡ್ಯ ಜಿಲ್ಲಾ ಮಾಹಿತಿಗಳನ್ನು ಸಮಗ್ರವಾಗಿ ಕ್ರೋಢೀಕರಿಸುವ ಪ್ರಯತ್ನವಾಗಿ **ಶ್ರೀ ಸತ್ಯನ್ ಬಿ.ಎನ್.** ಅವರ ಸಂಪಾದಕತ್ವದಲ್ಲಿ 1968ರಲ್ಲಿ **ಮಂಡ್ಯ ಜಿಲ್ಲಾ ಗ್ಯಾಸೆಟಿಯರ್** ಆಂಗ್ಲ ಆವೃತ್ತಿ ಹೊರಬಂದಿತು. ಇದರ ಪರಿಷ್ಕೃತ ಕನ್ನಡ ಆವೃತ್ತಿ **ಪಾರ್ಥಸಾರಥಿ ಹಾಗೂ ಅಭಿಶಂಕರ.ಕೆ.** ಅವರ ಸಂಪಾದಕತ್ವದಲ್ಲಿ 2003 ರಲ್ಲಿ ಪ್ರಕಟವಾಯಿತು. ಗ್ಯಾಸೆಟಿಯರ್‌ನಲ್ಲಿ ಮಂಡ್ಯ ಜಿಲ್ಲೆಗೆ ಸಂಬಂಧಿಸಿದಂತೆ ಜಿಲ್ಲೆಯ ರಚನೆ, ರಾಷ್ಟ್ರೀಯ ಚಳುವಳಿ, ಮೈಸೂರು ಚಲೋ ಚಳುವಳಿ, ಏಕೀಕರಣ ಚಳುವಳಿ ಇವೇ ಮೊದಲಾದ ಮಾಹಿತಿಗಳೊಂದಿಗೆ ಜಿಲ್ಲೆಯ ಭೌಗೋಳಿಕ ಸ್ವರೂಪ, ಇತಿಹಾಸ ಬಗ್ಗೆ ತಿಳಿಸಿಕೊಡುವ ಪ್ರಮುಖ ಕೈಪಿಡಿಯಾಗಿದೆ. 1938ರ ಶಿವಪುರ ಧ್ವಜ ಸತ್ಯಾಗ್ರಹ, 1942ರ ಕ್ವಿಟ್ ಇಂಡಿಯಾ ಚಳುವಳಿ ಹಾಗೂ

1947ರಲ್ಲಿ ನಡೆದ ಮೈಸೂರು ಚಲೋ ಚಳುವಳಿಯಲ್ಲಿ ಜಿಲ್ಲೆಯ ಮದ್ದೂರು, ಮಳವಳ್ಳಿ, ಮಂಡ್ಯ, ಶ್ರೀರಂಗಪಟ್ಟಣ, ಪಾಂಡವಪುರ, ನಾಗಮಂಗಲ, ಕೆ.ಆರ್.ಪೇಟೆಗಳಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿಯ ಘಟನೆಗಳ ಸಂಕ್ಷಿಪ್ತ ವಿವರಣೆ ನೀಡುತ್ತದೆ. ಸ್ವಾತಂತ್ರ್ಯ ಚಳುವಳಿಯ ವಿವಿಧ ಆಯಾಮಗಳಲ್ಲಿ ಜಿಲ್ಲೆಯ ಶ್ರೀಸಾಮಾನ್ಯ ಹಾಗೂ ಕೆಳವರ್ಗದವರ ಪಾತ್ರವನ್ನು ವಿಶ್ಲೇಷಿಸಿರುವುದಿಲ್ಲ.

1969ರಲ್ಲಿ ಪ್ರಕಟಗೊಂಡ **ಗಾಂಧಿ ಮತ್ತು ಕರ್ನಾಟಕ** ಕೃತಿಯನ್ನು **ಸಿದ್ದವನಹಳ್ಳಿ ಕೃಷ್ಣ ಶರ್ಮ** ಸಂಪಾದಿಸಿದ್ದು, ಈ ಕೃತಿಯು ಮಹಾತ್ಮಗಾಂಧೀಜಿಯವರು 1934ರಲ್ಲಿ ಮೈಸೂರು ಸಂಸ್ಥಾನಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಮಂಡ್ಯ, ಸೋಮನಹಳ್ಳಿ, ಮದ್ದೂರಿಗೆ ಭೇಟಿ ನೀಡಿದ್ದು, ಹರಿಜನ ನಿಧಿ ಸಂಗ್ರಹದ ಬಗ್ಗೆ ಮಾಹಿತಿ ನೀಡುತ್ತದೆ. ಈ ಕೃತಿಯು ಮಹಾತ್ಮಗಾಂಧೀಜಿಯವರ ಹರಿಜನ ನಿಧಿ ಪ್ರವಾಸ ದಾಖಲೆಯಾಗಿದ್ದು, ಜಿಲ್ಲೆಯ ಜನತೆಯ ಮೇಲೆ ಬೀರಿದ ಪ್ರಭಾವವನ್ನು ಉಲ್ಲೇಖಿಸಿರುವುದಿಲ್ಲ. **ಎನ್.ಕೃಷ್ಣಸ್ವಾಮಿ** ಬರೆದಿರುವ **ಕರ್ನಾಟಕದಲ್ಲಿ ಗಾಂಧಿ** ಪುಸ್ತಕವು ಇದರ ಮುಂದುವರಿದ ಭಾಗವಾಗಿದೆ ಎಂದು ಹೇಳಬಹುದು. **ಎಂ.ಎನ್.ಜೋಯಿಸ್**ರವರ ಸಂಪಾದಕತ್ವದಲ್ಲಿ ರಚಿತಗೊಂಡಿದ್ದು **ಕರ್ಮಯೋಗಿ ತಗಡೂರು ರಾಮಚಂದ್ರರಾಯರ ಆತ್ಮಕಥನ ಮತ್ತು ಅಭಿನಂದನ ಗ್ರಂಥ** 1974ರಲ್ಲಿ ಪ್ರಕಟಗೊಂಡಿದ್ದು, ಇದು ಅವರ ಬದುಕಿನ ಚಿತ್ರಣದೊಂದಿಗೆ ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಂಡ ಘಟನೆಗಳು ವಿವರಗಳನ್ನು ತಿಳಿಸುತ್ತದೆ. ಅವುಗಳಲ್ಲಿ ಪ್ರಮುಖವಾಗಿ 1938ರಲ್ಲಿ ಶಿವಪುರದಲ್ಲಿ ನಡೆದ ಯುವಜನ ಸಮ್ಮೇಳನದ ವಿವರ, ಅಧ್ಯಕ್ಷರ ಭಾಷಣ ಹಾಗೂ 1939ರಲ್ಲಿ ನಡೆದ ಹ್ಯಾಮಿಲ್ಟನ್ ಸತ್ಯಾಗ್ರಹದ ಘಟನೆಗಳ ಬಗ್ಗೆ ಮಾಹಿತಿಯನ್ನೊದಗಿಸುತ್ತದೆ.

1974ರಲ್ಲಿ ಪ್ರಕಟಗೊಂಡ **ಎಚ್.ಕೆ.ವೀರಣ್ಣಗೌಡ** ಅವರ ಆತ್ಮಕಥನವಾದ **ಬದುಕು–ಮೆಲಕು** ಗ್ರಂಥದಲ್ಲಿ ಶಿವಪುರ ರಾಷ್ಟ್ರಕೂಟ, ಕ್ವಿಟ್ ಇಂಡಿಯಾ ಚಳುವಳಿ, ಮೈಸೂರು ಚಲೋ ಚಳುವಳಿ, ಮೈಸೂರು ವಿಲೀನ ವಿರೋಧಿ ಸಮ್ಮೇಳನ, ಏಕೀಕರಣ ಚಳುವಳಿಯ ವಿವರಣೆಯನ್ನು ತಮ್ಮ ಅನುಭವದೊಂದಿಗೆ ಸ್ಪಷ್ಟಪಡಿಸಿದ್ದಾರೆ. ಹೆಚ್.ಕೆ.ವೀರಣ್ಣಗೌಡ ಅವರು ಶಿವಪುರ ರಾಷ್ಟ್ರಕೂಟವನ್ನು ಯಶಸ್ವಿಯಾಗಿ ನಡೆಸಲು ಸುತ್ತಮುತ್ತಲಿನ ಹಳ್ಳಿಯ ಸಾಮಾನ್ಯ ಜನರು, ರೈತರು, ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಹಳ್ಳಿಗಳಲ್ಲಿ ಸಂಚರಿಸಿದ್ದನ್ನು ಘಟನೆಗಳೊಂದಿಗೆ ಉಲ್ಲೇಖಿಸಿದ್ದಾರೆ. ಆದರೆ ಶಿವಪುರ ರಾಷ್ಟ್ರಕೂಟದ ಸಮಗ್ರವಾದ ಮಾಹಿತಿಯನ್ನು ನೀಡುವುದಿಲ್ಲ. ಅದು ಅವರ ಅನುಭವದ ದಾಖಲೆಯಾಗಿದ್ದು, ವಿಶ್ಲೇಷಣೆಯ ಕೊರತೆ ಕಂಡು ಬರುತ್ತದೆ. ಮೈಸೂರು ವಿಲೀನ ವಿರೋಧಿ ಚಳುವಳಿ ಸಂದರ್ಭದಲ್ಲಿ ಕಾಂಗ್ರೆಸ್

ಪ್ರಮುಖ ನಾಯಕರು ಕೈಗೊಂಡು ನಿರ್ಣಾಯಗಳು, ಮೈಸೂರು ವಿಲೀನ ವಿರೋಧಿ ಚಳುವಳಿ ವಿಫಲವಾಗಿದ್ದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಡಾ ಸೂರ್ಯನಾಥ ಕಾಮತ್ ಅವರ ಸಂಪಾದಕತ್ವದಲ್ಲಿ 1977ರಲ್ಲಿ ಪ್ರಕಟಗೊಂಡ **ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು ಮೂರು ಸಂಪುಟ**ಗಳಲ್ಲಿ ಪ್ರಕಟಿಸಿದ್ದಾರೆ. ಈ ಸಂಪುಟಗಳಲ್ಲಿ ಶಿವಪುರ ಧ್ವಜ ಸತ್ಯಾಗ್ರಹ, ಕ್ವಿಟ್ ಇಂಡಿಯಾ ಚಳುವಳಿ ಮತ್ತು ಮೈಸೂರು ಚಲೋ ಚಳುವಳಿಯ ಬಗ್ಗೆ ವಿವರಿಸುತ್ತವೆ ಎರಡು ಮತ್ತು ಮೂರನೇ ಸಂಪುಟದಲ್ಲಿ ಮಂಡ್ಯ ಜಿಲ್ಲೆಯ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರಾದ ಎಚ್.ಕೆ.ವೀರಣ್ಣಗೌಡ, ಎ.ಕೆಂಚಪ್ಪ, ಎಂ.ಪುಟ್ಟೇಗೌಡ, ಎಂ.ಆರ್.ಎನ್.ಶಾಸ್ತ್ರಿ ಟಿ.ಎನ್.ಮಾದಪ್ಪಗೌಡ, ಪಿ.ಎನ್.ಜವರಪ್ಪಗೌಡ ಇನ್ನು ಮುಂತಾದವರ ಜೀವನ, ಭಾಗವಹಿಸಿದ ಚಳುವಳಿ, ಸೆರೆಮನೆ ವಾಸದ ಚಿತ್ರಣ ನೀಡುತ್ತದೆ. 1977ರಲ್ಲಿ ಪ್ರಕಟಗೊಂಡಿರುವ **ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳುವಳಿ** ಎಂಬ ಕೃತಿಯನ್ನು **ಕೆ.ವೀರತ್ತಪ್ಪ**ರವರು ರಚಿಸಿದ್ದು, ಮೈಸೂರು ಸಂಸ್ಥಾನದಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿಯ ಬಗ್ಗೆ ಸಮಗ್ರವಾದ ಮಾಹಿತಿಯನ್ನು ನೀಡಲು ಪ್ರಯತ್ನಿಸಿದ್ದಾರೆ. ಅವುಗಳಲ್ಲಿ ಪ್ರಮುಖವಾಗಿ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಮೈಸೂರು ಸಂಸ್ಥಾನದಲ್ಲಿನ ಪ್ರತಿಕ್ರಿಯೆ, ಮೈಸೂರು ಸಂಸ್ಥಾನದಲ್ಲಿ ರಾಜಕೀಯ ಪಕ್ಷಗಳ ಸ್ಥಾಪನೆ, ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಸ್ಥಾಪನೆ, ಅವುಗಳ ಚಟುವಟಿಕೆಗಳು, ಸಭೆಗಳು ನಿರ್ಣಾಯಗಳ ಬಗ್ಗೆ ಮಾಹಿತಿ ನೀಡುತ್ತದೆ. ಮೈಸೂರು ಕಾಂಗ್ರೆಸ್‌ನ ಪ್ರಮುಖ ಅಧಿವೇಶನಗಳಾದ ಶಿವಪುರ, ವಿದುರಾಶ್ವತ್ತ, ಶಿವಮೊಗ್ಗ, ಬೆಂಗಳೂರು, ಹರಿಹರ, ಚನ್ನಪಟ್ಟಣಗಳಲ್ಲಿ ನಡೆದ ಅಧಿವೇಶನ ವಿವರಗಳು ಸಂಶೋಧನೆಗೆ ಹೆಚ್ಚಿನ ಮಾಹಿತಿಯನ್ನು ನೀಡುತ್ತದೆ. ತರುವಾಯ 1947ರ ಮೈಸೂರು ಚಲೋ ಚಳುವಳಿಯ ಪ್ರಾರಂಭ ಸಂಸ್ಥಾನದಾದ್ಯಂತ ವ್ಯಾಪಿಸಿದ ಬಗ್ಗೆ ಚಿತ್ರಣ ನೀಡುತ್ತದೆ. ಆದರೆ ವಿವಿಧ ಆಯಾಯಮಗಳಲ್ಲಿ ಸ್ವಾತಂತ್ರ್ಯ ಚಳುವಳಿಯ ಚಿತ್ರಣವನ್ನು ನೀಡುವುದಿಲ್ಲ. **ವಿ.ಎಸ್.ನಾರಾಯಣರಾವ್** ಅವರು ಬರೆದಿರುವ **ಸ್ವಾತಂತ್ರ್ಯ ಸಂಗ್ರಾಮದಲ್ಲಿ ಶ್ರೀ ಸಾಮಾನ್ಯ** ಎಂಬ ಪುಸ್ತಕವು 1978ರಲ್ಲಿ ಕನ್ನಡ ಸಾಹಿತ್ಯ ಪರಿಷತ್‌ನಿಂದ ಪ್ರಕಟಗೊಂಡಿದೆ. ಈ ಪುಸ್ತಕದಲ್ಲಿ ದೇಶದ ಸ್ವಾತಂತ್ರ್ಯಕ್ಕಾಗಿ ಸಾಮಾನ್ಯ ಜನ ನೀಡಿದ ಕಾಣಿಕೆಯ ನೈಜ ಚಿತ್ರಣ ಇದೆ. ಆದರೆ ಈ ಪುಸ್ತಕದಲ್ಲಿ ಆಯ್ದ ಸಾಮಾನ್ಯ ಜನರ ಚಿತ್ರಣವಿದ್ದು, ಕನ್ನಡ ನಾಡಿನ ಶ್ರೀ ಸಾಮಾನ್ಯರ ಸಮಗ್ರವಾದ ಮಾಹಿತಿಯನ್ನು ಒಳಗೊಂಡಿರುವುದಿಲ್ಲ.

ಜೇಮ್ಸ್ ಮೇನರ್‌ನ ಪೊಲಿಟಿಕಲ್ ಚೇಂಜ್ ಇನ್ ಆನ್ ಇಂಡಿಯನ್ ಸ್ಟೇಟ್ ಮೈಸೂರು 1917–1955 ಕೃತಿಯಲ್ಲಿ ಮೈಸೂರಿನ ಸಾಮಾಜಿಕ ಸಂರಚನೆಯ ರಾಜಕೀಯ ಆಂದೋಲನಕ್ಕೆ ಕಾರಣವಾದ ಅಂಶಗಳ ಕುರಿತು ತಿಳಿಸುತ್ತದೆ. ಹಾಗೆಯೇ

ಬಿ.ಹೆಟ್ನೆ ಅವರ ದಿ ಪೊಲಿಟಿಕಲ್ ಎಕಾನಮಿ ಆಫ್ ಇಂಡೈರೆಕ್ಟ್ ರೂಲ್ ಇನ್ ಮೈಸೂರ್ 1881–1947 ಕೃತಿಯು ಮೈಸೂರು ಸಂಸ್ಥಾನದ ಆರ್ಥಿಕ ಮತ್ತು ರಾಜಕೀಯ ಬದಲಾವಣೆಯ ಪ್ರಕ್ರಿಯೆಯನ್ನು ತಿಳಿಸುತ್ತದೆ. ಈ ಎರಡು ಕೃತಿಗಳು ಮೈಸೂರು ಸಂಸ್ಥಾನದ ಚಾರಿತ್ರಿಕ ಅಧ್ಯಯನದ ದೃಷ್ಟಿಯಿಂದ ಬಹಳ ಮುಖ್ಯವಾಗಿವೆ. **ಡಿ. ಲಿಂಗಯ್ಯನವರು** 2011 ರಲ್ಲಿ ಪ್ರಕಟಿಸಿರುವ **ಶಿವಪುರ ಧ್ವಜ ಸತ್ಯಾಗ್ರಹ–ಸ್ವಾತಂತ್ರ್ಯ ಸಂಗ್ರಾಮದ ಚರಿತ್ರೆ** ಗ್ರಂಥವು ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಶಿವಪುರದಲ್ಲಿ ನಡೆದ ಮೈಸೂರು ಕಾಂಗ್ರೆಸ್‌ನ ಪ್ರಥಮ ಅಧಿವೇಶನದ ಸಮಗ್ರವಾದ ಮಾಹಿತಿ ನೀಡುವ ಪ್ರಥಮ ಕೃತಿಯಾಗಿದೆ. ಈ ಕೃತಿಯಲ್ಲಿ ಮುಖ್ಯವಾಗಿ 1938ಕ್ಕೂ ಮೊದಲು ಮೈಸೂರು ಸಂಸ್ಥಾನದ ರಾಜಕೀಯ ಪರಿಸ್ಥಿತಿ, 1938ರಲ್ಲಿ ನಡೆದ ಶಿವಪುರ ಧ್ವಜ ಸತ್ಯಾಗ್ರಹದ ವಿವರಗಳು, ನಂತರ ಧ್ವಜ ಸತ್ಯಾಗ್ರಹದ ಪ್ರಭಾವದ ಬಗ್ಗೆ ಉಲ್ಲೇಖಿಸಿದ್ದು, ಮೈಸೂರು ಕಾಂಗ್ರೆಸ್ ಪ್ರಥಮ ಅಧಿವೇಶನದ ಬಗ್ಗೆ ಸಂಪೂರ್ಣವಾಗಿ ದಾಖಲೆಯಾದ ವಿಶಿಷ್ಟ ಕೃತಿಯಾಗಿದೆ. ಆದರೆ ಶಿವಪುರ ಧ್ವಜ ಸತ್ಯಾಗ್ರಹ ನಡೆಯುವ ಪೂರ್ವದಲ್ಲಿ ಮಂಡ್ಯ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ನಡೆದ ಕಾಂಗ್ರೇಸ್ ಸಭೆಗಳ ಉಲ್ಲೇಖವಿರುವುದಿಲ್ಲ.

ಬಿ.ಕಾಮಾಕ್ಷಮ್ಮ ಬರೆದಿರುವ 1980ರಲ್ಲಿ ಐ.ಬಿ.ಎಚ್. ಪ್ರಕಾಶನದ ಅಡಿಯಲ್ಲಿ ಪ್ರಕಟಗೊಂಡಿರುವ **ಯಶೋಧರಮ್ಮ ದಾಸಪ್ಪ** ಕೃತಿಯು ಕೆಲವು ಘಟನೆಗಳೊಂದಿಗೆ ಶಿವಪುರ ರಾಷ್ಟ್ರಕೂಟದಲ್ಲಿ ಯಶೋಧರಮ್ಮ ದಾಸಪ್ಪ ಅವರ ಪಾತ್ರದ ಕುರಿತು ವಿವರಣೆ ಇದೆ. ಹಾಗೆಯೇ ಕೆಂಗಲ್ ಹನುಮಂತಯ್ಯನವರ 72ನೇ ಜನ್ಮದಿನೋತ್ಸವ ಸಂದರ್ಭದಲ್ಲಿ ಪ್ರಕಟವಾದ **ಎಚ್.ಜಿ.ಲಕ್ಕಪ್ಪಗೌಡ** ಸಂಪಾದಕತ್ವದ **ರಾಷ್ಟ್ರರತ್ನ ಕೆಂಗಲ್ ಹನುಮಂತಯ್ಯ** ಅಭಿನಂದನ ಸಂಚಿಕೆಯಲ್ಲಿ ಏಕೀಕರಣ ಸಂದರ್ಭದಲ್ಲಿ ರಾಜಕೀಯ ಚಿತ್ರಣವನ್ನು ನೀಡಲಾಗಿದೆ. ಕೆಂಗಲ್ ಹನುಮಂತಯ್ಯನವರು 1938ರಲ್ಲಿ ಶಿವಪುರ ಧ್ವಜ ಸತ್ಯಾಗ್ರಹ, 1942ರಲ್ಲಿ ಕ್ವಿಟ್ ಇಂಡಿಯಾ ಚಳುವಳಿ, 1947ರಲ್ಲಿ ಮೈಸೂರು ಚಲೋ ಚಳುವಳಿಯಲ್ಲಿ ಭಾಗವಹಿಸಿದ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಏಕೀಕರಣ ಚಳುವಳಿ ಸಂದರ್ಭದಲ್ಲಿ ಪರ ವಿರೋಧ ಭಿನ್ನಾಭಿಪ್ರಾಯಗಳನ್ನು ಹೋಗಲಾಡಿಸಲು ಪ್ರಯತ್ನಿಸಿದ್ದ ಮಾಹಿತಿ ನೀಡುತ್ತದೆ. **ಬ.ನ.ಸುಂದರರಾವ್** ಅವರು **ಚಲೋ ಮೈಸೂರು** ಕೃತಿಯನ್ನು 1981ರಲ್ಲಿ ಪ್ರಕಟಸಿದ್ದು, ಈ ಕೃತಿಯು ಮೈಸೂರು ಚಲೋ ಚಳುವಳಿಯ ಸಂದರ್ಭದಲ್ಲಿ ಮೈಸೂರು ಮತ್ತು ಬೆಂಗಳೂರುಗಳಲ್ಲಿ ನಡೆದ ಕೆಲವು ಘಟನೆಗಳನ್ನು ವಿವರವಾಗಿ ದಾಖಲಿಸಿದ್ದಾರೆ. ಆದರೆ ಕೃತಿಯಲ್ಲಿ ವಿಶ್ಲೇಷಣೆ ಕೊರತೆ ಕಂಡು ಬರುತ್ತದೆ. ತರುವಾಯ ಇವರ ಸಂಪಾದಕತ್ವದಲ್ಲಿ **'ಬೆಂಗಳೂರಿನ ಇತಿಹಾಸ (ಸ್ಥಾಪನೆಯಿಂದ ಹಿಡಿದು ಸ್ವರಾಜ್ಯ ಲಭಿಸುವವರೆಗೆ)** ಗ್ರಂಥವು ಮೈಸೂರು ಕಾಂಗ್ರೆಸ್ ಸ್ಥಾಪನೆ, ರಾಜಕೀಯ ಸ್ಥಿತಿಗತಿಗಳ ಬಗ್ಗೆ ಅಪೂರ್ವವಾದ ಮಾಹಿತಿ ನೀಡುತ್ತದೆ.

ಸೂರ್ಯನಾಥ ಕಾಮತ್ ಅವರು ಸಂಪಾದಿಸಿರುವ **ಕರ್ನಾಟಕ ಸ್ಟೇಟ್ ಗ್ಯಾಸೆಟಿಯರ್ ಎರಡು ಸಂಪುಟ**ಗಳಲ್ಲಿ 1982ರಲ್ಲಿ ಪ್ರಕಟಗೊಂಡಿದ್ದು ಸ್ವಾತಂತ್ರ್ಯ ಮತ್ತು ಏಕೀಕರಣ ಚಳುವಳಿ ಘಟನೆಗಳು ಸಂಶೋಧನಾ ದೃಷ್ಟಿಯಿಂದ ಮಹತ್ವ ಪಡೆದುಕೊಂಡಿವೆ. ಅಲ್ಲದೇ ಇವರ ಸಂಪಾದಕತ್ವದಲ್ಲಿ **ಕರ್ನಾಟಕದಲ್ಲಿ ಕ್ವಿಟ್ ಇಂಡಿಯಾ ಚಳುವಳಿ** ಕೃತಿಯಲ್ಲಿ 1942ರಲ್ಲಿ ನಡೆದ ರಾಷ್ಟ್ರೀಯ ಆಂದೋಲನವಾದ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಮಂಡ್ಯ ಜಿಲ್ಲೆಯ ಮದ್ದೂರು, ಮಳವಳ್ಳಿ, ಮಂಡ್ಯ, ಶ್ರೀರಂಗಪಟ್ಟಣ, ಪಾಂಡವಪುರ, ನಾಗಮಂಗಲ, ಕೆ.ಆರ್.ಪೇಟೆ ತಾಲ್ಲೂಕುಗಳಲ್ಲಿ ನಡೆದ ಘಟನಾವಳಿಗಳ ಚಿತ್ರಣವನ್ನು ಒಳಗೊಂಡಿದೆ. ಇದು ಪತ್ರಗಾರ ಇಲಾಖೆ ದಾಖಲೆಗಳಿಂದ ರಚನೆಯಾದ ಚರಿತ್ರೆಯ ಮಹತ್ವದ ಕೃತಿಯಾಗಿದೆ. 1982ರಲ್ಲಿ ಪ್ರಕಟಗೊಂಡಿರುವ **ಕೆ.ಅನಂತರಾಮು**ರವರು ರಚಿಸಿದ **ಸಕ್ಕರೆಯ ಸೀಮೆಯ** ಕೃತಿಯು ಜಿಲ್ಲೆಯ ಪ್ರಮುಖ ಸ್ಥಳಗಳ ಆಚಾರ, ವಿಚಾರ, ಆಟ, ಪಾಠ, ಹಬ್ಬ-ಹರಿದಿನಗಳು, ಮಾಹಿತಿಯನ್ನು ಒಳಗೊಂಡ ಮೌಖಿಕ ಇತಿಹಾಸದ ದಾಖಲೀಕರಣವಾಗಿದೆ. ಆದರೆ ಸ್ವಾತಂತ್ರ್ಯ ಚಳುವಳಿಯ ಬಗ್ಗೆ ಉಲ್ಲೇಖವಿರುವುದಿಲ್ಲ.

1988 ರಲ್ಲಿ **ಹ.ಕ.ರಾಜೇಗೌಡ**ರ ಸಂಪಾದಕತ್ವದಲ್ಲಿ ಪ್ರಕಟಗೊಂಡ **ಸಿಂಗಾರ-ಕೆ.ಸಿಂಗಾರಿಗೌಡ ಅಭಿನಂದನ ಗ್ರಂಥ**ದಲ್ಲಿ ಮಂಡ್ಯ ಜಿಲ್ಲೆಯ ತಾಲ್ಲೂಕುಗಳಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿ ಬಗ್ಗೆ ಬೆಳಕು ಚೆಲ್ಲುವ ಮುಖ್ಯ ಕೃತಿಯಾಗಿದೆ ಹಾಗೂ ಸ್ವಾತಂತ್ರ್ಯ ಹೋರಾಟಗಾರ ಬಗ್ಗೆ ದಾಖಲಿಸಿದ್ದಾರೆ. ಅಲ್ಲದೇ **ಜಯಪ್ರಕಾಶಗೌಡ** ಅವರೊಂದಿಗೆ ಸಂಪಾದಿಸಿರುವ 1989ರಲ್ಲಿ ಪ್ರಕಟವಾದ **ಸಾಹಸಯಾತ್ರಿ ಪಿ.ಎನ್.ಜವರಪ್ಪಗೌಡರ** ಅಭಿನಂದನಗ್ರಂಥವು ಮಂಡ್ಯ ಜಿಲ್ಲೆಯ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರಾದ ಪಿ.ಎನ್.ಜವರಪ್ಪಗೌಡ ಅವರು ಸ್ವಾತಂತ್ರ್ಯ ಮತ್ತು ಏಕೀಕರಣ ಚಳುವಳಿಯಲ್ಲಿ ಭಾಗವಹಿಸಿದ್ದ ಮಾಹಿತಿ ನೀಡುತ್ತದೆ. ಇದರ ಪರಿಷ್ಕೃತ ಆವೃತ್ತಿ 2015ರಲ್ಲಿ **ನನ್ನ ಜೀವನ ಯಾತ್ರೆ** ರೂಪದಲ್ಲಿ ಪ್ರಕಟಗೊಂಡಿದೆ. ಪಿ.ಎನ್.ಜವರಪ್ಪಗೌಡರು ಮಂಡ್ಯ ಜಿಲ್ಲೆಯ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರಾಗಿದ್ದು, ತಮ್ಮ ಭಾಷಣಗಳ ಮೂಲಕ ಹ್ಯಾಮಿಲ್ಟನ್ ಸತ್ಯಾಗ್ರಹದಲ್ಲಿ ವಸಾಹತುಶಾಹಿ ನೀತಿಯನ್ನು ಪ್ರತಿಭಟಿಸಿದ್ದನ್ನು ಕಾಣಬಹುದು ಹಾಗೂ ಏಕೀಕರಣ ಚಳುವಳಿ ಸಂದರ್ಭದಲ್ಲಿ ಮೈಸೂರು ಯಥಾಸ್ಥಿತಿ ಉಳಿಯಲಿ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದ ಮಾಹಿತಿಯನ್ನು ಒಳಗೊಂಡಿದೆ.

ಶಂಕರನಾರಾಯಣ ಎಸ್.ಎನ್. ಅವರ **ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು** ಕೃತಿಯ 1991ರಲ್ಲಿ ಪ್ರಕಟಗೊಂಡಿದ್ದು, ಭಾರತದ ಸ್ವಾತಂತ್ರ್ಯ ಚಳುವಳಿಯ ವಿವಿಧ ಮಜಲುಗಳ್ನು ಒಳಗೊಂಡಿರುವ ಮುಖ್ಯವಾದ ಕೃತಿಯಾಗಿದೆ. ಸ್ವಾತಂತ್ರ್ಯ ಚಳುವಳಿಗೆ ಸಂಬಂಧಪಟ್ಟ ರಾಷ್ಟ್ರ ಮತ್ತು ರಾಜ್ಯ ಮಟ್ಟದ ಘಟನಾವಳಿಗಳ ವಿವರಣೆಯನ್ನು

ಒಳಗೊಂಡಿದೆ. ಆದರೆ ಜಿಲ್ಲೆಗಳ ಮೇಲೆ ಬೀರಿದ ಪ್ರಭಾವ, ಘಟನೆಗಳ ಬಗ್ಗೆ ಉಲ್ಲೇಖಿಸಿರುವುದಿಲ್ಲ. ಹಾಗೆಯೇ ಇದೇ ವರ್ಷ ಪ್ರಕಟಗೊಂಡಿರುವ **ಪ್ರೇಮಲತಾಸುಂದರೇಶನ್** ಹಾಗೂ ಇತರರು ಸಂಪಾದಕತ್ವದಲ್ಲಿ **ಸ್ವಾತಂತ್ರ್ಯದೆಡೆಗೆ, ಎಂ.ಎನ್.ಜೋಯಿಸ್ ಅಭಿನಂದನಾಗ್ರಂಥ**ದಲ್ಲಿ ಎಂ.ಎನ್.ಜೋಯಿಸ್‌ರ ಬದುಕಿನ ಚಿತ್ರಣದೊಂದಿಗೆ ಸ್ವಾತಂತ್ರ್ಯ ಹೋರಾಟದ ಹಾದಿಯನ್ನು ನಿರೂಪಿಸುತ್ತದೆ. ಎಂ.ಎನ್.ಜೋಯಿಸರು ಶಿವಪುರ ರಾಷ್ಟ್ರಕೂಟದಲ್ಲಿ ಸ್ವಯಂ ಸೇವಕರ ನೇತೃತ್ವ ವಹಿಸಿದ್ದು ಹಾಗೂ ಮೈಸೂರು ಚಲೋ ಚಳುವಳಿಯಲ್ಲಿ ಭಾಗವಹಿಸಿದ್ದರ ಬಗ್ಗೆ ದೃಢೀಕರಿಸುವುದರೊಂದಿಗೆ ವಿವಿಧ ಘಟನೆಗಳನ್ನು ಪರಿಚಯಿಸುತ್ತದೆ. **ಬಿಪನ್ ಚಂದ್ರ** ಅವರು ಬರೆದಿರುವ **ಮಹಾ ಸಂಗ್ರಾಮ್** ಪುಸ್ತಕದ ಇಂಗ್ಲೀಷ್ ಅವತರಿಣಿಕೆಯು 1992ರಲ್ಲಿ ಪ್ರಕಟಗೊಂಡಿದೆ. **ಎಂ.ಕೆ. ಅನಿಲ್** ಅದೇ ಹೆಸರಿನಲ್ಲಿ ಕನ್ನಡಕ್ಕೆ ಅನುವಾದಿಸಿದ್ದು, 1993ರಲ್ಲಿ ಓರಿಯಂಟ್ ಲಾಂಗ್‌ಮನ್ ಪ್ರಕಾಶನದಿಂದ ಪ್ರಕಟಗೊಂಡಿದೆ. ಈ ಪುಸ್ತಕದಲ್ಲಿ 1880 ರಿಂದ ಸ್ವಾತಂತ್ರ್ಯ ಪಡೆಯುವರೆಗಿನ ರಾಷ್ಟ್ರಮಟ್ಟದ ವಿದ್ಯಾಮಾನಗಳನ್ನು ದಾಖಲಿಸಿದ್ದು, ದೇಶದ ಸ್ವಾತಂತ್ರ್ಯ ಚಳುವಳಿಯ ಕುರಿತು ವರ್ತಮಾನದಲ್ಲಿಯೂ ಕೂಡ ಈ ಪುಸ್ತಕ ಮಹತ್ವವನ್ನು ಉಳಿಸಿಕೊಂಡಿದೆ. **ಸುಶೀಲಾ ಸುಬ್ರಹ್ಮಣ್ಯ** ಸಂಪಾದಿಸಿರುವ **ಕರ್ನಾಟಕ ಸ್ವಾತಂತ್ರ್ಯ ಹೋರಾಟಗಾರರು ಸ್ವಾತಂತ್ರ್ಯ ಯೋಧರ ಮತ್ತು ಉತ್ತರಾಧಿಕಾರಿಗಳು,** ಕ್ವಿಟ್ ಇಂಡಿಯಾ ಸುವರ್ಣ ಮಹೋತ್ಸವದ ಸ್ಮರಣ ಸಂಚಿಕೆಯಾಗಿದೆ. ಈ ಸಂಚಿಕೆಯಲ್ಲಿ 1942ರಲ್ಲಿ ನಡೆದ ಕ್ವಿಟ್ ಇಂಡಿಯಾ ಚಳುವಳಿಯು ಕರ್ನಾಟಕದಲ್ಲಿ ನಡೆದ ಘಟನೆಗಳನ್ನು ಚರ್ಚಿಸಿದ್ದಾರೆ ಹಾಗೂ ಸ್ವಾತಂತ್ರ್ಯ ಹೋರಾಟಗಾರರ ಅನುಭವದ ಅನಿಸಿಕೆಗಳನ್ನು ವಿವರಿಸಿದ್ದಾರೆ.

ಮಂಡ್ಯದಲ್ಲಿ 1994ರಲ್ಲಿ ನಡೆದ 63ನೇ ಕನ್ನಡ ಸಾಹಿತ್ಯ ಸಮ್ಮೇಳನದ ನೆನಪಿನ ಸಂಪುಟಗಳಾದ **ಸಿರಿಯೊಡಲು ಹಾಗೂ ಸುವರ್ಣ ಮಂಡ್ಯ** ಕೃತಿಗಳ **ದೇ.ಜವರೇಗೌಡ** ಅವರ ಸಂಪಾದಕತ್ವದಲ್ಲಿ ರಚನೆಗೊಂಡಿದ್ದು, ಮಂಡ್ಯ ಜಿಲ್ಲೆಯ ಸಂಸ್ಕೃತಿ ಕುರಿತು **ಸಿರಿಯೊಡಲು** ನೆನಪಿನ ಸಂಪುಟದಲ್ಲಿ ವಿವರಿಸಲಾಗಿದೆ. ಹಾಗೆಯೇ **ಸುವರ್ಣ ಮಂಡ್ಯ** ನೆನಪಿನ ಸಂಪುಟದಲ್ಲಿ ಜಿಲ್ಲೆಯಲ್ಲಿ ನಡೆದ ಶಿವಪುರದ ರಾಷ್ಟ್ರಕೂಟದ ಬಗ್ಗೆ ವಿವರಿಸುತ್ತಾ ಜಿಲ್ಲೆಯ ಜನತೆ ಸಕ್ರಿಯವಾಗಿ ಭಾಗವಹಿಸಿದ್ದನ್ನು ನಿರೂಪಿಸುತ್ತದೆ. ಆದರೆ ವಿವಿಧ ಆಯಾಮಗಳಲ್ಲಿ ಗುರುತಿಸಲು ಸಾಧ್ಯವಾಗಿಲ್ಲ. **ಜಿ.ಟಿ.ವೀರಪ್ಪ** ಸಂಪಾದಿಸಿರುವ 4ನೇಯ ಮಂಡ್ಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣ ಸಂಚಿಕೆಯಾದ **ಪುಣ್ಯ ಕೋಟಿ** ಗ್ರಂಥವು 1995ರಲ್ಲಿ ಪ್ರಕಟಗೊಂಡಿದೆ. **ಡಿ.ಈರಯ್ಯ** ಬರೆದಿರುವ **ಸ್ವಾತಂತ್ರ್ಯ ಹೋರಾಟಕ್ಕೆ ಮದ್ದೂರು ತಾಲ್ಲೂಕಿನ ಕೊಡುಗೆ** ಎಂಬ ಲೇಖನವು ಮದ್ದೂರು ತಾಲ್ಲೂಕಿನಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದ ಸಂಕ್ಷಿಪ್ತವಾದ ಮಾಹಿತಿ ನೀಡುತ್ತದೆ. ಸ್ಮರಣೀಯ ಸಂಚಿಕೆಯಲ್ಲಿ

ಜಿಲ್ಲೆಯ ಜನತೆ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದನ್ನು ಹೆಮ್ಮೆಯಿಂದ ಉಲ್ಲೇಖಿಸಿದ್ದನ್ನು ಕಾಣಬಹುದು. ಆದರೆ ಚಾರಿತ್ರಿಕ ವಿಶ್ಲೇಷಣೆ ಕಂಡು ಬರುವುದಿಲ್ಲ.

ಸಿ.ಆರ್.ಗೋವಿಂದರಾಜು ಅವರು ರಚಿಸಿ 1995ರಲ್ಲಿ ಪ್ರಕಟಗೊಂಡಿರುವ **ಕರ್ನಾಟಕ ಏಕೀಕರಣ ಮತ್ತು ಕನ್ನಡ ಸಾಹಿತ್ಯ ಪರಿಷತ್ತು** ಕೃತಿಯು ಏಕೀಕರಣ ಚಳುವಳಿಯ ಕುರಿತು ಅನೇಕ ಮಾಹಿತಿಗಳನ್ನು ಹೊಂದಿರುವ ಕೃತಿಯಾಗಿದೆ. ಇವರು ರಚಿಸಿರುವ 2006 ರಲ್ಲಿ ಪ್ರಕಟಗೊಂಡಿರುವ **ಕರ್ನಾಟಕ ಏಕೀಕರಣ ಚಳುವಳಿ ಮತ್ತು ಕನ್ನಡ ಸಾಹಿತ್ಯ** ಕೃತಿಯು ಏಕೀಕರಣದ ಕುರಿತು ಅಧ್ಯಯನ ದೃಷ್ಟಿಯಿಂದ ವಿವಿಧ ಆಯಾಮಗಳಲ್ಲಿ ನಿರೂಪಿಸಿದ್ದಾರೆ. ಹಾಗೆಯೇ 2010ರಲ್ಲಿ ಪ್ರಕಟಗೊಂಡಿರುವ **ಚಾರಿತ್ರಿಕ ಕರ್ನಾಟಕ** ಗ್ರಂಥದಲ್ಲಿ ಏಕೀಕರಣ ಚಳುವಳಿ ಕುರಿತು ವಿವರವಾಗಿ ಪರಿಶೀಲಿಸಿದ್ದಾರೆ. **ಗೋಪಾಲರಾವ್.ಎಚ್.ಎಸ್.** ಸಂಪಾದನೆಯಲ್ಲಿ 1996 ರಲ್ಲಿ ಪ್ರಕಟಗೊಂಡಿರುವ **ಕರ್ನಾಟಕ ಏಕೀಕರಣ ಇತಿಹಾಸ** ಕೃತಿಯು ಏಕೀಕರಣ ಚಳುವಳಿಯ ಕುರಿತು ಸಮಗ್ರ ಚಿತ್ರಣವನ್ನು ಎಲ್ಲಾ ಆಯಾಮಗಳಿಂದಲೂ ಕಟ್ಟಿಕೊಡುವ ಪ್ರಯತ್ನವಾಗಿದೆ. **ಷೇಕ್ ಅಲಿ** ಪ್ರಧಾನ ಸಂಪಾದಕತ್ವದಲ್ಲಿ ಹಾಗೂ **ಚಂದ್ರಶೇಖರ್.ಎಸ್.** ಅವರ ಸಂಪಾದಕತ್ವದಲ್ಲಿ **ಕರ್ನಾಟಕ ಚರಿತ್ರೆ ಸಂಪುಟ–07 (ಕ್ರಿ.ಶ. 1900–1956)** ಕನ್ನಡ ವಿಶ್ವವಿದ್ಯಾಲಯ ಹಂಪಿಯಿಂದ 1997ರಲ್ಲಿ ಪ್ರಕಟಗೊಂಡಿದೆ. ಸ್ವಾತಂತ್ರ್ಯ ಮತ್ತು ಏಕೀಕರಣ ಚಳುವಳಿ ಕುರಿತು ಸಮಗ್ರ ಮಾಹಿತಿಯನ್ನು ಒಳಗೊಂಡಿರುವ ಲೇಖನಗಳು, ಚಾರಿತ್ರಿಕ ಅಧ್ಯಯನದ ದೃಷ್ಟಿಯಿಂದ ಬಹಳ ಮುಖ್ಯವಾದುದು. ಆದರೆ ಮೈಸೂರು ಸಂಸ್ಥಾನದ ಜಿಲ್ಲೆಗಳಿಗೆ ಸಂಬಂಧಿಸಿದಂತೆ ವಿಸ್ತೃತವಾಗಿ ಚರ್ಚಿಸಿಲ್ಲ. ಈ ಸಂಪುಟದಲ್ಲಿ ಡಾ.ಚಂದ್ರಶೇಖರ್‌ರವರು ಬರೆದಿರುವ ಗಾಂಧೀಜಿ ಆಗಮನ ಎಂಬ ಲೇಖನವು ಮಹಾತ್ಮರು ಸ್ವಾತಂತ್ರ್ಯ ಹೋರಾಟ ವೇದಿಕೆಯಲ್ಲಿ ಕಾಣಿಸಿಕೊಂಡ ಹಂತಗಳನ್ನು ಸ್ಪಷ್ಟವಾಗಿ ವಿವರಿಸಿದ್ದಾರೆ. ಇದೇ ಸಂಪುಟದಲ್ಲಿ ಡಾ. ವಿಜಯಲಕ್ಷ್ಮಿ ಅವರು ಬರೆದಿರುವ ಕರ್ನಾಟಕ ಸ್ವಾತಂತ್ರ್ಯ ಚಳುವಳಿಯ ಆರ್ಥಿಕ ಹಿನ್ನೆಲೆ ಎಂಬ ಲೇಖನವು ಸ್ವಾತಂತ್ರ್ಯ ಹೋರಾಟದ ಆರ್ಥಿಕ ಹಿನ್ನೆಲೆಯ ಬಗ್ಗೆ ತಿಳಿಸಿಕೊಡುತ್ತದೆ.

ಕೆ.ಎಸ್.ಉಮಾಪತಿ ಬರೆದಿರುವ **ಮೈಸೂರು ಚಲೋ (ಸತ್ಯಾಗ್ರಹದ ಪತ್ರಗಳು)** ಕೃತಿಯು 1998ರಲ್ಲಿ ಪ್ರಕಟಗೊಂಡಿದ್ದು ಅವರು ಮೈಸೂರು ಚಲೋ ಚಳುವಳಿಯಲ್ಲಿ ಭಾಗವಹಿಸಿದ ಸಂದರ್ಭದಲ್ಲಿ ತಮ್ಮ ಸ್ನೇಹಿತನಿಗೆ ಬರೆದ ಪತ್ರಗಳು ಸಂಗ್ರಹವಾಗಿದೆ. ಈ ಕೃತಿಯ ಮೈಸೂರು ಚಲೋ ಚಳುವಳಿಯ ಬೆಳವಣಿಗೆ ಹಂತಗಳನ್ನು ತಿಳಿದುಕೊಳ್ಳಲು ಸಹಾಯಕವಾಗುತ್ತದೆ. **ಡಿ.ಲಿಂಗಯ್ಯನವರ ಸತ್ಯಾಗ್ರಹಿಗಳ ಸಂದರ್ಶನ** ಕೃತಿ 1998ರ ಪ್ರಕಟಗೊಂಡಿದ್ದು, ಅಂದು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ ಸ್ವಾತಂತ್ರ್ಯ ಹೋರಾಟಗಾರರನ್ನು ಸಂದರ್ಶನದ ಮೂಲಕ ಅವರ ಅಭಿಪ್ರಾಯಗಳನ್ನು ಸಂಗ್ರಹಿಸಿದ್ದು

ಇತಿಹಾಸದ ಕೃತಿಯಾಗಿ ಉಳಿಯದೆ ವರ್ತಮಾನ ಕೃತಿಯಾಗಿ ಉಳಿದಿದೆ. ಮಂಡ್ಯ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರಾದ ಪಾಲಹಳ್ಳಿ ಸೀತಾರಾಮಯ್ಯ, ವೆಂಕಮ್ಮ ಸೀತಾರಾಮಯ್ಯ, ತಾಯಮ್ಮ ವೀರಣ್ಣಗೌಡ, ಮಳವಳ್ಳಿ ವೀರಪ್ಪ, ಎಂ.ಮಹಾಬಲರಾವ್ ಅವರನ್ನು ಸಂದರ್ಶಿಸಿದ ಮಾಹಿತಿಯು ಸ್ವಾತಂತ್ರ್ಯ ಚಳುವಳಿಯ ಸಂದರ್ಭದ ಬಗ್ಗೆ ಹೊಸ ಮಾಹಿತಿಗಳು ಮೊದಲ ಬಾರಿಗೆ ಗೋಚರಿಸುತ್ತವೆ.

ಬಿ.ಆರ್.ಪ್ರಾಣೇಶರಾವ್ ಬರೆದಿರುವ **ಯಶೋಧರಾ ದಾಸಪ್ಪ ಮತ್ತು ಎಚ್.ಸಿ.ದಾಸಪ್ಪ ಜೀವನ ಮತ್ತು ಸಾಧನೆ** ಕೃತಿಯು 1997ರಲ್ಲಿ ಪ್ರಕಟಗೊಂಡಿದೆ. ಮೈಸೂರು ಸಂಸ್ಥಾನದಲ್ಲಿ ಕಾಂಗ್ರೆಸ್ ಚಟುವಟಿಕೆಗಳ ಮೂಲಕ ಸ್ವಾತಂತ್ರ್ಯ ಚಳುವಳಿಯಲ್ಲಿ ಪ್ರಮುಖಪಾತ್ರವಹಿಸಿದ ದಾಸಪ್ಪ ದಂಪತಿಯ ಬದುಕಿನ ಚಿತ್ರಣದೊಂದಿಗೆ ಹೋರಾಟದ ಹಾದಿಯನ್ನು ನಿರೂಪಿಸುತ್ತದೆ. **ಚಿಕ್ಕಸಿದ್ದೇಗೌಡ ಹಾಗೂ ಬೋರೇಗೌಡ ಚಿಕ್ಕಮರಳಿ** ಅವರ ಸಂಪಾದಕತ್ವದಲ್ಲಿ 1999ರಲ್ಲಿ ಪ್ರಕಟಗೊಂಡಿರುವ ಪಾಂಡವಪುರದಲ್ಲಿ ನಡೆದ ಮಂಡ್ಯ ಜಿಲ್ಲೆಯ 5ನೇ ಕನ್ನಡ ಸಾಹಿತ್ಯ ಸಮ್ಮೇಳನದ ನೆನಪಿನ ಸಂಪುಟ **ಮುತ್ತಿನಕೆರೆ** ಯಲ್ಲಿ **ಪಿ.ಅಬ್ದುಲ್ ಸತ್ತಾರ್** ಬರೆದಿರುವ **ರಾಜಕೀಯ ಮತ್ತು ಸಾಮಾಜಿಕ ಒಲವುಗಳು** ಲೇಖನದಲ್ಲಿ ಪಾಂಡವಪುರ ತಾಲ್ಲೂಕಿನಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿಯ ವಿವರಣೆ ನೀಡುತ್ತದೆ. ಹಾಗೆಯೇ ಇವರ ಸಂಪಾದಕತ್ವದಲ್ಲಿ 2001ರಲ್ಲಿ ಪ್ರಕಟಗೊಂಡ ಪಾಂಡವಪುರ ತಾಲ್ಲೂಕು 2ನೇ ಕನ್ನಡ ಸಾಹಿತ್ಯ ಸಮ್ಮೇಳನದ ನೆನಪಿನ ಸಂಪುಟವಾದ **ಭತ್ತದ ಸಿರಿ** ಕೃತಿಯಲ್ಲಿ **ಉಷಾರಾಣಿ** ಬರೆದಿರುವ **ಕ್ಯಾತನಹಳ್ಳಿಯ ಗ್ರಾಮದ ಸ್ವಾತಂತ್ರ್ಯ ಯೋಧರು ಹಾಗೂ ಚಂದ್ರಶೇಖರಯ್ಯ** ಬರೆದಿರುವ **ಸ್ವಾತಂತ್ರ್ಯ ಹೋರಾಟಗಾರರ ಕೆ.ವೀರೇಗೌಡ** ಬಗ್ಗೆ ಲೇಖನ ಒಳಗೊಂಡಿದೆ. ಕ್ಯಾತನಹಳ್ಳಿ ಗ್ರಾಮದ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರು 1938ರ ಶಿವಪುರ ಧ್ವಜ ಸತ್ಯಾಗ್ರಹ, 1942ರ ಕ್ವಿಟ್ ಇಂಡಿಯಾ ಚಳುವಳಿ, 1947ರ ಮೈಸೂರು ಚಲೋ ಚಳುವಳಿಯಲ್ಲಿ ಭಾಗವಹಿಸಿ ಕಾರಾಗೃಹ ವಾಸ ಅನುಭವಿಸಿದ ವಿವರಣೆ ನೀಡುತ್ತದೆ. ಈ ಸ್ಮರಣೀಯ ಸಂಚಿಕೆಗಳು ಪಾಂಡವಪುರ ತಾಲ್ಲೂಕಿನ ಸ್ವಾತಂತ್ರ್ಯ ಚಳುವಳಿಯ ಬಗ್ಗೆ ತಿಳಿದುಕೊಳ್ಳಲು ಸಹಕಾರಿಯಾಗಿದೆ.

ಕರ್ನಾಟಕ ರಾಜ್ಯದ ವಿಧಾನಮಂಡಲದ ಸಚಿವಾಲಯದಿಂದ ರಾಜ್ಯದ ಪ್ರತಿಭಾವಂತ ಸಂಸದೀಯ ಪಟುಗಳು ಕುರಿತು ಬದುಕು ಬರಹ ಮಾಲಿಕೆಯಲ್ಲಿ ಪ್ರಕಟಿಸಿದ ಪುಸ್ತಕಗಳು ಸಂಶೋಧನೆಯ ದೃಷ್ಟಿಯಿಂದ ಮಹತ್ವದ ದಾಖಲೆಗಳನ್ನು ನೀಡುತ್ತವೆ. ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಸಂಸದೀಯ ಪಟುಗಳಾಗಿದ್ದು, ಅವರ ಬದುಕಿನ ಚಿತ್ರಣದೊಂದಿಗೆ ಅವರ ಸ್ವಾತಂತ್ರ್ಯ ಹೋರಾಟದ ಹಾದಿಯನ್ನು ನಿರೂಪಿಸುತ್ತವೆ. ಅವುಗಳಲ್ಲಿ ಪ್ರಮುಖವಾಗಿ 1999ರಲ್ಲಿ ಪ್ರಕಟಗೊಂಡಿರುವ **ದಕ್ಷಿಣಮೂರ್ತಿ.ಜಿ.** ಬರೆದಿರುವ–**ಟಿ.ಸಿದ್ದಲಿಂಗಯ್ಯ ಹಾಗೂ ಕಾವಟಿ ಎಸ್.ಎಚ್. ಮತ್ತು**

ವಿ.ಜಿ.ಪೂಜಾರ ಸಂಪಾದಕತ್ವದಲ್ಲಿ ಕಡಿದಾಳ ಮಂಜಪ್ಪನವರ ಬದುಕು ಬರಹ ಮಾಲಿಕೆ ಸಂಶೋಧನೆಗೆ ಉಪಯುಕ್ತವಾದ ಮಾಹಿತಿ ನೀಡುತ್ತವೆ. ಹಾಗೆಯೇ 2000 ರಲ್ಲಿ ಪ್ರಕಟಗೊಂಡಿರುವ **ವಿಘ್ನೇಶ್.ಎನ್.ಭಟ್** ಬರೆದಿರುವ **ಕೆ.ಟಿ.ಭಾಷ್ಯಂ ಬದುಕು ಬರಹ ಮಾಲಿಕೆ ಮತ್ತು ಕೆ.ಸಂಧ್ಯಾರೆಡ್ಡಿ ರಚಿಸಿರುವ ಕೆ.ಸಿ.ರೆಡ್ಡಿ ಬದುಕು ಬರಹ ಮಾಲಿಕೆ** ಸಂಶೋಧನ ದೃಷ್ಟಿಯಿಂದ ಮಹತ್ವ ಪಡೆದುಕೊಂಡಿವೆ. ಅಲ್ಲದೇ 2005 ರಲ್ಲಿ ಪ್ರಕಟಗೊಂಡಿರುವ **ಟಿ.ಸಿ.ಪೂರ್ಣಿಮಾ** ಅವರ **ಎಸ್.ಸಿ.ಮಲ್ಲಯ್ಯನವರ ಬದುಕು ಬರಹ ಮಾಲಿಕೆ ಹಾಗೂ ಸಿ.ಆರ್.ಗೋವಿಂದರಾಜು** ಅವರ **ಕರ್ನಾಟಕ ಏಕೀಕರಣ ಹಾಗೂ ನಾಮಕರಣ** ಪುಸ್ತಕವು ಚಾರಿತ್ರಿಕ ಅಧ್ಯಯನದ ದೃಷ್ಟಿಯಿಂದ ಪ್ರಮುಖ ದಾಖಲೆಗಳಾಗಿವೆ. **ಎಸ್.ಚಂದ್ರಶೇಖರ** ರಚಿಸಿರುವ **ವಸಾಹತು ಕಾಲೀನ ಕರ್ನಾಟಕ** ಕೃತಿಯು 2006 ರಲ್ಲಿ ಕನ್ನಡ ಮತ್ತು ಸಂಸ್ಕೃತಿಯ ಇಲಾಖೆಯಿಂದ ಪ್ರಕಟಗೊಂಡಿದೆ. ಈ ಕೃತಿಯಲ್ಲಿ ಕರ್ನಾಟಕ ಮತ್ತು ರಾಷ್ಟ್ರೀಯ ಚಳುವಳಿ ಕುರಿತ ಲೇಖನಗಳನ್ನು ಒಳಗೊಂಡಿದೆ. ಅವುಗಳಲ್ಲಿ ಪ್ರಮುಖವಾಗಿ ಮೈಸೂರು ಸಂಸ್ಥಾನ ಉಭಯ ದಾಸ್ಯಯಿಂದ ಬಿಡುಗಡೆ ಕರ್ನಾಟಕದಲ್ಲಿ ರಾಷ್ಟ್ರೀಯತಾವಾದರ ಸ್ಫೋಟ, ಕರ್ನಾಟಕಕ್ಕೆ ಗಾಂಧೀಜಿ ಆಗಮನ, ಮೈಸೂರು ಅರಸು ಆಡಳಿತ ಒಂದು ಅವಲೋಕನ, ಈ ಲೇಖನಗಳಲ್ಲಿ ವಿವಿಧ ಆಯಾಮಗಳಲ್ಲಿ ಚರ್ಚಿಸಲು ಪ್ರಯತ್ನಿಸಿದ್ದಾರೆ.

ಜಯಪ್ರಕಾಶಗೌಡ ಮತ್ತು ಲಿಂಗಣ್ಣ ಬಂಧುಕಾರ್ ಸಂಪಾದಕತ್ವದಲ್ಲಿ ರಚಿತವಾದ **ಮಂಡ್ಯ ಜಿಲ್ಲಾ ಸ್ವಾತಂತ್ರ್ಯ ವೀರರು,** ಕೃತಿಯು 2006 ರಲ್ಲಿ ಪ್ರಕಟಗೊಂಡಿದ್ದು, ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರನ್ನು ಚರಿತ್ರೆಯಲ್ಲಿ ದಾಖಲಿಸುವ ಪ್ರಯತ್ನವಾಗಿದೆ. ಜಿಲ್ಲೆಯ ಪ್ರಮುಖ ಸ್ವಾತಂತ್ರ್ಯ ಚಳುವಳಿಗಾರರೊಂದಿಗೆ ಟಿ.ಮರಿಯಪ್ಪ, ಎ.ಸಿ.ಭೈರಪ್ಪ, ಕಾಂಗ್ರೆಸ್ ಸುಬ್ಬಯ್ಯ, ನ.ಭದ್ರಯ್ಯ, ಬಾಂಬರ್ ಕಾಳಯ್ಯ, ಕರಡಣ್ಣಯ್ಯ ಇವರುಗಳು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಕಾರಾಗೃಹವಾಸ ಅನುಭವಿಸಿದ್ದನ್ನು ಉಲ್ಲೇಖಿಸುತ್ತದೆ.ನಾಗೆಯೇ ಸ್ವಾತಂತ್ರ್ಯ ಹೋರಾಟಗಾರರಾದ **ಎಚ್.ಎಸ್.ದೊರೆಸ್ವಾಮಿ** ರಚಿಸಿರುವ **ಹೋರಾಟದ ದಿಟ್ಟ ಹೆಜ್ಜೆಗಳು** ಕೃತಿಯ ಸ್ವಾತಂತ್ರ್ಯ ಚಳುವಳಿಯ ಅನೇಕ ಮಾಹಿತಿಯನ್ನು ಹೊಂದಿರುವ ಕೃತಿಯಾಗಿದೆ. ಈ ಕೃತಿಯಲ್ಲಿ ಮೈಸೂರು ಕಾಂಗ್ರೆಸ್‌ನ ಸ್ಥಾಪನೆ, ದಿವಾನರಾದ ಮಿರ್ಜಾ ಇಸ್ಮಾಯಿಲ್ ಅವರ ಆಡಳಿತ ಅವಧಿಯಲ್ಲಿ ನಡೆದ ಘಟನೆಗಳು, ಸ್ವಾತಂತ್ರ್ಯ ಚಳುವಳಿಯ ಬೆಳವಣಿಗೆಗೆ ಕಾರಣವಾಗಿದ್ದು, ತರುವಾಯ ನಡೆದ ಕ್ವಿಟ್ ಇಂಡಿಯಾ ಚಳುವಳಿ, ಅನಂತರ ನಡೆದ ಘಟನಾವಳಿಗಳು, ಮೈಸೂರು ಚಲೋ ಚಳುವಳಿಯ ಪೂರ್ವಸಿದ್ಧತೆ, ನಡೆದ ರೀತಿ, ಪರಿಣಾಮದ ವಿವರಗಳನ್ನು ಒಳಗೊಂಡಿರುವ ಮಹತ್ವದ ಕೃತಿಯಾಗಿದೆ. ಇದೇ ವರ್ಷ **ತಿರುಮಲೆ ಶ್ರೀರಂಗಚಾರ್ಯ** ಮತ್ತು **ಎಂ.ಕುಮಾರಸ್ವಾಮಿ**ರವರ ಸಂಪಾದಕತ್ವದಲ್ಲಿ ಪ್ರಕಟಗೊಂಡಿರುವ **ತಿರುಮಲೆ**

ತಾತಾಚಾರ್ಯ ಶರ್ಮ ರವರ **ಮೈಸೂರು ಸಂಸ್ಥಾನದ ವೃತ್ತ ಪತ್ರಿಕೆ ಇತಿಹಾಸ ಲೇಖನಗಳ ಸಂಕಲನ** ಮಹತ್ವದ ಪುಸ್ತಕವಾಗಿದೆ. ಈ ಪುಸ್ತಕವು ಮೈಸೂರು ಸಂಸ್ಥಾನದ ವೃತ್ತ ಪತ್ರಿಕೆ ಇತಿಹಾಸದ ಬಗ್ಗೆ ಮಹತ್ವ ಲೇಖನಗಳ ಸಂಗ್ರಹವಾಗಿದೆ. ಈ ಪುಸ್ತಕದಲ್ಲಿ ವಿಶ್ವಕರ್ನಾಟಕ ವಾರಪತ್ರಿಕೆ ಹಾಗೂ ದಿನಪತ್ರಿಕೆಯಲ್ಲಿ ಪ್ರಕಟಗೊಂಡ ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಪೂರ್ವ ಮತ್ತು ನಂತರದಲ್ಲಿ ನಡೆದ ಘಟನೆಗಳ ಚಿತ್ರಣವನ್ನು ಒಳಗೊಂಡಿದೆ. ಅವುಗಳಲ್ಲಿ ಪ್ರಮುಖವಾಗಿ ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳುವಳಿ, ಜವಾಬ್ದಾರಿ ಸರ್ಕಾರಕ್ಕಾಗಿ ನಡೆದ ಘಟನಾವಳಿಗಳು, ದಿವಾನರ ಆಡಳಿತ ವ್ಯವಸ್ಥೆ ಕುರಿತ ಲೇಖನಗಳು, ಸುದ್ದಿಗಳನ್ನೊಳಗೊಂಡಿದೆ. **ಡಾ. ಎನ್.ಸರಸ್ವತಿ** ಅವರು ಬರೆದಿರುವ 2008ರಲ್ಲಿ ಪ್ರಕಟಗೊಂಡ **ಸ್ವಾತಂತ್ರ್ಯ ಹೋರಾಟದಲ್ಲಿ ಮೈಸೂರು ಸಂಸ್ಥಾನದ ಮಹಿಳೆಯರ ಪಾತ್ರ** ಎಂಬ ಕೃತಿಯಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರ ಪಾತ್ರವನ್ನು ಕಟ್ಟಿಕೊಡುವ ಪ್ರಯತ್ನವಾಗಿದೆ. ಸ್ವಾತಂತ್ರ್ಯ ಚಳುವಳಿಯಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಗೆ ಉತ್ತೇಜಿಸಿದ ಅಂಶಗಳು, ಭಾಗವಹಿಸಿದ ಸ್ವಾತಂತ್ರ್ಯ ಚಳುವಳಿಗಳು, ಹೋರಾಟಗಾರ್ತಿಯರ ಬದುಕಿನ ಚಿತ್ರಣವನ್ನು ನೀಡುತ್ತದೆ. ಸ್ವಾತಂತ್ರ್ಯ ಚಳುವಳಿಯಲ್ಲಿ ಮಹಿಳೆಯರ ಪಾತ್ರವನ್ನು ವಿವಿಧ ಆಯಾಮಗಳಲ್ಲಿ ಪರಿಚಯಿಸುವ ಕೊರತೆ ಕಂಡು ಬರುತ್ತದೆ. ಇದೇ ಸಮಯದಲ್ಲಿ ಪ್ರಕಟಗೊಂಡಿರುವ **ಡಾ. ಅಶ್ವತ್‌ನಾರಾಯಣ**ರವರು ಬರೆದಿರುವ **ಮೈಸೂರು ಸಂಸ್ಥಾನದಲ್ಲಿನ ರಾಷ್ಟ್ರೀಯ ಚಳುವಳಿಯ ಒಳನೋಟ 1870–1940** ಈ ಕೃತಿಯು ಮೈಸೂರು ಸಂಸ್ಥಾನದಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿಯ ಬಗ್ಗೆ ಅನೇಕ ಮಾಹಿತಿಯನ್ನು ಹೊಂದಿರುವ ಕೃತಿಯಾಗಿದೆ. ಈ ಕೃತಿಯಲ್ಲಿ ಪ್ರದೇಶ, ಜಾತಿ, ರಾಷ್ಟ್ರೀಯತೆಯ ಮೇಲೆ ಬೀರಿದ ಪ್ರಭಾವ, ಸ್ವಾತಂತ್ರ್ಯ ಚಳುವಳಿಯ ಬಗ್ಗೆ ವಿವಿಧ ಆಯಾಮಗಳಲ್ಲಿ ಚರ್ಚಿಸಲು ಪ್ರಯತ್ನಿಸಿದ್ದಾರೆ. ಆದರೆ ಈ ಕೃತಿಯ ವ್ಯಾಪ್ತಿ 1940ಕ್ಕೆ ಸೀಮಿತಗೊಂಡಿದೆ.

2010ರಲ್ಲಿ ಪ್ರಕಟಗೊಂಡಿರುವ **ಡಿ.ಲಿಂಗಯ್ಯ** ಅವರು ರಚಿಸಿರುವ **ರಾಷ್ಟ್ರರತ್ನ ಕೆಂಗಲ್ ಹನುಮಂತಯ್ಯ ಸಮಗ್ರ ಜೀವನ ಚರಿತ್ರೆ**ಯು ಮಹತ್ವದ ಗ್ರಂಥವಾಗಿದೆ. ಈ ಗ್ರಂಥವು ಕೆಂಗಲ್ ಹನುಮಂತಯ್ಯನವರ ಜೀವನಚರಿತ್ರೆ ಆಧಾರಿತವಾಗಿದೆ. ಶಿವಪುರ ಧ್ವಜ ಸತ್ಯಾಗ್ರಹ, ಕ್ವಿಟ್ ಇಂಡಿಯಾ ಚಳುವಳಿ, ಮೈಸೂರು ಚಲೋ ಚಳುವಳಿಯಲ್ಲಿ ಭಾಗವಹಿಸಿದ ಅವರ ಅನುಭವಗಳು ದಾಖಲೆಯಾಗಿದೆ. ಈ ದಾಖಲೆಯಲ್ಲಿ ಜೈಲಿನಲ್ಲಿ ಕಳೆದ ದಿನಗಳು, ಅಂದಿನ ರಾಜಕೀಯ ಪರಿಸ್ಥಿತಿ ಹೋರಾಟದ ಹಾದಿಯನ್ನು ಪರಿಚಯಿಸುತ್ತದೆ. **ವಿಜಯ್ ಪೂಣಚ್ಚ ತಂಬಂಡ** ಅವರ ಪ್ರಧಾನ ಸಂಪಾದಕತ್ವ ಹಾಗೂ **ಎನ್.ಚಿನ್ನಸ್ವಾಮಿ ಸೋಸಲೆ, ಕೆ.ಮೋಹನ್‌ಕೃಷ್ಣ ರೈ, ಸಿ.ಆರ್.ಗೋವಿಂದರಾಜು, ವಿರೂಪಾಕ್ಷಿ ಪೂಜಾರಹಳ್ಳಿ** ಅವರುಗಳ ಸಹ ಸಂಪಾದಕತ್ವದಲ್ಲಿ ಚರಿತ್ರೆಯ ಎಂಟು ಸಂಪುಟಗಳು

ಕನ್ನಡ ವಿಶ್ವವಿದ್ಯಾಲಯ ಹಂಪಿಯಿಂದ 2010ರಲ್ಲಿ ಹೊರಬಂದಿವೆ. ಅದರಲ್ಲಿ **ಸಂಪುಟ – 3ರಲ್ಲಿ ಭಾರತ ಉಪಖಂಡದ ಆಧುನಿಕ ಚರಿತ್ರೆ ವಿವಿಧ ಆಯಾಮಗಳು ಮತ್ತು ಸಮಕಾಲೀನ ಕರ್ನಾಟಕ ಚರಿತ್ರೆಯ ವಿವಿಧ ಆಯಾಮಗಳ ಸಂಪುಟ –6**ರಲ್ಲಿ ಭಾರತ ಸ್ವಾತಂತ್ರ್ಯ ಚಳುವಳಿ ಹಾಗೂ ಕರ್ನಾಟಕದ ಏಕೀಕರಣಕ್ಕೆ ಸಂಬಂಧಿಸಿದ ಲೇಖನಗಳು ಜನಮುಖಿಯಾಗಿರುವುದನ್ನು ಚರ್ಚಿಸಿವೆ. **ತಿಮ್ಮನಹಳ್ಳಿ ವೇಣುಗೋಪಾಲ್** ಅವರು ಬರೆದಿರುವ 2010 ರಲ್ಲಿ ಪ್ರಕಟವಾದ **ರೈತರು–ಮೈಸೂರು ಅಧಿಕಾರಶಾಹಿ ಮತ್ತು ರಾಷ್ಟ್ರೀಯ ಚಳುವಳಿ 1881–1947** ಎಂಬ ಕೃತಿಯಲ್ಲಿ ಮೈಸೂರು ಸಂಸ್ಥಾನದಲ್ಲಿ ನಡೆದ ರಾಷ್ಟ್ರೀಯ ಚಳುವಳಿ ಹಾಗೂ ರೈತರ ಆಂದೋಲನಗಳ ಬಗ್ಗೆ ತೀಕ್ಷ್ಣವಾದ ವಿಶ್ಲೇಷಣೆಗೆ ಒಳಪಡಿಸಿದ್ದಾರೆ.

ಎಸ್.ಶಿವರಾಮು ಅವರು ಬರೆದ **ಮಂಡ್ಯ ಜಿಲ್ಲೆ ಜನಪರ ಚಳುವಳಿಗಳು** ಕೃತಿಯು 2011ರಲ್ಲಿ ಪ್ರಕಟಗೊಂಡಿದ್ದು, ಮಂಡ್ಯ ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯ ನಂತರ ನಡೆದ ಚಳುವಳಿಗಳನ್ನು ವಸ್ತು ನಿಷ್ಠವಾಗಿ ದಾಖಲಿಸಿದ್ದು ಎಲ್ಲ ಅಂಶಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿದ್ದಾರೆ ಹಾಗೂ ಇವರು ರಚಿಸಿರುವ **ಕೆ.ವಿ.ಶಂಕರಗೌಡ ಜೀವನ ಸಾಧನೆ** ಗ್ರಂಥದಲ್ಲಿ 1947ರಲ್ಲಿ ಮೈಸೂರು ಚಲೋ ಚಳುವಳಿಯಲ್ಲಿ ಕೆ.ವಿ.ಶಂಕರಗೌಡರ ಪಾತ್ರವನ್ನು ನಿರೂಪಿಸಿದ್ದಾರೆ ಹಾಗೂ ಏಕೀಕರಣ ಚಳುವಳಿ ಸಂದರ್ಭದಲ್ಲಿ ಮೈಸೂರು ಯಥಾ ಸ್ಥಿತಿಯಲ್ಲಿ ಉಳಿಯಲಿ ಎಂದು ಮೈಸೂರು ವಿಲೀನ ವಿರೋಧಿ ಚಳುವಳಿಯನ್ನು ಆರಂಭಿಸಿದನ್ನು ತಿಳಿಸುತ್ತದೆ. ಈ ಮೂಲಕ ಕೆ.ವಿ.ಶಂಕರಗೌಡರು ಏಕೀಕರಣ ಚಳುವಳಿಯ ಕುರಿತು ವಿರೋಧ ವ್ಯಕ್ತಪಡಿಸಿದ ನಿಲುವುಗಳ ಬಗ್ಗೆ ಚರ್ಚಿಸಿದ್ದಾರೆ.

ಕೃಷ್ಣೇಗೌಡ ಹುಸ್ಕೂರು ಸಂಪಾದಕತ್ವದಲ್ಲಿ 2011ರಲ್ಲಿ ಪ್ರಕಟವಾದ ಮಳವಳ್ಳಿ ತಾಲ್ಲೂಕಿನ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣೀಯ ಸಂಚಿಕೆಯಾದ **ಮಳವಳ್ಳಿಯ ಮುತ್ತು** ಎಂಬ ಕೃತಿಯಲ್ಲಿ **ಡಿ.ದೊಡ್ಡಲಿಂಗಯ್ಯ**ನವರು ಬರೆದಿರುವ **ಮಳವಳ್ಳಿ ತಾಲ್ಲೂಕಿನಲ್ಲಿ ಸ್ವಾತಂತ್ರ್ಯ ಹೋರಾಟ ಲೇಖನ**ವು ಮಳವಳ್ಳಿ ತಾಲ್ಲೂಕಿನಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದ ಮಾಹಿತಿಯನ್ನು ಒಳಗೊಂಡಿದೆ. ಈ ಲೇಖನದಲ್ಲಿ ಮಳವಳ್ಳಿ ತಾಲ್ಲೂಕಿನ ಸ್ವಾತಂತ್ರ್ಯ ಹೋರಾಟಗಾರ ಪಾತ್ರವನ್ನು ನಿರೂಪಿಸಲು ಪ್ರಯತ್ನಿಸಲಾಗಿದ್ದು, ಚಾರಿತ್ರಿಕವಾಗಿ ವಿಶ್ಲೇಷಿಸಿಲ್ಲ. **ಹೆಚ್.ಜಿ.ನಾರಾಯಣ** ರಚಿಸಿರುವ **ಮೈಸೂರು ಮತ್ತು ಏಕೀಕರಣ** ಕೃತಿಯು 2012ರಲ್ಲಿ ಪ್ರಕಟಗೊಂಡಿದ್ದು ಕರ್ನಾಟಕ ಏಕೀಕರಣದ ಸಂದರ್ಭದಲ್ಲಿ ಮೈಸೂರು ಸಂಸ್ಥಾನ ಪ್ರತಿಕ್ರಿಯೆಯನ್ನು ದಾಖಲಿಸಿದ ಮಹತ್ವದ ಕೃತಿಯೆಂದು ಹೇಳಬಹುದು. ಆದರೆ ಮೈಸೂರು ವಿಲೀನ ವಿರೋಧಿ ಚಳುವಳಿ, 1956ರ ಜನವರಿ 1ರಂದು ಮಂಡ್ಯದಲ್ಲಿ ನಡೆದ ಮೈಸೂರು ವಿಲೀನ ವಿರೋಧಿ ಸಮ್ಮೇಳನ,

ಅಖಂಡ ಮೈಸೂರು ರಾಜ್ಯ ರಚನೆಯ ಕುರಿತು ಶಾಸನ ಸಭೆಯಲ್ಲಿ ನಡೆದ ಪರ ವಿರೋಧದ ಚರ್ಚೆಯ ಬಗ್ಗೆ ಸಮಗ್ರವಾಗಿ ವಿವರಣೆ ನೀಡಿರುವುದಿಲ್ಲ.

ಎನ್.ಚಿನ್ನಸ್ವಾಮಿ ಸೋಸಲೆ ಅವರು ಸಂಪಾದಿಸಿರುವ **ದಿವಾನ್ ಸರ್ ಮಿರ್ಜಾ ಎಂ ಇಸ್ಮಾಯಿಲ್ ಕಾಲದ ಮೈಸೂರು ಸಂಸ್ಥಾನ** ಕೃತಿಯು 2012 ರಲ್ಲಿ ಪ್ರಕಟಗೊಂಡಿದೆ. ಈ ಕೃತಿಯಲ್ಲಿ ಮಿರ್ಜಾ ಎಂ ಇಸ್ಮಾಯಿಲ್ ದಿವಾನರಾದ ಅವಧಿಗೆ ಸಂಬಂಧಿಸಿದ ಅನೇಕ ಲೇಖನಗಳನ್ನು ಒಳಗೊಂಡಿದೆ. (1926–1941) ಅವುಗಳಲ್ಲಿ ಪ್ರಮುಖವಾಗಿ ಮೈಸೂರು ಸಂಸ್ಥಾನದ ಮೇಲೆ ದೇಶೀಯ ಹಾಗೂ ವಸಾಹತುಶಾಹಿಗಳ ಪ್ರಭಾವ, ರಾಜಕೀಯ ಏಳುಬೀಳುಗಳು, ಮೈಸೂರಿನಲ್ಲಿ ಕಾಂಗ್ರೆಸ್ ಚಳುವಳಿ, ಭಾರತದ ಒಕ್ಕೂಟ ವ್ಯವಸ್ಥೆ ಸಂಬಂಧಿಸಿದ ಲೇಖನಗಳು ಮೈಸೂರು ಸಂಸ್ಥಾನದ ಚರಿತ್ರೆಯ ಅಧ್ಯಯನ ದೃಷ್ಟಿಯಿಂದ ಮಹತ್ವ ಪಡೆದುಕೊಂಡಿವೆ. ದಿವಾನರಾದ ಮಿರ್ಜಾ ಇಸ್ಮಾಯಿಲ್‌ರು ಮೈಸೂರು ಕಾಂಗ್ರೆಸ್ ಬೆಳವಣಿಗೆಯನ್ನು ನಿಯಂತ್ರಿಸಲು ಪ್ರಯತ್ನಿಸಿದ್ದು, ಗಾಂಧೀಜಿ ರಚನಾತ್ಮಕ ಕಾರ್ಯಗಳಿಗೆ ಸಹಕಾರ ನೀಡಿದ್ದು, ಸ್ವಾತಂತ್ರ್ಯ ಚಳುವಳಿಯ ಬಗ್ಗೆ ಪ್ರೋತ್ಸಾಹ ನೀಡದೆ ಇರುವುದು ಅವರ ದ್ವಂದ್ವ ನಿಲುವುಗಳ ಬಗ್ಗೆ ತಿಳಿಸುತ್ತದೆ. ಇವರ ಮತ್ತೊಂದು ಕೃತಿಯಾದ **ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರ ಕೃತಿ**ಯಲ್ಲಿ ಮಹಾತ್ಮಗಾಂಧೀಜಿಯವರ ಮೈಸೂರು ಸಂಸ್ಥಾನದ ಪ್ರವೇಶ, ದಲಿತರ ಮೇಲೆ ಗಾಂಧೀಜಿ ಪ್ರಭಾವ, ನಂತರ ದಲಿತರ ಸ್ಥಿತಿಗತಿಯಲ್ಲಿ ಆದ ಬದಲಾವಣೆ ಬಗ್ಗೆ ವಿವರವಾದ ಮಾಹಿತಿಗಳನ್ನು ಚರ್ಚಿಸಲಾಗಿದೆ. ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳುವಳಿಯಲ್ಲಿ ದಲಿತರ ಪಾಲ್ಗೊಳ್ಳುವಿಕೆಯ ಬಗ್ಗೆ ಉಲ್ಲೇಖಿಸಿರುವುದಿಲ್ಲ. ಆದರೆ ಗಾಂಧೀಜಿಯವರ ಪ್ರಭಾವದಿಂದ ಸ್ವಾತಂತ್ರ್ಯ ಚಳುವಳಿಯ ಬಗ್ಗೆ ಒಲವವನ್ನು ಹೊಂದಿರುವ ಬಗ್ಗೆ ಗುರುತಿಸಬಹುದಾಗಿದೆ.

ಹಾಗೆಯೇ ಇವರ ಸಂಪಾದಕತ್ವದಲ್ಲಿ 2016ರಲ್ಲಿ ಪ್ರಕಟಗೊಂಡಿರುವ **ಜಯಚಾಮರಾಜೇಂದ್ರ ಒಡೆಯರ್ ಕಾಲದ ಮೈಸೂರು ಸಂಸ್ಥಾನ** ಕೃತಿಯಲ್ಲಿ 1940 ರಿಂದ 1956 ರವರೆಗೆ ಸ್ವಾತಂತ್ರ್ಯ ಮತ್ತು ಏಕೀಕರಣ ಚಳುವಳಿ ಸಂದರ್ಭದಲ್ಲಿ ಮೈಸೂರು ಸಂಸ್ಥಾನದ ರಾಜಕೀಯ ಪರಿಸ್ಥಿತಿ ಮೇಲೆ ಬೆಳಕು ಚೆಲ್ಲುವ ಪ್ರಥಮ ಮುಖ್ಯ ಕೃತಿಯಾಗಿದೆ. ಈ ಕೃತಿಯ ಲೇಖನಗಳಲ್ಲಿ 1941ರ ನಂತರ ಮೈಸೂರು ಸಂಸ್ಥಾನದಲ್ಲಿ ನಡೆದ ಘಟನೆಗಳ ಬಗ್ಗೆ ಮೊದಲ ಬಾರಿಗೆ ಚರಿತ್ರೆಯ ಹಿನ್ನೆಲೆಯಲ್ಲಿ ದಾಖಲಿಸಿದ್ದಾರೆ. 2014ರಲ್ಲಿ **ಆರ್.ವಿ.ರವೀಂದ್ರನಾಥ** ಅವರ **ಮಹಾನ್ ಸಾಧಕ–ಕೆ.ಸಿ.ರೆಡ್ಡಿ** ಎಂಬ ಕೃತಿಯಲ್ಲಿ ಕೆ.ಸಿ.ರೆಡ್ಡಿ ಅವರ ಬದುಕಿನ ಚಿತ್ರಣದೊಂದಿಗೆ ಸ್ವಾತಂತ್ರ್ಯ ಮತ್ತು ಏಕೀಕರಣ ಚಳುವಳಿಗೆ ತೋರಿದ ಪ್ರತಕ್ರಿಯೆಯನ್ನು ಚರ್ಚಿಸಿದ್ದಾರೆ. **ಲೀಲಾ ಅಪ್ಪಾಜಿ** ಅವರ ಸಂಪಾದಕತ್ವದಲ್ಲಿ 2015ರಲ್ಲಿ ಪ್ರಕಟಗೊಂಡ **ಅಮೃತ ಮಂಡ್ಯ** – ಮಂಡ್ಯ ಜಿಲ್ಲೆ 75ರ ಸಂಭ್ರಮದ ನೆನಪಿನ

ಸಂಪುಟವು 75 ವರ್ಷಗಳ ಮಂಡ್ಯ ಜಿಲ್ಲೆಗೆ ಸಂಬಂಧಿಸಿದ ಮಹತ್ವಪೂರ್ಣವಾದ ಲೇಖನಗಳನ್ನು ಒಳಗೊಂಡಿದೆ. ಅವುಗಳಲ್ಲಿ ಪ್ರಮುಖವಾಗಿ ಮಂಡ್ಯ ಜಿಲ್ಲೆಯ ಹುಟ್ಟು ಮತ್ತು ಹಿನ್ನೆಲೆ ಮಂಡ್ಯ; ನಿಷ್ಪತ್ತಿ, ಮಂಡ್ಯ ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರು, ಪ್ರಜಾಪ್ರತಿನಿಧಿ ಸಭೆಯಲ್ಲಿ ಮಂಡ್ಯ ಜಿಲ್ಲೆಯ ಸದಸ್ಯರು, ಈ ಲೇಖನಗಳು ಸಂಶೋಧನೆಗೆ ಪೂರಕವಾದ ಮಾಹಿತಿಯನ್ನು ನೀಡುತ್ತದೆ. ಆದರೆ ಸ್ವಾತಂತ್ರ್ಯ ಮತ್ತು ಏಕೀಕರಣಕ್ಕೆ ಸಂಬಂಧಿಸಿದ ಲೇಖನಗಳಿಲ್ಲ.

ಇದುವರೆಗೆ ಸ್ವಾತಂತ್ರ್ಯ ಮತ್ತು ಏಕೀಕರಣ ಚಳುವಳಿಯಲ್ಲಿ ಮಂಡ್ಯ ಜಿಲ್ಲೆಯ ಪಾತ್ರದ ಕುರಿತು ಸಮಗ್ರ ಚಿತ್ರಣವನ್ನು ನೀಡುವ ಕೃತಿ ರಚನೆಗೊಂಡಿಲ್ಲದಿರುವುದು ವಿಷಾದನೀಯ ಸಂಗತಿ. ಈ ಉದ್ದೇಶದಿಂದ ಮಂಡ್ಯ ಜಿಲ್ಲೆಗೆ ಸಂಬಂಧಿಸಿದ ಮಹತ್ವದ ಕೃತಿಗಳ ಜೊತೆ ಜೊತೆಗೆ ಸ್ವಾತಂತ್ರ್ಯ ಮತ್ತು ಏಕೀಕರಣ ಚಳುವಳಿ ಕುರಿತಾಗಿ ಪ್ರಕಟವಾದ ಪ್ರಾಥಮಿಕ ದಾಖಲೆಗಳು, ಲೇಖನಗಳು, ಸ್ಮರಣ ಸಂಚಿಕೆಗಳು, ಗ್ರಂಥಗಳು, ಅಪ್ರಕಟಿತ ದಾಖಲೆಗಳು ಹಾಗೂ ಅಪ್ರಕಟಿತ ಎಂ.ಫಿಲ್ ಮತ್ತು ಪಿಎಚ್.ಡಿ ಮಹಾಪ್ರಬಂಧಗಳನ್ನು ಗಮನಿಸಲಾಗಿದೆ. ಅಲ್ಲದೇ ಸ್ವಾತಂತ್ರ್ಯ ಚಳುವಳಿಯ ಅಗ್ರಪಂಕ್ತಿಯ ನಾಯಕರ ಕುರಿತು ಕೃತಿ, ಗ್ರಂಥಗಳು, ಕಿರುಹೊತ್ತಿಗೆ, ಅಭಿನಂದನಾ ಗ್ರಂಥಗಳು ಪ್ರಕಟಗೊಂಡಿವೆ. ಆದರೆ ಸಾಮಾನ್ಯ ಜನರು, ಮಹಿಳೆಯರು, ರೈತರು, ಕಾರ್ಮಿಕರು, ಯುವಜನರು, ವಿದ್ಯಾರ್ಥಿಗಳು, ಕೆಳವರ್ಗದ ಪಾತ್ರವನ್ನು ಕುರಿತು ಉಲ್ಲೇಖಿಸಿಲ್ಲ. ಆದ್ದರಿಂದ ಅನುಷಂಗಿಕ ಆಕರಗಳೊಂದಿಗೆ ಪ್ರಾಥಮಿಕ ಆಕರಗಳನ್ನು ಆಧಾರವಾಗಿಟ್ಟುಕೊಂಡು ಸ್ವಾತಂತ್ರ್ಯ ಮತ್ತು ಏಕೀಕರಣ ಚಳುವಳಿಯಲ್ಲಿ ಮಂಡ್ಯ ಜಿಲ್ಲೆಯ ಪಾತ್ರ ಕುರಿತು ಸಮಗ್ರ ಚಿತ್ರಣವನ್ನು ನೀಡಲಾಗಿದೆ. ಇದಲ್ಲದೆ ಈ ಮಹಾಪ್ರಬಂಧದಕ್ಕೆ ಸಂಬಂಧಿದಂತೆ ಕ್ಷೇತ್ರ ಕಾರ್ಯದಿಂದ ದೊರೆತ ಮಾಹಿತಿಗಳನ್ನು ಬಳಸಿಕೊಳ್ಳಲಾಗಿದೆ. ಈ ಮೂಲಕ ಸ್ವಾತಂತ್ರ್ಯ ಮತ್ತು ಏಕೀಕರಣದ ಘಟನಾವಳಿಗಳನ್ನು ಮರು ರೂಪಿಸಲು ಸಹಾಯಕವಾಗಿದೆ.

ಕೊನೆ ಟಿಪ್ಪಣಿಗಳು :

1. ರಾಮಚಂದ್ರೇಗೌಡ.ಹಿಶಿ. (ಪ್ರ.ಸಂ.), ಕನ್ನಡ ವಿಷಯ ವಿಶ್ವಕೋಶ ಕರ್ನಾಟಕ (ಪರಿಷ್ಕೃತ) ಸಂಪುಟ 02, ಪುಟ 708
2. ದಿವಾಕರ.ಆರ್.ಆರ್. (ಸಂ.) ಕರ್ನಾಟಕ ಏಕೀಕರಣದ ಕಥೆ, ಪುಟ 01
3. ಲಿಂಗಯ್ಯ.ಡಿ., ಶಿವಪುರ ಧ್ವಜ ಸತ್ಯಾಗ್ರಹ, ಪು. 07
4. ಬರಗೂರು ರಾಮಚಂದ್ರಪ್ಪ (ಸಂ.), ಕರ್ನಾಟಕ ಸಂಗತಿ, ಪು. 115
5. ವೀರಣ್ಣಗೌಡ.ಎಚ್.ಕೆ., ಬದುಕು–ಮೆಲುಕು, ಪು. 199

6. ವಿಜಯ ಪೂಣಚ್ಚ ತಂಬಡ (ಪ್ರ.ಸಂ.) , ಕನ್ನಡ ವಿಶ್ವವಿದ್ಯಾನಿಲಯ, ಚರಿತ್ರ ಸಂಪುಟ 02, ಭಾರತದ ಉಪಖಂಡದ ಆಧುನಿಕ ಚರಿತ್ರೆಯ ವಿವಿಧ ಆಯಾಮಗಳು. ಪು. 08

7. ಪಾಂಡೇಶ್ವರ.ಜಿ.ಆರ್., ಸ್ವಾತಂತ್ರ್ಯ, ಗಾಂಧಿ ಸಾಹಿತ್ಯ ಮಾಲೆ–12, ಪು. 24

8. ಸಿದ್ದವ್ವನಹಳ್ಳಿ ಕೃಷ್ಣಶರ್ಮ (ಸಂ.), ಗಾಂಧೀ ಮತ್ತು ಕರ್ನಾಟಕ, ಪು. 241

9. ಚಿನ್ನಸ್ವಾಮಿ ಸೋಸಲೆ.ಎನ್. (ಸಂಪುಟ ಸಂಪಾದಕ), ಸಮಕಾಲೀನ ಕರ್ನಾಟಕ ಚರಿತ್ರೆಯ ವಿವಿಧ ಆಯಾಮಗಳು, ಸಂಪುಟ 06, ಪು. 12

10. Gazette Notification No. R. 5724 L-R-63-38-12, dated 10th May 1939

11. Congress conventrion shivapura 1938, report, p. 223

12. ಸಾಧ್ವಿ ದಿನಪತ್ರಿಕೆ ದಿನಾಂಕ 01.01.1956 ಭಾನುವಾರ, ಸಂಚಿಕೆ 136

13. The legislative Assembly debates 2nd April 1956, p. 1443

ಅಧ್ಯಾಯ–2

ಮಂಡ್ಯ ಜಿಲ್ಲೆಯ ಸಂಕ್ಷಿಪ್ತ ಇತಿಹಾಸ

ಮಂಡ್ಯ ಪ್ರದೇಶದ ಅಸ್ತಿತ್ವವನ್ನು ಸಾವಿರಾರು ವರ್ಷಗಳಿಂದ ಗುರುತಿಸಬಹುದಾದರೂ ಮಂಡ್ಯ ಜಿಲ್ಲೆ 1 ಜುಲೈ 1939ರಂದು ಅಸ್ತಿತ್ವಕ್ಕೆ ಬಂದಿತು. ಇದಕ್ಕಿಂತ ಮುಂಚೆ ಅದು ಮೈಸೂರು ಜಿಲ್ಲೆಯ ಒಂದು ಭಾಗವಾಗಿತ್ತು. ಮಂಡ್ಯ ಜಿಲ್ಲೆ ಪ್ರದೇಶವು ಪ್ರಾಚೀನ ಕಾಲದಿಂದಲೂ ಮಾನವನ ವಾಸಸ್ಥಾನವೆಂದು ಹೆಸರಾಗಿದ್ದು, ಹಿಂದಿನ ಆಧಿ ಹಳೆಯ ಶಿಲಾಯುಗ, ಮಧ್ಯ ಹಳೆಯ ಶಿಲಾಯುಗ, ಬೃಹತ್ ಶಿಲಾಯುಗ ಕಾಲದ ಮಾನವನ ವಸತಿ ನೆಲಗಳು ಈ ಜಿಲ್ಲೆಯಲ್ಲಿ ಕಂಡು ಬಂದಿವೆ. ಜಿಲ್ಲೆಯಲ್ಲಿರುವ ಪಾಂಡವಪುರ, ತಾಲ್ಲೂಕಿನ ಕುಂತಿಬೆಟ್ಟ (ಫ್ರೆಂಚ್‌ರಾಕ್ಸ್), ತೊಣ್ಣೂರು, ಪಾಂಡವಪುರ ಮತ್ತು ಮಳವಳ್ಳಿ ತಾಲ್ಲೂಕಿನಲ್ಲಿರುವ ಬೆಳಕವಾಡಿ, ಶೆಟ್ಟಹಳ್ಳಿ, ಹಲಗೂರು, ಹುಲ್ಲಂಬಳ್ಳಿ ಹಾಗೂ ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿರುವ ರಂಗನತಿಟ್ಟು, ಶ್ರೀರಂಗಪಟ್ಟಣ, ಹಂಗರಹಳ್ಳಿ ಮುಂತಾದವು ಶಿಲಾಯುಗದ ವಿವಿಧ ಕಾಲದ ಮಾನವನ ಅವಾಸ ಸ್ಥಾನಗಳಾಗಿದ್ದವು[1].

ಮಂಡ್ಯ ಪ್ರದೇಶದ ಇತಿಹಾಸವನ್ನು ಅವಲೋಕಿಸಿದಾಗ ಈ ಪ್ರದೇಶವು ಗಂಗರು, ಚೋಳರು, ಹೊಯ್ಸಳರು, ವಿಜಯನಗರದ ಅರಸರು ಮತ್ತು ಮೈಸೂರು ಒಡೆಯರ್ ಆಡಳಿತಕ್ಕೆ ಒಳಪಟ್ಟ ಪ್ರದೇಶವಾಗಿತ್ತು. ಕ್ರಿ.ಶ. ಎರಡನೆಯ ಶತಮಾನದಿಂದ ಹನ್ನೊಂದನೆಯ ಶತಮಾನದ ಅವಧಿಯಲ್ಲಿ ಗಂಗರ ಆಳ್ವಿಕೆಗೆ ಈ ಪ್ರದೇಶ ಒಳಪಟ್ಟಿತ್ತು. ಈಗಿನ ಮದ್ದೂರು ಪ್ರದೇಶವು ಚಿಕ್ಕಗಂಗವಾಡಿ ಪ್ರಾಂತವೆಂದೂ ಕರೆಯಲ್ಪಟ್ಟಿತ್ತು. 9ನೇ ಶತಮಾನದ ಆದಿಯಲ್ಲಿ ಗಂಗರಸರು ಮತ್ತು ರಾಷ್ಟ್ರಕೂಟರ ಮಧ್ಯೆ ವೈವಾಹಿಕ ಸಂಬಂಧದಿಂದಾಗಿ ದಕ್ಷಿಣ ಭಾರತದಲ್ಲಿ ಪ್ರಬಲ ರಾಜಕೀಯ ಮನೆತನಗಳಾಗಿದ್ದವು. ಚೋಳರು ಗಂಗವಾಡಿ ರಾಜ್ಯದ ಮೇಲೆ ದಂಡೆತ್ತಿ ಬಂದಾಗ ರಾಷ್ಟ್ರಕೂಟ ಅರಸ ಮೂರನೆಯ ಕೃಷ್ಣ ಮತ್ತು ಗಂಗರಸ ಎರಡನೆಯ ಭೂತುಗ ಒಟ್ಟಿಗೆ ಯುದ್ಧ ಸಾರಿ ಚೋಳರನ್ನು ಕ್ರಿ.ಶ. 949ರಲ್ಲಿ ನಡೆದ ತಕ್ಕೋಳಂ ಯುದ್ಧದಲ್ಲಿ ಸದೆಬಡಿದರು. ಗಂಗರಸರ ಮೂವತ್ತ ಮೂರು ತಲೆಮಾರು ರಾಜರು ಈ ಪ್ರದೇಶವನ್ನು ಆಳಿದರು. ಕ್ರಿ.ಶ. 1004ರಲ್ಲಿ ರಾಜೇಂದ್ರ ಚೋಳನು ಸುಮಾರು ಏಳುನೂರ ವರ್ಷಗಳಿಂದ ಆಳ್ವಿಕೆಯಲ್ಲಿದ್ದ ಗಂಗರಸರನ್ನು ಸೋಲಿಸಿ ಈ ಪ್ರದೇಶವನ್ನು ಆಕ್ರಮಿಸಿದನು. ಒಂದು ಶತಮಾನ ಕಾಲ ಅಂದರೆ ಕ್ರಿ.ಶ. 1114 ರವರೆಗೆ ಈ ಪ್ರದೇಶವು ಚೋಳರ ಆಳ್ವಿಕೆಯಲ್ಲಿದ್ದಿತು. ಹೊಯ್ಸಳರಾಜ ಬಿಟ್ಟಿದೇವನು ಈ ಪ್ರದೇಶವನ್ನು ಆಕ್ರಮಿಸಿದ ಮೇಲೆ ಕ್ರಿ.ಶ. 1346ರಲ್ಲಿ ಹೊಯ್ಸಳ ರಾಜ್ಯದ ಅಂಗರಾಜ್ಯವಾಗಿದ್ದಿತು. 1346ರಲ್ಲಿ ವಿಜಯನಗರ ಸಾಮ್ರಾಜ್ಯಕ್ಕೆ ಸೇರಿ ಕೊಂಡಿತು[2].

ಹೊಯ್ಸಳರ ಆಡಳಿತಕ್ಕೆ ಸಂಬಂಧಿಸಿದ ಶಾಸನಗಳು 11ನೆಯ ಶತಮಾನದ ಮಧ್ಯಭಾಗದಲ್ಲಿಯೇ ಚೋಳರ ಆಡಳಿತವನ್ನು ಮಂಡ್ಯ ಜಿಲ್ಲೆಯ ಕೆಲವು ಭಾಗಗಳಲ್ಲಿ ಪ್ರತಿಭಟಿಸಿ ಹೊಯ್ಸಳರು ಆ ಭಾಗಗಳಲ್ಲಿ ತಳವೂರಿದ ಸಂಗತಿಯನ್ನು ಸೂಚಿಸುತ್ತವೆ. ಹೊಯ್ಸಳರು ಆಗ ಕಲ್ಯಾಣ ಚಾಳುಕ್ಯರ ಮಾಂಡಲಿಕರಾಗಿದ್ದರು. ವಿನಯಾದಿತ್ಯ ಕ್ರಿ.ಶ. 1048ರ ತೊಣಚಿಯ ಶಾಸನ ಹಾಗೂ ಎರೆಯಂಗನ ಕ್ರಿ.ಶ. 1025 ರ ಹಳೇಬೂದನೂರು ಶಾಸನಗಳು ಪ್ರಮುಖವಾಗಿವೆ,. ವಿಷ್ಣುವರ್ಧನನ ಸಹೋದರ ವಿನಯಾದಿತ್ಯನು ಕ್ರಿ.ಶ. 1120ರ ಸುಮಾರಿಗೆ ಶ್ರೀರಂಗಪಟ್ಟಣದಲ್ಲಿ ಅಧಿಕಾರಿಯಾಗಿದ್ದ, ಇದಲ್ಲದೇ ಪಾಂಡವಪುರ ತಾಲ್ಲೂಕಿನ ತೊಣ್ಣೂರು ಹೊಯ್ಸಳರ ಆಡಳಿತದ ಒಂದು ಪ್ರಮುಖ ಕೇಂದ್ರವಾಗಿತ್ತು. ಹೊಯ್ಸಳರ ಶಾಸನಗಳ ಸಂಖ್ಯೆ ಈ ಜಿಲ್ಲೆಯಲ್ಲಿ 250ಕ್ಕೂ ಮೀರಿವೆ. ಇವರ ಕಾಲದ ಪ್ರಮುಖ ದೇವಾಲಯಗಳೆಂದರೆ ಕಿಕ್ಕೇರಿಯ ಬ್ರಹ್ಮೇಶ್ವರ, ಬಸರಾಳುವಿನ ಮಲ್ಲಿಕಾರ್ಜುನ, ಗೋವಿಂದನಹಳ್ಳಿಯ ಪಂಚಲಿಂಗ ದೇವಾಲಯ, ಮದ್ದೂರಿನ ವರದರಾಜ ದೇವಾಲಯ[3].

13ನೇ ಶತಮಾನದ ಮಧ್ಯಭಾಗದಲ್ಲಿ ವಿಜಯನಗರವು ಸ್ಥಾಪನೆಗೊಂಡು ಕ್ರಮೇಣ ವಿಸ್ತಾರಗೊಂಡು ಇಡೀ ದಕ್ಷಿಣ ಭಾರತವನ್ನೆಲ್ಲಾ ಒಳಗೊಂಡಿತ್ತು. ಈ ಸಂದರ್ಭದಲ್ಲಿ ಮೈಸೂರು, ಮಂಡ್ಯ ಮತ್ತು ಇತರ ಪ್ರದೇಶಗಳಲ್ಲಿ ಸಣ್ಣ ಪುಟ್ಟ ಪಾಳೆಪಟ್ಟು ಮನೆತನಗಳು ತಲೆಯೆತ್ತಿ ವಿಜಯನಗರ ಅರಸರಿಗೆ ಅಧೀನರಾಗಿ ಆಳುತ್ತಿದ್ದರು. ವಿಜಯನಗರದ ಶ್ರೇಷ್ಠದೊರೆ ಕೃಷ್ಣದೇವರಾಯನು ಆ ವೇಳೆಗೆ ಶ್ರೀರಂಗಪಟ್ಟಣದಲ್ಲಿ ಆಳುತ್ತಿದ್ದ ಸಾಮಂತ ಕುಮಾರವೀರಯ್ಯನ ಕುಮಾರಿಯನ್ನು ವರಿಸಿದ್ದನೆಂದೂ ಅವಳು ಅವನ ಮೂವರು ಮುಖ್ಯ ರಾಣಿಯರಲ್ಲೊಬ್ಬಳಾಗಿದ್ದಳೆಂದೂ ತಿಳಿದು ಬರುತ್ತದೆ. ಆ ವೇಳೆಗೆ ಉಮ್ಮತ್ತೂರು ರಾಜ್ಯವನ್ನು ಸ್ಥಾಪಿಸಿ ಶಿವನಸಮುದ್ರವನ್ನು ರಾಜಧಾನಿಯಾಗಿ ಮಾಡಿಕೊಂಡು ಆಳುತ್ತಿದ್ದ ಗಂಗಶಾಖೆಯ ರಾಜನನ್ನು ಸೋಲಿಸಿ ಕ್ರಿ.ಶ. 1511ರಲ್ಲಿ ಕೃಷ್ಣದೇವರಾಯನು ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡನು. ಕ್ರಿ.ಶ. 1565ರ ತಾಳಿಕೋಟೆಯ ಕದನದ ನಂತರ ವಿಜಯನಗರ ಸಾಮ್ರಾಜ್ಯವು ಛಿದ್ರಗೊಂಡಿತು. ರಾಮರಾಯನ ತಮ್ಮನಾದ ತಿರುಮಲರಾಯನು ಪೆನುಗೊಂಡೆಯಿಂದ ಆಳಲು ಪರಕ್ರಮಿಸಿ ತನ್ನ ಮಕ್ಕಳಲೊಬ್ಬನಾದ ರಾಮರಾಜನು ಶ್ರೀರಂಗಪಟ್ಟಣದ ಪ್ರಾಂತದ ಆಡಳಿತವನ್ನು ವಹಿಸಿಕೊಂಡನು. ನಂತರ ಕ್ರಿ.ಶ. 1610ರವರೆಗೂ ವಿಜಯನಗರ ರಾಜ ಪ್ರತಿನಿಧಿಯ ಆಳ್ವಿಕೆಯಲ್ಲಿತ್ತು[4].

ಆ ವೇಳಗಾಗಲೇ ಹದಿನಾಡು ಎಂಬಲ್ಲಿ ತಮ್ಮ ಆಳ್ವಿಕೆಯನ್ನು ಸ್ಥಾಪಿಸಿದ್ದ ಮೈಸೂರಿನ ಒಡೆಯರ ಸಂತತಿಯ ಪ್ರಭುಗಳು ರಾಜ್ಯ ವಿಸ್ತರಣೆಯಲ್ಲಿ ತೊಡಗಿದ್ದರು. ರಾಜ ಒಡೆಯರು (1578–1617) ಶ್ರೀರಂಗಪಟ್ಟಣದ ಎರಡನೇ ತಿರುಮಲನ ಮೇಲೆ

ಯುದ್ಧ ಹೂಡಿ ಅವನನ್ನು ಸೋಲಿಸಿ ಕ್ರಿ.ಶ. 1610ರಲ್ಲಿ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡರು. ರಾಜ ಒಡೆಯರು ಶ್ರೀರಂಗಪಟ್ಟಣವನ್ನು ರಾಜಧಾನಿಯಾಗಿ ಮಾಡಿಕೊಂಡು ಮಂಡ್ಯ, ಮದ್ದೂರಿನವರೆಗೂ ರಾಜ್ಯವನ್ನು ವಿಸ್ತರಿಸಿದರು. ಒಡೆಯರ ಸಂತತಿಯ ಪೂರ್ವಾರ್ಧದ ಆಳ್ವಿಕೆಯಲ್ಲಿ ಕ್ರಿ.ಶ. 1673 ರಿಂದ 1704 ರವರೆಗೆ ಆಳಿದ ಚಿಕ್ಕದೇವರಾಜ ಒಡೆಯರ್ ಪ್ರಮುಖರು. ಇವರ ಆಳ್ವಿಕೆಯಲ್ಲಿ ಶ್ರೀರಂಗಪಟ್ಟಣವು ಸುಮಾರು ಒಂದೂನೂರು ವರ್ಷಗಳ ಕಾಲ ಕನ್ನಡನಾಡಿನ ರಾಜಕೀಯ ಮತ್ತು ಸಾಂಸ್ಕೃತಿಕ ಚಟುವಟಿಕೆಯ ಕೇಂದ್ರವಾಗಿತ್ತು. ಶ್ರೀರಂಗಪಟ್ಟಣ, ಮೇಲುಕೋಟೆ ಮತ್ತು ಮಳವಳ್ಳಿ ಪಟ್ಟಣಗಳು ವ್ಯಾಪಾರ, ವಿದ್ಯಾಭ್ಯಾಸ ಮತ್ತು ಧಾರ್ಮಿಕ ಕೇಂದ್ರಗಳಾಗಿ ವಿಶೇಷ ಪುರೋಭಿವೃದ್ಧಿಗೊಂಡವು. ಚಿಕ್ಕದೇವರಾಜ ಒಡೆಯರ ಆಳ್ವಿಕೆಯ ನಂತರ ಕಾಲಕ್ರಮದಲ್ಲಿ ಒಡೆಯರ ಸಂತತಿಯ ಅಧಿಕಾರವು ಕ್ಷೀಣಿಸಿ ಆಡಳಿತವು ದಳವಾಯಿಗಳ ಕೈವಶವಾಯಿತು. ದಳವಾಯಿ ನಂಜರಾಜಯ್ಯನ ಕೊನೆಗಾಲದಲ್ಲಿ 1761ರಲ್ಲಿ ಹೈದರ್‌ಆಲಿ ಪ್ರಾಬಲ್ಯಕ್ಕೆ ಬಂದನು[5].

ಕ್ರಿ.ಶ. 1761ರಿಂದ 1799 ರವರೆಗೆ ಮೈಸೂರು ರಾಜ್ಯವು ಸೇರಿದಂತೆ ಮಂಡ್ಯ ಪ್ರದೇಶವು ಹೈದರ್ ಆಲಿ ಹಾಗೂ ಟಿಪ್ಪು ಸುಲ್ತಾನರ ಆಡಳಿತಕ್ಕೊಳಪಟ್ಟಿತ್ತು. ಈ ಅವಧಿಯಲ್ಲಿ ಮೈಸೂರು ರಾಜ್ಯದ ರಾಜಧಾನಿಯಾಗಿ ಶ್ರೀರಂಗಪಟ್ಟಣವೂ, ಇಡೀ ದಕ್ಷಿಣ ಭಾರತದ ಆರ್ಥಿಕ ಕೇಂದ್ರವಾಗಿ ಷಹರ್‌ಗಂಜಾಂ ಏಳ್ಗೆ ಹೊಂದಿದವು. ಹೀಗೆ ಹೈದರ್, ಟಿಪ್ಪು ಕಾಲದಲ್ಲಿ ಈಗಿನ ಮಂಡ್ಯ ಜಿಲ್ಲೆಯ ಪ್ರದೇಶಗಳು ರಾಷ್ಟ್ರ, ಅಂತರರಾಷ್ಟ್ರೀಯ ಪ್ರಾಮುಖ್ಯತೆ ಪಡೆದವು. ಬ್ರಿಟಿಷ್ ವಸಾಹತು ಶಾಹಿಯ ವಿರುದ್ಧ ಹೈದರ್ ಮತ್ತು ಟಿಪ್ಪುಸುಲ್ತಾನ ನಡೆಸಿದ ನಾಲ್ಕು ಆಂಗ್ಲೋ–ಮೈಸೂರು ಯುದ್ಧಗಳಲ್ಲಿ ಮಂಡ್ಯ, ಮಳವಳ್ಳಿ, ಶ್ರೀರಂಗಪಟ್ಟಣ ಮದ್ದೂರು, ಫ್ರೆಂಚ್‌ರಾಕ್ಸ್ (ಪಾಂಡವಪುರ) ಪ್ರದೇಶವು ನೇರವಾಗಿ ಭಾಗವಹಿಸುವಂತಾಯಿತು. ಅದರಲ್ಲೂ 1799ರಲ್ಲಿ ನಡೆದ ನಾಲ್ಕನೇ ಆಂಗ್ಲೋ ಮೈಸೂರು ಯುದ್ಧದಲ್ಲಿ ಟಿಪ್ಪುವಿನ ರಾಜಧಾನಿ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಳ್ಳಲು ಬ್ರಿಟಿಷರು, ಮರಾಠರು ಹಾಗೂ ನಿಜಾಮರನ್ನೊಳಗೊಂಡ ಒಕ್ಕೂಟಸೇನೆ ಬೆಂಗಳೂರಿನಿಂದ ಮದ್ದೂರು, ಮಂಡ್ಯದ ಮೂಲಕ ಆಕ್ರಮಣ ಮಾಡಿತು. ಮತ್ತೊಂದು ಬ್ರಿಟಿಷ್ ಸೇನೆ ಮಳವಳ್ಳಿಯ ಮೂಲಕ ಆಕ್ರಮಣ ಮಾಡಿತು. ಹೀಗೆ ನಾಲ್ಕನೇ ಆಂಗ್ಲೋ–ಮೈಸೂರು ಯುದ್ಧದ ರಣರಂಗವಾದ ಈ ಪ್ರದೇಶ ಅಪಾರ ಹಾನಿಗೊಳಗಾಯಿತು. ಟಿಪ್ಪು ಸುಲ್ತಾನನ ಮರಣಾನಂತರ ಮೈಸೂರು ಸಂಸ್ಥಾನದ ಆಡಳಿತ ಬಾಲಕ ಮುಮ್ಮಡಿ ಕೃಷ್ಣರಾಜ ಒಡೆಯರ್ ಮತ್ತು ದಿವಾನ್ ಪೂರ್ಣಯ್ಯನವರ ಕೈ ಸೇರಿತ್ತು. ಈ ಕಾಲದಲ್ಲಿ ರಾಜಧಾನಿಯು ಶ್ರೀರಂಗಪಟ್ಟಣದಿಂದ ಮೈಸೂರು ನಗರಕ್ಕೆ ಸ್ಥಳಾಂತರಗೊಳ್ಳುವ ಮೂಲಕ ಮಂಡ್ಯ ಪ್ರದೇಶದ ರಾಜಕೀಯ ಪ್ರಾಮುಖ್ಯತೆ ತಗ್ಗಿತು.

ಮುಮ್ಮಡಿಯವರ ಕಾಲದಲ್ಲಿ ನೀಡಲ್ಪಟ್ಟ ಅಪಾರ ಪ್ರಮಾಣದ ದಾನಗಳಿಂದಾಗಿ ಮೇಲುಕೋಟೆ, ತೊಣ್ಣೂರು, ಶ್ರೀರಂಗಪಟ್ಟಣ, ಎಲೆಚಾಕನಹಳ್ಳಿ, ಮಾರೇಹಳ್ಳಿ, ಮದ್ದೂರು, ನಾಗಮಂಗಲ ಸಾಂಸ್ಕೃತಿಕ ಕೇಂದ್ರಗಳಾಗಿ ಬೆಳವಣಿಗೆಗೊಂಡವು[6].

ಟಿಪ್ಪು ಸುಲ್ತಾನರ ಕಾಲದವರೆಗೂ ಮಂಡ್ಯ ಒಂದು ಸರ್ವಮಾನ್ಯ ಗ್ರಾಮವಾಗಿಯೇ ಉಳಿದಿತ್ತು. ಟಿಪ್ಪುಸುಲ್ತಾನ ಈ ಗ್ರಾಮದ ಸರ್ವಮಾನ್ಯವನ್ನು ತಪ್ಪಿಸಿ ಇಲ್ಲಿದ್ದ ತಾಲ್ಲೂಕು ಕಛೇರಿಯನ್ನು ಕೆರಗೋಡಿಗೆ ವರ್ಗ ಮಾಡಿದನು. ಆದರೆ ದಿವಾನ್‌ಪೂರ್ಣಯ್ಯನವರು ತಾಲ್ಲೂಕು ಕಛೇರಿಯನ್ನು ಕೆರಗೋಡಿನಿಂದ ಮತ್ತೇ ಮಂಡ್ಯಕ್ಕೆ ವರ್ಗಾಯಿಸಿದರು[7]. 1830–31 ನಗರದಂಗೆಯ ನಂತರ ಒಡೆಯರು ಅಧಿಕಾರ ಕಳೆದುಕೊಂಡು ಮೈಸೂರು ರಾಜ್ಯ ಬ್ರಿಟಿಷರ ನೇರ ಆಳ್ವಿಕೆಗೆ ಒಳಪಟ್ಟಿತು. 1831 ರಿಂದ 1881 ರವರೆಗೆ 50 ವರ್ಷಗಳು ಕಮೀಷನರುಗಳ ಆಡಳಿತ ಏರ್ಪಟ್ಟಿತು. ಕಮೀಷನರುಗಳ ಕಾಲದಲ್ಲಿ ಮಂಡ್ಯ ಪ್ರಾಂತವು ಅಷ್ಟಗ್ರಾಮ ವಿಭಾಗಕ್ಕೆ ಒಳಪಟ್ಟಿತ್ತು. ಈ ಕಾಲಾವಧಿಯಲ್ಲಿ ಮೈಸೂರು–ಬೆಂಗಳೂರು ನಡುವಣ ನದಿಗಳಿಗೆ ಅಡ್ಡಲಾಗಿ ಸೇತುವೆಗಳನ್ನು ನಿರ್ಮಿಸಿ ಉತ್ತಮ ರಸ್ತೆ ಮಾರ್ಗಗಳನ್ನು ರೂಪಿಸಲಾಯಿತು. ಇದರಿಂದಾಗಿ ಮಂಡ್ಯ, ಮದ್ದೂರು ಪಟ್ಟಣಗಳು ಬೆಳವಣಿಗೆಗೊಳ್ಳಲು ನೆರವಾಯಿತು. 1847ರಲ್ಲಿ ಶ್ರೀರಂಗಪಟ್ಟಣದ ಸಮೀಪವಿರುವ ಪಾಲಹಳ್ಳಿಯಲ್ಲಿ ಅಷ್ಟಗ್ರಾಮ ಷುಗರ್ ವರ್ಕ್ಸ್ ಎಂಬ ಸಕ್ಕರೆ ಕಾರ್ಖಾನೆ ಸ್ಥಾಪನೆಗೊಂಡಿತು. ಇಲ್ಲಿಯ ಹರಳು ಸಕ್ಕರೆ ಉತ್ತಮ ಗುಣಮಟ್ಟದೆಂದು ಗುರುತಿಸಲ್ಪಟ್ಟು 1851 ಮತ್ತು 1861ರ ಲಂಡನ್ ವಸ್ತು ಪ್ರದರ್ಶನದಲ್ಲೂ ಬಹುಮಾನ ಮತ್ತು ಪದಕಗಳನ್ನು ಗಳಿಸಿತ್ತು. ಹಾಗೆಯೇ 1867ರಲ್ಲಿ ಪ್ಯಾರಿಸ್‌ನ ವಿಶ್ವಮೇಳದಲ್ಲೂ ನಡೆದ ವಸ್ತು ಪ್ರದರ್ಶನದಲ್ಲಿ ಈ ಕಾರ್ಖಾನೆಗೆ ಗೌರವ ಪ್ರಶಸ್ತಿ ದೊರಕಿತ್ತು. ಆದರೆ 1894ರಲ್ಲಿ ಈ ಕಾರ್ಖಾನೆ ಕಾರಣಾಂತರದಿಂದ ಕಾರ್ಯಸ್ಥಗಿತಗೊಳಿಸಿತು. ನಾಗಮಂಗಲವು ಹಿತ್ತಾಳೆಯ ವಿಗ್ರಸ, ಪಾತ್ರೆ, ದೀಪಸ್ತಂಭ ತಯಾರಿಕೆಗೆ ಹೆಸರಾಗಿತ್ತು[8].

1881ರಲ್ಲಿ ಮೈಸೂರು ಸಂಸ್ಥಾನ ಬ್ರಿಟಿಷರ ನೇರ ಆಳ್ವಿಕೆಯಿಂದ ಮೈಸೂರು ಒಡೆಯರಿಗೆ ಅಧಿಕಾರ ವರ್ಗಾಯಿಸಲ್ಪಟ್ಟಿತು. ಹತ್ತನೆಯ ಚಾಮರಾಜ ಒಡೆಯರ ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರ ಆಳ್ವಿಕೆಯಲ್ಲಿ ಮಂಡ್ಯ ಪ್ರದೇಶ ಸರ್ವತೋಮುಖ ಅಭಿವೃದ್ಧಿಗೆ ಹೊಂದಿತು. ನಾಲ್ವಡಿಕೃಷ್ಣರಾಜ ಒಡೆಯರ ಆಳ್ವಿಕೆ ಕಾಲದಲ್ಲಿ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕು ಕನ್ನಂಬಾಡಿಯಲ್ಲಿ ಭಾರತದಲ್ಲೇ ಪ್ರಥಮ ದೊಡ್ಡಜಲಾಶಯವಾದ ಕೃಷ್ಣರಾಜಸಾಗರ ಅಣೆಕಟ್ಟು ನಿರ್ಮಾಣ ಕಾರ್ಯವು 1911ರಲ್ಲಿ ಆರಂಭವಾಗಿ 1931ರಲ್ಲಿ ಮುಕ್ತಾಯವಾಯಿತು. ಬೆಂಗಾಡಾಗಿದ್ದ ಜಿಲ್ಲೆ ವಿಶ್ವೇಶ್ವರಯ್ಯ ನಾಲೆಯ ನೀರಿನಿಂದ ಲಕ್ಷಾಂತರ ಎಕರೆ ಜಮೀನು ನೀರಾವರಿಯ ಸೌಲಭ್ಯವನ್ನು ಪಡೆದುಕೊಂಡಿತು. ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಶಿಂಷಾ ಬಳಿ ಭಾರತದಲ್ಲೇ

ಪ್ರಥಮವೆನಿಸಿರುವ. ಯಶಸ್ವಿ ಜಲವಿದ್ಯುತ್‌ದಾಗರವು ಶಿವನಸಮುದ್ರದಲ್ಲಿ 1904ರಲ್ಲಿ ಸ್ಥಾಪನೆಯಾಯಿತು. ಮಂಡ್ಯದ ಮೈಸೂರು ಸಕ್ಕರೆ ಕಾರ್ಖಾನೆ ಮತ್ತು ಇತರೆ ಕೈಗಾರಿಕೆಗಳನ್ನು ಸಿ.ಕೋಲ್ಮನ್ ಸಹಕಾರದಿಂದ ಸ್ಥಾಪನೆಯಾದವು. ಮಂಡ್ಯ ಜಿಲ್ಲೆ ಕಾವೇರಿನದಿಯ ತೀರದಲ್ಲಿ ಆದಿರಂಗ (ಶ್ರೀರಂಗಪಟ್ಟಣ), ಮಧ್ಯರಂಗ (ಶಿಂಷಾಬಳಿ) ರಂಗನಾಥಸ್ವಾಮಿ ದೇವಾಲಯಗಳಿಗೆ ಪ್ರಸಿದ್ಧವಾಗಿವೆ. ಮೇಲುಕೋಟೆ, ತೊಣ್ಣೂರು, ಆದಿಚುಂಚನಗಿರಿ ಮೊದಲಾದ ಧಾರ್ಮಿಕ ಕ್ಷೇತ್ರಗಳಿಂದಲೂ ಹಾಗೂ ಬೃಂದಾವನ, ರಂಗನತಿಟ್ಟು, ಶ್ರೀರಂಗಪಟ್ಟಣ ಮೊದಲಾದ ಪ್ರೇಕ್ಷಣೀಯ ಸ್ಥಳಗಳಿಂದಲೂ ಕೂಡಿದೆ. ಒಡೆಯರ ಕಾಲದಿಂದಲೂ ಪ್ರಸಿದ್ಧ ಸಾಹಿತಿಗಳನ್ನು ಕಲಾವಿದರನ್ನು, ಆಡಳಿತಗಾರರನ್ನು ಹಾಗೂ ರಾಜಕೀಯ ನೇತಾರರನ್ನು ಆ ಕನ್ನಡನಾಡಿಗೆ ನೀಡುತ್ತಾ ಪ್ರಗತಿಪಥದ ಹಾದಿಯಲ್ಲಿದೆ[9].

1930 ರ ವೇಳೆಗೆ ಮೈಸೂರು ಜಿಲ್ಲೆಯ ಉಪವಿಭಾಗವಾಗಿದ್ದ ಫ್ರೆಂಚ್‌ರಾಕ್ಸ್‌ಗೆ (ಇಂದಿನ ಪಾಂಡವಪುರ ತಾಲ್ಲೂಕು) ಶ್ರೀರಂಗಪಟ್ಟಣ, ಮಂಡ್ಯ, ಮಳವಳ್ಳಿ, ನಾಗಮಂಗಲ ಮತ್ತು ಕೃಷ್ಣರಾಜಪೇಟೆ ತಾಲ್ಲೂಕುಗಳು ಸೇರಿದ್ದವು. ಇದರಿಂದಾಗಿ ಮಂಡ್ಯ ಪ್ರದೇಶವು ಒಂದೇ ಉಪವಿಭಾಗಕ್ಕೆ ಸೇರಿದಂತಾಯಿತು. 1931ರ ಮೇ ತಿಂಗಳಿನಲ್ಲಿ ಮದ್ದೂರು ತಾಲ್ಲೂಕು ಹಾಗೂ 1937ರ ಮೇ ತಿಂಗಳಿನಲ್ಲಿ ಮದ್ದೂರು ತಾಲ್ಲೂಕು ಹಾಗೂ 1937ರ ಏಪ್ರಿಲ್ 31ರಂದು ಫ್ರೆಂಚ್‌ರಾಕ್ಸ್ (ಪಾಂಡವಪುರ) ತಾಲ್ಲೂಕುಗಳು ಅಸ್ತಿತ್ವಕ್ಕೆ ಬಂದವು[10]. ಅಂತಿಮವಾಗಿ ಮೈಸೂರು ಜಿಲ್ಲೆಯಿಂದ ವಿಭಜನೆಗೊಂಡ ಮಂಡ್ಯ ಜಿಲ್ಲೆ, 1 ಜುಲೈ 1939ರಂದು ಅಸ್ತಿತ್ವಕ್ಕೆ ಬಂದಿತು.

ಮಂಡ್ಯ ಜಿಲ್ಲೆಯ ಭೌಗೋಳಿಕ ಹಿನ್ನೆಲೆ

ಮಂಡ್ಯ ಕರ್ನಾಟಕ ರಾಜ್ಯದ ದಕ್ಷಿಣ ಭಾಗದಲ್ಲಿರುವ ಒಂದು ಜಿಲ್ಲೆ. ಈ ಜಿಲ್ಲೆಯಲ್ಲಿ ಕೃಷ್ಣರಾಜಪೇಟೆ, ಮದ್ದೂರು, ಮಳವಳ್ಳಿ, ಮಂಡ್ಯ, ನಾಗಮಂಗಲ, ಪಾಂಡವಪುರ ಮತ್ತು ಶ್ರೀರಂಗಪಟ್ಟಣ ಎಂಬ ಏಳು ತಾಲ್ಲೂಕುಗಳು, 31 ಹೋಬಳಿಗಳು, 11 ಪಟ್ಟಣಗಳು, 1483 ಗ್ರಾಮಗಳು ಇವೆ[11]. ಮಂಡ್ಯ ಜಿಲ್ಲೆಯು ಬೇಸಾಯವನ್ನೇ ಪ್ರಧಾನ ವೃತ್ತಿಯನ್ನಾಗಿ ಅಳವಡಿಸಿಕೊಂಡಿದ್ದು, ಶೇಕಡ 90ರಷ್ಟು ಜನ ವ್ಯವಸಾಯವನ್ನೇ ಅವಲಂಬಿಸಿದ್ದಾರೆ. ಜಿಲ್ಲೆಯು ಉತ್ತಮ ಹವಾಗುಣವನ್ನು ಹೊಂದಿದ್ದು, ಕೃಷಿಗೆ ಪ್ರಶಸ್ತವಾದಂತಹ ಪ್ರಕೃತಿಯನ್ನೇ ಹೊಂದಿದೆ. ಇದಕ್ಕೆ ಪೂರಕವಾಗಿ ಕಾವೇರಿ ನದಿಯ ಹರಿವು ಹಾಗೂ ವಿಶ್ವೇಶ್ವರಯ್ಯ ನಾಲೆಯು ಜಿಲ್ಲೆಯನ್ನು ಅತ್ಯಂತ ಶ್ರೀಮಂತಗೊಳಿಸಿವೆ.

ಮಂಡ್ಯ ಜಿಲ್ಲೆಯ ಕೈಗಾರಿಕಾಭಿವೃದ್ಧಿಯ ಬಗ್ಗೆ ಅವಲೋಕಿಸಿದಾಗ ನೆರೆಯ ಜಿಲ್ಲೆಗಳಾದ ಬೆಂಗಳೂರು ಮತ್ತು ಮೈಸೂರಿನಷ್ಟು ಈ ಕ್ಷೇತ್ರ ಬೆಳವಣಿಗೆಯನ್ನು ಕಾಣಲಾಗದು, ಇದಕ್ಕೆ ಕಾರಣ ಜಿಲ್ಲೆಯ ಭೌಗೋಳಿಕ, ಸಾಮಾಜಿಕ ಹಾಗೂ ಆರ್ಥಿಕ ಪರಿಸ್ಥಿತಿಗಳು, ಆಧುನಿಕ ಕೈಗಾರಿಕೆಗಳ ಆರಂಭಕ್ಕೆ ಮುನ್ನ ಕೆಲವು ಸಣ್ಣ ಪ್ರಮಾಣದ ಉದ್ದಿಮೆಗಳಾದ ಹತ್ತಿಬಟ್ಟೆ, ಕಂಬಳಿಗಳು, ಕಂಚಿನ ಪಾತ್ರೆಗಳು, ಮಣ್ಣಿನ ಮಡಿಕೆಗಳು, ಬೆಲ್ಲ ತಯಾರಿಕೆ, ರೇಷ್ಮೆಸೀರೆಗಳು ವಿವಿಧ ಪ್ರದೇಶಗಳಲ್ಲಿ ಉತ್ಪಾದಿಸಲ್ಪಟ್ಟು ಸ್ವಲ್ಪಮಟ್ಟಿಗೆ ಕೈಗಾರಿಕಾ ವಾತಾವರಣವನ್ನು ರೂಪಿಸಿತ್ತು. ಮಳವಳ್ಳಿಯ ತಳಗವಾದಿ ಗ್ರಾಮದ ನೇಯ್ಗೆ ಘಟಕಗಳ ರೇಷ್ಮೆಸೀರೆ, ಮೇಲುಕೋಟೆಯ ಕೈಮಗ್ಗದಕಂಬಳಿ, ವಿಶೇಷ ಧೋತಿಗಳಂತಹ ಉತ್ಪನ್ನಗಳು ಪ್ರಸಿದ್ಧಿಯಾಗಿದ್ದವು[12]. ಮಂಡ್ಯ ಜಿಲ್ಲೆಯ ಬೃಹತ್ ಕೈಗಾರಿಕೆ ಉದ್ಯಮವು ಮೈಸೂರು ಷುಗರ್ ಕಂಪನಿಯ ಪ್ರಾರಂಭದೊಡನೆ ಆಯಿತೆನ್ನಬಹುದು. ಈ ಕಾರ್ಖಾನೆ 1932–33ರಲ್ಲಿ ಆರಂಭವಾಗಿದ್ದು, ಇದೇ ಕರ್ನಾಟಕದ ಮೊದಲ ಸಕ್ಕರೆ ಕಾರ್ಖಾನೆಯೂ ಹೌದು. ಇದು ಮಂಡ್ಯ ಜಿಲ್ಲೆಗೆ 'ಸಕ್ಕರೆಯಸೀಮೆ' ಎಂಬ ಹೆಸರನ್ನು ತಂದುಕೊಟ್ಟಿತು. ಇದು ಅಲ್ಲದೇ ಪಾಂಡವಪುರದ ಸಹಕಾರ ಸಕ್ಕರೆ ಕಾರ್ಖಾನೆ, ಮದ್ದೂರು ತಾಲ್ಲೂಕಿನ ಕಾಳಮುದ್ದನದೊಡ್ಡಿಯ ಚಾಮುಂಡೇಶ್ವರಿ ಷುಗರ್ ಮಿಲ್ ಪ್ರಮುಖ ಸಕ್ಕರೆ ಕಾರ್ಖಾನೆಯಾಗಿ ಕಾರ್ಯನಿರ್ವಹಿಸುತ್ತಿವೆ. 1962ರಲ್ಲಿ ಮಂಡ್ಯದ ವ್ಯವಸಾಯೋತ್ಪನ್ನ ಸಹಕಾರ ಸಂಘದ ವತಿಯಿಂದ ವ್ಯವಸಾಯೋಪಕರಣಗಳ ತಯಾರಿಕಾ ಕಾರ್ಖಾನೆ ಸ್ಥಾಪನೆ ಅದರ ಮೂಲಕ ರೈತರ ಬೇಸಾಯಕ್ಕೆ ಬೇಕಾದ ವ್ಯವಸಾಯೋತ್ಪನ್ನಗಳನ್ನು ಪೂರೈಸುತ್ತಿದೆ. 1970ರಲ್ಲಿ ಜಾನುವಾರು ಮೇವು ಕಾರ್ಖಾನೆ ಸ್ಥಾಪನೆಗೊಂಡು ಪಶು ಆಹಾರ ಉತ್ಪಾದನೆಯನ್ನು ಮಾಡುತ್ತಿದೆ. ಜಿಲ್ಲೆಯ ಕೈಗಾರಿಕೆಗಳಿಗೆ ಮತ್ತು ಇತರ ಅಭಿವೃದ್ಧಿ ಕಾರ್ಯಗಳಿಗೆ ಸಾಕಷ್ಟು ವಿದ್ಯುತ್ ಸರಬರಾಜಾಗಿದೆ. ಇಡೀ ಭಾರತ ಮತ್ತು ಏಷ್ಯಾದಲ್ಲೇ ಪ್ರಪ್ರಥಮವಾಗಿ 1902ರಲ್ಲಿ ಜಲವಿದ್ಯುತ್ ಉತ್ಪಾದಿಸಿದ್ದು, ಈ ಜಿಲ್ಲೆಗೆ ಸೇರಿರುವ ಮಳವಳ್ಳಿ ತಾಲ್ಲೂಕಿನ ಶಿವನಸಮುದ್ರದಲ್ಲಿ ಜಿಲ್ಲೆಯಲ್ಲಿ ಕೃಷಿ ಮತ್ತು ಕೈಗಾರಿಕೆಗಳಿಗೆ ಹಣಕಾಸಿನ ನೆರವು ನೀಡಲು ವಾಣಿಜ್ಯ ಬ್ಯಾಂಕುಗಳು, ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು, ಕೇಂದ್ರ ಸಹಕಾರ ಬ್ಯಾಂಕಿನ ಶಾಖೆಗಳು ಇವೆ[13].

ಮಂಡ್ಯ ಜಿಲ್ಲೆಯ ರಚನೆ

ಕರ್ನಾಟಕ ರಾಜ್ಯದ ದಕ್ಷಿಣ ಭಾಗದಲ್ಲಿರುವ ಮಂಡ್ಯ ಜಿಲ್ಲೆ ರಾಜ್ಯದಲ್ಲಿನ ಸಂಪತ್‌ಭರಿತ ಜಿಲ್ಲೆಗಳಲ್ಲಿ ಒಂದಾಗಿದೆ. 1 ಜುಲೈ 1939ರಂದು ಜಿಲ್ಲೆಯಾಗಿ ಅಸ್ತಿತ್ವಕ್ಕೆ ಬರುವ ಪೂರ್ವದಲ್ಲಿ ಮೈಸೂರು ಜಿಲ್ಲೆಯ ಒಂದು ಭಾಗವಾಗಿತ್ತು. 1969ರಲ್ಲಿ ಆಡಳಿತ ದೃಷ್ಟಿಯಿಂದ ಮೈಸೂರು ಜಿಲ್ಲೆಯನ್ನು 14 ತಾಲ್ಲೂಕುಗಳಾಗಿ ವಿಂಗಡಿಸಲಾಗಿತ್ತು. ಅವುಗಳೆಂದರೆ ಮೈಸೂರು, ಚಾಮರಾಜನಗರ, ಪಟ್ಟಣ ಅಷ್ಟಗ್ರಾಮ

(ಶ್ರೀರಂಗಪಟ್ಟಣದ್ವೀಪವೂ ಸೇರಿದಂತೆ), ಪಿರಿಯಾಪಟ್ಟಣ, ಯಡತೊರೆ, ಹೆಗ್ಗಡದೇವನಕೋಟೆ, ಗುಂಡ್ಲುಪೇಟೆ, ನಂಜನಗೂಡು, ಮೈಸೂರು ಅಷ್ಟಗ್ರಾಮ, ತಲಕಾಡು, ಮಂಡ್ಯ, ಮದ್ದೂರು, ಮಳವಳ್ಳಿ, ಯಳಂದೂರು, ಆ 14 ತಾಲ್ಲೂಕುಗಳ ಪೈಕಿ ಶ್ರೀರಂಗಪಟ್ಟಣ, ಮಂಡ್ಯ, ಮದ್ದೂರು ಮತ್ತು ಮಳವಳ್ಳಿ ತಾಲ್ಲೂಕುಗಳು ಈಗಿನ ಮೈಸೂರು ಜಿಲ್ಲೆಗೆ ಸೇರಿದ್ದವು. ಮದ್ದೂರು ತಾಲ್ಲೂಕು 1875ರಲ್ಲಿ ಉಪ-ತಾಲ್ಲೂಕಾಗಿ ರಚಿತವಾಗಿ, 1886ರಲ್ಲಿ ಮಂಡ್ಯ ತಾಲ್ಲೂಕಿನಲ್ಲಿ, ವಿಲೀನಗೊಂಡಿತು. 1882ರಲ್ಲಿ ಆಡಳಿತಾತ್ಮಕ ಬದಲಾವಣೆಯಿಂದ ನಾಗಮಂಗಲ, ಅತ್ತಿಗುಪ್ಪೆ (ಈಗಿನ ಕೃಷ್ಣರಾಜಪೇಟೆ) ತಾಲ್ಲೂಕುಗಳನ್ನು ಹಾಸನಜಿಲ್ಲೆಯಿಂದ ಮೈಸೂರು ಜಿಲ್ಲೆಗೆ ಸೇರಿಸಲಾಯಿತು. ಫ್ರೆಂಚ್‌ರಾಕ್ಸ್ (ಇಂದಿನ ಪಾಂಡವಪುರ) 1882 ಉಪವಿಭಾಗವಾಗಿ ರಚಿಸಲಾಯಿತು. ಅತ್ತಿಗುಪ್ಪೆಗೆ 1891ರಲ್ಲಿ ಕೃಷ್ಣರಾಜಪೇಟೆ ಎಂದು ನಾಮಕರಣ ಮಾಡಲಾಯಿತು. ಮದ್ದೂರು ತಾಲ್ಲೂಕನ್ನು 1931ರ ಮೇ 1 ರಂದು ರಚಿಸಲಾಯಿತು. 1937 ಏಪ್ರಿಲ್ 30 ರಂದು ಫ್ರೆಂಚ್‌ರಾಕ್ಸ್ (ಪಾಂಡವಪುರ) ತಾಲ್ಲೂಕನ್ನು ರಚಿಸಲಾಯಿತು. 1939ರವರೆಗೆ ಈ ಎಲ್ಲ ತಾಲ್ಲೂಕುಗಳು ಮೈಸೂರು ಜಿಲ್ಲೆಯ ಭಾಗಗಳಾಗಿದ್ದವು[14].

1881ರಲ್ಲಿ ಮೈಸೂರಿನಲ್ಲಿ ದಿವಾನ ರಂಗಾಚಾರ್ಲು ಅವರು ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಿದರು. ಮದ್ದೂರು ತಾಲ್ಲೂಕು, ಸೋಮನಹಳ್ಳಿಯ ಚಿಕ್ಕೇಗೌಡರು ನಾಗಮಂಗಲ ತಾಲ್ಲೂಕಿನ ಪ್ರತಿನಿಧಿಯಾಗಿ ಪ್ರಜಾಪ್ರತಿನಿಧಿ ಸಭೆಯಲ್ಲಿ ಭಾಗವಹಿಸಿದ್ದರು. ಇಂದಿನ ಮದ್ದೂರು ತಾಲ್ಲೂಕು 1939ಕ್ಕೆ ಮೊದಲು ನಾಗಮಂಗಲ, ಮಂಡ್ಯ, ಮಳವಳ್ಳಿ ತಾಲ್ಲೂಕುಗಳಲ್ಲಿ ಹರಿದು ಹಂಚಿಹೋಗಿತ್ತು. ಸುಮಾರು ನಾಲ್ಕು ದಶಕಗಳ ಸಾರ್ವಜನಿಕ ಜೀವನದಲ್ಲಿ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ ಮಂಡ್ಯ ಪ್ರದೇಶದ ಏಳ್ಗೆಗಾಗಿ ದುಡಿದರು[15].

ಮಂಡ್ಯ ಜಿಲ್ಲೆ ರಚನೆಯ ಪರ-ವಿರೋಧ ನಿಲುವುಗಳು

1937ರ ಸುಮಾರಿಗೆ ಮೈಸೂರು ಜಿಲ್ಲೆಯನ್ನು ವಿಭಜಿಸಿ ಮಂಡ್ಯವನ್ನು ಒಂದು ಸ್ವತಂತ್ರ ಜಿಲ್ಲೆಯಾಗಿ ರೂಪಿಸುವ ಸಂದರ್ಭದಲ್ಲಿ ಪರವಿರೋಧಿ ಅಭಿಪ್ರಾಯ ವ್ಯಕ್ತವಾಯಿತು. ಎಚ್.ಕೆ.ಮಾದಯ್ಯ, ಬಳೆಸಿದ್ದಲಿಂಗಶೆಟ್ಟಿ, ಜಿ.ಮಲ್ಲಣ್ಣ, ಕೆ.ಎಂ.ಕೃಷ್ಣಪ್ಪಗೌಡ, ಎಲ್.ವೇಮರೆಡ್ಡಿ, ಹೆಚ್.ಎಂ.ಚನ್ನಬಸಪ್ಪ, ತಿಮ್ಮೇಗೌಡ, ಎಸ್.ರಂಗರಾಮಯ್ಯ, ಕೆ.ಕೆಂಚಪ್ಪ, ಕೆ.ಟಿ.ಭಾಷ್ಯಂ ಐಯ್ಯಂಗಾರ್ ಇವರೆಲ್ಲ ಮಂಡ್ಯ ಒಂದು ಪ್ರತ್ಯೇಕ ಜಿಲ್ಲೆಯಾಗುವುದನ್ನು ಖಡಾಖಂಡಿತವಾಗಿ ವಿರೋಧಿಸಿದರು. ಆದರೆ ಪಿ.ವಿ.ಮುನಿಸ್ವಾಮಿ ಐಯ್ಯರ್, ಬಿ.ಚಾಮಯ್ಯ, ಕೆ.ಚಿಕ್ಕಲಿಂಗಯ್ಯ, ಎಸ್.ಸಿ.ಮಲ್ಲಯ್ಯ ಅವರು ಮೈಸೂರು

ಜಿಲ್ಲೆಯ ವಿಭಜನೆಯನ್ನು ಬಯಸಿ ಪ್ರತ್ಯೇಕ ಜಿಲ್ಲೆಯನ್ನಾಗಿ ಮಂಡ್ಯ ರೂಪಿಸಲು ಪ್ರಯತ್ನಿಸಿದರು[16].

ಮೈಸೂರು ಜಿಲ್ಲೆಯಿಂದ ಮಂಡ್ಯವನ್ನು ಸ್ವತಂತ್ರ ಜಿಲ್ಲೆಯನ್ನಾಗಿ ಪ್ರತ್ಯೇಕಿಸುವ ವಿಚಾರದಲ್ಲಿ ದಿನಾಂಕ 18 ಜೂನ್ 1937ರಂದು ನಡೆದ ಪ್ರಜಾಪ್ರತಿನಿಧಿ ಸಭೆಯ ಅಧಿವೇಶನ ಬಹಳ ಮಹತ್ವದ್ದಾಗಿದೆ. ಅಂದಿನ ಅಧಿವೇಶನದಲ್ಲಿ ಮಂಡ್ಯ ಜಿಲ್ಲೆ ಸ್ಥಾಪನೆಯ ಪರ ವಿರೋಧದದ ಧ್ವನಿಗಳು ದಟ್ಟವಾಗಿ ಈ ರೀತಿ ಪ್ರಕಟಗೊಂಡವು. ಮಳವಳ್ಳಿ ತಾಲ್ಲೂಕಿನ ಹೆಚ್.ಕೆ.ಮಾದಯ್ಯ ಎಂಬ ಸದಸ್ಯರು ಮಂಡ್ಯ ಜಿಲ್ಲೆ ಸ್ಥಾಪನೆ ವಿರೋಧಿಸಿ ಮಾತನಾಡುತ್ತಾ ಮೈಸೂರು ನಗರವು ಜಿಲ್ಲೆಯ ಕೇಂದ್ರ ಸ್ಥಾನವಾಗಿದ್ದು, ಎಲ್ಲ ತಾಲ್ಲೂಕಿನವರೂ ಮೈಸೂರಿಗೆ ಬರುತ್ತಾರೆಯೇ ವಿನಃ ಮಂಡ್ಯಕ್ಕಲ್ಲಾ ಹಾಗಾಗಿ ಮಂಡ್ಯವನ್ನು ಕೇಂದ್ರ ಸ್ಥಾನವಾಗಿ ಮಾಡುವುದು ಸರಿಯಲ್ಲ ಎಂದು ವಾದಿಸಿದ್ದರು. ಅಧಿವೇಶನದ ಅಧ್ಯಕ್ಷರಾದ ಮಿರ್ಜಾಇಸ್ಮಾಯಿಲ್ ಮೈಸೂರು ಜಿಲ್ಲಾ ಬೋರ್ಡಿನ ಅಧಿಕಾರ ವ್ಯಾಪ್ತಿ ವಿಶಾಲವಾಗಿರುವುರಿಂದ ಅದರ ಆಡಳಿತ ನಿರ್ವಹಣೆ ಕಷ್ಟವೆಂದೂ, ವಿಭಜನೆ ಅನುಕೂಲಕರವೆಂದು ಅಭಿಪ್ರಾಯಪಟ್ಟರು. ಹೆಚ್.ಕೆ.ಮಾದಯ್ಯನವರು ಜಿಲ್ಲಾ ಆಡಳಿತ ನೋಡಿಕೊಳ್ಳಲು ಡೆಪ್ಯೂಟಿ ಕಮಿಷನರ್‌ಗೆ ಕಷ್ಟವಾದರೆ ಅವರಿಗೆ ಒಬ್ಬ ಸಹಾಯಕರನ್ನು ನೇಮಿಸಬೇಕೇ ಹೊರತು ವಿಭಜನೆಯನ್ನಲ್ಲ ಎಂದು ವಿರೋಧಿಸಿದರು. ಎಸ್.ಸಿ.ಮಲ್ಲಯ್ಯನವರು ಮಾತನಾಡುತ್ತಾ 'ಮಂಡ್ಯ, ಶ್ರೀರಂಗಪಟ್ಟಣ ಮತ್ತು ಮಳವಳ್ಳಿ ತಾಲ್ಲೂಕು 1.20 ಲಕ್ಷ ಎಕರೆಗಳಷ್ಟು ನೀರಾವರಿ ಪ್ರದೇಶವಿದ್ದು, ಇಂತಹ ವಿಶಾಲ ಪ್ರದೇಶವನ್ನು ಮೈಸೂರು ಕೇಂದ್ರವನ್ನಾಗಿ ಇಟ್ಟುಕೊಂಡು ಜಿಲ್ಲಾಧಿಕಾರಿ ಆಡಳಿತ ನಡೆಸುವುದು ಸಾಧ್ಯವಿಲ್ಲವೆಂದು ಪ್ರತಿಪಾದಿಸಿದರು. ನಾಗಮಂಗಲ ತಾಲ್ಲೂಕಿನ ಕೆ.ಎಂ.ಕೃಷ್ಣಪ್ಪಗೌಡರು–ಮೈಸೂರು ಜಿಲ್ಲಾ ವಿಭಜನೆಯು ತ್ರಾಸದಾಯಕ ಮತ್ತು ಅಪಾರ ವೆಚ್ಚದಾಯಕವಾದುದರಿಂದ ವಿಭಜನೆಯನ್ನು ಒಪ್ಪಿಕೊಳ್ಳಬಾರದು ಎಂದರು. ಅದಕ್ಕೆ ಪ್ರತಿಕ್ರಿಯಿಸಿದ ಎಸ್.ಸಿ.ಮಲ್ಲಯ್ಯನವರು ನಾಗಮಂಗಲದಲ್ಲಿ ನಡೆದ ಸಮ್ಮೇಳನದಲ್ಲಿ ಮಂಡ್ಯ ಜಿಲ್ಲೆಯ ರಚನೆಯ ಪರಬಹುಮತ ನಿರ್ಣಯ ಬಂತೆಂದು ತಿಳಿಸಿದರು. ಕೃಷ್ಣಪ್ಪಗೌಡರು ನಾಗಮಂಗಲ ಸಮ್ಮೇಳನದಲ್ಲಿ ಬಹುಮತ ನಿರ್ಣಯ ಬಂತೆಂದು ಹೇಳುತ್ತಿರುವುದು ಅಪಪ್ರಚಾರವಾಗಿದೆ ಎಂದು ವಾದಿಸಿ ಜಿಲ್ಲೆಯ ಪ್ರತ್ಯೇಕತೆಯಿಂದ ಮೈಸೂರಿಗೆ ಆರ್ಥಿಕವಾಗಿ ನಷ್ಟವುಂಟಾಗುತ್ತದೆ ಹಾಗಾಗಿ ವಿಭಜನೆ ಬೇಡ ಎಂದರು[17].

ಒಟ್ಟಾರೆ ಮಂಡ್ಯ ಜಿಲ್ಲೆಯ ನಿರ್ಮಾಣದ ಬಗ್ಗೆ 1937 ಹಾಗೂ 1939ರ ಅಧಿವೇಶನಗಳಲ್ಲಿ ಬಿಗುವಾದ ಚರ್ಚೆಗಳು ನಡೆದವು. ಮಿರ್ಜಾ ಇಸ್ಮಾಯಿಲ್ ಅಧ್ಯಕ್ಷತೆಯಲ್ಲಿ ನಡೆದ ಪ್ರಜಾ ಪ್ರತಿನಿಧಿಸಭೆ ಮಂಡ್ಯ ಜಿಲ್ಲೆ ರಚನೆಯ ಠರಾವನ್ನು ಅಂಗೀಕರಿಸಲ್ಪಡದೆ ಮುಂದೂಡಲ್ಪಟ್ಟಿತ್ತು.

ದಿನಾಂಕ 31.03.1938ರಂದು ಕೆ.ಆರ್.ಪೇಟೆ ತಾಲ್ಲೂಕಿನ ಕಿಕ್ಕೇರಿ ಪಟ್ಟಣದಲ್ಲಿ ಕಾಂಗ್ರೆಸ್ ಸಭೆ ನಡೆಯಿತು. ಸಭೆಯಲ್ಲಿ ಹೆಚ್.ಸಿ.ದಾಸಪ್ಪನವರು ಮಾತನಾಡಿ ಪ್ರಸ್ತುತ ಸರ್ಕಾರವು ರೈತರಿಗೆ ಕೃಷಿ ಚಟುವಟಿಕೆಗೆ ಸಹಾಯಕವಾಗಿಲ್ಲ. ಪ್ರತ್ಯೇಕ ಮಂಡ್ಯ ಮಂಡ್ಯ ಜಿಲ್ಲೆ ರಚನೆಯನ್ನು ವಿರೋಧಿಸಬೇಕೆಂದು ತಿಳಿಸಿದರು. ಅಲ್ಲದೇ ಸರ್ಕಾರವು ಅಧಿಕ ತೆರಿಗೆಯನ್ನು ರೈತರ ಮೇಲೆ ವಿಧಿಸಿ ಹಣ ಸಂಗ್ರಹಿಸುತ್ತದೆ. ಈ ಹಣವನ್ನು ಅಧಿಕ ವೇತನ ಹಾಗೂ ಅನಾವಶ್ಯಕವಾಗಿ ಖರ್ಚು ಮಾಡುತ್ತದೆ ಎಂದು ಟೀಕಿಸಿದರು. ಮೈಸೂರು ಜಿಲ್ಲೆಯಿಂದ ಮಂಡ್ಯವನ್ನು ವಿಭಜಿಸಿ ಪ್ರತ್ಯೇಕ ಜಿಲ್ಲೆಯಾಗಿ ರೂಪಿಸುವುದು ಜನರ ಆಶಯಗಳನ್ನು ಪ್ರಶ್ನಿಸಿದಂತಾಗುತ್ತದೆ[18]. 18 ನವೆಂಬರ್ 1937ರಂದು ಮಂಡ್ಯದ ಸಂತೆ ಮೈದಾನದಲ್ಲಿ ಸಂಜೆ ವೇಳೆ ಕಾಂಗ್ರೆಸ್ ಪ್ರಚಾರಕಾರ್ಯ ಹಾಗೂ ಸಾರ್ವಜನಿಕ ಸಭೆ ನಡೆಯಿತು. ರಂಗರಾಮಯ್ಯನವರು ಮಾತನಾಡುತ್ತಾ ಮೈಸೂರು ಜಿಲ್ಲೆಯಿಂದ ಮಂಡ್ಯವನ್ನು ವಿಭಜಿಸಿ ಪ್ರತ್ಯೇಕ ಜಿಲ್ಲೆ ಮಾಡುವುದರಿಂದ ಸರಕಾರಕ್ಕೆ ಅಧಿಕ ವೆಚ್ಚವಾಗುತ್ತದೆ. ಮಂಡ್ಯ ಮೈಸೂರು ಜಿಲ್ಲೆಯ ಒಂದು ಭಾಗವಾಗಿ ಇರಲೆಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು[19].

ಎಸ್.ಸಿ. ಮಲ್ಲಯ್ಯನವರ ನಿರಂತರವಾಗಿ ಪ್ರಜಾಪ್ರತಿನಿಧಿ ಸಭೆಯಲ್ಲಿ ಮಂಡ್ಯ ಪ್ರದೇಶದ ಜನರ ಆಶೋತ್ತರಗಳು, ದುಃಖದುಮ್ಮಾನಗಳನ್ನು ಎಳೆ-ಎಳೆಯಾಗಿ ಬಿಚ್ಚಿಟ್ಟು ಸಾರ್ವಜನಿಕ ಅಭಿಪ್ರಾಯ ಮಂಡ್ಯ ಜಿಲ್ಲೆ ಸ್ಥಾಪನೆ ಪರವಾಗಿ ರೂಪುಗೊಳ್ಳುವಂತೆ ಮಾಡಿದರು. ಮಂಡ್ಯ ಪ್ರದೇಶದ ತಾಲ್ಲೂಕುಗಳ ತಾಲ್ಲೂಕು ಬೋರ್ಡುಗಳು ಸಭೆಯಲ್ಲಿ ಮಂಡ್ಯ ಜಿಲ್ಲೆ ರಚನೆಯ ಬಗ್ಗೆ ಗೊತ್ತುವಳಿಗಳನ್ನು ಅಂಗೀಕರಿಸುವಂತೆ ಕ್ರಮಕೈಗೊಂಡರು. ಎಸ್.ಸಿ.ಮಲ್ಲಯ್ಯನವರು ಜಿಲ್ಲಾ ರಚನೆಯ ಬಗ್ಗೆ ಆಸಕ್ತಿ ತಳೆದಿದ್ದ ದಿವಾನ್ ಮಿರ್ಜಾ ಇಸ್ಮಾಯಿಲ್‌ರು ಮಂತ್ರಿ ಪರಿಷತ್ತಿನ ಅಂಗೀಕಾರವನ್ನು ಪಡೆದು, ಮೈಸೂರು, ಮಹಾರಾಜರ ಸಮ್ಮತಿಯೊಡನೆ ಮಂಡ್ಯ ಜಿಲ್ಲಾ ರಚನೆಯ ಕಾರ್ಯ ಪೂರ್ಣಗೊಳಿಸಿದರು[20].

ಮೈಸೂರು ಜಿಲ್ಲೆಯಿಂದ ವಿಭಜನೆಗೊಂಡ ಮಂಡ್ಯ ಜಿಲ್ಲೆ 1 ಜುಲೈ 1939ರಂದು ಆಸ್ತಿತ್ವಕ್ಕೆ ಬಂದಿತು. ಕೃಷ್ಣರಾಜಪೇಟೆ, ಮದ್ದೂರು, ಮಳವಳ್ಳಿ, ಮಂಡ್ಯ, ನಾಗಮಂಗಲ, ಪಾಂಡವಪುರ ಹಾಗೂ ಶ್ರೀರಂಗಪಟ್ಟಣ ತಾಲ್ಲೂಕುಗಳನ್ನು ಒಳಗೊಂಡ ಸ್ವತಂತ್ರ್ಯ ಜಿಲ್ಲೆಯಾಗಿ ಮಂಡ್ಯ ರೂಪುಗೊಂಡಿತು[21]. 27 ಆಗಸ್ಟ್ 1939ರಂದು ಮೈಸೂರು ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರು ಮಂಡ್ಯಕ್ಕೆ ಭೇಟಿ ನೀಡಿ ನೂತನವಾಗಿ ಅಸ್ತಿತ್ವಕ್ಕೆ ಬಂದ ಮಂಡ್ಯ ಜಿಲ್ಲಾ ಬೋರ್ಡ್ ಶಂಕುಸ್ಥಾಪನೆ ಕಾರ್ಯಕ್ರಮವನ್ನು ನೆರವೇರಿಸಿದರು. ಮಂಡ್ಯ ಜಿಲ್ಲೆ ಅಭಿವೃದ್ಧಿ ಗೊಳ್ಳಲೆಂದು ಹಾರೈಸಿ ಮಂಡ್ಯ ಜಿಲ್ಲೆಯ ಆಶಯವನ್ನು ಸಾಕಾರಗೊಳಿಸಿದರು[22]. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಜಿಲ್ಲೆಯ

ಪ್ರಾರಂಭೋತ್ಸವ ಸಮಾರಂಭದಲ್ಲಿ ಮಾತನ್ನಾಡಿದರು. ನಂತರ ಜಿಲ್ಲಾಧಿಕಾರಿಯವರೂ, ಪೌರಸಭೆಯವರೂ ಸಮರ್ಪಿಸಿದ ವಿಜ್ಞಾಪನಾ ಪತ್ರಗಳಿಗೆ ಪ್ರತ್ಯುತ್ತರವಾಗಿ ಹೀಗೆ ಅಪ್ಪಣೆ ಕೊಡಿಸಿದರು. "ಮಹಿಳೆಯರೇ ಮತ್ತು ಮಹಾಶಯರೇ, ನೀವುಗಳು ನಮ್ಮನ್ನು ಅತ್ಯಾದರದಿಂದ ಸ್ವಾಗತಿಸಿರುವುದಕ್ಕಾಗಿ ಇತರೆ ಕಾರ್ಯ ಗೌರವದ ದೆಸೆಯಿಂದ ಇಲ್ಲಿಯ ಸಮಾರಂಭ ಮಹೋತ್ಸವವನ್ನು ಜುಲೈ 1ನೇ ತಾರೀಖಿನ ದಿನ ನೇರವೇರಿಸಿ ಅರ್ಪಿಸುವ ಅವಕಾಶವನ್ನು ತಾವು ಕಳೆದುಕೊಳ್ಳಬೇಕಾಯಿತು. ಅದಾಗ್ಯೂ ನೂತನವಾಗಿ ಏರ್ಪಟ್ಟಿರುವ ಜಿಲ್ಲೆಗೆ ಸಾಧ್ಯವಾದಷ್ಟು ಶೀಘ್ರವಾಗಿ ಆಗಮಿಸುವ ಕೂತೂಹಲವುಳ್ಳವರಾಗಿ ಆ ಅವಕಾಶವನ್ನೇ ತಾವು ನಿರೀಕ್ಷಿಸುತ್ತಿದ್ದವು. ಆದ ಕಾರಣ ಈ ದಿನ ನಿಮ್ಮೊಡನೆ ಸೇರಿರುವುದು ನಮಗೆ ಅಮಿತವಾದ ಸಂತೋಷವನ್ನುಂಟು ಮಾಡಿದೆ. ನೂತನವಾಗಿ ಏರ್ಪಟ್ಟಿರುವ ಈ ಜಿಲ್ಲೆ ಪರವಾಗಿ ತಮಗೆ ಸಮರ್ಪಿತವಾದ ವಿಜ್ಞಾಪನಾ ಪತ್ರಿಕೆಯಲ್ಲಿಯೂ ಸೂಚಿತವಾಗಿರುವ ಭಕ್ತಿ ವಿಶ್ವಾಸಗಳನ್ನು ವಿಶೇಷವಾಗಿ ಅಭಿನಂದಿಸಿ ಮೆಚ್ಚುಗೆಯನ್ನು ತಿಳಿಸಲಿಚ್ಛಿಸುವೆವು. ಈಗ್ಗೆ ಸ್ವಲ್ಪಕಾಲಕ್ಕೆ ಹಿಂದೆ, ಮಂಡ್ಯವು ಅಷ್ಟೇನೂ ಪ್ರಾಮುಖ್ಯತೆಯಿಲ್ಲದ ಸಾಮಾನ್ಯವಾದ ಸಣ್ಣ ಊರಾಗಿದ್ದುದು ಸರ್ವರಿಗೂ ವಿಧಿತವಾಗಿಯೇ ಇರುವ ಅಂಶ. ಇದು ಈಗ ಕೈಗಾರಿಕೆಯ ಮತ್ತು ವ್ಯವಸಾಯದ ಕಾರ್ಯಕಲಾಪಗಳಿಗೆ ಆಶ್ರಯದಾಯಕವಾದ ಪಟ್ಟಣವಾಗಿ ಪರಿಣಮಿಸಿರುತ್ತದೆ. ಇಲ್ಲಿ ಸ್ಥಾಪಿತವಾಗಿರುವ ಸಕ್ಕರೆ ಕಾರ್ಖಾನೆಯು ಯಶಸ್ವಿಯಾಗಿ ಕೆಲಸ ನಡೆಯುತ್ತಿರುವ ಕೈಗಾರಿಕೆಯ ಉದ್ಯಮವಾಗಿ ಅಭಿವೃದ್ಧಿ ಸ್ಥಿತಿಗೆ ಬಂದು, ಅನೇಕ ಮಂದಿ ಬಡವರಿಗೆ ಉದ್ಯೋಗಗಳು ದೊರೆತು ಜೀವನ ಸೌಕರ್ಯದಂತಾಗುವಂತೆ ಆಶ್ರಯ ಕೊಟ್ಟಿದೆ. ಈ ಊರಿನ ಜನಸಂಖ್ಯೆಯು ಅಧಿಕವಾಗಿ ತನ್ನಿಮಿತ್ತವಾದ ಕಾರಣಗಳ ದೆಸೆಯಿಂದ ಬೆಂಗಳೂರು ಮೈಸೂರು ಸಂಚಾರ ಮಾರ್ಗದ ಪಾರ್ಶ್ವದ ಸುಂದರವಾದ ಉಪಪಟ್ಟಣದಂತಿರುವ ವಸತಿಯೊಂದು ಏರ್ಪಟ್ಟು ಶೋಭಿಸುತ್ತಿದೆ. ಆದ ಕಾರಣ ನೂತನವಾಗಿ ಏರ್ಪಟ್ಟು ಡಿಸ್ಟ್ರಿಕ್ಟ್ ಕಸಬೆಯಾಗಿ ನಿಯೋಜಿಸಿರುವುದು ನ್ಯಾಯವಾಗಿಯೇ ಇದೆ. ಕಾಲಕ್ರಮೇಣದಲ್ಲಿ ಈ ಮಂಡ್ಯವು ಅಧಿಕವಾಗಿ ಜನ ಬಾಹುಳ್ಯದಿಂದ ಕೈಗಾರಿಕೆಗಳ ನೆಲೆಯಾಗಿ ಪುರೋಭಿವೃದ್ಧಿ ಹೊಂದುವುದು. ಪೂರ್ವದ ಮೈಸೂರು ಡಿಸ್ಟ್ರಿಕ್ಟ್‌ಗೆ ಸೇರಿದ ಹದಿನಾಲ್ಕು ತಾಲ್ಲೂಕುಗಳಲ್ಲಿ ಮಂಡ್ಯವು ಒಂದು ತಾಲ್ಲೂಕಾಗಿ ಸೇರಿದ್ದ ಕಾರಣ, ವಿಸ್ತೀರ್ಣದಲ್ಲಾಗಲಿ, ಜನಸಂಖ್ಯೆಯಲ್ಲಾಗಲಿ, ವಾರ್ಷಿಕ ವರಮಾನದಲ್ಲಾಗಲಿ ಅದು ಸಂಸ್ಥಾನದ ಎರಡು ಜಿಲ್ಲೆಗಳಿಗೆ ಸಮವೆನಿಸಿದ್ದಿತು. ಪ್ರತ್ಯೇಕವಾದ ಆಡಳಿತ ವ್ಯವಸ್ಥೆಯಿಂದೊಡಗೂಡಿ ಮಂಡ್ಯ ಜಿಲ್ಲೆಯ ಪುರೋಭಿವೃದ್ಧಿ ಕಾರ್ಯಕಲಾಪಗಳನ್ನು ತಾವು ಸಾವಧಾನದಿಂದ ಏಕಪ್ರಕಾರವಾಗಿ ಗಮನಿಸುತ್ತ ಬರುವೆವು. ಮೈಸೂರು ಜಿಲ್ಲೆಯಂತೆ ಮಂಡ್ಯ ಜಿಲ್ಲೆ ಸಹ ಪೂರ್ಣವಾಗಿ ಅಭ್ಯುದಯ ಹೊಂದುವಂತೆ

ಭಗವಂತನು ಕೃಪೆ ಮಾಡಲೆಂಬುದೇ ತಮ್ಮ ಪ್ರಾರ್ಥನೆ. ಭಗವಂತ ಕೃಪೆಯಿಂದ ಈ ರೀತಿ ಪೂರ್ಣಾಭ್ಯುದಯವುಂಟಾಗುವುದೆಂಬುದೇ ತಮ್ಮ ಹಾರೈಕೆ ಎಂದು ಆಶಿಸಿದರು[23].

ಮಂಡ್ಯ ಪದದ ನಿಷ್ಪತ್ತಿ

ಮಂಡ್ಯ ಹೆಸರಿಸಿ ಮೂಲವು ವಿಶಿಷ್ಟವಾಗಿದೆ. ಭೌಗೋಳಿಕ, ಆರ್ಥಿಕ ಹಾಗೂ ಭಾಷಾಶಾಸ್ತ್ರದ ಹಿನ್ನೆಲೆಯಲ್ಲಿ ಇತ್ತೀಚಿಗೆ ಆಗಿರುವ ಸಂಶೋಧನೆಗಳ ಪ್ರಕಾರ 'ಮಂಡ್ಯ' ಎಂಬ ಪದ ಮಂಟೇಯ' ಪದದ ಸಂಕ್ಷಿಪ್ತ ರೂಪವಾಗಿದೆ. 'ಮಂಟೇಯ' ಎಂಬ ಪದಕ್ಕೆ ರಾಗಿ ಮತ್ತು ಕಲ್ಲು ಎಂಬ ಎರಡು ಅರ್ಥಗಳಿವೆ. ಇಲ್ಲಿನ ಬಂಡೆಗಳು ಹಾಗೂ ಇಲ್ಲಿ ಬೆಳೆಯುವ ಪ್ರಧಾನ ಬೆಳೆ ರಾಗಿಯೇ ಆಗಿರುವುದರಿಂದ 'ಮಂಟೇಯ' ಅಂದರೆ ರಾಗಿ ಬೆಳೆಯುತ್ತಿದ್ದ ಪ್ರದೇಶವೆಂದಾಗುತ್ತದೆ. ಈ ಹಿನ್ನೆಲೆಯಲ್ಲಿ ಮಂಟೇಯ–ಮಂಡೇಯ–ಮಂಡ್ಯ ಆಗಿರಬಹುದು[24].

ಮಂಡ್ಯ ಜಿಲ್ಲೆಯಲ್ಲಿ ಚಳುವಳಿಗಳ ಹುಟ್ಟು ಮತ್ತು ಬೆಳವಣಿಗೆ

ಭಾರತ ದೇಶದಲ್ಲಿ ಜನರ ಹಿತಕ್ಕಾಗಿ, ಜನರ ಅನುಕೂಲಕ್ಕಾಗಿ ಅವರ ಸ್ವಾತಂತ್ರ್ಯಕ್ಕೆ ದಕ್ಕೆ ತಂದ ಬ್ರಿಟಿಷ್ ವಿರುದ್ಧ ಚಳುವಳಿಗಳು, ಹೋರಾಟಗಳು ನಡೆದವು. ಭಾರತದಲ್ಲಿ ಬ್ರೀಟಿಷರು ಬಂದು ನಮ್ಮ ದೇಶದಲ್ಲಿ ಆಳ್ವಿಕೆ ನಡೆಸುವ ಮೊದಲೇ ಕೆಲವೊಂದು ಚಳವಳಿಗಳು ನಡೆದಿರುವುದನ್ನು ನಾವು ಇತಿಹಾಸವನ್ನು ಅವಲೋಕಿಸಿದಾಗ ಕಂಡುಬರುತ್ತವೆ. ಅಂದು ರಾಜ–ಮಹಾರಾಜರ ಆಳ್ವಿಕೆ ಇತ್ತು. ಪ್ರಜೆಗಳ ಮೇಲೆ ಕಂದಾಯ ಹೆಚ್ಚಿಸಿದಾಗ ಪ್ರಜೆಗಳ ಸ್ವಾತಂತ್ರ್ಯಕ್ಕೆ ತೊಂದರೆ ಬಂದಾಗ ಜವಾಬ್ದಾರಿಯುತ ಸರ್ಕಾರ ರಚನೆಗಾಗಿ ಪ್ರತಿಭಟನೆ ನಡೆಯುವುದು ಸಹಜ.

ಮಂಡ್ಯ ಜಿಲ್ಲೆಯಲ್ಲಿ ನಡೆದ ಚಳವಳಿಗಳು ಜನರಲ್ಲಿ ಜಾಗೃತಿಯನ್ನು ಮೂಡಿಸುವಲ್ಲಿ ಪ್ರಮುಖ ಪಾತ್ರವಹಿಸಿದವು. ಮಂಡ್ಯದಲ್ಲಿ ಸಂದರ್ಭಕ್ಕೆ ತಕ್ಕಂತೆ ಹಲವಾರು ಚಳುವಳಿಗಳು ನಡೆದಿವೆ. ಅಲ್ಲದೇ ಆ ಚಳುವಳಿಗಳಿಗೆ ಉತ್ತಮ ನಾಯಕತ್ವ ದೊರಕಿದೆ. ಮಂಡ್ಯ ಒಂದು ಪ್ರತ್ಯೇಕ ಜಿಲ್ಲೆಯಾಗುವವರೆಗೆ ಈ ಜಿಲ್ಲೆ ಮೈಸೂರು ಜಿಲ್ಲೆಗೆ ಸೇರಿತ್ತು. ಮೈಸೂರು ಪ್ರಾಂತ್ಯದಲ್ಲಿ ಹೋರಾಟಗಳು, ಚಳವಳಿಗಳು ನಡೆಯಲು ಹಲವಾರು ವರ್ಷಗಳೇ ಗತಿಸಿದವು. ಇದಕ್ಕೆ ಹಲವಾರು ಕಾರಣಗಳನ್ನು ನೀಡಬಹುದು. ಮೈಸೂರು ರಾಜ್ಯವು ರಾಜರ ಆಳ್ವಿಕೆಯಿಂದ ಕೂಡಿದ್ದು, ಪ್ರಜೆಗಳೊಂದಿಗೆ ರಾಜರ ಬಹುದಿನಗಳ ನಂಟು ಹಾಗೂ ರಾಜರ ಬಗ್ಗೆ ಜನರಿಗಿದ್ದ ಭಕ್ತಿ ಇವುಗಳು ಮೈಸೂರು ರಾಜ್ಯದಲ್ಲಿ ಚಳವಳಿ ನಡೆಯಲು ಅಡ್ಡಿಯಾಗಿದ್ದವು[25].

ಆದರೆ ಮಂಡ್ಯ ಪ್ರದೇಶ ಜನರು ನೀರಾವರಿ ವ್ಯವಸ್ಥೆ ವಿರುದ್ಧ ಚಳವಳಿ ನಡೆಸಿರುವುದನ್ನು ಕಾಣಬಹುದು. 1761–1799ರವರಗೆ ಹೈದರಾಲಿ ಮತ್ತು ಟಿಪ್ಪುವಿನ ಆಳ್ವಿಕೆಯ ಕಾಲದಲ್ಲಿ ಮಂಡ್ಯ ಜಿಲ್ಲೆಗೆ ಸೇರಿದ ಶ್ರೀರಂಗಪಟ್ಟಣದಲ್ಲಿ ಹಲವಾರು ರೈತ ಚಳುವಳಿಗಳು ನಡೆದ ಬಗ್ಗೆ ಐತಿಹಾಸಿಕ ದಾಖಲೆಗಳಿವೆ. ಅಂದಿನ ಕಂದಾಯ ವಸೂಲಿದಾರರ ಸ್ವಾರ್ಥತನ, ಜನತೆಯು ನೀಡಿದ ಹಲವಾರು ಅಹವಾಲುಗಳನ್ನು ಬದಲಾಯಿಸಿದ ತಿರುಚಿದ, ಮನವಿ ಸಲ್ಲಿಸಿದ ರೈತರ ಅಹವಾಲುಗಳಿಗೆ ಕಿವಿಕೊಡದ ಕೆಲವು ಅಧಿಕಾರಿಗಳ ವರ್ತನೆಯಿಂದ ಟಿಪ್ಪುವಿಗೆ ರೈತರ ಮೇಲೆ ಸಿಟ್ಟು ಬರುವಂತೆ ಮಾಡಿದ್ದರು. ಇದರಿಂದ ಕ್ರೂರ ಶಿಕ್ಷೆ ನೀಡಿದ ಹಲವಾರು ಉದಾಹರಣೆಗಳು ಇವೆ. ಒಬ್ಬ ಪಟೇಲನನ್ನು ಟಿಪ್ಪು ಗಲ್ಲಿಗೆ ಹಾಕಿಸಿದ. ಈ ಕಾರಣದಿಂದ ರೈತರು ತಮ್ಮ ಹೋರಾಟದಲ್ಲಿ ವಿಫಲರಾಗಿದ್ದರು[26].

1799 ಮೇ 4 ರಂದು ನಾಲ್ಕನೇ ಆಂಗ್ಲೋ ಮೈಸೂರು ಯುದ್ಧದಲ್ಲಿ ಟಿಪ್ಪು ಸುಲ್ತಾನನ ಮರಣಾನಂತರ ಮೈಸೂರು ಸಂಸ್ಥಾನದ ಆಡಳಿತ ಐದು ವರ್ಷದ ಬಾಲಕ ಮುಮ್ಮಡಿ ಕೃಷ್ಣರಾಜ ಒಡೆಯರ್ ಮತ್ತು ದಿವಾನ್ ಪೂರ್ಣಯ್ಯನವರ ಕೈಸೇರಿತ್ತು. ಈ ಕಾಲದಲ್ಲಿ ರಾಜಧಾನಿಯು ಶ್ರೀರಂಗಪಟ್ಟಣದಿಂದ ಮೈಸೂರು ನಗರಕ್ಕೆ ಸ್ಥಳಾಂತರಗೊಳ್ಳುವ ಮೂಲಕ ಮಂಡ್ಯ ಪ್ರದೇಶದ ರಾಜಕೀಯ ಪ್ರಾಮುಖ್ಯತೆ ತಗ್ಗಿತು. ಕಮೀಷನರುಗಳ ಕಾಲದಲ್ಲಿ ಮಂಡ್ಯ ಪ್ರಾಂತ್ಯವು ಅಷ್ಟಗ್ರಾಮ ವಿಭಾಗಕ್ಕೆ ಒಳಪಟ್ಟಿತ್ತು. 1881ರಲ್ಲಿ ದಿವಾನರಾದ ರಂಗಾಚಾರ್ಲುರವರು ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಿದರು. ಭಾರತದ ಸಂಸ್ಥಾನಗಳೆಲ್ಲೆಲ್ಲ ಪ್ರಥಮವಾಗಿ ಸ್ಥಾಪನೆಯಾದ ಸಭೆ ಇದಾಗಿತ್ತು. ಈ 144 ಜನ ಸದಸ್ಯರಲ್ಲಿ ಮಂಡ್ಯ ಪ್ರದೇಶದ ಮದ್ದೂರಿನ ಶ್ರೀಯುತ ಚಿಕ್ಕೇಗೌಡ ಸದಸ್ಯರಾಗಿದ್ದರು. ಈ ಭಾಗದ ರೈತಾಪಿ ಜನರ ಸಮಸ್ಯೆಗಳನ್ನು ಸದನದಲ್ಲಿ ಚರ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು[27].

ಮೈಸೂರು ಸಂಸ್ಥಾನದಲ್ಲಿ ಕಾಂಗ್ರೆಸ್ ಸ್ಥಾಪನೆ – 1921

1920ರಲ್ಲಿ ವಿಜಯ ರಾಘವಾಚಾರ್ಯರ ಅಧ್ಯಕ್ಷತೆಯಲ್ಲಿ ನಡೆದ ನಾಗಪುರ ಕಾಂಗ್ರೆಸ್ ಅಧಿವೇಶನದಲ್ಲಿ 'ದೇಶಿಯ ಸಂಸ್ಥಾನಗಳಲ್ಲೂ ಕಾಂಗ್ರೆಸ್ ಸಮಿತಿಗಳನ್ನು ರಚಿಸಲು ಅನುಮತಿ ನೀಡಲಾಯಿತು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಶಾಖೆಯಾದ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಂಸ್ಥೆ (KPCC)ಯಲ್ಲಿ ಮೈಸೂರು ಸಂಸ್ಥಾನದ ಕಾಂಗ್ರೆಸ್ ಶಾಖೆಯಾದ "ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ (MPCC)ಯನ್ನು 1921ರಲ್ಲಿ ನಿವೃತ್ತ ನ್ಯಾಯಾಧೀಶರಾದ ಎಸ್.ಎಸ್.ಸೆಟ್ಲೂರ್ ಅವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು[28].

ಹಿರಿಯ ಚಿಂತಕರು, ಕೆಲವು ವೃತ್ತ ಪತ್ರಿಕೆಗಳ ಪ್ರೇರಣೆ ಮತ್ತು ಪ್ರಭಾವಗಳಿಂದಾಗಿ ಮೈಸೂರು ಸಂಸ್ಥಾನದಲ್ಲಿ ರಾಷ್ಟ್ರೀಯತೆಯ ಪರಿಕಲ್ಪನೆ, ರಾಜಕೀಯ ಪರಿಜ್ಞಾನ ಮತ್ತು ಸ್ವಾತಂತ್ರ್ಯದ ಪರಿಕಲ್ಪನೆಯು ಉಂಟಾಗಲು ಕಾರಣವಾಯಿತು. ಈ ಹಿನ್ನೆಲೆಯಲ್ಲಿ ಮೈಸೂರು ರಾಜ್ಯದಲ್ಲಿ ಉಂಟಾದ ಬಾರಿ ರಾಜಕೀಯ ಜಾಗೃತಿ, ರಾಜಕೀಯ ಪಕ್ಷಗಳ ಹುಟ್ಟು, ಚುನಾವಣಾ ಪದ್ಧತಿ ಹಾಗೂ ರಾಜಕೀಯ ಸಂಘಟನೆಯ ಪ್ರಯತ್ನಗಳನ್ನು ಕಾಣಬಹುದಾಗಿದೆ.

ಈ ಸಮಯದಲ್ಲಿ 1927ರಲ್ಲಿ ಮಹಾತ್ಮಗಾಂಧಿಯವರು ಮೈಸೂರು ಸಂಸ್ಥಾನಕ್ಕೆ ಭೇಟಿಕೊಟ್ಟಿರು. ಮೈಸೂರಿಗೆ ಭೇಟಿ ನೀಡುವ ಸಂದರ್ಭದಲ್ಲಿ ಮಂಡ್ಯ ಮಾರ್ಗದಲ್ಲಿ ಶ್ರೀರಂಗಪಟ್ಟಣಕ್ಕೆ ಭೇಟಿ ನೀಡಿದ್ದರು. ರಂಗನಾಥ ದೇವಾಲಯದ ಮುಂಭಾಗದಲ್ಲಿ ಭಾಷಣ ಮಾಡಿಗರು. ಅಂದಿನ ಗಾಂಧೀಜಿಯವರ ಭಾಷಣ ಆಲಿಸಲು ಸುತ್ತಮುತ್ತಲಿನ ಹಳ್ಳಿಗಳಿಂದ ರೈತರು, ಸಾಮಾನ್ಯ ಜನರು, ವಿದ್ಯಾರ್ಥಿಗಳು, ಮಹಿಳೆಯರು ಭಾಗವಹಿಸಿದ್ದರು. ತಮ್ಮ ಭಾಷಣದಲ್ಲಿ ಬ್ರಿಟಷರ ಆಡಳಿತ ವ್ಯವಸ್ಥೆಯ ದಬ್ಬಾಳಿಕೆ, ಸ್ವಾತಂತ್ರ್ಯದ ಮಹತ್ವವನ್ನು ವಿವರಿಸಿದ್ದರು. ಗಾಂಧೀಜಿಯವರ ಭಾಷಣ ಜನತೆಯ ಮೇಲೆ ತುಂಬಾ ಪರಿಣಾಮ ಬೀರಿತು. ಇದರಿಂದ ಹಳ್ಳಿ ಹಳ್ಳಿಗಳಲ್ಲಿ ಗಾಂಧೀಜಿಯ ವಿಚಾರಗಳು ತಲುಪಿದವು. ಸತ್ಯ, ಅಹಿಂಸೆಯ ತತ್ವ, ಖಾದಿ ಬಳಕೆ, ವಿದೇಶಿ ವಸ್ತುಗಳ ಬಹಿಷ್ಕಾರ ಬಗ್ಗೆ ಜನತೆಯ ಮೇಲೆ ಗಾಢವಾದ ಪ್ರಭಾವ ಬೀರಿತು[29].

ಅಲ್ಲದೇ 1927ರ ಆಗಸ್ಟ್ 4ರ ಗುರುವಾರ ಮಹಾತ್ಮ ಗಾಂಧೀಜಿಯವರು ಹಾಸನಕ್ಕೆ ಹೊಳೆ ನರಸೀಪುರ ಮಾರ್ಗವಾಗಿ ಪ್ರಯಣ ಹೊರಟಿದ್ದರು. ಕೃಷ್ಣರಾಜಪೇಟೆ ತಾಲ್ಲೂಕು ಅಕ್ಕಿ ಹೆಬ್ಬಾಳು ಗ್ರಾಮದ ಜನರು ಸ್ಟೇಷನ್ ಮಾಸ್ಟರ್‌ನಲ್ಲಿ ಮನವಿ ಮಾಡಿ ರೈಲುಗಾಡಿಯನ್ನು ಸಿಗ್ನಲ್ ನೆಪದಲ್ಲಿ ಒಂದರ್ಧ ಗಂಟೆ ನಿಲ್ಲಿಸುವಲ್ಲಿ ಯಶಸ್ವಿಯಾದರು. ಆ ಸಮಯಕ್ಕೆ ನೂರಾರು ಜನ ರೈಲು ನಿಲ್ದಾಣದಲ್ಲಿ ಜಮಾಯಿಸಿದ್ದರು. ಗಾಂಧೀಜಿಯನ್ನು ಕಂಡೊಡನೆ 'ಮಹಾತ್ಮ ಗಾಂಧೀ ಕಿ ಜೈ, ಭಾರತ ಮಾತಾಕಿ ಜೈ, ವಂದೇ ಮಾತರಂ' ಘೋಷಣೆಗಳನ್ನು ಕೂಗಿದರು. ಅಕ್ಕಿಹೆಬ್ಬಾಳು ಛೇರ್ಮನ್ ನರಸಿಂಹಮೂರ್ತಿ, ಎಸ್.ಆರ್.ಶರ್ಮ, ಮಹಾತ್ಮರಿಗೆ ನೂಲಿನ ಹಾರ ಹಾಕಿದರು. ಸ್ಕೌಟ್ ಬಾಲಕರು ಮಂಗಳ ಗೀತೆಯನ್ನು ಹಾಡಿದರು.

ಗಾಂಧೀಜಿಯವರು ಎಲ್ಲರಿಗೂ ದೇಶದ ಸ್ವಾತಂತ್ರ್ಯ ಚಳವಳಿಯಲ್ಲಿ ಪಾಲ್ಗೊಳ್ಳಬೇಕೆಂದು ಕರೆ ನೀಡಿದರು. ಅಕ್ಕಿಹೆಬ್ಬಾಳುನಲ್ಲಿ ಖಾದಿ ಸೊಸೈಟಿ ಮತ್ತು ವಿದ್ಯಾರಣ್ಯ ಚರಕಾಶ್ರಮ ಚೆನ್ನಾಗಿ ನಡೆಯುತ್ತಿರುವುದನ್ನು ಕೇಳಿ ಗಾಂಧೀಜಿಯವರು ಖುಷಿಪಟ್ಟರು. . ಅವರ ಜೊತೆಯಿದ್ದ ಕಾಂಗ್ರೆಸ್ ಮುಂದಾಳು ಗಂಗಾಧರರಾವ್

[illegible]

ದೇಶಪಾಂಡೆ ಖಾದಿ ನಿಧಿಗಾಗಿ ಜನರಿಂದ ಕಾಣಿಕೆ ಕೇಳಿದರು. ಎಸ್.ಆರ್.ಶರ್ಮ ಜನರ ಮುಂದೆ ಕೈ ಒಡ್ಡಿದಾಗ ಎಲ್ಲರೂ ತಮ್ಮ ಜೇಬಿನಲ್ಲಿದ್ದ ಹಣವನ್ನೆಲ್ಲ ನೀಡಿದರು. ಹೆಂಗಸರು ತಮ್ಮ ಕತ್ತಿನಲ್ಲಿದ್ದ ಚಿನ್ನದ ಕಾಸುಗಳನ್ನು, ಕಿವಿ ಓಲೆಗಳನ್ನು ಅರ್ಪಿಸಿದರು[30].

1931–32ರ ಮಂಡ್ಯದಲ್ಲಿ (ಮೈಸೂರು ಜಿಲ್ಲೆಯ ಒಂದು ಭಾಗ) ಜರುಗಿದ ಇರ್ವಿನ್ ನಾಲಾ ರೈತ ಚಳವಳಿಯು ಸರ್ಕಾರದ ನೀರಾವರಿ ಮತ್ತು ಕೃಷಿ ನೀತಿಯ ವಿರುದ್ಧವಾಗಿ ನಡೆದ ಪ್ರಮುಖ ಚಳವಳಿಯಾಗಿದೆ. ಈಗಿನ ವಿಶ್ವೇಶ್ವರಯ್ಯ ನಾಲೆಯನ್ನು 1927ರಲ್ಲಿ ಮೈಸೂರು ಸಂಸ್ಥಾನಕ್ಕೆ ಭೇಟಿ ನೀಡಿದ್ದ ಅಂದಿನ ವೈಸರಾಯ್ ಲಾರ್ಡ್ ಇರ್ವಿನ್ ನೆನಪಿಗಾಗಿ 'ಇರ್ವಿನ್ ನಾಲೆ' ಎಂದು ಹೆಸರಿಸಲಾಗಿತ್ತು. ನೀರಾವರಿಯಾಗುವ ಜಮೀನುಗಳಿಂದ ಸರ್ಕಾರಕ್ಕೆ ನೀಡಬೇಕಾದ ಕಂದಾಯ, ಬೆಳೆ ವಿಧಾನ, ನೀರಿನದರ, ಕಾಂಟ್ರಿಬ್ಯೂಷನ್ ಹಾಗೂ ಸರ್ಕಾರ ಹೊರಡಿಸಿದ ಆಜ್ಞೆಯು ರೈತರಿಗೆ ಮಾರಕವಾಗಿತ್ತು. ಇದರ ವಿರುದ್ಧ ಎಚ್.ಕೆ. ವೀರಣ್ಣಗೌಡರರ ನೇತೃತ್ವದಲ್ಲಿ ಇರ್ವಿನ್ ನಾಲಾ ರೈತ ಸಂಘವನ್ನು ಅಸ್ತಿತ್ವಕ್ಕೆ ತರಲಾಯಿತು. ಹೆಚ್.ಕೆ. ವೀರಣ್ಣಗೌಡ ಹಾಗೂ ಇಂಡುವಾಳು ಎಚ್.ಹೊನ್ನಯ್ಯ ನೇತೃತ್ವದಲ್ಲಿ ಸುಮಾರು 4000 ರೈತರೊಂದಿಗೆ ಡಿಸೆಂಬರ್ 31, 1931 ರಂದು ಮದ್ದೂರಿನಿಂದ ಪಾದಯಾತ್ರೆಯನ್ನು ಆರಂಭಿಸಿದರು. ಜನವರಿ 4, 1932 ರಂದು ಬೆಂಗಳೂರು ಅಠಾರ ಕಛೇರಿ ತಲುಪಿದರು. ಅಂದಿನ ದಿವಾನರಾದ ಮಿರ್ಜಾ ಇಸ್ಮಾಯಿಲ್‌ರವರಿಗೆ ರೈತರ ಸಮಸ್ಯೆಗಳನ್ನು ವಿವರಿಸಿ ಮನವಿ ಸಲ್ಲಿಸಿದರು. ಈ ಚಳವಳಿಯು. ಮಂಡ್ಯ ಜಿಲ್ಲೆಯ ರೈತರಲ್ಲಿ ಮುಂದಾಳತ್ವ ಗುಣ, ಸಂಘಟನೆ, ಸರ್ಕಾರ ವಿರೋಧ ನೀತಿಯನ್ನು ಪ್ರತಿಭಟಿಸಿದರ ಬಗ್ಗೆ ತಿಳಿಸುತ್ತದೆ[31]. ಈ ಮೂಲಕ ಮಂಡ್ಯ, ಶ್ರೀರಂಗಪಟ್ಟಣ, ಮದ್ದೂರು, ಮಳವಳ್ಳಿ, ಭಾಗದ ಜನರು ಭಾಗವಹಿಸಿದ್ದನ್ನು ದೃಢೀಕರಿಸುತ್ತದೆ ಹಾಗೂ ಈ ಚಳವಳಿಯಲ್ಲಿ ಯಶಸ್ಸು ಕಂಡಿದ್ದನ್ನು ಕಾಣಬಹುದು.

ಇರ್ವಿನ್ ನಾಲಾ ಚಳವಳಿಯ ನಂತರ 1932ರಿಂದ 1945ರ ಅವಧಿಯಲ್ಲಿ ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ಮಂಡ್ಯ ಪ್ರದೇಶದಿಂದ ಪ್ರಮುಖ ನಾಯಕರು ಪ್ರತಿನಿಧಿಸಿದರು. ಇವರುಗಳ ನಿರಂತರವಾಗಿ ಪ್ರಜಾಪ್ರತಿನಿಧಿ ಸಭೆಯಲ್ಲಿ ಈ ಭಾಗದ ಜನರ ಸಮಸ್ಯೆಗಳ ಬಗ್ಗೆ ಸಭೆಯ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿದ್ದರು[32].

ಮಂಡ್ಯ ಜಿಲ್ಲೆಯಲ್ಲಿ ಗಾಂಧೀಜಿ ನಾಯಕತ್ವದ ಚಳುವಳಿಯ ಪ್ರಭಾವ

1934ರಲ್ಲಿ ಮಹಾತ್ಮ ಗಾಂಧೀಜಿಯವರು ಹರಿಜನನಿಧಿ ಸಂಗ್ರಹಕ್ಕಾಗಿ ದೇಶದಾದ್ಯಂತ ಪ್ರವಾಸ ಕೈಗೊಂಡರು. ಈ ಸಂದರ್ಭದಲ್ಲಿ 1934ರಲ್ಲಿ ಮೈಸೂರು ಸಂಸ್ಥಾನಕ್ಕೆ ಭೇಟಿ ನೀಡಿದ್ದರು. ಮೈಸೂರು ಸಂಸ್ಥಾನದಲ್ಲಿ ಗೌರಿಬಿದನೂರು, ದೊಡ್ಡಬಳ್ಳಾಪುರ, ತುಮಕೂರು, ನೆಲಮಂಗಲದ ಮಾರ್ಗವಾಗಿ ಬೆಂಗಳೂರಿಗೆ ಬಂದು

ಅಲ್ಲಿಂದ ಮೈಸೂರಿಗೆ ಪ್ರಯಾಣ ಬೆಳಸಿದ್ದರು. ನಂತರ ತಗಡೂರು, ಬದನವಾಳು, ನಂಜನಗೂಡು, ಮಂಡ್ಯ, ಮದ್ದೂರುಗಳಲ್ಲಿ ನಿಧಿಯನ್ನು ಸ್ವೀಕರಿಸಿ ಕಾನಕಾನಹಳ್ಳಿ, ಚನ್ನಪಟ್ಟಣ, ಕೆಂಗೇರಿ, ಮೂಲಕ ಬೆಂಗಳೂರಿಗೆ ತಲುಪಿದರು. ಮೈಸೂರಿನಿಂದ ಬೆಂಗಳೂರಿಗೆ ಹೋಗುವ ಮಾರ್ಗದಲ್ಲಿ 1934ರ ಫೆಬ್ರವರಿ 6 ರಂದು ಮಂಡ್ಯದ ಜೂಬ್ಲಿ ಪಾರ್ಕ್‌ಗೆ ಭೇಟಿ ನೀಡಿದಾಗ ಮಂಡ್ಯದ ಜನರು ಅಪಾರ ಸಂಖ್ಯೆಯಲ್ಲಿ ಸೇರಿದ್ದರು. ಅಂಗಿನ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹಿರಿಯ ವಕೀಲ ಎಂ.ಮಹಾಬಲರಾವ್ ಹಾಗೂ ಪಶುಪತಿರಾವ್ ಮುಂದಾಳತ್ವದಲ್ಲಿ ನೂರಾರು ಜನರು ಮಹಾತ್ಮ ಗಾಂಧೀಜಿಯವರನ್ನು ಸ್ವಾಗತಿಸಿದ್ದರು. ಜನರು ತನು-ಮನ-ಧನದಿಂದ ಕಾಣಿಕೆಗಳನ್ನು ಹರಿಜನ ನಿಧಿಗೆ ಅರ್ಪಿಸಿದರು. ಹಾಗೂ ಭಿನ್ನವತ್ತಳೆಯನ್ನು ನೀಡಿದರು. ಅಲ್ಲಿಯೇ ಇದ್ದ ಹರಿಜನ ಮನೆಗಳಿಗೆ ಭೇಟಿ ನೀಡಿದರು. ಹರಿಜನರ ದಯನೀಯ ಸ್ಥಿತಿಯನ್ನು ಕಂಡು ನೀವೆಲ್ಲರೂ ಶುದ್ಧವಾಗಿರಬೇಕು, ದೇವರ ದೃಷ್ಟಿಯಲ್ಲಿ ಎಲ್ಲರೂ ಸಮಾನರೇ ಎಂದು ಸಮಾಧಾನ ಹೇಳಿದರು. ಕಾಂಗ್ರೆಸ್ ನಾಯಕರಿಗೆ ಈ ಜನರಿಗೆ ಉತ್ತಮ ಬಡಾವಣೆಯನ್ನು ನಿರ್ಮಿಸಿಕೊಡಿ ಎಂದು ಹೇಳಿದರು. ದೇಶದ ಸ್ವಾತಂತ್ರ್ಯ ಚಳವಳಿಗೆ ಎಲ್ಲರೂ ಕೈಜೋಡಿಸಬೇಕೆಂದು ಮತ್ತು ಕಾಣಿಕೆ ನೀಡಬೇಕೆಂದು ಕೇಳಿದಾಗ ಎಲ್ಲರೂ ಸಂತೋಷದಿಂದ ನೂರಾರು ರೂಪಾಯಿ ಕಾಣಿಕೆ ಹಾಗೂ ಸಾಕಷ್ಟು ಒಡವೆಗಳನ್ನು ನೀಡಿದರು[33]. ನಂತರ ಮದ್ದೂರು, ಶಿವಪುರ, ಸೋಮನಹಳ್ಳಿಗೆ ಭೇಟಿ ನೀಡಿದರು. ಅಂದಿನ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾದ ಎಸ್.ಸಿ.ಮಲ್ಲಯ್ಯನವರ ಕೋರಿಕೆಯ ಮೇರೆಗೆ ಸೋಮನಹಳ್ಳಿಯ ವಿದ್ಯಾರ್ಥಿ ನಿಲಯಕ್ಕೆ ಭೇಟಿ ನೀಡಿದರು. ಅಲ್ಲಿ ಮಹಾತ್ಮರು ತಮ್ಮ ಭಾಷಣದಲ್ಲಿ ಹೇಳಿದ ಒಂದು ವಾಕ್ಯ ಈ ರೀತಿಯಾಗಿದೆ. "I am Very glad to know that there are two Harijan boys also in this Hostel" ಈ ವಿದ್ಯಾರ್ಥಿ ನಿಲಯದಲ್ಲಿ ಇಬ್ಬರು ಹರಿಜನ ವಿದ್ಯಾರ್ಥಿಗಳು ಇರುವುದನ್ನು ತಿಳಿದು ಬಹಳ ಸಂತೋಷವಾಗಿದೆ. ಮಹಾತ್ಮ ಗಾಂಧೀಜಿಯವರ ಭೇಟಿ ನೀಡಿದ ನಂತರ ಇಲ್ಲಿನ ಜನ ಸಾಮಾನ್ಯರಲ್ಲಿ ರಾಷ್ಟ್ರಮಟ್ಟದಲ್ಲಿ ಸ್ವಾತಂತ್ರ್ಯ ಚಳವಳಿಯ ಬಗ್ಗೆ ಪ್ರಭಾವ ಬೀರಿತು[34]. ಈ ಸಂದರ್ಭದಲ್ಲಿ ಹರಿಜನರ ನಿಧಿಗಾಗಿ ಎಸ್.ಮಲ್ಲಯ್ಯನವರ ಅಳಿಯ ವಿ.ಬಿ.ತಮ್ಮಯ್ಯನವರು ತಮ್ಮ ಕಿವಿಯ ಹತ್ತ ಕಡಕುಗಳನ್ನೇ ಬಿಚ್ಚಿ ನಿಧಿಗೆ ಅರ್ಪಿಸಿದರು[35].

ಮಹಾತ್ಮ ಗಾಂಧೀಜಿಯವರ 1934ರಲ್ಲಿ ಸೋಮನಹಳ್ಳಿಗೆ ಬಂದಿದ್ದಾಗ ಅವರಿಂದ ಪ್ರಭಾವಿತರಾದವರಲ್ಲಿ ಜಿ.ವೆಂಕಟಯ್ಯನವರೊಬ್ಬರು. ಅವರು ಕನ್ನಡದ ಮೊದಲ ತಲೆಮಾರಿನ ದಲಿತ-ಲೇಖಕರಾಗಿದ್ದರು ಹಾಗೂ ಮದ್ದೂರು ತಾಲ್ಲೂಕಿನ ಹೆಮ್ಮನಹಳ್ಳಿಯ ಗ್ರಾಮಕ್ಕೆ ಸೇರಿದವರು. ಗಾಂಧೀಜಿಯವರನ್ನು ಭೇಟಿಯಾಗಿದ್ದ ಇವರು 'ನೊಂದ ಜೀವ' ಕಾದಂಬರಿಯಲ್ಲಿ ಗಾಂಧೀಜಿಯವರು ದೀನದಲಿತರ ಬಗ್ಗೆ ಮಾಡಿದ

ಭಾಷಣದ ಪ್ರಸ್ತಾಪವಿದೆ. ಅವರಿಂದ ಪ್ರಭಾವಿತರಾಗಿ ಬಿಳುಜುಬ್ಬ, ತುಂಡು ಪಂಚೆಯನ್ನು ಧರಿಸುವುದರ ಮೂಲಕ ಸ್ವದೇಶಿ ಸಂಸ್ಕೃತಿಯ ಸಂಕೇತವಾಗಿದ್ದರು ಹಾಗೂ ಸ್ವಾತಂತ್ರ್ಯ ಚಳುವಳಿಯ ಬಗ್ಗೆ ಒಲವನ್ನು ಹೊಂದಿದ್ದರು.[36ಎ]

ದಿನಾಂಕ 15–06–1936ರಂದು ಭಾರತದ ಉಕ್ಕಿನ ಮನುಷ್ಯ ಎಂದೇ ಖ್ಯಾತರಾದ ಸರ್ದಾರ್ ವಲ್ಲಭಾಯಿ ಪಟೇಲರು, ಗಾಂಧೀಜಿಯವರ ಆಪ್ತ ಅನುಯಾಯಿಯಾದ ಮಹಾದೇವ ದೇಸಾಯಿ ಮತ್ತು ಮಣಿಬೆನ್ ಪಟೇಲರು ಸಕ್ಕರೆ ಕಾರ್ಖಾನೆಯನ್ನು ಸಂದರ್ಶಿಸಬೇಕೆಂಬ ಉದ್ದೇಶದಿಂದ ಮಂಡ್ಯಕ್ಕೆ ಭೇಟಿ ನೀಡಿದ್ದರು. ಆ ಸಂದರ್ಭದಲ್ಲಿ ಪುರಭವನಕ್ಕೆ ಭೇಟಿ ನೀಡಿದಾಗ ಬಿ.ಎಸ್.ರಾಘವೇಂದ್ರರಾವ್, ಸಿ.ಲಕ್ಷ್ಮಣರಾವ್, ಬಿ.ವಿ.ಕೃಷ್ಣರವರು ಇನ್ನು ಅನೇಕ ಪ್ರಮುಖರು ರಾಷ್ಟ್ರೀಯ ಮಟ್ಟದ ನಾಯಕರನ್ನು ಭೇಟಿಮಾಡಿದರು. ಈ ಭೇಟಿಯಿಂದ ಮಂಡ್ಯ ಜನರಲ್ಲಿ ಸ್ವಾತಂತ್ರ್ಯ ಚಳವಳಿ ಹಾಗೂ ರಾಷ್ಟ್ರ ಮಟ್ಟದ ರಾಜಕೀಯ ವಿದ್ಯಮಾನ ಜಾಗೃತಿ ಮೂಡಿಸಲು ಸಹಾಯಕವಾಯಿತು[36].

ಮೈಸೂರು ಸಂಸ್ಥಾನದಲ್ಲಿ ಅಂದು ಪ್ರಮುಖವಾಗಿ ಎರಡು ರಾಜಕೀಯ ಪಕ್ಷಗಳು ಕಾರ್ಯ ನಿರ್ವಹಿಸುತ್ತಿದ್ದವು. ಒಂದು ಕಾಂಗ್ರೆಸ್ ಇನ್ನೊಂದು ಪ್ರಜಾಸಂಯುಕ್ತ ಪಕ್ಷ. ಕಾಂಗ್ರೆಸ್‌ನಲ್ಲಿ ಕೆ.ಟಿ. ಭಾಷ್ಯಂ, ತಗಡೂರು ರಾಮಚಂದ್ರರಾವ್, ಹೆಚ್.ಕೆ.ವೀರಣ್ಣಗೌಡ, ವೀರಕೇಸರಿ ಸೀತರಾಮಶಾಸ್ತ್ರಿ, ಎಸ್.ಎಸ್.ಸೆಟ್ಲೂರ್, ಎಸ್.ನಿಜಲಿಂಗಪ್ಪ, ಹೊಸಕೊಪ್ಪಕೃಷ್ಣರಾವ್, ಎಂ.ಎನ್.ಜೋಯಿಸ್, ಮೊದಲಾದ ಮುಖಂಡರಿದ್ದರು, ಪ್ರಜಾಸಂಯುಕ್ತ ಪಕ್ಷದಲ್ಲಿ ಕೆ.ಸಿ.ರೆಡ್ಡಿ, ಹೆಚ್.ಸಿ.ದಾಸಪ್ಪ, ಡಿ.ಎಸ್.ಮಲ್ಲಪ್ಪ, ಡಿ.ಎಚ್.ಚಂದ್ರಶೇಖರಯ್ಯ, ವಿ.ವೆಂಕಟಪ್ಪ, ಎಂ.ಸಿ.ಲಿಂಗೇಗೌಡ ಮೊದಲಾದವರಿದ್ದರು.

1937ರ ಜನವರಿ ತಿಂಗಳಲ್ಲಿ ಪ್ರಜಾ ಸಂಯುಕ್ತ ಪಕ್ಷದ ಅಧಿವೇಶನದಲ್ಲಿ ನಿರ್ಣಯ ಮಂಡಿಸುತ್ತಾ ಕೆ.ಸಿ.ರೆಡ್ಡಿ ಹೀಗೆ ಹೇಳಿದರು: ಭಾರತವು ಏಕ ಮತ್ತು ಅಖಂಡ ಹಾಗೂ ಈ ಒಕ್ಕೂಟದ ತತ್ವ ಸಾರ್ವತ್ರಿಕವಾಗಿ ಅಂಗೀಕಾರವಾಗಿರುವುದರಿಂದ ಬ್ರಿಟಿಷ್ ಇಂಡಿಯಾ ಮತ್ತು ಭಾರತೀಯ ರಾಜ್ಯಗಳು ಒಂದು ಅಖಿಲ ಭಾರತ ಸಂಘಟನೆಯ ಮೂಲಕ ಒಟ್ಟಾಗಿ ಕಾರ್ಯನಿರ್ವಹಿಸುವುದು ಅಗತ್ಯ. ಭಾರತದ ರಾಷ್ಟ್ರೀಯ ಕಾಂಗ್ರೆಸ್ ಒಂದು ಸಂಘಟನೆಯಾಗಿದ್ದು, ಅದರ ಕಾರ್ಯಕ್ರಮವೂ ಕೂಡಾ ಮೈಸೂರಿನ ಪ್ರಜಾಸಂಯುಕ್ತ ಪಕ್ಷವನ್ನು ಒಂದು ಪ್ರತ್ಯೇಕ ಸಂಘಟನೆಯಾಗಿ ಒಪ್ಪಿಕೊಳ್ಳುವುದು ಅಪೇಕ್ಷಣಿಯವಲ್ಲ. ರಾಜ್ಯದಲ್ಲಿ ಕಾಂಗ್ರೆಸ್ಸನ್ನು ಬಲಪಡಿಸುವ ಬಗ್ಗೆ ಹಿಂದಿನ ಸಮಿತಿಯು ನಿರ್ಧರಿಸಲು ಕೈಗೊಂಡ ಕ್ರಮವನ್ನು ಈ ಸಮಾವೇಶ ಸ್ವಿಕರೀಸುತ್ತದೆ ಮತ್ತು ಮೈಸೂರು

ಪ್ರಜಾಸಂಯುಕ್ತ ಪಕ್ಷವು ಕಾಂಗ್ರೆಸ್ಸಿನೊಂದಿಗೆ ವಿಲೀನಗೊಳ್ಳುವುದೆಂದು ನಿರ್ಣಯಿಸುತ್ತದೆ ಎಂದು ಹೇಳಿದರು. ಈ ನಿರ್ಣಯಕ್ಕೆ ಒಪ್ಪಿಗೆ ದೊರೆಯಿತು. ಈ ಮೂಲಕ ಮೈಸೂರು ಸಂಸ್ಥಾನದ ಎರಡು ಪ್ರಮುಖ ಪಕ್ಷಗಳು ಒಂದುಗೂಡುವಲ್ಲಿ ಮದ್ದೂರಿನ ಎಚ್.ಕೆ. ವೀರಣ್ಣಗೌಡ ಮತ್ತು ಕೆ.ಸಿ.ರೆಡ್ಡಿರವರ ಪ್ರಯತ್ನ ಪ್ರಮುಖವಾದುದು ಮೈಸೂರಿನ ರಾಜಕೀಯ ಇತಿಹಾಸದಲ್ಲಿ ಇದೊಂದು ಮಹತ್ವದ ಘಟನೆಯಾಗಿದೆ[37].

1937ರಲ್ಲಿ ಜವಹರಲಾಲ್ ನೆಹರು ಅವರು ಮೈಸೂರಿಗೆ ನೀಡಿದ ಭೇಟಿಯೂ ವಿಶೇಷವಾದುದು. 31.05.1937ರಂದು ಮೈಸೂರಿನಲ್ಲಿ ಭಾಷಣ ಮಾಡುತ್ತಾ ಹೀಗೆ ಹೇಳಿದರು. ಮೈಸೂರಿನವರೆ ಜವಾಬ್ದಾರಿ ಸರ್ಕಾರ ಸ್ಥಾಪನೆಗೆ ನೀವು ಎಳ್ಳಷ್ಟೆ ಪ್ರಯತ್ನ ಮಾಡಿಲ್ಲ. ನೀವು ಪ್ರಯತ್ನ ಪಡದಿದ್ದರೆ ಹೊರಗಿನವರು ನಿಮ್ಮ ಸಹಾಯಕ್ಕೆ ಬರುವರೆ? ಎಂದರು. ಈ ಮಾತುಗಳು ಇಲ್ಲಿನ ಜನತೆಯ ಮೇಲೆ ಅಪಾರ ಪ್ರಭಾವ ಬೀರಿತು. ಈ ಸಭೆಯಲ್ಲಿ ಭಾಗವಹಿಸಿದ್ದ ಜಿಲ್ಲೆಯ ನಾಯಕರುಗಳಿಂದ ಮಂಡ್ಯ, ಶ್ರೀರಂಗಪಟ್ಟಣ ಜನತೆಯ ಮೇಲೆ ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ ನಡೆಯುವ ಹೋರಾಟಕ್ಕೆ ಪ್ರೇರಣೆಯಾಯಿತು[38].

ಸ್ವಾತಂತ್ರ್ಯ ಚಳವಳಿ ಹಾಗೂ ಜವಾಬ್ದಾರಿ ಸರ್ಕಾರದ ಸ್ಥಾಪನೆಗಾಗಿ ರಚನೆಗೊಂಡ ಕ್ರಿಯಾಸಮಿತಿ ಯೊಂದಿಗೆ ಇತರೆ ಕಾಂಗ್ರೆಸ್ ಮುಖಂಡರು ಪ್ರಚಾರ ಕಾರ್ಯ ಕೈಗೊಂಡರು. ಕೆ.ಸಿ.ರೆಡ್ಡಿ ಕೆಂಗಲ್ ಹನುಮಂತಯ್ಯ, ಎಸ್.ನಿಜಲಿಂಗಪ್ಪ, ಸಾಹುಕಾರ್ ಚೆನ್ನಯ್ಯ, ಕೆ.ಟಿ.ಭಾಷ್ಯಂ, ಸಂಪಿಗೆ ವೆಂಕಟಪ್ಪಯ್ಯ, ವಿ.ಎಸ್.ನಾರಾಯಣರಾವ್, ಹೆಚ್.ಎಂ.ಚೆನ್ನಬಸಪ್ಪ, ಎ.ಜಿ.ರಾಮಚಂದ್ರರಾವ್, ಮಾಲಿಮರಿಯಪ್ಪ, ಎನ್.ಸಿ ತಿಮ್ಮರೆಡ್ಡಿ, ಬಿ.ಎನ್‌ಗುಪ್ತ, ಭೂಪಾಳಂ ಸಹೋದರರು ಮತ್ತು ಮಹಿಳಾ ಹೋರಾಟಗಾರರ ಪೈಕಿ ಚಿಕ್ಕಮಗಳೂರಿನ ಬಿ.ಎಲ್.ಸುಬ್ಬಮ್ಮ, ಸಾವಿತ್ರಮ್ಮ, ಬಳ್ಳಾರಿ ಸಿದ್ದಮ್ಮ, ಯಶೋಧಮ್ಮ ದಾಸಪ್ಪ, ಟಿ.ಸುನಂದಮ್ಮ ಈ ಚಳುವಳಿಯಲ್ಲಿ ಹಾಗೂ ಪ್ರಚಾರ ಕಾರ್ಯದಲ್ಲಿ ಮಂಡ್ಯ ಜಿಲ್ಲೆಗೆ ಸೇರಿದ ಪ್ರಮುಖ ಮುಖಂಡರಗಳೆಂದರೆ ಎಚ್.ಕೆ.ವೀರಣ್ಣಗೌಡ, ಎ.ಜಿ.ಬಂದೀಗೌಡ, ಕೆ.ಸುಬ್ಬರಾವ್, ಎನ್.ಡಿ.ಶಂಕರ, ಟಿ.ಮರಿಯಪ್ಪ, ಮಳವಳ್ಳಿವೀರಪ್ಪ, ಮಹಾಬಲರಾವ್, ಎಂ.ಆರ್.ಎನ್.ಶಾಸ್ತ್ರಿ, ಹೆಚ್.ಹೊನ್ನಯ್ಯನವರು.

16ನೇ ಅಕ್ಟೋಬರ್ 1937ರಂದು ಪ್ರಜಾಪ್ರತಿನಿಧಿ ಸಭೆಯಲ್ಲಿ ಎಚ್.ಕೆ.ವೀರಣ್ಣಗೌಡ ಎದ್ದು ನಿಂತು ದಿವಾನರ ದುರಾಡಳಿತ ನೀತಿಯ ಪ್ರತಿಭಟಿಸುವುದಕ್ಕಾಗಿ ಕಾಂಗ್ರೆಸ್ ಪಕ್ಷದವರಾದ ನಾವು ಹೊರಗಡೆ ಹೋಗುತ್ತೇವೆ ಎಂದು ಘೋಷಣೆಗಳೊಂದಿಗೆ ಹೊರ ಬಂದರು. ಈ ರೀತಿಯಾಗಿ ಪ್ರಜಾಪ್ರತಿನಿಧಿ ಸಭೆಗಳಲ್ಲಿ

ದಿವಾನರ ನೀತಿಯನ್ನು ವಿರೋಧಿಸುವ ಮೂಲಕ ಸ್ವಾತಂತ್ರ್ಯಕ್ಕಾಗಿ ಹಾಗೂ ಜವಾಬ್ದಾರಿ ಸರ್ಕಾರ ಸ್ಥಾಪನೆಗೆ ಚಳವಳಿ ಆರಂಭವಾಯಿತು[39].

ಮಂಡ್ಯ ಜಿಲ್ಲೆಯಲ್ಲಿ ಕಾಂಗ್ರೆಸ್ ಚಟುವಟಿಕೆಗಳ ಮೂಲಕ ಚಳುವಳಿಯ ಬೆಳವಣಿಗೆ

1937ರ ಆಗಸ್ಟ್ ತಿಂಗಳಿನಿಂದ ಫೆಬ್ರವರಿ 1938ರ ವರೆಗೆ ಮಂಡ್ಯ ಜಿಲ್ಲೆಯ ಪ್ರಮುಖ ತಾಲೂಕುಗಳಲ್ಲಿ, ಗ್ರಾಮಗಳಲ್ಲಿ ಕಾಂಗ್ರೆಸ್ ಸಭೆಗಳ ನಡೆದವು, ಅದರ ವಿವರ ಈ ಕೆಳಕಂಡಂತಿವೆ. ಕಾಂಗ್ರೆಸ್ ಪಕ್ಷದ ಪ್ರಚಾರ, ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ ಜಾಗೃತಿ ಮೂಡಿಸಲು ದಿನಾಂಕ: 20ನೇ ಆಗಸ್ಟ್ 1937ರಂದು ನಾಗಮಂಗಲ ತಾಲ್ಲೂಕಿನ ಮಸಪೀರಖಾನೆ (ತಂಗುದಾಣ)ದಲ್ಲಿ ಸದಾಶಿವರಾವ್‌ರವರ ಅಧ್ಯಕ್ಷತೆಯಲ್ಲಿ ಸುಮಾರು 600 ಜನರೊಂದಿಗೆ ಸಾರ್ವಜನಿಕ ಸಭೆಯು ನಡೆಯಿತು. ಸಭೆಯಲ್ಲಿ ಟಿ.ಮರಿಯಪ್ಪನವ ದಿವಾನರ ಭಾಷಣವನ್ನು ಸರಿಯಾಗಿ ಅರ್ಥೈಸಿಕೊಳ್ಳದೇ ತಪ್ಪಾಗಿ ಅರ್ಥೈಸಿ ಲೇಖನ ಪ್ರಕಟಣೆ ಮಾಡಿದ್ದನ್ನು ಶಂಕರಲಿಂಗೇಗೌಡ ಸವಾಲುಎಸೆದು ಟೀಕಿಸಿದರು. ದಿವಾನ ಹೇಗೆ ಸ್ಥಳೀಯ ಸಂಸ್ಥೆಯ ಅಂಗರಚನೆಯನ್ನು ಮಾಡುತ್ತಾರೆಂದು ಅಪಹಾಸ್ಯ ಮಾಡಿದರು. ಕೇವಲ ಪತ್ರಿಕೆಗಳನ್ನು ಪ್ರೋತ್ಸಾಹಿಸಿ. ಸ್ಥಳೀಯ ಸಂಸ್ಥೆ ಹಾಗೂ ಜನಗಳಿಗೆ ದಿವಾನರ ಹಾಗೂ ಕೌನ್ಸಿಲ್ ಸದಸ್ಯರ ಬಗ್ಗೆ ಆತೃಪ್ತರಾಗಿದ್ದಾರೆ. ಸಾಮಾನ್ಯ ಜನಗಳಿಗೆ ಸಹಾಯ ಮಾಡದಿರುವುದನ್ನು ಟೀಕಿಸಿದರು.

ಎನ್.ಟಿ.ಲಕ್ಷ್ಮಣಗೌಡರು ಶಂಕರಲಿಂಗೇಗೌಡರ ಭಾಷಣಕ್ಕೆ ಬೆಂಬಲ ಸೂಚಿಸುತ್ತಾ ಮರಿಯಪ್ಪನವರ ಈ ನೆಪದಲ್ಲಿ ಒಬ್ಬನಾಯಕರ ವೇಷದಲ್ಲಿ ಜನರನ್ನು ಸರಕಾರ ವಿರುದ್ಧ ವಿಭಜಿಸಿದ್ದಾರೆ ಎಂದರು. ಸಭೆಯಲ್ಲಿ ಐ.ಎನ್.ಶಂಕರಯ್ಯ, ನರಸಿಂಹಚಾರಿ, ಗಂಗಪ್ಪ, ಎಂ.ಎನ್.ಲಿಂಗೇಗೌಡ, ರಸೂಲ್, ಬೋರೇಗೌಡ, ವೀರಭದ್ರಚಾರಿ ಮಾತನಾಡುತ್ತಾ ಶಂಕರಲಿಂಗೇಗೌಡರ ಅಭಿಪ್ರಾಯವನ್ನು ಬೆಂಬಲಿಸಿದರು. ಮರಿಯಪ್ಪನವರ ಪ್ರಭಾವಕ್ಕೆ ಒಳಗಾಗದರಿಂದರು[40].

ದಿನಾಂಕ 6ನೇ ನವೆಂಬರ್ 1937ರಂದು ಸ್ಥಳೀಯ ಕಾಂಗ್ರೆಸ್ ಸಭೆಯು ಶ್ರೀರಂಗಪಟ್ಟಣದಲ್ಲಿ ನಡೆಯಿತು. ಸಭೆಯಲ್ಲಿ ಟಿ.ಎಸ್.ರಾಜಗೋಪಾಲ ಅಯ್ಯಂಗಾರ್, ಟಿ.ಮರಿಯಪ್ಪ, ಹೆಚ್.ಸಿ. ದಾಸಪ್ಪ, ರಂಗರಾಮಯ್ಯ, ಎ.ಜಿ.ಬಂದೀಗೌಡ, ಸಭೆಯಲ್ಲಿ ಹಾಜರಿದ್ದರು. ಕ್ಯಾತನಹಳ್ಳಿಯ ಶಿವನಂಜೇಗೌಡರು ಉಪನ್ಯಾಸ ನೀಡಿದರು. ಮೈಸೂರು ಸಂಸ್ಥಾನದಲ್ಲಿ ಚಳವಳಿ ಮಾಡಿದರೆ ನಾಯಕರನ್ನು, ಜನರನ್ನು ಜೈಲಿನಲ್ಲಿಡಲಾಗುತ್ತದೆ. ಜನರು ಭಯದಿಂದಿರದೇ ಧೈರ್ಯದಿಂದ ಕಾಂಗ್ರೆಸ್ ಸೇರಲು ಮನವಿ ಮಾಡಿದರು

ಹಾಗೂ ಜೈಲಿನಲ್ಲಿರುವ ನಾಯಕರನ್ನು ಬಿಡುಗಡೆ ಮಾಡಲು ಬೆಂಬಲ ಸೂಚಿಸಬೇಕೆಂದರು[41].

ಅದೇ ದಿನದಂದು ನಾಗಮಂಗಲದಲ್ಲಿ ಸ್ಥಳೀಯ ಕಾಂಗ್ರೆಸ್ ಸಮಿತಿಯ ಸಭೆಯು ನಡೆಯಿತು. ಸ್ಥಳೀಯ ಕಾಂಗ್ರೆಸ್ ಅಧ್ಯಕ್ಷರಾದ ಡಾ.ಸದಾಶಿವರವರ ಅಧ್ಯಕ್ಷತೆಯನ್ನು ವಹಿಸಿದ್ದರು. ವಂದೇ ಮಾತರಂ ಗೀತೆಯೊಂದಿಗೆ ಸಭೆಯು ಆರಂಭವಾಯಿತು. ಸ್ಥಳೀಯ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳಾದ ಎಂ.ಆರ್.ಎನ್.ಶಾಸ್ತ್ರಿರವರ ಸಭೆಯ ಭಾಷಣದಲ್ಲಿ ಕಳೆದ 17 ವರ್ಷಗಳಿಂದ ಕಾಂಗ್ರೆಸ್ ಪಕ್ಷವು ಜವಾಬ್ದಾರಿ ಸರಕಾರ ಸ್ಥಾಪಿಸಲು ಹೋರಾಟ ನಡೆಸುತ್ತದೆ. ಆದರೆ ಸರಕಾರ ಹೋರಾಟಗಾರರನ್ನು ಪ್ರತಿಬಂಧಾಕಾಜ್ಞೆ, ಬಂಧಿಸು, ಇಲ್ಲವೇ ಗಡೀಪಾರು ಮಾಡುವ ಮೂಲಕ ಚಳವಳಿಯನ್ನು ದಮನ ಮಾಡುತ್ತದೆ[42]. ದಿನಾಂಕ 7ನೇ ನವೆಂಬರ್ 1937ರಂದು ನಾಗಮಂಗಲದ ಕನ್ನಿಕಾ ಪರಮೇಶ್ವರಿ ದೇವಾಲಯದಲ್ಲಿ ಸ್ಥಳೀಯ ಕಾಂಗ್ರೆಸ್ ಸಮಿತಿಯು ಸಭೆಯನ್ನು ನಡೆಸಿತು. ಕಾಂಗ್ರೆಸ್ ಸೇರುವಂತೆ ಬೆಂಬಲಿಸುವಂತೆ ಕೋರಲಾಯಿತು[43]. 12ನೇ ನವೆಂಬರ್ 1937ರಂದು ಟಿ.ಮರಿಯಪ್ಪ ಎ.ಜೆ ಬಂದೀಗೌಡ, ಕೃಷ್ಣಪ್ಪಗೌಡರವರ ನಾಗೇನಹಳ್ಳಿ ಭೇಟಿ ನೀಡಿ ಜನಗಳಲ್ಲಿ ಕಾಂಗ್ರೆಸ್ ಸೇರಿಸುವಂತೆ ಮನವಿ ಮಾಡಿದರು. 14ನೇ ನವೆಂಬರ್ 1937ರಂದು ಹೆಚ್.ಸಿ.ದಾಸಪ್ಪ, ಎಸ್.ರಂಗರಾಮಯ್ಯ, ಟಿ.ಮರಿಯಪ್ಪನವರ ಶ್ರೀರಂಗಪಟ್ಟಣ ತಾಲ್ಲೂಕಿನ ಕ್ಯಾತನಹಳ್ಳಿಗೆ ಭೇಟಿನೀಡಿ ಕಾಂಗ್ರೆಸ್ ಸೇರುವಂತೆ ಪ್ರಚಾರ ಕಾರ್ಯಮಾಡಿದರು[44]. ತಗಡೂರು ರಾಮಚಂದ್ರರಾವ್, ಟಿ.ಸಿದ್ದಲಿಂಗಯ್ಯ, ವೀರಕೇಸರಿ ಸೀತರಾಮಶಾಸ್ತ್ರಿಯವರ ಬಂಧನವನ್ನು ವಿರೋಧಿಸಿ ದೇಶಭಕ್ತರ ದಿನಾಚರಣೆ ಆಚರಿಸಲಾಯಿತು. ಸಂಸ್ಥಾನದಾದ್ಯಂತ ಹರತಾಳಗಳು ನಡೆದವು. ಅದರಂತೆ ಮಂಡ್ಯ, ನಾಗಮಂಗಲ ತಾಲೂಕುಗಳಲ್ಲಿ 'ಹರತಾಳ' ಹಾಗೂ ದೇಶಭಕ್ತರ ದಿನವನ್ನು ಆಚರಿಸಲಾಯಿತು[45].

ದಿನಾಂಕ 14ನೇ ನವೆಂಬರ್ 1937ರಂದು ದೇಶಭಕ್ತರ (Patriots Day) ದಿನದಂದು ಮಂಡ್ಯ ಮತ್ತು ನಾಗಮಂಗಲದಲ್ಲಿ 'ಹರತಾಳ'ವನ್ನು ಆಚರಿಸಲಾಯಿತು. ನಗರದಲ್ಲಿನ ಬಹುತೇಕ ಅಂಗಡಿಗಳು ಮುಚ್ಚಿದ್ದವು. ಮಂಡ್ಯದಲ್ಲಿ ಬಿ.ವಿ.ಬಾಲಕೃಷ್ಣ ಮತ್ತು ಸಂಗಡಿಗರೊಂದಿಗೆ ಮೈಸೂರು ಮಹಾರಾಜರು, ಮಹಾತ್ಮ ಗಾಂಧೀಜಿಯವರ ಹಾಗೂ ಜವಹರಲಾಲ್ ನೆಹರೂರವರ ಭಾವಚಿತ್ರದೊಂದಿಗೆ ಮೆರವಣಿಗೆ ನಡೆಸಿದರು. ಸಂಜೆ ಕಾಂಗ್ರೆಸ್ ಸಭೆಯು ಟೌನ್‌ಹಾಲ್‌ನ ಎದುರಗಡೆ ಇರುವ ಮುನಿಸಿಪಲ್ ಮೈದಾನದಲ್ಲಿ ನಡೆಯಿತು. ಹೆಚ್.ಹೊನ್ನಯ್ಯ, ವೆಂಕಟಪ್ಪ ಹಾಗೂ ಇತರ ಸದಸ್ಯರು ಹಾಜರಿದ್ದರು. ಸಭೆಯಲ್ಲಿ ಹೆಚ್. ಹೊನ್ನಯ್ಯನವರು ಮಾತನಾಡುತ್ತಾ ಮಹಾರಾಜರ ಆಶ್ರಯದಲ್ಲಿ ಜವಾಬ್ದಾರಿ ಸರಕಾರ ಸ್ಥಾಪಿಸುವ ಬಗ್ಗೆ ತಿಳಿಸುತ್ತಾ ಸರಕಾರದ ದಮನ ನೀತಿಯನ್ನು

ಖಂಡಿಸಿದರು. ಸೆರೆಮನೆಯಲ್ಲಿರುವ ದೇಶಭಕ್ತ ಕಾಂಗ್ರೆಸ್ ನಾಯಕರ ಬಗ್ಗೆ ಸಹಾನುಭೂತಿಯನ್ನು ವ್ಯಕ್ತಪಡಿಸಿದರು. ಸಭೆಯಲ್ಲಿ ಗೊತ್ತುಪಡಿಸಿರುವ ನಡಾವಳಿಗಳನ್ನು ಸರಕಾರ ಅಂಗೀಕರಿಸುವಂತೆ ತಿಳಿಸಿದರು.

ಇದೇ ದಿನದೊಂದು ನಾಗಮಂಗಲದಲ್ಲಿ ದೇಶಭಕ್ತರ ದಿನ ಹಾಗೂ ಹರತಾಳವನ್ನು ಆಚರಿಸಲಾಯಿತು. ಸದಾಶಿವರಾವ್‌ರವರ ಅಧ್ಯಕ್ಷತೆಯಲ್ಲಿ ಸೌಮ್ಯಕೇಶವ ದೇವಸ್ಥಾನದ ಎದುರುಗಡೆಯಿರುವ ಮೈದಾನದಲ್ಲಿ ಸಭೆಯು ನಡೆಯಿತು. ಟಿ.ಮರಿಯಪ್ಪ, ಕೃಷ್ಣಗೌಡ, ಚನ್ನಪ್ಪಚಾರಿರವರ ಸಭೆಯಲ್ಲಿ ಭಾಷಣ ಮಾಡಿದರು. ಸಭೆಯಲ್ಲಿ ಕೆಲವು ನಡಾವಳಿಗಳನ್ನು ಅಂಗೀಕರಿಸಿ ಪಾಸು ಮಾಡಲಾಯಿತು. ಸಭೆಯಲ್ಲಿ ಅಂಗೀಕರಿಸಿದ ಠರಾವುಗಳೆಂದರೆ ಮೈಸೂರು ಮಹಾರಾಜರ ಆಶ್ರಯದಲ್ಲಿ ಜವಾಬ್ದಾರಿ ಸರಕಾರವನ್ನು ಸ್ಥಾಪಿಸುವುದು. ಸರಕಾರದ ಪೊಲೀಸ್ ನೀತಿಯನ್ನು ಖಂಡಿಸಿದರು. ಪ್ರತಿಬಂಧಕಾಜ್ಞೆಗಳನ್ನು ಹಿಂದಕ್ಕೆ ಪಡೆಯುವುದು. ಸೆರಮನೆ ವಾಸದಲ್ಲಿರುವ ಕಾಂಗ್ರೆಸ್ ನಾಯಕರನ್ನು ಬಿಡುಗಡೆಗೊಳಿಸಬೇಕು[46].

18ನೇ ನವೆಂಬರ್ 1937ರಂದು ಮಂಡ್ಯದ ಸಂತೆ ಮೈದಾನದಲ್ಲಿ ಸಂಜೆವೇಳೆ ಕಾಂಗ್ರೆಸ್ ಪ್ರಚಾರ ಕಾರ್ಯ ಹಾಗೂ ಸಾರ್ವಜನಿಕ ಸಭೆ ನಡೆಯಿತು. ಈ ಸಭೆಯಲ್ಲಿ ಹೆಚ್.ಸಿ.ದಾಸಪ್ಪನವರು, ರಂಗರಾಮಯ್ಯ, ಟಿ.ಮರಿಯಪ್ಪ, ಎ.ಜಿ.ಬಂದೀಗೌಡ, ಕೆ.ಸಿ.ರೆಡ್ಡಿ, ಎಂ.ಎನ್.ಜೋಯಿಸ್, ಹೊನ್ನಯ್ಯನವರು ಸಭೆಯನ್ನುದ್ದೇಶಿಸಿ ಮಾತನಾಡಿದರು. ಹೆಚ್.ಸಿ.ದಾಸಪ್ಪನವರ ಜನರನ್ನುದ್ದೇಶಿಸಿ ರೈತರ ಹಣವನ್ನು ರೈತರ ಹಿತಕ್ಕಾಗಿ ಬಳಸದೆ ಸರಕಾರವನ್ನು ನಡೆಸಲು ಬಳಸಲಾಗಿದೆ. ಸರಕಾರ ಅಧಿಕಾರಿಗಳ ಅಧಿಕ ವೇತನ ನೀಡಿದ್ದರಿಂದ ರೈತರ ಬಡತನಕ್ಕೆ ಕಾರಣರಾಗಿದ್ದಾರೆ. ಮದ್ಯಪಾನವನ್ನು ನಿಷೇಧಿಸಬೇಕು, ಖಾದಿಯನ್ನು ಪ್ರೋತ್ಸಾಹಿಸಬೇಕೆಂದು ಬಗ್ಗೆ ಹೇಳುತ್ತಾ ಕಾಂಗ್ರೆಸ್ ಪಕ್ಷವು ಜನರಲ್ಲಿರುವ ಅನಕ್ಷರತೆಯನ್ನು ಹೋಗಲಾಡಿಸಲು ನಿಮ್ಮ ಬಳಿ ಬರುತ್ತದೆ ಮತ್ತು ಬ್ರಿಟಿಷ್ ಸರಕಾರದ ಅಧಿಕಾರಿಗಳ ಸಂಬಳವನ್ನು ಕಡಿತಗೊಳಿಸಬೇಕು ಹಾಗೂ ಜವಾಬ್ದಾರಿ ಸರಕಾರ ಸ್ಥಾಪನೆಯಾಗಬೇಕೆಂದರು. ಎ.ಜಿ.ಬಂದೀಗೌಡ ರವರ ಕಡ್ಡಾಯ ಶಿಕ್ಷಣದ ಬಗ್ಗೆ, ಕಂದಾಯವನ್ನು ಕಡಿತಗೊಳಿಸುವ ಬಗ್ಗೆ, ದೇಶಿಯ ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸುವ ಹಾಗೂ ಜವಾಬ್ದಾರಿ ಸರಕಾರ ಸ್ಥಾಪಿಸುವ ಬಗ್ಗೆ ಮಾತನಾಡಿದರು. ಕುಡಿತವನ್ನು ನಿಲ್ಲಿಸುವಂತೆ ಜನರಲ್ಲಿ ಮನವಿ ಮಾಡಿದರು. ಹೊನ್ನಯ್ಯನವರು ಸರಕಾರವು ಕಾಂಗ್ರೆಸ್ ಪ್ರಚಾರ ಕಾರ್ಯಕರ್ತರ ಸಹಾಯಕ್ಕೆ ಬರಲಿಲ್ಲ. ಆದ್ದರಿಂದ ಸರಕಾರವನ್ನು ಖಂಡಿಸುತ್ತಾ ಕಾಂಗ್ರೆಸ್ ಪಕ್ಷ ಸೇರುವಂತೆ ಜನರನ್ನು ಪ್ರೇರೇಪಿಸಿದರು.

ಪಿ.ಸೀತಾರಾಮಯ್ಯನವರು 18ನೇ ನವೆಂಬರ್ 1937ರಂದು ಶ್ರೀರಂಗಪಟ್ಟಣ ತಾಲ್ಲೂಕು ಪಾಲಹಳ್ಳಿಯಲ್ಲಿ ನಡೆದ ಧಾರ್ಮಿಕ ಸಮಾರಂಭದ ಸಂದರ್ಭದಲ್ಲಿ ಹಳ್ಳಿಗೆ ಭೇಟಿ ನೀಡಿದರು. ಹಳ್ಳಿ ಜನರನ್ನು ಮೈಸೂರು ಕಾಂಗ್ರೆಸ್‌ಗೆ ಸದಸ್ಯರಾಗಲು ಜನರಲ್ಲಿ ಕೇಳಿಕೊಂಡರು[47].

2ನೇ ಡಿಸೆಂಬರ್ 1937 ರಂದು ಮಂಡ್ಯದ ಸಂತೆ ಮೈದಾನದಲ್ಲಿ ಹೆಚ್.ಹೊನ್ನಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಸಭೆಯಲ್ಲಿ ಮೈಸೂರಿನ ಶಂಕರಯ್ಯನವರು ಜನರಲ್ಲಿ ಜೈಲಿನಲ್ಲಿರುವ ಮುಖಂಡರಿಗೆ ಕಾಂಗ್ರೆಸನ್ನು ಸೇರುವ ಮೂಲಕ ಬೆನ್ನೆಲುಬು ಆಗಬೇಕೆಂದು ಮನವಿ ಮಾಡಿದರು. ಹೆಚ್.ಸಿ.ದಾಸಪ್ಪನವರು ಜನರನ್ನುದ್ದೇಶಿಸಿ ಮಾತನಾಡುತ್ತಾ ಸರಕಾರಕ್ಕೆ ಬರುತ್ತಿರುವ ಆದಾಯ ರೈತರಿಂದ ಬರುತ್ತದೆ. ಆದರೆ ರೈತರ ಹಿತಕ್ಕಾಗಿ ಹಣವನ್ನು ಬಳಕೆ ಮಾಡಲಾಗುತ್ತಿಲ್ಲ. ಜವಾಬ್ದಾರಿ ಸರಕಾರ ಸ್ಥಾಪಿಸಲು ಸತ್ಯಾಗ್ರಹ ನಡೆಸಬೇಕು. ಸೆರೆಮನೆಯಲ್ಲಿರುವ ಕಾಂಗ್ರೆಸ್ ಮುಖಂಡರನ್ನು ಹಿತರಕ್ಷಣೆ ಮಾಡಲು ಹೋರಾಟ ಮಾಡಬೇಕು. ಸರಕಾರದಲ್ಲಿರುವ ಅಧಿಕಾರಿಗಳಿಗೆ ನೀಡುವ ಅಧಿಕವೇತನ ಕಡಿತಗೊಳಿಸಲು ತಮ್ಮ ಹೋರಾಟಕ್ಕೆ ಬೆಂಬಲ ಕೇಳಿಕೊಂಡರು[48].

ದಿನಾಂಕ 6ನೇ ಡಿಸೆಂಬರ್ 1937ರಂದು ನಾಗಮಂಗಲದ ಟೌನ್‌ಹಾಲ್‌ನಲ್ಲಿ ಕಾಂಗ್ರೆಸ್ ಸಮಿತಿಯ ಸಭೆ ನಡೆಯಿತು. ರೇವಣ್ಣ, ನಾರಾಯಣರಾವ್, ಎನ್.ಆರ್.ಎಸ್.ಶಾಸ್ತ್ರಿರವರು ಸಭೆಯಲ್ಲಿ ಹಾಜರಿದ್ದರು. ರೇವಣ್ಣನವರು ಸಭೆಯಲ್ಲಿ ಮಾತನಾಡುತ್ತಾ ಜವಾಬ್ದಾರಿ ಸರಕಾರ ಸ್ಥಾಪಿಸುವುದು ಕಾಂಗ್ರೆಸ್‌ನ ಪ್ರಮುಖ ಉದ್ದೇಶವಾಗಿದ್ದು, ಕಾಂಗ್ರೆಸ್ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಜನರನ್ನು ಕೋರಿದರು. ನಂತರ ನಾರಾಯಣರಾವ್ ಸಭೆಯಲ್ಲಿ ಮಹಾತ್ಮಗಾಂಧೀಜಿಯವರ ಹೇಳಿದಂತೆ ಪ್ರತಿಯೊಬ್ಬರು ಚರಕದಲ್ಲಿ ಕಾರ್ಯ ಮಾಡಿದಕ್ಕೆ ದಾಸ್ಯದಿಂದ ಮುಕ್ತಿಯನ್ನು ಪಡೆಯಬಹುದು. ಖಾದಿಯನ್ನು ಬಳಸುವಂತೆ, ಪ್ರೋತ್ಸಾಹಿಸುವಂತೆ ಕೋರಿದರು. ಎನ್.ಆರ್.ಎನ್.ಶಾಸ್ತ್ರಿರವರು ಸಭೆಯಲ್ಲಿ ಈ ರೀತಿಯಾಗಿ ಅಭಿಪ್ರಾಯ ವ್ಯಕ್ತಪಡಿಸಿದರು. ಮಹಾರಾಜರಿಂದ ದಿವಾನರು ಹಾಗೂ ಕೌನ್ಸಿಲ್‌ಗೆ ಎರಡು ಜನ ಸದಸ್ಯರನ್ನು ನೇಮಕ ಮಾಡುತ್ತಾರೆ. ಕೌನ್ಸಿಲ್ ಸದಸ್ಯರನ್ನು ರೈತರಿಂದ ಆಯ್ಕೆಮಾಡುವಂತೆ ಇರಬೇಕೆಂದರು. ಕಾಂಗ್ರೆಸನ್ನು ಬೆಂಬಲಿಸುವಂತೆ ಪ್ರಾರ್ಥಿಸಿದರು ಪ್ರತಿ ತಿಂಗಳು 6ನೇ ತಾರೀಖುರಂದು ದೇಶಭಕ್ತರದಿನ (Patriot Day) ಆಚರಿಸುವಂತೆ ಕೋರಿದರು. ಅದೇ ದಿನ ಮಧ್ಯಾಹ್ನ ನಾಗಮಂಗಲದ ಖಾದಿ ಅಂಗಡಿಯ ಮೇಲು ಛಾವಣಿ ಮೇಲೆ ಕಾಂಗ್ರೆಸ್ ಧ್ವಜ ಹಾರಿಸಲಾಯಿತು. ಸಭೆಯು ಮುಗಿದ ನಂತರ ಧ್ವಜವನ್ನು ಅವರೋಹಣ ಮಾಡಲಾಯಿತು[49].

ದಿನಾಂಕ 25ನೇ ಡಿಸೆಂಬರ್ 1937ರಂದು ಮದ್ದೂರಿನಲ್ಲಿ ಕಾಂಗ್ರೆಸ್ ಸಭೆ ನಡೆಯಿತು. ಈ ಸಭೆಯಲ್ಲಿ ಬಲವಂತರಾಯ್ ಮೆಹ್ತಾ, ಎಚ್.ಸಿ.ದಾಸಪ್ಪ, ಕೆ.ಸಿ.ರೆಡ್ಡಿ, ವೆಂಕಟಗೌಡ, ಎ.ಜಿ.ಬಂದೀಗೌಡ, ಹೆಚ್.ಕೆ. ವೀರಣ್ಣಗೌಡ, ಪಟ್ಟಾಭಿಸೀತಾರಾಮಯ್ಯನವರು ಸಭೆಯಲ್ಲಿ ಖಾದಿ ಬಳಕೆ, ದೇಶೀಯರು ಕೈಗಾರಿಕೆಗ ಪ್ರೋತ್ಸಾಹಿಸುವಂತೆ ಜನರಿಗೆ ಸಲಹೆ ನೀಡಿದರು. ಜನರು ವಿದೇಶಿ ವಸ್ತುಗಳಾದ ಬಟ್ಟೆ, ಸಕ್ಕರೆ, ಅಕ್ಕಿಯನ್ನು ಬಹಿಷ್ಕರಿಸಿ, ಕರಕುಶಲ ವಸ್ತುಗಳನ್ನು ಅವಲಂಭಿಸುವಂತೆ ಮನವಿ ಮಾಡಿದರು[50].

ದಿನಾಂಕ 26ನೇ ಡಿಸೆಂಬರ್ 1937ರಂದು ನಾಗಮಂಗಲ ತಾಲೂಕಿನ ಚಿಣ್ಯ ಸಂತೆ ಸಂದರ್ಭದಲ್ಲಿ ಸ್ಥಳೀಯ ಕಾಂಗ್ರೆಸ್ ಸಮಿತಿ ಸಭೆ ನಡೆಯಿತು. ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳಾದ ಸಿ.ಎನ್.ವೆಂಕಟರಾಮಯ್ಯನವರು ಅಧ್ಯಕ್ಷತೆಯನ್ನು ವಹಿಸಿದ್ದರು. ಮೈಸೂರಿನ ವಕೀಲರಾದ ನಾರಾಯಣಸ್ವಾಮಿ, ರೇವಣ್ಣ, ವಕೀಲರಾದ ಸಂಜೀವಪ್ಪ, ಟಿ.ಮರಿಯಪ್ಪ, ಕೃಷ್ಣೇಗೌಡರವರು ಸಭೆಯಲ್ಲಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. 26–12–1937 ರಂದು ನಾಗಮಂಗಲ ಪಟ್ಟಣದಲ್ಲಿ ಟಿ.ಮರಿಯಪ್ಪನವರ ಅಧ್ಯಕ್ಷತೆಯಲ್ಲಿ ತಾಲೂಕು ಕಾಂಗ್ರೆಸ್ ಸಮಿತಿಯ ಸಭೆಯು ನಡೆಯಿತು. ನಾರಾಯಣಸ್ವಾಮಿ, ಕೃಷ್ಣಪ್ಪಗೌಡ, ಎಂ.ಆರ್.ಎನ್.ಶಾಸ್ತ್ರಿ ಸಭೆಯಲ್ಲಿ ಮಾತನಾಡಿದರು. ಟಿ.ಮರಿಯಪ್ಪನವರ ಕಾಂಗ್ರೆಸ್ ಪಕ್ಷದ ಬಗ್ಗೆ ವಿವರಿಸಿದರು. ಕಾಂಗ್ರೆಸ್‌ನಲ್ಲಿ ಜಾತಿ ಮತ್ತು ಧರ್ಮ ಬಗ್ಗೆ ಭಿನ್ನತೆ ಇಲ್ಲ. ಹಿಂದೂ ಮತ್ತು ಮುಸ್ಲಿಂರಲ್ಲಿ ವ್ಯತ್ಯಾಸವಿಲ್ಲ. ಸ್ಥಳೀಯ ಮಟ್ಟದಲ್ಲಿ ಹಿಂದೂ ಮುಸ್ಲಿಂ ಭೇದವನ್ನು ಮಾಡದೇ ಕಾಂಗ್ರೆಸನ್ನು ಬೆಂಬಲಿಸುವಂತೆ ಕೋರಿದರು[51]. 27ನೇ ಡಿಸೆಂಬರ್ 1937ರಂದು ನಾಗಮಂಗಲ ತಾಲೂಕಿನ ಬಿಂಡಿಗನವಿಲೆ ಗ್ರಾಮದಲ್ಲಿ ಸಂತೆಯ ಸಂದರ್ಭದಲ್ಲಿ ಕಾಂಗ್ರೆಸ್ ಸಭೆ ನಡೆಯಿತು. ಟಿ.ಮರಿಯಪ್ಪ ಸಭೆಯಲ್ಲಿ ಮಾತನಾಡುತ್ತಾ ಬ್ರಿಟಿಷರ ಭಾರತವನ್ನು ವಶಪಡಿಸಿಕೊಂಡು ತಮ್ಮ ಆಡಳಿತವನ್ನು ಸ್ಥಾಪಿಸಿದರು. ಜನಗಳಿಗೆ ಯಾವುದೇ ಅನುಕೂಲಗಳನ್ನು ಮಾಡಲ್ಲ. ಆಸಮಯದಲ್ಲಿ ಮಹಾತ್ಮ ಗಾಂಧೀಜಿಯವರ ಕಾಂಗ್ರೆಸ್ ಪ್ರಚಾರ ಕಾರ್ಯ ಮೂಲಕ ಜನಗಳಲ್ಲಿನ ಸ್ವಾತಂತ್ರ್ಯ ಕೊರತೆಯನ್ನು ಜಾಗೃತಿಗೊಳಿಸಿದರು. ಈ ಮೈಸೂರು ಸಂಸ್ಥಾನದಲ್ಲಿನ ರೈತರ ಶೋಚಿತ ಪರಿಸ್ಥಿತಿಗೆ ದಿವಾನರ ಹಾಗೂ ಕೌನ್ಸಿಲ್ ಸದಸ್ಯರ ಅಧಿಕ ವೇತನ ಕಾರಣವೆಂದರು. ಕಾಂಗ್ರೆಸ್ ಸೇರುವ ಮೂಲಕ ಜವಾಬ್ದಾರಿ ಸರಕಾರ ಸ್ಥಾಪನೆಯ ಹೋರಾಟಕ್ಕೆ ಬೆಂಬಲಿಸುವಂತೆ ಕೋರಿದರು. ಎಂ.ಆರ್.ಎನ್.ಶಾಸ್ತ್ರಿರವರ ಜನರಿಗೆ ಖಾದಿ ಬಳಕೆ ಮತ್ತು ಕಾಂಗ್ರೆಸ್ ಸೇರುವಂತೆ ಮನವಿ ಮಾಡಿದರು. ನಾರಾಯಣಸ್ವಾಮಿರವರು ಸಭೆಯ ಮುಕ್ತಾಯ ಭಾಷಣದಲ್ಲಿ ರೈತರ ಬಡತನ, ಅನಕ್ಷರತೆ, ಸರಕಾರದ ನಿಷೇದಾಜ್ಞೆ, ಈ ಎಲ್ಲರ ದೃಷ್ಟಿಯಿಂದ ಕಾಂಗ್ರೆಸ್ ಮೂಲಕ ಜನರ

ಶಾಪ ವಿಮೋಚನೆ ಮಾಡಲಾಗುವುದೆಂದರು. ಮೈಸೂರು ಸರಕಾರದವರು ಕಾಂಗ್ರೆಸ್‌ಗೆ ವಿರೋಧವಾಗಿ ಪ್ರಚಾರ ಕಾರ್ಯವನ್ನು ಕೈಗೊಂಡಿದ್ದನ್ನು ಜನರು ಸ್ಪಷ್ಟವಾಗಿ ನಂಬಬಾರದೆಂದು ತಿಳಿಸಿದರು[52].

ದಿನಾಂಕ 31–12–1937ರಂದು ಎಂ.ಪಿ.ಶ್ರೀನಿವಾಸ ಅಯ್ಯಂಗಾರ್ ಮನೆಯಲ್ಲಿ ಮದ್ದೂರು ತಾಲೂಕು ಕಾಂಗ್ರೆಸ್ ಸಮಿತಿ ರಚಿಸಲಾಯಿತು. ಕಾರ್ಯಕಾರಿ ಮಂಡಳಿಯು ಹಳ್ಳಿಹಳ್ಳಿಗಳಲ್ಲಿ ಸಂಚಾರ ಮಾಡಿ ಒಂದು ಸಾವಿರಕ್ಕೂ ಹೆಚ್ಚು ಸಂಖ್ಯೆಯಲ್ಲಿ ಸಾಮಾನ್ಯ ಸದಸ್ಯರನ್ನು ನೊಂದಾಯಿಸಲಾಯಿತು[53].

ನಾಗಮಂಗಲ ಸ್ಥಳೀಯ ಸಮಿತಿಯು ದಿನಾಂಕ 6ನೇ ಜನವರಿ 1938ರಂದು ದಮನ (ನಿಗ್ರಹ) (Repressionday) ದಿನವನ್ನು ಚನ್ನಪ್ಪಚಾರಿರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಆಯೋಜಿಸಿತ್ತು. ಸುಮಾರು 90 ಜನರು ಭಾಗವಹಿಸಿದ್ದರು. ಸ್ಥಳೀಯ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳಾದ ಎಂ.ಆರ್.ಎನ್.ಶಾಸ್ತ್ರಿರವರು ತಿಳಿಸಿದಂತೆ ಜಿಲ್ಲಾ ಕಾಂಗ್ರೆಸ್ ಸಮಿತಿಯ ನಿರ್ದೇಶನದಂತೆ ಕಾಂಗ್ರೆಸ್ ಸಭೆಯನ್ನು ಆಯೋಜಿಸಲಾಗಿದೆ ಎಂದರು. ಕಾಂಗ್ರೆಸ್ ಸದಸ್ಯರಾದ ನಾರಾಯಣರವರು ಸಭೆಯಲ್ಲಿ ಮಾತನಾಡುತ್ತಾ ಜನರು ವಿದೇಶಿ ವಸ್ತುಗಳನ್ನು ಬಹಿಷ್ಕರಿಸಿ ಖಾದಿಯನ್ನು ಪ್ರೋತ್ಸಾಹಿಸಬೇಕು ಹಾಗೂ ಕಾಂಗ್ರೆಸ್ ಸೇರುವಂತೆ ಜನರಲ್ಲಿ ಕೋರಿದರು. 13ನೇ ಜನವರಿ 1938ರಂದು ಕೆ.ಆರ್.ಪೇಟೆ ತಾಲೂಕಿನ ಸಂತೇಬಾಚಹಳ್ಳಿಯಲ್ಲಿ ಎಲ್.ವಿ.ಗುಂಡಪ್ಪಗೌಡರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಗಿರಿಮಲ್ಲಯ್ಯನವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಜವಾಬ್ದಾರಿ ಸರಕಾರ ಸ್ಥಾಪಿಸಲು ಜನರು ಹೋರಾಟ ಮಾಡುವಂತೆ ಪ್ರೇರೇಪಿಸಿದರು[54].

ದಿನಾಂಕ 29ನೇ ಜನವರಿ 1938ರಂದು ಕಾಂಗ್ರೆಸ್ ಪಕ್ಷವು ಟಿ.ಮರಿಯಪ್ಪನವರ ಅಧ್ಯಕ್ಷತೆಯಲ್ಲಿ ಶ್ರೀರಂಗಪಟ್ಟಣ ತಾಲ್ಲೂಕಿನ ಪಾಲಹಳ್ಳಿಯಲ್ಲಿ ಸಾರ್ವಜನಿಕ ಸಭೆಯನ್ನು ಆಯೋಜಿಸಿತು. ಎ.ಜೆ.ಬಂದೀಗೌಡರು ಕಾಂಗ್ರೆಸ್ ಪಕ್ಷದ ಉಗಮ, ತತ್ವಗಳನ್ನು ಹಾಗೂ ದಿ. ಬಾಲಗಂಗಾಧರ ತಿಲಕ ಮತ್ತು ಮಹಾತ್ಮ ಗಾಂಧೀಜಿಯವರ ಸತ್ಯ ಮತ್ತು ಅಹಿಂಸೆಯ ಮೂಲಕ ಹೋರಾಟ ನಡೆಸುತ್ತಿರುವುದನ್ನು ಸಭೆಯಲ್ಲಿ ವಿವರಿಸಿದರು. ಲಂಡನ್‌ನಲ್ಲಿ ನಡೆದ ದುಂಡುಮೇಜಿನ ಸಮ್ಮೇಳನದಲ್ಲಿ ಪಂಡಿತ ಮದನ ಮೋಹನ ಮಾಳವಿಯಾ, ಮಹಾತ್ಮಗಾಂಧೀಜಿ, ಸರೋಜಿನ ನಾಯ್ದುರವರ ಬ್ರಿಟಿಷ್ ಸಾಮ್ರಾಜ್ಯಶಾಹಿ ವಿರುದ್ಧ ನಡೆಸಿದ ಹೋರಾಟ ತಿಳಿಸಿದ್ದರು. ಸಭೆಯಲ್ಲಿ ಕೆ.ಎಂ.ಕೃಷ್ಣಪ್ಪಗೌಡ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಇತ್ತೀಚಿಗೆ ಮೈಸೂರು ಸಂಸ್ಥಾನದಲ್ಲಿ ಬೇರೆ ಬೇರೆ ಪಕ್ಷಗಳ ಕಾಂಗ್ರೆಸ್‌ನೊಂದಿಗೆ ಒಂದುಗೂಡಿದ್ದು, ಇತ್ತೀಚಿಗೆ ರಾಜಕೀಯ ಏಕತೆಯನ್ನು ಸಾಧಿಸಿದೆ.

ಜನಗಳು ಮಹಾರಾಜರಲ್ಲಿ ಜವಾಬ್ದಾರಿ ಸರಕಾರ ಸ್ಥಾಪಿಸುವಂತೆ ಪ್ರಾರ್ಥಿಸಬೇಕೆಂದರು. ಮೈಸೂರು ಸಂಸ್ಥಾನದ ದಿವಾನರು ಹತ್ತುಪಟ್ಟು ಮತ್ತು ಕೌನ್ಸಿಲ್ ಸದಸ್ಯರು 4 ಪಟ್ಟು ಅಧಿಕ ವೇತನ ಪಡೆಯುತ್ತಿರುವುದನ್ನು ಜನಗಳ ಗಮನಕ್ಕೆ ತಂದರು ಇದೇ ರೀತಿ ಅಭಿಪ್ರಾಯ ವ್ಯಕ್ತಪಡಿಸಿದ ಕೆ.ಟಿ.ಭಾಷ್ಯಂ, ಟಿ.ಸಿದ್ದಲಿಂಗಯ್ಯನವರನ್ನು ಬಂಧಿಸಿ ಸೆರೆಮನೆಯಲ್ಲಿಡಲಾಗಿದೆ. ಕಾಂಗ್ರೆಸ್ ಸೇರುವಂತೆ ಜನಗಳಲ್ಲಿ ಮನವಿ ಮಾಡಿದರು. ಸೀತರಾಮಯ್ಯನವರು ಎಲ್ಲ ಜಾತಿಗಳು ಒಂದುಗೂಡಿ ಏಕತೆಯನ್ನು ಸಾರಬೇಕೆಂದರು. ಸರಕಾರದ ಪರವಾಗಿ ಕೆಲಸ ಮಾಡುತ್ತಿರುವುದನ್ನು ಆಯ್ಕೆಮಾಡದೇ ಕಾಂಗ್ರೆಸ್‌ಗರನ್ನು ಆಯ್ಕೆ ಮಾಡಬೇಕೆಂದರು. ಸರಕಾರದ ಅಧಿಕಾರಗಳು ದಿನಕ್ಕೆ 10 ರೂ ಪಡೆಯುತ್ತಿದ್ದಾರೆ. ಆದರೆ ರೈತರಿಗೆ 3 ರೂಪಾಯಿಗಳು ದಕ್ಕುತ್ತಿಲ್ಲವೆಂದರು. ಅಧ್ಯಕ್ಷರಾದ ಟಿ. ಮರಿಯಪ್ಪನವರ ಜನಗಳಿಂದ ಆಯ್ಕೆಯಾದ ಮಂತ್ರಿಮಂಡಲ ಇರಬೇಕೆಂದರು. ಜವಾಬ್ದಾರಿ ಸರಕಾರ ಸ್ಥಾಪಿಸಲು ಕಾಂಗ್ರೆಸ್ ಬೆಂಬಲಿಸುವಂತೆ ಮನವಿ ಮಾಡಿದರು[55].

ಧರಣೇಂದ್ರಯ್ಯನವರು 28–01–1938 ರಂದು ನಾಗಮಂಗಲದಲ್ಲಿ, 30–01–1938 ರಂದು ಬೋಗಾದಿ ಸಂತೆಯಲ್ಲಿ ಹಾಗೂ 01–02–1938ರಂದು ಬೆಳ್ಳೂರಿನಲ್ಲಿ ಕಾಂಗ್ರೆಸ್ ಸಭೆ ಸೇರುವಂತೆ ಮತ್ತು ಗ್ರಾಮಗಳಲ್ಲಿ ಕಾಂಗ್ರೆಸ್ ಕೈಗೊಂಡಿರುವ ರಚನಾತ್ಮಕ ಕಾರ್ಯಗಳ ಬಗ್ಗೆ ಪ್ರಚಾರ ಮಾಡಿದರು. ಮೇಸ್ತ್ರಿ ನಂಜಪ್ಪನವರ ಮಗನಾದ ಬಸವೇಗೌಡರವರು ತಟ್ಟಕೇರಿ ಹಾಗೂ ಬೋಗಾದಿ ಸಂತೆಯಲ್ಲಿ ಜನಗಳನ್ನು ಕಾಂಗ್ರೆಸ್ ಸೇರುವಂತೆ ಪ್ರೇರೇಪಿಸಿದರು[56].

30ನೇ ಜನವರಿ 1938ರಂದು ಮಂಡ್ಯ ತಾಲೂಕು ಪಂಚಾಯಿತಿಯ ಸಮ್ಮೇಳನವು ಕೆರೆಗೋಡು ಗ್ರಾಮದಲ್ಲಿ ಮಂಡ್ಯ ವಿಭಾಗ ಉಪ ಅಧಿಕಾರಿ ಭೀರಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ರೈತರ ಜೀವನ ಉತ್ತಮಪಡಿಸುವ ಮತ್ತು ಗ್ರಾಮಗಳನ್ನು ಸುಧಾರಿಸುವ ಬಗ್ಗೆ ಉಪನ್ಯಾಸ ನೀಡಲಾಯಿತು. 31ನೇ ಜನವರಿ 1938ರಂದು ಕೆ.ಆರ್.ಪೇಟೆ ತಾಲೂಕಿನ ತಂಡೆಕೇರಿ ಗ್ರಾಮಕ್ಕೆ ಟಿ.ಮರಿಯಪ್ಪ, ಶಂಕರರಾವ್, ಸೀತರಾಮ ಮತ್ತು ಇತರೆ ಕಾಂಗ್ರೆಸ್ ನಾಯಕರು ಭೇಟಿ ನೀಡಿದರು. ಹಾಗೂ ಕಾಂಗ್ರೆಸ್ ಬೆಂಬಲಿಸುವಂತೆ ಜನರನ್ನು ಪ್ರೇರೇಪಿಸಿದರು[57]. 1ನೇ ಫೆಬ್ರವರಿ 1938 ರಂದು ಶ್ರೀರಂಗಪಟ್ಟಣ ತಾಲೂಕಿನ ಅರಕೆರೆ ಗ್ರಾಮದಲ್ಲಿ ಎನ್.ಶ್ರೀನಿವಾಸ ಅಯ್ಯಂಗಾರ್‌ರವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಸಭೆ ನಡೆಯಿತು. ಸಭೆಯಲ್ಲಿ ಬಿ.ನಾರಾಯಣಸ್ವಾಮಿರವರ ಕಾಂಗ್ರೆಸ್ ಹುಟ್ಟು ಮತ್ತು ಅದರ ಚಟುವಟಿಕೆಗಳನ್ನು ವಿವರಿಸಿದರು. ಪಿ.ಗೋಪಾಲಕೃಷ್ಣ ಶೆಟ್ಟಿರವರ ಕಾಂಗ್ರೆಸ್ ಗುರಿ, ಉದ್ದೇಶ, ಧ್ವಜವನ್ನು ವಿವರಿಸಿದರು. ನಮ್ಮ ಸೈನ್ಯ, ಟಂಕಶಾಲೆ, ಅಂಚೆ, ವ್ಯವಸ್ಥೆ ಇದಕ್ಕೆ ಸ್ವಾತಂತ್ರ್ಯವಿಲ್ಲ. ನಾವು ಮಹಾರಾಜರ ಕೂಡ ಸೇರಿ ಬ್ರಿಟಿಷ್‌ರೊಡನೆ ಹೊಡೆದಾಡಬೇಕು. ಜನಗಳಲ್ಲಿ ಕಾಂಗ್ರೆಸ್ ಬೆಂಬಲಿಸುವಂತೆ ಕೋರಿದರು.

[illegible]

ಎ.ಜಿ.ಬಂದೀಗೌಡರ ಸಭೆಯಲ್ಲಿ ತಮ್ಮ ಅಭಿಪ್ರಾಯವನ್ನು ತಿಳಿಸುತ್ತಾ ಜವಾಬ್ದಾರಿ ಸರಕಾರ ಸ್ಥಾಪನೆಯಿಂದ ಮಹಾರಾಜರ ಗೌರವಕ್ಕೆ ಧಕ್ಕೆಯಾಗುವುದಿಲ್ಲವೆಂದರು. ಅಬ್ಬಾಸ್‌ಖಾನ್‌ರ ಅಭಿಪ್ರಾಯವನ್ನು ಟೀಕಿಸಿದರು. ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀನಿವಾಸ ಅಯ್ಯಂಗಾರ್‌ರವರ ಕಾಂಗ್ರೆಸ್ ಸೇರುವಂತೆ ಜನಗಳಲ್ಲಿ ಮನವಿ ಮಾಡಿದರು[58].

2ನೇ ಫೆಬ್ರವರಿ 1938ರಂದು ಮಂಡ್ಯ ತಾಲೂಕಿನ ಕೆರೆಗೋಡು ಗ್ರಾಮದಲ್ಲಿ ಬಿದರಕೋಟೆಯ ಕಾಂಗ್ರೆಸ್ ಕೆಂಪಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಹೊನ್ನಯ್ಯನವರು ಸಭೆಯಲ್ಲಿ ವಿವರಿಸುತ್ತಾ ಕಾಂಗ್ರೆಸ್ ಪಕ್ಷವು ಜವಾಬ್ದಾರಿ ಸರಕಾರ ಸ್ಥಾಪಿಸುವ ಬಗ್ಗೆ ವಿಶ್ವಾಸ ವ್ಯಕ್ತಪಡಿಸಿದರು. ಜನರು ಕಾಂಗ್ರೆಸ್ ಸೇರುವ ಮೂಲಕ ಜವಾಬ್ದಾರಿ ಸರಕಾರ ಸ್ಥಾಪಿಸಲು ಒತ್ತಾಯ ಪಡಿಸಬೇಕೆಂದರು[59].

ದಿನಾಂಕ 7ನೇ ಫೆಬ್ರವರಿ 1938ರಂದು ಪಾಂಡವಪುರ (ಫ್ರೆಂಚ್‌ರಾಕ್ಸ್) ತಾಲ್ಲೂಕಿನ ಚಿಕ್ಕಾಡೆ ಗ್ರಾಮದ ಜಾತ್ರೆಯ ಸಂದರ್ಭದಲ್ಲಿ ವೈ.ಸಿ.ಮರಿಯಪ್ಪ, ಶ್ರೀರಂಗಪಟ್ಟಣದ ಎ.ಜಿ. ಬಂದೀಗೌಡ, ನೀಲನಹಳ್ಳಿಯ ಎನ್.ಭದ್ರಯ್ಯನವರ ಗ್ರಾಮಕ್ಕೆ ಭೇಟಿ ನೀಡಿದರು. ಜನರನ್ನೋದ್ದೇಶಿಸಿ ಮಾತನಾಡುತ್ತಾ ಜವಾಬ್ದಾರಿ ಸರಕಾರ ಸ್ಥಾಪಿಸಲು ಹೋರಾಟ, ಕಾಂಗ್ರೆಸ್ ಸೇರುವಂತೆ ಮನವಿ ಮಾಡಿದರು[60].

7ನೇ ಫೆಬ್ರವರಿ 1938ರಂದು ಹೆಚ್.ಸಿ.ದಾಸಪ್ಪನವರ ನ್ಯಾಯ ವಿಚಾರಣೆ ಸಂದರ್ಭದಲ್ಲಿ ಹೆಚ್.ಹೊನ್ನಯ್ಯನವರ ರೈತರ ಸಹಕಾರ ಪಡೆ ರಚಿಸಿ ಮಂಡ್ಯದಿಂದ ಮೈಸೂರುವರೆಗೆ ಜನರಿಂದ ಪಾದಯಾತ್ರೆ ಮಾಡುವ ಯೋಜನೆ ರೂಪಿಸಿದರು. ಯಾವುದೇ ಬೆಂಬಲ ದೊರೆಯದ ಕಾರಣ ಯೋಜನೆಯನ್ನು ಕೈಬಿಟ್ಟರು. ಅಂತಿಮವಾಗಿ 7ನೇ ಫೆಬ್ರವರಿ 1938ರಂದು ಮಂಡ್ಯ ಪುರಸಭೆಯ ಉಪಾಧ್ಯಕ್ಷರಾದ ಹೆಚ್.ಹೊನ್ನಯ್ಯನವರು ತಮ್ಮ 20 ಜನರ ಪಡೆಯೊಂದಿಗೆ ಮಂಡ್ಯದಿಂದ ಎಕ್ಸ್‌ಪ್ರೆಸ್ ರೈಲಿನಲ್ಲಿ ಮೈಸೂರಿಗೆ ಪ್ರಯಾಣ ಬೆಳೆಸಿದರು. ಹೆಚ್.ಸಿ.ದಾಸಪ್ಪನವರ ನ್ಯಾಯ ವಿಚಾರಣೆಯಲ್ಲಿ ಹಾಜರಿದ್ದರು. ಈ ಮೂಲಕ ಹೆಚ್.ಸಿ.ದಾಸಪ್ಪನವರನ್ನು ಬೆಂಬಲಿಸಿದರು[61].

17ನೇ ಫೆಬ್ರವರಿ 1938ರಂದು ಮಂಡ್ಯದ ಸ್ಥಳೀಯ ಕಾಂಗ್ರೆಸ್ ಸಮಿತಿಯು ಮಂಡ್ಯದಲ್ಲಿ ಸಭೆಯನ್ನು ಆಯೋಜಿಸಿತು. ಮೈಸೂರಿನ ಸೂರ್ಯನಾರಾಯಣ ಪಂಡಿತ್ ಅಧ್ಯಕ್ಷತೆಯನ್ನು ವಹಿಸಿದ್ದರು. ಸುಬ್ಬಮ್ಮನವರು ಮಾತನಾಡುತ್ತಾ ಖಾದಿಯನ್ನು ಪ್ರೋತ್ಸಾಹಿಸಬೇಕೆಂದರು. ರೈತರಿಂದ ಸರಕಾರವು ಅಧಿಕ ಕಂದಾಯವನ್ನು ಸಂಗ್ರಹಿಸುತ್ತಿರುವುದನ್ನು ಟೀಕಿಸಿದರು. ಶ್ರೀನಿವಾಸರಾವ್‌ರವರು ಜನರು ಖಾದಿ ಧರಿಸುವಂತೆ ಮನವಿ ಮಾಡಿದರು. ಹೆಚ್.ಹೊನ್ನಯ್ಯನವರು ಮೈಸೂರಿನಲ್ಲಿ ಜವಾಬ್ದಾರಿ

ಸರಕಾರ ಸ್ಥಾಪಿಸಲಾಗುವುದು. ಜನಗಳು ಕಾಂಗ್ರೆಸ್ ಸೇರಬೇಕೆಂದು ಕರೆ ನೀಡಿದರು. ಕೆ.ಕೆಂಪೇಗೌಡರವರು ಸಹಕಾರದ ಬಗ್ಗೆ ವಿವರಿಸಿದರು. 18ನೇ ಫೆಬ್ರವರಿ 1938 ರಂದು ಮದ್ದೂರು ತಾಲೂಕು ಕಾಂಗ್ರೆಸ್ ಸಮಿತಿಯು ಸಾರ್ವಜನಿಕ ಸಭೆಯನ್ನು ನಿಡಘಟ್ಟದಲ್ಲಿ ಆಯೋಜಿಸಿತ್ತು. ಸೀತಾರಾಮಶಾಸ್ತ್ರಿಯವರು ಜವಾಬ್ದಾರಿ ಸರಕಾರ ಸ್ಥಾಪನೆ ಹಾಗೂ ಪ್ರಸ್ತುತ ಸರಕಾರದ ಬಗ್ಗೆ ವಿವರಿಸಿದರು. ಅದೇ ದಿನದಂದು ಮದ್ದೂರು ತಾಲೂಕಿನ ಮಲ್ಲನಕುಪ್ಪೆಯಲ್ಲಿ (18–02–1938) ತಾಲ್ಲೂಕು ಕಾಂಗ್ರೆಸ್ ಸಮಿತಿಯು ಸಾರ್ವಜನಿಕ ಸಭೆಯನ್ನು ಏರ್ಪಡಿಸಿತ್ತು. ಹೆಚ್.ಕೆ. ವೀರಣ್ಣಗೌಡ, ದೇಶಹಳ್ಳಿಯ ತಮ್ಮಯ್ಯ, ಭೀಮಯ್ಯನವರು ಜವಾಬ್ದಾರಿ ಸರಕಾರ ಸ್ಥಾಪನೆ ಬಗ್ಗೆ ಮಾತನ್ನಾಡಿದರು[62]. ದಿನಾಂಕ 20ನೇ ಫೆಬ್ರವರಿ 1938ರಂದು ಮದ್ದೂರು ತಾಲ್ಲೂಕು ಕಾಂಗ್ರೆಸ್ ಸಮಿತಿಯ ಸಾರ್ವಜನಿಕ ಸಭೆಯು ಬಿದರಕೋಟೆಯಲ್ಲಿ ನಡೆಯಿತು. ಹೆಚ್.ಕೆ. ವೀರಣ್ಣಗೌಡ ಮತ್ತು ಟಿ.ಸುನಂದಮ್ಮನವರು ಕಾಂಗ್ರೆಸನ್ನು ಬೆಂಬಲಿಸುವಂತೆ ಕೇಳಿಕೊಂಡರು. ಅದೇ ದಿನ ಇನ್ನೊಂದು ಸಾರ್ವಜನಿಕ ಸಭೆಯು ಗೆಜ್ಜಲಗೆರೆ ಗ್ರಾಮದಲ್ಲಿ ನಡೆಯಿತು. ಹೆಚ್.ಕೆ.ವೀರಣ್ಣಗೌಡನವರು ಸಭೆಯಲ್ಲಿ ಈ ರೀತಿಯಾಗಿ ಅಭಿಪ್ರಾಯ ವ್ಯಕ್ತಪಡಿಸಿದರು. ಬೆಂಗಳೂರಿನ ಮ್ಯಾಜಿಸ್ಟ್ರೇಟರ್ ಮೆರವಣಿಗೆ ನಿಷೇದಿಸಿದನ್ನು ಹಾಗೂ ಕಾಳೇನಹಳ್ಳಿಯ ಅಮಲ್ದಾದಾರ ಕಾಂಗ್ರೆಸ್ ಸಭೆ ನಡೆಸುವುದನ್ನು ನಿಷೇದಿಸಿದ್ದನ್ನು ಟೀಕಿಸಿದರು. ಕಾಂಗ್ರೆಸ್ ಪಕ್ಷಕ್ಕೆ ಸಹಕಾರ ನೀಡಬೇಕೆಂದರು.

ಇದೇ ದಿನ ಸಂಜೆ ಕೊಪ್ಪ, ಹೊಸಕೆರೆ ಮತ್ತು ಬೆಸಗರಹಳ್ಳಿಯಲ್ಲಿ ಮದ್ದೂರು ತಾಲೂಕಿನ ಕಾಂಗ್ರೆಸ್ ಸಮಿತಿಯ ಸಭೆ ನಡೆಯಿತು ಕ್ರಮವಾಗಿ ಜವಾಬ್ದಾರಿ ಸರಕಾರ ಸ್ಥಾಪನೆಗಾಗಿ ಹೋರಾಟ ನಡೆಸಲು ಕಾಂಗ್ರೆಸ್ ಸೇರುವಂತೆ ಮನವಿ ಮಾಡಲಾಯಿತು[63].

ದಿನಾಂಕ 21ನೇ ಫೆಬ್ರವರಿ 1938 ರಂದು ನಾಗಮಂಗಲದಲ್ಲಿ ತಾಲ್ಲೂಕು ಕಾಂಗ್ರೆಸ್ ಸಮಿತಿಯ ಸಾರ್ವಜನಿಕ ಸಭೆ ನಡೆಯಿತು. ಸಭೆಯಲ್ಲಿ ಎಂ.ಆರ್.ಎನ್.ಶಾಸ್ತ್ರಿ ಹಾಗೂ ರೇವಣ್ಣನವರು ಸುಭಾಷ್ ಚಂದ್ರ ಭೋಸರ ಭಾಷಣವನ್ನು ಓದಿದರು ಹಾಗೂ ಜನರಲ್ಲಿ ಸ್ವಾತಂತ್ರ್ಯ ಚಳವಳಿಯ ಬಗ್ಗೆ ಜಾಗೃತಿ ಮೂಡಿಸಿದರು. ದಿನಾಂಕ 23ನೇ ಫೆಬ್ರವರಿ 1938 ರಂದು ಮಂಡ್ಯದ ಕಾಂಗ್ರೆಸ್ ಸಮಿತಿಯು ಚಿಕ್ಕಾಡೆ ಗ್ರಾಮದಲ್ಲಿ ಜವಾಬ್ದಾರಿ ಸರಕಾರ ಸ್ಥಾಪನೆ ಕುರಿತು ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಿದ್ದರು. ಹೆಚ್.ಕೆ. ವೀರಣ್ಣಗೌಡ ಹಾಗೂ ಸೀತಾರಾಮಯ್ಯಶಾಸ್ತ್ರಿಯವರ ಉಪನ್ಯಾಸ ನೀಡಿದರು[64].

ಮಂಡ್ಯ ತಾಲ್ಲೂಕು ಕಾಂಗ್ರೆಸ್ ಸಮಿತಿಯ ಸಭೆಯು 23ನೇ ಫೆಬ್ರವರಿ 1938 ರಂದು ಶಿವಳ್ಳಿಯಲ್ಲಿ ನಡೆಯಿತು. ಅದರಲ್ಲಿ ಪ್ರಮುಖವಾಗಿ ಪುರುಷರು, ಮಹಿಳೆಯರು, ಮಕ್ಕಳು, ರೈತರು, ಕಾರ್ಮಿಕರು ಹಾಜರಾಗಿದ್ದರು. ಟಿ.ಸುನಂದಮ್ಮ ಸಭೆಯಲ್ಲಿ

ಮಾತನಾಡುತ್ತಾ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಕಾಂಗ್ರೆಸ್ ಸೇರಬೇಕೆಂದರು. ಮದ್ರಾಸ್ ವಿದೇಶಿ ವಸ್ತುಗಳಿಗೆ ಬಹಿಷ್ಕಾರ ಮತ್ತು ಮುಂಬೈ ಪ್ರೆಸಿಡೆನ್ಸಿಯಲಿ ಶಿಕ್ಷಣ ನೀಡುತ್ತಿರುವುದನ್ನು ವಿವರಿಸಿದರು. ಹೆಚ್.ಹೊನ್ನಯ್ಯನವರು ಸಭೆಗೆ ಬಹಳಷ್ಟು ಸಂಖ್ಯೆಯಲ್ಲಿ ಜನಸೇರಿದ್ದಕ್ಕೆ ಹರ್ಷವನ್ನು ವ್ಯಕ್ತಪಡಿಸುತ್ತಾ ಧನ್ಯವಾದಗಳನ್ನು ತಿಳಿಸಿದರು[65]. ಅದೇ ದಿನದಂದು ಹೊಳಲು ಗ್ರಾಮದಲ್ಲಿ ಮಂಡ್ಯ ತಾಲೂಕು ಕಾಂಗ್ರೆಸ್ ಸಭೆ ನಡೆಯಿತು. ಹೆಚ್.ಕೆ.ವೀರಣ್ಣಗೌಡ ಮತು ಟಿ.ಸುನಂದಮ್ಮನವರ ಸಭೆಯಲ್ಲಿ ಮಾತನಾಡುತ್ತಾ ಜನಗಳಿಗೆ ಕಾಂಗ್ರೆಸ್ ಸೇರುವಂತೆ ಕೇಳಿಕೊಂಡರು[66]. ದಿನಾಂಕ 24-02-1938 ರಂದು ಮಂಡ್ಯದಲ್ಲಿ ಕಾಂಗ್ರೆಸ್ ಸಮಿತಿಯ ಸಭೆ ನಡೆಯಿತು. ಹೆಚ್.ಕೆ.ವೀರಣ್ಣಗೌಡನವರ ಸಭೆಯಲ್ಲಿ ಮಾತನಾಡುತ್ತಾ ಅಧಿಕ ವೇತನ ಪಡೆಯುತ್ತಿರುವ ಸರಕಾರಿ ಅಧಿಕಾರಿಗಳ ವೇತನವನ್ನು ಕಡಿತಗೊಳಿಸಬೇಕು. ರೈತರಿಗೆ ಅಧಿಕ ಕಂದಾಯವನ್ನು ಹೇರಬಾರದು. ಪ್ರತಿಯೊಬ್ಬರು ಕಾಂಗ್ರೆಸನ್ನು ಬೆಂಬಲಿಸಬೇಕು[67].

ದಿನಾಂಕ 25ನೇ ಫೆಬ್ರವರಿ 1938ರಂದು ಮಂಡ್ಯ ತಾಲೂಕಿನ ಕೆರಗೋಡು ಗ್ರಾಮದಲ್ಲಿ ಕಾಂಗ್ರೆಸ್ ಸಮಿತಿಯ ಸಭೆ ನಡೆಯಿತು. ಮಂಡ್ಯದ ವಕೀಲರಾದ ಚಿಕ್ಕಲಿಂಗಯ್ಯನವರ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ದಿವಾನರ ಸದನದಲ್ಲಿ ರೈತರ ಜೀವನ ಉತ್ತಮವಾಗಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದನ್ನು ಖಂಡಿಸಿದರು. ಚುನಾವಣೆಗಳ ಮೂಲಕ ಅಧಿಕಾರಿಗಳನ್ನು ಬಿಡುಗಡೆ ಮಾಡಬೇಕು ಜನಗಳು ಕಾಂಗ್ರೆಸ್ ಸದಸ್ಯತ್ವನ್ನು ಪಡೆಯುವಂತೆ ಮನವಿ ಮಾಡಿದರು. ಚಿಕ್ಕಲಿಂಗಯ್ಯನವರ ತಮ್ಮ ಅಧ್ಯಕ್ಷತೆಯ ಭಾಷಣದಲ್ಲಿ ಜವಾಬ್ದಾರಿ ಸರಕಾರ ಸ್ಥಾಪಿಸಬೇಕೆಂದರು[68].

ಉಪಸಂಹಾರ : 1937 ರಿಂದ 1938 ಅವಧಿಯಲ್ಲಿ ಮಂಡ್ಯ ಜಿಲ್ಲೆಯ ಅಂದು ಮೈಸೂರು ಜಿಲ್ಲೆಗೆ ಸೇರಿದ್ದು ಮಳವಳ್ಳಿ, ಕೆ.ಆರ್.ಪೇಟೆ ಪಾಂಡವಪುರ (ಅಂದಿನ ಪ್ರಂಚ್‌ರಾಕ್ಸ್) ಮಂಡ್ಯ, ಮದ್ದೂರು, ಶ್ರೀರಂಗಪಟ್ಟಣ ತಾಲೂಕುಗಳಲ್ಲಿ ಸ್ವಾತಂತ್ರ್ಯ ಚಳವಳಿ ಮತ್ತು ಜವಾಬ್ದಾರಿ ಸರ್ಕಾರ ಸ್ಥಾಪನೆಯ ಚಳವಳಿ ಈ ರೀತಿಯಾಗಿ ಆರಂಭವಾಯಿತು. ಅಂದು ಪ್ರತಿ ತಾಲೂಕಿನಲ್ಲಿ, ಪ್ರಮುಖ ಗ್ರಾಮಗಳಲ್ಲಿ ಕಾಂಗ್ರೆಸ್ ಸಭೆಗಳನ್ನು ನಡೆಸುವುದು, ಕರಪತ್ರವನ್ನು ಹಂಚುವುದು. ಮುಖಂಡರಿಂದ ಭಾಷಣ ಮಾಡಿಸುವುದು, ಕಾಂಗ್ರೆಸ್ ಧ್ವಜವನ್ನು ಹಾರಿಸುವುದು, ಪ್ರಮುಖವಾಗಿತ್ತು. ಹಳ್ಳಿಗಳಲ್ಲಿ ನಡೆಯುವ ಸಭೆಯಲ್ಲಿ ದಿವಾನರ ಆಡಳಿತ ವೈಖರಿಯನ್ನು ಟೀಕಿಸುವುದು, ಅಧಿಕ ವೇತನ ಪಡೆದು ರಚನಾತ್ಮಕ ಕಾರ್ಯವನ್ನು ಕೈಗೊಳ್ಳದಿರುವುದನ್ನು ಖಂಡಿಸಿದರು. ಇದು ಅಂತಿಮವಾಗಿ 28-02-1938ರಂದು ಮೈಸೂರು ಕಾಂಗ್ರೆಸ್ ಸ್ಥಾಪನೆಯಾಯಿತು. ಮೈಸೂರು ಕಾಂಗ್ರೆಸ್‌ನ ಪ್ರಥಮ ಅಧಿವೇಶನವನ್ನು ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಶಿವಪುರದಲ್ಲಿ ನಡೆಸಲು ಮುನ್ನಡೆಯಾಯಿತು.

ಕೊನೆ ಟಿಪ್ಪಣಿಗಳು :

1. ಶಿವತಾರಕ್.ಕೆ.ಬಿ., ಕರ್ನಾಟಕದ ಪುರಾತತ್ವ ನೆಲೆಗಳು, ಪು. 563–570
2. ನಾರಾಯಣ.ಎಲ್., ಮಂಡ್ಯ ಜಿಲ್ಲೆಯ ಪ್ರಾಚೀನ ವೈಭವ, ಹೊಂಗಿರಣ, ಸ್ಮರಣ ಸಂಚಿಕೆ, ಪು. 32
3. ಜವರೇಗೌಡ.ದೇ.(ಸಂ.), ಸುವರ್ಣ ಮಂಡ್ಯ ಪು. 28–29
4. ರಾಜೇಗೌಡ.ಹ.ಕ. (ಸಂ.), ಸಿಂಗಾರ ಪು. 144–145
5. ಪಾರ್ಥಸಾರಥಿ.ಟಿ.ಎ. (ಪ್ರ.ಸಂ.), ಭಾರತದ ಗ್ಯಾಸೆಟಿಯರ್ ಕರ್ನಾಟಕ ರಾಜ್ಯ, ಮಂಡ್ಯ ಜಿಲ್ಲೆ, ಪು. 86
6. ಅನಿತಾ. ಎಂ.ಎಸ್, ಮಂಡ್ಯ ಜಿಲ್ಲೆ ಅಮೃತ ಮಹೋತ್ಸವದ ವಿಚಾರ ಸಂಕಿರಣ ಸಮ್ಮೇಳನಾಧ್ಯಕ್ಷರ ಭಾಷಣದ ಪ್ರತಿಯಿಂದ 05.10.2014
7. ವೀರಣ್ಣಗೌಡ.ಹೆಚ್.ಕೆ., ಪ್ರಗತಿಶೀಲ ಮಂಡ್ಯ ಜಿಲ್ಲೆ ಇಕ್ಷುಗಂಗಾ, ಮಂಡ್ಯ ಜಿಲ್ಲಾ ಸಾಹಿತ್ಯ ಸಮ್ಮೇಳನ ನೆನಪಿನ ಸಂಚಿಕೆ, ಪು. 74
8. ಪಾರ್ಥಸಾರಥಿ. ಟಿ.ಎ. (ಸಂ.), ಪೂರ್ವೋಕ್ತ, ಪು. 250
9. ಶಿವರಾಮು. ಎಸ್, ಮಂಡ್ಯ ಜಿಲ್ಲೆಯ ಜನಪರ ಚಳುವಳಿಗಳು, ಪು. 7
10. ಸಿದ್ದರಾಜು ಆಲಕೆರೆ, ಒಡೆಯರ್ ನಾಲ್ವಡಿ ಕೃಷ್ಣರಾಜ ಕಾಲದ ಮಂಡ್ಯ ದರ್ಶನ, ಪು. 30
11. Bhatt.S.C (Ed), The Encyclopaedic District Gazetters of India [Southern Zone] Vol. 3, 1998, p. 614
12. ಲೀಲಾಅಪ್ಪಾಜಿ (ಸಂ.), ಅಮೃತಮಂಡ್ಯ, ಮಂಡ್ಯ ಜಿಲ್ಲೆ ಅಮೃತ ಮಹೋತ್ಸವ ಸ್ಮರಣ ಸಂಪುಟ , ಪು. 163
13. ಕನ್ನಡ ವಿಶ್ವಕೋಶ, ಸಂಪುಟ 12, ಪು. 965
14. ಪಾರ್ಥಸಾರಥಿ.ಟಿ.ಎ.(ಸಂ.), ಮಂಡ್ಯ ಜಿಲ್ಲೆ, ಗ್ಯಾಸೆಟಿಯರ್, ಪು. 10–11
15. ಮಂಡ್ಯ ಜಿಲ್ಲೆಯ ಅಮೃತ ಮಹೋತ್ಸವ ವಿಚಾರ ಸಂಕಿರಣದ ಸಮ್ಮೇಳನಾಧ್ಯಕ್ಷರ ಭಾಷಣದ ಪ್ರತಿಯಿಂದ, 05.06.2014
16. ಪೂರ್ಣಿಮಾ. ಟಿ.ಸಿ. ಕಾವೇರಿ ಮಡಿಲ ಕನಸುಗಾರ ಎಸ್.ಸಿ.ಮಲ್ಲಯ್ಯ, ಪು. 69
17. ಲೀಲಾಅಪ್ಪಾಜಿ (ಸಂ.), ಪೂರ್ವೋಕ್ತ, ಪು. 08.

18. Special Branch Abstract No. 14/38, 2nd April 1938, p. 331

19. Special Branch Abstract No. 46 46/37 4th NoveMber 1937, p. 268

20. ವೆಂಕಟಸ್ವಾಮಿ, ಮಂಡ್ಯ ಜಿಲ್ಲಾ ನಿರ್ಮಾತೃ ಸೋಮನಹಳ್ಳಿ ಚಿಕ್ಕೇಗೌಡ ಮಲ್ಲಯ್ಯ, ಪು. 92

21. Gazette Notification No. R. 5724 L.R. 63-38-12, dated 10th May 1939

22. Mysore Administration Report 1939-40 dated August 27th 1939

23. ಸಾಧ್ವಿಪತ್ರಿಕೆ, ಸಂಪುಟ 04, ಸಂಚಿಕೆ 26, ದಿನಾಂಕ 28.08.1938 ಸೋಮವಾರ, ಪು. 07

24. ಲೀಲಾಅಪ್ಪಾಜಿ (ಸಂ.), ಪೂರ್ವೋಕ್ತ, ಪು. 01

25. ಮುಜಾಪುರ್ ಅಸ್ಸಾದಿ, ಕರ್ನಾಟಕದಲ್ಲಿ ಐಡೆಂಟಿಟಿ ರಾಜಕೀಯ ರೈತ, ರೈತ ಹೋರಾಟ ಹಾಗೂ ಸಾಮಾಜಿಕ ಚಳವಳಿ, ಪು. 52–53

26. ಎಂ.ಜಿ.ನಾಗರಾಜ್, ಕರ್ನಾಟಕ ರೈತ ಚಳವಳಿ–ಸತ್ಯಾಗ್ರಹಗಳು, ಸಂಪುಟ 01, ಪು.37

27. ಸೂರ್ಯನಾಥ ಕಾಮತ (ಸಂ) ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಭಾಗ 1, ಪು.281

28. ದೊರೆಸ್ವಾಮಿ ಎಚ್.ಎಸ್, ಹೋರಾಟದ ದಿಟ್ಟ ಹೆಜ್ಜೆಗಳು ಪು. 02

29. ರಾಜೇಗೌಡ ಹ.ಕ., ಸಿಂಗಾರ (ಕೆ.ಸಿಂಗಾರಿಗೌಡ ಅಭಿನಂದನಾಗ್ರಂಥ) ಪು. 315

30. ವೇಮಗಲ್ ಸೋಮಶೇಖರ್ 'ಮಹಾತ್ಮರ ಹೆಜ್ಜೆ ಗುರುತುಗಳು' ಪು. 74

31. ವೀರಣ್ಣಗೌಡ ಎಚ್.ಕೆ., ಬದುಕು–ಮೆಲುಕು, ಪು. 145–151

32. ಲೀಲಾ ಅಪ್ಪಾಜಿ (ಸಂ.), ಪೂರ್ವೋಕ್ತ, ಪುಟ–47–52

33. ಸಿದ್ದವ್ವನಹಳ್ಳಿ ಕೃಷ್ಣಶರ್ಮ (ಸಂ), ಗಾಂಧೀ ಮತ್ತು ಕರ್ನಾಟಕ, ಪು. 241

34. ಚಿನ್ನಸ್ವಾಮಿ ಸೋಸಲೆ.ಎನ್., ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರು, ಪು 131

35. ಪೂರ್ಣಿಮಾ ಟಿ.ಸಿ., ಪ್ರತಿಭಾವಂತ ಸಂಸದೀಯ ಪಟುಗಳ ಬದುಕು–ಬರಹ ಮಾಲೀಕ ಎಸ್.ಸಿ.ಮಲ್ಲಯ್ಯ, ಪು. 05

35ಎ. ತಿಪ್ಪೇಸ್ವಾಮಿ.ಜಿ.ಆರ್, ಜಿ.ವೆಂಕಟಯ್ಯ, ಪ್ರಚಾರ ಪುಸ್ತಕ ಮಾಲೆ, 295, ಪು. 2

36. ಸಾಧ್ವಿ ಪತ್ರಿಕೆ, ಸಂಪುಟ 01, ಸಂಚಿಕೆ 17, ದಿನಾಂಕ: 15–06.1936 ಸೋಮವಾರ, ಪು. 02

37. ಸಂಧ್ಯಾರೆಡ್ಡಿ, ಪ್ರತಿಭಾವಂತ ಸಂಸದೀಯ ಪಟುಗಳು ಬದುಕು–ಬರಹ ಮಾಲಿಕೆ ಕೆ.ಸಿ.ರೆಡ್ಡಿ : ಪು. 07

38. ರಾಜೇಗೌಡ ಹ.ಕ. (ಸಂ.), ಪೂರ್ವೋಕ್ತ, ಪು. 315

39. ದಕ್ಷಿಣ ಮೂರ್ತಿ.ಜಿ., ಟಿ.ಸಿದ್ದಲಿಂಗಯ್ಯ, ಪ್ರತಿಭಾವಂತ ಸಂಸದೀಯ ಪಟುಗಳು, ಬದುಕು–ಬರಹ–ಮಾಲಿಕೆ, ಪು. 54

40. Special Branch Abstract No. 34/37, 20th August 1937, p. 64

41. Special Branch Abstract No. 46/37, 13th November 1937, p. 235

42. Ibid, p. 235

43. Ibid, p. 235

44. Special Branch Abstract -46/37, 4th November 1937, p. 267

45. ಸಾಧ್ವಿ ದಿನಪತ್ರಿಕೆ, 20–11–1937, ಪು. 01

46. Special Branch Abstract No. 46/37, 20th November 1937, no. 252

47. Special Branch Abstract No. 46/37, 4th November 1937, p. 268

48. Special Branch Abstract No. 49/37, 4th December 1937, p. 290

49. Special Branch Abstract No. 50/37, 11th December 1937, p. 314

50. Special Branch Abstract No. 1/38, 1st January 1938, p. 12

51. Ibid, p. 13

52. Ibid, p. 13

53. ರಾಜೇಗೌಡ (ಸಂ.), ಮೇಲೆ ಉದ್ಧರಿಸಿದ ಗ್ರಂಥ, ಪು. 339

54. Special Branch Abstract No. 4/38, 22nd January 1938, p. 13

55. Special Branch Abstract No. 6/38, 5th Feb. 1938 p. 119

56. Special Branch Abstract No. 6/38, 5th Feb. 1938, p. 12

57. Special Branch Abstract No. 7/38, 12th Feb. 1938, p. 138

58. Special Branch Abstract No. 6/38, 5th Feb. 1938, p. 120

59. Special Branch Abstract No. 7/38, 12th 1938, p.153

60. Special Branch Abstract No. 9/38, 26th Feb. 1938, p. 191

61. Special Branch Abstract No. 7/38, 12th Feb. 1938, p. 134

62. Special Branch Abstract No. 9/38, 26th Feb 1938, p. 193

63. Special Branch Abstract No. 9/38, 26th Feb 1938, p. 195

64. Ibid, p. 195

65. Ibid, p. 222

66. Special Branch Abstract No. 10/38, 5th March 1938, p. 223

67. Ibid, p. 223

68. Special Branch Abstract No. 10/38, 5th March 1938, p. 224

ಅಧ್ಯಾಯ–3

ಸ್ವಾತಂತ್ರ್ಯ ಚಳುವಳಿಯಲ್ಲಿ ಮಂಡ್ಯ ಜಿಲ್ಲೆಯ ಪಾತ್ರ

ಶಿವಪುರ ಧ್ವಜ ಸತ್ಯಾಗ್ರಹ (1938)

ಶಿವಪುರ ರಾಷ್ಟ್ರಕೂಟದ ಹಿನ್ನಲೆ : 1938 ರ ಫೆಬ್ರವರಿ ತಿಂಗಳ ಅಂತ್ಯದಲ್ಲಿ ಗುಜರಾತ್‌ನ ಹರಿಪುರದಲ್ಲಿ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ 51ನೆಯ ಅಧಿವೇಶನ ಸುಭಾಷ್‌ಚಂದ್ರ ಬೋಸರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಅಧಿವೇಶನದಲ್ಲಿ ದೇಶೀಯ ಸಂಸ್ಥಾನಗಳಲ್ಲಿನ ರಾಜಕೀಯ ಚಟುವಟಿಕೆಗಳಿಗೆ ಅಖಿಲಭಾರತ ರಾಷ್ಟ್ರೀಯ ಕಾಂಗ್ರೆಸ್ ಹೆಸರನ್ನು ಬಳಸಬಾರದು ಎಂಬ ನಿರ್ಣಯವನ್ನು ಕೈಗೊಳ್ಳಲಾಯಿತು. ಆಗ ದೇಶೀಯ ಸಂಸ್ಥಾನಗಳ ಪ್ರತಿನಿಧಿಗಳೆಲ್ಲರೂ ಸಂಘಟಿತರಾಗಿ ಈ ನಿರ್ಣಯವನ್ನು ವಿರೋಧಿಸಿದರು. ಸಂಸ್ಥಾನಗಳ ಪ್ರತಿನಿಧಿಗಳ ಜನರ ಉದ್ದೇಶವನ್ನು ಪ್ರಬಲವಾಗಿ ಸಮರ್ಥಿಸಿಕೊಂಡಾಗ ಮೂಲ ನಿರ್ಣಯದಲ್ಲಿ ಅಲ್ಪ ತಿದ್ದುಪಡಿಯಾಯಿತು. "ರಾಷ್ಟ್ರೀಯ ಕಾಂಗ್ರೆಸ್ ಸಂಸ್ಥೆಯು ಪ್ರತ್ಯೇಕವಾಗಿ ದೇಶೀಯ ಸಂಸ್ಥಾನಗಳ ರಾಜಕೀಯದಲ್ಲಿ ಕೈ ಹಾಕುವುದಿಲ್ಲ. ಆದರೆ ಕಾಂಗ್ರೆಸ್ ಸದಸ್ಯರು ವೈಯಕ್ತಿಕವಾಗಿ ಭಾಗವಹಿಸಬಹುದು, ದೇಶೀಯ ಸಂಸ್ಥಾನಗಳು ತಮ್ಮ ರಾಜಕೀಯ ಚಟುವಟಿಕೆಗಳಿಗಾಗಿ ಸ್ವತಂತ್ರ ರಾಜಕೀಯ ಸಂಸ್ಥೆಗಳನ್ನು ಸ್ಥಾಪಿಸಿಕೊಳ್ಳಬಹುದು" ಎಂದು ಒಪ್ಪಿಗೆ ನೀಡಿತು[1].

ಹೀಗೆ ಅನೇಕ ವರ್ಷಗಳಿಂದ ಕಾಂಗ್ರೆಸ್ ಸಮಿತಿಗಳನ್ನು ರಚಿಸಿಕೊಂಡು ಬರುತ್ತಿದ್ದ ಮೈಸೂರು ಕಾಂಗ್ರೆಸ್ಸಿನವರು ರಚನಾತ್ಮಕ ಕಾರ್ಯಗಳನ್ನು ನಡೆಸುವುದಕ್ಕಾಗಿ ತಮ್ಮದೇ ಆದ ಪ್ರತ್ಯೇಕ ಸಂಸ್ಥೆಯನ್ನು **"ಮೈಸೂರು ಕಾಂಗ್ರೆಸ್"** ಎಂಬ ಹೆಸರಿನಲ್ಲಿ ಸ್ಥಾಪಿಸಬೇಕೆಂದು 1938ನೆಯ ಫೆಬ್ರವರಿ ತಿಂಗಳಲ್ಲಿ ನಿರ್ಧರಿಸಿದರು. ರಾಷ್ಟ್ರೀಯ ಕಾಂಗ್ರೆಸ್‌ನ ಹರಿಪುರ ಅಧಿವೇಶನದ ನಿರ್ಣಯದಂತೆ ಮೈಸೂರು ಸಂಸ್ಥಾನದಲ್ಲಿ ಒಂದು ರಾಜಕೀಯ ಸಂಸ್ಥೆಯನ್ನು ಸ್ಥಾಪಿಸಲು ಮೈಸೂರು ಕಾಂಗ್ರೆಸ್ ಬೋರ್ಡ್ ಸದಸ್ಯರು ಮೈಸೂರಿನಲ್ಲಿ ಮಿರ್ಲೆ ಲಕ್ಷ್ಮೀನಾರಾಯಣರಾವ್ ಅವರ ಮನೆಯಲ್ಲಿ ದಿನಾಂಕ 28.02.1938 ರಂದು ಸಭೆ ಸೇರಿದರು. ಟಿ.ಸಿದ್ದಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯ ಫಲಿತವಾಗಿ **"ಮೈಸೂರು ಕಾಂಗ್ರೆಸ್"** ಸ್ಥಾಪನೆಯಾಯಿತು. ಅಧ್ಯಕ್ಷರಾಗಿ ಟಿ.ಸಿದ್ದಲಿಂಗಯ್ಯ, ಕಾರ್ಯದರ್ಶಿಯಾಗಿ ವಿ.ಎಸ್.ನಾರಾಯಣರಾವ್ ಚುನಾಯಿತರಾದರು. ಈ ಸಂಸ್ಥೆಯ ಪ್ರಾರಂಭೋತ್ಸವವವನ್ನು ಸೇಲಂನ ವೆಂಕಟಪ್ಪ ಚೆಟ್ಟಿಯಾರ್ ಅವರು ನೆರವೇರಿಸಿದರು. ಮೈಸೂರು ಕಾಂಗ್ರೆಸ್‌ನ ನಿರ್ಣಯದಂತೆ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸುವುದು ಮುಖ್ಯಗುರಿಯಾಗಿತ್ತು ಹಾಗೂ ರಾಷ್ಟ್ರೀಯ ಕಾಂಗ್ರೆಸ್‌ನ ತ್ರಿವರ್ಣಧ್ವಜವನ್ನೇ ಮೈಸೂರು ಕಾಂಗ್ರೆಸ್‌ನ ಧ್ವಜವನ್ನಾಗಿ ಸಭೆ

[illegible]

[illegible]

[illegible]

[illegible]

ಅಂಗೀಕರಿಸಿತು. ಈ ಸಭೆಯಲ್ಲಿ ಸಂಸ್ಥಾನದ ಎಂಟು ಜಿಲ್ಲೆಗಳಿಂದ ಪ್ರತಿನಿಧಿಗಳು ಹಾಜರಿದ್ದರು. ಬೆಂಗಳೂರಿನಲ್ಲಿ ಕಾಂಗ್ರೆಸ್ ಕಛೇರಿ ಆರಂಭವಾಯಿತು. ಅಂದು ಮೈಸೂರು ಕಾಂಗ್ರೆಸ್‌ನ ಅಧಿಕೃತವಾಗಿ ಸ್ಥಾಪನೆಯಾಯಿತು[2]. ಮೈಸೂರು ಕಾಂಗ್ರೆಸನ್ನು ಸರಕಾರ ಮಾನ್ಯ ಮಾಡಿ, ಸುಧಾರಣಾ ಸಮಿತಿಯಲ್ಲಿ ಅದಕ್ಕೆ ಪ್ರಾತಿನಿಧ್ಯ ಕೊಡಬೇಕೆಂದೂ, ಜವಾಬ್ದಾರಿ ಸರಕಾರ ಸ್ಥಾಪನೆಯೇ ಸುಧಾರಣೆ ಸಮಿತಿಯ ಅಂತಿಮ ಗುರಿಯೆಂದು ಸರ್ಕಾರ ಘೋಷಿಸಬೇಕೆಂದೂ ಮನವಿ ಮಾಡಲು ಮೈಸೂರು ಕಾಂಗ್ರೆಸಿನವರು ನಿರ್ಧರಿಸಿದರು. 1ನೇ ಮಾರ್ಚ್ 1938ರಂದು ಕಾಂಗ್ರೆಸ್ ನಾಯಕರಲ್ಲೊಬ್ಬರಾದ ಕೆ.ಟಿ.ಭಾಷ್ಯಂರವರು ದಿವಾನ್ ಮಿರ್ಜಾ ಇಸ್ಮಾಯಿಲ್‌ರವರೊಡನೆ ಮಾತುಕತೆ ನಡೆಸಿದರು. ನಂತರ ಕಾಂಗ್ರೆಸ್ ಅಧ್ಯಕ್ಷರಾದ ಟಿ.ಸಿದ್ಧಲಿಂಗಯ್ಯನವರು ಊಟಿ(ಉದಕಮಂಡಲ)ಯಲ್ಲಿದ್ದ ದಿವಾನರನ್ನು ಮಾರ್ಚ್5 ಮತ್ತು 6, 1938 ರಂದು ಎರಡು ಬಾರಿ ಭೇಟಿ ಮಾಡಿದರು. ಸರ್ಕಾರದೊಡನೆ ಸಮಾಲೋಚನೆ ನಡೆಸಿ ಅಂತಿಮ ಒಪ್ಪಂದಕ್ಕೆ ಬರುವ ಪ್ರಯತ್ನ ನಡೆಸಿದರು. ಕಾಂಗ್ರೆಸಿಗರ ಮನವಿಗೆ ದಿವಾನರು ಒಪ್ಪಲಿಲ್ಲ. ಸರ್ಕಾರದಲ್ಲಿ ಹಂತ ಹಂತವಾಗಿ ಸುಧಾರಣೆಗಳನ್ನು ಜಾರಿಗೆ ತರುತ್ತಾ ಜವಾಬ್ದಾರೀ ಸರ್ಕಾರ ಸ್ಥಾಪಿಸುವುದೇ ಸರ್ಕಾರದ ಪ್ರಮುಖ ಉದ್ದೇಶವೆಂಬುದನ್ನು ಸ್ಪಷ್ಟಪಡಿಸಬೇಕೆಂದು ಮನವಿ ಮಾಡಿದರು. ಅದನ್ನು ದಿವಾನರು ಒಪ್ಪದೇ ಹೋದಾಗ, ದಿವಾನರ ನಡವಳಿಕೆಯನ್ನು ಕಟುವಾಗಿ ಟೀಕಿಸಲು ಆರಂಭಿಸಿದರು[3].

ಈ ಮಧ್ಯೆ ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಸಮಿತಿಗಳನ್ನು ಮೈಸೂರು ಕಾಂಗ್ರೆಸ್‌ನ ಆಶ್ರಯದಲ್ಲಿ ರಚಿಸಲು ಆರಂಭಿಸಲಾಯಿತು, ಅಖಿಲ ಭಾರತ ಕಾಂಗ್ರೆಸ್ಸಿನ ಪ್ರಾಥಮಿಕ ಸದಸ್ಯರಾಗಿರುವವರೆಲ್ಲರೂ ಮೈಸೂರು ಕಾಂಗ್ರೆಸ್‌ನ ಪ್ರವೇಶ ಪತ್ರಕ್ಕೆ ರುಜುಮಾಡಿ ಸದಸ್ಯರಾಗಲು ಅವಕಾಶ ನೀಡಿದರು. ಪ್ರತಿಯೊಂದು ಸಮಿತಿಯಲ್ಲಿಯೂ ಅಧ್ಯಕ್ಷರು ಕಾರ್ಯನಿರ್ವಾಹಕರು ಇವರುಗಳನ್ನೊಳಗೊಂಡ ಕಾರ್ಯಕಾರಿ ಸಮಿತಿ ನೇಮಕ ಮಾಡಲಾಯಿತು. ಅಖಿಲ ಭಾರತ ಕಾಂಗ್ರೆಸ್‌ನ ಕಾರ್ಯ ನಿರ್ವಾಹಕರು ಮೈಸೂರು ಕಾಂಗ್ರೆಸ್ ಸಮಿತಿಗಳು ಕಾರ್ಯನಿರ್ವಾಹಕರಾಗಲು ಅಡೆತಡೆಗಳನ್ನು ನಿವಾರಿಸಿದರು. ಜಿಲ್ಲಾ ಕಾಂಗ್ರೆಸ್ ಸಮಿತಿಗಳಿಗೆ ಪ್ರವೇಶಪತ್ರವನ್ನು ಕಳುಹಿಸಲಾಯಿತು. ಜಿಲ್ಲೆಗಳಲ್ಲಿ ಕಾರ್ಯಕ್ರಮದ ವರದಿಯನ್ನು ಕೇಂದ್ರ ಕಛೇರಿಗೆ ಕಳುಹಿಸುವ ವ್ಯವಸ್ಥೆ ಮಾಡಿದರು[4]. ಅಖಿಲ ಭಾರತ ಕಾಂಗ್ರೆಸ್ ಹಾಗೂ ಮೈಸೂರು ಕಾಂಗ್ರೆಸ್‌ನ ಸದಸ್ಯರ ನೋಂದಣಿ ಹಾಗೂ ಮೈಸೂರು ಕಾಂಗ್ರೆಸಿನ ಧ್ಯೇಯ ಧೋರಣೆಗಳನ್ನು ಸಂಸ್ಥಾನದಾದ್ಯಂತ ಪ್ರಚಾರ ಕಾರ್ಯ ಆರಂಭಿಸಿದರು, ಈ ಸಂಸ್ಥೆಗೆ ಮಹಾರಾಜರ ಅಂಗೀಕಾರ ಪಡೆಯುವುದು, ಸಂದೇಹಾಸ್ಪದವಾಗಿ ವರ್ತಿಸುತ್ತಿರುವ ಸರ್ಕಾರದವರನ್ನು ಯಾವ ರೀತಿ ಎದುರಿಸಬೇಕೆಂಬುದನ್ನು ಮತ್ತು ಸರ್ಕಾರದ ದಬ್ಬಾಳಿಕೆಯನ್ನು

ಪ್ರತಿಭಟಿಸಲು ಕೈಗೊಳ್ಳುವ ಕ್ರಮಗಳ ಬಗ್ಗೆ ನಿರ್ಧರಿಸಲು ಹಾಗೂ ಆದಷ್ಟು ಬೇಗ ಒಂದು ರಾಷ್ಟ್ರಕೂಟವನ್ನು ಸೇರಿಸಲು ಉದ್ದೇಶಿಸಿತು. ಈ ಎಲ್ಲಾ ವಿಚಾರಗಳ ವಿನಿಮಯಕ್ಕಾಗಿ ಮೈಸೂರಿನಲ್ಲಿ ಸಾಹುಕಾರ್ ಚನ್ನಯ್ಯನವರ ಮನೆಯಲ್ಲಿ ಪ್ರಮುಖ ಸಭೆ ಸೇರಿದರು[5]. ಆ ಸಭೆಯಲ್ಲಿ ಪಿ.ತಿರುಮಲೇಗೌಡ, ಇಂಡುವಾಳು ಹೊನ್ನಯ್ಯ, ಪಾಲಹಳ್ಳಿ ಸೀತಾರಾಮಯ್ಯ, ಎಚ್.ಕೆ.ವೀರಣ್ಣಗೌಡ ಮೊದಲಾದವರು ಹಾಜರಿದ್ದರು. ಈ ಸಭೆಯಲ್ಲಿ ಏಪ್ರಿಲ್ ಮಧ್ಯಭಾಗದಲ್ಲಿ ಒಂದು ರಾಷ್ಟ್ರಕೂಟವನ್ನು ನಡೆಸಬೇಕೆಂದು ತೀರ್ಮಾನವಾಯಿತು. ರಾಷ್ಟ್ರಕೂಟದ ಸಮಾರಂಭವನ್ನು ನಡೆಸುವ ಸ್ಥಳದ ಬಗ್ಗೆ ವಿಫುಲವಾದ ಚರ್ಚೆಯಾಯಿತು. ಪಶ್ಚಿಮವಾಹಿನಿ, ಶ್ರೀರಂಗಪಟ್ಟಣ ಅಥವಾ ನಂಜನಗೂಡಿನಲ್ಲಿ ನಡೆಸಬೇಕೆಂದರೆ ಯಾರು ಜವಾಬ್ದಾರಿಯನ್ನು ವಹಿಸಿಕೊಳ್ಳಲು ಸಿದ್ಧರಾಗಲಿಲ್ಲ. ಶ್ರೀರಂಗಪಟ್ಟಣ ಅಥವಾ ಪಶ್ಚಿಮವಾಹಿನಿಯಲ್ಲಿ ಏರ್ಪಡಿಸುವುದಾದರೆ ಅಡ್ವೋಕೇಟ್ ವೃತ್ತಿ ಅವಲಂಬಿಸಿದ್ದ ಎ.ಜಿ.ಬಂದೀಗೌಡರು ತಮ್ಮ ವೃತ್ತಿಯನ್ನು ಒಂದೂವರೆ ತಿಂಗಳು ಬಿಟ್ಟು ಬರಲು ಸಾಧ್ಯವಿರಲಿಲ್ಲ. ಅದೇ ರೀತಿಯಾಗಿ ನಂಜನಗೂಡಿನಲ್ಲಿ ಕೆ.ವಿಶ್ವೇಶ್ವರಗೌಡರು ಒಂದೂವರೆ ತಿಂಗಳು ಕೆಲಸ ನಿರ್ವಹಿಸುವುದು ಸಾಧ್ಯವಿಲ್ಲವೆಂದುಬಿಟ್ಟರು. ನೀರು ಮತ್ತು ವಸತಿ ಸೌಕರ್ಯ ಹೊಂದಿದ್ದ ಶ್ರೀರಂಗಪಟ್ಟಣ, ಪಶ್ಚಿಮವಾಹಿನಿ, ನಂಜನಗೂಡಿನಲ್ಲಿ ಸಭೆ ನಡೆಸಲು ಸಾಧ್ಯವಾಗಲಿಲ್ಲ. ಈ ಸಂದರ್ಭದಲ್ಲಿ ಹೆಚ್.ಕೆ.ವೀರಣ್ಣಗೌಡರು ತಮಗೆ ಅವಕಾಶ ನೀಡಬೇಕೆಂದು ಮನವಿ ಮಾಡಿದರು[6].

ಅಧಿವೇಶನ ಮದ್ದೂರಿನ ಶಿವಪುರದಲ್ಲಾಗುವುದಾದರೆ ತಾವು ಆ ಜವಾಬ್ದಾರಿ ವಹಿಸಿಕೊಳ್ಳುವುದಾಗಿ ಪಿ. ತಿರುಮಲೇಗೌಡರು ಮುಂದಾದರು, ಅವರ ಜೊತೆಗೆ ಎಚ್.ಹೊನ್ನಯ್ಯ, ಎಚ್.ಕೆ.ವೀರಣ್ಣಗೌಡ, ಪಿ.ಎನ್ ಜವರಪ್ಪಗೌಡರು ಸಿದ್ಧರಾದರು. ಅವರು ಮಂಡ್ಯ ಜಿಲ್ಲೆಯ ಪ್ರಮುಖ ಮುಖಂಡರಾಗಿದ್ದರು. ಇರ್ವಿನ್ ನಾಲಾ ರೈತರ ಚಳುವಳಿಯನ್ನು ಯಶಸ್ವಿಯಾಗಿ ಮಾಡಿ ಅನುಭವ ಪಡೆದಿದ್ದರು. ಶಿವಪುರ ಗ್ರಾಮವು ಬೆಂಗಳೂರು ಮತ್ತು ಮೈಸೂರು ಮಾರ್ಗ ಮಧ್ಯದಲ್ಲಿದ್ದ ಪಕ್ಕದಲ್ಲೇ ಶಿಂಷಾನದಿ ಹರಿಯುತ್ತಿರುವುದರಿಂದ ನೀರಿನ ಹಾಗೂ ಸಾರಿಗೆ ಸೌಕರ್ಯಕ್ಕೆ ಅನುಕೂಲಕರವಾದ ಸ್ಥಳವಾಗಿತ್ತು. ಶಿವಪುರದ ಹೆಸರನ್ನು ಆಯ್ಕೆ ಮಾಡುವಾಗ ಆ ವರ್ಷ ನಡೆದ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದ ಗುಜರಾತಿನ ಹರಿಪುರ ಹೆಸರಿನ ಛಾಯೆಯೂ ಇದೆ ಎಂಬುದು ಮುಖಂಡರ ಗಮನದಲ್ಲಿ ಬಂದಿರಬಹುದು. ಸರ್ಕಾರಿ ಜಮೀನಿಗಿಂತ ಖಾಸಗಿ ಜಮೀನಿನಲ್ಲಿ ರಾಷ್ಟ್ರಕೂಟ ಸೇರಿಸುವುದು ಸೂಕ್ತವೆಂದು ಭಾವಿಸಿದರು. ಸಭೆಯಲ್ಲಿದ್ದ ಶಿವಪುರ ಜಮೀನುದಾರರಾದ ಪಿ.ತಿರುಮಲೇಗೌಡರು ಅವರ ಮನೆಗೆ ಹೊಂದಿಕೊಂಡಂತೆ ವಿಶಾಲವಾದ ಜಮೀನು ಬಿಟ್ಟುಕೊಡಲು

ಒಪ್ಪಿಕೊಂಡರು. 1938ನೇ ಇಸವಿಯ ಏಪ್ರಿಲ್ ತಿಂಗಳಲ್ಲಿ ಶಿವಪುರದಲ್ಲಿ ಮೈಸೂರು ಕಾಂಗ್ರೆಸ್‌ನ ಪ್ರಥಮ ಅಧಿವೇಶನವನ್ನು ನಡೆಸಲು ತೀರ್ಮಾನವಾಯಿತು[7].

ಶಿವಪುರ ರಾಷ್ಟ್ರಕೂಟದ ಸಮಿತಿಯ ರಚನೆ : 11ನೇ ಮಾರ್ಚ್ 1938ರಂದು ಮೈಸೂರಿನ ಟಿ.ಗೋಪಾಲಕೃಷ್ಣಶೆಟ್ಟಿಯವರ ಮನೆಯಲ್ಲಿ ಮೈಸೂರು ಕಾಂಗ್ರೆಸ್ ಬೋರ್ಡ್ ಸಭೆ ನಡೆಯಿತು. ಸಭೆಯಲ್ಲಿ ದಿನಾಂಕ 7 ಮತ್ತು 8ನೇ ಏಪ್ರಿಲ್ 1938ರಂದು ಮಂಡ್ಯ ಜಿಲ್ಲೆಯ (ಅಂದಿನ ಮೈಸೂರು ಜಿಲ್ಲೆ) ಮದ್ದೂರು ತಾಲ್ಲೂಕಿನ ಶಿವಪುರದ ಶಿಂಷಾ ನದಿ ತೀರದಲ್ಲಿ ಅಖಿಲ ಮೈಸೂರು ಕಾಂಗ್ರೆಸ್‌ನ ಪ್ರಥಮ ಅಧಿವೇಶನವನ್ನು ನಡೆಸಬೇಕೆಂದು ನಿರ್ಧಾರವಾಯಿತು. ಅದಕ್ಕಾಗಿ ಎಚ್.ಕೆ.ವೀರಣ್ಣಗೌಡ ಸಂಯೋಜಕರಾಗಿ, ಎಸ್.ಸಿ.ದಾಸಪ್ಪ, ಎ.ಜಿ.ಬಂದೀಗೌಡ, ಜೋಗಿಗೌಡ ಸದಸ್ಯರಾಗಿ ಆಯ್ಕೆಯಾದರು. ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಸಾಹುಕಾರ್ ಚನ್ನಯ್ಯ, ಎಚ್.ಸಿ.ದಾಸಪ್ಪ ಮತ್ತು ತಿರುಮಲಗೌಡ ಉಪಾಧ್ಯಕ್ಷರಾಗಿದ್ದರು. ಎಚ್.ಕೆ.ವೀರಣ್ಣಗೌಡ ಕಾರ್ಯದರ್ಶಿಗಳಾದರು. ಜೋಗೀಗೌಡ ಖಜಾಂಚಿಯಾಗಿ ಆಯ್ಕೆಯಾದರು. ಎಂ.ಎನ್.ಜೋಯಿಸ್ (ಜೆ.ಒ.ಸಿ.), ಎಚ್.ಹೊನ್ನಯ್ಯ ವಿ.ವೆಂಕಟಗಿರಿಶೆಟ್ಟಿ, ಎನ್.ಪಿ.ಲಿಂಗೇಗೌಡ, ಪಿ.ತಮ್ಮಯ್ಯ, ಯು.ಚನ್ನೇಗೌಡ, ಎಂ.ವಿ.ಶ್ರೀನಿವಾಸ ಅಯ್ಯಂಗಾರ್ ಸ್ವಾಗತ ಸಮಿತಿಯ ಸದಸ್ಯರಾಗಿ ಆಯ್ಕೆಯಾದರು[8]. ಮೈಸೂರು ಕಾಂಗ್ರೆಸ್ ಶಿವಪುರ ಅಧಿವೇಶನವನ್ನು 1938ರ ಏಪ್ರಿಲ್ 7 ಮತ್ತು 8ನೇ ತಾರೀಖುಗಳಂದು ನಡೆಯುವುದೆಂದು ನಿಗದಿಪಡಿಸಲಾಗಿತ್ತು. 8, 9 ಮತ್ತು 10ನೇ ತಾರೀಖು ಮೈಸೂರು ಸಂಸ್ಥಾನದ ವಕೀಲರುಗಳು 14ನೇ ಸಮ್ಮೇಳನವು ಮಂಡ್ಯದ ಜಯಚಾಮರಾಜೇಂದ್ರ ಟೌನ್‌ಹಾಲಿನಲ್ಲಿ ನಡೆಯುವುದರಿಂದ ಏಪ್ರಿಲ್ 11, 12 ಮತ್ತು 13ನೇ ತಾರೀಖು ರಾಷ್ಟ್ರಕೂಟವು ನಡೆಯುವುದೆಂದು ಮೈಸೂರು ಕಾಂಗ್ರೆಸ್ಸಿನ ವರ್ಕಿಂಗ್ ಕಮಿಟಿಯು ನಿರ್ಧರಿಸಿತು[9].

ಶಿವಪುರ ರಾಷ್ಟ್ರಕೂಟದ ಪ್ರಚಾರಕ್ಕಾಗಿ ಪತ್ರಿಕಾ ಪ್ರಕಟಣೆ : ಸ್ವಾತಂತ್ರ್ಯ ಹಾಗೂ ಜವಾಬ್ದಾರಿಯುತ ಸರ್ಕಾರ ಸ್ಥಾಪನೆಗಾಗಿ ನಡೆಯುವ ಚಳುವಳಿ ಧ್ವಜ ಸತ್ಯಾಗ್ರಹದ ರೂಪದಲ್ಲಿರುವಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜಾರಿಗೊಳಿಸಬೇಕಾಯಿತು. ಇದನ್ನು ಕಾರ್ಯಗತಗೊಳಿಸಲು ನಿರ್ಧಾರವಾದಂದಿನಿಂದ ಕೇವಲ 5–6 ವಾರಗಳಷ್ಟೇ ಅವಧಿ ಉಳಿಯಿತು. ಶಿವಪುರ ರಾಷ್ಟ್ರಕೂಟದ ಸಿದ್ಧತೆ ಕಾರ್ಯ ಭರದಿಂದ ಆರಂಭವಾಯಿತು. ಸಂಸ್ಥಾನದಾದ್ಯಂತ ಜನರಿಗೆ ವಿಷಯ ತಿಳಿಸಲು ಸಂಯುಕ್ತ ಕರ್ನಾಟಕ, ನವಜೀವನ, ತಾಯಿನಾಡು, ಇಂಡಿಯನ್ ಎಕ್ಸ್‌ಪ್ರೆಸ್, ದಿ ಹಿಂದೂ, ಸಾಧ್ವಿ, ಕಂಠೀರವ ಪತ್ರಿಕೆಗಳಲ್ಲಿ ರಾಷ್ಟ್ರಕೂಟದ ವಿವರಗಳನ್ನು ಪ್ರಕಟಿಸಲಾಯಿತು. ಟಿ.ಸಿದ್ದಲಿಂಗಯ್ಯನವರು ಪತ್ರಿಕಾ ಹೇಳಿಕೆಯನ್ನು ನೀಡಿದರು. ಪ್ರಾಪ್ತ ವಯಸ್ಕರಾದ ಯಾವ ಮೈಸೂರಿನ ಪ್ರಜೆಯಾದರೂ ಶಿವಪುರ ರಾಷ್ಟ್ರಕೂಟದ

ಪ್ರತಿನಿಧಿಯಾಗಬಹುದೆಂದು ತಿಳಿಸಿದರು ಹಾಗೂ ರಾಷ್ಟ್ರಕೂಟದ ಪ್ರತಿನಿಧಿಗಳ ಮತ್ತು ವಿಷಯ ನಿಯಮಾಕ ಸಮಿತಿಯ ಸದಸ್ಯರ ಆಯ್ಕೆಗೆ ಸಂಬಂಧಿಸಿದಂತೆ ಒಂದು ಪ್ರಕಟಣೆ ಹೀಗಿತ್ತು. "ಭಾರತ ರಾಷ್ಟ್ರೀಯ ಮಹಾಸಭೆ ಹಾಗೂ ಮೈಸೂರು ಕಾಂಗ್ರೆಸ್ಸಿನ ಸದಸ್ಯರಾದ 18 ವರ್ಷದ ಮೇಲ್ಪಟ್ಟ ವಯಸ್ಸಿನ ಸ್ತ್ರೀ ಪುರುಷರೆಲ್ಲರೂ ಶಿವಪುರ ರಾಷ್ಟ್ರಕೂಟದ ಪ್ರತಿನಿಧಿಗಳಾಗಬಹುದು. ಪ್ರತಿನಿಧಿಗಳ ಶುಲ್ಕ ಒಂದು ರೂಪಾಯಿ ಇದ್ದು, ಮಾರ್ಚ್ 31ರೊಳಗಾಗಿ ಮೈಸೂರು ಕಾಂಗ್ರೆಸ್ ಕಛೇರಿಗೆ ಆ ಹಣವು ಬಂದು ಮುಟ್ಟಬೇಕು. ಅದರ ಜೊತೆಗೆ ಇನ್ನೂ ಕಾಂಗ್ರೆಸ್ ಸದಸ್ಯರಾಗದಿದ್ದವರು ನಾಲ್ಕಾಣೆಯನ್ನು ಸೇರಿಸಿ ಕಳುಹಿಸಿಕೊಡಬೇಕು" ಎಂದು ಸ್ವಾಗತ ಸಮಿತಿ ಪ್ರಕಟಿಸಿತು[10]. ರಾಷ್ಟ್ರಕೂಟದ ಬಗ್ಗೆ ಸಾಧ್ವಿ ಪತ್ರಿಕೆಯಲ್ಲಿ ಈ ರೀತಿಯಾದ ಪ್ರಕಟಣೆ ನೀಡಲಾಗಿತ್ತು. ಅದೆಂದರೆ "ಶಿವಪುರಕ್ಕೆ ಬನ್ನಿರಿ" ಎಂಬ ಶೀರ್ಷಿಕೆಯ ಅಡಿಯಲ್ಲಿ ಮದ್ದೂರು ತಾಲ್ಲೂಕು ಶಿವಪುರದಲ್ಲಿ ಏಪ್ರಿಲ್ ತಿಂಗಳು 11, 12 ಮತ್ತು 13 ನೇ ತಾರೀಖುಗಳಲ್ಲಿ ನಡೆಯುವ ರಾಷ್ಟ್ರಕೂಟಕ್ಕೆ ತಪ್ಪದೇ ಬನ್ನಿರಿ. ಸ್ವಾಗತ ಸಮಿತಿಯ ಸದಸ್ಯರಾಗಿಯೂ, ಪ್ರತಿನಿಧಿಗಳಾಗಿಯೂ, ಸ್ವಯಂ ಸೇವಕರಾಗಿಯೂ, ಸೇವಕಿಯರಾಗಿಯೂ ಸೇರಿರಿ. ದೇಶ ಸೇವೆಗೆ ತನು ಮನ ಧನಗಳಿಂದ ಸಹಾಯ ಮಾಡಿರಿ[11].

14 ನೇ ಮಾರ್ಚ್ 1938ರಂದು ಮದ್ದೂರಿನ ಪಿ.ತಿರುಮಲೇಗೌಡರ ಮನೆಯಲ್ಲಿ ಸ್ವಾಗತ ಸಮಿತಿಯ ಸಭೆ ಸೇರಿದರು. ಕಾರ್ಯಕಾರಿ ಸಮಿತಿ, ವಿಷಯ ನಿಯಾಮಕ ಸಮಿತಿ ಹಾಗೂ ಅನೇಕ ಉಪ ಸಮಿತಿಗಳನ್ನು ರಚಿಸಲಾಯಿತು. ಸಭೆಯಲ್ಲಿ ಧ್ವಜ ಸತ್ಯಾಗ್ರಹದ ಸ್ಥಳ, ಬಹಿರಂಗ ಸಭೆ, ಅಧ್ಯಕ್ಷರ ಮೆರವಣಿಗೆ, ಚಂದಾ ವಸೂಲಿ, ಪ್ರಚಾರ, ನೀರು, ದೀಪದ ಏರ್ಪಾಡು, ಖಾದಿಪ್ರಚಾರ, ಸ್ವಯಂ ಸೇವಕರ ಉಡುಪು, ರಾಷ್ಟ್ರಕೂಟಕ್ಕೆ ಸಂಬಂಧಿಸಿದಂತೆ ಮಹಾರಾಜರಲ್ಲಿ ಮಾಡಿಕೊಳ್ಳಬೇಕಾದ ವಿಜ್ಞಾಪನಾ ಪತ್ರ, ಇತರೆ ವ್ಯವಸ್ಥೆಗಳ ಬಗೆಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಯಿತು. ವಿಶೇಷ ಸೂಚನೆಯನ್ನು ಪ್ರಕಟಣೆ ಮೂಲಕ ತಿಳಿಸಲಾಯಿತು. ರೂಪಾಯಿಗೆ ಕಡಿಮೆ ಇಲ್ಲದಂತೆಯೂ, ಪ್ರತಿನಿಧಿಗಳು ಒಂದು ರೂಪಾಯಿನಂತೆಯೂ ಚಂದಾ ಕೊಡಬೇಕು. ಬಹಿರಂಗ ಸಭೆಗೆ ಪ್ರೇಕ್ಷಕರ ಪ್ರವೇಶಧನ 0–1–0 (ಒಂದು ಆಣೆ) ಮಾತ್ರ. ಒಂದು ರೂಪಾಯಿ ಪ್ರವೇಶ ಧನ ಕೊಡುವ ಪ್ರೇಕ್ಷಕರಿಗೆ ಮುಖಂಡರೊಡನೆ ಸ್ಥಳ ವಸತಿ ಏರ್ಪಡಿಸಲಾಗುವುದು. ಸಬ್‌ಜೆಕ್ಟ್ ಕಮಿಟಿಗೆ ಪ್ರೇಕ್ಷಕರ ಪ್ರವೇಶದರ ಎಂಟು ಆಣೆ. ಪ್ರತಿನಿಧಿಗಳಿಗೂ ಪ್ರೇಕ್ಷಕರಿಗೂ ಊಟ ವಸತಿಗಳಿಗೆ ಏರ್ಪಡಿಸಿದೆ. ಪೂರ್ತಿ ಅಧಿವೇಶನದಲ್ಲಿ ಊಟ ತಿಂಡಿಗಳಿಗಾಗಿ ಒಂದು ರೂಪಾಯಿ ಕೊಡಬೇಕು. ಒಂದೊಂದು ಊಟಕ್ಕೆ 03 (ಮೂರು ಆಣೆ) ಊಟ ವಸತಿಗಳಿಗೆ ಸೌಕರ್ಯ ಬೇಕಾದವರು ಈ ತಿಂಗಳ ಅಂತ್ಯದೊಳಗಾಗಿ ಬರೆದುಕೊಳ್ಳಬೇಕು. ಸುಮಾರು ಐವತ್ತು ಸಾವಿರ ಮಂದಿಯವರೆಗೂ ಜನಸಂದಣಿ

ಇರುವುದೆಂದು ನಿರೀಕ್ಷಿಸಿರುವುದರಿಂದ ಕಾಲಾತೀತವಾಗಿ ಬರೆದುಕೊಳ್ಳುವವರ ಊಟ ವಸತಿಗಳಿಗೆ ಏರ್ಪಡಿಸಲು ಕಷ್ಟವಾಗುವುದು. ಮೈಸೂರು ಕಾಂಗ್ರೆಸ್‌ಗೆ ಸದಸ್ಯರಾಗಿರುವವರು ಪ್ರತೀ 50 ಮಂದಿಗೆ ಒಬ್ಬರಂತೆ ಪ್ರತಿನಿಧಿಗಳನ್ನು ಆರಿಸಿ ಕಳುಹಿಸಬೇಕಾಗಿದೆ. ಎಲ್ಲಾ ಪತ್ರವ್ಯವಹಾರವನ್ನು ಕಾರ್ಯದರ್ಶಿ, ಸ್ವಾಗತ ಸಮಿತಿ, ಮೈಸೂರು ಕಾಂಗ್ರೆಸ್ ರಾಷ್ಟ್ರಕೂಟ, ಶಿವಪುರ, ಮದ್ದೂರು ಎಂಬ ವಿಳಾಸಕ್ಕೆ ಬರೆಯಬೇಕು ಎಂದು 15.3.1938ರಂದು ಸ್ವಾಗತ ಸಮಿತಿ ಅಧ್ಯಕ್ಷರಾದ ಎಸ್.ಚನ್ನಯ್ಯನವರು ಕರಪತ್ರವನ್ನು ಹೊರಡಿಸಿದರು[12]. ಸಭೆಯಲ್ಲಿ ಭಾಗವಹಿಸಿದ್ದ ಟಿ.ಸಿದ್ಧಲಿಂಗಯ್ಯ ತಮ್ಮ ಅಭಿಪ್ರಾಯವನ್ನು ಈ ರೀತಿಯಾಗಿ ವ್ಯಕ್ತಪಡಿಸಿದರು. ತಾವು ಅಧ್ಯಕ್ಷರಾದ ನಂತರ ದಿವಾನರ ಭೇಟಿ ನಡೆದ ಮೇಲೆ ಕಾಂಗ್ರೆಸ್ಸಿನ ಮುಖ್ಯ ಗುರಿಯಾದ ಜವಾಬ್ದಾರಿ ಸರ್ಕಾರದ ವಿಷಯವಾಗಿ ಸರ್ಕಾರದವರು ಯಾವ ಭರವಸೆಯನ್ನು ಕೊಡಲು ಸಿದ್ಧರಾಗಿಲ್ಲವೆಂದು ಖಚಿತವಾಗಿ ತಿಳಿಸಿದರು. ಸರ್ಕಾರದವರು ರಾಜಕೀಯ ಸುಧಾರಣೆಗಳನ್ನು ಶಿಫಾರಸ್ಸು ನೀಡುವ ಬಗ್ಗೆಯೂ ಸಂಯುಕ್ತ ರಾಜ್ಯಾಂಗದಲ್ಲಿ ಮೈಸೂರು ಸೇರಲು ಯಾವ ಯಾವ ನಿಯಮಗಳನ್ನು ಅನುಸರಿಸಬೇಕೆಂಬುದನ್ನು ನಿರ್ಧರಿಸುವುದಕ್ಕಾಗಿಯೂ ಸಮಿತಿಗಳನ್ನು ನೇಮಿಸುವ ಬಗ್ಗೆ ತಿಳಿಸಿದರು. ಸಮಿತಿಗಳ ಸದಸ್ಯರ ವಿಚಾರವಾಗಿ ಕಾಂಗ್ರೆಸಿಗೆ ಸೇರಿದ ಯಾವ ಸದಸ್ಯನೂ ಕಾಂಗ್ರೆಸ್ ಬೋರ್ಡಿನ ಅನುಮತಿಯಿಲ್ಲದೇ ಸದಸ್ಯತ್ವವನ್ನು ಅಂಗೀಕರಿಸಕೂಡದೆಂದು ಸಿದ್ಧಲಿಂಗಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದರು. ಚೀಫ್ ಸೆಕ್ರೇಟರಿಯವರಿಗೂ ಸಿದ್ದಲಿಂಗಯ್ಯನವರ ಮಧ್ಯೆ ರಹಸ್ಯವಾಗಿ ಮಾತುಕತೆ ನಡೆಯಿತು. ಸಿದ್ದಲಿಂಗಯ್ಯನವರು ಮಹಾತ್ಮ ಗಾಂಧೀಜಿಯವರ ಸಲಹೆಯನ್ನು ಪಡೆದುಕೊಳ್ಳುವ ಬಗ್ಗೆ ತಿಳಿಸಿದರು. ಕಾಂಗ್ರೆಸ್ ಸಭೆಯ ಕಾರ್ಯಕಾರಿ ಮಂಡಳಿಯ ಅಖೈರು ತೀರ್ಮಾನವು ಹಾಗೂ ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಯ ಬಗ್ಗೆ ಶಿವಪುರ ರಾಷ್ಟ್ರಕೂಟದಲ್ಲಿ ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುವುದೆಂದರು. ಶಿವಪುರ ರಾಷ್ಟ್ರಕೂಟಕ್ಕೆ ನೂರಾರು ಜನಪ್ರತಿನಿಧಿಗಳು, ಸಾವಿರಾರು ಪ್ರೇಕ್ಷಕರು ಬರುವ ಬಗ್ಗೆ ಬಿರುಸಿನ ಸಿದ್ಧತೆ ನಡೆದ ಬಗ್ಗೆ ಮಾಹಿತಿ ನೀಡಿದರು[13].

ಶಿವಪುರ ರಾಷ್ಟ್ರಕೂಟದ ಸಿದ್ದತೆ : ಪ್ರಕಟಣಾ ಶಾಖೆಯ ಉಪಸಮಿತಿ ಕೆ.ಜೀವಣ್ಣರಾಯರ ನೇತೃತ್ವ, ಮೈಸೂರು ಕಾಂಗ್ರೆಸಿನ ಅಂಗರಚನೆಯ ಉಪಸಮಿತಿ ಟಿ.ಎಸ್.ರಾಜಗೋಪಾಲ ಅಯ್ಯಂಗಾರ್–ನಿರ್ದೇಶಕರು, ಅಲಂಕಾರ ಉಪಸಮಿತಿ–ಎ.ಎನ್.ಸೂರ್ಯನಾರಾಯಣರಾವ್–ಮುಖ್ಯಸ್ಥರು, ವಸತಿ ವ್ಯವಸ್ಥೆ ಮತ್ತು ನೈರ್ಮಲ್ಯ ಸಮಿತಿ–ಎಚ್.ಸಿ.ದಾಸಪ್ಪ– ಅಧ್ಯಕ್ಷರು, ಸ್ವಯಂ ಸೇವಕರ ವ್ಯವಸ್ಥೆ–ತಿರುಮಲೇಗೌಡರು–ಮುಖ್ಯಸ್ಥರು. ಈ ರೀತಿಯಾಗಿ ಸಮಿತಿಗಳ ರಚನೆ ಮತ್ತು ಮುಖ್ಯಸ್ಥರನ್ನು

ನೇಮಿಸಲಾಯಿತು. ಸ್ವಾಗತ ಸಮಿತಿಯ ಕಛೇರಿಯ ಕೆಲಸವನ್ನು ನಿರ್ವಹಿಸುವ ಜಬಾಬ್ದಾರಿಯನ್ನು ಪಿ.ಎಸ್.ನಾರಾಯಣರಾವ್, ಚಿಕ್ಕಬಳ್ಳಾಪುರದ ವಕೀಲರಾದ ಕೆ.ಸಂಪಂಗಿರಾಮಯ್ಯ ಮತ್ತು . ಟಿ.ಎಸ್.ಸಂಪತ್‌ಕುಮಾರರವರಿಗೆ ವಹಿಸಲಾಯಿತು. ಇವರಿಗೆ ಸಹಾಯಕರಾಗಿ ಅಂಗರಂ ನಾಗರಾಜು, ದೊಡ್ಡಬಳ್ಳಾಪುರದ ಚಂದ್ರಣ್ಣ, ಎಸ್.ಎನ್.ಗುಪ್ತರು ಸಹಾಯಕರಾಗಿ ಕೆಲಸ ನಿರ್ವಹಿಸಿದರು. ಕೆ.ಟಿ.ಭಾಷ್ಯಂಅಯ್ಯಂಗಾರ್, ಎಚ್.ಆರ್.ಗುರುವಾರೆಡ್ಡಿ, ವೀರಕೇಸರಿ ಸೀತಾರಾಮಶಾಸ್ತ್ರೀ, ಕೆ.ಆರ್.ಮಾಧವರಾಯರು, ತಗಡೂರು ರಾಮಚಂದ್ರರಾವ್, ಡಾ. ಪಾರ್ಥನಾರಾಯಣ ಪಂಡಿತ್ ಮೊದಲಾದವರು ಸಲಹೆಗಳನ್ನು ನೀಡಿದ[14]. ಅಧಿವೇಶನ ನಡೆಸಲು ತಿರುಮಲೇಗೌಡರು ಬೆಂಗಳೂರು, – ಮೈಸೂರು ಹೆದ್ದಾರಿಗೆ ಹೊಂದಿಕೊಂಡಿದ್ದ ಎಂಟು ಎಕರೆ ಜಮೀನನ್ನು ತೆರವು ಮಾಡಿಕೊಟ್ಟರು. ಈ ಜಮೀನಿನಲ್ಲಿ ಧ್ವಜ ಮೈದಾನ, ಬಹಿರಂಗ ಅಧಿವೇಶನ ಸಭಾಂಗಣ, ಪಾಕಶಾಲೆ ಮತ್ತು ಭೋಜನ ಶಾಲೆಗಳ ನಿರ್ಮಾಣವಾಯಿತು, ಸ್ವಯಂ ಸೇವಕರ ಶಿಬಿರ, ಅಂಗಡಿ ಸಾಲು, ಪತ್ರಿಕಾ ಪ್ರತಿನಿಧಿಗಳ ಬಿಡಾರ, ಪ್ರತಿನಿಧಿಗಳ ಬಿಡಾರ, ವಿಷಯ ನಿಯಾಮಕ ಸಮಿತಿಯ ಸಭಾಂಗಣವನ್ನು ನಿರ್ಮಿಸಲಾಯಿತು. ಇವುಗಳನ್ನು ನಿರ್ಮಿಸಲು ಬಾಗೇಮನೆ ದೇವೇಗೌಡ ಮತ್ತು ಪಾಲಹಳ್ಳಿ ಸೀತಾರಾಮಯ್ಯನವರ ನೇತೃತ್ವದಲ್ಲಿ ಪ್ರತಿದಿನ ಸುಮಾರು 300 ಜನರು 15 ದಿನಗಳವರೆಗೆ ನಿರಂತರವಾಗಿ ಕೆಲಸ ಮಾಡಿದರು. ಎಂಜಿನಿಯರ್ ಎಂ.ಕೆ.ಸುಬ್ರಹ್ಮಣ್ಯಂ, ಮೈಸೂರಿನ ರಾಜು, ದೇಶಹಳ್ಳಿ ಚೌಡಯ್ಯ, ಉನಗನಹಳ್ಳಿ ಹೆಳವಯ್ಯ ಆಳುಗಳನ್ನು ಕರೆತಂದು ಕೆಲಸ ಮಾಡಿಸಿದರು. ಅನೇಕ ರೈತರು ಕಟ್ಟಡಗಳ ಸಾಮಾನುಗಳ್ನು ಉಚಿತವಾಗಿ ನೀಡಿದರು ಹಾಗೂ ಕೆಲವಷ್ಟು ಮೈಸೂರಿನಿಂದ ಕೊಂಡುತರಲಾಯಿತು[15]. ಮದ್ದೂರು ನಗರದ ಯು.ಚನ್ನೇಗೌಡ ಮತ್ತು ಎಂ.ಸಿ.ಮಾದಯ್ಯನವರು ಹಣ ಸಂಗ್ರಹದಲ್ಲಿ ಸಹಕರಿಸಿದರು. ಮೈಸೂರಿನ ಕೆ.ಎಂ.ಕೃಷ್ಣಪ್ಪಗೌಡ, ಟಿ.ಮರಿಯಪ್ಪ, ಪಿ.ಗೋಪಾಲಕೃಷ್ಣಶೆಟ್ಟಿ, ಟಿ.ಎಸ್. ರಾಜಗೋಪಾಲ ಅಯ್ಯಂಗಾರ್, ಎಸ್.ರಂಗರಾಮಯ್ಯ, ಎ.ಎನ್.ಸೂರ್ಯನಾರಾಯಣರಾವ್, ಎಂ.ಎನ್.ಜೋಯಿಸ್, ಮಂಡ್ಯದ ಹೆಚ್.ಹೊನ್ನಯ್ಯ, ಕೆ.ಚಿಕ್ಕಲಿಂಗಯ್ಯ, ಕೊಪ್ಪದ ಜೋಗಿಗೌಡ, ಶಿವಪುರದ ಪಿ.ತಿರುಮಲೇಗೌಡ ಅರಕೆರೆಯ ಎ.ಜಿ.ಬಂದೀಗೌಡ ಅವರೂ ಅನೇಕ ಕಡೆಗಳಲ್ಲಿ ಸಂಚರಿಸಿ ಧನ ಸಂಗ್ರಹ ಮಾಡಿದರು ಹಾಗೂ ಭತ್ತ, ಬೆಣ್ಣೆ, ಕಟ್ಟಿಗೆ (ಸೌದೆ)ಗಳನ್ನು ಅನೇಕ ಗ್ರಾಮಗಳಿಗೆ ಭೇಟಿ ನೀಡಿ ಸಂಗ್ರಹಿಸಿದರು. ಸುಮಾರು 200 ಎತ್ತಿನ ಗಾಡಿಯಲ್ಲಿ ಆಹಾರ ಸಾಮಗ್ರಿಗಳನ್ನು ಸಂಗ್ರಹಿಸಲಾಯಿತು[16].

ಮದ್ದೂರಿನ ಪುಟ್ಟಯ್ಯ 50 ರೂ.ಗಳು, ಚಾಮಪ್ಪ 100 ರೂ.ಗಳು, ಚನ್ನಮಲ್ಲಪ್ಪ, 50 ರೂ.ಗಳು ಶಿವಪುರದ ತಿರುಮಲೇಗೌಡ 300 ರೂ.ಗಳು, ಕೊಪ್ಪದ ಜೋಗೀಗೌಡ 100 ರೂಪಾಯಿಗಳನ್ನು ಅಧಿವೇಶನದ ಸಿದ್ಧತೆಗೆ ಧನ ಸಹಾಯ ನೀಡಿದರು[17].

ಶಿವಪುರದ ಪೂರ್ವಕ್ಕೆ ಶಿಂಷಾನದಿ, ಪಶ್ಚಿಮಕ್ಕೆ ದೊಡ್ಡ ಕೋಡಿಹಳ್ಳ, ಉತ್ತರಕ್ಕೆ ನಾಲೆ ಇರುವುದರಿಂದ, ಅದನ್ನು ಬಳಸಿಕೊಂಡು ಪುರುಷರ ಸ್ನಾನಾದಿಗಳಿಗೆ ಏರ್ಪಾಡುಮಾಡಲಾಯಿತು. ಶಿವಪುರದ ಮಾರೇಗೌಡರ ಮನೆ ಮುಂದಿನ ಬಾವಿಗೆ ಎಲೆಕ್ಟ್ರಿಕ್ ಪಂಪ್ ಇಟ್ಟು ನೀರೆತ್ತಿ ನಲ್ಲಿಗಳ ಮೂಲಕ ಪಾಕಶಾಲೆಗೆ, ಪ್ರತಿನಿಧಿಗಳ ಬಿಡಾರಕ್ಕೆ ನೀರನ್ನು ಒದಗಿಸಲಾಯಿತು. ಇದರ ಮೂಲಕ ಸ್ತ್ರೀಯರ ಬಿಡಾರಗಳಿಗೆ ನೀರು ಒದಗಿಸಲಾಯಿತು. ನೀರಿನ ವ್ಯವಸ್ಥೆಯ ಕಾರ್ಯವನ್ನು ಮೋಹನ ಸ್ವಾಮಿ ಮೊದಲಿಯಾರ್ ಯಶಸ್ವಿಯಾಗಿ ನಿಭಾಯಿಸಿದರು. ರಾಷ್ಟ್ರಕೂಟ ಸಮಾರಂಭದಲ್ಲಿ ಅಸ್ಪೃಶ್ಯತಾ ನಿವಾರಣೆ, ಮದ್ಯಪಾನ ವಿರೋಧದ ಪ್ರಚಾರ ಕಾರ್ಯವನ್ನು ಮೈಸೂರು ಜಿಲ್ಲಾ ಹರಿಜನ ಸೇವಕ ಸಂಘದವರು ವಹಿಸಿಕೊಂಡರು. ಖಾದಿ ಮಾರಾಟ, ರಾಷ್ಟ್ರೀಯ ಪುಸ್ತಕ ಮಾರಾಟ, ಸ್ವದೇಶಿ ವಸ್ತುಗಳ ಹಾಗೂ ಅಗತ್ಯ ವಸ್ತುಗಳ ಮಾರಾಟಕ್ಕಾಗಿ ಸ್ವಾಗತ ಸಮಿತಿಯವರು ಬಾಡಿಗೆಗೆ ಅಂಗಡಿಗಳನ್ನು ನಿರ್ಮಿಸಿದರು. ಅಂಗಡಿಗಳ ಕಟ್ಟಡಗಳ ನಿರ್ಮಾಣದ ಮೇಲ್ವಿಚಾರಣೆಯನ್ನು ಎಂ.ಕೆ. ಸುಬ್ರಹ್ಮಣ್ಯಂ ವಹಿಸಿಕೊಂಡರು. ಅಧಿವೇಶನದಲ್ಲಿ ಎರಡು ಸಾವಿರ ಜನರು ಒಂದು ಸಾರಿಗೆ ಊಟ ಮಾಡುವ ವಿಶಾಲ ಚಪ್ಪರ, ಪ್ರತಿನಿಧಿಗಳಿಗೆ, ಸ್ವಾಗತ ಸಮಿತಿ ಸದಸ್ಯರಿಗೆ, ಪೋಷಕರಿಗೆ ಪ್ರತ್ಯೇಕ ವ್ಯವಸ್ಥೆಗಳನ್ನು ಸ್ವಾಗತ ಸಮಿತಿಯವರೇ ನೋಡಿಕೊಂಡರು[18]. ಮದ್ದೂರು ತಾಲ್ಲೂಕು, ಶಿವಪುರದಲ್ಲಿ ರಾಷ್ಟ್ರಕೂಟ ನಡೆಯದಂತೆ ತಡೆಯಲು ಸರ್ಕಾರ ಪ್ರಯತ್ನ ಆರಂಭಿಸಿತು. ಮದ್ದೂರು ತಾಲ್ಲೂಕು ಅಮಲ್ದಾರರು ಹೆಚ್.ಕೆ.ವೀರಣ್ಣಗೌಡರಿಗೆ ಮದ್ದೂರಿನ ಬದಲಾಗಿ ನಂಜನಗೂಡಿನಲ್ಲಿ ರಾಷ್ಟ್ರಕೂಟ ನಡೆಸುವುದಾದರೆ ಸಹಾಯ– ಸಹಕಾರ ನೀಡುವುದಾಗಿ ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ವೀರಣ್ಣಗೌಡರು ಒಬ್ಬ ಅಮಲ್ದಾರನ ನೆರವಿನಿಂದ ರಾಷ್ಟ್ರಕೂಟ ನಡೆಯಬೇಕಾಗಿಲ್ಲವೆಂದರು. ಅಧಿವೇಶನ ನಡೆಸದಂತೆ ಸರ್ಕಾರವು ಅನೇಕರಿಗೆ ಆಮಿಷಗಳನ್ನೊಡ್ಡಿದರು. ಜನ ನಿರ್ಲಕ್ಷಿಸಿ ಮುಂದುವರೆದಾಗ ನಾನಾ ರೀತಿಯ ಕಿರುಕುಳ ನೀಡಿತು. ಅಡುಗೆ ಕೆಲಸಕ್ಕೆಂದು ದೊಡ್ಡ ದೊಡ್ಡ ಪಾತ್ರೆಗಳನ್ನು ಕೊಟ್ಟ ತರಕಾರಿ ಅನಂತರಾಮಯ್ಯ ಎಂಬುವವರನ್ನು ಸರ್ಕಾರಿ ನೌಕರಿಯಿಂದ ವಜಾ ಮಾಡಿದರು[19].

ಶಿವಪುರ ರಾಷ್ಟ್ರಕೂಟಕ್ಕೆ ಮಂಡ್ಯ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ನಡೆದ ಸಭೆಗಳು

ಶಿವಪುರ ರಾಷ್ಟ್ರಕೂಟದ ಸಿದ್ಧತೆಗಳೊಂದಿಗೆ ಮಂಡ್ಯ ಜಿಲ್ಲೆಯ ತಾಲ್ಲೂಕುಗಳಲ್ಲಿ ಕಾಂಗ್ರೆಸ್ ಪಕ್ಷದ ಸಾರ್ವಜನಿಕ ಸಭೆ, ಪ್ರಮುಖ ಮುಖಂಡ ಭಾಷಣಗಳ ಮೂಲಕ ಮೈಸೂರು ಕಾಂಗ್ರೆಸ್ ಪ್ರಚಾರ ಮಾಡಲಾಯಿತು. ಸದಸ್ಯರ ನೋಂದಣಿ ಮಾಡಿಸಲಾಯಿತು. ಮೈಸೂರು ಕಾಂಗ್ರೆಸ್‌ನ ಮೊದಲ ಅಧಿವೇಶನ ಶಿವಪುರ

ರಾಷ್ಟ್ರಕೂಟದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರು ಭಾಗವಹಿಸುವಂತೆ ಪ್ರಚಾರ ಕಾರ್ಯವನ್ನು ಆರಂಭಿಸಲಾಯಿತು. ಕಾಂಗ್ರೆಸ್ ಪ್ರಮುಖ ಮುಖಂಡರುಗಳಾದ ಎ.ಜಿ.ಬಂದೀಗೌಡ, ಟಿ.ಮರಿಯಪ್ಪ, ಹೆಚ್.ಸಿ.ದಾಸಪ್ಪ, ಎಂ.ಎನ್.ಜೋಯಿಸ್, ಟಿ.ಸುನಂದಮ್ಮ, ಮಂಡ್ಯ ಜಿಲ್ಲೆಯ ಪ್ರತೀ ತಾಲ್ಲೂಕುಗಳಿಗೆ ಭೇಟಿ ನೀಡಿ ಸಭೆ ನಡೆಸಲು, ಪ್ರಚಾರ ಕಾರ್ಯ ಆರಂಭಿಸಿದರು. ಕಾಂಗ್ರೆಸ್ ಕಾರ್ಯಕಾರಿ ಮಂಡಳಿ ಸಭೆಯ 17ನೇ ಮಾರ್ಚ್, 1938ರಂದು ಶಿವಪುರದಲ್ಲಿ ನಡೆಯಿತು. ಸ್ವಯಂ ಸೇವಕರ ತರಬೇತಿ, ಅತಿಥಿಗಳಿಗೆ ವಸತಿ ಸೌಲಭ್ಯ, ಗುಡಿಸಲು ನಿರ್ಮಾಣ ಇತರ ಸೌಕರ್ಯ ಒದಗಿಸುವ ಬಗ್ಗೆ ಚರ್ಚಿಸಲಾಯಿತು. 300 ಅತಿಥಿಗಳು ಹಾಗೂ 20 ಸಾವಿರ ಜನರು ಸಮ್ಮೇಳನದಲ್ಲಿ ಭಾಗವಹಿಸುವ ನಿರೀಕ್ಷೆಯಲ್ಲಿ ಸಿದ್ಧತೆಯನ್ನು ಆರಂಭಿಸಲಾಯಿತು. ಎಂ.ಎನ್.ಜೋಯಿಸರವರು ಸ್ವಯಂ ಸೇವಕರ ಸಂಘಟನೆಯ ನಾಯಕತ್ವವನ್ನು ವಹಿಸಿಕೊಂಡರು[20].

ದಿನಾಂಕ 19ನೇ ಮಾರ್ಚ್ 1938ರಂದು ಫ್ರೆಂಚ್‌ರಾಕ್ಸ್ (ಪಾಂಡವಪುರ)ದಲ್ಲಿ ಕಾಂಗ್ರೆಸ್ ಪಕ್ಷದ ಸಾರ್ವಜನಿಕ ಸಭೆ ನಡೆಯಿತು. ಹೆಚ್.ಸಿ.ದಾಸಪ್ಪ, ಎಂ.ಎನ್.ಜೋಯಿಸ್, ಕೃಷ್ಣೇಗೌಡ ಹಾಗೂ ಶ್ರೀರಂಗಪಟ್ಟಣ ಮತ್ತು ಫ್ರೆಂಚ್‌ರಾಕ್ಸ್ ತಾಲ್ಲೂಕಿನ 200 ಜನ ಸೇರಿದ್ದರು. ಟಿ.ಮರಿಯಪ್ಪನವರು ತಮ್ಮ ಭಾಷಣದಲ್ಲಿ ಈ ರೀತಿಯಾಗಿ ಅಭಿಪ್ರಾಯಗಳನ್ನು ಹೇಳಿದರು. ಬ್ರಿಟೀಷರ ಭಾರತವನ್ನು ವಶಪಡಿಸಿಕೊಂಡು ಇಲ್ಲಿನ ಜನಗಳನ್ನು ಗುಲಾಮರನ್ನಾಗಿ ಮಾಡಿದರು. ಕಾಂಗ್ರೆಸ್ ಚಳುವಳಿ, ಸೇವೆಸಲ್ಲಿಸಿದ ರಾಷ್ಟ್ರಮಟ್ಟದ ನಾಯಕರ ಬಗ್ಗೆ ತಿಳಿಸಿದರು. ಪ್ರತಿಯೊಂದು ಗ್ರಾಮದಲ್ಲಿ ಕಾಂಗ್ರೆಸ್ ಸಮಿತಿಯನ್ನು ಸ್ಥಾಪಿಸುವಂತೆ ಮನವಿ ಮಾಡಿದರು. ಎ.ಜಿ.ಬಂದೀಗೌಡರು ಸಭೆಯಲ್ಲಿ ಮಾತನಾಡುತ್ತಾ ಕಾಂಗ್ರೆಸ್ ಗುರಿ ಮತ್ತು ಉದ್ದೇಶಗಳನ್ನು ವಿವರಿಸಿದರು. ಶಾಂತ ರೀತಿ ಹೋರಾಟ ಮಾಡುವ ಮೂಲಕ ಜವಾಬ್ದಾರಿ ಸರ್ಕಾರ ಸ್ಥಾಪಿಸಲು ಪ್ರಯತ್ನಿಸಿ, ಖಾದಿ ಧರಿಸುವಂತೆ ಮತ್ತು ಪ್ರೋತ್ಸಾಹಿಸುವಂತೆ ಕೇಳಿಕೊಂಡರು. ಮುಂದಿನ ತಿಂಗಳು ನಡೆಯುವ ಶಿವಪುರ ರಾಷ್ಟ್ರಕೂಟಕ್ಕೆ ಫ್ರೆಂಚ್ ರಾಕ್ಸ್ ಮತ್ತು ಶ್ರೀರಂಗಪಟ್ಟಣ ತಾಲ್ಲೂಕಿನಿಂದ ಅಧಿಕ ಸಂಖ್ಯೆಯ ಜನರು ಭಾಗವಹಿಸುವಂತೆ ತಿಳಿಸಿದರು. ಬಿ.ಚಾಮೇಗೌಡರು ಸಭೆಯಲ್ಲಿ ಬ್ರಿಟೀಷರ ಆಡಳಿತ ಪದ್ಧತಿಯನ್ನು ಟೀಕಿಸಿದರು. ಶಿಕ್ಷಣ, ರಸ್ತೆಗಳು, ನೀರಿನ ಸೌಲಭ್ಯಗಳನ್ನು ಒದಗಿಸದೇ ಅಧಿಕ ವೇತನ ಪಡೆದ ಸರ್ಕಾರ ರೈತರ ಹಣವನ್ನು ನಷ್ಟ ಮಾಡುತ್ತದೆ. ರೈತರ ಸ್ಥಿತಿ ಚಿಂತಾಜನಕವಾಗಿದೆ. ಮಹಾತ್ಮ ಗಾಂಧೀಜಿಯವರು ದೇಶಕ್ಕಾಗಿ ಸ್ವಾತಂತ್ರ್ಯ ಹೋರಾಟ ಮಾಡುತ್ತಿದ್ದಾರೆ. ಅವರ ಹೋರಾಟ ಬೆಂಬಲಿಸುವಂತೆ ಕೇಳಿಕೊಂಡರು. ಕಾಂಗ್ರೆಸ್ ಏಳು ಪ್ರಾಂತ್ಯಗಳಲ್ಲಿ ಆಡಳಿತವನ್ನು ಸ್ಥಾಪಿಸಿದೆ. ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ

ಸ್ಥಾಪಿಸಬೇಕೆಂದರು. ಪಿ.ಸೀತಾರಾಮಯ್ಯನವರು. ಗುಜರಾತ್ ರಾಜ್ಯದ ಹರಿಪುರದಲ್ಲಿ ನಡೆದ ಅಖಿಲಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದ ಅನುಭವಗಳನ್ನು ಹಂಚಿಕೊಂಡರು, 'ಮಹಾರಾಜರು' ಎಂಬ ಪದಕ್ಕಿಂತ ಅಮೂಲ್ಯವಾದ ಗಾಂಧೀಜಿಯವರು. ಪ್ರತಿಯೊಬ್ಬರು ಕಾಂಗ್ರೆಸ್ ಸೇರುವಂತೆ ಹಾಗೂ ಜವಾಬ್ದಾರಿ ಸರ್ಕಾರ ಸ್ಥಾಪನೆಯ ಚಳುವಳಿಯಲ್ಲಿ ಪಾಲ್ಗೊಳ್ಳುವಂತೆ ಕೇಳಿಕೊಂಡರು. ಎಂ.ಎನ್.ಜೋಯಿಸ್‌ರವರು ಸಭೆಯಲ್ಲಿ ತಮ್ಮ ಅಭಿಪ್ರಾಯವನ್ನು ಈ ರೀತಿಯಾಗಿ ತಿಳಿಸಿದರು. ಬ್ರಿಟೀಷ್ ಇಂಡಿಯಾದಲ್ಲಿ ಕಾಂಗ್ರೆಸ್‌ನವರು ಜನಗಳ ಪರವಾಗಿ ಹೋರಾಟ ನಡೆಸುತ್ತಿದ್ದಾರೆ. ಆದರೆ ಸರ್ಕಾರದವರು ಕಾಂಗ್ರೆಸ್‌ನವರನ್ನು ರಾಜದ್ರೋಹಿಗಳಿಂದ ಕರೆಯುತ್ತಾರೆ. ನಿಜವಾಗಿ ಸರ್ಕಾರದ ಅಧಿಕಾರಿಗಳೇ ರಾಜದ್ರೋಹಿಗಳು ರೈತರ ಕಂದಾಯದ ಹಣವನ್ನು ಅಧಿಕ ವೇತನವಾಗಿ ಪಡೆಯುತ್ತಿದ್ದಾರೆ. ಜನರು ಪೋಲೀಸ್ ಮತ್ತು ಸರ್ಕಾರದ ಸೇವಕರಿಗೆ ಭಯಪಡಬೇಕಾಗಿಲ್ಲ. ಕಾಂಗ್ರೆಸ್ ಸೇರುವ ಮೂಲಕ ಜವಾಬ್ದಾರಿ ಸರ್ಕಾರದ ಬೇಡಿಕೆಯನ್ನು ಈಡೇರಿಸಿಕೊಳ್ಳಬೇಕೆಂದರು[21]. ಪಾಂಡವಪುರದ ಸಾರ್ವಜನಿಕ ಸಭೆಯ ನಂತರ ಮೈಸೂರು ಕಾಂಗ್ರೆಸ್ ಸಮಿತಿಯ ಸಭೆಯು 21–03–1938ರಂದು ಸಂಜೆ 6ಕ್ಕೆ ಮದ್ದೂರಿನಲ್ಲಿ ನಡೆಯಿತು. ಸುಮಾರು 200ಜನ ಕಾಂಗ್ರೆಸ್ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿದ್ದರು. ಸಭೆಯಲ್ಲಿ ಸ್ವಯಂ ಸೇವಕರ ಸಮಿತಿಗಳನ್ನು ರಚಿಸಲಾಯಿತು. ಅಧಿವೇಶನದಲ್ಲಿ ಭಾಗವಹಿಸುವ ಪ್ರತಿನಿಧಿಗಳಿಗೆ ವಸತಿ, ಊಟ ಒದಗಿಸುವ ವಿಷಯದ ಬಗ್ಗೆ ಚರ್ಚಿಸಲಾಯಿತು. ಡಾ॥ ಪಟ್ಟಾಭಿಸೀತಾರಾಮಯ್ಯ (ಆಂಧ್ರಪ್ರದೇಶ) ಮುದವೀಡು ಕೃಷ್ಣರಾವ್ (ಧಾರವಾಡ) ರವರು ಅಧಿವೇಶವನ್ನು ಉದ್ಧೇಶಿಸಿ ಮಾತನಾಡುತ್ತಾರೆಂದು ಹಾಗೂ ಸುಮಾರು 300 ಜನ ಪ್ರತಿನಿಧಿಗಳು ಮತ್ತು 20,000 ಸಂಖ್ಯೆಯಲ್ಲಿ ಜನರು ಸೇರುವ ನಿರೀಕ್ಷೆಯಿದೆ ಎಂದು ಸಭೆಯಲ್ಲಿ ತೀರ್ಮಾನಿಸಲಾಯಿತು[22].

ಈ ಸಮಯದಲ್ಲಿ ಮೈಸೂರು ಸಂಸ್ಥಾನದ ರಾಜಕೀಯ ವಿದ್ಯಮಾನಗಳನ್ನು ಹಾಗೂ ಶಿವಪುರ ಅಧಿವೇಶನಕ್ಕೆ ಒಂದು ಸಂದೇಶವನ್ನು ತರಲು ಟಿ.ಸಿದ್ದಲಿಂಗಯ್ಯ ಹಾಗೂ ಕೆ.ಸಿರೆಡ್ಡಿರವರು 22ನೇ ಮಾರ್ಚ್ 1938ರಂದು ಒರಿಸ್ಸಾದ ಡೆಲ್ಲಾಂಗ್‌ನಲ್ಲಿ ಮಹಾತ್ಮ ಗಾಂಧೀಜಿಯವರನ್ನು ಭೇಟಿ ಮಾಡಿದರು. ಅದೇ ಸಂದರ್ಭದಲ್ಲಿ ಸರ್ದಾರ್ ಪಟೇಲ್, ಆಚಾರ್ಯ ಕೃಪಲಾನಿ, ಬಾಬು ರಾಜೇಂದ್ರಪ್ರಸಾದ್, ಮಹದೇವ ದೇಸಾಯಿ ಮುಂತಾದವರನ್ನು ಸಹ ಭೇಟಿ ಮಾಡಿ ಮಾತುಕತೆ ನಡೆಸಿದರು[23]. ಈ ಸಂದರ್ಭದಲ್ಲಿ ಮಹಾತ್ಮ ಗಾಂಧೀಜಿಯವರು ಶಿವಪುರ ಅಧಿವೇಶನಕ್ಕೆಂದು ಒಂದು ಸಂದೇಶವನ್ನು ನೀಡಿದರು, ಮೈಸೂರಿನಲ್ಲಿ ನಿಮ್ಮ ಸಹಕಾರವು ಅವಶ್ಯಕವೆಂದು, ಅತಿ ಮೌಲ್ಯವೆಂದು ಸರ್ಕಾರವು ಕೂಡ ಭಾವಿಸುವಂತಾಗಬೇಕು. ಸರ್ಕಾರವು ನಿಮ್ಮ ಸಹಾಯ

ಸಹಕಾರಗಳಿಲ್ಲದೇ ಏಕಾ–ಏಕಿಯಾಗಿ ಏನನ್ನೂ ಮಾಡಲು ಸಾಧ್ಯವಿಲ್ಲವೆಂಬುದನ್ನು ನಿಮ್ಮ ಕಾರ್ಯದಿಂದ ನೀವು ತೋರಿಸಬೇಕು ಎಂಬ ಸಂದೇಶವನ್ನು ನೀಡಿದರು. ಟಿ.ಸಿದ್ಧಲಿಂಗಯ್ಯನವರು ಮಹಾತ್ಮ ಗಾಂಧೀಜಿಯವರ ಅಭಿಪ್ರಾಯವನ್ನು ಒಪ್ಪದೇ ಅವರ ಸಹವರ್ತಿಗಳೊಂದಿಗೆ ಮಹಾರಾಜರನ್ನು ಅರಸೊತ್ತಿಗೆಯಿಂದ ಕೆಳಗಿಳಿಸಿ ದಿವಾನರನ್ನು ವಜಾ ಮಾಡುವ ಮೂಲಕವೇ ತಮ್ಮ ಕಾರ್ಯ ಸಾಧ್ಯವೆಂದು ವಾದಿಸಿದರು[24]. ಶಿವಪುರ ರಾಷ್ಟ್ರಕೂಟವನ್ನು ವ್ಯವಸ್ಥಿತವಾಗಿ ನೆರವೇರಿಸುವ ಹಾಗೂ ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಚಳುವಳಿಯಲ್ಲಿ ಕಾಂಗ್ರೆಸ್ ಧ್ವಜವನ್ನು ಹಾರಿಸುವ ದೃಢ ಸಂಕಲ್ಪದೊಂದಿಗೆ ಟಿ.ಸಿದ್ಧಲಿಂಗಯ್ಯನವರು ಓರಿಸ್ಸಾದ ಡೆಲ್ಲಾಂಗ್‌ನಿಂದ ಹಿಂದಿರುಗಿದರು. ನಂತರ ರಾಷ್ಟ್ರಮಟ್ಟದ ಕಾಂಗ್ರೆಸ್ ಮುಖಂಡರು ಹಾಗೂ ಮಹಾತ್ಮ ಗಾಂಧೀಜಿ ಮೆಚ್ಚುವ ಹಾಗೆ ಧ್ವಜ ಸತ್ಯಾಗ್ರಹ ನಡೆಸಬೇಕೆಂದು ಮೈಸೂರು ಕಾಂಗ್ರೆಸ್ ಕಾರ್ಯಕರ್ತರಿಗೆ ತಿಳಿಸಿದರು. ರಾಷ್ಟ್ರಕೂಟದ ಸಿದ್ಧತೆ ಮತ್ತು ಪ್ರಚಾರವನ್ನು ಮುಂದುವರಿಸಿದರು.

ದಿನಾಂಕ 22ನೇ ಮಾರ್ಚ್ 1938 ರಂದು ಕೃಷ್ಣರಾಜಪೇಟೆಯಲ್ಲಿ ತಾಲ್ಲೂಕು ಕಾಂಗ್ರೆಸ್ ಸಭೆ ನಡೆಯಿತು. ಹೆಚ್.ಸಿ.ಸಿದ್ದಪ್ಪನವರ ಅಧ್ಯಕ್ಷತೆಯನ್ನು ವಹಿಸಿದ್ದರು. ಗಣಪತಿ ಶಾಸ್ತ್ರೀಯವರು ಸಭೆಯಲ್ಲಿ ಮಾತನಾಡುತ್ತಾ ಜವಾಬ್ದಾರಿ ಸರ್ಕಾರ ಸ್ಥಾಪನೆ, ಸರ್ಕಾರದ ನಿಷೇಧಾಜ್ಞೆಗಳು, ರೈತರಿಗೆ ಅಧಿಕ ತೆರಿಗೆ, ಶಿಕ್ಷಣದ ಕೊರತೆ, ಸರ್ಕಾರದ ಅಧಿಕಾರಿಗಳಿಗೆ ಅಧಿಕ ವೇತನ, ರೈತರ ಅಸಹಾಯಕತೆ ಬಗ್ಗೆ ಅರಿವು ಮೂಡಿಸಿದರು. ಹೆಚ್.ಸಿ.ಸಿದ್ದಪ್ಪನವರ ಅಧ್ಯಕ್ಷತೆಯ ಭಾಷಣದಲ್ಲಿ ಮುಂದಿನ ತಿಂಗಳ ಏಪ್ರಿಲ್ 11 ಮತ್ತು 12ರಂದು ಶಿವಪುರ ಅಧಿವೇಶನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕೇಳಿಕೊಂಡರು. ದಿನಾಂಕ 23ನೇ ಮಾರ್ಚ್ 1938ರಂದು ಮಳವಳ್ಳಿ ತಾಲ್ಲೂಕಿನ ಗುಂಡಾಪುರ ಹಾಗೂ ಲಿಂಗಪಟ್ಟಣ ಗ್ರಾಮಗಳಲ್ಲಿ ಕೆ.ಸುಬ್ಬರಾವ್ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್‌ನ ಸಾರ್ವಜನಿಕ ಸಭೆ ನಡೆಯಿತು. ವಿ.ವೆಂಕಟಪ್ಪ ಮತ್ತು ಎಸ್.ಕೃಷ್ಣಪ್ಪನವರ ಜವಾಬ್ದಾರಿ ಸರ್ಕಾರ ಸ್ಥಾಪನೆ, ತೆರಿಗೆಯನ್ನು ಕಡಿತಗೊಳಿಸುವ ಬಗ್ಗೆ, ಸಮೂಹಶಿಕ್ಷಣದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿದರು. 23 ನೇ ಮಾರ್ಚ್ 1938ರಂದು ಕೃಷ್ಣರಾಜಪೇಟೆಯಲ್ಲಿ ಪಿ.ಸಿದ್ದಪ್ಪನವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಸಭೆ ನಡೆಯಿತು. ಪರಶಿವರಾಮಯ್ಯ, ಕೆ.ಕೆ.ಮೂರ್ತಿ, ಗಣಪತಿಶಾಸ್ತ್ರೀ, ನಂಜಪ್ಪ, ಕೆ.ಎಂ.ಸುಂದರ್‌ರವರು ಸಭೆಯಲ್ಲಿ ಹಾಜರಿದ್ದರು. ಜಾತಿಬೇಧರಹಿತವಾಗಿ ಕಾರ್ಯನಿರ್ವಹಿಸುವಂತೆ ಹಾಗೂ ಖಾದಿ ಬಗ್ಗೆ ಮನವಿ ಮಾಡಿದರು. ಅಸಹಾಯಕ ಸರ್ಕಾರದ ಸ್ಥಿತಿಯನ್ನು ಖಂಡಿಸಿದರು. ಶಿವಪುರ ರಾಷ್ಟ್ರಕೂಟದಲ್ಲಿ ಹೆಚ್ಚಿನ ಸಂಖ್ಯೆಯ ಜನರು ಭಾಗವಹಿಸುವಂತೆ ತಿಳಿಸಿದರು[25].

ದಿನಾಂಕ 24ನೇ ಮಾರ್ಚ್ 1938ರಂದು ಕೃಷ್ಣರಾಜಪೇಟೆ ತಾಲ್ಲೂಕಿನ ಕಿಕ್ಕೇರಿ ಗ್ರಾಮದಲ್ಲಿ ಕೆ.ವಿ.ಶಿವಯ್ಯನವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಸಭೆ ನಡೆಯಿತು. ಕೆ.ಎಂ.

ಸುಂದರ, ಜಿ.ಟಿ.ಪರಶಿವರಾಮಯ್ಯ, ಗಣಪತಿ ಶಾಸ್ತ್ರೀ, ಕೆ.ವಿ.ಶಿವಯ್ಯನವರು ಸಭೆಯಲ್ಲಿ ಹಾಜರಿದ್ದರು. ಜವಾಬ್ದಾರಿ ಸರ್ಕಾರ ಸ್ಥಾಪನೆ, ಅಧಿಕ ಕಂದಾಯ ಮತ್ತು ಅಧಿಕಾರಿಗಳಿಗ ಅಧಿಕ ವೇತನ ಹಾಗೂ ರೈತರ ತೊಂದರೆಗಳನ್ನು ನಿವಾರಿಸುವ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಅಂತಿಮವಾಗಿ ಕಾಂಗ್ರೇಸ್‌ನ್ನು ಬೆಂಬಲಿಸುವಂತೆ ಮತ್ತು ಅಧಿಕ ಸಂಖ್ಯೆಯಲ್ಲಿ ಶಿವಪುರ ರಾಷ್ಟ್ರಕೂಟದಲ್ಲಿ ಭಾಗವಹಿಸುವಂತೆ ಕೇಳಿಕೊಂಡರು[26].

23ನೇ ಮಾರ್ಚ್ 1938ರಂದು ಶ್ರೀರಂಗಪಟ್ಟಣ ತಾಲ್ಲೂಕಿನ ಅರಕೆರೆಯಲ್ಲಿ ಕಾಂಗ್ರೆಸ್ ಸಭೆ ನಡೆಯಿತು. ಎಸ್.ರಂಗರಾಮಯ್ಯನವರ ಅಧ್ಯಕ್ಷತೆಯನ್ನು ವಹಿಸಿದ್ದರು. ಸೂರ್ಯ ನಾರಾಯಣ ಪಂಡಿತ, ಟಿ.ಮರಿಯಪ್ಪ, ಹೆಚ್.ಕೆ.ವೀರಣ್ಣಗೌಡ, ಪಿ.ಸೀತಾರಾಮಯ್ಯ, ಕೃಷ್ಣಪ್ಪಗೌಡ, ರಾಜಗೋಪಾಲ ಅಯ್ಯಂಗಾರ್, ವೆಂಕಟ ನರಸಿಂಹ, ಎಂ.ಎನ್.ಶಾಸ್ತ್ರೀ, ಶ್ರೀನಿವಾಸ ಅಯ್ಯಂಗಾರ್‌ರವರು ಸಭೆಯಲ್ಲಿ ಹಾಜರಿದ್ದರು. ರೈತರ ಬಡತನ, ಅಧಿಕ ತೆರಿಗೆ, ಹಳ್ಳಿಗಳಲ್ಲಿ ಶಾಲೆಗಳು ಮತ್ತು ಆಸ್ಪತ್ರೆಗಳ ಸ್ಥಾಪನೆ, ಖಾದಿ ಪ್ರಚಾರ ಈ ಎಲ್ಲಾ ಪ್ರಮುಖ ವಿಷಯದ ಬಗ್ಗೆ ಜಾಗೃತಿ ಮೂಡಿಸಲಾಯಿತು. ಕೃಷ್ಣಪ್ಪಗೌಡರ ಸಭೆಯಲ್ಲಿ ಸರ್ಕಾರದ ನೀತಿಯನ್ನು ಖಂಡಿಸಿದರು. ಯಾರು ಸರ್ಕಾರವನ್ನು ಬೆಂಬಲಿಸುತ್ತಾರೆ ಅವರು ಒಳ್ಳೆಯ ಸ್ಥಿತಿಯಲ್ಲಿರುವ, ಸರ್ಕಾರದ ಆಶ್ರಯದಲ್ಲಿರುವವರು ರಾಜದ್ರೋಹಿಗಳೆಂದರು, ಕಾಂಗ್ರೆಸ್ ಸೇರಿದಂತೆ ಹಾಗೂ ಮುಂದಿನ ತಿಂಗಳು ಏಪ್ರಿಲ್ 11 ಮತ್ತು 12 ರಂದು ಮದ್ದೂರು ತಾಲ್ಲೂಕಿನ ಶಿವಪುರ ಅಧಿವೇಶನದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ಭಾಗವಹಿಸುವಂತೆ ಪ್ರಾರ್ಥಿಸಿದರು[27]. ದಿನಾಂಕ 26ನೇ ಮಾರ್ಚ್ 1938ರಿಂದ ಶ್ರೀರಂಗಪಟ್ಟಣ ತಾಲ್ಲೂಕಿನ ಕಾಂಗ್ರೆಸ್ ಸಮಿತಿಯ ಸಭೆಯು ಕಟ್ಟೇರಿಯಲ್ಲಿ ನಡೆಯಿತು. ರಂಗರಾಮಯ್ಯನವರು ಅಧ್ಯಕ್ಷತೆಯನ್ನು ವಹಿಸಿದ್ದರು. ಟಿ.ಮರಿಯಪ್ಪ, ಕೆ.ಎಂ.ಕೃಷ್ಣಪ್ಪ, ಎಂ.ಎನ್.ಜೋಯಿಸ್, ಹೆಚ್.ಸಿ.ದಾಸಪ್ಪನವರು ಸಭೆಯಲ್ಲಿ ಮಾತನಾಡಿದರು. ಸಭೆಯಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆ, ಸರ್ಕಾರದ ಅಧಿಕಾರಿಗಳು ಅಧಿಕ ವೇತನ ಪಡೆಯುತ್ತಿರುವುದು ಹಾಗೂ ಕಂದಾಯದ ಹಣವನ್ನು ದುರ್ಬಳಕೆ ಬಗ್ಗೆ ಜನರಲ್ಲಿ ಅರಿವು ಮೂಡಿಸಿದರು. ಜವಾಬ್ದಾರಿ ಸರ್ಕಾರ ಸ್ಥಾಪನೆಯಾಗುವವರೆಗೂ ಸರ್ಕಾರಕ್ಕೆ ಜನರು ಯಾವುದೇ ರೀತಿ ಸಹಕಾರ ನೀಡುವುದಿಲ್ಲ ಎಂಬ ಠರಾವು ಪಾಸು ಮಾಡಲಾಯಿತು. ಇದೇ ದಿನದಂದು ಶ್ರೀರಂಗಪಟ್ಟಣ ತಾಲ್ಲೂಕು ಕಾಂಗ್ರೆಸ್ ಸಮಿತಿಯು ಸಂತೇಬಾಚಹಳ್ಳಿಯಲ್ಲಿ ಸಭೆಯನ್ನು ನಡೆಸಿತು[28]. ಶ್ರೀರಂಗಪಟ್ಟಣ ತಾಲ್ಲೂಕು ಸಭೆ ಮುಗಿದ ನಂತರ ಹೆಚ್.ಸಿ.ದಾಸಪ್ಪ, ಎಂ.ಎನ್.ಜೋಯಿಸ್, ಎ.ಜಿ.ಬಂದೀಗೌಡ, ಹೆಚ್.ಕೆ.ವೀರಣ್ಣಗೌಡ, ಶಿವಪುರಕ್ಕೆ ಭೇಟಿ ನೀಡಿದರು. ಶಿವಪುರ ಅಧಿವೇಶನಕ್ಕೆ ಹಾಜರಾಗುವ ಅತಿಥಿಗಳಿಗೆ 500 ಕೊಠಡಿಗಳನ್ನು

ನಿರ್ಮಿಸುವ ಕಾರ್ಯಕ್ಕೆ ಚಾಲನೆ ನೀಡಿದರು[29]. ಆರೋಗ್ಯ ಮತ್ತು ನೈರ್ಮಲ್ಯಕ್ಕೆ ವಿಶೇಷ ಗಮನ ನೀಡಿದರು ಮಲಮೂತ್ರ ವಿಸರ್ಜನೆಗೆ ಆಳವಾಗಿ ಚರಂಡಿ ತೋಡಿ ಸುತ್ತಲೂ ತಡಿಕೆಗಳಿಂದ ಮರೆಮಾಡಿ ಮಲಮೂತ್ರ ವಿಸರ್ಜಿಸುವ, ಅದರ ಮೇಲೆ ಮಣ್ಣು ಎರಚುವುದಕ್ಕೆ ಪಕ್ಕದಲ್ಲಿ ಮಣ್ಣು ರಾಶಿ ಹಾಕಲಾಯಿತು. ನೀರಿನ ಸೌಲಭ್ಯವನ್ನೂ ಕೂಡ ಮಾಡಲಾಯಿತು. ಕನ್ನಡ ಅಕ್ಷರಗಳಲ್ಲಿ ಚಿತ್ರಗಳಲ್ಲಿ ಬರೆದ ಬೋರ್ಡುಗಳನ್ನು ನೇತು ಹಾಕಲಾಯಿತು. ಆರೋಗ್ಯ ಮತ್ತು ನೈರ್ಮಲ್ಯ ಬಗ್ಗೆ ಸ್ವಯಂ ಸೇವಕರಿಗೆ ವಿಶೇಷ ತರಬೇತಿ ನೀಡಲಾಯಿತು. ಸ್ವಯಂ ಸೇವಕರು ಸ್ವಚ್ಛತೆ ಬಗ್ಗೆ ಅಧಿವೇಶನದಲ್ಲಿ ಭಾಗವಹಿಸುವರಿಗೆಲ್ಲಾ ತಿಳಿಸುವಂತೆ ಹೇಳಲಾಯಿತು[30].

29 ನೇ ಮಾರ್ಚ್ 1938ರಂದು ಕೃಷ್ಣರಾಜಪೇಟೆ ತಾಲ್ಲೂಕಿನ ಕಾಂಗ್ರೆಸ್ ಸಮಿತಿಯು ಕೃಷ್ಣರಾಜಪೇಟೆಯಲ್ಲಿ ಶಾಂತಪ್ಪನವರ ಅಧ್ಯಕ್ಷತೆಯಲ್ಲಿ ಸಭೆಯನ್ನು ನಡೆಸಿತು. ಪಿ.ಸೀತಾರಾಮಯ್ಯ, ಸುಬ್ಬೇಗೌಡ, ಚಿಕ್ಕಣ್ಣ, ಹೆಚ್.ಸಿ.ದಾಸಪ್ಪನವರು ಹಾಜರಿದ್ದರು. ಸಭೆಯಲ್ಲಿ ಹೆಚ್.ಸಿ.ದಾಸಪ್ಪನವರು ಈ ರೀತಿಯಾಗಿ ಅಭಿಪ್ರಾಯ ವ್ಯಕ್ತಪಡಿಸಿದರು. ಮದ್ರಾಸ್ ಸರ್ಕಾರವು ಮೈಸೂರು ಕಾಂಗ್ರೆಸ್ ಸಮಿತಿಯ ಮೇಲೆ ವೈರತ್ವವನ್ನು ಹೊಂದಿದೆ. ಮೈಸೂರು ರಾಜ್ಯವು ಹಿಂದೂ ರಾಜ್ಯವಾಗಿದ್ದು, ದಿವಾನರು ಇಸ್ಲಾಂ ಧರ್ಮಕ್ಕೆ ಸೇರಿದವರು. ಇದರಿಂದ ಸರ್ಕಾರಕ್ಕೆ ಯಾವುದೇ ಸಹಾಯವಾಗುತ್ತಿಲ್ಲ. ಹಿಂದೂ–ಮುಸ್ಲೀಂ ಐಕ್ಯತೆ, ಖಾದಿ ಬಳಕೆ, ಜವಾಬ್ದಾರಿ ಸರ್ಕಾರ ಸ್ಥಾಪನೆಯ ಬಗ್ಗೆ ವಿವರಿಸಿದರು[31].

30 ನೇ ಮಾರ್ಚ್ 1938 ರಂದು ಶ್ರೀರಂಗಪಟ್ಟಣ ತಾಲ್ಲೂಕು ಸಾರ್ವಜನಿಕ ಸಭೆ ನಡೆಯಿತು. ದಿನಾಂಕ 30ನೇ ಮಾರ್ಚ್ 1938 ರಂದು ಎಂ.ಆರ್.ಎನ್.ಶಾಸ್ತ್ರೀ, ರೇವಣ್ಣ, ಕಪನಿಗೌಡ, ಸದಾಶಿವರವರೊಂದಿಗೆ ನಾಗಮಂಗಲದ 100 ಜನ ಪ್ರತಿನಿಧಿಗಳು ಮೈಸೂರು ರಾಜ್ಯ ಕಾಂಗ್ರೆಸ್ ಸೇರಿದರು. ಅದೇ ದಿನ ಸಂಜೆಯಂದು ಸುಬ್ಬರಾಯ ಶೆಟ್ಟಿಯವರ ಮನೆಯಲ್ಲಿ ನಾಗಮಂಗಲ ತಾಲ್ಲೂಕು ಕಾಂಗ್ರೆಸ್ ಸಮಿತಿಯು ಅಸ್ತಿತ್ವಕ್ಕೆ ಬಂದಿತು. ಸದಾಶಿವರಾವ್ ಅಧ್ಯಕ್ಷರಾಗಿ, ಕಪನಿಗೌಡ ಉಪಾಧ್ಯಕ್ಷರಾಗಿ, ಎಂ.ಆರ್.ಎನ್.ಶಾಸ್ತ್ರಿ ಕಾರ್ಯದರ್ಶಿಯಾಗಿ ಹಾಗೂ ಸದಸ್ಯರುಗಳಾಗಿ ರೇವಣ್ಣ, ನಾರಾಯಣರಾವ್, ಸುಬ್ಬರಾಯಶೆಟ್ಟಿ, ಬಸವೇಗೌಡ, ಚಿಕ್ಕೇಗೌಡ, ಗೋವಿಂದಗೌಡ, ತಾಲ್ಲೂಕು ಸಮಿತಿಯು ಬಹುಮತದಿಂದ ನಿರ್ಣಯ ಮೂಲಕ ತಾಲ್ಲೂಕಿನಾದ್ಯಂತ ಪ್ರವಾಸ ಕೈಗೊಂಡಿತು. ಸ್ಥಳೀಯ ಸಂಸ್ಥೆಯೊಂದಿಗೆ 350 ಜನರನ್ನು ಕಾಂಗ್ರೆಸ್ ಪ್ರತಿನಿಧಿಗಳಾಗಿ ಮೈಸೂರು ರಾಜ್ಯ ಕಾಂಗ್ರೆಸ್ ಸಮಿತಿಯನ್ನು ಸೇರಿದರು. ಶಿವಪುರ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸುವಂತೆ ನಾಗಮಂಗಲ ತಾಲ್ಲೂಕು ಸಮಿತಿಯು ಪ್ರತಿನಿಧಿಗಳಿಗೆ ಪ್ರಚಾರ ಮೂಲಕ ತಿಳಿಸಿತು[32]. ದಿನಾಂಕ 31–03–1938 ರಂದು

ಹೆಚ್.ಸಿ.ದಾಸಪ್ಪ ಪಿ.ಸೀತಾರಾಮಯ್ಯರವರು ಚನ್ನರಾಯಪಟ್ಟಣದ ಮೂಲಕ ಕೆ.ಆರ್.ಪೇಟೆ ತಾಲ್ಲೂಕಿನ ಕಿಕ್ಕೇರಿ ನಗರಕ್ಕೆ ಭೇಟಿ ನೀಡಿದ್ದರು. ಕಿಕ್ಕೇರಿ ನಗರದಲ್ಲಿ ಕಾಂಗ್ರೆಸ್ ಮೆರವಣಿಗೆಯನ್ನು ನಡೆಸಲಾಯಿತು. ಸಂಜೆ 7.30ಕ್ಕೆ ಬಸವೇಶ್ವರ ದೇವಸ್ಥಾನದಲ್ಲಿ ಸಭೆ ಸೇರಲಾಯಿತು. ಸುಮಾರು 300 ಜನ ಪ್ರತಿನಿಧಿಗಳು ಭಾಗವಹಿಸಿದ್ದರು. ಸಭೆಯಲ್ಲಿ ಪಿ.ಸೀತಾರಾಮಯ್ಯನವರು ಖಾದಿ ಬಟ್ಟೆ, ಜವಾಬ್ದಾರಿ ಸರ್ಕಾರ ವಿಚಾರ ಪ್ರಸ್ತಾಪಿಸಿದರು ಮತ್ತು ಶಿವಪುರ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸುವಂತೆ ಪ್ರತಿನಿಧಿಗಳಿಗೆ ಮನವಿ ಮಾಡಿದರು[33].

ಮೈಸೂರು ಕಾಂಗ್ರೆಸ್ ಸ್ಥಾಪನೆಯಾದ ನಂತರವೂ ಸರ್ಕಾರವು ಮೈಸೂರು ಕಾಂಗ್ರೆಸ್‌ನ್ನು ಅಧೀಕೃತವಾಗಿ ರಾಜಕೀಯ ಸಂಸ್ಥೆ ಎಂದು ಮಾನ್ಯ ಮಾಡದ ಕಾರಣ ಮೈಸೂರು ಕಾಂಗ್ರೆಸ್ ಮುಖಂಡರುಗಳು ಮಂಡ್ಯ ಜಿಲ್ಲೆ ಹಾಗೂ ಸಂಸ್ಥಾನದಾದ್ಯಂತ ಪ್ರವಾಸ ಮಾಡಿ ಸರ್ಕಾರದ ಧೋರಣೆಗಳನ್ನು, ಮಿರ್ಜಾ ಇಸ್ಮಾಯಿಲ್ ಆಡಳಿತವನ್ನು ಕಟುವಾಗಿ ಟೀಕಿಸಿದರು. ಕಾಂಗ್ರೆಸ್ ಪ್ರಚಾರದೊಂದಿಗೆ ಶಿವಪುರ ರಾಷ್ಟ್ರಕೂಟದಲ್ಲಿ ಭಾಗವಹಿಸುವಂತೆ ಮನವಿ ಮಾಡಿದರು. ರಾಜಕೀಯ ಸುಧಾರಣಾ ಸಮಿತಿಗೆ ಅಸಹಕಾರ ಮತ್ತು ಧ್ವಜ ಸತ್ಯಾಗ್ರಹವನ್ನು ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಶಿವಪುರದಲ್ಲಿ ಯಶಸ್ವಿಯಾಗಿ ನಡೆಸಲು ಬಿರುಸಿನ ಸಿದ್ಧತೆಯನ್ನು ಮುಂದವರಿಸಿದರು. ಮಂಡ್ಯ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಕಾಂಗ್ರೆಸ್ ಸಭೆ ನಡೆಸಲು ಮತ್ತು ಶಿವಪುರ ರಾಷ್ಟ್ರಕೂಟಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಭಾಗವಹಿಸಲು ಪ್ರಚಾರ ಕಾರ್ಯ ಆರಂಭಿಸಿದರು. ಸ್ವಯಂ ಸೇವಕ ತಂಡಗಳು ಏಪ್ರಿಲ್ ಮೊದಲನೇ ವಾರದಲ್ಲಿ ಶಿವಪುರಕ್ಕೆ ಆಗಮಿಸಿದವು. ಏಪ್ರಿಲ್ ತಿಂಗಳದ ಪರೀಕ್ಷೆಗಳು ಮುಗಿದ ನಂತರ ಶಿವಪುರ ರಾಷ್ಟ್ರಕೂಟದಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳು ಮತ್ತು ಕಾಲೇಜುಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳನ್ನು ಭಾಗವಹಿಸುವಂತೆ ಪ್ರೋತ್ಸಾಹಿಸಲಾಯಿತು. ಈ ಕಾರ್ಯವನ್ನು ಎಸ್.ಕೆ.ವೆಂಕಟರಂಗ, ವಿ.ಎಸ್.ನಾರಾಯಣರಾವ್, ತಿಮ್ಮಾರೆಡ್ಡಿರವರ ಹಾಗೂ ಇತರ ಮುಖಂಡರುಗಳು ನಿರಂತರವಾಗಿ ಧ್ವಜ ಸತ್ಯಾಗ್ರಹ ಚಳುವಳಿಗೆ ವಿದ್ಯಾರ್ಥಿಗಳನ್ನು ಕರೆತರುವಲ್ಲಿ ಯಶಸ್ವಿಯಾದರು[34].

ಎಂ.ಎನ್.ಜೋಯಿಸರ ನೇತೃತ್ವದಲ್ಲಿ ಶಿವಪುರದಲ್ಲಿ ಸ್ವಯಂ ಸೇವಕರ ಶಿಬಿರ ಆರಂಭಿಸಿ ಬೆಂಗಳೂರಿನ ರಾಮಚಂದ್ರರಾವ್ ಮತ್ತು ಎನ್.ಆರ್.ರಾಘವೇಂದ್ರ ಮೂರ್ತಿರವರನ್ನು ನೇಮಿಸಿದರು. ಸ್ವಯಂಸೇವಕರಿಗೆ ಬೆಳಿಗ್ಗೆ ಮತ್ತು ಸಂಜೆ ಕವಾಯತು, ರಾಷ್ಟ್ರಗೀತೆ ಹಾಡುವುದು, ರಾಷ್ಟ್ರಧ್ವಜಾರೋಹಣ, ಅವರೋಹಣಗಳನ್ನು ಅಭ್ಯಾಸ ಮಾಡುವುದು, ಅಧಿವೇಶನಕ್ಕೆ ಬಂದ ಪ್ರತಿನಿಧಿಗಳೊಂದಿಗೆ ಹಾಗೂ ಕಾರ್ಯ ಕಲಾಪಗಳ ಸಂದರ್ಭದಲ್ಲಿ ಹೇಗೆ ನಡೆದುಕೊಳ್ಳಬೇಕು ಎಂಬುದನ್ನು ತರಬೇತಿ ಮೂಲಕ

ನೀಡಿದರು[35]. ಏಪ್ರಿಲ್ ತಿಂಗಳ, ಪರೀಕ್ಷೆಗಳ ಸಮಯವಾದ್ದರಿಂದ ಅನೇಕ ಸ್ವಯಂ ಸೇವಕರು ಏಪ್ರಿಲ್ 1ನೇ ತಾರೀಖು ನಂತರ ಬರುವುದಾಗಿ ತಿಳಿಸಿದವರು. ಸ್ವಯಂ ಸೇವಕ ಅಥವಾ ಸ್ಕೌಟ್ ಶಿಕ್ಷಣವನ್ನು ಪಡೆದಿರುವ ಸ್ವಯಂಸೇವಕರು ಯೂನಿಫಾರಂಗಳೊಡನೆ ಬಂದು ತಮ್ಮ ನಾಯಕರಲ್ಲಿ ಹಾಜರಾಗಲು ತಿಳಿಸಲಾಯಿತು[36]. ಮಂಡ್ಯದಲ್ಲಿರುವ ಹೆಚ್.ಹೊನ್ನಯ್ಯನವರ ಮನೆಯನ್ನು ಮಂಡ್ಯ ನಗರ ಹಾಗೂ ತಾಲ್ಲೂಕು ಸಮಿತಿಯ ಕಾರ್ಯಾಲಯವಾಗಿ ಆಯ್ಕೆ ಮಾಡಲಾಯಿತು. ಹೆಚ್.ಹೊನ್ನಯ್ಯ, ಚಿಕ್ಕಲಿಂಗಯ್ಯ, ಲಿಂಗಣ್ಣನವರು ಪ್ರಚಾರ ಸಮಿತಿಯ ಸದಸ್ಯರಾಗಿ ಆಯ್ಕೆಯಾದರು. ಹೆಚ್.ಸಿ.ದಾಸಪ್ಪ ಶಿವಪುರ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾಗಲೆಂದು ಬೆಂಬಲ ಸೂಚಿಸಿತು. ಹಾಗೂ ತಾಲ್ಲೂಕು ಮತ್ತು ನಗರದಲ್ಲಿ ಖಾದಿ ಬಟ್ಟೆ, ಶಿವಪುರ ರಾಷ್ಟ್ರಕೂಟದಲ್ಲಿ ಭಾಗವಹಿಸುವಂತೆ ಪ್ರಚಾರ ಮಾಡಿ ಜನಗಳಲ್ಲಿ ಮನವಿ ಮಾಡಿತು[37]. ದಿನಾಂಕ 3ನೇ ಏಪ್ರಿಲ್ 1938ರಂದು ಶಿವಪುರ ರಾಷ್ಟ್ರಕೂಟ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ಆರಂಭವಾಯಿತು. ಟಿ.ಸಿದ್ಧಲಿಂಗಯ್ಯನವರ ಹೆಸರಿನೊಂದಿಗೆ ಕೆ.ಟಿ.ಭಾಷ್ಯಂ, ಹೆಚ್.ಸಿ.ದಾಸಪ್ಪನವರ ಹೆಸರುಗಳೂ ಕೇಳಿ ಬಂದವು. ಆಗ ಪ್ರಜಾಪ್ರಭುತ್ವದ ರೀತಿಯಲ್ಲಿ ಚುನಾವಣೆ ನಡೆಯಿತು. ಬೆಂಗಳೂರು, ಮೈಸೂರು, ಹಾಸನ, ಚಿತ್ರದುರ್ಗ, ಕಡೂರು, ಶಿವಮೊಗ್ಗ ಜಿಲ್ಲಾ ಕಾಂಗ್ರೆಸ್ ಸಮಿತಿಗಳು ಟಿ.ಸಿದ್ಧಲಿಂಗಯ್ಯನವರಿಗೂ, ಕೋಲಾರ, ತುಮಕೂರು ಜಿಲ್ಲಾ ಕಾಂಗ್ರೆಸ್ ಸಮಿತಿಗಳು ಕೆ.ಟಿ.ಭಾಷ್ಯಂರವರಿಗೂ, ಮಂಡ್ಯ ತಾಲ್ಲೂಕು ಕಾಂಗ್ರೆಸ್ ಸಮಿತಿ ಹೆಚ್.ಸಿ.ದಾಸಪ್ಪನವರಿಗೂ ಬೆಂಬಲ ಸೂಚಿಸಿದವು. ಬಹುಮತಗಳಿಸಿದ ಟಿ.ಸಿದ್ಧಲಿಂಗಯ್ಯನವರು ಮೈಸೂರು ಕಾಂಗ್ರೆಸ್ ಪ್ರಥಮ ಅಧಿವೇಶನದ ಅಧ್ಯಕ್ಷರಾಗಿ ಆಯ್ಕೆಯಾದರು[38].

4ನೇ ಏಪ್ರಿಲ್ 1938 ರಂದು ಮಳವಳ್ಳಿ ತಾಲ್ಲುಕು ಕಾಂಗ್ರೆಸ್ ಸಮಿತಿಯ ಸಭೆಯು ನಡೆಯಿತು. ಹೆಚ್.ಕೆ.ವೀರಣ್ಣಗೌಡ, ಹೆಚ್.ಸಿ.ದಾಸಪ್ಪ ಹಾಗೂ ಮಳವಳ್ಳಿ ವೀರಪ್ಪನವರು ಭಾಗವಹಿಸಿದ್ದರು. ಏಪ್ರಿಲ್ 11, 12 ಮತ್ತು 13 ರಂದು ನಡೆಯುವ ಶಿವಪುರ ಅಧಿವೇಶನದಲ್ಲಿ ಮಳವಳ್ಳಿ ತಾಲ್ಲೂಕಿನಿಂದ ಅಧಿಕ ಸಂಖ್ಯೆಯಲ್ಲಿ ಜನರು ಭಾಗವಹಿಸುವಂತೆ ಪ್ರಾರ್ಥಿಸಿದರು. ಕಾಂಗ್ರೆಸ್ ಬೆಂಬಲಿಸುವಂತೆ ಕೋರಿದರು[39]. ದಿನಾಂಕ 5ನೇ ಏಪ್ರಿಲ್ 1938ರಂದು ಸುಮಾರು 20ಜನ ಸ್ವಯಂ ಸೇವಕರು ಶಿವಪುರಕ್ಕೆ ಬಂದು ಸೇರಿದರು. ಕೊಪ್ಪದ ಜೋಗೀಗೌಡರು 100 ರೂಪಾಯಿಗಳನ್ನು ಸಂಗ್ರಹ ಮಾಡಿದರು ಇವರೊಂದಿಗೆ ಬಂದ ಪ್ರತಿನಿಧಿಗಳು ವಾಸಕ್ಕೆ ತಿರುಮಲೇಗೌಡರ ಹೊಲದಲ್ಲಿ ತಾತ್ಕಾಲಿಕ ರೂಮುಗಳನ್ನು ನಿರ್ಮಿಸಲಾಯಿತು. ಮೈಸೂರಿನ ಚೆನ್ನಯ್ಯನವರು ನೀರಿನ ಸಂಗ್ರಹಕ್ಕೆ 30 ತೊಟ್ಟಿ (ಬಾವಿ/ಡೋಣಿ)ಗಳನ್ನು ಶಿವಪುರ ರಾಷ್ಟ್ರಕೂಟದ ನೀರಿನ ಸೌಕರ್ಯವನ್ನು ದಾನವಾಗಿ ನೀಡಿದರು[40].

ದಿನಾಂಕ 6ನೇ ಏಪ್ರಿಲ್ 1938ರಂದು ಮಂಡ್ಯ ನಗರ ಕಾಂಗ್ರೆಸ್ ಸಮಿತಿಯ ಸಭೆಯು ಹೆಚ್.ಹೊನ್ನಯ್ಯನವರ ಅಧ್ಯಕ್ಷತೆಯಲ್ಲಿ ಮಂಡ್ಯದ ಜ್ಯೂಬಿಲಿ ಪಾರ್ಕ್‌ನಲ್ಲಿ ನಡೆಯಿತು. ಬಿ.ಎ.ಕೃಷ್ಣ ಕಾರ್ಯದರ್ಶಿಗಳು ರಾಷ್ಟ್ರೀಯ ದಿನಾಚರಣೆಯ ಕುರಿತು ಮಾತನಾಡಿದರು. ಶ್ರೀನಿವಾಸರಾವ್ ಮಾತನಾಡುತ್ತಾ ಖಾದಿ ಬಟ್ಟೆಯ ಪ್ರಚಾರಕ್ಕಾಗಿ ಖಾದಿ ಪ್ರಕಾಶಕ ಸಂಘವನ್ನು ಮಂಡ್ಯದಲ್ಲಿ ಸ್ಥಾಪಿಸಿದ್ದನ್ನು ತಿಳಿಸಿದರು. ಮಂಡ್ಯ ನಗರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಡಾ.ಪಶುಪತಿಯವರು ಶಿವಪುರ ಕಾಂಗ್ರೆಸ್ ಅಧಿವೇಶನದ ಗುರಿ ಮತ್ತು ಉದ್ದೇಶಗಳು, ಜವಾಬ್ದಾರಿ ಸರ್ಕಾರ ಸ್ಥಾಪನೆ ನಿರ್ಣಯದ ಬಗ್ಗೆ ಮಾಹಿತಿ ನೀಡಿದರು. ಸ್ವಾಗತ ಸಮಿತಿಯ ಸದಸ್ಯರಾಗಿ ಹೆಚ್.ಹೊನ್ನಯ್ಯ, ಪಶುಪತಿರಾವ್, ಚಿಕ್ಕಲಿಂಗಯ್ಯ, ದೊರೆಪ್ಪ ಅಯ್ಯರ್, ಅನಂತರಾಮಭಟ್ಟ ಆಯ್ಕೆಯಾಗಿದ್ದನ್ನು ಸಭೆಯ ನಡಾವಳಿಯ ವರದಿಯಲ್ಲಿ ತಿಳಿಸಲಾಯಿತು[41]. ದಿನಾಂಕ 7ನೇ ಏಪ್ರಿಲ್ 1938ರಂದು ಕೆ.ಆರ್.ಪೇಟೆ ತಾಲ್ಲೂಕು, ಕಾಂಗ್ರೆಸ್ ಸಭೆಯು ಮೈಸೂರು ಸಿದ್ದಪ್ಪನವರ ಅಧ್ಯಕ್ಷತೆಯಲ್ಲಿ ಕೆ.ಆರ್.ಪೇಟೆ ನಗರದಲ್ಲಿ ಸಭೆಯು ನಡೆಯಿತು. ಸುಮಾರು 100 ಜನ ಪ್ರತಿನಿಧಿಗಳು ಭಾಗವಹಿಸಿದ್ದರು. ಸಭೆಯಲ್ಲಿ ಹಾಜರಿದ್ದ ಪ್ರತಿನಿಧಿಗಳು, ನೆರೆಹೊರೆ ಜನರುಗಳನ್ನು ಕಾಂಗ್ರೆಸ್ ಸೇರ್ಪಡೆಗೊಂಡು ಶಿವಪುರ ರಾಷ್ಟ್ರಕೂಟದಲ್ಲಿ ಭಾಗವಹಿಸಬೇಕೆಂದು ಮನವಿ ಮಾಡಿದರು[42].

ದಿನಾಂಕ 08–04–1938 ರಂದು ಮೈಸೂರಿನ ಪ್ರಖ್ಯಾತ ವಕೀಲರಾದ ರಾಜಗೋಪಾಲ ಅಯ್ಯಂಗಾರ್‌ರವರ ಅಧ್ಯಕ್ಷತೆಯಲ್ಲಿ ಮಂಡ್ಯದ ಸಿಲ್ವರ್ ಜೂಲಿ ಪಾರ್ಕ್‌ನಲ್ಲಿ ಕಾಂಗ್ರೆಸ್ ಸಭೆ ನಡೆಯಿತು. ನೆರೆದ ಜನರಿಗೆ ಅಧ್ಯಕ್ಷರ ತಮ್ಮ ಭಾಷೆಯಲ್ಲಿ ಕಾಂಗ್ರೆಸ್‌ನಿಂದ ಮಾತ್ರ ರೈತಾಪಿ ಜನರ ಜೀವನ ಉತ್ತಮಪಡಿಸುವ, ಗ್ರಾಮ ಜನರ ಜೀವನದ ಗುಣಮಟ್ಟವನ್ನು ಹೆಚ್ಚಿಸುವ, ನಾಗರೀಕ ಹಕ್ಕುಗಳನ್ನು ಒದಗಿಸುವ ಬಗ್ಗೆ ತಿಳಿಸಿದರು. ಕೋಲಾರದ ಪ್ರಖ್ಯಾತ ವಕೀಲರಾದ ಕೆ.ಪಿ.ರಾಮನ್‌ರವರ ಶಿವಪುರ ರಾಷ್ಟ್ರಕೂಟವು ಮೈಸೂರು ಮಹಾರಾಜರ ಸರ್ಕಾರಕ್ಕೆ ಎಚ್ಚರಿಕೆಯನ್ನು ನೀಡುತ್ತಾ ಜವಾಬ್ದಾರಿ ಸರ್ಕಾರ ಸ್ಥಾಪಿಸುವ ಅಗತ್ಯದ ಬಗ್ಗೆ ತಿಳಿಸಿದರು. ನಂತರ ತಗಡೂರು ರಾಮಚಂದ್ರರಾವ್‌ರವರು ಮಾತನಾಡುತ್ತಾ "ಈಗಿರುವ ಬೇಜಬ್ದಾರಿ ಸರ್ಕಾರವು ಹೋಗಿ ಜವಾಬ್ದಾರಿ ಸರ್ಕಾರ ಬೇಕು" ಎಂದರು. ಈ ಮಧ್ಯೆ ಮೈಸೂರಿನಲ್ಲಿ ನಡೆದ ಮುಷ್ಕರದಲ್ಲಿ ಜಯಚಾಮರಾಜ ಒಡೆಯರು ವಿದ್ಯಾರ್ಥಿ ಸಂಘಟನೆಯೊಂದಿಗೆ ಸೇರ್ಪಡೆಗೊಂಡಿದ್ದರು. ಜವಾಬ್ದಾರಿ ಸರ್ಕಾರ ಸ್ಥಾಪನೆ, ಪ್ರಜೆಗಳಲ್ಲಿ ನಂಬಿಕೆಯನ್ನಿರಿಸಿಕೊಂಡಿದ್ದಾರೆ ಎಂದು ದಿವಾನರ ವರ್ತನೆಯನ್ನು ಟೀಕಿಸಿದರು. ವೀರಕೇಸರಿ ಸೀತಾರಾಮಶಾಸ್ತ್ರಿಯವರು ಸರ್ಕಾರದ ಆಡಳಿತ ಕ್ರಮವನ್ನು ಟೀಕಿಸಿ ಜವಾಬ್ದಾರಿ ಸರ್ಕಾರದ ಬೇಡಿಕೆಯನ್ನಿಟ್ಟರು.

[illegible]

[illegible]

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸಾರ್ವಜನಿಕರಲ್ಲಿ ಕಾಂಗ್ರೆಸ್ ಬೆಂಬಲಿಸುವಂತೆ ಮತ್ತು ಶಿವಪುರ ರಾಷ್ಟ್ರಕೂಟದಲ್ಲಿ ಭಾಗವಹಿಸುವಂತೆ ಮನವಿ ಮಾಡಿದರು[43].

ಶಿವಪುರ ರಾಷ್ಟ್ರಕೂಟ ತಡೆಯಲು ಮೈಸೂರು ಪೊಲೀಸರು ಕೈಗೊಂಡ ಕ್ರಮಗಳು : ರಾಷ್ಟ್ರೀಯ ಕಾಂಗ್ರೆಸ್ ಹರಿಪುರದಲ್ಲಿ ನಡೆಸಿದ ಅಧಿವೇಶನ ಮಾದರಿಯಲ್ಲೇ ಶಿವಪುರ ಅಧಿವೇಶನ ನಡೆಸುವಂತೆ ಸಿದ್ಧತೆಗಳು ನಡೆದವು. ಇದು ಯಶಸ್ವಿಯಾಗದಂತೆ ತಡೆಯುವುದು ಸಂಸ್ಥಾನದ ದಿವಾನರಿಗೆ ಪ್ರತಿಷ್ಠೆಯ ವಿಷಯವಾಗಿತ್ತು. ಇದಕ್ಕಾಗಿ ಈ ಅಧಿವೇಶನವನ್ನು ವಿಫಲಗೊಳಿಸಲು ಸರ್ಕಾರದ ಕ್ರಮಗಳನ್ನು ಕೈಗೊಂಡಿತು. ಮದ್ರಾಸ್ ರಾಜ್ಯದಲ್ಲಿ ಅವಹೇಳನಕ್ಕೆ ಗುರಿಯಾಗಿದ್ದ ಪೋಲೀಸ್ ಅಧಿಕಾರಿ ಹ್ಯಾಮಿಲ್ಟನ್ ಅವರನ್ನು ಮೈಸೂರಿಗೆ ಕರೆಸಿಕೊಂಡು ಪೋಲೀಸ್ ಮಹಾನಿರ್ದೇಶಕರನ್ನಾಗಿ ನೇಮಿಸಲಾಯಿತು[44].

ಮೈಸೂರು ಪೋಲೀಸ್ ಅಧಿಕಾರಿಗಳಿಗೆ ಶಿವಪುರ ಕಾಂಗ್ರೇಸ್ ಅಧಿವೇಶನದ ಕುರಿತಂತೆ ಪ್ರತ್ಯೇಕ ಫೈಲ್ ಇಡುವಂತೆ, ನಿರಂತರವಾಗಿ ವರದಿಯನ್ನು ಸಲ್ಲಿಸುವಂತೆ ತಿಳಿಸಿದರು[45]. ಶಿವಪುರ ಕಾಂಗ್ರೆಸ್ ಅಧಿವೇಶನ ಹಿನ್ನೆಲೆಯಲ್ಲಿ ಅಲ್ಲಿ ನಡೆಯುವ ಚಟುವಟಿಕೆಗಳನ್ನು ಗಮನಿಸುವುದಕ್ಕಾಗಿ ಬಾಂಬೆ ಪೋಲೀಸ್‌ನ ಒಬ್ಬ ಸಿ.ಐ.ಡಿ. ಇನ್ಸ್‌ಪೆಕ್ಟರ್‌ನನ್ನು ಶಿವಪುರ ಮೈಸೂರು ಪೋಲೀಸ್ ನೇಮಕ ಮಾಡಿದರು. ಸ್ಥಳೀಯ ಪೋಲೀಸ್ ಅವರಿಗೆ ಬೇಕಾದ ಸಹಾಯ ಸಹಕಾರ ನೀಡುವ ವ್ಯವಸ್ಥೆ ಮಾಡಿದರು[46]. ಎಫ್.ಡಿ.ದೊಡ್ಡಗೌಡ ಎಂಬ ಪೋಲೀಸ್ ಅಧಿಕಾರಿ ಸಾಮಾನ್ಯನಂತೆ ಶಿವಪುರ ಅಧಿವೇಶನದಲ್ಲಿ ಭಾಗವಹಿಸುವಂತೆ, ನಿರಂತರವಾಗಿ ಮೈಸೂರು ಪೋಲೀಸ್‌ನವರೆಗೆ ರಹಸ್ಯ ಮಾಹಿತಿಯನ್ನು ನೀಡುವಂತೆ ತಿಳಿಸಲಾಯಿತು[47]. ಮೈಸೂರು ಮಹಾರಾಜ ಸರ್ಕಾರದ ಮುಖ್ಯ ಕಾರ್ಯದರ್ಶಿಯಾಗಿದ್ದ. ಬಿ.ಟಿ.ಕೇಶವ ಅಯ್ಯಾಂಗಾರ್‌ರವರು ಮೈಸೂರು ಜಿಲ್ಲಾ ಮುಖ್ಯ ಮ್ಯಾಜಿಸ್ಟ್ರೇಟರ್ ಎಂ.ಜಿ.ಮೇಕ್ರಿಯವರಿಗೆ ಪತ್ರ ಬರೆದು ಈ ವಿಷಯವನ್ನು ತಿಳಿಸಿದರು. ಮೈಸೂರು ಕಾಂಗ್ರೆಸ್ಸಿನವರು ಸಭೆ ನಡೆಸಲಿ, ಮೆರವಣಿಗೆ ಮಾಡಲಿ, ಆದರೆ ಅಖಿಲ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಧ್ವಜವನ್ನು ಹಾರಿಸು ಮತ್ತು ಧ್ವಜ ವಂದನೆ ಸಲ್ಲಿಸುವುದನ್ನು ತಡೆಗಟ್ಟಲು ಸೂಕ್ತ ಕ್ರಿಮಿನಲ್ ಪ್ರೋಸೀಜರ್ ಕೋಡ್‌ನ್ನು ಬಳಸಬೇಕೆಂದು ಗೌಪ್ಯವಾದ ಪತ್ರದ ಮೂಲಕ ತಿಳಿಸಿದರು. ಈ ಮೂಲಕ ಮೈಸೂರು ಧ್ವಜ ಹಾಗೂ ಸಾರ್ವಭೌಮಾಧಿಕಾರವನ್ನು ಕಾಪಾಡಬೇಕೆಂದು ತಿಳಿಸಿದರು[48]. ಎಂ.ವಿ.ವಿ.ನಾಯಕ ಎಂಬ ಬೆಂಗಳೂರು ಜಿಲ್ಲಾ ಪೋಲೀಸ್ ಅಧಿಕಾರಿಯು ಪೋಲೀಸ್ ರಹಸ್ಯ ವರದಿಯಲ್ಲಿ ಉಲ್ಲೇಖಿಸಿದಂತೆ ಮೈಸೂರು ಮಹಾರಾಜರ ಸರ್ಕಾರದ ಪೋಲೀಸ್ ಮುಖ್ಯ ಕಾರ್ಯದರ್ಶಿ ಬಿ.ಟಿ.ಕೇಶವ ಅಯ್ಯಾಂಗಾರ್ ಎಂಬುವವರು ಶಿವಪುರ ಕಾಂಗ್ರೆಸ್ ರಾಷ್ಟ್ರಕೂಟದಲ್ಲಿ ಭಾಗವಹಿಸಿದ್ದನ್ನು ಧೃಡೀಕರಿಸುತ್ತದೆ[49]. ಮೈಸೂರು ಸರ್ಕಾರ ಪೋಲೀಸ್‌ರವರು ಶಿವಪುರದಲ್ಲಿ ಕಾಂಗ್ರೆಸ್ ರಾಷ್ಟ್ರಕೂಟದಲ್ಲಿ ಪ್ರಮುಖ

ನಾಯಕರುಗಳು ಏನೇನು ಮಾತನಾಡುತ್ತಾರೋ ಅದರ ವರದಿ ಮಾಡಲುಒಬ್ಬ ಶೀಘ್ರಲಿಪಿಕಾರ (Stenographer)ನನ್ನು ನೇಮಕ ಮಾಡಿ ಕಳುಹಿಸಿದರು[50].

ಶಿವಪುರಕ್ಕೆ ಪತ್ರಿಕಾ ಪ್ರತಿನಿಧಿಗಳಿಗೆ ವ್ಯವಸ್ಥೆ ಮಾಡಿದ ಬಿಡಾರಗಳಲ್ಲಿ ಬಂದು ನೆಲೆಸಿದರು. ಪ್ರತಿಯೊಂದು ಪತ್ರಿಕೆಗೂ ಒಬ್ಬೊಬ್ಬ ಪ್ರತಿನಿಧಿಯಂತೆ ಅವಕಾಶ ಮಾಡಿಕೊಡಲಾಗಿತ್ತು. ಸಂಯುಕ್ತ ಕರ್ನಾಟಕ, ವಿಶ್ವಕರ್ನಾಟಕ, ಸಾಧ್ವಿ, ನವಜೀವನ, ಟೈಮ್ಸ್ ಆಫ್ ಇಂಡಿಯಾ, ಇಂಡಿಯನ್ ಎಕ್ಸ್‌ಪ್ರೆಸ್, ದಿ ಹಿಂದೂ, ಅಸೋಸಿಯೇಟೆಡ್ ಪ್ರೆಸ್ ಮೊದಲಾಗ ಪತ್ರಿಕೆಗಳ ಪ್ರತಿನಿಧಿಗಳ ಅಧಿವೇಶನದಲ್ಲಿ ಹಾಜರಿದ್ದರು. ಅಧಿವೇಶನದ ಬಗ್ಗೆ ಆಕರ್ಷಕವಾದ ಶೀರ್ಷಿಕೆಯ ಮೂಲಕ ಲೇಖನಗಳನ್ನು ಪ್ರಕಟಿಸುತ್ತಿದ್ದರು. ಇದರಿಂದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಅಧಿವೇಶನದಲ್ಲಿ ಭಾಗವಹಿಸಲು ಸಹಕಾರಿಯಾಯಿತು[51].

ಸರ್ಕಾರದ ಸಿದ್ಧತೆಗೂ ಕೊರತೆಯಿರಲಿಲ್ಲ. ಶಿವಪುರದ ತುಂಬ ಗೂಢಚಾರರ ಹಾಗೂ ಸಾಮಾನ್ಯ ಪೋಲೀಸರು ನೇಮಕರಾಗಿದ್ದರು. ಜಿಲ್ಲಾ ಮ್ಯಾಜಿಸ್ಟ್ರೇಟರಾದ ಜಿ.ಎಂ.ಮೇತ್ರಿ ಮದ್ದೂರಿನ ಪ್ರವಾಸಿ ಬಂಗಲೆಯಲ್ಲಿ ಮೊಕ್ಕಾಂ ಹೂಡಿದ್ದರು. ಧ್ವಜಾರೋಹಣದ ದಿನಕ್ಕೆ ಬಳಸಲು 600 ಜನ ಶಸ್ತ್ರಸಜ್ಜಿತ ಪೋಲಿಸರು ಸಿದ್ಧರಾಗಿದ್ದರು. ದಿನಾಂಕ 10 ನೇ ಏಪ್ರಿಲ್ 1938ರಂದು ಬೆಳಿಗ್ಗೆ ಎರಡು ಬಸ್ಸಿನಲ್ಲಿ ಮೀಸಲು ಪೋಲೀಸ್ ಪಡೆ ಮದ್ದೂರಿಗೆ ಆಗಮಿಸಿದರು[52].

ಶಿವಪುರ ರಾಷ್ಟ್ರಕೂಟ ಕಾರ್ಯಕ್ರಮದ ಪಟ್ಟಿ

ಶಿವಪುರ ರಾಷ್ಟ್ರಕೂಟ ಕಾರ್ಯಕ್ರಮದ ಪಟ್ಟಿ ಈ ಕೆಳಕಂಡಂತೆ ರೂಪಿಸಲಾಗಿತ್ತು. ದಿನಾಂಕ 1938 ರ ಏಪ್ರಿಲ್ 10ರ ಭಾನುವಾರದ ಮಧ್ಯಾಹ್ನ 1ರಿಂದ 4ರವರೆಗೆ ವಿಷಯ ನಿಯಮಕವಾದ ಸಮಿತಿ ಚಪ್ಪರದಲ್ಲಿ ಕಾರ್ಯಕಾರಿ ಮಂಡಳಿಯ ಸಭೆ, ಸಂಜೆ 6 ರಿಂದ ರಾತ್ರಿ 8 ಗಂಟೆಯವರೆಗೆ ಮದ್ದೂರಿನಿಂದ ಶಿವಪುರಕ್ಕೆ ಅಧ್ಯಕ್ಷರಾದ ಟಿ.ಸಿದ್ಧಲಿಂಗಯ್ಯ ಅವರನ್ನು ಎತ್ತಿನಗಾಡಿಯಲ್ಲಿ ಮೆರವಣಿಗೆ ದಿನಾಂಕ 1938 ಏಪ್ರಿಲ್ 11 ರ ಸೋಮವಾರದ ಬೆಳಿಗ್ಗೆ 8 ಗಂಟೆಗೆ ರಾಷ್ಟ್ರಧ್ವಜಾರೋಹಣ, 9 ರಿಂದ 12ರವರೆಗೆ ವಿಷಯ ನಿಯಮಕ ಸಮಿತಿ ಮೀಟಿಂಗು (ಸಭೆ) ಪುನಃ 2 ಗಂಟೆಯಿಂದ 4ಗಂಟೆಯವರೆಗೆ ಸದರಿ ಸಮಿತಿ ಸಭೆ, ಸಂಜೆ 5.30 ಕ್ಕೆ ಬಹಿರಂಗ ಅಧಿವೇಶನ. ದಿನಾಂಕ 1938 ರ ಏಪ್ರಿಲ್ 12 ರ ಮಂಗಳವಾರದ ಬೆಳಿಗ್ಗೆ 8 ಗಂಟೆಗೆ ರಾಷ್ಟ್ರಧ್ವಜಾರೋಹಣ, ಬೆಳಿಗ್ಗೆ 8.30 ರಿಂದ ಮಧ್ಯಾಹ್ನ 12 ಗಂಟೆಯವರೆಗೆ ವಿಷಯ ನಿಯಮಕ ಸಮಿತಿಯ ಸಭೆ, ಸಂಜೆ 5.30ಕ್ಕೆ ಬಹಿರಂಗ ಅಧಿವೇಶನ. ದಿನಾಂಕ 1938 ರ ಏಪ್ರಿಲ್ 13 ರ ಬುಧವಾರದ ಬೆಳಿಗ್ಗೆ 8 ಗಂಟೆಗೆ ರಾಷ್ಟ್ರಧ್ವಜಾರೋಹಣ. ಬೆಳಿಗ್ಗೆ 8.30

ರಿಂದ 11ರವರೆಗೆ ಕೆಲಸಗಾರರ ಸಭೆ. ದಿನಾಂಕ 10.04.1938 ರ ಭಾನುವಾರ ರಾತ್ರಿ ತಗಡೂರು ರಾಮಚಂದ್ರರಾವರ ಅಧ್ಯಕ್ಷತೆಯಲ್ಲಿ ಯುವಜನ ಸಮ್ಮೇಳನವು ಕಾಂಗ್ರೆಸ್‌ನ ಬೆಳವಣಿಗೆಗೆ ಸಂಬಂಧಪಟ್ಟ ಚಿತ್ರಪಟಗಳು, ಸಾಹಿತ್ಯ ಮತ್ತು ಇತರ ವಸ್ತುಗಳು ಪ್ರದರ್ಶನ[53].

ಮೈಸೂರು ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾಗಿದ್ದ ಟಿ.ಸಿದ್ಧಲಿಂಗಯ್ಯನವರು ದಿನಾಂಕ 9ನೇ ಏಪ್ರಿಲ್ 1938ರಂದು ಬೆಂಗಳೂರಿನಿಂದ ಶಿವಪುರಕ್ಕೆ ಪ್ರಯಾಣ ಆರಂಭಿಸಿದರು. ಹಳ್ಳಿಗಳಲ್ಲಿ ಜನರು ರಸ್ತೆಯ ಇಕ್ಕೆಲಗಳಲ್ಲಿ ಸಾಲು ಸಾಲಾಗಿ ನಿಂತು ಅಧ್ಯಕ್ಷರಿಗೆ ಶುಭ ಕೋರಿದರು. ಆ ದಿನ ಸಂಜೆ ನಾಲ್ಕು ಗಂಟೆಗೆ ಅವರು ಕಾರಿನಲ್ಲಿ ಶಿವಪುರ ತಲುಪಿದರು. ರಾಜ್ಯದ ಎಲ್ಲಾ ಕಡೆಯಿಂದ ಮುಖಂಡರು, ಕಾರ್ಯಕರ್ತರು ಮತ್ತು ಸ್ವಯಂ ಸೇವಕರ ತಂಡಗಳೇ ಅಲ್ಲದೇ ಮಂಡ್ಯ ಜಿಲ್ಲೆಯ (ಅಂದು ಮೈಸೂರು ಜಿಲ್ಲೆಯ ಒಂದು ತಾಲ್ಲೂಕು) ಹಾಗೂ ಮದ್ದೂರಿನ ಸುತ್ತಮುತ್ತಲಿನ ಪಟ್ಟಣಗಳು, ಹಳ್ಳಿಗಳಿಂದ ಸಾವಿರಾರು ಜನ ರೈಲುಗಳಲ್ಲಿ, ಬಸ್ಸುಗಳಲ್ಲಿ, ಕಾರುಗಳಲ್ಲಿ, ಎತ್ತಿನ ಗಾಡಿಗಳಲ್ಲಿ ಮತ್ತು ಕಾಲ್ನಡಿಗೆಯಲ್ಲಿ ಶಿವಪುರಕ್ಕೆ ಬಂದು ಸೇರಿದರು. ದಿನಾಂಕ 10 ನೇ ಏಪ್ರಿಲ್ 1938 ರಂದು ಕೆಂಗಲ್ ಹನುಮಂತಯ್ಯನವರು ಸ್ವಯಂ ಸೇವಕರ ತಂಡವನ್ನು ಕಟ್ಟಿ, ಮಾರ್ಗದರ್ಶನ ನೀಡಿ ಶಿವಪುರಕ್ಕೆ ಕರೆತಂದದ್ದನ್ನು ಈ ರೀತಿಯಾಗಿ ಪ್ರತಿಕ್ರಿಯಿಸಿದ್ದಾರೆ. "ನಾಲ್ಕನೇ ಡಿವಿಜನ್ನಿಗೆ ಸೇರಿದ ಮೂವತ್ತು ಮಂದಿ ಸ್ವಯಂ ಸೇವಕರು ಶಿವಪುರಕ್ಕೆ ಹೊರಟೆವು. ಬೀದಿಗಳಲ್ಲಿ ರಾಷ್ಟ್ರಗೀತೆಯನ್ನು ಹಾಡುತ್ತಾ ರೈಲ್ವೆ ಸ್ಟೇಷನ್ನಿಗೆ ಹೋದೆವು. ಷಟ್ಲ್ ರೈಲು ಹತ್ತಿ ಶಿವಪುರಕ್ಕೆ ಬಂದೆವು, ದಾರಿಯುದ್ದಕ್ಕೂ ಜಯಕಾರಗಳನ್ನಿಕ್ಕಿದೆವು, ಕಾಂಗ್ರೆಸ್ ಶಿಬಿರಕ್ಕೆ ಹೋಗುವಾಗಲೂ ರಾಷ್ಟ್ರಗೀತೆ, ಧ್ವಜಗೀತೆಯನ್ನು ಹಾಡಿದೆವು. ಶಿವಪುರವನ್ನು ಮಧ್ಯಾಹ್ನ ಹನ್ನೆರಡು ಗಂಟೆ ಸುಮಾರಿಗೆ ತಲುಪಿದೆವು"[54]. ಮೈಸೂರು ಜಿಲ್ಲಾಧಿಕಾರಿಗಳು ಮನವಿ ಮೇರೆಗೆ ಬೆಂಗಳೂರಿನ ಮುಖ್ಯ ಪೋಲೀಸ್ ಇನ್ಸ್‌ಪೆಕ್ಟರ್ ನೇತೃತ್ವದಲ್ಲಿ ಕಾಯ್ದಿಟ್ಟ ಪೋಲೀಸ್ ಪಡೆಯೊಂದಿಗೆ ಮದ್ದೂರಿಗೆ ದಿನಾಂಕ 10ನೇ ಏಪ್ರಿಲ್ 1938ರಂದು ಆಗಮಿಸಿದರು[55].

ಏಪ್ರಿಲ್ 10, 1938ರ ಭಾನುವಾರ ಮಧ್ಯಾಹ್ನ 1 ರಿಂದ 4 ಗಂಟೆಯವರೆಗೆ ವಿಷಯ ನಿಯಾಮಕ ಸಮಿತಿಯ ಚಪ್ಪರದಲ್ಲಿ ಕಾರ್ಯಕಾರಿ ಮಂಡಳಿಯ ಸಭೆ ನಡೆಯಿತು. ಸಂಜೆ 6 ಗಂಟೆಗೆ ಶಿವಪುರ ರಾಷ್ಟ್ರಕೂಟದ ಅಧ್ಯಕ್ಷರ ಮೆರವಣಿಗೆ ಆರಂಭವಾಯಿತು. ಅಧ್ಯಕ್ಷರ ಮೆರವಣಿಗೆಯ ರಥವನ್ನು ವಿಶೇಷವಾಗಿ ಅಲಂಕರಿಸಲಾಗಿತ್ತು. ಬೈರಾಪಟ್ಟಣದ ಅಂಕಣ್ಣಗೌಡರು ಸಾರಥಿಯಾಗಿದ್ದರು. ಎಲ್ಲೆಲ್ಲಿ ನೋಡಿದರೂ ಖಾದಿ ಟೋಪಿಗಳೇ ಕಾಣುತ್ತಿದ್ದವು. ಕಾಂಗ್ರೆಸ್‌ನ ಒಲವಿನಿಂದ ಖಾದಿ ಟೋಪಿಗಳನ್ನು ಧರಿಸಿದ್ದರು. ಅಧ್ಯಕ್ಷರ ಮೆರವಣಿಗೆಯ ರಥದೊಂದಿಗೆ ನೂರೊಂದು

ಜೊತೆ ಎತ್ತುಗಳು ಸಾಲುಗಟ್ಟಿದ್ದವು. ತಮ್ಮ ಎತ್ತುಗಳನ್ನು ಅಲಂಕರಿಸಿಕೊಂಡು ತಾವಾಗಿ ಬಂದಿದ್ದ ರೈತರೆಲ್ಲರಿಗೂ ಅವಕಾಶ ಮಾಡಿಕೊಡಲಾಯಿತು. ಸಾಲು ಜೋಡೆತ್ತುಗಳ ಮುಂದೆ ಡೋಲು, ನಗಾರಿ, ಹೆಬ್ಬರೆ, ಕೊಂಬು ಕಹಳೆಗಳೊಂದಿಗೆ ಹಳ್ಳಿಗಳ ವಾದಕರಿದ್ದರು. ಅವರ ಮುಂದೆ ಜೆ.ಓ.ಸಿ.ಯವರ ನೇತೃತ್ವದಲ್ಲಿ ಜಯಘೋಷದೊಡನೆ ಶಿಸ್ತಿನಿಂದ ಸಾಗುವ ಸ್ವಯಂ ಸೇವಕರು ಮತ್ತು ಸ್ವಯಂ ಸೇವಕಿಯರು ಇದ್ದರು[56].

ಅಧ್ಯಕ್ಷರ ಮೆರವಣಿಗೆ

10 ನೇ ಏಪ್ರಿಲ್ 1938ರ ಸಂಜೆ 6.30 ಗಂಟೆಗೆ ಮದ್ದೂರಿನ ಸರ್.ಎಂ.ಕಾಂತರಾಜೇ ಅರಸ್‌ರವರ ಮಾವಿನ ತೋಟದ ಹತ್ತಿರದಿಂದ ಅಧ್ಯಕ್ಷರ ಮೆರವಣಿಗೆ ಆರಂಭವಾಯಿತು. ಅಧಿವೇಶನದ ಅಧ್ಯಕ್ಷರಾದ ಟಿ.ಸಿದ್ಧಲಿಂಗಯ್ಯನವರು ಬಿಳಿಯ ಖಾದಿ ಪೈಜಾಮ, ಜುಬ್ಬಾ ಟೋಪಿಗಳನ್ನು ಧರಿಸಿದ್ದರು. ಮೆರವಣಿಗೆ ರಥವು ವಿಶೇಷವಾಗಿ ನಿರ್ಮಾಣವಾಗಿತ್ತು. ಎರಡು ಗಾಲಿಯ ಜೋಡೆತ್ತಿನ ಗಾಡಿ ಅದರ ಮೇಲೆ ಮಂಟಪವನ್ನು ಮೆಟ್ಟಿಲುಗಳುಳ್ಳ ವೇದಿಕೆಯನ್ನು ನಿರ್ಮಿಸಿ ವಿಶೇಷವಾಗಿ ಅಲಂಕರಿಸಲಾಗಿತ್ತು. ಅಧ್ಯಕ್ಷ ಪೀಠದ ಎಡ, ಬಲ ಮತ್ತು ಹಿಂಬದಿಯಲ್ಲಿ ಶಿಸ್ತು, ಅಹಿಂಸೆ, ಸತ್ಯ ಎಂದು ರಥದ ಮೇಲೆ ಫಲಕಗಳಲ್ಲಿ ಬರೆಯಲಾಗಿತ್ತು. ಮೆರವಣಿಗೆ ರಥಕ್ಕೆ ಎಂಟು ಜೊತೆ ಎತ್ತುಗಳನ್ನು ವಿಶೇಷವಾಗಿ ಶೃಂಗರಿಸಿ ಕಟ್ಟಲಾಗಿತ್ತು ಎಂಟು ಜೊತೆ ಎತ್ತುಗಳು ಅಂದಿನ ಮೈಸೂರು ಸಂಸ್ಥಾನದಲ್ಲಿನ ಜಿಲ್ಲೆಗಳಾದ ಮೈಸೂರು, ಬೆಂಗಳೂರು, ಕೋಲಾರ, ತುಮಕೂರು, ಹಾಸನ, ಕಡೂರು, ಶಿವಮೊಗ್ಗ, ಚಿತ್ರದುರ್ಗ ಎಂಟು ಜಿಲ್ಲೆಗಳನ್ನು ಪ್ರತಿನಿಧಿಸುತ್ತಿದ್ದವು. ಈಗಿನ ಮಂಡ್ಯ ಜಿಲ್ಲೆ ಅಂದಿನ ಮೈಸೂರು ಜಿಲ್ಲೆಯ ಭಾಗವಾಗಿತ್ತು. ಮೆರವಣಿಗೆ ಆರಂಭವಾದ ಸ್ಥಳದಿಂದ ಶಿವಪುರಕ್ಕೆ ಎರಡು–ಮೈಲಿ ದೂರದಲ್ಲಿತ್ತು. ಸುಮಾರು ಐದು ಸಾವಿರ ಜನರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ರಥವನ್ನು ಏರುವ ಮುನ್ನ ಟಿ.ಸಿದ್ಧಲಿಂಗಯ್ಯನವರಿಗೆ ಅವರ ಪತ್ನಿಯಾದ ಪಾರ್ವತಮ್ಮ ಹಾಗೂ ಸ್ವಾಗತಾಧ್ಯಕ್ಷ ಎಸ್.ಚನ್ನಯ್ಯವರು ಹಾರ ಅರ್ಪಿಸಿ ಆರತಿ ಬೆಳಗಿ ಶುಭಕೋರಿದರು. ಅಧ್ಯಕ್ಷರು ಮಹಾತ್ಮಗಾಂಧಿಯವರ ಫೋಟೋ ಹಿಡಿದ ರಥವನ್ನೇರಿ ಜನರ ಶುಭಾಶಯಗಳನ್ನು ಸ್ವೀಕರಿಸಿದರು. ಮೆರವಣಿಗೆ ಹೊರಟಿತು. ಜಿಲ್ಲಾ ಪ್ರತಿನಿಧಿಗಳು ಮೆರವಣಿಗೆಯುದ್ಧಕ್ಕೂ ಅಲ್ಲಲ್ಲಿ ನಿಂತು ತಮ್ಮ ಜಿಲ್ಲೆಯ ಪರವಾಗಿ ಅಧ್ಯಕ್ಷರಿಗೆ ಹಾರ ತುರಾಯಿಗಳನ್ನು ಅರ್ಪಿಸುತ್ತಿದ್ದರು. ಅದರ ಹಿಂದೆ 64 ಅಲಂಕೃತ ಎತ್ತಿನ ಬಂಡಿಗಳು ಮೆರವಣಿಗೆಯಲ್ಲಿದ್ದವು. ಮೆರವಣಿಗೆ ಸುಮಾರು ಅರ್ಧ ಮೈಲು ಉದ್ದವಿತ್ತು. ನಾನಾ ವಿವಿಧ ವಾದ್ಯಗಾರರು ತಮ್ಮ ಬ್ಯಾಂಡ್‌ಗಳೊಂದಿಗೆ ಸ್ವಯಂ ಪ್ರೇರಿತವಾಗಿ ಬಂದು ಮೆರವಣಿಗೆಯಲ್ಲಿ ವಾದ್ಯಗಳನ್ನು ನುಡಿಸಿದ್ದರು. ಮೆರವಣಿಗೆಯಲ್ಲಿ ಜನರು ಕೈಹಿಡಿದು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಎಲ್ಲಾ ಬೀದಿಗಳ ಇಕ್ಕೆಲಗಳಲ್ಲಿ ಜನ ಮೆರವಣಿಗೆ

ವೀಕ್ಷಿಸಲು ಸಾಲು ಸಾಲಾಗಿ ನಿಂತಿದ್ದರು. ರಾಜ್ಯದ ಎಲ್ಲಾ ಮೂಲೆಗಳಿಂದ ಮುಖಂಡರು, ಕಾರ್ಯಕರ್ತರು ಮತ್ತು ಸ್ವಯಂ ಸೇವಕರುಗಳ ತಂಡಗಳೇ ಅಲ್ಲದೇ ಮದ್ದೂರಿನ ಸುತ್ತಮುತ್ತಲ ಪಟ್ಟಣಗಳ ಮತ್ತು ಹಳ್ಳಿಗಳಿಂದ ಸಾವಿರಾರು ಜನ ರೈಲುಗಳಲ್ಲಿ, ಬಸ್ಸುಗಳಲ್ಲಿ, ಎತ್ತಿನಗಾಡಿಗಳಲ್ಲಿ ಮತ್ತು ಕಾಲ್ನಡಿಗೆಯಲ್ಲಿ ಬಂದು ಸೇರಿದ್ದರು. ಮೆರವಣಿಗೆಯ ರಥವು ಮುನ್ನಡೆದಂತೆ ಹೆಂಗಳೆಯರು, ಅಧ್ಯಕ್ಷರಿಗೆ, ರಥಕ್ಕೆ, ಜೋಡೆತ್ತುಗಳಿಗೆ ಮಂಗಳಾರತಿ ಬೆಳಗಿದರು. ದಾರಿಯುದ್ದಕ್ಕೂ ಜನರು ಹಾರ ತುರಾಯಿಗಳನ್ನು ಅರ್ಪಿಸಿದರು.

ಏನೇ ಬರಲಿ ಒಗ್ಗಟ್ಟಿರಲಿ, ಮಹಾತ್ಮ ಗಾಂಧೀಕಿ ಜೈ, ಸುಭಾಷ್ ಕೀ, ನೆಹರೂ ಕಿ ಜೈ, ಕ್ರಾಂತಿ ಚಿರವಾಗಲಿ, ಸಿದ್ಧಲಿಂಗಯ್ಯನವರಿಗೆ ಜೈ, ಬೋಲೋ ಭಾರತ ಮಾತಾಕಿ ಜೈ, ಮೊದಲಾದ ಘೋಷಣೆಗಳು ಜೋರಾಗಿ ಕೇಳಿ ಬರುತ್ತಿದ್ದವು. ಮೆರವಣಿಗೆಯಲ್ಲಿ ಯಶೋಧರಮ್ಮ, ಬಳ್ಳಾರಿ ಸಿದ್ದಮ್ಮ, ಟಿ.ಸುನಂದಮ್ಮ, ತಾಯಮ್ಮ ವೀರಣ್ಣಗೌಡ, ಸುಬ್ಬಮ್ಮ ಜೋಯೀಸ್ ಮುಂತಾದ ಅನೇಕ ಮಹಿಳೆಯರು, ಹಿರಿಯ ನಾಯಕರು ನೆರೆದಿದ್ದರು. ಟಿ.ಸುನಂದಮ್ಮ ಹೇಳಿ ಕೊಟ್ಟ 'ವಂದೇ ಮಾತರಂ' ಗೀತೆಯನ್ನು, ಕ್ಯಾಪ್ಟನ್ ವೆಂಕಮ್ಮ ಅವರ ನಾಯಕತ್ವದ ಸ್ವಯಂ ಸೇವಕಿಯರು ಜೆ.ಓ.ಸಿ. ಎಂ.ಎನ್.ಜೋಯೀಸರ ನೇತೃತ್ವದಲ್ಲಿ ಸ್ವಯಂ ಸೇವಕರೂ ಹಾಡಿದರು. ಝುಂಡಾ ಊಂಚಾ ರಹೇ ಹಮಾರಾ ಗೀತೆಯೂ ಕಾಂಗ್ರೆಸ್ ಪರವಾದ ಲಾವಣಿಗಳೂ ದಾರಿಯುದ್ದಕ್ಕೂ ಕೇಳಿ ಬಂದುವು. ಪೋಲೀಸ್ ಸ್ಟೇಷನ್ ಎದುರು ಬಂದಾಗ ಘೋಷಣೆಗಳನ್ನು ಸಾರ್ವಜನಿಕರು ಅರ್ಧ ಗಂಟೆಗೂ ಹೆಚ್ಚು ಕಾಲ ಕೂಗಿದರು. ಈ ರೀತಿಯಾಗಿ ಸಾಯಂಕಾಲ 6–30 ಗಂಟೆಗೆ ಪ್ರಾರಂಭವಾದ ಈ ಮೆರವಣಿಗೆ ಶಿವಪುರದ ಟ್ರಾವೆಲರ್ಸ್ ಬಂಗಲೆ ತಲುಪಿದಾಗ ಸಮಯ ರಾತ್ರಿ 9 ಗಂಟೆಯಾಗಿತ್ತು. ಟಿ.ಸಿದ್ಧಲಿಂಗಯ್ಯನವರು ರಥದಿಂದ ಕೆಳಗಿಳಿಯುವ ಮುನ್ನ ಸ್ವಯಂ ಸೇವಕರ–ಸೇವಕಿಯರಲ್ಲಿ ಮರವಣಿಗೆಯಲ್ಲಿ ಭಾಗವಹಿಸಿದ್ದ ಜನರಲ್ಲಿ ಈ ರೀತಿಯಾಗಿ ಪ್ರಾರ್ಥಿಸಿದರು. ಜನರಲ್ಲಿ ಶಾಂತಿಯಿಂದ ಯಾವ ಗಲಾಟೆಗೂ ಅವಕಾಶ ನೀಡದಂತೆ, ಅಹಿಂಸೆ ತತ್ವವನ್ನು ನಂಬಿಕೆಯನ್ನುಂಟು ಸ್ವೀಕರಿಸಬೇಕೆಂದು, ಜವಾಬ್ದಾರಿ ಸರ್ಕಾರದ ಸ್ಥಾಪನೆಗಾಗಿ ಹೋರಾಡುವಂತೆ ಮನವಿ ಮಾಡಿದರು. ಹಾಗೂ ನ್ಯಾಯಯುತವಾಗಿ ಹೋರಾಟದ ಮೂಲಕ ಮಹಾತ್ಮ ಗಾಂಧೀಜಿಯವರ ಹೆಸರಿಗೆ ಕಳಂಕ ಹಚ್ಚದೇ ಉನ್ನತ ಮಟ್ಟದಲ್ಲಿ ನಡೆದುಕೊಳ್ಳಬೇಕೆಂದು ಪ್ರಾರ್ಥನೆ ಮಾಡಿ, ಜನರಿಗೆ ವಂದಿಸಿದರು. ರಥದಿಂದ ಕೆಳಗಿಳಿದು ಅವರಿಗೆ ವ್ಯವಸ್ಥೆಗೊಳಿಸಿದ ಆಸ್ಥಾನದಲ್ಲಿ ಕುಳಿತಾಗ ಜೋರಾದ ಚಪ್ಪಾಳೆಯ ಕರತಾಡನವಾಯಿತು[57]. ಅಷ್ಟರಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟರಾದ ಜಿ.ಎಂ. ಮೇಕ್ರಿಯವರು. ಮದ್ದೂರು – ಶಿವಪುರ ಸುತ್ತಳತೆ ಮೂರು ಮೈಲುಗಳೊಳಗೆ ಒಂದು ತಿಂಗಳ ಕಾಲ ಮೆರವಣಿಗೆ, ಸಭೆ, ಧ್ವಜಾರೋಹಣ ಮಾಡಕೂಡದೆಂದು,

ನಿಷೇದಾಜ್ಞೆಗಳನ್ನು ಹೊರಡಿಸಿದ್ದರು. ನಂತರ ಟಿ.ಸಿದ್ಧಲಿಂಗಯ್ಯನವರು 5 ನಿಮಿಷದ ಪುಟ್ಟ ಭಾಷಣ ಮಾಡಿದರು. ಬ್ರಿಟೀಷ್ ಆಡಳಿತದ ನಿರಂಕುಶ ಪದ್ಧತಿಯನ್ನು ಟೀಕಿಸುತ್ತಾ ಮೈಸೂರು ರಾಜ್ಯ ಸರ್ಕಾರವು 'ಪರಂಗಿ ಜನಗಳ ಆಡಳಿತ ಪದ್ಧತಿಗಳನ್ನು ಮೈಸೂರು ದುಷ್ಟಾಧಿಕಾರಿಗಳು ಅನುಸರಿಸುತ್ತಾ ಇದ್ದಾರೆ. ಸರ್ಕಾರದ ದಬ್ಬಾಳಿಕೆಯನ್ನು ಖಂಡಿಸಿದರು. ಜನರಲ್ಲಿ ರಾಷ್ಟ್ರಕೂಟದ ಉದ್ದೇಶವನ್ನು ವಿವರಿಸಿ. ನಾಳೆ ನಡೆಯುವ ಧ್ವಜಾರೋಹಣದ ಸಂದರ್ಭದಲ್ಲಿ ಪೋಲೀಸರು ಅಡ್ಡಿಪಡಿಸುವ, ಬಂಧಿಸುವ, ಕೋಪ ಬರಿಸುವ, ರೀತಿ ನಡೆದುಕೊಳ್ಳಬಹುದು. ಆದರೆ ಸ್ವಯಂ ಸೇವಕರು, ಸೇವಕಿಯರು, ಪ್ರತಿನಿಧಿಗಳು, ಯಾವ ಗಲಾಟೆಗೂ ಅವಕಾಶ ಕೊಡದಂತೆ ಗಾಂಧೀಜಿಯವರ ತತ್ವಗಳಾದ ಸತ್ಯ, ಅಹಿಂಸೆ ಮೂಲಕ ಧ್ವಜಾರೋಹಣದಲ್ಲಿ ಭಾಗವಹಿಸುವಂತೆ ತಿಳಿಸಿದರು[58].

ಶಿವಪುರ ರಾಷ್ಟ್ರಕೂಟದ ಸರ್ವಾಧ್ಯಕ್ಷರ ಮೆರವಣಿಗೆಯಲ್ಲಿ ಪ್ರತ್ಯಕ್ಷದರ್ಶಿಯಾಗಿದ್ದ ಕೆಂಗಲ್ ಹನುಮಂತಯ್ಯನವರ ತಮ್ಮ ದಿನಚರಿಯಲ್ಲಿ ಈ ಕೆಳಕಂಡಂತೆ ವಿವರಿಸಿದ್ದಾರೆ. 10–04–1938 ರ ಸಾಯಂಕಾಲ ಅಧ್ಯಕ್ಷ ಶ್ರೀ. ಟಿ.ಸಿದ್ಧಲಿಂಗಯ್ಯ ಅವರ ಮೆರವಣಿಗೆಯಾಯಿತು. ಮದ್ದೂರಿನ ಹೊರ ಭಾಗದ ಸರ್.ಎಂ.ಕಾಂತರಾಜೇ ಅರಸನವರ ಮಾವಿನ ತೋಟದಿಂದ ಶಿವಪುರಕ್ಕೆ ಸುಮಾರು ಎರಡು ಮೈಲಿ ಮೆರವಣಿಗೆ. ಸುಂದರವಾಗಿ ಸಜ್ಜುಗೊಳಿಸಿದ ಎತ್ತಿನಗಾಡಿಗಳು ಒಂದು ಜಿಲ್ಲೆಗೆ ಒಂದು ಜೊತೆಯಂತೆ ಎಂಟು ಜೊತೆ ಎತ್ತಿನಗಾಡಿಗಳು ಉದ್ದಕ್ಕು ಸ್ವಯಂ ಸೇವಕರು, ಸ್ವಯಂ ಸೇವಕಿಯರ ದಳಗಳ ಸಾಲುಗಳು, ಸುಮಾರು ಹತ್ತು ಸಾವಿರ ಜನದವರಿಗೂ ಜನಸಂದಣಿ. ಮೈಸೂರು ಇತಿಹಾಸದಲ್ಲೇ ಈ ತೆರನಾದ ಮೆರವಣಿಗೆ ನಡೆದಿರಲಿಲ್ಲ. ಏನು ಉತ್ಸಾಹ! ಏನು ಜಯಘೋಷಗಳು! ಅಧ್ಯಕ್ಷರಿಗೆ ಅರ್ಪಿಸಿದ ಹೂ ಮಾಲೆಗಳು, ಫಲಗಳ ಸಂಖ್ಯೆಯಾದರೂ ಏನು! ಮೈಸೂರಿನವರ ಚೈತನ್ಯವು ರೂಪತಾಳಿ, ರಂಜಿಸಿ ಮೆರೆದು ಮೆರವಣಿಗೆಯಾಗಿ ಸಾಗುತ್ತಿತ್ತು. ಟಿ.ಸಿದ್ಧಲಿಂಗಯ್ಯ ನಮ್ಮೆಲ್ಲಾ ಈ ಮರ್ಯಾದೆಗೆ ಅತ್ಯಂತ ಅರ್ಹರೆಂಬುದರಲ್ಲಿ ಸಂದೇಹವಿಲ್ಲ[59].

ಧ್ವಜ ಹಾರಿಸಲು ಜಿಲ್ಲಾ ನ್ಯಾಯಾಧೀಶರ ತಡೆ ಆಜ್ಞೆ.

ಏಪ್ರಿಲ್ 10, 1938ರಂದು ಶಿವಪುರ ರಾಷ್ಟ್ರಕೂಟದ ಅಧ್ಯಕ್ಷರ ಮೆರವಣಿಗೆ ಮುಗಿಯುತ್ತಿದ್ದಂತೆಯೆ ಅಂದಿನ ಮೈಸೂರುಜಿಲ್ಲಾ ಮ್ಯಾಜಿಸ್ಟ್ರೇಟರಾದ ಜಿ.ಎಂ.ಮೇಕ್ರಿಯವರು ಮೈಸೂರು ಪೋಲೀಸ್ ಕಾಯ್ದೆ –1908ರ ಪ್ರಕಾರ 39ನೇ ಭಾಗದಂತೆ ಒಂದು ಆಜ್ಞೆಯನ್ನು ಹೊರಡಿಸಿದರು. ಮದ್ದೂರು ತಾಲ್ಲೂಕಿನ ಶಿವಪುರ ಗ್ರಾಮ ಸುತ್ತ ಮುತ್ತಲಿನ ಐದು ಮೈಲಿ ಪ್ರದೇಶದಲ್ಲಿ ಎಲ್ಲಿಯೂ ಕಾಂಗ್ರೆಸ್ ಧ್ವಜವೆಂಬುದನ್ನು ಆರೋಹಣ ವಂದನೆ ಸಲ್ಲಿಸುವುದನ್ನು ಮಾಡಬಾರದೆಂದು

ಕಾಯ್ದೆಯನ್ನು ವಿಧಿಸಿದರು. ಧ್ವಜವಂದನೆ, ಹಾರಿಸುವುದರಿಂದ ಪ್ರತ್ಯೇಕ ಧ್ವಜವುಳ್ಳ ಮೈಸೂರು ಮಹಾರಾಜರ ಅಧಿಪತ್ಯಕ್ಕೆ ಆತಂಕವೆನಿಸುವುದು ಎಂದು ಆಜ್ಞೆಯಲ್ಲಿ ಉಲ್ಲೇಖಿಸಿದರು. ಆ ಆಜ್ಞೆ 1938ನೇ ಏಪ್ರಿಲ್ ಹತ್ತನೇ ತಾರೀಖಿನಿಂದ ಒಂದು ತಿಂಗಳವರೆಗೆ ಜಾರಿಯಲ್ಲಿರುವುದು ಎಂದು ಆದೇಶ ಹೊರಡಿಸಿದರು. ಈ ಆಜ್ಞೆಯು 25 ಜನ ಮುಖಂಡರ ಮೇಲೆ ವಿಧಿಸಲಾಗಿದೆಯೆಂದು ತಿಳಿಸಲಾಯಿತು. ಜಿಲ್ಲಾ ನ್ಯಾಯಾಲಯ ಧ್ವಜ ಹಾರಿಸುವುದನ್ನು ತಡೆಯುವ ಆದೇಶ ಪ್ರತಿಯನ್ನು 25 ಕಾಂಗ್ರೆಸ್ ನಾಯಕರಿಗೆ ಕಳುಹಿಸಲಾಯಿತು[60]. ಮ್ಯಾಜಿಸ್ಟ್ರೇಟರ ಆಜ್ಞೆಯನ್ನು ಮದ್ದೂರು, ಶಿವಪುರ ಸುತ್ತ 5ಮೈಲಿಗಳಲ್ಲಿ ಡಂಗೂರ ಹೊರಡಿಸಿತು. ಜನರು ರಾಷ್ಟ್ರಕೂಟದಲ್ಲಿ ಭಾಗವಹಿಸುವುದನ್ನು ತಡೆಯುವ ಉದ್ದೇಶವನ್ನು ಸರ್ಕಾರ ಹೊಂದಿತ್ತು. ರಾಷ್ಟ್ರಕೂಟದಲ್ಲಿ ಧ್ವಜಾರೋಹಣ, ವಂದನೆ ಪ್ರಧಾನ ಕಾರ್ಯವಾಗಿದ್ದುದರಿಂದ ಕಾನೂನಿನ ನೆಪದಿಂದ ಅದನ್ನು ತಡೆಗಟ್ಟಿ ರಾಷ್ಟ್ರಕೂಟ ವಿಫಲವಾಗುವಂತೆ ಮಾಡಲು ಸರ್ಕಾರ ನಿರಂತರವಾಗಿ ಪ್ರಯತ್ನಿಸಿ ವಿಫಲವಾಯಿತು.

1938 ಏಪ್ರಿಲ್ 11 ಸೋಮವಾರ ಧ್ವಜ ಸತ್ಯಗ್ರಹ

11 ನೇ ಏಪ್ರಿಲ್ 1938 ರ ಬೆಳಿಗ್ಗೆ 7.45 ರವರೆಗೂ ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿಯವರಿಗೆ ಧ್ವಜಾರೋಹಣದ ಬಗ್ಗೆ ನಿರ್ಣಯವಿರಲಿಲ್ಲ. ಆದರೆ ಅಧ್ಯಕ್ಷರು ಮ್ಯಾಜಿಸ್ಟ್ರೇಟರ್ ಆದೇಶಗಳನ್ನು ಉಲ್ಲಂಘಿಸುವ ಬಗ್ಗೆ ಸ್ಪಷ್ಟತೆಯನ್ನು ಹೊಂದಿದ್ದರು. ಬೆಂಗಳೂರು– ಮೈಸೂರು ರಸ್ತೆಯಿಂದ 150 ಯಾರ್ಡ್‌ಗಳಷ್ಟು ದೂರದಲ್ಲಿರುವ ತಿರುಮಲೇಗೌಡರವರಿಗೆ ಸೇರಿದ ಹೊಲದಲ್ಲಿ ಧ್ವಜರೋಹಣ ಮಾಡುವ ಸಲುವಾಗಿ ಬೇಲಿ ಹಾಕಿದ ಸ್ಥಳದಿಂದ ಬದಲಾವಣೆ ಮಾಡಿ ಧ್ವಜ ಸ್ಥಂಭವನ್ನು ನೆಟ್ಟರು. ಈ ಸ್ಥಳವು ಅಧ್ಯಕ್ಷರು ಬಹಿರಂಗ ಅಧಿವೇಶನ ಮಾಡುವ ವೇದಿಕೆಯು ಪಕ್ಕದಲ್ಲಿ ಖಾಸಗಿ ಜಮೀನು ಆಗಿತ್ತು. ಧ್ವಜ ಮೈದಾನವು ವಿಶಾಲವಾದ ಸ್ಥಳದಲ್ಲಿ ಸಿದ್ಧವಾಗಿತ್ತು. ಧ್ವಜ ವೇದಿಕೆಯ ಸ್ಥಳ, ಅಧ್ಯಕ್ಷರು ಧ್ವಜಾರೋಹಣ ಮಾಡುವ ಸ್ಥಳ, ಮುಖಂಡರು, ಪ್ರತಿನಿಧಿಗಳು, ಸ್ವಯಂಸೇವಕ–ಸೇವಕರಿಯರು ಮೊದಲಾದವರು ನಿಲ್ಲುವ ಸ್ಥಳಗಳನ್ನು ಸೂಚಿಸಲಾಗಿತ್ತು ಧ್ವಜ ಮೈದಾನದ ಮಧ್ಯದಲ್ಲಿ ಕಲಶ ಸಮೇತವಾಗಿ 60 ಅಡಿ ಎತ್ತರದ ಧ್ವಜ ಸ್ತಂಭವನ್ನು ನೆಡಲಾಗಿತ್ತು. ಧ್ವಜಸ್ತಂಭವು ಅಡಿಕೆ ಮರದಿಂದ ಕೂಡಿತ್ತು. ರಾಷ್ಟ್ರಧ್ವಜವನ್ನು ಪುಷ್ಪ ಸಮೂಹದೊಡನೆ ಮಡಿಸಿ ಕಟ್ಟಿದ್ದ ಆರೋಹಣಕ್ಕೆ ಅನುಕೂಲವಾಗುವಂತೆ ಕಟ್ಟಿದ್ದ ನೂಲಿನದಾರವನ್ನು ಧ್ವಜಸ್ತಂಭದ ಕೆಳಭಾಗಕ್ಕೆ ಸುತ್ತಿತ್ತು. ಧ್ವಜಸ್ತಂಭದ ಸುತ್ತಲೂ ಒಂದೂವರೆ ಅಡಿ ಎತ್ತರದ ವಿಶಾಲವಾದ ವೇದಿಕೆ. ಅಧ್ಯಕ್ಷರುಈ ವೇದಿಕೆಯ ಮೇಲೆ ನಿಂತುಕೊಂಡು ಧ್ವಜಾರೋಹಣ ಮಾಡಬೇಕು. ಧ್ವಜಾರೋಹಣದ ಸಂದರ್ಭದಲ್ಲಿ ಯಾರ್ಯಾರು ಹೇಗೆ ನಡೆದುಕೊಳ್ಳಬೇಕೆಂಬುದರ ಬಗ್ಗೆ ಮೊದಲೇ ಮಾರ್ಗದರ್ಶನ

ನೀಡಲಾಗಿತ್ತು. ಈ ಸಮಯಕ್ಕೆ ಸರಿಯಾಗಿ ಮಂಡ್ಯದ ಸಬ್ ಡಿವಿಜನ್ ಆಫೀಸರ್ ಬಿ.ಬೀರಪ್ಪ, ಸಬ್ ಇನ್ಸ್‌ಪೆಕ್ಟರ್ ಬಸವರಾಜೇ ಅರಸ್, ರಿಜರ್ವ್ ಪೋಲಿಸ್ ಇನ್‌ಪೆಕ್ಟರ್ ಎ.ಎ.ಪೆರದೂರು. ಫ್ರೆಂಚ್ ರಾಕ್ಸ್ (ಈಗಿನ ಪಾಂಡವಪುರ) ಪೋಲೀಸ್ ಸೂಪರಿಟೆಂಡೆಂಟ್ ಮುತ್ತೋಜಿರಾವ್ ಸಿಂಧ್ಯ, ಅವರುಗಳು ಶಸ್ತ್ರ ಸಜ್ಜಿತರಾಗಿ ಹಾಜರಾದರು ಹಾಗೂ ಎರಡು ಪೊಲೀಸ್ ಬಸ್ಸುಗಳ ತುಂಬ ಪೋಲೀಸಿನವರು ಬಂದು ಸಾಲಾಗಿ ನಿಂತರು[61].

ಧ್ವಜಾರೋಹಣ ನೆರವೇರುವುದನ್ನು ತಡೆಯಲು ಮೈಸೂರು ಹಾಗೂ ಬೆಂಗಳೂರು ಪೋಲೀಸ್ ವ್ಯವಸ್ಥೆ ಸಂಪೂರ್ಣವಾಗಿ ಸಜ್ಜಾಗಿತ್ತು. ಬೆಂಗಳೂರು ಮತ್ತು ಮೈಸೂರು ರಸ್ತೆಯುದ್ದಕ್ಕೂ ಸುಮಾರು 600 ಮಂದಿ ಸಶಸ್ತ್ರ ಪೋಲೀಸರು, ಪೋಲೀಸು ಮಹಾನಿರ್ದೇಶಕರ ಆಜ್ಞೆ ದೊರೆತರೆ ಸತ್ಯಾಗ್ರಹಿಗಳು, ಸ್ವಯಂಸೇವಕ-ಸೇವಕಿಯರ ಮೇಲೆ ಗುಂಡು ಹಾರಿಸಲು ಸರ್ವಸನ್ನದ್ಧರಾಗಿದ್ದರು. ಜೊತೆಗೆ ಸಾವಿರಾರು ಜನ ಲಾಠಿ ಹಿಡಿದ ಪೋಲೀಸರು ಎಲ್ಲಾ ಕ್ರಮಗಳಿಂದ ಧ್ವಜಾರೋಹಣ ತಡೆಯಲು ತಯಾರಾಗಿದ್ದರು. ಪೋಲೀಸ್ ಮಹಾನಿರೀಕ್ಷಕರು, ಸನ್ನಿವೇಶದ ಬೆಳವಣಿಗೆಯನ್ನು ಹಂತ ಹಂತವಾಗಿ ಗಮನಿಸುತ್ತಾ ಧ್ವಜ ಹಾರಿಸುವ ಸಂದರ್ಭದಲ್ಲಿ ಗುಂಡು ಹಾರಿಸುವ ನಿರ್ಧಾರ ತಳದೇ ನಿಂತಿದ್ದರು[62]. ಪೋಲೀಸ್ ವ್ಯಾನ್‌ಗಳು ಬೆಂಗಳೂರು-ಮೈಸೂರು ರಸ್ತೆಯಲ್ಲಿ ನಿಂತವು. ಈ ಪೋಲೀಸ್ ಅಧಿಕಾರಿಗಳು ರಿಸರ್ವ್ ಪೋಲೀಸ್‌ರನ್ನು ಕಂಡ ಕೂಡಲೇ ಜನಸಮೂಹದಲ್ಲಿ ಉದ್ರೇಕದ ಚಿಹ್ನೆ ಕಾಣಿಸಿದವು. ಆಗ ಜನರು ಕಾಂಗ್ರೆಸ್ ಪರವಾಗಿ ಜಯಕಾರ ಮಾಡಿದರು. ಮುಖಂಡರು ಮಹಾಜನರನ್ನು ಹೀಗೆ ಪ್ರಾರ್ಥಿಸಿಕೊಂಡರು. "ಅಧ್ಯಕ್ಷರು ಇಷ್ಟರಲ್ಲೇ ಬರುತ್ತಾರೆ. ಯಾರೂ ಅವರು ಬಂದ ಕಾಲದಲ್ಲಿ ಚಪ್ಪಾಳೆ ಹೊಡೆಯಕೂಡದು. ತಮ್ಮ ಸ್ಥಳಗಳಲ್ಲಿಯೇ ಕುಳಿತುಕೊಂಡು ಶಾಂತಿಯಿಂದ ವರ್ತಿಸಿ ಶಿಸ್ತನ್ನು ಕಾಪಾಡಿಕೊಂಡು ಕಾಂಗ್ರೆಸ್ಸಿನ ಪ್ರಭಾವ ಎಂಥದ್ದು ಎಂಬುದನ್ನು ತೋರಿಸಿಕೊಡಬೇಕು. ದಯವಿಟ್ಟು ಎಲ್ಲರೂ ಸಹಕರಿಸಲಿ"[63]. ಬೆಳಿಗ್ಗೆ 8.00 ಗಂಟೆಗೆ ಜೆ.ಓ.ಸಿ. ಎಂ.ಎನ್.ಜೋಯೀಸರ ಮುಂದಾಳತ್ವದಲ್ಲಿ ಅಧ್ಯಕ್ಷರಾದ ಸಿದ್ದಲಿಂಗಯ್ಯನವರನ್ನು ವೇದಿಕೆಗೆ ಕರೆತಂದರು. ವೇದಿಕೆಯ ಹತ್ತಿರ ಎಸ್.ಚನ್ನಯ್ಯ, ಎಚ್.ಕೆ.ವೀರಣ್ಣಗೌಡ, ಕೆಂಗಲ್ ಹನುಮಂತಯ್ಯ, ಮಳವಳ್ಳಿ ವೀರಪ್ಪ, ಎಚ್.ಸಿದ್ದಯ್ಯ. ವಿಶ್ವೇಶ್ವರಗೌಡ, ಎಚ್.ಸಿ.ದಾಸಪ್ಪ, ಪಾರ್ವತಮ್ಮ ಸಿದ್ಧಲಿಂಗಯ್ಯ, ಯಶೋದರಮ್ಮ ದಾಸಪ್ಪ, ಸುಬ್ಬಮ್ಮ ಜೋಯಿಸ್, ತಾಯಮ್ಮ ವೀರಣ್ಣಗೌಡ, ಇಂದಿರಾ ಕೃಷ್ಣಮೂರ್ತಿ, ಟಿ.ಸುನಂದಮ್ಮ, ವೆಂಕಮ್ಮ ಸೀತಾರಾಮಯ್ಯ, ಟಿ.ಸುನಂದಮ್ಮ ಮೊದಲಾದ ಸಾವಿರಾರೂ ಸತ್ಯಾಗ್ರಹಿಗಳು, ಸ್ವಯಂ ಸೇವಕರೂ ಹಾಗೂ ಸೇವಕಿಯರೂ ಶಿಸ್ತಿನಿಂದ ನಿಂತಿದ್ದರು. ಅಲ್ಲದೇ ಮೈಸೂರು ಸಂಸ್ಥಾನದ ಜಿಲ್ಲೆಗಳಾದ ಮೈಸೂರು, ಹಾಸನ, ಚಿತ್ರದುರ್ಗ,

ಕಡೂರು, ಶಿವಮೊಗ್ಗ, ಬೆಂಗಳೂರು, ಕೋಲಾರ, ತುಮಕೂರು ಕಾಂಗ್ರೇಸಿನ ಪ್ರತಿನಿಧಿಗಳು, ಕಾಂಗ್ರೆಸ್ಸಿನ ಅಧ್ಯಕ್ಷರುಗಳೂ ಹಾಜರಿದ್ದರು. ಹಾಗೂ ಪ್ರಮುಖವಾಗಿ ಮಂಡ್ಯ, ಕೆ.ಆರ್.ಪೇಟೆ, ಪ್ರೆಂಚ್ ರಾಕ್ಸ್ (ಈಗಿನ ಪಾಂಡವಪುರ) ನಾಗಮಂಗಲ, ಶ್ರೀರಂಗಪಟ್ಟಣ, ಮಳವಳ್ಳಿ, ಮದ್ದೂರು ತಾಲ್ಲೂಕುಗಳಿಂದ ಅಸಂಖ್ಯಾತ ವಿದ್ಯಾರ್ಥಿಗಳು, ರೈತರು, ಸಕ್ಕರೆ ಕಾರ್ಖಾನೆಯ ಕಾರ್ಮಿಕರು, ಮಹಿಳೆಯರು ಕಾಂಗ್ರೆಸ್ ಪ್ರತಿನಿಧಿಗಳು, ಮುಖಂಡರು ಆಸಕ್ತಿಯಿಂದ ಧ್ವಜಾರೋಹಣ ನೋಡಲು ಭಾಗವಹಿಸಿದ್ದರು. ಅಧ್ಯಕ್ಷರಾದ ಸಿದ್ಧಲಿಂಗಯ್ಯನವರು ಧ್ವಜಾರೋಹಣದಲ್ಲಿ ಭಾಗವಹಿಸಿದ್ದ ಜನರನ್ನು ಶಾಂತಿಯುತವಾಗಿ ಕುಳಿತುಕೊಂಡೇ ಧ್ವಜಾರೋಹಣವನ್ನು ವೀಕ್ಷಿಸುವಂತೆ ಕೇಳಿಕೊಂಡರು. ಅಧ್ಯಕ್ಷರ ಮಾತಿನಂತೆ ಜನರು ನಡೆದುಕೊಂಡರು. ಸಿದ್ಧಲಿಂಗಯ್ಯನವರು ತಾವು ಧ್ವಜಾರೋಹಣ ಮಾಡುವುದಾಗಿ ತಮ್ಮ ಅಚಲ ನಿರ್ಧಾರವನ್ನು ತಿಳಿಸಿದರು. ಪೋಲೀಸನವರನ್ನು ಕುರಿತು. ಕಾಯಿದೆಯ ಪ್ರಕಾರ ನಿಮ್ಮ ಕರ್ತವ್ಯವನ್ನು ನಿರ್ವಹಿಸಲು ನಾವು ಸತ್ಯಾಗ್ರಹಿಗಳು ಅಡ್ಡಿಪಡಿಸುವುದಿಲ್ಲ. ನಿಮ್ಮ ಕಾರ್ಯವನ್ನು ನೀವು ಶಾಂತಿಯುತವಾಗಿ ನಿರ್ವಹಿಸಿ ಎಂದು ವಿನಂತಿಸಿಕೊಂಡರು[64].

ಫ್ರೆಂಚ್ ರಾಕ್ಸ್ ಪೋಲೀಸ್ ಸೂಪರಿಟೆಂಡೆಂಟ್ ಮುತ್ತೋಜಿರಾವ್ ಸಿಂಧ್ಯಾ ಅವರು ಟಿ.ಸಿದ್ಧಲಿಂಗಯ್ಯನವರ ಹತ್ತಿರ ಬಂದು ಪ್ರತಿಬಂಧಕಾಜ್ಞೆಯನ್ನು ಜ್ಞಾಪನ ಮಾಡಿದರು. ಆದರೆ ಟಿ.ಸಿದ್ದಲಿಂಗಯ್ಯನವರು ಧ್ವಜಾರೋಹಣ ಮಾಡುವ ತಮ್ಮ ನಿರ್ಧಾರವನ್ನು ಸ್ಪಷ್ಟಪಡಿಸಿದರು. ಅವರಿಬ್ಬರಲ್ಲಿ ಚರ್ಚೆ ನಡೆಯುತ್ತಿದ್ದಂತೆಯೇ ಪೋಲೀಸ್ ಇನ್ಸ್‌ಪೆಕ್ಟರ್ ರಾಜಶೇಖರಯ್ಯನವರೂ ಕೆಲವು ಪೋಲೀಸ್ ಅಧಿಕಾರಿಗಳು ವೇದಿಕೆಯ ಮೇಲೆ ಹತ್ತಿ ನಿಂತು ಬಾವುಟದ ಹಗ್ಗವನ್ನು ಕತ್ತರಿಸದ ಹಾಗೆ ಸ್ವಯಂ ಸೇವಕರಾದ ಬಿ.ಎಂ.ಶೀನಪ್ಪನವರು ಹಗ್ಗದ ಸಮೇತ ಬಾವುಟದ ಕಂಬವನ್ನು ಹಿಡಿದುಕೊಂಡರು[65]. ಧ್ವಜವೇದಿಕೆಯ ಮೇಲೆ ಪೋಲೀಸರಿಗೂ ಸತ್ಯಾಗ್ರಹಿಗಳಿಗೂ ಸ್ವಲ್ಪಕಾಲ ನೂಕಾಟವಾಯಿತು. ಪರಿಸ್ಥಿತಿ ಬಿಗಡಾಯಿಸುವ ಚಿಹ್ನೆ ಸ್ಪಷ್ಟವಾಯಿತು. ಶ್ರೀಮತಿ ಯಶೋಧರಮ್ಮದಾಸಪ್ಪನವರು ಪೋಲೀಸರು ಬಾವುಟದ ಹಗ್ಗವನ್ನು ಬಿಟ್ಟು ವೇದಿಕೆಯಿಂದ ಇಳಿದು ದೂರ ನಿಂತರೆ ಜನರ ಉದ್ದೇಶ ಕಡಿಮೆಯಾಗುತ್ತದೆ. ಎಲ್ಲರೂ ಅವರವರ ಕಾರ್ಯ ಮಾಡಲು ಸಾಧ್ಯವಾಗುತ್ತದೆ. ಪೋಲೀಸರು ಸಹಕರಿಸಬೇಕು ಎಂದು ಪೋಲೀಸ್ ಅಧಿಕಾರಿಗಳನ್ನು ಪ್ರಾರ್ಥಿಸಿಕೊಂಡರು. ಎಸ್.ಚನ್ನಯ್ಯ ಟಿ.ಸಿದ್ದಲಿಂಗಯ್ಯನವರೂ ಕೂಡ ಕೇಳಿಕೊಂಡರು. ಪೋಲೀಸರನ್ನು ಧ್ವಜವೇದಿಕೆಯಿಂದ ಬಿಟ್ಟು ದೂರ ಕಳಿಸಿರಿ. ಶಿಸ್ತಿನಿಂದಿರುವ ನಾವು ಅಧಿಕಾರಿಗಳ ಆಜ್ಞೆಯನ್ನು ಮನ್ನಿಸುತ್ತೇವೆ.

ಮುಖಂಡರುಗಳ ಈ ಮನವಿಯಂತೆ ಅಧಿಕಾರಿಗಳು ತಮ್ಮ ವಿಭಾಗದ ಪೋಲೀಸರನ್ನು ಹಿಂದಕ್ಕೆ ಕಳುಹಿಸಿದರು. ಜನಸಮೂಹ ಶಾಂತವಾಗಬೇಕೆಂದು

[illegible]

ಮುಖಂಡರು ಪ್ರಾರ್ಥನೆಗೆ ಅಶಾಂತವಾಗಿದ್ದ ಜನಸ್ತೋಮ ಶಾಂತವಾಯಿತು[66]. ಟಿ.ಸುನಂದಮ್ಮನವರು 'ವಂದೇಮಾತರಂ' ಹಾಡಿದರು. ಎಂ.ಎನ್.ಜೋಯಿಸರು ಟಿ.ಸಿದ್ಧಲಿಂಗಯ್ಯ ನವರನ್ನು ಧ್ವಜಾರೋಹಣ ಮಾಡಲು ಪ್ರಾರ್ಥಿಸಿದರು. 'ನಾನೀಗ ಧ್ವಜಾರೋಹಣ ಮಾಡುತ್ತೇನೆ' ಎಂದು ಅಧ್ಯಕ್ಷರು ಘೋಷಿಸಿ ಇನ್ನೇನು ಹಗ್ಗವನ್ನೆಳೆಯಬೇಕು ಅಷ್ಟರಲ್ಲಿ ಪೋಲೀಸರಿಂದ ಬಂಧಿಸಲಟ್ಟರು. ಇದೇ ವೇಳೆ ಅಧ್ಯಕ್ಷರು ಬಂಧಿಸಲ್ಪರಿಂದ ಧ್ವಜ ಹಾರಿಸುವ ಹೊಣೆ ಎಂ.ಎನ್.ಜೋಯಿಸರದಾಯಿತು ಅವರು ವೇದಿಕೆಯ ಮೇಲೆ ಬಂದವರೇ ಹಗ್ಗವನ್ನು ಎಳೆದು ಧ್ವಜಾರೋಹಣ ಮಾಡಿದರು. ಅವರನ್ನೂ ಕೂಡ ಬಂಧಿಸಲಾಯಿತು. ಮತ್ತು ಮೈಸೂರು ಪೋಲೀಸ್ ಆಕ್ಟ್‌ನ 70, 73ರನ್ವಯ ಮಂಡ್ಯದ ಸ್ಪೆಷಲ್ ಪ್ರಥಮ ದರ್ಜೆಯ ನ್ಯಾಯಾಧೀಶರ ನ್ಯಾಯಾಲಯಕ್ಕೆ ವಿಚಾರಣೆಗೆ ಕರೆದೊಯ್ಯಲಾಯಿತು. ಮಂಡ್ಯ ಜಿಲ್ಲಾ ಮ್ಯಾಜಿಸ್ಟ್ರೇಟರು ವಿಚಾರಣೆ ಮಾಡಿ ಧ್ವಜಾರೋಹಣ ಮಾಡಿದ್ದ ಟಿ.ಸಿದ್ಧಲಿಂಗಯ್ಯ ಮತ್ತು ಎಂ.ಎನ್.ಜೋಯಿಸರನ್ನು ತಪ್ಪಿತಸ್ಥರೆಂದು ಮಂಡ್ಯದ ಮೊದಲನೇ ದರ್ಜೆಯ ಮ್ಯಾಜಿಸ್ಟ್ರೇಟರು ತೀರ್ಪು ನೀಡಿದರು. ಟಿ.ಸಿದ್ಧಲಿಂಗಯ್ಯನವರಿಗೆ ಮೈಸೂರು ಪೋಲೀಸ್ ಆಕ್ಟ್‌ನ 70 9(ಎ) ಮತ್ತು 73 ನೇ ಸೆಕ್ಷನ್ ಪ್ರಕಾರ 100 ರೂಪಾಯಿ ದಂಡ ಅಥವಾ ಒಂದು ತಿಂಗಳ ಸೆರಮನೆ ಶಿಕ್ಷೆ ಹಾಗೂ ಎಂ.ಎನ್.ಜೋಯಿಸರಿಗೆ 50 ರೂಪಾಯಿ ದಂಡ ಅಥವಾ ಒಂದು ತಿಂಗಳ ಸೆರಮನೆ ಶಿಕ್ಷೆ ವಿಧಿಸಲಾಯಿತು[67].

ಟಿ.ಸಿದ್ಧಲಿಂಗಯ್ಯನವರು ತಮ್ಮ ತೆರವಾದ ಅಧ್ಯಕ್ಷ ಸ್ಥಾನಕ್ಕೆ ಎಚ್.ಸಿ.ದಾಸಪ್ಪನವರನ್ನು ನೇಮಿಸಿದರೆ ಎಂ.ಎನ್.ಜೋಯಿಸರು ತಮ್ಮ ಸ್ಥಾನಕ್ಕೆ ಪಾರ್ಥನಾರಾಯಣ ಪಂಡಿತರನ್ನು ನೇಮಿಸಿರುವುದಾಗಿ ಘೋಷಿಸಿದರು. ಜನರ ಗದ್ದಲವು ಆಗಲೇ ಹೆಚ್ಚಾಗಿ ಆ ಸಮಯದಲ್ಲಿ ಐದು ಸಾವಿರದಷ್ಟು ಜನರಿದ್ದು ಅವರೆಲ್ಲಾ ಉದ್ರೇಕರಾಗಿದ್ದರು. ಆದರೆ ಅಲ್ಲಿ ಪೋಲೀಸ್ ಪಡೆ ಹಾಜರಿತ್ತು. ಬಂಧಿತರನ್ನು ಆ ಸ್ಥಳದಿಂದ ತಕ್ಷಣ ತೆರವುಗೊಳಿಸಲಾಯಿತು. ಧ್ವಜ ಹಾಗೂ ಧ್ವಜ ಸಿಬ್ಬಂದಿಯವರು, 200 ಜನ ಸ್ವಯಂ ಸೇವಕರು ಸೇರಿದಂತೆ ಸ್ವಯಂ ಸೇವಕಿಯರು ಹಾಗೂ 5,000 ಅತೀ ಉದ್ರೇಕಗೊಂಡ ಜನರ ಬೆಂಬಲದೊಂದಿಗೆ ಇದ್ದರು. ಪರಿಸ್ಥಿತಿ ಮಿತಿಮೀರಿ ಜೀವಹಾನಿಯಾಗುವುದನ್ನು ತಪ್ಪಿಸಲು ಜಿಲ್ಲಾ ಮ್ಯಾಜಿಸ್ಟ್ರೇಟರು ಸಮಯೋಚಿತವಾಗಿ ಧ್ವಜವನ್ನು ಮುಟ್ಟುಗೋಲನ್ನು ಮುಂದಿನ ಆದೇಶದವರೆಗೆ ಮುಂದೂಡಲ್ಪಟ್ಟರು[68].

ಹೀಗಾಗಿ ಪರಿಸ್ಥಿತಿ ಶಾಂತವಾಯಿತು. ಆದರೆ ಕಾಂಗ್ರೆಸ್‌ನ ಕಾರ್ಯಕರ್ತರು ಧ್ವಜ ಸ್ತಂಭದ ಸುತ್ತಲೂ ಕುಳಿತಿದ್ದು ಅದನ್ನು ಕಾವಲು ಕಾಯುವುದನ್ನು ಮುಂದುವರೆಸಿದರು. ಟಿ.ಸಿದ್ಧಲಿಂಗಯ್ಯ ಹಾಗೂ ಎಂ.ಎನ್.ಜೋಯಿಸರನ್ನು ಬಂಧಿಸಿ ಪೋಲೀಸ್ ವ್ಯಾಪ್ತಿಗೆ ಕರೆದುಕೊಂಡು ಹೋಗುವಾಗ ಜನರಿಗೂ ಪೋಲೀಸರಿಗೂ ಮಾತಿನ ಚಕಮಕಿ

ಪ್ರಾರಂಭವಾಯಿತು. ಜನಗಳ ಪರಿಸ್ಥಿತಿ ವಿಕೋಪಕ್ಕೆ ತಿರುಗುವ ಮೊದಲೇ ಜಿಲ್ಲಾಧಿಕಾರಿ ಜಿ.ಎಂ.ಮೇಕ್ರಿಯವರು ಮುಂದೆ ಬಂದು ಜನರು ಶಾಂತವಾಗಿರಬೇಕೆಂದು ಪ್ರಾರ್ಥಿಸಿಕೊಂಡರು. ಜಿ.ಎಂ.ಮೇಕ್ರಿ ಮನವಿಯಂತೆ ಪೋಲೀಸರು ಹಿಂದೆ ಸರಿದುದರಿಂದ ಮುಖಂಡರು ಮತ್ತು ಜನರು ಜಯಘೋಷಗಳನ್ನು ಕೂಗುತ್ತಾ ಬಂಧಿಸಿದ ಮುಖಂಡರನ್ನು ಪೋಲೀಸ್‌ವ್ಯಾನ್ ಒಳಗೆ ಕರೆದುಕೊಂಡು ಬಂದರು[69]. ಜನಸಮುದಾಯ ಯಾವ ಆಕ್ರೋಶವನ್ನೂ ತಾಳದೇ ಕೇವಲ ಜಯಕಾರ ಮತ್ತು ಕರತಾಡನಗಳಿಂದ ಶಿಸ್ತಿನಿಂದಿದ್ದರು. ಪೋಲೀಸರು ಸಹ ಯಾವ ಸಂದರ್ಭದಲ್ಲಿಯೂ ದುಡುಕದೆ, ದಸ್ತಗಿರಿಯಾದ ಮುಖಂಡರನ್ನು ಪೋಲೀಸ್ ವ್ಯಾನಿಗೆ ಹತ್ತಿಸಿ, ಅದರ ಬಾಗಿಲು ಮುಚ್ಚುವಾಗ ಟಿ.ಸಿದ್ಧಲಿಂಗಯ್ಯ ಮತ್ತು ಎಂ.ಎನ್.ಜೋಯೀಸರು ನೆರೆದ ಜನಕ್ಕೆ ನಮಸ್ಕಾರ ಮಾಡಿದರು[70]. ಆನಂತರ ಪೋಲೀಸ್ ವ್ಯಾನಿನಲ್ಲಿ ಮುಖಂಡರನ್ನು ಮಂಡ್ಯಕ್ಕೆ ಕರೆದುಕೊಂಡು ಹೋದರು, ಪಾರ್ವತಮ್ಮ ಸಿದ್ಧಲಿಂಗಯ್ಯನವರು ಮಹಿಳಾ ಮುಖಂಡರನ್ನು ಸಮಾಧಾನ ಮಾಡಿದರು. ಜನರು ಉರಿಬಿಸಿಲನ್ನು ಲೆಕ್ಕಿಸದೇ ಧ್ವಜದ ರಕ್ಷಣೆ ಮತ್ತು ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಈ ಸಂದರ್ಭದಲ್ಲಿ ಡೆಪ್ಯೂಟಿ ಕಮೀಷನವರು ನಿರಂತರವಾಗಿ ಮುಖ್ಯ ಕಾರ್ಯದರ್ಶಿಯವರೊಂದಿಗೆ ದೂರವಾಣಿಯಲ್ಲಿ ಸಂಪರ್ಕದಲ್ಲಿದ್ದರು, ಮುಂದಿನ ಆದೇಶ ಬರುವರೆಗೂ ಸೂಚನೆಗಳನ್ನು ನೀಡುತ್ತಿದ್ದರು. ಸಬ್-ಡಿವಿಜನ್ ಆಫೀಸರ್, ಪ್ರಥಮ ದರ್ಜೆ ನ್ಯಾಯಾಧೀಶರು, ಮಂಡ್ಯದ ಪೋಲೀಸ್ ಇನ್ಸ್‌ಪೆಕ್ಟರ್ ಮತ್ತು ಕಾಯ್ದಿಟ್ಟ ಪಡೆಯೊಂದಿಗೆ ಪರಿಸ್ಥಿತಿಯನ್ನು ವೀಕ್ಷಿಸುತ್ತಿದ್ದರು. ಮಾರ್ಚ್ ಪಾಸ್ಟ್ ಹಾಗೂ ಧ್ವಜ ವಂದನೆಯನ್ನು ತಡೆಗಟ್ಟಲಾಯಿತು[71].

ಟಿ.ಸಿದ್ಧಲಿಂಗಯ್ಯನವರಿಂದ ತೆರವಾದ ಅಧ್ಯಕ್ಷ ಸ್ಥಾನದಲ್ಲಿ ಹೆಚ್.ಸಿ.ದಾಸಪ್ಪನವರು ಜನರಲ್ಲಿ ಈ ರೀತಿಯಾಗಿ ಪ್ರಾರ್ಥಿಸಿದರು. ರಾಷ್ಟ್ರಧ್ವಜದ ಗೌರವವನ್ನು ಕಾಪಾಡುವ ಭಾರ ಜನರನ್ನವಲಂಬಿಸಿದೆ. ಏನೇ ಆದರೂ ಎಲ್ಲರೂ ಶಾಂತಿಯಿಂದಿರಬೇಕು. ಎಂಥ ಕಷ್ಟವನ್ನಾದರೂ ಸಹಿಸಿಕೊಳ್ಳಲು ಸಿದ್ಧರಾಗಿರಬೇಕು. ಲಾಠಿ ಏಟು, ಗುಂಡಿನೇಟುಗಳಿಗೂ ಹೆದರಬಾರದು. ಸಾಯಂಕಾಲದವರೆಗೂ ಧ್ವಜರಕ್ಷಣೆಗೆ ನಾನು ಇಲ್ಲೇ ಕುಳಿತುಕೊಳ್ಳುತ್ತೇನೆ. ನೀವೆಲ್ಲರೂ ಸಹಕರಿಸಬೇಕು" ಎಂದು ಹೇಳಿ ವೇದಿಕೆಯ ಮೇಲೆ ಕುಳಿತುಕೊಂಡರು[72]. ನಂತರ ಕೆ.ಟಿ.ಭಾಷ್ಯಂ, ಎಚ್.ಕೆ.ವೀರಣ್ಣಗೌಡ, ಕೆ.ಸಿ.ರೆಡ್ಡಿ, ಸುಬ್ಬಮ್ಮ ಜೋಯಿಸ್ ಮೊದಲಾದವರು ಭಾಷಣ ಮಾಡಿದರು. ಪ್ರತಿಬಂಧಕಾಜ್ಞೆ, ಮುಖಂಡರ ದಸ್ತಗಿರಿ, ಸರ್ಕಾರ ನೀತಿಯನ್ನು ಉಗ್ರವಾಗಿ ಟೀಕಿಸಿದರು. ಭಾಷಣದ ಮಧ್ಯ ಚಿಕ್ಕಮಗಳೂರಿನ ಸಿ.ಆರ್.ರಾಮಣ್ಣ, ಮೈಸೂರಿನ ಎನ್.ವಿಷಕಂಠರಾವ್‌ರವರು ಲಾವಣಿಗಳನ್ನು, ಸ್ವಯಂ ಸೇವಕಿಯರು ದೇಶ ಭಕ್ತಿಗೀತೆಗಳನ್ನು ಹಾಡಿದರು. ವೀರಕೇಸರಿ ಸೀತಾರಾಮಶಾಸ್ತ್ರಿಗಳು

ಧ್ವನಿವರ್ಧಕ ಮುಂದೆ ನಿಂತು ಎಲ್ಲರಿಗೂ ಕೇಳುವಂತೆ "ಏನೇ ಬರಲಿ, ಒಗ್ಗಟ್ಟಿರಲಿ" ಎಂಬ ಘೋಷಣೆಯನು ಕೂಗಿದರು. ಶಾಂತಿ, ಶಿಸ್ತು ಇರಬೇಕು ಎಂದು ಜನಗಳಿಗೆ ಮನವಿ ಮಾಡಿದರು. ಮುಖಂಡರ ಸೂಚನೆಯಂತೆ ಜನರು ಸ್ವಯಂ ಸೇವಕರು ಸೇವಕಿಯರು, ಉಪಹಾರ ಮುಗಿಸಿಕೊಂಡು ಧ್ವಜ ಮೈದಾನಕ್ಕೆ ಬಂದರು. ಧ್ವಜ ರಕ್ಷಣೆ ಕುಳಿತುಕೊಂಡವರಿಗೆ ಕುಳಿತ ಕಡೆಗೇ ಫಲಾಹಾರ ಒದಗಿಸಲಾಯಿತು. ಬಿಸಿಲಿನಲ್ಲಿ ಕುಳಿತು ಬಾಯಾರಿದವರಿಗೆ ಸ್ವಯಂ ಸೇವಕಿಯರು ನೀರು ಮತ್ತು ಮಜ್ಜಿಗೆಯನ್ನು ನೀಡಿದರು[73].

ಬೆಳಗ್ಗೆ ಹತ್ತು ಗಂಟೆಗೆ 'ವಿಷಯ ನಿಯಾಮಕ ಸಮಿತಿಯ ಸಭೆಯ ಸಭಾಂಗಣದಲ್ಲಿ ಆರಂಭವಾಯಿತು. ಹೆಚ್.ಸಿ.ದಾಸಪ್ಪನವರು ಧ್ವಜ ರಕ್ಷಣೆಗೆ ಕುಳಿತಿದ್ದರಿಂದ ಅವರ ಕೋರಿಕೆಯಂತೆ ಕೆ.ಟಿ.ಭಾಷ್ಯಂ ಅಧ್ಯಕ್ಷತೆಯಲ್ಲಿ ಕಾರ್ಯ ಕಲಾಪ ನಡೆಯಿತು. ಸಭೆಯಲ್ಲಿ ಅನೇಕ ವಿಷಯಗಳು ಚರ್ಚೆಯಾಗಿ ಬಹಿರಂಗ ಅಧಿವೇಶನದಲ್ಲಿ ಮಂಡಿಸಲು ಕೆಲವು ನಿರ್ಣಯಗಳನ್ನು ಸಿದ್ಧಪಡಿಸಲಾಯಿತು. ದೀರ್ಘ ಚರ್ಚೆಗೆ ಒಳಗಾದ ವಿಷಯಗಳು ಈ ಕೆಳಕಂಡಂತೆ ಇವೆ.

1) ಮೈಸೂರು ಕಾಂಗ್ರೆಸ್‌ನ್ನು ರಾಜಕೀಯ ಸಂಸ್ಥೆ ಎಂದು ಮೈಸೂರು ಸರಕಾರ ಒಪ್ಪಿಕೊಳ್ಳತಕ್ಕದ್ದು.

2) ಮೈಸೂರು ಮಹಾರಾಜರ ಆಶ್ರಯದಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸುವುದು ಮೈಸೂರು ಕಾಂಗ್ರೆಸ್‌ನ ಗುರಿ.

3) ಫೆಡರೇಷನ್ ವಿಚಾರವನ್ನು ಪರಿಶೀಲಿಸಲು ಮೈಸೂರು ಸರ್ಕಾರ ನೇಮಿಸಿರುವ ಸಮಿತಿಯನ್ನು ಕಾಂಗ್ರೆಸ್ ಒಪ್ಪುವುದಿಲ್ಲ. ಮೊದಲನೆಯ ನಿರ್ಣಯಕ್ಕೆ ಸಂಬಂಧಿಸಿದಂತೆ ಮೈಸೂರು ಕಾಂಗ್ರೆಸ್ ವರ್ಕಿಂಗ್ ಕಮಿಟಿ ನೇಮಿಸಿದ ಟಿ.ಎಸ್.ರಾಜಗೋಪಾಲ ಅಯ್ಯಂಗಾರರು ಮತ್ತು ಮೈಸೂರು ಕಾಂಗ್ರೆಸ್‌ನ ಅಂಗರಚನೆಯನ್ನು ಸಿದ್ಧಪಡಿಸಿದ್ದರು. ಕೆ.ಸಿ.ರೆಡ್ಡಿ ಮತ್ತು ಹೆಚ್.ಸಿ.ದಾಸಪ್ಪನವರ ವಾದ ವಿವಾದ ನಂತರ ನಿರ್ಣಯ ಮಾಡಲಾಯಿತು.

ಎರಡನೆಯ ನಿರ್ಣಯಕ್ಕೆ ಸಂಬಂಧಿಸಿದಂತೆ ಟಿ.ಮರಿಯಪ್ಪನವರ ವಿಷಯ ನಿಯಾಮಕ ಸಮಿತಿಯ ಮುಂದಿಟ್ಟರು. ನಿರ್ಣಯವನ್ನು ಸಮರ್ಥಿಸಿ ಕೆ.ಟಿ.ಭಾಷ್ಯಂ. ವಿ.ವೆಂಕಟಪ್ಪ, ಎಚ್.ಕೆ.ವೀರಣ್ಣಗೌಡ, ಎ.ಜಿ.ಬಂದೀಗೌಡರು ನಿರ್ಣಯಪರ ಮಾತನಾಡಿದರು[74]. 3 ಗಂಟೆಯ ಸಮಯಕ್ಕೆ ಉನ್ನತ ಪೊಲೀಸ್ ಅಧಿಕಾರಿಗಳ ತಂಡ 55 ಪ್ರತ್ಯೇಕ ಅಧಿಕಾರಿಗಳೊಂದಿಗೆ ಅಧಿವೇಶನ ನಡೆಯುವ ಸ್ಥಳಕ್ಕೆ ಆಗಮಿಸಿದರು. ಇನ್ಸ್‌ಪೆಕ್ಟರ್ ಮತ್ತು ಇತರೆ ಪೊಲೀಸ್ ಅಧಿಕಾರಿಗಳ ಬಲ ಹೆಚ್ಚಾಗಿ 175 ಜನ

ಲಭ್ಯವಿದ್ದರು. ಎಲ್ಲಾ ಕಡೆಯಿಂದ ಬಂದಿರುವ ಜನರು ಸೇರಿದ್ದು ಆಗ ಅಲ್ಲಿ 25,000 ಜನ ಹೊರಗಿನವರಿದ್ದು ಇದರಲ್ಲಿ ಸಮಾವೇಶಕ್ಕೆ ಬಂದಿರುವ ಪ್ರತಿನಿಧಿಗಳು, ಮುಖಂಡರು, ಸ್ವಯಂ–ಸೇವಕರು, ಸೇವಕಿಯರು, ರೈತರು, ಮಹಿಳೆಯರು, ವಿದ್ಯಾರ್ಥಿಗಳು, ಕಾರ್ಮಿಕರು ಸೇರಿದ್ದರು[75].

ಮೈಸೂರು ಕಾಂಗ್ರೆಸ್ ಅಧಿವೇಶನದ ಬಹಿರಂಗ ಸಭೆಯು ಸರಿಯಾಗಿ 6–30 ಕ್ಕೆ ಹೆಚ್.ಸಿ.ದಾಸಪ್ಪನವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಸುಮಾರು 25,000 ಜನರು ಹಾಜರಿದ್ದರು. ಸ್ವಯಂ ಸೇವಕ–ಸೇವಕಿಯರು ರಾಷ್ಟ್ರಗೀತೆಯನ್ನು ಹಾಡಿದರು. ಆನಂತರ ಮೈಸೂರಿನ ಎನ್.ವಿಷಕಂಠರಾಯರು ರಾಷ್ಟ್ರೀಯ ಭಾವನೆಗಳನ್ನು ಉದ್ದೀಪಿಸುವ ಲಾವಣಿಗಳನ್ನು ಹಾಡಿದರು. ರಾಷ್ಟ್ರಕೂಟದ ಸ್ವಾಗತಾಧ್ಯಕ್ಷರಾದ ಎಸ್.ಚನ್ನಯ್ಯನವರು ಸ್ವಾಗತ ಭಾಷಣ ಮಾಡುವ ಮೊದಲು ಪ್ರಾತಃಕಾಲ ಧ್ವಜಾರೋಹಣ ಸಮಯದಲ್ಲಿ ನಡೆದ ಘಟನೆಯನ್ನು ಪ್ರಸ್ತಾಪಿಸಿದರು. ಮೈಸೂರು ಪೋಲೀಸ್ ಶಾಸನ 39ನೇ ನಿಯಮ ಪ್ರಕಾರ ಪ್ರತಿಬಂಧಕಾಜ್ಞೆಯನ್ನು 25 ಜನ ಮುಖಂಡರುಗಳ ಮೇಲೆ ಪ್ರಯೋಗ ಮಾಡಲಾಗಿತ್ತು. ಧ್ವಜಾರೋಹಣ ಮಾಡಿದರೆ ಬಂಧಿಸುವುದಾಗಿ ಡಂಗುರ ಸಹ ಸಾರಲಾಗಿತ್ತು. ಆದರೆ ಧ್ವಜಾರೋಹಣವನ್ನು ನಿಲ್ಲಿಸುವುದು ಕಾಂಗ್ರೆಸ್ಸಿನ ಗೌರವಕ್ಕೆ ತಕ್ಕದ್ದಲ್ಲವೆಂದು ತಿಳಿದು ಧ್ವಜಾರೋಹಣ ಮಾಡಲಾಯಿತು. ಟಿ.ಸಿದ್ಧಲಿಂಗಯ್ಯ ಹಾಗೂ ಎಂ.ಎನ್.ಜೋಯೀಸರಿಗೆ ಸ್ವಾಗತ ಸಮಿತಿಯ ಪರವಾಗಿ ಅಭಿನಂದನೆ ಸಲ್ಲಿಸಿದರು[76].

ರಾಷ್ಟ್ರಧ್ವಜವನ್ನು ಆರೋಹಣ ಮಾಡಿದ್ದರಿಂದ ನಮ್ಮನ್ನಾಳುವ ಮಹಾರಾಜರ ವ್ಯಕ್ತಿತ್ವಕ್ಕಾಗಲೀ, ಆಡಳಿತಕ್ಕಾಗಲೀ ಎಳ್ಳಷ್ಟೂ ಕುಂದು ಬರುವುದಿಲ್ಲವೆಂಬುದನ್ನು ಖಚಿತವಾಗಿ ಹೇಳ ಬಯಸುತ್ತೇನೆ. ಆನಂತರ ಮೊದಲೇ ಸಿದ್ಧಪಡಿಸಿಕೊಂಡು ಬಂದಿದ್ದ ಕನ್ನಡದಲ್ಲಿ ಮುದ್ರಿತವಾಗಿದ್ದ ಸ್ವಾಗತ ಭಾಷಣವನ್ನು ಬಹಿರಂಗ ಅಧಿವೇಶನದ ಮುಂದೆ ಸ್ಪಷ್ಟವಾಗಿ ಓದಿದರು. ಶಿವಪುರ ರಾಷ್ಟ್ರಕೂಟದ ಉದ್ದೇಶ, ಅಂದಿನ ಸರ್ಕಾರದ ಜನವಿರೋಧಿ ಕಾರ್ಯ ಚಟುವಟಿಕೆ, ಅಂಗರಚನೆಯ ಅಂಗೀಕಾರ ಮೊದಲಾದವುಗಳ ಬಗ್ಗೆ ಚನ್ನಯ್ಯ ಅವರ ನಿಶ್ಚಿತ ನಿಲುವು ಅವರ ಸ್ವಾಗತ ಭಾಷಣದಲ್ಲಿ ಕಂಡು ಬಂದವು.[76A] ಎಸ್.ಚನ್ನಯ್ಯನವರ ಸ್ವಾಗತ ಭಾಷಣ ಮುಗಿದ ನಂತರ ಮೈಸೂರು ಕಾಂಗ್ರೆಸ್ ಪ್ರಥಮ ಅಧಿವೇಶನವಾಗಿದ್ದು ಶಿವಪುರ ರಾಷ್ಟ್ರಕೂಟದ ಯಶಸ್ಸು ಕೋರಿ ಪ್ರಮುಖ ವ್ಯಕ್ತಿಗಳು ಸಂದೇಶಗಳನ್ನು ಕಳುಹಿಸಿದ್ದರು. ಅವುಗಳನ್ನು ಹೆಚ್.ಕೆ.ವೀರಣ್ಣಗೌಡರು ಬಹಿರಂಗ ಅಧಿವೇಶನದಲ್ಲಿ ಓದಿದರು[77].

ಹೆಚ್.ಕೆ.ವೀರಣ್ಣಗೌಡರವರ ಸಂದೇಶಗಳನ್ನು ಓದಿದ ನಂತರ ಕೆ.ಸಿ.ರೆಡ್ಡಿ ಹಾಗೂ ವೀರಕೇಸರಿ ಸೀತಾರಾಮಶಾಸ್ತ್ರಿಗಳು ಭಾಷಣವನ್ನು ಮಾಡಿದರು. ಆನಂತರ ಅಧ್ಯಕ್ಷರಾದ ಹೆಚ್.ಸಿ.ದಾಸಪ್ಪನವರಿಗೆ ಖಾದಿಯಹಾರ, ರಜತ ಚರಕ ಸಹಿತ ತುರಾಯಿಯನ್ನು ಅರ್ಪಿಸಲಾಯಿತು. ಅವುಗಳನ್ನು ವೇದಿಕೆಯ ಮೇಲಿದ್ದ ಸಿದ್ಧಲಿಂಗಯ್ಯನವರ ಪತ್ನಿ ಪಾರ್ವತಮ್ಮನವರಿಗೆ ಅರ್ಪಿಸಿದರು. ಹೆಚ್.ಸಿ.ದಾಸಪ್ಪನವರು ಅಧ್ಯಕ್ಷ ಭಾಷಣ ಆರಂಭಿಸಲು ಎದ್ದು ನಿಂತಾಗ ಅಸಂಖ್ಯಾತ ಜಯಘೋಷಗಳು ಮತ್ತು ಕರತಾಡತನವಾಯಿತು. ತಾವು ಅಧ್ಯಕ್ಷರಾದ ಸಂದರ್ಭವನ್ನು ಜನಗಳಿಗೆ ಈ ರೀತಿಯಾಗಿ ಹೇಳಿದರು 'ಕಷ್ಟಕಾಲದಲ್ಲಾದ ಗೆಳೆತನವೇ ಶಾಶ್ವತವಾದ ಗೆಳೆತನ. ಆ ಗೆಳೆತನದ ನೆನಪನ್ನು ತಂದುಕೊಂಡು ಟಿ.ಸಿದ್ಧಲಿಂಗಯ್ಯನವರ ಜವಾಬ್ದಾರಿಯನ್ನು ಹೊತ್ತುಕೊಳ್ಳಲು ಧೈರ್ಯ ಮಾಡಿದ್ದೇನೆ.' ಆನಂತರ ಬೆಳಿಗ್ಗೆ ಧ್ವಜಾರೋಹಣವಾದ ಮೇಲೆ ಓದಲು ಸಿದ್ಧಲಿಂಗಯ್ಯನವರು ಸಿದ್ಧಪಡಿಸಿದ್ದ ಭಾಷಣವನ್ನು ಸಭೆಯ ಮುಂದೆ ಓದಲು ಪ್ರಾರಂಭಿಸಿದರು. ಹೆಚ್.ಸಿ.ದಾಸಪ್ಪನವರ ಗಂಟಲು ಕೆಟ್ಟಿದ್ದುರಿಂದ ಅವರ ಪರವಾಗಿ ಕೆ.ಟಿ.ಭಾಷ್ಯಂರವರು ಭಾಷಣದ ಪೂರ್ಣ ಪಾಠವನ್ನು ಓದಿದರು[78]. ಟಿ.ಸಿದ್ಧಲಿಂಗಯ್ಯನವರು ಅಧ್ಯಕ್ಷ ಭಾಷಣದಲ್ಲಿ ಪ್ರಮುಖವಾಗಿ ಆಶ್ವಾಸನೆಗೂ ಆಡಳಿತ ಪದ್ಧತಿಗೂ ಸಂಬಂಧವಿಲ್ಲದಿರುವಿಕೆಯ ಬಗ್ಗೆ ಟೀಕೆ, ಚುನಾಯಿತ ಪ್ರತಿನಿಧಿಗಳ ಮಂತ್ರಿಮಂಡಲಕ್ಕೆ ಒತ್ತಾಯ, ಹಳ್ಳಿಗರ ಆರ್ಥಿಕ ಸ್ಥಿತಿಯ ಬಗ್ಗೆ ಕಳಕಳಿ, ಇಡೀ ಮೈಸೂರು ಸಂಸ್ಥಾನದ ಎಲ್ಲಾ ಜನರನ್ನು ಪ್ರತಿನಿಧಿಸುವ ಏಕೈಕ ಸಂಸ್ಥೆ ಕಾಂಗ್ರೆಸ್ ಎಂಬುದರ ಬಗ್ಗೆ ಸ್ಪಷ್ಟತೆ, ಸುಧಾರಣಾ ಸಮಿತಿಯ ಬಹಿಷ್ಕಾರ, ಕಾಂಗ್ರೆಸ್ ಕೈಗೊಳ್ಳಬೇಕೆಂದಿರುವ ಕಾರ್ಯಕ್ರಮಗಳ ವಿವರ ಬಗ್ಗೆ ವಿವರಿಸಿದರು[79].

ಅಧ್ಯಕ್ಷರ ಭಾಷಣದ ನಂತರ ವಿಷಯ ನಿಯಾಮಕ ಸಮಿತಿಯಲ್ಲಿ ಸಿದ್ಧಪಡಿಸಿದ್ದ ನಿರ್ಣಯಗಳನ್ನು ಅಂಗೀಕಾರಕ್ಕಾಗಿ ಬಹಿರಂಗ ಅಧಿವೇಶನದ ಮುಂದೆ ಮಂಡಿಸಲಾಯಿತು. ಮೊದಲು ವೀರಕೇಸರಿ ಸೀತಾರಾಮ ಶಾಸ್ತ್ರಿಗಳ ಧ್ವಜಾರೋಹಣ ಸಂದರ್ಭದಲ್ಲಿ ಬಂಧಿತರಾದ ಟಿ.ಸಿದ್ಧಲಿಂಗಯ್ಯ ಹಾಗೂ ಎಂ.ಎನ್.ಜೋಯೀಸರಿಗೆ ಅಭಿನಂದನೆಗಳನ್ನು ಅರ್ಪಿಸುವ ನಿರ್ಣಯವನ್ನು ಸಭೆಯ ಮುಂದಿಟ್ಟರು. ಎಲ್ಲಾ ಸದಸ್ಯರೂ ಮುಕ್ತ ಮನಸ್ಸಿನಿಂದ ಅಂಗೀಕಾರ ಸೂಚಿಸಿದರು. ಆನಂತರ ಬಿ.ಎನ್.ಗುಪ್ತರ ಗಡೀಪಾರಾಜ್ಞೆಯನ್ನು ಸರ್ಕಾರ ಹಿಂದಕ್ಕೆ ತೆಗೆದುಕೊಳ್ಳಬೇಕೆಂಬ ನಿರ್ಣಯವನ್ನು ಕೆ.ಸಿ.ರೆಡ್ಡಿ ಮಂಡಿಸಿದರು. ಗುಬ್ಬಿ ರಾಜಗೋಪಾಲಚಾರ್ಯರು ಅದನ್ನು ಸಮರ್ಥಿಸಿದರು. ಚರ್ಚೆಯ ನಂತರ ನಿರ್ಣಯ ಅಂಗೀಕಾರವಾಯಿತು. ದೇಶದ ಕೆಲವು ಸಂಸ್ಥಾನಗಳಲ್ಲಿ ನಡೆಯುತ್ತಿರುವ ಪ್ರಜೆಗಳ ಹೋರಾಟಕ್ಕೆ ಸಹಾನುಭೂತಿ ಸೂಚಿಸುವ ನಿರ್ಣಯವನ್ನು ಡಾ॥ ಪಾರ್ಥನಾರಾಯಣ ಪಂಡಿತರು ಮಂಡಿಸಿದರು. ಎಸ್.ರಂಗರಾಮಯ್ಯ ಅದನ್ನು

ಅನುಮೋದಿಸಿದರು. ಮೈಸೂರು ಸರ್ಕಾರದ ಫೆಡರೇಷನ್ ಸಮಿತಿಯ ಬಹಿಷ್ಕಾರ ನಿರ್ಣಯವನ್ನು ಹೆಚ್.ಬಿ.ಗುಂಡಪ್ಪಗೌಡರು ಸಭೆಯ ಮುಂದಿಟ್ಟರು. ತಗಡೂರು ರಾಮಚಂದ್ರರಾವ್ ಅನುಮೋದಿಸಿದರು. ತಿರುವಾಂಕೂರಿನ ಸಂಸ್ಥಾನದಲ್ಲಿ ನಡೆಯುತ್ತಿದ್ದ ಸರ್ಕಾರದ ದೌರ್ಜನ್ಯವನ್ನು ಖಂಡಿಸುವ ನಿರ್ಣಯವನ್ನು ಟಿ.ಎಸ್.ರಾಜಗೋಪಾಲ ಅಯ್ಯಂಗಾರ್ ಮಂಡಿಸಿದರು. ಎನ್.ಸಿ.ತಿಮ್ಮಾರೆಡ್ಡಿ ಅದನ್ನು ಬಲವಾಗಿ ಸಮರ್ಥಿಸಿ 'ಹೆಂಡ ಕುಡುಕರನ್ನು ತಮ್ಮ ಕಡೆಗೆ ಒಲಿಸಿಕೊಂಡು ಕಾಂಗ್ರೆಸ್ ಜನರನ್ನು ಮಟ್ಟಹಾಕಲು ಅಲ್ಲಿನ ಸರ್ಕಾರ ಆ ಕೃತ್ಯ ಮಾಡುತ್ತಿದೆ ಎಂದು ತಿರುವಾಂಕೂರು ಸಂಸ್ಥಾನದ ಸರ್ಕಾರವನ್ನು ಉಗ್ರವಾಗಿ ಖಂಡಿಸಿದರು. ಅಂತಿಮವಾಗಿ ವಿಷಯ ನಿಯಾಮಕ ಸಮಿತಿಯಲ್ಲಿ ಸಿದ್ಧವಾಗಿದ್ದ ನಿರ್ಣಯಗಳ ಬಗ್ಗೆ ಚರ್ಚೆಯಾಯಿತು. ಬಹುಮತದ ಒಪ್ಪಿಗೆಯೊಂದಿಗೆ ನಿರ್ಣಯಗಳು ಅಂಗೀಕಾರ ಪಡೆಯಲಾಯಿತು. ರಾತ್ರಿ 9 ಗಂಟೆಗೆ ಬಹಿರಂಗ ಅಧಿವೇಶನವು ಮುಕ್ತಾಯವಾಯಿತು[80].

ಏಪ್ರಿಲ್ 12, ಮಂಗಳವಾರ 1938 : ಬೆಳಿಗ್ಗೆ 6 ಗಂಟೆಗೆ ಸೂರ್ಯೋದಯವಾಗುತ್ತಿದ್ದಂತೆಯೇ ಅಸಂಖ್ಯಾತ ಜನರು, ಸ್ವಯಂ ಸೇವಕರು, ಸೇವಕಿಯರು, ಮುಖಂಡರು ಧ್ವಜ ಮೈದಾನಕ್ಕೆ ಬಂದು ಸೇರಿದರು. ಸುಮಾರು 7 ರಿಂದ 8 ಸಾವಿರ ಜನರಿದ್ದರು. 8 ಗಂಟೆಯ ಸಮಯಕ್ಕೆ ಅಧ್ಯಕ್ಷರಾದ ಹೆಚ್.ಸಿ.ದಾಸಪ್ಪನವರು ಧ್ವಜಾರೋಹಣ ಸಮಾರಂಭಕ್ಕೆ ಧ್ವಜ ಮೈದಾನಕ್ಕೆ ಆಗಮಿಸಿದರು. ಆ ಸಮಯಕ್ಕೆ ಶಸ್ತ್ರಸಜ್ಜಿತವಾದ ಪೋಲೀಸರು ತಮ್ಮ ಸ್ಥಳದಲ್ಲಿ ಬಂದು ನಿಂತುಕೊಂಡರು. ದಸ್ತಗಿರಿಯಾಗುವಾಗ ಚಪ್ಪಾಳೆ ತಟ್ಟುವುದು, ಜಯಕಾರ ಮಾಡುವುದು, ನೂಕು ನುಗ್ಗಲಿಗೆ, ಗಲಾಟೆಗೆ ಅವಕಾಶ ನೀಡಬಾರದೆಂದು ಧ್ವನಿ ವರ್ಧಕಗಳ ಮೂಲಕ ನಿರಂತರವಾಗಿ ಮನವಿ ಮಾಡಲಾಯಿತು. ಜೆ.ಓ.ಸಿಗಳಾದ ಪಾರ್ಥನಾರಾಯಣ ಪಂಡಿತರು ಅಧ್ಯಕ್ಷರಿಗೆ ಧ್ವಜಾರೋಹಣ ಮಾಡಲು ಪ್ರಾರ್ಥಿಸಿದರು. ಅಧ್ಯಕ್ಷರಾದ ಹೆಚ್.ಸಿ.ದಾಸಪ್ಪನವರು ಧ್ವಜಾರೋಹಣ ಮಾಡಲು ಪ್ರಾರ್ಥಿಸಿದರು. ಅಧ್ಯಕ್ಷರಾದ ಹೆಚ್.ಸಿ.ದಾಸಪ್ಪನವರು ಧ್ವಜಾರೋಹಣ ಮಾಡುವುದಾಗಿ ಘೋಷಿಸಿದಾಗ ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟ್‌ರಾದ ರುಕ್ಕೋಜಿರಾವ್ ಸಿಂಧ್ಯಾರವರು ಅವರನ್ನು ದಸ್ತಗಿರಿ ಮಾಡಿದರು. ಆಗ ಅವರು ತಮ್ಮ ಸ್ಥಾನಕ್ಕೆ ವೆಂಕಟಪ್ಪನವರನ್ನು ನಾಮಕರಿಸಿದರು. ಆದರೂ ಸಹ ಧ್ವಜಾರೋಹಣ ಮಾಡುವ ಮುನ್ನ ಬಂಧನಕ್ಕೆ ಒಳಗಾದರು. ನಂತರ ಅವರು ಕೆ.ಚೆಂಗಲರಾಯರೆಡ್ಡಿರವರನ್ನು ನಾಮಕರಿಸಿದರು. ಅವರು ಧ್ವಜಾರೋಹಣವನ್ನು ಯಶಸ್ವಿಯಾಗಿ ಮಾಡಿದರು. ನಂತರ ಅವರು ಬಂಧನಕ್ಕೊಳಗಾಗಿ ಕೆ.ಟಿ.ಭಾಷ್ಯಂರವರಿಗೆ ಅಧ್ಯಕ್ಷತೆ ವಹಿಸಿಕೊಳ್ಳಲು ಸೂಚಿಸಿದರು. ಕೆ.ಟಿ.ಭಾಷ್ಯಂರವರು ನಂತರ ನಡೆದ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಪೋಲೀಸರ ದರ್ಪದ

ಚಟುವಟಿಕೆಗಳ ಬಗ್ಗೆ ವಿಷಾದ ವ್ಯಕ್ತಪಡಿಸುತ್ತಾ ಎಲ್ಲವೂ ಶಾಂತ ರೀತಿಯಿಂದ ನಡೆಯುತ್ತಿರುವಾಗ ಪೋಲೀಸರು ಅನಗತ್ಯವಾಗಿ ತೊಂದರೆ ನೀಡುತ್ತಿದ್ದರು ಎಂದು ಹೇಳುತ್ತಾ ಕಾರಾಗೃಹಕ್ಕೆ ಹೋದವರ ಬಗ್ಗೆ ಅನುಕಂಪ ತೋರಿದರು. ಅವರೂ ಸಹ ಪೋಲೀಸರು ಬಂಧಿಸಬಹುದು ಎಂದು ನಿರೀಕ್ಷಿಸಲಾಗಿತ್ತು. ಆದರೆ ಅವರನ್ನು ಬಂಧಿಸದೇ ತೆರಳಿದರು[81].

ದಸ್ತಗಿರಿಯಾದ ಮುಖಂಡರನ್ನು ಪೋಲೀಸರು ಕರೆದುಕೊಂಡು ಹೋದ ಮೇಲೆ ಧ್ವಜಸ್ತಂಭದ ವೇದಿಕೆ ಸುತ್ತ ಪ್ರಮುಖ ಮುಖಂಡರು, ಸ್ವಯಂ ಸೇವಕರು, ಸೇವಕಿಯರು ರಾಷ್ಟ್ರಧ್ವಜದ ರಕ್ಷಣೆಗೆ ಕಾವಲು ಕುಳಿತರು. ಧ್ವಜ ಅವರೋಹಣವಾಗುವವರೆಗೆ ಬೇರೆ ಬೇರೆ ಕಡೆಯಿಂದ ಬಂದ ಜನರ ಸರಣಿ ಉಪನ್ಯಾಸಗಳು ನಡೆದವು. ದೇಶಭಕ್ತಿ ಗೀತೆಗಳನ್ನು, ಲಾವಣಿಗಳನ್ನು ಕೆಲವರು ಹಾಡಿದರು. ರಾಷ್ಟ್ರಧ್ವಜದ ರಕ್ಷಣೆಗೆ ಕುಳಿತ ಪ್ರಮುಖ ಮುಖಂಡರುಗಳೆಂದರೆ ಕೆ.ಟಿ.ಭಾಷ್ಯಂ, ಪಾರ್ಥನಾರಾಯಣ ಪಂಡಿತ್ (ಜೆ.ಓ.ಸಿ) ಸೀತಾರಾಮಶಾಸ್ತ್ರಿ, ಟಿ.ಎಸ್.ರಾಜಗೋಪಾಲಅಯ್ಯಂಗಾರ್, ತಗಡೂರು ರಾಮಚಂದ್ರರಾಯ ಅನೇಕ ಸ್ತ್ರೀ ಸತ್ಯಾಗ್ರಹಿಗಳೂ, ಸ್ವಯಂ ಸೇವಕಿಯರೂ ಊಟಕ್ಕೂ ಏಳದೇ ವೇದಿಕೆಗೆ ಊಟ ತರಿಸಿಕೊಂಡರು. ಇವರೆಲ್ಲರೂ ತುಂಬಾ ಜಾಗರೂಕತೆಯಿಂದ ಧ್ವಜವನ್ನು ಎಲ್ಲಿ ಕಸಿದುಕೊಳ್ಳುತ್ತಾರೋ ಎಂದು ಭಯಪಟ್ಟಿದ್ದರು. ಬೇಸಿಗೆಯ ಬಿಸಿಲಾದ್ದರಿಂದ ಎಲ್ಲರ ಮುಖ ಕಪ್ಪಿಟ್ಟಿತು. ಅನೇಕರ ತೋಳು ಮತ್ತು ಮೊಣಕೈಗಳ ಮೇಲೆ ಗುಳ್ಳೆಗಳು ಕಾಣಿಸಿಕೊಂಡವು. ಧ್ವನಿವರ್ಧಕಗಳ ಮೂಲಕ ಶಾಂತರೀತಿಯಿಂದ ಇರಬೇಕೆಂದು, ಧ್ವಜಕ್ಕೆ ಗೌರವ ಸಲ್ಲಿಸಿದಂತೆ ಆಗುತ್ತದೆ ಎಂದು ನಿರಂತರವಾಗಿ ಮನವಿ ಮಾಡಲಾಯಿತು. ಸಂಜೆ 6–00 ಗಂಟೆಗೆ ಸಕಲ ಮರ್ಯಾದೆಗಳೊಡನೆ ಧ್ವಜವನ್ನು ಅವರೋಹಣ ಮಾಡಲಾಯಿತು[82]. ಧ್ವಜಾರೋಹಣ ಮಾಡಿ ಬಂಧಿತರಾದ ಮೂವರು ನಾಯಕರನ್ನು ಮಂಡ್ಯ ನಗರದ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟರು ವಿಚಾರಣೆ ಮಾಡಿ ಶಿಕ್ಷೆಯ ತೀರ್ಪನ್ನು ನೀಡಿತು. ಹೆಚ್.ಸಿ.ದಾಸಪ್ಪನವರಿಗೆ 4 ತಿಂಗಳ ಸೆರಮನೆವಾಸ ಮತ್ತು 200 ರೂ ದಂಡವನ್ನು ಹಾಗೂ ವೆಂಕಟಪ್ಪ ಮತ್ತು ಕೆ.ಸಿ.ರೆಡ್ಡಿಯವರಿಗೆ 3 ತಿಂಗಳ ಸೆರಮನೆವಾಸ ಮತ್ತೆ 200 ದಂಡವನ್ನು ವಿಧಿಸಿದರು. ಹಣ ಕೊಡಲು ತಪ್ಪಿದರೆ ಮೂವರು 20 ದಿನಗಳ ಹೆಚ್ಚಿನ ಶಿಕ್ಷೆ ಅನುಭವಿಸುವಂತೆ ಆಜ್ಞೆ ಮಾಡಿದರು[83].

12–04–1938 ರಂದು ರಾಷ್ಟ್ರಕೂಟದಲ್ಲಿ ಅಂಗೀಕರಿಸಿದ ನಿರ್ಣಯಗಳು.

1) ರಾಷ್ಟ್ರಧ್ವಜದ ಗೌರವವನ್ನು ಕಾಪಾಡಿದ ಹಾಗೂ ಕಾರಾಗೃಹಕ್ಕೆ ತೆರಳಿದ ಮುಖಂಡರುಗಳಾದ ಹೆಚ್.ಸಿ.ದಾಸಪ್ಪ. ಪಿ.ವೆಂಕಟಪ್ಪ, ಕೆ.ಸಿ.ರೆಡ್ಡಿಯವರಿಗೆ ರಾಷ್ಟ್ರಕೂಟದ ಪರವಾಗಿ ವಂದನೆಗಳನ್ನು ಅರ್ಪಿಸುತ್ತದೆ.

2) ಆಂಧ್ರ ಪ್ರಾಂತೀಯ ಕಾಂಗ್ರೆಸ್ಸಿನ ಅಧ್ಯಕ್ಷರಾದ ಕೆ.ನಾಗೇಶ್ವರರಾವ್ ಪಂತಲುರವರ ನಿಧನಕ್ಕಾಗಿ ಸಭೆಯು ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತದೆ.

3) ದಕ್ಷಿಣ ಆಫ್ರಿಕಾ, ಕೀನ್ಯಾ, ಪೂರ್ವ ಆಫ್ರಿಕಾ, ಉಗಾಂಡ, ಜಾನ್ಸಿಬಾರ್ ಮಲಯ, ಮಾರಿಷಸ್, ಫಿಜಿ ಮೊದಲಾದ ದೇಶಗಳಲ್ಲಿ ಭಾರತೀಯರು ಅನುಭವಿಸುತ್ತಿದ್ದ ಹಕ್ಕುಗಳು, ಸ್ಥಾನಗಳು ಕ್ರಮವಾಗಿ ಕ್ಷೀಣಿಸುತ್ತಿರುವುದಕ್ಕೆ ರಾಷ್ಟ್ರಕೂಟವು ವಿಷಾದವನ್ನು ವ್ಯಕ್ತಪಡಿಸುತ್ತದೆ.

4) ಮೈಸೂರು ಸರ್ಕಾರದವರು ಸ್ಥಾಪಿಸಿರುವ ಸುಧಾರಣಾ ಸಮಿತಿಯ ವಿಚಾರವಾಗಿ ಮೈಸೂರು ಕಾಂಗ್ರೆಸ್ ರಾಷ್ಟ್ರಕೂಟವು ಅತೃಪ್ತಿಯನ್ನು ವ್ಯಕ್ತಪಡಿಸಿತು[84].

ರಾಷ್ಟ್ರಧ್ವಜವನ್ನು ಗೌರವದಿಂದ ಇಳಿಸಿಕೊಂಡ ಮೇಲೆ ಸಂಜೆ 6–00 ಗಂಟೆಗೆ ಬಹಿರಂಗ ಸಭೆ ನೀಲಕಂಠಶಾಸ್ತ್ರಿ ವಿಷಕಂಠರಾವ್ ಲಾವಣಿಯೊಂದಿಗೆ ಪ್ರಾರಂಭವಾಯಿತು. ಸ್ವಯಂ–ಸೇವಕರು ಮತ್ತು ಸೇವಕಿಯರಿಂದ ಕೆಲವು ದೇಶ ಸೇವೆಯ ಪದ್ಯಗಳನ್ನು ಹಾಡಿದರು. ನಂತರ ಕಾಂಮ್ರೇಡ್ ಶಂಕರನಾರಾಯಣರಾಯರವರು "ವಂದೇ ಮಾತರಂ" ಎಂಬ ಹಾಡನ್ನು ಹಾಡಿದರು. ಆ ವೇಳೆಗೆ ಸರಿಯಾಗಿ ಅಧ್ಯಕ್ಷರಾದ. ಕೆ.ಟಿ.ಭಾಷ್ಯಂ, ವಿಷಯ ನಿಯಾಮಕ ಸಭೆ ಮತ್ತು ಕಾರ್ಯಕಾರಿ ಮಂಡಳಿಯ ಸಭೆಯ ಸದಸ್ಯರೊಂದಿಗೆ, ಜನರ ಜಯಕಾರಗಳನ್ನು ಸ್ವೀಕರಿಸುತ್ತಾ ಭಾಷಣ ವೇದಿಕೆಯನ್ನು ಏರಿ ಕುಳಿತುಕೊಂಡರು. ತರುವಾಯ ಕೆ.ಟಿ.ಭಾಷ್ಯಂರವರು ವೇದಿಕೆಯ ಮೇಲಿಂದ ತಮ್ಮ ಭಾಷಣವನ್ನು ಪ್ರಾರಂಭಿಸಿದರು. "ಈ ದಿನದ ಬೆಳಗಿನ ದಸ್ತಗಿರಿಗಳಾದ ಮೇಲೆ ಜನಗಳ ಯಶಸ್ಸು ಎಷ್ಟು ವ್ಯಾಕುಲಗೊಂಡಿದೆ ಎಂಬುದನ್ನು ನಾನು ಮುತ್ತಷ್ಟು ತಮಗೆ ಹೇಳಬೇಕಾಗಿಲ್ಲ. ಹೆಚ್.ಸಿ.ದಾಸಪ್ಪ. ವೆಂಕಟಪ್ಪ, ಕೆ.ಸಿ.ರೆಡ್ಡಿಯವರು ಪೋಲೀಸರ ವಶವಾಗಿ ಅವರುಗಳಿಗೆ ಮಂಡ್ಯ ಮ್ಯಾಜಿಸ್ಟ್ರೇಟರ್ ಶಿಕ್ಷೆಯನ್ನು ವಿಧಿಸಿದ್ದಾರೆ. ಈಗ ಅವರು ತಮ್ಮ ಮಹತ್ತರವಾದ ಜವಾಬ್ದಾರಿಯನ್ನು ಸತ್ಯಗಳು ಸಹಿಗಳು ಮೇಲೆ ಹಾಕಿರುವುದರಿಂದ ನಾವು ನಮ್ಮ ಕರ್ತವ್ಯವನ್ನು ಸರಿಯಾಗಿ ಮಾಡಲೇಬೇಕು. ನಾಳೆ ಸರಿಯಾಗಿ 8 ಗಂಟೆಗೆ ನಿಯಮದ ಪ್ರಕಾರ ಧ್ವಜಾರೋಹಣ ನೆಡೆಯಲೇಬೇಕಾಗಿದೆ. ಅದನ್ನು ನೆರವೇರಿಸುತ್ತೇನೆ. ಧ್ವಜಾರೋಹಣವಾದ ಮೇಲೆ ನಾನು ಮತ್ತು ನಿಮ್ಮಲ್ಲಿ ನಿಂತು ಮಾತನಾಡುವ ಸುಯೋಗವಿದೆಯೋ ಇಲ್ಲವೋ ಹೇಳಲು ಸಾಧ್ಯವಿಲ್ಲ. ತಾವೆಲ್ಲರೂ ನನ್ನ ಧ್ವಜಾರೋಹಣ ಕಾರ್ಯದಲ್ಲಿ ನೆರವಾಗುತ್ತೀರೆಂದು ನಂಬಿದ್ದೇನೆ. ಎಲ್ಲಿಯವರೆಗೆ ನಾವು ಸರ್ಕಾರದ ಆಜ್ಞೆಯನ್ನು ಎದುರಿಸಿ, ಅದನ್ನು ಮುರಿಯುವುದಿಲ್ಲ ಅಲ್ಲಿಯವರೆಗೆ ನಮಗೆ ಶಾಂತಿಯಿಲ್ಲ ಧ್ವಜ ದರದಲ್ಲಿ ಅದನ್ನು ಒಂದು ಅಂಗುಲ ಇಳಿಸುವುದೂ ಇಲ್ಲ ಸರಿಯಾದುದೂ ಅಲ್ಲ. ಈ ಧ್ವಜಕ್ಕೆ ಆಳವಾದ ಬೆಲೆಯಿದೆ.

ಇದರಲ್ಲಿ ಕಾಣುವ ತ್ರಿವರ್ಣಗಳೂ ಬೇರೆ ಬೇರೆ ಅರ್ಥಗಳಿವೆ. ಅರ್ಥವಿಲ್ಲದೆ ಧ್ವಜದ ನಿರ್ಮಾಣವಾಗಿಲ್ಲ. ಮೇಲೆ ಕಾಣುವ ಕೇಸರಿ ಬಣ್ಣವು. ಸನ್ಯಾಸಿಯಲ್ಲಿರಬೇಕಾದ ತ್ಯಾಗ ಬುದ್ಧಿಯನ್ನು, ವಿಚಾರಶೀಲತೆಯನ್ನು ಕಂಗೊಳಿಸುತ್ತದೆ. ಮಧ್ಯ ಇರುವ ಬಿಳಿಯ ಬಣ್ಣವು ನಿರ್ಮಲ ಹೃದಯವನ್ನು ದಯೆಯನ್ನು, ಪರಿಶುದ್ಧತೆಯನ್ನು ತೋರಿಸುತ್ತದೆ. ಹೀಗೆ ಮಾನವನ ಶರೀರದ ಹೃದಯವು ಮಧ್ಯ ಭಾಗದಲ್ಲಿದೆಯೋ ಅದೇ ರೀತಿಯಲ್ಲಿ ಬಿಳಿ ಬಣ್ಣವು ಧ್ವಜದ ನಡುವೆ ಇದೆ. ಅದರ ಕೆಳಗೆ ಹಸಿರು ಬಣ್ಣದ ಗುರುತಿದೆ. ಅದರ ಭಾವನೆ, ಮಾನವನ ಹೃದಯದೊಳಗಿನ ಭಾವನೆ ಮತ್ತು ಆಕಾಂಕ್ಷೆ. ಇದರ ಮೇಲೆ ಚರಕದ ಗುರುತಿದೆ. ಅಂದರೆ ಚರಕವೇ ಇದಕ್ಕೆಲ್ಲಾ ಮೂಲಾಧಾರ. ಈ ರೀತಿಯಲ್ಲದೇ ಈ ರಾಷ್ಟ್ರಧ್ವಜದ ಮಹತ್ವ ಮತ್ತು ಹೆಮ್ಮೆ. ಕತ್ತಲೆಯಾದ ಮೇಲೆ ಬೆಳಕು ಬರುವಂತೆ, ಕಷ್ಟಕಾಲಗಳು ಕಳೆದ ಮೇಲೆ ಸುಖದಿವಸಗಳನ್ನು ನೋಡಲೇಬೇಕು. ಅಂದರೆ ಈಗ ನಮಗಿರುವ ತೊಂದರೆಗಳು ಬೇಗ ನಿವಾರಣೆಯಾಗಿ ನಾವುಗಳು ಶೀಘ್ರದಲ್ಲಿಯೇ ಶುಭ ದಿವಸಗಳನ್ನು ನೋಡುತ್ತೇವೆ. ಇಂದು ಸೆರಮನೆಗೆ ತೆರಳುವ ಮುನ್ನ ಹೆಚ್.ಸಿ.ದಾಸಪ್ಪನವರು ಈ ಸಂದೇಶವನ್ನು ವಿಶ್ವಾಸ ಪೂರ್ವಕವಾಗಿ ಕಳುಹಿಸಿರುತ್ತಾರೆ. ನಾನು ಅದನ್ನು ಈಗ ತಮ್ಮಲ್ಲಿ ಓದುತ್ತೇನೆ.

"We are greatful for perfect decipline shown by numerous persons who were present to participate. The hosting of National flag, Which is as much the flag of Mysore as that of India. We are aware that there are commentless people with a grim determination to indicate the honour of the flag. We earnestly appeal to the people to honour the flag of all costs. We would appeal to them to be perfectly peaceful and non-voilent, the victory is bounded to becomes"[85].

ತರುವಾಯ ಠರಾವನ್ನು ಸಭೆಯ ಮುಂದೆ ಮಂಡಿಸಿ ಅಂಗೀಕರಿಸಲಾಯಿತು. ರಾಜಗೋಪಾಲ ಅಯ್ಯಂಗಾರ್ ಮೈಸೂರು ಸರ್ಕಾರದವರು ರಚಿಸಿರುವ ಸುಧಾರಣಾ ಸಮಿತಿಯ ವಿಚಾರವಾಗಿ ಠರಾವನ್ನು ಮಂಡಿಸಿ ಈ ರೀತಿಯಾಗಿ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ರಾತ್ರಿ ಭೋಜನವಾದ ಮೇಲೆ ಕೆ.ಟಿ.ಭಾಷ್ಯಂರ ಅಧ್ಯಕ್ಷತೆಯಲ್ಲಿ ಕಾರ್ಯಕಾರಿ ಸಮಿತಿ ಸಭೆ ಸೇರಿ ನಾಳೆಯ ಕಾರ್ಯಕ್ರಮದ ಬಗೆಗೆ ಚರ್ಚಿಸಿದರು. ಧ್ವಜಾರೋಹಣ ಮಾಡಬೇಕಾದ ಮುಖಂಡರ ಹೆಸರುಗಳನ್ನು ಅನುಕ್ರಮವಾಗಿ ತೀರ್ಮಾನಿಸಲಾಯಿತು. ಯಾವುದೇ ಅಹಿತಕರ ಘಟನೆಗೂ ಅವಕಾಶ ನೀಡದಂತೆ

ಧ್ವಜಾರೋಹಣ ಯಶಸ್ವಿಗೊಳಿಸಬೇಕೆಂದು ಕೆ.ಟಿ.ಭಾಷ್ಯಂ ಕಾರ್ಯಕರ್ತರಿಗೆ ತಿಳಿಸಿದರು. ಎಲ್ಲಾ ಜವಾಬ್ದಾರಿಯನ್ನು ಅಧ್ಯಕ್ಷರಾದ ಕೆ.ಟಿ.ಭಾಷ್ಯಂರವರ ವಹಿಸಿಕೊಂಡರು[86].

13ನೇ ಏಪ್ರಿಲ್ 1938 : ಬುಧವಾರ ಬೆಳಿಗ್ಗೆ 6 ಗಂಟೆಗೆ ಧ್ವಜಾರೋಹಣಕ್ಕೆ ಎಲ್ಲಾ ಸಿದ್ಧತೆಗಳನ್ನು ಮಾಡಲಾಯಿತು. ಸುಮಾರು 4 ರಿಂದ 5 ಸಾವಿರ ಜನರು ಧ್ವಜ ಮೈದಾನದಲ್ಲಿ ಒಟ್ಟುಗೂಡಿದರು. ಸಮಯಕ್ಕೆ ಸರಿಯಾಗಿ ಪೋಲೀಸು ಪಡೆಯೂ ಬಂದು ಸಿದ್ಧರಾಗಿ ನಿಂತರು. ಬೆಳಿಗ್ಗೆ 8 ಗಂಟೆಗೆ ಸರಿಯಾಗಿ ಕೆ.ಟಿ.ಭಾಷ್ಯಂ ಉಳಿದ ಪ್ರಮುಖ ಮುಖಂಡರೊಂದಿಗೆ ಮತ್ತು ಸ್ವಯಂ ಸೇವಕರು–ಸೇವಕಿಯರ ಜೊತೆಯಲ್ಲಿ ಧ್ವಜವೇದಿಕೆಯ ಬಳಿಗೆ ಬಂದರು. ಸ್ವಯಂ ಸೇವಕರ ಪಡೆಯ ಮುಖಂಡರಾಗಿದ್ದ ಪಾರ್ಥ ನಾರಾಯಣ ಧ್ವಜಾರೋಹಣಕ್ಕೆ ಅಧ್ಯಕ್ಷರನ್ನು ಆಹ್ವಾನಿಸಿದರು. ಕೆ.ಟಿ.ಭಾಷ್ಯಂ ಧ್ವಜಾರೋಹಣ ಮಾಡುವುದಕ್ಕೆ ವೇದಿಕೆಯನ್ನು ಏರಿದಾಗ ಪೋಲೀಸರು ಅವರನ್ನು ದಸ್ತಗಿರಿ ಮಾಡಿದರು. ಅವರು ತಮ್ಮ ಸ್ಥಾನಕ್ಕೆ ಶಿವಮೊಗ್ಗೆಯ ಹೆಚ್.ಸಿದ್ದಯ್ಯರವರನ್ನು ನೇಮಿಸಿದರು. ಅವರು ವೇದಿಕೆಯ ಮೇಲೆ ಬಂದು ಧ್ವಜಾರೋಹಣ ಮಾಡುತ್ತೇನೆ ಎಂದಾಗ ಪೋಲೀಸ್ ಅವರನ್ನು ಕೂಡ ದಸ್ತಗಿರಿ ಮಾಡಿದರು. ತಮ್ಮ ಸ್ಥಾನಕ್ಕೆ ಬಳ್ಳಾರಿ ಸಿದ್ಧಮ್ಮರವರನ್ನು ನೇಮಿಸಿದರು. ಬಳ್ಳಾರಿ ಸಿದ್ಧಮ್ಮನವರು ವೇದಿಕೆಯ ಮೇಲೆ ಬಂದು ಸರ್ಕಾರದ ಆಜ್ಞೆಯನ್ನು ಉಲ್ಲಂಘಿಸುವುದಾಗಿ ಘೋಷಿಸಿ ಧ್ವಜಾರೋಹಣವನ್ನು ಮಾಡಿ ಧ್ವಜಕ್ಕೆ ಗೌರವ ವಂದನೆ ಸಲ್ಲಿಸಿದರು. ಟಿ.ಸುನಂದಮ್ಮನವರು 'ವಂದೇ ಮಾತರಂ' ಗೀತೆಯನ್ನು ಹಾಡಿದರು. ಬಳ್ಳಾರಿ ಸಿದ್ದಮ್ಮನವರನ್ನೂ ಕೂಡ ಪೋಲೀಸರು ದಸ್ತಗಿರಿ ಮಾಡಿದರು. ಅವರು ತಮ್ಮ ಸ್ಥಾನಕ್ಕೆ ಹೆಚ್.ಬಿ.ಗುಂಡಪ್ಪಗೌಡ ಅವರನ್ನು ನೇಮಿಸಿ ಪೋಲೀಸರೊಂದಿಗೆ ತೆರಳಿದರು[87].

ಧ್ವಜ ಸತ್ಯಾಗ್ರಹಿಗಳಿಗೆ ಶಿಕ್ಷೆ

ಕೆ.ಟಿ.ಭಾಷ್ಯಂ, ಹೆಚ್.ಸಿದ್ಧಯ್ಯ, ಬಳ್ಳಾರಿ ಸಿದ್ದಮ್ಮರವರನ್ನು ವಿಚಾರಣೆ ಮಾಡಲಾಯಿತು. ಮಂಡ್ಯದ ನ್ಯಾಯಾಲಯದಲ್ಲಿ ವಿಶೇಷ ಪ್ರಥಮ ದರ್ಜೆಯ ಮ್ಯಾಜಿಸ್ಟ್ರೇಟ್‌ರಾದ ಎಂ.ರಾಮಸ್ವಾಮಯ್ಯ, ವಕೀಲರಾದ ಪಿ.ಸೀತಾರಾಮಯ್ಯನವರ ನೇತೃತ್ವದಲ್ಲಿ ನ್ಯಾಯಾಲಯದ ಕಲಾಪಗಳು ನಡೆಯಿತು. ಸ್ವಯಂ ಸೇವಕ, ಸೇವಕಿಯರು ಹಾಜರಿದ್ದರು. ಮೈಸೂರು ಪೋಲೀಸ್ ಆಕ್ಟ್ 70(ಎ) ಮತ್ತು 73ನೇ ಸೆಕ್ಷನ್ ಪ್ರಕಾರ ಮೂವರು ಬಂಧಿತರಿಗೂ ಶಿಕ್ಷೆಯಾಯಿತು. ಧ್ವಜಾರೋಹಣ ನಡೆಸಿದ ಸ್ವಯಂ–ಸೇವಕರನ್ನು ನ್ಯಾಯಾಧೀಶರು ಅಪರಾಧಿಗಳೆಂದು ಘೋಷಿಸಿದರು. ಅಪರಾಧಿಗಳು ಯಾವುದೇ ರೀತಿಯ ರಕ್ಷಣೆಯನ್ನು ಬಯಸಲಿಲ್ಲ. ವಿಧಿಸಿದ ಶಿಕ್ಷೆಯ ಕ್ರಮ ಹೀಗಿತ್ತು.

1. ಕೆ.ಟಿ.ಭಾಷ್ಯಂ ಮತ್ತು ಹೆಚ್.ಸಿದ್ಧಯ್ಯ – ಮೈಸೂರು ಪೋಲೀಸ್ ಆಕ್ಟ್‌ನ 70(ಎ) 73 ನೇ ಪ್ರಕಾರ 2 ತಿಂಗಳು ಶಿಕ್ಷೆ ಮತ್ತು ನೂರು ರೂಪಾಯಿ ದಂಡ, ದಂಡ ತೆರಲು ತಪ್ಪಿದರೆ ಇಪ್ಪತ್ತು ದಿನಗಳು ಶಿಕ್ಷೆ.

2. ಬಳ್ಳಾರಿ ಸಿದ್ದಮ್ಮ ಮೈಸೂರು ಪೋಲೀಸ್ ಆಕ್ಟ್‌ನ 70 (ಎ). ಇಪ್ಪತ್ತೈದು ರೂಪಾಯಿಗಳು ದಂಡ, ದಂಡ ತೆರಲು ತಪ್ಪಿದರೆ 10 ದಿನಗಳು ಸಾದಾ ಖೈದಿ ಶಿಕ್ಷೆ. 73ನೇ ಸೆಕ್ಷನ್ ಪ್ರಕಾರ ಹದಿನೈದು ದಿನಗಳು ಸಾದಾ ಖೈದಿಯ ಶಿಕ್ಷೆ[88].

ಬೆಳಿಗ್ಗೆ 9–00 ಗಂಟೆಗೆ ಹಿಂದಿನ ದಿನ ಉಳಿದಿದ್ದ ನಿರ್ಣಯಗಳ ಬಗ್ಗೆ ವಿಷಯ ನಿಯಾಮಕ ಸಭೆಯಲ್ಲಿ ಚರ್ಚೆ ಆರಂಭವಾಯಿತು. ಹೆಚ್.ಕೆ.ವೀರಣ್ಣಗೌಡ ಸಭೆಯಲ್ಲಿ ತಮ್ಮ ಅಭಿಪ್ರಾಯ ಈ ರೀತಿಯಾಗಿ ವ್ಯಕ್ತಪಡಿಸಿದರು. ಮೈಸೂರು ಕಾಂಗ್ರೆಸ್ 3 ದಿನಗಳ ಅಧಿವೇಶನ ಯಶಸ್ವಿಯಾಗಿ ಧ್ವಜಾರೋಹಣವನ್ನು ನಡೆಸಿತು. ಮೈಸೂರು ಸರ್ಕಾರವು ಒಂದು ತಿಂಗಳವರೆಗೆ ಪ್ರತಿಬಂಧಕಾಜ್ಞೆಯನ್ನು ಘೋಷಣೆ ಮಾಡಿರುವುದರಿಂದ ಸರ್ಕಾರದ ಪ್ರತಿಬಂಧಕಾಜ್ಞೆಯು ಮುಗಿಯುವವರೆಗೂ ಧ್ವಜವನ್ನು ಹಾರಿಸುತ್ತಿರಬೇಕೆಂದೂ, ಒಂದು ತಿಂಗಳ ಕಾಲ ಶಿವಪುರದಲ್ಲಿ ಧ್ವಜ ಸತ್ಯಾಗ್ರಹ ನಡೆಯಲೇಬೇಕೆಂದು ತಿಳಿಸಿದರು. ಆಗ ಮೈಸೂರು ಕಾಂಗ್ರೆಸಿನ ಕಾರ್ಯಕಾರಿ ಮಂಡಳಿ ಒಪ್ಪಿಗೆಯನ್ನು ನೀಡಿತು. ನಂತರ ಎಸ್. ರಂಗರಾಮಯ್ಯ, ಕೆ.ಸುಬ್ಬರಾವ್, ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ತರುವಾಯ ಹೆಚ್.ಬಿ. ಗುಂಡಪ್ಪಗೌಡ, ಕೆ.ಟಿ.ಭಾಷ್ಯಂ ರವರು ಕಳುಹಿಸಿದ ಸಂದೇಶವನ್ನು ಓದಿದರು[89].

ವಿಷಯ ನಿಯಾಮಕ ಸಭೆಯಲ್ಲಿ ಕೆಲವು ನಿರ್ಣಯಗಳನ್ನು ಅಂಗೀಕರಿಸಲಾಯಿತು.

1) ರಾಷ್ಟ್ರಧ್ವಜದ ಗೌರವವನ್ನು ಕಾಪಾಡಿ ಕಾರಾಗೃಹಕ್ಕೆ ತೆರಳಿದ ಕೆ.ಟಿ.ಭಾಷ್ಯಂ, ಹೆಚ್.ಸಿದ್ಧಯ್ಯ, ಶ್ರೀಮತಿ ಬಳ್ಳಾರಿ ಸಿದ್ದಮ್ಮ ರಾಷ್ಟ್ರಕೂಟದ ಪರವಾಗಿ ಅಭಿನಂದನೆಗಳನ್ನು ಅರ್ಪಿಸಲಾಯಿತು.

2) ವಿಷಯ ನಿಯಾಮಕ ಸಮಿತಿಯ ಸದಸ್ಯರನ್ನು ಒಂದು ವರ್ಷದವರೆಗೆ ಮುಂದುವರಿಸಲಾಯಿತು.

3) ಮೈಸೂರು ಕಾಂಗ್ರೆಸ್ ಸದಸ್ಯರು, ಅಖಿಲ ಭಾರತ ಕಾಂಗ್ರೆಸ್ ಸದಸ್ಯರಾಗಿ ಅವಕಾಶ ನೀಡಲಾಯಿತು.

4) ಕಾಂಗ್ರೆಸಿನ ಮುಂದಿನ ಅಧಿವೇಶನವು ಬೆಂಗಳೂರು ಜಿಲ್ಲೆಯಲ್ಲಿ ನಡೆಯಬೇಕೆಂದು ತೀರ್ಮಾನಿಸಲಾಯಿತು[90].

ಧ್ವಜ ಸತ್ಯಾಗ್ರಹದ 02-05-1938ರಂದು ಬೆಳಿಗ್ಗೆ ಶಿವಪುರದಲ್ಲಿ ಕೆಂಗಲ್ ಹನುಮಂತಯ್ಯ ಹಾಗು ಮಳವಳ್ಳಿವೀರಪ್ಪ ಘೋಷಣೆ ಕೂಗುತ್ತಾ ಪ್ರಭಾತ್‌ಪೇರಿ ನಡೆಸಿದರು. ಧ್ವಜಾರೋಹಣ ಮೈದಾನಕ್ಕೆ ಬಂದಾಗ ಇಬ್ಬರನ್ನು ಪೋಲೀಸರು ಬಂಧಿಸಿದರು[91].

ದಿನಾಂಕ 09-05-1938ರ ಸಂಜೆ ಕಾಂಗ್ರೆಸ್ ಅಧ್ಯಕ್ಷರಾದ ಹೆಚ್.ಬಿ.ಗುಂಡಪ್ಪಗೌಡರು ರಾಷ್ಟ್ರಧ್ವಜವನ್ನು ಅವರೋಹಣ ಮಾಡಿದರು. ಸತ್ಯಾಗ್ರಹಾಶ್ರಮದ ಮುಖ್ಯಸ್ಥರಾದ ತಗಡೂರು ರಾಮಚಂದ್ರರಾಯರೂ, ಸತ್ಯಾಗ್ರಹಿಗಳೂ, ಶಿವಪುರ ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು, ಮೈಸೂರು ಕಾಂಗ್ರೆಸ್ ಮುಖಂಡರು, ಸದಸ್ಯರು, ಸ್ವಯಂ ಸೇವಕರು-ಸೇವಕಿಯರು ಹಾಜರಿದ್ದರು. ರಾಷ್ಟ್ರಧ್ವಜವನ್ನು ಹಾರಿಸುವುದು ಹಾಗೂ ವಂದನೆ ಸಲ್ಲಿಸುವುದನ್ನು ಜಿಲ್ಲಾ ಮ್ಯಾಜಿಸ್ಟ್ರೇಟರು ಪ್ರತಿಬಂಧಕಾಜ್ಞೆಯ ಅವಧಿಯು ಒಂದು ತಿಂಗಳವರೆಗೆ ಮಾತ್ರ ಇತ್ತು. ಆನಂತರ ಅದನ್ನು ಮುಂದುವರೆಸಲಿಲ್ಲ. ಆದ್ದರಿಂದ ಮೈಸೂರು ಕಾಂಗ್ರೆಸ್ಸಿನವರು ಸತ್ಯಾಗ್ರಹವನ್ನು ನಿಲ್ಲಿಸಿದರು. ಈ ರೀತಿ ಒಂದು ತಿಂಗಳಿನವರೆಗೂ ಜಿಲ್ಲಾ ಮ್ಯಾಜಿಸ್ಟ್ರೇಟರ್ ಪ್ರತಿಬಂಧಕಾಜ್ಞೆ ಮುಗಿಯುವವರೆಗೂ ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಶಿವಪುರದಲ್ಲಿ ಧ್ವಜಾರೋಹಣ ನಡೆಯಿತು. 09-05-1938 ಶಿವಪುರ ಧ್ವಜ ಸತ್ಯಾಗ್ರಹ ಮುಕ್ತಾಯವಾಯಿತು[92]. ಶಿವಪುರ ಧ್ವಜ ಸತ್ಯಾಗ್ರಹ ಮೈಸೂರು ಸಂಸ್ಥಾನದಾದ್ಯಂತ ವಿವಿಧ ರೀತಿಯಲ್ಲಿ ಪ್ರಭಾವ ಬೀರಿತು. ಬೆಂಗಳೂರು, ಚಿಕ್ಕಮಗಳೂರು, ಶಿವಮೊಗ್ಗ, ತುಮಕೂರು, ಹಾಸನ, ದಾವಣಗೆರೆ, ಗೌರಿಬಿದನೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ ಹರತಾಳ ಆಚರಣೆ, ನಿಷೇಧಾಜ್ಞೆಯನ್ನು ಮುರಿದಿದ್ದರು, ವಿದೇಶಿ ವಸ್ತು ಬಹಿಷ್ಕರಿಸುವುದು, ಸ್ವಾತಂತ್ರ್ಯಕ್ಕಾಗಿ ಮೆರವಣಿಗೆಯನ್ನು ನಡೆಸುವುದು, ಧ್ವಜ ಪ್ರದರ್ಶನ, ಧ್ವಜಾರೋಹಣ, ರಾಷ್ಟ್ರನಾಯಕರ ಭಾವಚಿತ್ರವನ್ನು ಪ್ರದರ್ಶನ ಮಾಡಲು ಪ್ರೇರಣೆ ನೀಡಿತು. ವಿಶೇಷವಾಗಿ ಅಂದಿನ ಮೈಸೂರು ಜಿಲ್ಲೆಯ ಒಂದು ಭಾಗವಾಗಿದ್ದ, ಮಂಡ್ಯ, ಮದ್ದೂರು, ಮಳವಳ್ಳಿ, ಶ್ರೀರಂಗಪಟ್ಟಣ, ಪಾಂಡವಪುರ, ನಾಗಮಂಗಲ, ಕೆ.ಆರ್.ಪೇಟೆಯ ತಾಲ್ಲೂಕುಗಳ ಮೇಲೆ ವಿಶೇಷ ಪ್ರಭಾವ ಬೀರಿತು. ಜನಸಾಮಾನ್ಯರಲ್ಲಿ, ವಿದ್ಯಾರ್ಥಿಗಳು, ಕಾರ್ಮಿಕರು, ರೈತರು, ಮಹಿಳೆಯರು, ವಕೀಲರಲ್ಲಿ ಸ್ವಾತಂತ್ರ್ಯ ಹಾಗೂ ಜವಾಬ್ದಾರಿ ಸರ್ಕಾರ ಸ್ಥಾಪನೆಯ ಚಳುವಳಿಯ ಬಗ್ಗೆ ಜಾಗೃತಿಗೆ ಮುನ್ನಡೆಯಾಯಿತು. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಲು ಸ್ಫೂರ್ತಿದಾಯಕವಾಯಿತು.

ಹ್ಯಾಮಿಲ್ಟನ್ ಸತ್ಯಾಗ್ರಹ – 1939

ಹ್ಯಾಮಿಲ್ಟನ್ ಬಿಲ್ಡಿಂಗ್ ಸತ್ಯಾಗ್ರಹವು ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳುವಳಿಯಲ್ಲಿ ಪ್ರಮುಖವಾದುದು. 1938ರ ನವಂಬರ್ ತಿಂಗಳದ ಅಂತ್ಯದಲ್ಲಿ ಮೈಸೂರು ಸರ್ಕಾರ ಮೈಸೂರು ನಗರದ ದೊಡ್ಡಪೇಟೆಯ ಚೌಕದಲ್ಲಿ ನಾಲ್ಕು ಕಡೆಗೂ ಒಂದೇ ತೆರನಾದ ನಾಲ್ಕು ಕಟ್ಟಡಗಳನ್ನು ಕಟ್ಟಿಸಿತು. [ಇಂದು ಮೈಸೂರಿನ ಹಾಲಿ ಸೆಂಟ್ರಲ್ ಪೋಲೀಸ್ ಸ್ಟೇಷನ್, ಡಿ.ಸಿ.ಸಿ. ಬ್ಯಾಂಕ್, ಮೈಸೂರು ಬ್ಯಾಂಕ್, ಮತ್ತು ಕೇಂದ್ರ ಅಂಚೆ ಕಛೇರಿ ಕಾರ್ಯಾಲಯ ಇರುವ ಸ್ಥಳ] ಅಂದು ರೈತರಿಂದ ವಸೂಲಾದ ಕಂದಾಯದ ಹಣದಿಂದಲೇ ಸರ್ಕಾರದ ಕಾರ್ಯಗಳನ್ನು ನಡೆಸಲು ಬೇಕಾಗುವ ಎಲ್ಲಾ ಕಟ್ಟಡಗಳನ್ನು ಕಟ್ಟಿಸಲಾಗುತ್ತಿತ್ತು. ಆ ಕಟ್ಟಡಗಳಿಗೆ ಆಯಾಯ ಇಲಾಖೆ ಮತ್ತು ಕಛೇರಿಗಳ ಹೆಸರನ್ನೇ ಇಡುವುದು ಸಂಪ್ರದಾಯವಿತ್ತು. ಆದರೆ ನಾಲ್ಕು ಕಟ್ಟಡಗಳಲ್ಲಿ ಸೆಂಟ್ರಲ್ ಪೊಲೀಸ್ ಸ್ಟೇಷನ್ನಿಗೆ ಪೊಲೀಸ್ ಐ.ಜಿ.ಪಿ.ಯಾಗಿದ್ದ ಜನರಲ್ 'ಹ್ಯಾಮಿಲ್ಟನ್' ರವರ ಹೆಸರನ್ನು ಇಡಲಾಯಿತು. ಇವರು ವಿದುರಾಶ್ವತ್ಥ ಧ್ವಜಸತ್ಯಾಗ್ರಹ ಸಂದರ್ಭದಲ್ಲಿ ಶಾಂತ ಪ್ರಿಯರೂ, ನಿರಾಯುಧರೂ ಆದ ಸತ್ಯಾಗ್ರಹಿಗಳ ಮೇಲೆ ಗುಂಡು ಹಾರಿಸಿ ಮೈಸೂರು ಸಂಸ್ಥಾನದಲ್ಲಿ ಕೋಲಾಹಲಕ್ಕೆ ಕಾರಣಭೂತರಾಗಿದ್ದರು. ಇವರ ಹೆಸರನ್ನು ಇಡುವುದನ್ನು ಮೈಸೂರು ಸಂಸ್ಥಾನದ ಜನರು ಹಾಗೂ ಕಾಂಗ್ರೆಸ್ ಸದಸ್ಯರೆಲ್ಲರೂ ವಿರೋಧಿಸಿದರು. ಸತ್ಯಾಗ್ರಹಿಗಳು ತಗಡೂರ ರಾಮಚಂದ್ರರಾವ್ ಅವರ ನಾಯಕತ್ವದಲ್ಲಿ ಹ್ಯಾಮಿಲ್ಟನ ಸತ್ಯಾಗ್ರಹ ಚಳುವಳಿಯನ್ನು ಆರಂಭಿಸಿದರು[93]. ದಿನಾಂಕ 25–12–1938 ರಂದು ತಗಡೂರು ರಾಮಚಂದ್ರರಾವ್ ಬಹಿರಂಗ ಪತ್ರದ ಮೂಲಕ ಮೈಸೂರು ಸರ್ಕಾರವನ್ನು ಪ್ರಾರ್ಥಿಸಿದರು. ಬಹಿರಂಗ ಪತ್ರವನ್ನು ಮೈಸೂರು ಸಂಸ್ಥಾನದ ಮುಖ್ಯಕಾರ್ಯದರ್ಶಿಯವರಿಗೂ, ಕರ್ನಾಟಕ ಮತ್ತು ಇತರ ಪ್ರಾಂತ್ಯಗಳ ಪತ್ರಿಕೆಗಳಿಗೂ, ಎಲ್ಲಾ ಸಾರ್ವಜನಿಕ ಸಂಸ್ಥೆಗಳಿಗೂ, ಕಳಿಸಿ ಸಾರ್ವಜನಿಕರ ಗಮನವನ್ನು ಸೆಳೆಯಲಾಯಿತು. ದಿನಾಂಕ 25–12–1938 ಪ್ರಕಟವಾದ ಬಹಿರಂಗ ಪತ್ರ ವಿವರ ಈ ಕೆಳಕಂಡಂತೆ ಇತ್ತು.

ಸರ್ಕಾರದ ಕಾರ್ಯಗಳನ್ನು ನಡೆಸಲು ಬೇಕಾಗುವ ಎಲ್ಲಾ ಕಟ್ಟಡಗಳನ್ನು ರೈತರಿಂದ ವಸೂಲಾದ ಹಣದಿಂದಲೇ ಕಟ್ಟಿಸುತ್ತದೆ. ಆಯಾಯ ಕಟ್ಟಡದ ಮೇಲೆ ಆಯಾಯ ಇಲಾಖೆ ಮತ್ತು ಆಫೀಸುಗಳ ಹೆಸರನ್ನೇ ಇಡಬೇಕು. ಸಂಪ್ರದಾಯವೂ ಸಹ ಹಾಗೇ ಇದೆ. ಶ್ರೀಮನ್ಮಹಾರಾಜರವರನ್ನು ಬಿಟ್ಟರೆ ಉಳಿದ ನೌಕರರುಗಳೆಲ್ಲರೂ ಸೇವಕರುಗಳು. ಅವರುಗಳು ಸಂಬಳವನ್ನು ತೆಗೆದುಕೊಂಡು ಗೊತ್ತಾದ ಕಾರ್ಯಗಳನ್ನು ಮಾಡುತ್ತಿದ್ದಾರೆ. ಗೊತ್ತಾದ ಅವಧಿಯಲ್ಲಿ ನಿವೃತ್ತರಾಗುತ್ತಿದ್ದಾರೆ. ಹೀಗೆ ಎಷ್ಟೋ ಅಧಿಕಾರಿಗಳು ಬರುತ್ತಾರೆ ಮತ್ತು ಹೋಗುತ್ತಾರೆ. ಹೀಗಿರುವಾಗ ಸರ್ಕಾರದ ಕಟ್ಟಡಗಳ

ಮೇಲೆ ಇಲಾಖೆಯ ಅಧಿಕಾರಿಗಳ ಹೆಸರನ್ನು ಹಾಕುವುದು ಶುದ್ಧ ತಪ್ಪು. ಹಿಂದೆ ಇದ್ದ ಅಧಿಕಾರಿಗಳೂ ಮುಂದೆ ಬರುವ ಅಧಿಕಾರಗಳೂ ಅಪ್ರಯೋಜಕರೆಂದು ಅರ್ಥವಾಗುತ್ತದೆ. ಇತರ ಇಲಾಖೆಗಳ ಅಧಿಕಾರಿಗಳೂ ತಮ್ಮ ತಮ್ಮ ಹೆಸರುಗಳನ್ನು ತಮ್ಮ ತಮ್ಮ ಇಲಾಖೆ ಕಟ್ಟಡಗಳ ಮೇಲೆ ಹಾಕಿಕೊಳ್ಳುವ ಬಯಕೆಯನ್ನಂಟು ಮೂಡುತ್ತದೆ. ಒಬ್ಬ ಅಧಿಕಾರಿಯು ನಿವೃತ್ತನಾದರೆ ಅಥವಾ ವರ್ಗಾಯಿಸಲ್ಪಟ್ಟರೆ ಆಗ ಹೆಸರನ್ನು ಬದಲಾಯಿಸಿ ಹೊಸ ಅಧಿಕಾರಿಯ ಹೆಸರನ್ನು ಹಾಕಬೇಕಾಗುತ್ತದೆ. ಇಂಥ ವಿಚಿತ್ರ ಪದ್ಧತಿಯನ್ನು ಯಾವ ನಾಗರೀಕ ಸರ್ಕಾರವಾಗಲೀ, ಪ್ರಜೆಗಳಾಗಿ ಅಂಗೀಕಾರ ಮಾಡುವುದಿಲ್ಲ. ಅಧಿಕಾರಿಗಳ ಹೆಸರನ್ನು ಕಟ್ಟಡ ಮೇಲೆ ಬರೆಸುವುದು, ಶುದ್ಧ ತಿಳಿಗೇಡಿತನ. ಈ ಪದ್ಧತಿಯನ್ನು ಯಾರೂ ಒಪ್ಪುವುದಿಲ್ಲ. ಸರಕಾರ ಉನ್ನತ ಹುದ್ದೆಗಳಿಗೆ ಯೂರೋಪಿಯನ್ ಅಧಿಕಾರಿಗಳನ್ನೇ ನೇಮಕ ಮಾಡುತ್ತಿದೆ. ಈ ದೃಷ್ಟಪದ್ಧತಿಯು ದೇಶೀ ಪ್ರಜೆಗಳಿಗೆ ಅವಮಾನವನ್ನುಂಟು ಮಾಡುತ್ತದೆ. ಯೂರೋಪಿಯನ್ ಅಧಿಕಾರಿಗಳು 24 ಗಂಟೆಗಯೊಳಗೆ ದೇಶ ಬಿಟ್ಟು ಹೋದರೆ ರಾಜ್ಯಾಡಳಿತವನ್ನು ನಿರ್ವಹಿಸುವಲ್ಲಿ ಸ್ಥಳೀಯ ಜನರು ಇದ್ದಾರೆ. ಬ್ರಿಟಿಷ್ ಹಿಂದೂಸ್ಥಾನದ 11 ಪ್ರಾಂತ್ಯಗಳಲ್ಲಿ ಪ್ರಜಾನಾಯಕರುಗಳು ಆಳುತ್ತಿದ್ದಾರೆ. ಪ್ರಜೆಗಳು ಕೈಗೆ ಜವಾಬ್ದಾರಿ ಆಡಳಿತವನ್ನು ನೀಡಬೇಕೆಂದು ಚಳುವಳಿಯನ್ನು ಹೂಡಿದ್ದಾರೆ. ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್‌ರಾದ ಹ್ಯಾಮಿಲ್ಟನ್‌ರವರು 1937ರಲ್ಲಿ ಬೆಂಗಳೂರಿಗೆ ನಾರಿಮನ್ ಭೇಟಿ ನೀಡಿದ್ದಾಗ ಗುಂಡುಹಾರಿಸಿ ನಿರಪರಾಧಿಯೊಬ್ಬನ ಸಾವಿಗೆ ಕಾರಣರಾಗಿದ್ದಾರೆ. ಹಾಗೂ 1938ರಲ್ಲಿ ವಿದುರಾಶ್ವಥ ದುರಂತ ಪ್ರಕರಣ ಕೂಡಾ ನಡೆದಿದೆ. ಈ ಅಧಿಕಾರಿಗಳ ವರ್ತನೆಯಿಂದ ಮೈಸೂರು ಸರಕಾರವು ಹಿಂದೂಸ್ಥಾನದ ಮಹಾಜನರ ಮಧ್ಯದಲ್ಲಿ ತಲೆಬಾಗಿಸಬೇಕಾಯಿತು. ಇಂತಹ ಅಧಿಕಾರಿಗಳ ಹೆಸರನ್ನು ಮೈಸೂರು ಪಟ್ಟಣದ ದೊಡ್ಡಪೇಟೆಯ ಮಧ್ಯಭಾಗದಲ್ಲಿರುವ ಸುಮಾರು ಲಕ್ಷರೂಪಾಯಿಗಳನ್ನು ಖರ್ಚುಮಾಡಿ ಹೊಸದಾಗಿ ಕಟ್ಟಿರುವ ಸೆಂಟ್ರಲ್ ಪೋಲೀಸ್ ಸ್ಟೇಷನ್ನಿಗೆ "ಹ್ಯಾಮಿಲ್ಟನ್ ಬಿಲ್ಡಿಂಗ್" ಎಂದು ನಾಮಕರಣ ಮಾಡಿದ್ದಾರೆ. ಇದರ ಅರ್ಥವೇನು? ಈ ಅಧಿಕಾರಿಗಳ ದರ್ಪದ ಸ್ಮಾರಕವೇ? ಪ್ರಜಾಭಿಪ್ರಾಯವನ್ನು ತೃಣೀಕರಿಸಿ ಹ್ಯಾಮಿಲ್ಟನ್ನರವರ ಭುಜತಟ್ಟಿ ಆನಂದಿಸಬೇಕಾದ ಸಮಯವೇ? ಶ್ರೀಮನ್ಮಹಾರಾಜರವರು ನೇಮಿಸಿದ ಮಂತ್ರಿಮಂಡಲವು ಇಂಥಹ ಕಾರ್ಯವನ್ನು ಮಾಡಬಹುದೆ. ಇದಕ್ಕೆ ಯಾರೇ ಜವಾಬ್ದಾರರಾಗಿರಲಿ, ಆ ಹೆಸರೇ ಆಗಲಿ, ಮತ್ತಾವ ಅಧಿಕಾರಿಗಳ ಹೆಸರೇ ಆಗಲಿ ಕಟ್ಟಡ ಮೇಲೆ ಇರಬಾರದು. ಕೂಡಲೇ ಮಂತ್ರಿಮಂಡಲದವರು ಆ ಹೆಸರನ್ನು ತೆಗೆಸಬೇಕು. ಪ್ರಜೆಗಳು ಮತ್ತು ಸರಕಾರ ನಡುವೆ ಉಂಟಾಗುವ ಅನಾವಶ್ಯಕವಾದ ಘರ್ಷಣೆಯನ್ನು ತಪ್ಪಿಸಬೇಕು. ಹ್ಯಾಮಿಲ್ಟನ್ ಬಿಲ್ಡಿಂಗ್ ಎಂಬ ಹೆಸರನ್ನು ಅಳಿಸುವ ಮೂಲಕ ಪ್ರಜೆಗಳ ಮನೋಭಿಪ್ರಾಯವನ್ನು ಈಡೇರಿಸಬೇಕೆಂದು ಭಿನ್ನವಿಸುತ್ತೇವೆ. ಈ ಬಹಿರಂಗ ಪತ್ರವನ್ನು

ಕೂಡಲೇ ಮಂತ್ರಿಮಂಡಳದ ಗಮನಕ್ಕೆ ತರಬೇಕೆಂದು ಬಯಸುತ್ತೇವೆ ಎಂದು ಬಹಿರಂಗಪತ್ರ ಮೂಲಕ ಸರಕಾರವನ್ನು ಎಚ್ಚರಿಸಿದರು[94].

ದಿನಾಂಕ 06-01-1939 ರಂದು ಮೈಸೂರಿನ ಟೌನ್‌ಹಾಲ್ ಮೈದಾನದಲ್ಲಿ ಬಹಿರಂಗ ಸಭೆ ನಡೆಯಿತು. ಎಂ.ಲಕ್ಷ್ಮಿನಾರಾಯಣರಾಯರು ಅಧ್ಯಕ್ಷತೆಯನ್ನು ವಹಿಸಿದ್ದರು. ಮೈಸೂರು ದೊಡ್ಡಪೇಟೆಯ ಪೋಲೀಸ್ ಸ್ಟೇಷನ್ನಿಗೆ 'ಹ್ಯಾಮಿಲ್ಟನ್ ಬಿಲ್ಡಿಂಗ್' ಎಂದು ಹೆಸರಿಟ್ಟಿರುವ ವಿಷಯದಲ್ಲಿ ಮಹಾಜನರೆ ತಮ್ಮಗಿರುವ ಅಸಮಾದಾನವನ್ನು ವ್ಯಕ್ತಪಡಿಸಿದರು. ಸಭೆಗೆ ಸ್ಥಳ ಪರಸ್ಥಳದ ಮಹನೀಯರುಗಳು ಭಾಗವಹಿಸಿ ಭಾಷಣ ಮಾಡಿದರು. ಈ ಹೆಸರಿಟ್ಟಿರುವುದನ್ನು ಖಂಡಿಸಿದರು. ಹ್ಯಾಮಿಲ್ಟನರ ಹೆಸರನ್ನಿಡುವುದು ರಾಜಧಾನಿಗೆ ಒಂದು ಕಳಂಕವೆಂದೂ ಜನರ ಇಷ್ಟಕ್ಕೆ ವಿರುದ್ಧವಾಗಿರುವ ಈ ಹೆಸರನ್ನು ತೆಗೆದುಹಾಕಬೇಕೆಂದೂ ಸೂಚಿಸಲಾಯಿತು ಹಾಗೂ ನಿರ್ಣಯವೂ ಸಹ ಮಾಡಲ್ಪಟ್ಟಿತು. ಇದಲ್ಲದೆ ಒಂದು ಸತ್ಯಾಗ್ರಹ ಕಮಿಟಿ ಸಹ ರೂಪುಗೊಂಡಿತು. ತಗಡೂರು ರಾಮಚಂದ್ರರಾಯರು, ಎಂ.ಎನ್.ಜೋಯಿಸರು, ಬಿ.ಸುಬ್ಬರಾವ್, ಮಂಡ್ಯ ಜಿಲ್ಲೆಯ ಪ್ರಮುಖ ಹೋರಾಟಗಾರರಾದ ಪಿ.ಎನ್.ಜವರಪ್ಪಗೌಡ, ಅರಕೆರೆಯ ಕೆಂಚಪ್ಪ, ಮಳವಳ್ಳಿ ವೀರಪ್ಪನವರ ಸದಸ್ಯರುಗಳಾದರು. ಫೆಬ್ರವರಿ 1ನೇ ತಾರೀಖಿನೊಳಗೆ ಈ ಹೆಸರನ್ನು ತೆಗೆದುಹಾಕಬೇಕೆಂದೂ, ಇಲ್ಲವಾದರೆ ಸತ್ಯಾಗ್ರಹವನ್ನು ಹೂಡುವುದಾಗಿಯೂ ಸರ್ಕಾರಕ್ಕೆ ತಿಳಿಸಿದರು[95]. ಹ್ಯಾಮಿಲ್ಟನ್ ಹೆಸರನ್ನು ದಿನವೂ ಸತ್ಯಾಗ್ರಹಿಗಳು ಸುಣ್ಣ ಮತ್ತು ಬ್ರಷ್‌ನಿಂದ ಅಳಿಸತಕ್ಕದೆಂದು, ಈ ಕಾರ್ಯಕ್ರಮ ಅಹಿಂಸಾತ್ಮಕವಾಗಿ ಶಿಸ್ತಿನಿಂದ ನಡೆಯತಕ್ಕದೆಂದು ತೀರ್ಮಾನ ಕೈಗೊಳ್ಳಲಾಯಿತು. ಸಭೆಯಲ್ಲಿ ಎಚ್.ಸಿ. ದಾಸಪ್ಪನವರ ಸಲಹೆಯಂತೆ ಏಕಏಕೀ ಸತ್ಯಾಗ್ರಹ ಆರಂಭಿಸುವ ಮೊದಲು ಈ ದಿನದಿಂದಲೇ ಸರಕಾರಕ್ಕೆ 15 ದಿನಗಳ ಗಡುವು ನೀಡಲಾಯಿತು. ಸಮಿತಿಯ ನಿರ್ಣಯಕ್ಕೆ ಸರ್ಕಾರ ಮನ್ನಣೇ ನೀಡದೇ ಹೋದಲ್ಲಿ 04-02-1939 ರಿಂದ ಶಾಂತಿಯುತ ಸತ್ಯಾಗ್ರಹವನ್ನು ಅಹಿಂಸಾತ್ಮಕವಾಗಿ ನಡೆಸತಕ್ಕದೆಂದೂ, ಸತ್ಯಾಗ್ರಹದಲ್ಲಿ ಪಾಲ್ಗೊಳ್ಳಲು ಆಸಕ್ತ ಸ್ವಯಂ ಸೇವಕರು 25-01-1939 ರೊಳಗೆ ತಮ್ಮ ಹೆಸರುಗಳನ್ನು ಎಂ.ಎನ್.ಜೋಯಿಸರಲ್ಲಿ ನೋಂದಾಯಿಸಿ ಕೊಳ್ಳುವುದೆಂದೂ ತೀರ್ಮಾನಿಸಲಾಯಿತು[96].

ಹ್ಯಾಮಿಲ್ಟನ್ ಸತ್ಯಾಗ್ರಹವನ್ನು ಆರಂಭಿಸುವ ಮೊದಲು ಸುಮಾರು 15ದಿನಗಳ ಕಾಲ ಮೈಸೂರು ನಗರದ ನಾನಾಭಾಗಗಳಲ್ಲಿ ಬಹಿರಂಗ ಸಭೆಗಳನ್ನು ನಡೆಸಲಾಯಿತು. ಸರ್ಕಾರ ತಾನಾಗಿಯೇ ಹ್ಯಾಮಿಲ್ಟನ್ ಹೆಸರು ತೆಗೆಯದಿದ್ದರೆ ಸತ್ಯಾಗ್ರಹದ ಮೂಲಕ ತೆಗೆಸಲೇಬೇಕೆಂಬ ಛಲವು ನಗರದ ನಾಗರೀಕರಲ್ಲಿ ಬೇರೂರುವಂತೆ ಮಾಡಲು ಬಹಿರಂಗ ಸಭೆಯ ಭಾಷಣಗಳನ್ನು ಮಾಡಲು ತೀರ್ಮಾನಿಸಿದರು. ಮಂಡ್ಯ ಜಿಲ್ಲೆಯ

ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರ ಪಿ.ಎನ್.ಜವರಪ್ಪಗೌಡರು ಸುಬ್ಬರಾಯನ ಕೆರೆ ಮೈದಾನದಲ್ಲಿನ ಬಹಿರಂಗ ಸಭೆಯ ಭಾಷಣದಲ್ಲಿ ತಮ್ಮ ಅಭಿಪ್ರಾಯ ಈ ರೀತಿಯಾಗಿ ವ್ಯಕ್ತಪಡಿಸಿದರು.– ಈ ದೇಶಕ್ಕೆ ವ್ಯಾಪಾರಕ್ಕೆಂದು ಬಂದ ಇಂಗ್ಲೀಷರು ನಮ್ಮ ಜನರನ್ನು ದಾಸಾನುದಾಸರನ್ನಾಗಿ ಮಾಡಿಕೊಂಡಿದ್ದಾರೆ. ಜನಸಾಮಾನ್ಯರಾದವರ ಪಾಡೇನಾದರೂ ಆಗಲಿ ಎಂದು ಹೇಳಿಕೊಳ್ಳುವ ಸ್ಥಿತಿಗೆ ಬಂದಿರುವ ನಮ್ಮ ರಾಜರುಗಳ ದುಸ್ಥಿತಿಗೆ ನಾವು ಮರುಕಗೊಳ್ಳಬೇಕಾಗಿದೆ. ಶ್ರೀಮನ್ ಮಹಾರಾಜರ ಸರ್ಕಾರದಲ್ಲಿ ಕೆಲಸ ಮಾಡುವ ಹ್ಯಾಮಿಲ್ಟನ್ ನಂತಹ ಯಕಶ್ಚಿತ ವ್ಯಕ್ತಿಯ ಹೆಸರನ್ನು ನಗರದ ನಾಗರೀಕರ ಹಣೆಪಟ್ಟಿ ಕಟ್ಟಿ ನೋಡುತ್ತಿರುವ ಶ್ರೀಮನ್ ಮಹಾರಾಜರ ಸ್ಥಿತಿ ಬಗ್ಗೆ ನಾವೆಲ್ಲ ಯೋಚನೆ ಮಾಡಬೇಕಾಗಿದೆ. ಹೋರಾಟ ಮಾಡಿ ಶ್ರೀಮನ್ ಮಹಾರಾಜರ ಗೌರವವನ್ನಾದರೂ ಕಾಪಾಡೋಣ[97].

ದಿನಾಂಕ 17–01–1939 ರಂದು ಟಿ.ಸಿದ್ಧಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ಮೈಸೂರು ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಸಂಸ್ಥಾನದಲ್ಲಿ ಸ್ವಾತಂತ್ರ್ಯ ದಿನಾಚರಣೆ ಆಚರಿಸುವ ಹಾಗೂ ಹ್ಯಾಮಿಲ್ಟನ್ ಸತ್ಯಾಗ್ರಹ ಆರಂಭಿಸುವ ನಿರ್ಣಯವನ್ನು ತೆಗೆದುಕೊಂಡಿತು. ಸಾರ್ವಜನಿಕಾಭಿಪ್ರಾಯಕ್ಕೆ ವಿರುದ್ಧವಾಗಿ ಮೈಸೂರು ನಗರದಲ್ಲಿರುವ ಸೆಂಟ್ರಲ್ ಪೋಲೀಸ್ ಸ್ಟೇಷನ್‌ಗೆ ಸಂಸ್ಥಾನದ ಐ.ಜಿ.ಪಿ.ಗಳಾಗಿರುವ ಹ್ಯಾಮಿಲ್ಟನ್ ಹೆಸರನಿಟ್ಟಿರುವ ಸರ್ಕಾರ ನೀತಿಯನ್ನು ಖಂಡಿಸಿತು[98]. ಇದೇ ಸಂದರ್ಭದಲ್ಲಿ ಮಂಡ್ಯ ಜಿಲ್ಲೆಯಲ್ಲಿ ದಿನಾಂಕ 27,28ನೇ ಜನವರಿ 1938ರಂದು ಕೃಷ್ಣರಾಜಪೇಟೆ ತಾಲ್ಲೂಕು ಕಾಂಗ್ರೆಸ್ ಸಭೆ ನಡೆಯಿತು. ಹಾಗೂ 29ನೇ ಜನವರಿ 1939ರಂದು ತಾಲ್ಲೂಕು ರೈತರ ಸಮ್ಮೇಳನವು ಬಹುಯಶಸ್ವಿಯಾಗಿ ನಡೆಯಿತು. ಈ ಮೂರು ದಿನಗಳಲ್ಲಿ ನಡೆದ ಕಾಂಗ್ರೆಸ್ ಸಭೆ ಮತ್ತು ತಾಲ್ಲೂಕು ರೈತರ ಸಮ್ಮೇಳನದಲ್ಲಿ ಸುತ್ತಮುತ್ತಲಿನ ಗ್ರಾಮದ ಸಾವಿರಾರು ರೈತರು ಭಾಗವಹಿಸಿದ್ದರು. ಮೈಸೂರು ಮುಖ್ಯ ಲಾವಣಿಕಾರ ವಿಷಕಂಠರಾಯರ ಲಾವಣಿ ಕಾರ್ಯಕ್ರಮ ನಡೆಸಿಕೊಟ್ಟರು. ಸಭೆ ಮತ್ತು ರೈತ ಸಮ್ಮೇಳನದ ಅಂತಿಮ ದಿನ ಈ ಕೆಳಗೆ ಕಂಡ ನಿರ್ಣಯಗಳು ಅಂಗೀಕರಿಸಲ್ಪಟ್ಟವು.

(1) ಶ್ರೀಮನ್ಮಹಾರಾಜರವರ ಕೃಪಾಶ್ರಯದಲ್ಲಿ ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರವು ಸ್ಥಾಪನೆಯಾಗಬೇಕು.

(2) ಮೈಸೂರು ಸೆಂಟ್ರಲ್ ಪೊಲೀಸ್ ಸ್ಟೇಷನ್ನಿಗೆ ಹ್ಯಾಮಿಲ್ಟನ ಬಿಲ್ಡಿಂಗ್ ಎಂದು ನಾಮಕರಣ ಮಾಡಿರುವುದನ್ನು ತೀವ್ರವಾಗಿ ವಿರೋಧಿಸುತ್ತದೆ[99].

ಈ ಮೂರುದಿನ ಸಭೆಯು ಮಂಡ್ಯಜಿಲ್ಲೆಯ ಸಾಮಾನ್ಯ ಜನರು, ರೈತರು, ವಿದ್ಯಾರ್ಥಿಗಳು, ಮಹಿಳೆಯರು ಹ್ಯಾಮಿಲ್ಟನ ಬಿಲ್ಡಿಂಗ್ ಸತ್ಯಾಗ್ರಹದಲ್ಲಿ ಭಾಗವಹಿಸಲು

ಜಾಗೃತಿ ಮೂಡಿಸಿತು. ದಿನಾಂಕ 3ನೇ ಫೆಬ್ರವರಿ 1939ರಂದು ಟಿ.ಸಿದ್ಧಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆಯು ಮೈಸೂರಿನಲ್ಲಿ ನಡೆಯಿತು. ಹ್ಯಾಮಿಲ್ಟನ್ ಬಿಲ್ಡಿಂಗ್ ಎಂಬ ಹೆಸರನ್ನು ಸರಕಾರವೂ ಬದಲಾಯಿಸುವುದಿಲ್ಲವೆಂದು ತಿಳಿಸಿದ್ದರಿಂದ ಕಾಂಗ್ರೆಸ್ ಸತ್ಯಾಗ್ರಹವನ್ನಾರಂಭಿ ಸಲಾಗಿದೆಂದೂ, ಯಾರಾದರೂ ವೈಯಕ್ತಿಕವಾಗಿ ಮಾಡುವುದಾದರೆ ಅದಕ್ಕೆ ತಮ್ಮ ಅಡ್ಡಿಯಿಲ್ಲವೆಂದೂ ಘೋಷಿಸಿತು". ಅದರಂತೆ ತಗಡೂರು ರಾಮಚಂದ್ರರಾಯರು 1939ರ ಫೆಬ್ರವರಿ 15ರ ಹ್ಯಾಮಿಲ್ಟನ್ ಸತ್ಯಾಗ್ರಹ ಆರಂಭಿಸುವುದಾಗಿ ಘೋಷಿಸಿದರು[100].

ಸತ್ಯಾಗ್ರಹಿಗಳು ಈ ಕೆಳಗೆ ಕಂಡ ನಿಯಮಗಳನ್ನು ಪಾಲಿಸಬೇಕಾಗಿತ್ತು.

(1) ಪ್ರತಿಯೊಬ್ಬ ಸತ್ಯಾಗ್ರಹಿಯೂ ಸತ್ಯ ಮತ್ತು ಅಹಿಂಸೆಯನ್ನು ಪಾಲಿಸಬೇಕು.

(2) ಸತ್ಯಾಗ್ರಹಕ್ಕೆ ಹೊರಡುವಾಗ ಸತ್ಯಾಗ್ರಹ ಸಮಿತಿಯವರಿಂದ ತಯಾರಾದ ತ್ರಿವರ್ಣದ ಬ್ಯಾಡ್ಜನ್ನು ಹಾಕಿಕೊಳ್ಳಬೇಕು.

(3) ಸತ್ಯಾಗ್ರಹ ಸಮಿತಿಯು ಚಾಲಕರ ಅನುಮತಿಯಿಲ್ಲದೆ ಸತ್ಯಾಗ್ರಹಕ್ಕೆ ಹೋಗಕೂಡದು.

(4) ಪ್ರತಿ ದಿವಸವೂ ಸುಬ್ರಾಯನ ಕೆರೆಯಲ್ಲಿ ನಡೆಯುವ ಬಹಿರಂಗ ಸಭೆಯಲ್ಲಿ ಭಾಗವಹಿಸುವುದು. ಆ ಸಭೆಯಲ್ಲಿ ಸತ್ಯಾಗ್ರಹಕ್ಕೆ ಸಂಬಂಧಪಟ್ಟ ವಿಷಯಗಳನ್ನು ಸ್ಪಷ್ಟವಾಗಿ ತಿಳಿಸುವರು.

(5) ಪ್ರತಿದಿನವೂ ಸತ್ಯಾಗ್ರಹಕ್ಕೆ ಹೊರಡುವವರ ಹೆಸರನ್ನು ಬಹಿರಂಗ ಸಭೆಯ ನಂತರ ತಿಳಿಸಲಾಗುವುದು[101].

15-02-1939ರಂದು ಆರಂಭವಾಗುವ ಹ್ಯಾಮಿಲ್ಟನ್ ಬಿಲ್ಡಿಂಗ್ ಸತ್ಯಾಗ್ರಹದ ಕಾರ್ಯಕ್ರಮಗಳನ್ನು ಸತ್ಯಾಗ್ರಹ ಸಮಿತಿಯು ಈ ರೀತಿಯಾಗಿ ನಿಗದಿಪಡಿಸಿತ್ತು. ಫೆಬ್ರವರಿ 15ನೇ ತಾರೀಖು ಬುಧವಾರ ಬೆಳಿಗ್ಗೆ 8ಗಂಟೆಗೆ ಸುಬ್ರಾಯನಕೆರೆಯಿಂದ ಇಬ್ಬರು ಸತ್ಯಾಗ್ರಹಿಗಳು ಹೊರಡುವರು. ಒಂದು ಕೈಯಲ್ಲಿ ಸುಣ್ಣದ ಗಡಿಗೆಯನ್ನು ಮತ್ತೊಂದು ಕೈಯಲ್ಲಿ ಸುಣ್ಣ ಬಳಿಯುವ ಬಟ್ಟೆಯನ್ನು ತೆಗೆದುಕೊಂಡು ರಮಾವಿಲಾಸ ಅಗ್ರಹಾರ, ಸಂತೇಪೇಟೆ, ಲ್ಯಾನ್ಸ್‌ಡೌನ್ ಬಜಾರ್, ಮತ್ತು ದೊಡ್ಡ ಪೇಟೆ ಮಾರ್ಗವಾಗಿ ಸೆಂಟ್ರಲ್ ಪೊಲೀಸ್ ಸ್ಟೇಷನ್ನಿಗೆ ಹೋಗಿ ಹ್ಯಾಮಿಲ್ಟನ್ ಬಿಲ್ಡಿಂಗ್ ಎಂಬುದಾಗಿ ಬರೆದಿರುವ ಬೋರ್ಡಿಗೆ ಸುಣ್ಣ ಬಳಿಯುವುದು. ಪೊಲೀಸರು ಇದಕ್ಕೆ ಅವಕಾಶ ಕೊಡದೆ ಎಲ್ಲಿ ತಡೆದರೆ ಅಲ್ಲಿ ಜನರ ಸಂಚಾರಕ್ಕಾಗಲಿ, ವಾಹನ ಸಂಚಾರಕ್ಕಾಗಲೀ ಅಡ್ಡಿ ಇಲ್ಲದಂತೆ

ಒಂದು ಪಾರ್ಶ್ವದಲ್ಲಿ ರಾತ್ರಿ 8 ಗಂಟೆಯವರೆಗೆ ಕೂರತಕ್ಕದ್ದು. ಪ್ರತಿ ದಿವಸವೂ ಹೀಗೆ ಆಚರಿಸತಕ್ಕದೆಂದು ತೀರ್ಮಾನಿಸಿದರು[102].

ಮೊದಲನೆಯ ದಿವಸ– ತಗಡೂರು ರಾಮಚಂದ್ರರಾವ್ ಮತ್ತು ಬಿ.ಸುಬ್ರಾವ್ ಉಪಾಧ್ಯಾಯರು ಹಾಮಿಲ್ಟನ್ ಸತ್ಯಾಗ್ರಹವನ್ನು ಆಚರಿಸಿದರು. 15.02.1939 ರಂದು ಸಂಜೆ ಬಹಿರಂಗ ಸಭೆಯಲ್ಲಿ ಪಿ.ಎನ್.ಜವರಪ್ಪಗೌಡರು ಭಾಷಣ ಮಾಡುತ್ತಾ, ಹ್ಯಾಮಿಲ್ಟನ್ ಕಟ್ಟಡದ ಹೆಸರನ್ನು ಅಳಿಸಲು ಕಾರ್ಯಕಾರಿ ಸಮಿತಿಯು ಸ್ವತಂತ್ರ್ಯವಾಗಿ ಸತ್ಯಾಗ್ರಹ ಮಾಡಲು ಅನುಮತಿ ನೀಡಿದ್ದರಿಂದ ತಾವು ಮಂಡ್ಯದಿಂದ ಸತ್ಯಾಗ್ರಹಿಗಳೊಂದಿಗೆ ಭಾಗವಹಿಸುತ್ತಿರುವುದಾಗಿ ಹೇಳಿದರು. ಹ್ಯಾಮಿಲ್ಟನ್ ಕಟ್ಟಡ ಹೋಗಬೇಕೋ ಅಥವಾ ಹ್ಯಾಮಿಲ್ಟ್‌ನನ್ನೇ ಹೋಗಬೇಕು ಎಂದು ಪ್ರಶ್ನಿಸಿದರು. ತಾವು ಯಾವುದೇ ಆಯುಧಗಳಿಲ್ಲದೇ ಸತ್ಯಾಗ್ರಹ ಮಾಡುತ್ತಿದ್ದೇವೆ. ಆದರೂ ಪೊಲೀಸರು ಲಾಠಿಯೊಂದಿಗೆ ಸತ್ಯಾಗ್ರಹವನ್ನು ತಡೆಯುತ್ತಿದ್ದಾರೆ. ಇದು ನಮಗೂ ಅವರಿಗೂ ಇರುವ ವ್ಯತ್ಯಾಸ. ಅವರು ಖಾಕಿ ತೊಡುತ್ತಾರೆ. ತಾವು ಖಾದಿ ತೊಡುತ್ತೇವೆ. ಕೇವಲ ಒಂದು ಅಕ್ಷರದ ವ್ಯತ್ಯಾಸ. ತಾವು ಈ ಚಳುವಳಿಯಲ್ಲಿ ಖಂಡಿತ ಗೆಲ್ಲುತ್ತೇವೆಂದು ಜನರಲ್ಲಿ ಹುರಿದುಂಬಿಸಿದರು. ಹೀಗಾಗಿ ಈ ಸತ್ಯಾಗ್ರಹ ಚಳುವಳಿ ಪ್ರಾರಂಭಿಸಿದ್ದು, ಒಂದು ವೇಳೆ ಅವರು ಹ್ಯಾಮಿಲ್ಟನ್ ಹೆಸರಿರುವ ಫಲಕವನ್ನು ತೆರೆಯದೇ ಹೋದರೆ ಜವಾಬ್ದಾರಿಯುತ ಸರಕಾರ ಬಂದಾಗ ತೆರವುಗೊಳಿಸುತ್ತೇವೆ[103].

21 ಫೆಬ್ರವರಿ 1939ರಂದು ಮಳವಳ್ಳಿ ಪ್ರಮುಖ ಹೋರಾಟಗಾರರಾದ ಕೆ.ವಿ.ವೀರಪ್ಪ ಅವರು ಬಹಿರಂಗ ಸಭೆಯಲ್ಲಿ ಮಾತನಾಡುತ್ತಾ ಕೆಲವು ಜನರು ಹ್ಯಾಮಿಲ್ಟನ್ ಕಟ್ಟಡದ ಸತ್ಯಾಗ್ರಹ ಮಾಡುತ್ತಿರುವುದು ಸಣ್ಣ ವಿಷಯವಾಗಿದೆ ಎಂದು ಹೇಳುತ್ತಿದ್ದಾರೆ. 'ಹ್ಯಾಮಿಲ್ಟನ್‌ಕಟ್ಟಡ' ಎಂದು ಹೆಸರಿಟ್ಟಿರುವುದು ಸಣ್ಣ ವಿಷಯವಲ್ಲ. ಈ ಕಟ್ಟಡಕ್ಕೆ ಹ್ಯಾಮಿಲ್ಟನ್ ಕಟ್ಟಡ ಎಂದು ಹೆಸರಿಡುವ ಬದಲಾಗಿ ಒಂದು ವೇಳೆ ಯುರೋಪಿಯನ್ನರ ಬದಲಾಗಿ ದಿವಾನರಾದ ಸರ್ ಮಿರ್ಜಾ, ಮಾಧವರಾವ್ ಅಥವಾ ಅನಂತರಾಮನ್‌ರ ಹೆಸರಿಟ್ಟಿದ್ದರೆ ಅದು ಸಣ್ಣ ವಿಷಯ ಎಂದು ಪರಿಗಣಿಸಬಹುದಿತ್ತು. ಈ ಹೋರಾಟ ಹ್ಯಾಮಿಲ್ಟನ್ ವಿರುದ್ಧ ಅಲ್ಲ. ಇದು ಬ್ರಿಟಿಷ್ ಅಧಿಕಾರದ ವಿರುದ್ಧವಾಗಿದೆ. ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧವಾಗಿದೆ. ನಾವು ಇದೇ ರೀತಿ ಶಿಸ್ತುಬದ್ಧವಾಗಿ ಹೋರಾಟ ನಡೆಸಿದರೆ ಖಂಡಿತ ಈ ಹ್ಯಾಮಿಲ್ಟನ್ ಕಟ್ಟಡದ ಹೆಸರನ್ನು ತೆಗೆಯಬಹುದು[104]. ಹ್ಯಾಮಿಲ್ಟನ್ ಸತ್ಯಾಗ್ರಹದ ಪ್ರಭಾವ ಮಂಡ್ಯಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಮೇಲೆ ಬೀರಿತು. ನಾಗಮಂಗಲ ತಾಲ್ಲೂಕಿನ ಮಣಿಯೂರಿನಲ್ಲಿ ತಿಮ್ಮೇಗೌಡರ ಸಹಚರರ 6 ಮಂದಿ ಸತ್ಯಾಗ್ರಹಿಗಳನ್ನು ದಸ್ತಗಿರಿ ಮಾಡಲಾಯಿತು. ಈ ಸತ್ಯಾಗ್ರಹಿಗಳು ಕಂದಾಯವನ್ನು ನೀಡಲಿಲ್ಲ ಹಾಗೂ ರೆವಿನ್ಯೂ ಅಧಿಕಾರಿಗಳನ್ನು ಹಿಡಿದ ದನಕರುಗಳನ್ನು

ಹರಾಜು ಮಾಡಲು ತಡೆದರು ಎಂಬ ಆಪಾದನೆ ಮಾಡಲಾಯಿತು. ಹಾಗೂ ಸತ್ಯಾಗ್ರಹಿಗಳನ್ನು ದಸ್ತಗಿರಿ ಮಾಡಲಾಯಿತು. ತಿಮ್ಮೆಗೌಡ ಹ್ಯಾಮಿಲ್ಟನ್ ಸತ್ಯಾಗ್ರಹದಲ್ಲಿ ಸಕ್ರಿಯವಾಗಿ ಭಾಗವಹಿಸಿ ಮತ್ತು ಸತ್ಯಾಗ್ರಹವನ್ನು ಮುಂದುವರೆಸಿದ್ದರು[105].

ದಿನಾಂಕ 6 ಮಾರ್ಚ್ 1939ರಂದು ಸುಬ್ಬರಾಯನ ಕೆರೆಯಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಶ್ರೀರಂಗಪಟ್ಟಣ ತಾಲ್ಲೂಕು ಅರಕೆರೆ ಗ್ರಾಮದ ಕೆಂಚಯ್ಯ ಅವರು ಭಾಷಣ ಮಾಡುತ್ತಾ 3ನೇ ತಾರೀಖಿಗೆ ನಡೆದ ಒಂದು ಘಟನೆ ಬಗ್ಗೆ ಉಲ್ಲೇಖಿಸುತ್ತಾ ಅದಕ್ಕೆ ಯಾರು ಜವಾಬ್ದಾರರು ಪೊಲೀಸರೋ ಅಥವಾ ಕಾಂಗ್ರೆಸ್‌ನವರೋ ಗೊತ್ತಿಲ್ಲ. ಪೊಲೀಸರು ಹೇಳುವ ಪ್ರಕಾರ ಜನರ ಗುಂಪಿನೊಳಗಿನಿಂದ ಯಾರೋ ಕಲ್ಲುಗಳನ್ನು ಬೀಸಿದರು ಹೀಗಾಗಿ ಲಾಠಿ ಬಳಸಬೇಕಾಯಿತು. ನಿಜ ಸಂಗತಿ ಅದೇನೆ ಇರಲಿ ನಾವು ಹಿಂಸಾ ಪ್ರವೃತ್ತಿಗೆ ಇಳಿಯಬಾರದು. ಸತ್ಯಾಗ್ರಹಕ್ಕೆ ಕೆಟ್ಟ ಹೆಸರು ತರಬಾರದು. ಪೊಲೀಸರು ನಮಗೆ ಹೊಡೆದರೂ ಅವರ ವಿರುದ್ಧ ಯಾವುದೇ ಹಿಂಸಾತ್ಮಕ ಕಾರ್ಯ ಕೈಗೊಳ್ಳವುದು ಬೇಡ. ಒಟ್ಟಿಗೆ ಶಾಂತತೆಯನ್ನು ಕಾಪಾಡಿ ಎಂದು ಪ್ರಾರ್ಥಿಸಿದರು[106]. ಹ್ಯಾಮಿಲ್ಟನ್ ಸತ್ಯಾಗ್ರಹದಲ್ಲಿ ಪಾಲ್ಗೊಂಡು ರಾಜದ್ರೋಹದ ಭಾಷಣ ಮಾಡಿ ಪಿ.ಎನ್.ಜವರಪ್ಪಗೌಡರ ಮೇಲೆ ಸೆಕ್ಷನ್ 124ಎ ಪ್ರಕಾರ ಮೊಕದ್ದಮೆ ಹೂಡಲಾಯಿತು[107]. ಪಿ.ಎನ್.ಜವರಪ್ಪಗೌಡ ಮತ್ತು ಎಂ.ಎನ್.ಜೋಯಿಸರ ಮೇಲಿನ ಜಾಮೀನು ಮೊಕದ್ದಮೆ 25-03-1939ಕ್ಕೆ ಮುಗಿಯಿತು. ಒಳ್ಳೇ ನಡತೆಗೆ ಒಂದು ವರ್ಷದವರೆಗೆ ಜಾಮೀನು ಕೊಡಬೇಕೆಂದು ಜಿಲ್ಲಾ ಮ್ಯಾಜಿಸ್ಟ್ರೇಟರ್ ತೀರ್ಪಿತ್ತರು. ಪಿ.ಎನ್. ಜವರಪ್ಪಗೌಡ ಮತ್ತು ಎಂ.ಎನ್. ಜೋಯಿಸರಿಗೆ ಜಾಮೀನು ಕೊಡುವುದಿಲ್ಲವೆಂದರು. ಒಂದು ವರ್ಷಕಾಲ ಇಬ್ಬರು ಬಂಧನದಲ್ಲಿರಬೇಕೆಂದು ನ್ಯಾಯಾಧೀಶರು ತೀರ್ಮಾನಿಸಿದರು. ಅದರಂತೆ ಇಬ್ಬರಿಗೂ ಕಾರಾಗೃಹ ಶಿಕ್ಷೆ ನೀಡಲಾಯಿತು[108].

ಮೈಸೂರು ಸಂಸ್ಥಾನದಲ್ಲಿ ಶಿವಪುರ ಧ್ವಜಸತ್ಯಾಗ್ರಹ ವಿಧುರಾಶ್ವತದ ಘಟನೆಗಳ ನಂತರ ಮೈಸೂರು ಕಾಂಗ್ರೆಸ್ಸಿನ ಪ್ರತಿಯೊಂದು ಚಟುವಟಿಕೆಗಳಲ್ಲಿ ಮಂಡ್ಯಜಿಲ್ಲೆಯ ಜನರು [1939ರವರೆಗೆ ಮೈಸೂರು ಜಿಲ್ಲೆಯ ಒಂದು ಭಾಗ] ಸಕಾರಾತ್ಮಕವಾಗಿ ಸ್ಪಂದಿಸುತ್ತಿದ್ದರು. ಹ್ಯಾಮಿಲ್ಟನ್ ಸತ್ಯಾಗ್ರಹದಲ್ಲಿ ಕೂಡ ಸಾಮಾನ್ಯ ಜನರು ಪ್ರಮುಖ ಮುಖಂಡರೊಂದಿಗೆ ಮೈಸೂರಿಗೆ ಬಂದು ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ದಿನಾಂಕ 26ನೇ ಮಾರ್ಚ್ 1939 ರಂದು ಮೈಸೂರು ಕಾಂಗ್ರೆಸ್ಸಿನ ತಾಲ್ಲೂಕು ಸಮಿತಿಗಳಿಗೆ ಚುನಾಯಿತರಾಗಿ ಬಂದ ಜಿಲ್ಲಾ ಸಮಿತಿಯ ಪ್ರತಿನಿಧಿಗಳ ಸಭೆಯು ರಂಗರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಯಲ್ಲಿ ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯಕಾರಿ ಮಂಡಳಿಯ ಅಧಿಕಾರಿಗಳನ್ನು ಚುನಾಯಿಸಿದರು. ಕಾರ್ಯಕಾರಿ ಮಂಡಳಿಯ ಸದಸ್ಯರ ವಿವರ ಈ ರೀತಿ ಇದೆ. ಅಧ್ಯಕ್ಷರಾಗಿ

ಎ.ಜಿ.ಬಂದೀಗೌಡರು, ಉಪಾಧ್ಯಕ್ಷರಾಗಿ ಕೆ.ಚಿಕ್ಕಲಿಂಗಯ್ಯ, ಕಾರ್ಯದರ್ಶಿಗಳಾಗಿ ಎಂ.ಆರ್.ಎನ್.ಶಾಸ್ತ್ರಿಗಳು ಹಾಗೂ ಸಮಿತಿಯ ಸದಸ್ಯರುಗಳಾದ ಕೆ.ಎಂ.ಕೃಷ್ಣಪ್ಪಗೌಡ, ಬಿ.ಕೆಂಪೇಗೌಡ, ಕೆ.ಹೆಚ್.ಸುಬ್ಬೇಗೌಡ, ಎಂ.ಮಹಾಬಲರಾಯ, ಕೆ.ವಿ.ವೀರಪ್ಪ, ಟಿ.ರಾಮರಾಯ, ಜಿ.ವೆಂಕಟನರಸಿಂಹಯ್ಯ. ಈ ಸಮಿತಿಯ ವಿಶೇಷವೇನೆಂದರೆ ಎಲ್ಲಾ ಪದಾಧಿಕಾರಿಗಳು ಮಂಡ್ಯ ಪ್ರದೇಶಕ್ಕೆ ಸೇರಿದವರಾಗಿದ್ದರು[109]. ಹ್ಯಾಮಿಲ್ಟನ್ ಸತ್ಯಾಗ್ರಹವು ನಿಂತ ಮೇಲೆ ಅಂದಿನ ಪ್ರಮುಖ ಪತ್ರಿಕೆಗಳಾದ ಸಾಧ್ವಿ, ತಾಯಿನಾಡು, ವಿಶ್ವಕರ್ನಾಟಕದ ಸಂಪಾದಕರು ಸರಕಾರದ ಮೇಲೆ ಒತ್ತಡ ಹೇರುವ ಮೂಲಕ ಸತ್ಯಾಗ್ರಹಿಗಳನ್ನು ಬಿಡುಗಡೆಗೊಳಿಸಲು ಪ್ರಯತ್ನಿಸಿದರು. ಆದರೆ ಮೈಸೂರಿನ ಸಂಸ್ಥಾನವು ತಿರುವಾಂಕೂರಿನ ಸರ್ಕಾರದಂತೆ ಕ್ರಮವನ್ನು ಅನುಸರಿಸಬಲ್ಲ ಹ್ಯಾಮಿಲ್ಟನ್ ಸತ್ಯಾಗ್ರಹ ಸಂದರ್ಭದಲ್ಲಿ 80 ಜನ ಸತ್ಯಾಗ್ರಹಿಗಳನ್ನು ಬಂಧಿಸಲಾಗಿತ್ತು. ತಗಡೂರು ರಾಮಚಂದ್ರರಾಯರ ಮೇಲೆ ಮೊಕದ್ದಮೆ ಮುಂದುವರೆಯುತ್ತಲೇ ಇತ್ತು[110]. ಅಂತಿಮವಾಗಿ ತಗಡೂರು ರಾಮಚಂದ್ರರಾಯರು ಮೈಸೂರು ಜಿಲ್ಲೆ ಕೋರ್ಟ್‌ಗೆ ವಿಚಾರಣೆಗೆ ಬಂದ ಸಂದರ್ಭದಲ್ಲಿ ಹ್ಯಾಮಿಲ್ಟನ್ ಸತ್ಯಾಗ್ರಹದ ಬಗ್ಗೆ ಜನರಲ್ಲಿ ಇರುವ ಭಿನ್ನಾಭಿಪ್ರಾಯ ಮತ್ತು ಸಂದೇಹಗಳಿಗೂ ಸಮರ್ಪಕವಾದ ಉತ್ತರ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಹೀಗಾಗಿ ವಿದುರಾಶ್ವತ್ಥದಲ್ಲಿ ಕಾಂಗ್ರೆಸ್ ಅಧಿವೇಶನ ಸೇರುವುದರಿಂದ ಈ ಸಂದರ್ಭದಲ್ಲಿ ಸಂಸ್ಥಾನದಲ್ಲಿ ಯಾವ ಭಿನ್ನಾಭಿಪ್ರಾಯಗಳಿಗೂ ಅವಕಾಶ ನೀಡಬಾರದೆಂದು ಅನೇಕ ಮಿತ್ರರುಗಳು ನೀಡಿದ ಸಲಹೆಯಂತೆ ತಾತ್ಕಾಲಿಕವಾಗಿ ಸತ್ಯಾಗ್ರಹ ನಿಲ್ಲಿಸಲಾಯಿತೆಂದು ಘೋಷಿಸಿದರು[111].

1939 ಫೆಬ್ರವರಿ 15 ರಿಂದ ಆರಂಭವಾದ ಹ್ಯಾಮಿಲ್ಟನ್ ಸತ್ಯಾಗ್ರಹದಲ್ಲಿ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ, ಮಳವಳ್ಳಿ, ಮಂಡ್ಯ, ಪಾಂಡವಪುರ, ನಾಗಮಂಗಲ, ಕೃಷ್ಣರಾಜಪೇಟೆ ತಾಲ್ಲೂಕುಗಳಿಂದ ಸತ್ಯಾಗ್ರಹಿಗಳು ಭಾಗವಹಿಸಿದ್ದರು. ಶ್ರೀರಂಗಪಟ್ಟಣ ತಾಲ್ಲೂಕಿನ ಅರಕೆರೆ ಯು.ಕೆಂಚಪ್ಪ, ಮಳವಳ್ಳಿ ತಾಲ್ಲೂಕಿನ ವೀರಪ್ಪ, ನಾಗಮಂಗಲ ತಾಲ್ಲೂಕಿನ ಪಿ.ಎನ್.ಜವರಪ್ಪಗೌಡ ನೇತೃತ್ವದಲ್ಲಿ ಸತ್ಯಾಗ್ರಹಿಗಳು ಭಾಗವಹಿಸಿದ್ದರು. ಪ್ರಮುಖ ನಾಯಕರನ್ನು ಪೊಲೀಸರು ದಸ್ತಗಿರಿ ಮಾಡಿದ್ದರಿಂದ ಸತ್ಯಾಗ್ರಹಕ್ಕೆ ಹಿನ್ನೆಡೆಯಾಯಿತು. ಈ ರೀತಿಯಾಗಿ 10 ಏಪ್ರಿಲ್ 1939ರಂದು ಹ್ಯಾಮಿಲ್ಟನ್ ಸತ್ಯಾಗ್ರಹವು ವಿಫಲವಾಯಿತು[112]. ಮೈಸೂರು ಸಂಸ್ಥಾನದಲ್ಲಿ 1947ರಲ್ಲಿ ಕೆ.ಸಿ.ರೆಡ್ಡಿಯವರ ನೇತೃತ್ವದಲ್ಲಿ ರಚಿತವಾದ ಪ್ರಥಮ ಪ್ರಜಾ ಸರ್ಕಾರದಲ್ಲಿ ಅಂದಿನ ಗೃಹಮಂತ್ರಿಗಳಾದ ಟಿ.ಮರಿಯಪ್ಪನವರು ಹ್ಯಾಮಿಲ್ಟನ್ ಎಂಬ ಹೆಸರನ್ನು ತೆಗೆದು ಸೆಂಟ್ರಲ್ ಪೊಲೀಸ್ ಸ್ಟೇಷನ್ ಎಂದು ಕರೆದರು. ತಗಡೂರು ರಾಮಚಂದ್ರರಾಯರ ನೇತೃತ್ವದಲ್ಲಿ ಹಾಗೂ ಸಂಸ್ಥಾನದ ಇತರೆ ಜಿಲ್ಲೆಗಳ ಸತ್ಯಾಗ್ರಹಿಗಳ ಸತತವಾದ 9 ವರ್ಷಗಳ ಹೋರಾಟದ

ನಂತರ ಹ್ಯಾಮಿಲ್ಟನ್ ಹೆಸರಿನ ಬದಲು ಸೆಂಟ್ರಲ್ ಪೊಲೀಸ್ ಸ್ಟೇಷನ್ ಎಂದು ಬದಲಾಯಿಸುವುದರ ಮೂಲಕ ಹ್ಯಾಮಿಲ್ಟನ್ ಕಟ್ಟಡದ ವಿವಾದಕ್ಕೆ ತೆರೆಬಿದ್ದಿತು.

1942ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಮಂಡ್ಯ ಜಿಲ್ಲೆಯ ಪಾತ್ರ –

ಪೀಠಿಕೆ : 1942 ಭಾರತದ ಇತಿಹಾಸ ಪುಟಗಳಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವ ವರ್ಷ. 1942ರ ಜುಲೈ 14 ರಂದು ರಾಷ್ಟ್ರೀಯ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯು "ಭಾರತ ಬಿಟ್ಟು ತೊಲಗಿರಿ" ಎಂಬ ನಿರ್ಣಯವನ್ನು ಅಂಗೀಕರಿಸಿತು. ಇದರ ತರುವಾಯ ಆಗಸ್ಟ್ 9ನೇ ತಾರೀಖು ಮುಂಬೈನಲ್ಲಿ ಅಖಿಲಭಾರತ ಕಾಂಗ್ರೆಸ್ ಸಮಾವೇಶ ನಡೆಯಿತು. ಈ ಸಭೆಯಲ್ಲಿ ಮಹಾತ್ಮ ಗಾಂಧೀಜಿಯವರು ಬ್ರಿಟಿಷರಿಗೆ ಕೊನೆಯ ಎಚ್ಚರಿಕೆ ನೀಡಿ 'ಕ್ವಿಟ್ ಇಂಡಿಯಾ' (ಭಾರತವನ್ನು ಬಿಟ್ಟು ತೊಲಗಿ) ಚಲೇ ಜಾವ್ ಎಂದು ಬ್ರಿಟೀಷರಿಗೆ ಕರೆಕೊಟ್ಟರು. ಈ ರೀತಿಯಾಗಿ "ಕ್ವಿಟ್ ಇಂಡಿಯಾ" ನಿರ್ಣಯ ಭಾರತದ ರಾಷ್ಟ್ರೀಯ ಕಾಂಗೆಸ್ಸಿನಿಂದ ಮಾಡಿತು[113]. ಮುಂಬೈನಲ್ಲಿ ನಡೆಯುವ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನಕ್ಕೆ ಮೈಸೂರು ಸಂಸ್ಥಾನದಿಂದ ತಗಡೂರು ರಾಮಚಂದ್ರರಾವ್, ಎ.ಎನ್. ಸೂರ್ಯನಾರಾಯಣರಾಯರು, ತಾಳಕೆರೆ ಸುಬ್ರಹ್ಮಣ್ಯ [ಮೈಸೂರು ಕಾಂಗ್ರೆಸ್ ಅಧ್ಯಕ್ಷರು], ಮಳವಳ್ಳಿವೀರಪ್ಪ, ಕೆ.ಟಿ.ಭಾಷ್ಯಂ, ಎಸ್.ನಿಜಲಿಂಗಪ್ಪ, ಮುಂತಾದವರು ಸಭೆಯಲ್ಲಿ ಭಾಗವಹಿಸಲು ಹೋಗಿದ್ದರು. 1942ರ ಆಗಸ್ಟ್ 8ರ ರಾತ್ರಿ 11 ಗಂಟೆ ಸಮಯದಲ್ಲಿ ಗಾಂಧೀಜಿಯವರು "ಮಾಡು ಇಲ್ಲವೇ ಮಡಿ (Do or Die)'' ಎಂದು ಕರೆಯಿತ್ತರು. ಆ ದಿನ ಮಧ್ಯರಾತ್ರಿಯಲ್ಲಿಯೇ ಗಾಂಧೀಜಿ, ಕಾಂಗ್ರೆಸ್ ಅಧ್ಯಕ್ಷ ಅಬ್ದುಲ್ ಕಲಾಂ ಆಜಾದ್, ಜವಹರಲಾಲ್ ನೆಹರು, ರಾಜೇಂದ್ರ ಪ್ರಸಾದ್, ಆಚಾರ್ಯ ಕೃಪಲಾನಿ, ಸರ್ದಾರ ಪಟೇಲ್ ಮತ್ತಿತರ ನಾಯಕರನ್ನು ಬ್ರಿಟೀಷ್ ಸರ್ಕಾರ ಬಂಧಿಸಿತು[114].

ಮುಂಬೈಯಲ್ಲಿ ನಡೆದ 1942ರ ಆಗಸ್ಟ್ ಕ್ರಾಂತಿಯ ಪ್ರಭಾವ ಇತರ ಕಡೆಗಳಿಗೆ ತಟ್ಟಿದಂತೆ ಮೈಸೂರು ಸಂಸ್ಥಾನ ಹಾಗೂ ಕರ್ನಾಟಕ ವಿವಿಧ ಪ್ರದೇಶಗಳಿಗೆ ತಟ್ಟಿತು. ಸುಮಾರು ಎರಡು ವರ್ಷಗಳವರೆಗೆ ರಾಜ್ಯದಲ್ಲಿ ನಡೆದ ಕ್ವಿಟ್ ಇಂಡಿಯಾ ಚಳುವಳಿಯನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು. ಮೊದಲನೆಯದು 9ನೇ ಆಗಸ್ಟ್ 1942 ರಿಂದ 16ನೇ ಸೆಪ್ಟೆಂಬರ್ 1942 ರವರೆಗಿನ ಅವಧಿಯಲ್ಲಿ ನಡೆದ ಚಳುವಳಿ ; ಈ ಅವಧಿಯಲ್ಲಿ ಜನರನ್ನು ಯಾರೂ ಕೇಳುವವರಿರಲಿಲ್ಲ. ಅವರು ತಾವಾಗಿಯೇ ಕಾನೂನನ್ನು ತಮ್ಮ ಕೈಗೆ ತೆಗೆದುಕೊಂಡು ಗಲಭೆ ನಡೆಸಿದ್ದರು. ಮಹಾತ್ಮ ಗಾಂಧೀಜಿಯವರು "ಮಾಡು ಇಲ್ಲವೆ ಮಡಿ (Do or Die)" ಎಂದು ಹೇಳಿರುವುದಾಗಿ ಜನ ಕೇಳಿದ್ದರೇ ಹೊರತು ಇದರ ನಿಜಾಂಶವನ್ನು ಶೋಧಿಸಿರಲಿಲ್ಲ. 9ನೇ ಆಗಸ್ಟ್ 1942

ರಂದು ಮಹಾತ್ಮ ಗಾಂಧೀಜಿಯವರ ಬಂಧನವಾದ ತಕ್ಷಣ ದೇಶಾದ್ಯಂತ ಪ್ರತಿಭಟನ ನಡೆದವು. ಹಾಗೂ ಪ್ರಮುಖ ನಾಯಕರನ್ನು ದಸ್ತಗಿರಿ ಮಾಡಲಾಯಿತು. ಮೈಸೂರಿನ ಸುಬ್ಬರಾಯನ ಕೆರೆಯಲ್ಲಿ ಬಹಿರಂಗ ಸಭೆಯನ್ನು ವಿದ್ಯಾರ್ಥಿಗಳು ಸ್ವಯಂ ಪ್ರೇರಣೆಯಿಂದ ಅಯೋಜಿಸಿದ್ದರು. ಕೆರೆಯ ಮೈದಾನವು ಜನರಿಂದ ಕಿಕ್ಕಿರಿದು ತುಂಬಿ ಹೋಗಿತ್ತು. ಈ ಸಭೆಯು ಹಿಂದಿನ ಶಿವಪುರ ಹಾಗೂ ಹ್ಯಾಮಿಲ್ಟನ್ ಸತ್ಯಾಗ್ರಹವನ್ನು ನೆನಪಿಗೆ ತರುತ್ತಿತ್ತು. ಈ ಸಭೆಯಲ್ಲಿ ಮೈಸೂರು ಸಂಸ್ಥಾನದ ಪ್ರಮುಖ ಕಾಂಗ್ರೆಸ್ ಮುಖಂಡರಾದ ಎಂ.ಎನ್. ಜೋಯಿಸ್ ಹಾಗೂ ಮಂಡ್ಯ ಜಿಲ್ಲೆಯ ಪ್ರಮುಖ ಹೋರಾಟಗಾರರಾದ ಹೆಚ್.ಕೆ.ವೀರಣ್ಣಗೌಡ, ಟಿ.ಮರಿಯಪ್ಪ, ಪಾಲಹಳ್ಳಿ ಸೀತಾರಾಮಯ್ಯ ಮೊದಲಾದವರು ಭಾಷಣವನ್ನು ಮಾಡಿದರು. ಮೈಸೂರಿನ ಸಂಸ್ಥಾನದಲ್ಲಿ ಕ್ವಿಟ್ ಇಂಡಿಯಾ ಚಳುವಳಿಯ ಆರಂಭವನ್ನು ಸುಬ್ಬರಾಯನ ಕೆರೆಯ ಸಭೆಯಿಂದ ಗುರುತಿಸಬಹುದು. ಸಭೆಯ ನಂತರದಿಂದ ಮೈಸೂರು ಸಂಸ್ಥಾನದಾದ್ಯಂತ ಕ್ವಿಟ್ ಇಂಡಿಯಾ ಚಳುವಳಿ ಆರಂಭವಾಯಿತು. ಅದರಂತೆ ಮಂಡ್ಯ ಜಿಲ್ಲೆಯಾದ್ಯಂತ ಚಳುವಳಿಗೆ ಮುನ್ನಡೆಯಾಯಿತು[115].

ಸುಬ್ಬರಾಯನ ಕೆರೆಯ ಸಭೆಯ ತರುವಾಯ ಮೈಸೂರು ಸಂಸ್ಥಾನದ ನಾಯಕರಾದ ಕೆ.ಟಿ. ಭಾಷ್ಯಂ, ಎಸ್. ನಿಜಲಿಂಗಪ್ಪ, ಎನ್.ಸಿ. ತಿಮ್ಮಾರೆಡ್ಡಿ, ತಾಳಕೆರೆ ಸುಬ್ರಹ್ಮಣ್ಯ ಮಳವಳ್ಳಿ ವೀರಪ್ಪ ಮುಂಬೈಯ ಎ.ಐ.ಸಿ.ಸಿ. (AICC) ಅಧಿವೇಶನದಿಂದ ಮರಳುತ್ತಿದ್ದಂತೆ ಯಶವಂತಪುರ ರೈಲು ನಿಲ್ದಾಣದಲ್ಲಿಯೇ ಆಗಸ್ಟ್ 12 ರಂದೇ ಬಂಧಿಸಲ್ಪಟ್ಟರು. ಆಗಸ್ಟ್ 13 ರಂದು ಸಾಹುಕಾರ ಚನ್ನಯ್ಯನವರು ಹಾಗೂ ಮಂಡ್ಯ ಜಿಲ್ಲೆಯ ಪ್ರಮುಖ ಸತ್ಯಾಗ್ರಹಿಗಳನ್ನು ಮುಂಬೈಯಿಂದ ಮೈಸೂರಿಗೆ ಮರಳುತ್ತಿರುವಾಗ ಮಾರ್ಗ ಮಧ್ಯದಲ್ಲಿ ಶ್ರೀರಂಗಪಟ್ಟಣದಲ್ಲಿ ಬಂಧಿಸಲ್ಪಟ್ಟರು[116]. ಮೈಸೂರು ಕಾಂಗ್ರೆಸ್‌ನ ಪ್ರಮುಖ ಮುಖಂಡರುಗಳನ್ನು ಪೊಲೀಸರು ಬಂಧಿಸಿದ ನಂತರ ಮೈಸೂರು ಸರ್ಕಾರ ಒಂದು ಪ್ರಕಟಣೆಯನ್ನು ನೀಡಿತು. ಆ ಪ್ರಕಾರ ಮೈಸೂರು ಕಾಂಗ್ರೆಸ್ಸಿಗೆ ಸೇರಿದ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿ, ಮೈಸೂರು ವರ್ಕಿಂಗ್ ಕಮಿಟಿ (ಕಾರ್ಯಕಾರಿ ಮಂಡಳಿ), ಜಿಲ್ಲಾ ಕಾಂಗ್ರೆಸ್ ಸಮಿತಿಗಳು, ನಗರ ಕಾಂಗ್ರೆಸ್ ಸಮಿತಿಗಳು, ಇವುಗಳೆಲ್ಲಾ ಆಕ್ರಮಣ ಕೂಟಗಳೆಂದು, ಮೈಸೂರು ಕಾಂಗ್ರೆಸ್ಸನ್ನು ಕಾನೂನು ಬಾಹಿರ ಸಂಸ್ಥೆಯೆಂದು 'ಪಬ್ಲಿಕ್ ಸೆಕ್ಯೂರಿಟಿ ಆಕ್ಟ್' ಪ್ರಕಾರ ಸರ್ಕಾರದಿಂದ ಘೋಷಿಸಲ್ಪಟ್ಟಿತು[117]. ಆಗಸ್ಟ್ 15 ರಿಂದ 17ರ ನಡುವಿನ ಘಟನೆಗಳು, ವರದಿಗಳು, ಚಳುವಳಿಯ ಚಟುವಟಿಕೆಗಳು ಸಕಲ ದೆಸೆಗಳಲ್ಲು ವೇಗವರ್ಧನೆ ಹೊಂದಲು ನೆರವಾದವು. 1942ರ ಮುಂಬೈಯ ಸೀಕ್ರೆಟ್ ಎಸ್ಟ್ರಾಕ್ಟ್ 503ನೇ ಪ್ಯಾರಾದಲ್ಲಿ ಈ ರೀತಿಯಾಗಿ ಉಲ್ಲೇಖಿಸಲಾಗಿದೆ. "ಸ್ಥಳೀಯ ನಾಯಕರ ಬಂಧನ ಹಾಗೂ ಗೊಂದಲ

ಸೃಷ್ಟಿಸುವವರ ಪ್ರಚೋದನೆಯಿಂದ ಹರತಾಳ ಮತ್ತು ವಿದ್ಯಾರ್ಥಿಗಳ ಪ್ರದರ್ಶನಗಳು ಎಲ್ಲೆಡೆ ನಡೆದವು"[118].

ಪ್ರಮುಖ ನಾಯಕರನ್ನು ಬಂಧಿಸಿದ ನಂತರ ಮಂಡ್ಯ ಜಿಲ್ಲೆಯಲ್ಲಿ ಸಹ ಚಳುವಳಿಯು ವೇಗವರ್ಧನೆ ಹೊಂದಲು ಸಹಾಯಕವಾಯಿತು. ಕ್ವಿಟ್ ಇಂಡಿಯಾ ಚಳುವಳಿಯ ಆರಂಭವಾದ ಸಂದರ್ಭವನ್ನು ಕೆಂಗಲ್ ಹನುಮಂತಯ್ಯನವರು ಈ ರೀತಿಯಾಗಿ ವಿವರಿಸಿದ್ದಾರೆ. "1942 ನೇ ಆಗಸ್ಟ್ 9 ರಂದು ಮಹಾತ್ಮಗಾಂಧಿ ಅವರೂ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರೂ ದಸ್ತಗಿರಿಯಾದರು. ದೇಶದಲ್ಲೆಲ್ಲಾ ಕಾಂಗ್ರೆಸ್ ಪ್ರಮುಖರನ್ನು ಸರ್ಕಾರದವರು ದಸ್ತಗಿರಿ ಮಾಡಲು ಉಪಕ್ರಮಿಸಿದರು. ಬ್ರಿಟಿಷ್ ಭಾರತ, ರಾಜರ ಭಾರತವೆಂಬ ಭೇದವಿಲ್ಲದೆ ದಸ್ತಗಿರಿಗಳಾದವು. ಈ ರೀತಿಯಾಗಿ ರಾಜಕೀಯ ಹೋರಾಟವು ಭಾರತದಾದ್ಯಂತ ಏಕಪ್ರಕಾರವಾಗಿ ಪ್ರಸರಸಿದ್ದುದು ಇದೇ ಮೊದಲು ದೇಶೀಯ ಸಂಸ್ಥಾನಗಳನ್ನು ಬ್ರಿಟಿಷ್ ಭಾರತದ ಹೋರಾಟದಿಂದ ದೂರವಿಟ್ಟ ಹರಿಪುರದ ನಿರ್ಣಯವು ಇನ್ನೂ ನಿಂತಿದೆ. ಆದರೆ ಪರಿಸ್ಥಿತಿಯು ಸಮಗ್ರ ಭಾರತವನ್ನು ಆವರಿಸಿದೆ.

ಆ ನಿರ್ಣಯವನ್ನು ರಚಿಸಿದ ಗಾಂಧೀಜಿ ಅವರೇ ಇಂದು ಅದನ್ನು ಗಣನೆಗೆ ತೆಗೆದುಕೊಳ್ಳದೆ ಸಮಗ್ರ ಭಾರತವನ್ನೂ ಸ್ವಾತಂತ್ರ್ಯದ ಸಂಗ್ರಾಮಕ್ಕೆ ಸ್ವಾಗತಿಸಿದರು"[119].

1942 ಆಗಸ್ಟ್ 9 ರಂದು ಮಹಾತ್ಮ ಗಾಂಧೀಜಿಯವರು ನೀಡಿದ 'ಮಾಡು ಇಲ್ಲವೇ ಮಡಿ' ಸಂದೇಶದಂತೆ ನಾಗಮಂಗಲ ತಾಲ್ಲೂಕಿನಲ್ಲಿ ಪಿ.ಎನ್.ನರಸಿಂಹಯ್ಯ ನೇತೃತ್ವದಲ್ಲಿ ಇಪ್ಪತ್ತೈದು ಜನಗಳೊಂದಿಗೆ ಕ್ವಿಟ್ಇಂಡಿಯಾ ಚಳುವಳಿಯನ್ನು ಆರಂಭಿಸಿದರು. ಅದೇ ದಿನ ರಾತ್ರಿ ಹನ್ನೆರಡರವರೆಗೆ ಚೌಡೇನಹಳ್ಳಿ ಹತ್ತಿರ ವೀರಪ್ಪ ಪೂಜಾರಿ ಸಹಾಯದಿಂದ ಟೆಲಿಗ್ರಾಫ್ ಕಂಬ ಮತ್ತು ತಂತಿ ಕತ್ತರಿಸಿದರು. 10.08.1942ರಂದು ಬೆಳಿಗ್ಗೆ ವಾರೆಂಟ್ ಇಲ್ಲದೆ ದಸ್ತಗಿರಿ ಮಾಡಿ ಪೊಲೀಸರು ಮಂಡ್ಯ ಜೈಲಿಗೆ ಸ್ಥಳಾಂತರಿಸಿದರು[120].

ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಮಂಡ್ಯ ಜಿಲ್ಲೆಯ ಕಾರ್ಮಿಕರ ಪಾತ್ರ

ಆಗಸ್ಟ್ 18, 1942 ರಂದು ಮಂಡ್ಯದ ಸಕ್ಕರೆ ಕಾರ್ಖಾನೆ ಮತ್ತು ರಾಸಾಯನಿಕ ಕಾರ್ಖಾನೆಯಲ್ಲಿ ಮುಷ್ಕರವನ್ನು ಹೂಡಲಾಯಿತು. ಹೆಚ್. ಸಿದ್ದರಾಮಯ್ಯ ಮತ್ತು ಕೆಂಪಯ್ಯ ಎಂಬ ಮುಖಂಡರು ಕಾರ್ಮಿಕರನ್ನು ಪ್ರಚೋದಿಸುತ್ತಿದ್ದರು. ಮುಷ್ಕರ ಮತ್ತು ಕಾರ್ಮಿಕರ ಮುಖಂಡತ್ವವನ್ನು ಮಂಡ್ಯದ ಪುಟ್ಟೇಗೌಡ ವಹಿಸಿದ್ದರು. ಅದೇ ದಿನ ಶ್ರೀರಂಗಪಟ್ಟಣ ತಾಲ್ಲೂಕು ಬೆಳಗೊಳದ ಕೆಮಿಕಲ್ಸ್ ಮತ್ತು ಫರ್ಟಿಲೈಜರ್ಸ್ ಫ್ಯಾಕ್ಟರಿ

ಹಾಗೂ ಇತರೆ ಎರಡು ಕಾರ್ಖಾನೆಗಳಲ್ಲೂ ಮುಷ್ಕರವನ್ನು ನಡೆಸಿದ ಕೆಲಸಗಾರರು ಮೂರು ಸಂಸ್ಥೆಗಳಿಂದ ಹೊರ ನಡೆದಿದ್ದರು. ಬೆಳಗೊಳದಲ್ಲಿ ಮುಷ್ಕರ ಹೂಡಿದ ಒಟ್ಟು ಕಾರ್ಮಿಕರ ಸಂಖ್ಯೆಯು ಈ ಕೆಳಕಂಡಂತೆ ಇದೆ. ಮೈಸೂರು ಕೆಮಿಕಲ್ಸ್ ಮತ್ತು ಫರ್ಟಿಲೈಜರ್ಸ್ 385, ಸರಕಾರಿ ಡೈಕ್ರೋಮ್ ಕಾರ್ಖಾನೆ 150, ಮೈಸೂರು ಮ್ಯಾನ್ಯುಫ್ಯಾಕ್ಚರಸ್ 130 ಶ್ರೀರಂಗಪಟ್ಟಣ ತಾಲ್ಲೂಕಿನ ಬೆಳಗೊಳದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಮೈಸೂರು ಕೆಮಿಕಲ್ಸ್‌ನ ಅನಂತಭಟ್ ಎಂಬಾತನು ನೌಕರಿಗೆ ರಾಜೀನಾಮೆ ನೀಡಿದನು. ಕಾರ್ಮಿಕರು ಮೈಸೂರು ಸರ್ಕಾರದ ವಿರುದ್ಧ ಪ್ರಮುಖ ಬೇಡಿಕೆಗಳನ್ನು ಮುಂದೆ ಇಟ್ಟರು.

1. ಭಾರತ ರಾಷ್ಟ್ರವು ನಡೆಸುತ್ತಿರುವ ಕ್ವಿಟ್ ಇಂಡಿಯಾ ಚಳುವಳಿಗೆ ಬೆಂಬಲ ಸೂಚಿಸುವುದು.

2. ಮಹಾತ್ಮ ಗಾಂಧೀಜಿಯವರ ಸಹಚರರಾದ ಮಹಾದೇವ ದೇಸಾಯಿಯವರ ನಿಧನಕ್ಕಾಗಿ ದುಃಖ ಸೂಚಿಸಲು ಮೂರು ದಿನ ಕಾಲ ಕೆಲಸ ನಿಲ್ಲಿಸಿ ಶೋಕಾಚರಣೆ ಮಾಡುವುದು.

3. ಮೈಸೂರು ಕೆಮಿಕಲ್ಸ್‌ಗೆ ರಾಜೀನಾಮೆ ನೀಡಿದ್ದ ಅನಂತ ಭಟ್ಟರ ರಾಜೀನಾಮೆಯನ್ನು ಹಿಂದೆಗೆದುಕೊಳ್ಳುವಂತೆ ಅವರನ್ನು ವಿನಂತಿಸುವುದು.

ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಮಂಡ್ಯ ಜಿಲ್ಲೆಯ ವಿದ್ಯಾರ್ಥಿಗಳ ಪಾತ್ರ :

ಈ ಚಳುವಳಿಯಲ್ಲಿ ಕಾರ್ಮಿಕರಂತೆ ವಿದ್ಯಾರ್ಥಿ ಸಮುದಾಯವು ಸಕ್ರಿಯವಾಗಿ ಭಾಗವಹಿಸಿದ್ದರು. ಆಗಸ್ಟ್ 12 ರಂದು ಮಂಡ್ಯದ ಪ್ರೌಢಶಾಲೆಯ ಮೇಲೆ ಸುಮಾರು ಬೆಳಿಗ್ಗೆ 6 ಘಂಟೆಯಿಂದ 8.15 ರವರೆಗೆ ರಾಷ್ಟ್ರಧ್ವಜವನ್ನು ಹಾರಿಸಲಾಯಿತು. ಪೊಲೀಸ್ ಅಧಿಕಾರಿಗಳಿಗೆ ತಿಳಿದ ನಂತರ ಧ್ವಜವನ್ನು ತೆಗೆಸಿಹಾಕಿದರು. ಈ ಸಮಯದಿಂದ ಪೊಲೀಸರ ಉಸ್ತುವಾರಿಯನ್ನು ಹೆಚ್ಚಿಸಲಾಯಿತು. ಮಂಡ್ಯ ಪ್ರೌಢಶಾಲೆಯ ಕೆಲವು ವಿದ್ಯಾರ್ಥಿಗಳು ಹರತಾಳವನ್ನಾಚರಿಸಬೇಕೆಂದು ಏರ್ಪಾಟುಗಳನ್ನು ಮಾಡಿಕೊಂಡ ಸುಮಾರು 30 ವಿದ್ಯಾರ್ಥಿಗಳು ಶಾಲೆಯ ಮುಂಭಾಗದ ಪಾರ್ಕಿನಲ್ಲಿ ಕುಳಿತ್ತಿದ್ದರು. ಇಷ್ಟರಲ್ಲೇ ಶಾಲೆಯ ಉಪಾಧ್ಯಾಯರು ವಿದ್ಯಾರ್ಥಿಗಳಿಗೆ ಸಮಧಾನ ಹೇಳಿ, ಮನಒಲಿಸಿ ಶಾಲೆಗೆ ಕರೆದುಕೊಂಡು ಹೋದರು. ಆದರೂ ಸಹ ಸುಮಾರು 100 ವಿದ್ಯಾರ್ಥಿಗಳು 2 ಘಂಟೆಯ ನಂತರ ಮುಷ್ಕರ ಹಿಡಿದು ಮೆರವಣಿಗೆಯ ಮೂಲಕ ಶಾಂತಿಯಿಂದ ಮಾಧ್ಯಮಿಕ ಶಾಲೆಯವರೆಗೆ ಜೈಕಾರದೊಂದಿಗೆ ಹೋದರು. ಆದರೆ ಸಾರ್ವತ್ರಿಕ ಹರತಾಳ ನಡೆಸಲು ವಿದ್ಯಾರ್ಥಿಗಳಿಗೆ ಸಾಧ್ಯವಾಗಿಲ್ಲಾ. ನಂತರ ನಗರದ ಪ್ರಮುಖ ಬೀದಿಗಳಲ್ಲಿ

ತ್ರಿವರ್ಣ ಧ್ವಜದೊಂದಿಗೆ ಮೆರವಣಿಗೆ ನಡೆಸಿದರು. ಇದಾದನಂತರ ಮಾಧ್ಯಮಿಕ ಹಾಗೂ ಪ್ರೌಢಶಾಲೆಗಳಿಗೆ ಮೂರು ದಿನಗಳ ರಜೆ ನೀಡಲಾಯಿತು. ಇದೇ ಸಂದರ್ಭದಲ್ಲಿ ಮಂಡ್ಯ ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳಾದ ಎಂ.ಆರ್.ಎಸ್.ಶಾಸ್ತ್ರಿಗಳನ್ನು ಬಂಧಿಸಿ ಮೈಸೂರಿಗೆ ಕರೆದುಕೊಂಡು ಹೋಗಲಾಯಿತು. ಈ ಘಟನೆಯಿಂದ ಪೌರಸಭೆಯ ಕಾಂಗ್ರೆಸ್ ಪಕ್ಷದ ಸದಸ್ಯರು ರಾಜೀನಾಮೆ ನೀಡುವುದಾಗಿ ತಿಳಿಸಿದರು[121]. ಮಂಡ್ಯ ಪ್ರೌಢಶಾಲೆಯ ವಿದ್ಯಾರ್ಥಿಗಳು ಆಗಸ್ಟ್ 19 ರಿಂದ ಶಾಲೆಯ ತರಗತಿಗಳಿಗೆ ಬರುವುದನ್ನು ನಿಲ್ಲಿಸಿದರು. ಆ ದಿನ 227 ವಿದ್ಯಾರ್ಥಿಗಳಲ್ಲಿ 173 ವಿದ್ಯಾರ್ಥಿಗಳು ಶಾಲೆಗೆ ಹಾಜರಾಗಿದ್ದರು. 18–08–1942 ಹಾಗೂ 19–08–1942 ರಂದು ರಾಮನಗರ (ಕ್ಲೋಸ್ ಪೇಟೆ) ಮತ್ತು ಚನ್ನಪಟ್ಟಣಗಳಿಂದ ಸುಮಾರು 300 ವಿದ್ಯಾರ್ಥಿಗಳು ರೈಲಿನಿಂದ ಮದ್ದೂರಿಗೆ ಬಂದು ಮೈಸೂರು ಕಾಂಗ್ರೆಸ್‌ನ ಪ್ರಮುಖ ಹೋರಾಟಗಾರರನ್ನು ಬಂಧಿಸಿದ್ದನ್ನು ವಿರೋಧಿಸಿ ಮೆರವಣಿಗೆ ನಡೆಸಿದರು. ಹರತಾಳ ನಡೆಸುವಂತೆ ಅಂಗಡಿಯವರನ್ನು ಒತ್ತಾಯ ಮಾಡಿದರು. 22–08–1942 ರಂದು ಮದ್ದೂರು ತಾಲ್ಲೂಕಿನ ಗ್ರಾಮಗಳಾದ ಕೆಸ್ತೂರು, ಆತಗೂರು, ದೇವಲಾಪುರ, ಅಗಳಕೋಟೆಯಲ್ಲಿ ವಿದ್ಯಾರ್ಥಿಗಳು ಹಾಗೂ ಸತ್ಯಾಗ್ರಹಿಗಳು ಹೆಂಡದ ಅಂಗಡಿಗಳನ್ನು ಹಾನಿಗೊಳಿಸಿದರು[122].

ತರುವಾಯ ಇದಕ್ಕೆ ಪ್ರತಿಕ್ರಿಯೆಯಾಗಿ 23–08–1942 ರಂದು ಮದ್ದೂರಿನಲ್ಲಿ ನ್ಯಾಯ ವಿಧಾಯಕ ಸಭೆಯ ಉಪಾಧ್ಯಕ್ಷ ಎಂ.ಸಿ.ಲಿಂಗೇಗೌಡರ ಅಧ್ಯಕ್ಷತೆಯಲ್ಲಿ ರಾಜನಿಷ್ಠರ ಸಭೆ ನಡೆಯಿತು. ಕೆ.ಪುಟ್ಟಯ್ಯ, ಎಸ್.ಸಿ.ಮಲ್ಲಯ್ಯ, ಕೊಪ್ಪದಜೋಗೀಗೌಡ, ಪಿ.ಶಿವಲಿಂಗಯ್ಯ, ಎಂ.ಎಸ್. ಶ್ರೀನಿವಾಸಶೆಟ್ಟಿ, ಮೊಹಮ್ಮದ್‌ಫಕ್ರುದ್ದೀನ್, ವಿ.ಎಸ್.ಗುಂಡೂರಾವ್, ಚಿಕ್ಕೇಗೌಡ, ನಾಡಗೌಡ, ಜವರಾಯಿಗೌಡ ಸಭೆಯಲ್ಲಿ ಹಾಜರಿದ್ದು ಹನ್ನೊಂದು ಜನ ಸಹಿ ಮಾಡಿ 'ರಾಜನಿಷ್ಠೆ'ಯನ್ನು ಪ್ರಕಟಿಸಿದರು. 18–08–1942 ಹಾಗೂ 19–08–1942 ಕ್ಕೆ ಚನ್ನಪ್ಪಟ್ಟಣ, ರಾಮನಗರಗಳಿಂದ ಬಂದ ವಿದ್ಯಾರ್ಥಿಗಳು ಕೆಸ್ತೂರು, ಆತಗೂರು ಸರಕಾರಿ ಶಾಲೆಗಳ ಕಟ್ಟಡಗಳಿಗೂ, ಶೆಟ್ಟಿಹಳ್ಳಿಯ ತಂಬಾಕು ಉಗ್ರಾಣಕ್ಕೂ ಜಖಂ ಮಾಡಿದ್ದರೆಂದು, ಮದ್ದೂರಿನಲ್ಲಿ ದೌರ್ಜನ್ಯ ನಡೆಸಿದರೆಂದು ಹೇಳಿಕೆ ನೀಡಿ ಈ ವಿದ್ಯಾರ್ಥಿಗಳ ವರ್ತನೆಯನ್ನು ಖಂಡಿಸುವ ಹಾಗೂ ಮಹಾರಾಜರಿಗೆ ನಿಷ್ಠೆ ಪ್ರದರ್ಶಿಸುವ ನಿರ್ಣಯವನ್ನು ಮಾಡಲಾಯಿತು. ಎಸ್.ಸಿ. ಮಲ್ಲಯ್ಯ ಹಾಗೂ ಎಂ.ಎಸ್. ಶ್ರೀನಿವಾಸಶೆಟ್ಟಿ ಭಾಷಣ ಮಾಡಿದರು[123].

ಮೈಸೂರು ಸಂಸ್ಥಾನದ ಪ್ರತಿಯೊಂದು ಗ್ರಾಮಗಳಲ್ಲೂ ಕ್ವಿಟ್ ಇಂಡಿಯಾ ಚಳುವಳಿಯ ಪ್ರಚಾರದ ಅವಶ್ಯಕತೆ ಇದೆ ಎಂಬುದನ್ನು ಮನಗಂಡು ಎಂ.ವಿ. ಕೃಷ್ಣಪ್ಪ ಅವರ ನಾಯಕತ್ವದಲ್ಲಿ ಸುಮಾರು 600 ವಿದ್ಯಾರ್ಥಿಗಳು ಟಿಕೆಟ್ ಇಲ್ಲದೆ ರೈಲುಗಳಲ್ಲಿ ಪ್ರಯಾಣ ಮಾಡುತ್ತಾ ಮಂಡ್ಯ, ಅರಸೀಕೆರೆ, ಹೊಳೆನರಸೀಪುರ, ಹಾಸನಕ್ಕೆ ಭೇಟಿ

ನೀಡಿದ್ದರು[124]. ಮಂಡ್ಯದ ಪೊಲೀಸಿನವರು ಸಕ್ಕರೆ ಕಾರ್ಖಾನೆ ಮತ್ತು ರಾಸಾಯನಿಕ ಕಾರ್ಖಾನೆಯಲ್ಲಿ ಸಂಪು ನಡೆಸಲು ಪ್ರಚೋದಿಸಿದ ಆರೋಪದ ಮೇಲೆ ಹೆಚ್. ಸಿದ್ದರಾಮಯ್ಯನೆಂಬ ಕಾಂಗ್ರೆಸ್ ಕೆಲಸಗಾರರನ್ನು ಬಂಧಿಸಿ ಶ್ರೀರಂಗಪಟ್ಟಣದ ಜೈಲಿನಲ್ಲಿಟ್ಟರು. ಹಾಗೂ ಡಿಸ್ಟ್ರಿಕ್ಟ್ ಬೋರ್ಡ್ ಸದಸ್ಯರಾದ ಕೆ.ಎಂ. ಕೃಷ್ಣಪ್ಪಗೌಡರೆಂಬುವರನ್ನು ಕರಡಹಳ್ಳಿಯಲ್ಲಿ ದಸ್ತಗಿರಿ ಮಾಡಿ ಮೈಸೂರು ಸಬ್ ಜೈಲಿನಲ್ಲಿಟ್ಟರು[125]. ಆಗಸ್ಟ್ 26, 1942 ರಂದು ಮೈಸೂರು ಜೈಲಿನಲ್ಲಿದ್ದ 26 ಮಂಡ್ಯ ಜಿಲ್ಲೆಯ ಸ್ಥಾನಬದ್ಧರನ್ನು ಬೆಂಗಳೂರು ಸೆಂಟ್ರಲ್ ಜೈಲಿಗೆ ಸ್ಥಳಾಂತರಿಸಿದರು. ಹೀಗೆ ಸ್ಥಳಾಂತರಗೊಂಡವರಲ್ಲಿ ಪ್ರಮುಖರೆಂದರೆ. ಹೆಚ್.ಕೆ. ವೀರಣ್ಣಗೌಡ (ಮದ್ದೂರು), ಶ್ರೀರಂಗಪಟ್ಟಣ ತಾಲ್ಲೂಕು ಅರಕೆರೆ ಎ.ಜಿ. ಬಂದೀಗೌಡ, ಎಂ.ಆರ್.ಎನ್. ಶಾಸ್ತ್ರೀ (ಮಂಡ್ಯ), ಪಿ.ಎನ್. ಜವರಪ್ಪಗೌಡ (ಮಂಡ್ಯ) ಶ್ರೀರಂಗಪಟ್ಟಣ ತಾಲ್ಲೂಕು ಅರಕೆರೆ ಎಂ.ಸಿ. ಮಾದೇಗೌಡ[126].

ಕ್ವಿಟ್ ಇಂಡಿಯಾ ಚಳುವಳಿ ಸಂದರ್ಭದಲ್ಲಿ ಬಂಧಿಸಿದ ಸತ್ಯಾಗ್ರಹಿ ಮುಖಂಡರನ್ನೆಲ್ಲಾ ಒಂದೇ ಕಡೆ ಇಟ್ಟರೆ ಜೈಲಿನಲ್ಲೂ ಗಲಾಟೆ ಮಾಡಬಹುದೆಂದು ಜೈಲು ಅಧಿಕಾರಿಗಳಿಗೆ ಭಯ. ಹೀಗಾಗಿ ಅವರನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ವರ್ಗಾಯಿಸುತ್ತಿದ್ದರು. ದೈಹಿಕವಾಗಿ ಮಾನಸಿಕವಾಗಿ ಬಳಲಿ, ಆರೋಗ್ಯ ಕೆಟ್ಟು ನಿರುತ್ಸಾಹಿಗಳಾಗುವರೆಂದು ಅಧಿಕಾರಿಗಳು ನಂಬಿದ್ದರು. ಬೆಂಗಳೂರು ಸೆಂಟ್ರಲ್ ಜೈಲಿನಿಂದ ಕೆಂಗಲ್ ಹನುಮಂತಯ್ಯನವರನ್ನು ಜೊತೆಯಲ್ಲಿ ಮಳವಳ್ಳಿ ವೀರಪ್ಪ ಅವರನ್ನು ಶಿವಮೊಗ್ಗ ಜೈಲಿಗೆ ರವಾನಿಸಿದರು. ಅಲ್ಲಿಂದ ಹಾಸನ ನಂತರ ಶ್ರೀರಂಗಪಟ್ಟಣ ಸಬ್ ಜೈಲಿಗೆ ವರ್ಗಾಯಿಸಿದರು. ಶ್ರೀರಂಗಪಟ್ಟಣದ ಸಬ್ ಜೈಲಿನಲ್ಲಿ 90 ಮಂದಿ ನಿರ್ಬಂಧಿತ (dentenues) ರಿದ್ದರು. ಅವರುಗಳನ್ನು ವಿಚಾರಣೆಯಿಲ್ಲದೆ, ಭಾರತ ರಕ್ಷಣಾ ಕಾನೂನಿನ 26ನೇ ನಿಯಮದ ಆಧಾರದ ಮೇಲೆ ಬಂಧಿತರಾಗಿದ್ದರು. ಕೆಂಗಲ್ ಹನುಮಂತಯ್ಯ ಜೈಲಿನಲ್ಲಿದ್ದಾಗ, ಬಂಧಿತರಾಗಿದ್ದ ಸತ್ಯಾಗ್ರಹಿಗಳಲ್ಲಿ ಮಂಡ್ಯ ಜಿಲ್ಲೆಗೆ ಸೇರಿದವರೆ ಹೆಚ್ಚು. ಅದರಲ್ಲಿ ಪ್ರಮುಖ ಸತ್ಯಾಗ್ರಹಿಗಳೆಂದರೆ. ಎಸ್.ಎನ್. ಶಾಸ್ತ್ರಿ, ಅರಕೆರೆಯ ಎ.ಸಿ. ಮಾದೇಗೌಡ, ಶ್ರೀರಂಗಪಟ್ಟಣದ ವಕೀಲರೂ ಮಂಡ್ಯ ಡಿಸ್ಟ್ರಿಕ್ಟ್ ಬೋರ್ಡ್ ಉಪಾಧ್ಯಕ್ಷರೂ ಆದ ಕೆಂಪೇಗೌಡ, ಮಳವಳ್ಳಿ ವೀರಪ್ಪ, ವೈ.ಸಿ. ಮರಿಯಪ್ಪ, ಮದ್ದೂರಿನ ಎಚ್.ಕೆ. ವೀರಣ್ಣಗೌಡ, ಟಿ. ಮರಿಯಪ್ಪ, ಅರಕೆರೆ ಪುಟ್ಟೇಗೌಡ, ಲಿಂಗೇಗೌಡ, ಪಾಲಗ್ರಹಾರದ ಜವರಪ್ಪಗೌಡ, ಹೊಸಹಳ್ಳಿಯ ಲಿಂಗಯ್ಯ, ಪಾಲಗ್ರಹಾರದ ನರಸಿಂಹಯ್ಯ ಕೋಟೇಗೌಡ ಮುಂತಾದವರು[127].

25ನೇ ಆಗಸ್ಟ್ 1942 ರಂದು ಮೈಸೂರು ಕಾಲೇಜಿನ 150 ವಿದ್ಯಾರ್ಥಿಗಳ ತಂಡ ಮಧ್ಯಾಹ್ನ 3–30 ಘಂಟೆಗೆ ಮಂಡ್ಯಕ್ಕೆ ಭೇಟಿ ನೀಡಿದರು. ರೈಲ್ವೆ ಸ್ಟೇಷನ್‌ನಿಂದ

ಮೆರವಣಿಗೆಯಲ್ಲಿ ಹೊರಟು ಜಯಕಾರಗಳನ್ನು ಕೂಗಿದರು. ಸಾಯಂಕಾಲ ಜ್ಯೂಬಿಲಿ ಪಾರ್ಕ್‌ನಲ್ಲಿ ಸಭೆ ಸೇರಿ ಶಾಂತ ರೀತಿಯಲ್ಲಿ ಮರಳಿದರು[128]. 28ನೇ ಆಗಸ್ಟ್ 1942 ರಂದು ಪಾಂಡವಪುರ ತಾಲೂಕಿನ ಮೇಲುಕೋಟೆಯಲ್ಲಿ ಸತ್ಯಾಗ್ರಹಿಗಳು, ವಿದ್ಯಾರ್ಥಿಗಳು ಮೆರವಣಿಗೆ ನಡೆಸಿ ಸ್ಥಳೀಯ ಶಾಲೆಯ ಕಟ್ಟಡ ಮತ್ತು ಸೇಂದಿ ಅಂಗಡಿಯನ್ನು ಜಖಂಗೊಳಿಸಿದರು. ಈ ಸಂಬಂಧವಾಗಿ ನಾಲ್ವರ ಬಂಧನವಾಯಿತು[129].

ಮೈಸೂರು ಸಂಸ್ಥಾನದಲ್ಲಿ ಸತ್ಯಾಗ್ರಹಿಗಳು ವಿದ್ಯಾರ್ಥಿಗಳು ರೈಲುಗಳಲ್ಲಿ ಟಿಕೆಟ್ ಇಲ್ಲದೇ ಪ್ರಯಾಣ ಮಾಡುವುದು, ರೈಲು ಮಾರ್ಗವನ್ನು ಜಖಂಗೊಳಿಸುವುದು, ಇವೇ ಮೊದಲಾದ ಬುಡಮೇಲು ಕೃತ್ಯಗಳನ್ನು ಆರಂಭಿಸಿದರು. ಮೈಸೂರು ಸಂಸ್ಥಾನದ ರೈಲುಗಳ ಜನರಲ್ ಮ್ಯಾನೇಜರ್ ಆಗಸ್ಟ್ 28 ರಂದು ಉಲ್ಲೇಖಿಸಿರುವಂತೆ ಟೆಲಿಗ್ರಾಫಿಕ್ ಸಂಪರ್ಕವು ಮುರಿದು ಬಿದ್ದುದರಿಂದ ರೈಲು ಸಾರಿಗೆಯು ಅಸ್ತವ್ಯಸ್ಥವಾದ ಬಗ್ಗೆ ವಿಷಾದ ಸೂಚಿಸಿದರು. ಮದ್ರಾಸ್ ಸರ್ಕಲ್‌ನಲ್ಲಿ ಎಲ್ಲೆಡೆ ತಂತಿಗಳನ್ನು ಕತ್ತರಿಸಲಾಯಿತು. ಆಗಸ್ಟ್ 18 ರಿಂದ ಬೆಂಗಳೂರಿನಿಂದ ರಾತ್ರಿ ಹೊರಡುವ ಮೇಲ್ ಟ್ರೇನನ್ನು ರದ್ದುಗೊಳಿಸಲಾಯಿತು. ಆಗಸ್ಟ್ 23ರ ಒಂದು ಆಜ್ಞೆ ಪ್ರಕಾರ ಮೈಸೂರು ಸರಕಾರವು ರೈಲು ರಕ್ಷಣೆಗಾಗಿಯೇ ಒಬ್ಬ ಅಸಿಸ್ಟೆಂಟ್ ಕಮೀಷನರ್‌ರನ್ನು ಮೊದಲ ದರ್ಜೆಯ ಮ್ಯಾಜಿಸ್ಟ್ರೇಟ್ ಆಗಿ ರೈಲ್ವೆ ಭೂಆಸ್ತಿ ಹಾಗೂ ಮೈಸೂರು ಸಂಸ್ಥಾನದಲ್ಲಿರುವ ಸೇನೆಯ ಮೇಲ್ವಿಚಾರಣೆಗಾಗಿಯೇ ನೇಮಿಸಲಾಯಿತು[130].

ಈ ರೀತಿಯಾಗಿ ಮಂಡ್ಯ ಜಿಲ್ಲೆಯಾದ್ಯಂತ ಮಹಾತ್ಮಗಾಂಧೀಜಿಯವರು ಕರೆ ನೀಡಿದ ನಂತರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಪ್ರಮುಖ ಮೈಸೂರು ಕಾಂಗ್ರೆಸ್ ಮುಖಂಡರನ್ನು ಬಂಧಿಸಿದಾಗ ಹರತಾಳವನ್ನು ಆಚರಿಸುವುದು, ರೈಲು ಮಾರ್ಗವನ್ನು ಜಖಂಗೊಳಿಸುವುದು, ಶಾಲೆಗಳನ್ನು ಬಹಿಷ್ಕರಿಸುವುದು, ಹೀಗೆ ಪ್ರತಿಯೊಂದು ಹಂತದಲ್ಲಿ ಆಗಸ್ಟ್ ತಿಂಗಳು ಅಂತ್ಯಕ್ಕೆ ಸಂಪೂರ್ಣವಾಗಿ ಜಿಲ್ಲೆಯ ಜನರು, ರೈತರು, ಕಾರ್ಮಿಕರು, ಮಹಿಳೆಯರು, ವಿದ್ಯಾರ್ಥಿಗಳು ಪ್ರತಿಕ್ರಿಯಿಸಿ ಚಳುವಳಿಯಲ್ಲಿ ಭಾಗವಹಿಸಿದ್ದರು.

ಸೆಪ್ಟಂಬರ್ 1942ರಿದ 1943 ರ ಆಗಸ್ಟ್ ತಿಂಗಳ ಅವಧಿಯಲ್ಲಿ ಕ್ವಿಟ್ ಇಂಡಿಯಾ ಚಳುವಳಿಯು ವ್ಯವಸ್ಥಿತವಾಗಿ ನಡೆಯಿತು. ಪ್ರತಿದಿನ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಮುಖಂಡರು ತಮ್ಮ ತಮ್ಮ ಗ್ರಾಮಗಳಲ್ಲಿ ಸಭೆ–ಮೆರವಣಿಗೆಗಳನ್ನು ನಡೆಸುತ್ತಿದ್ದರು. ಸತ್ಯಾಗ್ರಹಿಗಳು ಸಭೆಯನ್ನು ಸಂಘಟಿಸಿ, ಕಾನೂನು ಭಂಗ ಮಾಡಿ ಬಂಧನಕ್ಕೊಳಗಾಗುತ್ತಿದ್ದರು. ಶಾಲಾ ಕಾಲೇಜುಗಳಿಗೆ ವಿದ್ಯಾರ್ಥಿಗಳು ತೆರಳದೆ ಬಹಿಷ್ಕಾರವನ್ನು ಮುಂದುವರಿಸಿದರು ಹಾಗೂ ಸರ್ಕಾರಿ ಕಚೇರಿಗಳಿಗೆ ಯಾರೂ ಹೋಗುತ್ತಿರಲಿಲ್ಲ. ಕಾಂಗ್ರೆಸ್ ನಾಯಕರು ಶಾಲೆಗಳನ್ನು ಮುಚ್ಚಿಸುವುದು, ಬಹಿಷ್ಕಾರ,

[illegible]

ಸರ್ಕಾರಿ ಕಟ್ಟಡಗಳಿಗೆ ಬೆಂಕಿ ಹಚ್ಚಿ ಸುಟ್ಟು ಹಾಕುವುದು, ಹೆಂಡದ ಅಂಗಡಿ ಎದುರು ಪಿಕೆಟಿಂಗ್ ನಡೆಸುವುದು, ಟೆಲಿಗ್ರಾಫ್ ತಂತಿಗಳನ್ನು ಕತ್ತರಿಸುವುದು ಇವೇ ಮೊದಲಾದ ಕಾರ್ಯಕ್ರಮಗಳನ್ನು ರೂಪಿಸಿಕೊಂಡರು. ಶಾಲಾ–ಕಾಲೇಜು ವಿದ್ಯಾರ್ಥಿಗಳು, ಅಧ್ಯಾಪಕರುಗಳು ತರಗತಿಗಳಿಂದ ಹೊರಗೆ ಬಂದು ತ್ರಿವರ್ಣ ಧ್ವಜವನ್ನು ಹುಮ್ಮಸ್ಸಿನಿಂದ ನಿಂದ ಹಾರಿಸಿದರು. ಜನರಲ್ಲಿ ಸ್ವಾತಂತ್ರ್ಯದ ಬಗ್ಗೆ ಜಾಗೃತಿ ಮೂಡಿಸಿದರು. ಸ್ವಾತಂತ್ರ್ಯದ ಬಗ್ಗೆ ಹಿರಿಯ ನಾಯಕರಿಂದ ಮುಷ್ಕರದ ಕರೆ ಬಂದಾಗ ಪ್ರತಿಭಟನೆಗಳು ನಡೆಯುತ್ತಿದ್ದವು. ಕೆಲವು ಸಾರಿ ಶಾಲಾ ಅಧ್ಯಾಪಕರು ಪ್ರಚೋದಿಸಿ, ಪ್ರೋತ್ಸಾಹ ನೀಡುತ್ತಿದ್ದರು. 1942ರ ಸೆಪ್ಟೆಂಬರ್ ತಿಂಗಳಲ್ಲಿ ಕ್ವಿಟ್ ಇಂಡಿಯಾ ಚಳುವಳಿಯು ಮಂಡ್ಯ ಜಿಲ್ಲೆಯ ಪ್ರತಿಯೊಂದು ತಾಲ್ಲೂಕುಗಳಿಗೂ ವಿಸ್ತಾರಗೊಂಡಿತು. 1942 ರ ಸೆಪ್ಟೆಂಬರ್ 2 ರಂದು ಮಂಡ್ಯ ಪುರಸಭೆಯ ಪ್ರೌಢಶಾಲೆಯಲ್ಲಿ ಸುಮಾರು 70 ವಿದ್ಯಾರ್ಥಿಗಳು ಮಂಡ್ಯದಲ್ಲಿ ಮೆರವಣಿಗೆ ನಡೆಸಿದರು. ಸೆಪ್ಟೆಂಬರ್ 3 ರಂದು ಪುರಸಭೆಯ ಪ್ರೌಢಶಾಲೆಯಲ್ಲಿ 277 ವಿದ್ಯಾರ್ಥಿಗಳ ಪೈಕಿ 195 ವಿದ್ಯಾರ್ಥಿಗಳು ಶಾಲೆಗೆ ಹಾಜರಿದ್ದರು. ಸೆಪ್ಟೆಂಬರ್ 3 ರಂದು ಬೆಳಿಗ್ಗೆ ಸುಮಾರು 90 ವಿದ್ಯಾರ್ಥಿಗಳು ಶಾಲೆಗೆ ಹೋಗದೆ ಮುಷ್ಕರ ಹಿಡಿದು ಪಾರ್ಕಿನಲ್ಲಿ ಸಭೆ ಸೇರಿ ನಂತರ ಕಾಂಗ್ರೆಸ್ ಧ್ವಜದೊಡನೆ ಊರಿನ ಮುಖ್ಯ ಬೀದಿಗಳಲ್ಲಿ ಜೈಕಾರದೊಡನೆ ಶಾಂತ ರೀತಿಯಿಂದ ಮೆರವಣಿಗೆ ನಡೆಸಿದರು[131].

ವಿದ್ಯಾರ್ಥಿಗಳು ಮೆರವಣಿಗೆಯ ನಂತರ ವಿದ್ಯಾರ್ಥಿ ಸಂಘದ ಕಾರ್ಯದರ್ಶಿಗಳಾದ ಇ.ಎಸ್. ರೆಡ್ಡಿಯವರ ಹೇಳಿಕೆ ನೀಡುತ್ತಾ ಸರ್ಕಾರದವರು ಮುಷ್ಕರದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳ ಮೇಲೆ ನಡೆಸಿದ ವರ್ತನೆಯನ್ನು ಖಂಡಿಸಿದರು. ರಾಷ್ಟ್ರೀಯ ಮುಖಂಡರುಗಳನ್ನು ಬಿಡುಗಡೆ ಮಾಡಿ, ಅವರೊಡನೆ ಸರ್ಕಾರದವರು ಸಂಧಾನಕ್ಕೆ ಸಿದ್ಧರಾಗಬೇಕು, ಶಾಲೆಯ ವಿದ್ಯಾರ್ಥಿ ವೇತನವನ್ನು ತಡೆಹಿಡಿಯದೆ ಪುನಃ ನೀಡಬೇಕೆಂದು ಹೇಳಿಕೆ ನೀಡಿದರು. ಸೆಪ್ಟೆಂಬರ್ 3, 1942 ರಂದು ಪಾಂಡವಪುರ ತಾಲ್ಲೂಕಿನ ಮೇಲುಕೋಟೆಯ ಶಾಲೆಯ ಕಚೇರಿಯ ಕೊಠಡಿಯನ್ನು ಸತ್ಯಾಗ್ರಹಿಗಳು ಸುಟ್ಟುಹಾಕಿದರು[132].

1942ರ ಸೆಪ್ಟೆಂಬರ್ 4 ರಂದು ನಾಗಮಂಗಲ ಮಾಧ್ಯಮಿಕ ಶಾಲೆಯ ನಾಲ್ವರು ವಿದ್ಯಾರ್ಥಿಗಳನ್ನು ಬಂಧಿಸಲಾಯಿತು. ಸೆಪ್ಟೆಂಬರ್ 6 ರಂದು ನಾಗಮಂಗಲ ತಾಲ್ಲೂಕಿನ ಕೋಟೆಬೆಟ್ಟ ಎಂಬ ಊರಿನಲ್ಲಿ ಹೆಂಡದ ಅಂಗಡಿ ಎದುರು ನಾಗಮಂಗಲ ಶಾಲೆಯ ಕೆಲವು ವಿದ್ಯಾರ್ಥಿಗಳು ಪಿಕೆಟಿಂಗ್ ನಡೆಸಿದರು[133]. ತರುವಾಯ ನಾಗಮಂಗಲದಲ್ಲಿ ಸೆಪ್ಟೆಂಬರ್ 6, 1942 ರಂದು ರಾಜನಿಷ್ಠರ ಸಭೆಯು ಎಂ.ಸಿ. ಲಿಂಗೇಗೌಡರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಯಲ್ಲಿ ಅಬ್ದುಲ್‌ರಹೀಂ, ಎ.ಎನ್. ಶಂಕರಯ್ಯ, ಅಬ್ದುಲ್ ಅಜೀಜ್ ಮುಂತಾದವರು ಮಾತನಾಡಿದರಲ್ಲದೆ "ಮಹಾರಾಜರ ಸಿಂಹಾಸನ ಮತ್ತು

[illegible]

ವ್ಯಕ್ತಿತ್ವಕ್ಕೆ ತಮ್ಮ ಗಾಢವಾದ ನಿಷ್ಠೆ"ಯನ್ನು ಪ್ರಕಟಿಸಿ, ಬುಡಮೇಲು ಕೃತ್ಯಗಳನ್ನು ಉಗ್ರವಾಗಿ ಖಂಡಿಸಿ ಠರಾವುಗಳನ್ನು ಪಾಸ್ ಮಾಡಲಾಯಿತು. ಈ ಬಗ್ಗೆ ಎಂ.ಸಿ. ಲಿಂಗೇಗೌಡರು ಮುಖ್ಯ ಕಾರ್ಯದರ್ಶಿಗಳಿಗೆ 06–09–1942 ರಂದು ಪತ್ರವನ್ನು ಸಹ ಬರೆದು ತಿಳಿಸಿದರು[134].

ಕ್ವಿಟ್ ಇಂಡಿಯಾ ಚಳುವಳಿ ಆರಂಭದಲ್ಲಿ ಮಹಾತ್ಮ ಗಾಂಧೀಜಿಯವರ ಬಂಧನವಾದ ತರುವಾಯ ಒಂದು ತಿಂಗಳಾದ ನಂತರ ದೇಶದಾದ್ಯಂತ ಬಂಧನದ ಮಾಸಿಕ ದಿನವನ್ನು ಸತ್ಯಾಗ್ರಹಿಗಳು ಆಚರಿಸಿದರು. ಈ ಪ್ರಕಾರ ಮಂಡ್ಯ ಜಿಲ್ಲೆಯಲ್ಲಿ ಸೆಪ್ಟೆಂಬರ್ 9 ಕ್ಕೆ ಆಚರಣೆಯ ಸಿದ್ಧತೆಯಲ್ಲಿರುವಾಗ ಸೆಪ್ಟೆಂಬರ್ 8 ಕ್ಕೆ ಪ್ರಚಾರ ನಿರತರಾದ ಕೆಂಪಯ್ಯ ಮತ್ತು ವೆಂಕಟಗಿರಿಯಪ್ಪ ಅವರನ್ನು ಮಂಡ್ಯದಲ್ಲಿ ಬಂಧಿಸಲಾಯಿತು[135]. ಇದೇ ಸಂದರ್ಭಕ್ಕೆ ಒಂದು ತಿಂಗಳಿಂದ ಭೂಗತರಾಗಿ ಚಳುವಳಿಯಲ್ಲಿ ನಿರತರಾಗಿದ್ದ ಎಚ್.ಕೆ. ವೀರಣ್ಣಗೌಡರು ಹಾಗೂ 08.09.1942 ರಂದು ಪಾಲಹಳ್ಳಿಯ ಸೀತಾರಾಮಯ್ಯನವರನ್ನು ದಸ್ತಗಿರಿ ಮಾಡಲಾಯಿತು[136].

ಮಂಡ್ಯ ಜಿಲ್ಲೆಯ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರಾದ ಎಚ್.ಕೆ. ವೀರಣ್ಣಗೌಡ, ಪಿ.ಎನ್. ಜವರಪ್ಪಗೌಡ, ಎ.ಜಿ. ಬಂದೀಗೌಡ, ನಾಗಮಂಗಲದ ಎಂ.ಆರ್.ಎನ್. ಶಾಸ್ತ್ರಿ, ಹೆಚ್. ಸಿದ್ದರಾಮಯ್ಯ, ಕೆಂಪಯ್ಯ ಬಂಧನವಾದ ನಂತರ ಎಂ. ಪುಟ್ಟೇಗೌಡರ ನೇತೃತ್ವದಲ್ಲಿ ಮಂಡ್ಯದಲ್ಲಿ ಹರತಾಳ ಆಚರಿಸುವ ಸಭೆಯನ್ನು ಸಂಘಟಿಸಿದ್ದರು. ತಮ್ಮ ಇತರ ಸಹಚರರ ಬಂಧನವಾದ ನಂತರ ಎಂ. ಪುಟ್ಟೇಗೌಡರು ಮಂಡ್ಯವನ್ನು ತ್ಯಜಿಸಿ ಬನ್ನೂರಿಗೆ ಹೋಗಿ ತಿರುಮಕೂಡಲು ನರಸೀಪುರ, ಬೀಡನಹಳ್ಳಿ, ಅತ್ತಳ್ಳಿ, ತೋಪನಕೊಪ್ಪಲು, ಬೇವಿನಹಳ್ಳಿ, ರಂಗಸಮುದ್ರ, ಹಿಟ್ಟುಹಳ್ಳಿ, ಇತ್ಯಾದಿ ಊರುಗಳಲ್ಲಿ ಕ್ವಿಟ್ ಇಂಡಿಯಾ ಚಳುವಳಿಯ ಪ್ರಚಾರ ಕಾರ್ಯವನ್ನು ನಡೆಸಿದರು[137].

ಮಳವಳ್ಳಿ ತಾಲ್ಲೂಕಿನಲ್ಲಿ ಸಹ ಸತ್ಯಾಗ್ರಹಿಗಳು ಚಳುವಳಿಯನ್ನು ತೀವ್ರಗೊಳಿಸಿದರು. ಮಳವಳ್ಳಿಯಲ್ಲಿನ ಹೆಂಡದಂಗಡಿಗೆ ನುಗ್ಗಿ ದಾಳಿ ಮಾಡಿ ಹೆಂಡವನ್ನೆಲ್ಲಾ ಸುರಿದು ಹೆಂಡದ ಅಂಗಡಿಯೇ ಮುಚ್ಚುವಂತೆ ಮಾಡಿದರು. ಪ್ರೌಢಶಾಲಾ ವಿದ್ಯಾರ್ಥಿಗಳು ನಡೆಸಿದ ಮುಷ್ಕರದಲ್ಲಿ ಹಲಗೂರು ರಾಮಚಂದ್ರೇಗೌಡ, ಕಂಚನಹಳ್ಳಿ ಭೀಮಯ್ಯ, ಎಂ.ವಿ. ಪುಟ್ಟಸ್ವಾಮಿ ಜೈಲುವಾಸ ಅನುಭವಿಸಿದರು. 08–09–1942 ರಂದು ಮಳವಳ್ಳಿಯಲ್ಲಿ ಮುಷ್ಕರ ನಡೆಸುತ್ತಿದ್ದ ನಾಲ್ಕು ಪ್ರೌಢಶಾಲಾ ವಿದ್ಯಾರ್ಥಿಗಳನ್ನು ಬಂಧಿಸಲಾಯಿತು[138].

10ನೇ ಸೆಪ್ಟೆಂಬರ್ 1942 ರಂದು ಮಂಡ್ಯದಲ್ಲಿ ವಿದ್ಯಾರ್ಥಿಗಳು ಶಾಲೆಗೆ ಹೋಗದೆ ತ್ರಿವರ್ಣ ಧ್ವಜದೊಡನೆ ಊರಿನ ಮುಖ್ಯ ಬೀದಿಗಳಲ್ಲಿ ಜೈಕಾರದೊಡನೆ

ಮೆರವಣಿಗೆ ನಡೆಸಿದರು. ಅಂದು ನಡೆದ ಮೆರವಣಿಗೆಯಲ್ಲಿ ಹಾಜರಿದ್ದವರ ಸಂಖ್ಯೆ 80 ವಿದ್ಯಾರ್ಥಿಗಳು ಶಾಲೆಯ ಹಾಜರಾತಿಯು ಅಲ್ಪವಾಯಿತು. ತ್ರಿವರ್ಣ ಧ್ವಜವನ್ನು ಮಂಡ್ಯ ಪ್ರೌಢಶಾಲೆಯ ಮೇಲೆ ಹಾರಿಸಲು ಯತ್ನಿಸಿದ ನಾಲ್ವರು ವಿದ್ಯಾರ್ಥಿಗಳನ್ನು 10-09-1942 ರಂದು ಬಂಧಿಸಲಾಯಿತು[139]. ದಿನಾಂಕ : 11-09-1942 ರಂದು 274 ವಿದ್ಯಾರ್ಥಿಗಳ ಪೈಕಿ ಹಾಜರಿದ್ದವರ ಸಂಖ್ಯೆ ಕೇವಲ – 68. ಇದೇ ಸಂದರ್ಭದಲ್ಲಿ ನಾಗಮಂಗಲದ ಪೊಲೀಸರು ಡಿಫೆನ್ಸ್ ಆಫ್ ಇಂಡಿಯಾ ಕಾನೂನಿನ ಪ್ರಕಾರ ಪ್ರಮುಖ ಹೋರಾಟಗಾರರನ್ನು ದಸ್ತಗಿರಿ ಮಾಡಿದರು. ಅವರಲ್ಲಿ ಪ್ರಮುಖರಾದವರೆಂದರೆ ನ್ಯಾಯ ವಿಧಾಯಕ ಸಭೆ ಹಾಗೂ ಮಂಡ್ಯ ಜಿಲ್ಲಾ ಬೋರ್ಡಿನ ಸದಸ್ಯರಾದ ಕೆ.ಎಂ. ಕೃಷ್ಣಪ್ಪಗೌಡ ಮತ್ತು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾದ ಗೋವಿಂದಗೌಡರನ್ನು ಬಂಧಿಸಿ, ಮೈಸೂರು ಸಬ್ ಜೈಲಿಗೆ ಕರೆದುಕೊಂಡು ಹೋದರು[140].

ಮೈಸೂರು ಸಂಸ್ಥಾನದಲ್ಲಿ ನಡೆದ ಕ್ವಿಟ್ ಇಂಡಿಯಾ ಚಳುವಳಿಯ ಒಂದು ಸ್ವಾರಸ್ಯದ ಅಂಶವೆಂದರೆ 'ಕರನಿರಾಕರಣೆ ಚಳುವಳಿಯ ಸಂಕೇತವಾಗಿ ಸಂತೆ ಸುಂಕವನ್ನು ಕೊಡಲು ನಿರಾಕರಿಸಲು ಆರಂಭಿಸಿದ ಕಾರ್ಯಕ್ರಮ'. ಇದು ಗ್ರಾಮೀಣ ಕೇಂದ್ರಗಳಲ್ಲಿ ಆರಂಭವಾಯಿತು. ಕನ್ನಡದ ಪ್ರಖ್ಯಾತ ಲೇಖಕರಾದ ಗೊರೂರು ರಾಮಸ್ವಾಮಿ ಅಯ್ಯಂಗಾರರು ಹೇಳಿರುವಂತೆ ಮೈಸೂರು ಸಂಸ್ಥಾನದ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಪಾನನಿರೋಧ ಮತ್ತು ಸಂತೆ ಸುಂಕ ಪ್ರತಿಭಟನೆ ಇವು ಅತಿಮುಖ್ಯವಾದ ಹಾಗೂ ಅತಿ ವ್ಯಾಪಕವಾದ ಚಟುವಟಿಕೆಗಳಾಗಿದ್ದವು. ಸಂತೆ ಸುಂಕ ಪ್ರತಿಭಟನೆ ಎಂದು ಒಂದು ತಲೆ ಹೊರೆ ಭಾರದ ಕೃಷಿ ಉತ್ಪನ್ನವನ್ನೋ ತನ್ನ ಕಸುಬಿಗನುಗುಣವಾಗಿ ಉತ್ಪಾದಿಸಿದ ವಸ್ತುವನ್ನೋ ಒಂದು ಸ್ಥಳದಿಂದ ಸಂತೆಗೆ ಹೊತ್ತುತಂದು ಮಾರಾಟ ಮಾಡುವುದಕ್ಕೆ ಮೊದಲೇ ಸಂತೆ ಸುಂಕವನ್ನು ಪಾವತಿ ಮಾಡುವುದಾಗಿತ್ತು. ಮೈಸೂರು ಕಾಂಗ್ರೆಸ್ ಪ್ರಕಟಿಸುತ್ತಿದ್ದ ಭೂಗತಪತ್ರ 'ಫ್ರೀ ಇಂಡಿಯಾ ಗೆಜೆಟ್'ನ 19-10-1942ರ ಅಂಕಣದಲ್ಲಿ ಉಲ್ಲೇಖಿಸಿದಂತೆ ಭೂಕಂದಾಯದ ಪಾವತಿ ಮಾಡುವ ಕಾಲಾವಧಿ ಜೂನ್ 1942 ರಲ್ಲಿ ಮೈಸೂರು ಸಂಸ್ಥಾನದ ಪ್ರತಿಯೊಂದು ಜಿಲ್ಲೆಯು ಸೇರಿದಂತೆ ಒಟ್ಟು 50 ಕಡೆಗಳಲ್ಲಿ ನಡೆಯುವ ಸಂತೆಗಳನ್ನು ಗುರುತಿಸಿ, ಆಡಳಿತದವರು ಗೊತ್ತುಪಡಿಸಿದ ಸ್ಥಳಗಳಲ್ಲಿ ವಾರದ ಸಂತೆಯು ಸೇರದಂತೆ ಮಾಡಿ ಸಮೀಪದ ಬೇರೊಂದು ತಾಣದಲ್ಲಿ ಅದು ನೆರೆಯುವಂತೆ ಏರ್ಪಡಿಸಬೇಕು, ಸುಂಕ, ರುಸುಮುಗಳನ್ನು ಪಾವತಿ ಮಾಡುವ ಕಿರಿಕಿರಿಯಿಂದ ಈ ತಾಣವು ಮುಕ್ತವಾಗಿರಬೇಕು.

ಮಂಡ್ಯ ಜಿಲ್ಲೆಯಲ್ಲೂ ಸಂತೆಗಳ ಪಿಕೆಟಿಂಗ್ 1942ರ ಸೆಪ್ಟೆಂಬರ್ ತಿಂಗಳಲ್ಲಿ ಆರಂಭವಾಯಿತು. ಕೆ.ಆರ್. ಪೇಟೆ ತಾಲ್ಲೂಕಿನಲ್ಲಿ ವಿಧ್ವಂಸಕೃತ್ಯಗಳು ಹೆಚ್ಚಾಗಿದ್ದವು. ಕಿಕ್ಕೇರಿ ಮತ್ತು ಆನಗೊಳದಲ್ಲಿ ನಡುವೆ ಸೆಪ್ಟೆಂಬರ್ 19ರ ರಾತ್ರಿ ಟೆಲಿಗ್ರಾಫ್ ತಂತಿ

ಕತ್ತರಿಸಿ, ನಾಲ್ಕು ಕಂಬಗಳನ್ನು ಕಿತ್ತು ಹಾಕಲಾಗಿತ್ತು. ಕೆ.ಆರ್. ಪೇಟೆ ಚನ್ನರಾಯಪಟ್ಟಣ ರಸ್ತೆಯಲ್ಲಿ 100 ಅಡಿಯಷ್ಟು ಟೆಲಿಗ್ರಾಫ್ ತಂತಿಯನ್ನು 21-09-1942 ರಂದು ಕಿತ್ತು ಹಾಕಲಾಗಿತ್ತು[141]. 21-09-1942 ರಂದು ಕೆ.ಆರ್. ಪೇಟೆ ತಾಲ್ಲೂಕಿನ ತೆಂಡೇಕರೆಯಲ್ಲಿ ಸಂತೆಯ ಪಿಕೆಟಿಂಗ್ ನಡೆಯಿತು. 28-09-1942 ರಂದು ಪಿಕೆಟಿಂಗ್ ನಡೆಸುತ್ತಿದ್ದ 8 ಜನರನ್ನು ಬಂಧಿಸಲಾಯಿತು. ಸೆಪ್ಟೆಂಬರ್ 28 ರ ಬಂಧನದ ನಂತರವೂ ಅಕ್ಟೋಬರ್ 5 ಕ್ಕೆ ತೆಂಡೇಕೆರೆಯಲ್ಲಿ ಪಿಕೆಟಿಂಗ್ ಇನ್ನೂ ಉಗ್ರವಾಗಿ ನಡೆಯಿತು. ಪೊಲೀಸರ ಸಂಖ್ಯೆ ಸಾಕಷ್ಟು ಇರದಿದ್ದುದರಿಂದ ಯಾರನ್ನು ಬಂಧಿಸಲಿಲ್ಲ[142]. ಅಂದು ಮೈಸೂರಲ್ಲಿ ಮೆಟ್ರಿಕ್ ವಿದ್ಯಾರ್ಥಿಯಾಗಿದ್ದ ಎಸ್.ಎಲ್. ಸತ್ಯನಾರಾಯಣ ಅವರು 6-10-1942 ರಂದು ಶ್ರವಣಬೆಳಗೊಳದ ಸಂತೆಯಲ್ಲಿ ಪಿಕೆಟಿಂಗ್ ಆಚರಿಸುವ ಮುನ್ನ ಕೆ.ಆರ್. ಪೇಟೆ ತಾಲ್ಲೂಕಿನ ಬೂಕನಕೆರೆಯಲ್ಲಿ ಪಿಕೆಟಿಂಗ್ ಆಚರಿಸಿದರು. ಮನೆಯಲ್ಲಿ ಕೆರೆ ಕಡೆ ಹೋಗುತ್ತೇನೆಂದು ಹೇಳಿ ತಮ್ಮ ಸ್ನೇಹಿತರಾದ ಸುಕುಮಾರ, ರಾಜೇಂದ್ರ, ವಸಂತಕುಮಾರರೊಂದಿಗೆ ಸಂತೆಯಲ್ಲಿ ಸುಂಕ ನೀಡದಂತೆ ಪ್ರಚಾರ ಭಾಷಣ ಮಾಡಿದರು[143].

ಕೆ.ಆರ್. ಪೇಟೆ ತಾಲ್ಲೂಕಿನಲ್ಲಿ ಆರಂಭವಾದ ಸಂತೆಯ ಪಿಕೆಟಿಂಗ್ ಪ್ರಭಾವ ಪಾಂಡವಪುರ ತಾಲ್ಲೂಕು (ಅಂದಿನ ಫ್ರೆಂಚ್ ರಾಕ್ಸ್) ಮೇಲೆ ಸಹ ಬೀರಿತು. ದಿನಾಂಕ : 08-10-1942 ರಂದು ಪಾಂಡವಪುರದಲ್ಲೂ ಸಂತೆಯ ಪಿಕೆಟಿಂಗ್ ನಡೆಸಲಾಯಿತು. ಕ್ಯಾತನಹಳ್ಳಿ, ಲಕ್ಷ್ಮೀಸಾಗರ, ಇನಾಂಹಿರೇಹಳ್ಳಿಯ ಜನ ಕ್ರಿಯಶೀಲರಾಗಿ ಪಾಲ್ಗೊಂಡಿದ್ದರು. ವಸ್ತುಗಳನ್ನು ಮಾರಾಟ ಮಾಡಲು ಸಂತೆಗೆ ಬಂದ ಮಾರಾಟಗಾರರು ಸುಂಕ ಕೊಡಲು ನಿರಾಕರಿಸಿದರು. ಸುಮಾರು 1000 ರಿಂದ 1500 ಜನ ಸಂತೆಯಲ್ಲಿ ಸೇರಿದ್ದರು ಹಾಗೂ ಪಿಕೆಟಿಂಗ್‌ಗೆ ಬೆಂಬಲ ಸೂಚಿಸಿದರು. ಈ ಸಂಬಂಧ 10 ಜನರನ್ನು ಬಂಧಿಸಲಾಯಿತು. ಪರಿಸ್ಥಿತಿಯನ್ನು ನಿಭಾಯಿಸುವುದು ಕಷ್ಟವಾಗುತ್ತಿದೆ ಎಂದು ಪೊಲೀಸ್ ಅಧಿಕಾರಿಯು 50 ಪೊಲೀಸರನ್ನು ಒಳಗೊಂಡ ಒಂದು ತುಕಡಿ (ಚಲನ ಪಡೆ)ಯನ್ನು ಕಳುಹಿಸಬೇಕೆಂದು ಮೈಸೂರು ಪೊಲೀಸ್‌ನ ಮುಖ್ಯ ಕಾರ್ಯದರ್ಶಿಗೆ ಮನವಿ ಪತ್ರ ಕಳಿಸಿದರು[144].

15-10-1942 ರಂದು ಸಂತೆಯ ಕಾಲಕ್ಕೆ ಪಾಂಡವಪುರದಲ್ಲಿ ಪಿಕೆಟಿಂಗ್ ನಡೆಸಿದ 25 ಜನರನ್ನು ಬಂಧಿಸಲಾಯಿತು. ಈ ಸಮಯದಲ್ಲಿ ಪಾಂಡವಪುರದಲ್ಲಿ ಮದ್ಯವನ್ನು ಚೆಲ್ಲಿ ಮಧ್ಯದ ಅಂಗಡಿಗೆ ಬೆಂಕಿ ಇಟ್ಟು ಸುಟ್ಟುಹಾಕಲಾಯಿತು. ಸಂತೆಗೆ ಬಂದವರಿಗೆ ಸಂತೆ ಸುಂಕ ಕೊಡದಂತೆ ಜನಗಳಲ್ಲಿ ಪ್ರಚಾರ ಮಾಡಿ ಸಂತೆ ಸುಂಕ ವಸೂಲಾಗದಂತೆ ಮಾಡಲಾಯಿತು. ವೈ.ಸಿ. ಮರಿಯಪ್ಪನವರ ಅಧ್ಯಕ್ಷತೆಯಲ್ಲಿ ಮುನಿಸಿಪಲ್ ಕಚೇರಿಯ ಎದುರು ಸಾರ್ವಜನಿಕ ಸಭೆಯನ್ನು ನಡೆಸಲಾಯಿತು.

ಲಕ್ಷ್ಮೀಸಾಗರದ ಚೆಲುವೇಗೌಡ ಈ ಚಟುವಟಿಕೆಯಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಈ ಪಿಕೆಟಿಂಗ್ ಚಟುವಟಿಕೆಗಳನ್ನು ನಿಯಂತ್ರಿಸಲು ಅರಮನೆಯ ಕಾಲ್ದಳದ 33 ಜನರ ಪಡೆಯೊಂದನ್ನು ಪಾಂಡವಪುರಕ್ಕೆ ಕಳಿಸಲಾಯಿತು[145]. ಅಕ್ಟೋಬರ್ ತಿಂಗಳ ಅಂತ್ಯದಲ್ಲಿ ದೇಶದಲ್ಲಿ ಕ್ವಿಟ್ ಇಂಡಿಯಾ ಚಳುವಳಿಯ ಮುಷ್ಕರ ಪರಿಸ್ಥಿತಿಯು ಒಂದೇ ಸಮನಾಗಿತ್ತು. ಅನೇಕ ಕಡೆ ಬಂಧನಗಳಾಗುತ್ತಿದ್ದವು. ಶಾಲೆಗಳಲ್ಲಿ ವಿದ್ಯಾರ್ಥಿಗಳ ಹಾಜರಾತಿಯು ಅಲ್ಪವಾಗಿತ್ತು. ಅಧಿಕಾರಿಗಳು, ಕೂಲಿಕಾರರು, ಮುಖಂಡರನ್ನು ಕೆಲವೊಮ್ಮೆ ಕೆಲಸದಿಂದ ವಜಾ ಮಾಡಲಾಯಿತು[146]. ಮಹಾತ್ಮ ಗಾಂಧೀಜಿಯವರ ಬಂಧನದ ನಂತರ ಅಕ್ಟೋಬರ್ ತಿಂಗಳ ಅಂತ್ಯಕ್ಕೆ ಮೈಸೂರು ಸಂಸ್ಥಾನದಲ್ಲಿ ಒಟ್ಟು 189 ಜನರು ದಸ್ತಗಿರಿಯಾಗಿದ್ದರು[147].

ನವೆಂಬರ್ ಎರಡನೆಯ ವಾರದಲ್ಲಿ ಮೈಸೂರು ಸಂಸ್ಥಾನದ ಎಲ್ಲ ಮುಖ್ಯ ಭೂಗತ ಕಾರ್ಯಕರ್ತರ ಒಂದು ಸಭೆಯು ಬೆಂಗಳೂರಿನ ಬಸವನಗುಡಿ ಬಳಿಯ ಪುಟ್ಟೇನಹಳ್ಳಿಯಲ್ಲಿರುವ ಬುದ್ಧದಾಸ ಅವರ ತೋಟದಲ್ಲಿ ನಡೆಯಿತು. ಎ.ಜಿ. ರಾಮಚಂದ್ರರಾವ್, ನಿಟ್ಟೂರು ಶ್ರೀನಿವಾಸರಾವ್, ಎಚ್.ಎಸ್. ಸೀತಾರಾಮ, ಎಚ್.ಎಸ್. ದೊರೆಸ್ವಾಮಿ, ಕೊಟ್ರೆ ನಂಜಪ್ಪ, ವಿ. ಭೀಮಪ್ಪ, ವೈ.ವಿ. ರಾಮಚಂದ್ರ, ಎಂ.ಎಚ್. ಷಾ, ಪ್ರೀತಂ ಚಂದ್ ಷಾ, ಎಂ.ಆರ್. ವೆಂಕಟರಾಮಯ್ಯ, ಕೆ. ದೇವಯ್ಯ, ಬುದ್ಧದಾಸ, ಪುಟ್ಟೇಗೌಡ ಮತ್ತು ಕೆ.ವಿ. ವಸಂತಯ್ಯ ಪ್ರಮುಖ ಮುಖಂಡರುಗಳು ಭಾಗವಹಿಸುವುದು ಹಾಗೂ ಮೈಸೂರು ಸಂಸ್ಥಾನದ ಜಿಲ್ಲೆಗಳಾದ ಮಂಡ್ಯ, ಮೈಸೂರು, ಹಾಸನ, ಬೆಂಗಳೂರು, ಕೋಲಾರ, ತುಮಕೂರು, ಶಿವಮೊಗ್ಗ, ಚಿಕ್ಕಮಗಳೂರು, ಚಿತ್ರದುರ್ಗ ಜಿಲ್ಲೆಗಳಿಂದ ಒಟ್ಟು 200 ಜನ ಕಾರ್ಯಕರ್ತರು ಭಾಗವಹಿಸಿದ್ದರು. ಚಳುವಳಿಯನ್ನು ಬಲಪಡಿಸಬೇಕೆಂದು ನಿರ್ಣಯವನ್ನು ಕೈಗೊಂಡರು. ಆದರೆ ಅನೇಕ ನಾಯಕರು ಶೀಘ್ರವೇ ಬಂಧನಕ್ಕೆ ಒಳಪಟ್ಟಿದ್ದರಿಂದ ಕ್ವಿಟ್ ಇಂಡಿಯಾ ಚಳುವಳಿ ನಿಧಾನವಾಯಿತು[148].

ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯವನ್ನು ಗಳಿಸಲು ಹಾಗೂ ಜನ ಸಮುದಾಯದಲ್ಲಿ ಜಾಗೃತಿ ಮೂಡಿಸಲು 09–11–1942 ರಂದು ಪ್ರಕಟಿಸಿದ ಬುಲೆಟಿನ್‌ನಲ್ಲಿ "ಹೋಗೋಣ ಹಳ್ಳಿಗೆ" ಎಂದು ಕರೆ ನೀಡಿದ್ದನ್ನು ತಿಳಿಸುತ್ತದೆ. ಅಂದು ಮೈಸೂರು ಮಹಾರಾಜ ಕಾಲೇಜಿನಲ್ಲಿ ಅಧ್ಯಯನ ನಡೆಸುತ್ತಿದ್ದ ಮೇಲುಕೋಟೆಯ ವಿದ್ಯಾರ್ಥಿಗಳು ಜಾಗೃತಿ ಮೂಡಿಸಲು ಚಳುವಳಿಯಲ್ಲಿ ಭಾಗವಹಿಸಿದ್ದರು. ಅಂದು ಮೈಸೂರು ಮಹಾರಾಜ ಕಾಲೇಜಿನ ಹಾಗೂ ಇಂಟರ್ ಮಿಡಿಯೆಟ್ ಕಾಲೇಜಿನಲ್ಲಿ ಅಧ್ಯಯನವನ್ನು ನಡೆಸುತ್ತಿದ್ದ ಮೇಲುಕೋಟೆಯ ಕೆ. ಶ್ರೀನಿವಾಸ ಅಯ್ಯಂಗಾರ್, ಕೆ.ಎಸ್. ಶಾಮಣ್ಣ (ಖಾದ್ರಿ), ಎಂ.ಎನ್. ಶಿವರಾಮು ತಮ್ಮ ಕಾಲೇಜಿನ ಅಧ್ಯಯನವನ್ನು ತ್ಯಜಿಸಿ ಪಾಂಡವಪುರ ತಾಲ್ಲೂಕಿನ ಮೇಲುಕೋಟೆಗೆ ಬಂದು ನೆಲೆಸಿದರು. ಮೇಲುಕೋಟೆ

ಹಾಗೂ ನೆರೆಯ ಗ್ರಾಮಗಳಲ್ಲಿ ಕ್ವಿಟ್ ಇಂಡಿಯಾ ಚಳುವಳಿಯ ಪ್ರಚಾರ ಕಾರ್ಯ ನಡೆಸಿದರು. ಪೊಲೀಸರು ಬೆದರಿಸಿದರೂ ಕೂಡಾ ಜನರು ಇವರು ಕೈಗೊಂಡ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಹೆದರಲಿಲ್ಲ. ಮೇಲುಕೋಟೆ ಶಾಲೆಯ ವಿದ್ಯಾರ್ಥಿಗಳನ್ನು ಶಾಲೆಯನ್ನು ತ್ಯಜಿಸಿ ಸಭೆಗಳಲ್ಲಿ ಪಾಲ್ಗೊಳ್ಳುವಂತೆ ಮನವೊಲಿಸಿದರು ಹಾಗೂ ನಂಬೀಯರ್ ಸನ್ನಿಧಿ ಬಳಿ ಸಭೆ ನಡೆಸುತ್ತಿದ್ದರು. ಮದ್ಯದ ಮಾರಾಟದ ವಿರುದ್ಧ ಪಿಕೆಟಿಂಗ್ ನಡೆಸಿದರು. ಮದ್ಯದಂಗಡಿಯನ್ನು ಸುಟ್ಟುಹಾಕಿದರು[149].

ಡಿಸೆಂಬರ್ ತಿಂಗಳ ಎರಡನೇ ವಾರದಲ್ಲಿ ಮೈಸೂರು ಇಂಟರ್ ಮೀಡಿಯೆಟ್ ಕಾಲೇಜು ವಿದ್ಯಾರ್ಥಿಯಾದ ಶಾಮಣ್ಣ ಎಂಬುವವರನ್ನು ಶ್ರೀರಂಗಪಟ್ಟಣದಲ್ಲಿ ಪೊಲೀಸರು ದಸ್ತಗಿರಿ ಮಾಡಿದರು[150]. ಇದೇ ಸಮಯದಲ್ಲಿ ಎರಡನೆಯ ಮಹಾಯುದ್ಧದ ಯುದ್ಧ ನಿಧಿ (ವಾರ್ ಫಂಡ್)ಗೆ ಬೆಂಬಲ ಸೂಚಿಸಲು ಮೇಲುಕೋಟೆಯಲ್ಲಿ ಸಂಘಟಿಸುತ್ತಿದ್ದ ಸರಕಾರ ಪರ ಸಭೆಯನ್ನು ವಿರೋಧಿಸಿ ಶ್ರೀನಿವಾಸ ಅಯ್ಯಂಗಾರ್ ಹಾಗೂ ಎಂ.ಎನ್. ಶಿವರಾಮು ಅವರು ಪ್ರತಿಭಟನಾ ಭಾಷಣವನ್ನು ಮಾಡಿದರು. ಪ್ರತಿಭಟನಾ ಭಾಷಣಕ್ಕೆ ರಾಜದ್ರೋಹ ಆಪಾದನೆ ಮೇಲೆ 15–12–1942 ರಂದು ಬಂಧಿಸಲಾಯಿತು. ಶ್ರೀರಂಗಪಟ್ಟಣ ನ್ಯಾಯಾಲಯದಿಂದ ದಂಡನೆಗೆ ಒಳಪಡಿಸಿದರು. ನಂತರ ವಿದ್ಯಾರ್ಥಿಗಳಿಗೆ ಸಾರ್ವತ್ರಿಕ ಆಜ್ಞೆಯಂತೆ 26–12–1942 ರಂದು ಸೆರಮನೆಯಿಂದ ಬಿಡುಗಡೆಯಾದರು[151].

26–01–1943 ರಂದು ಮಂಡ್ಯ ತಾಲ್ಲೂಕು ಕಚೇರಿಯ ಆವರಣದಲ್ಲಿ ಕೃಷ್ಣರಾಜಪೇಟೆ ತಾಲ್ಲೂಕಿನ ಓರ್ವ ಕಾಂಗ್ರೆಸ್ಸಿಗ ಶಾಂತಪ್ಪನವರು ಈಸೂರು ಘಟನೆ ಸಂಬಂಧಿಸಿದಂತೆ ಮುದ್ರಿತ ಕರಪತ್ರಗಳೊಂದಿಗೆ ಪ್ರಚಾರ ಮಾಡುತ್ತಿದ್ದನು. ಮೈಸೂರಿನ ಗೌರವಾನ್ವಿತ ಮಹಾರಾಜರ ಗಮನಸೆಳೆಯಲು ತಾಲ್ಲೂಕು ಕಚೇರಿಯ ಆವರಣದಲ್ಲಿದ್ದ ಜನರಿಂದ ಸಹಿ ಸಂಗ್ರಹಿಸುತ್ತಿದ್ದನು. ಇದೇ ಸಂದರ್ಭದಲ್ಲಿ ಮದ್ದೂರಿನ ತಿರುಮಲಗೌಡ ಭವಿಷ್ಯದಲ್ಲಿ ಇನ್ನು ಮುಂದೆ ಯಾವುದೇ ವಿಧ್ವಂಸಕ ಕಾರ್ಯದಲ್ಲಿ ಪಾಲ್ಗೊಳ್ಳುವುದಿಲ್ಲ ಎಂದು ಮಂಡ್ಯದ ಮ್ಯಾಜಿಸ್ಟ್ರೇಟರ್ ಮುಂದೆ ಭರವಸೆ ನೀಡಿದರು. ಈ ಹಿನ್ನೆಲೆಯಲ್ಲಿ ತಿರುಮಲಗೌಡರ ವಿರುದ್ಧದ ಬಾಹ್ಯ ಆದೇಶ ನೀಡಿ ಮಂಡ್ಯ ಮ್ಯಾಜಿಸ್ಟ್ರೇಟರು ಹಿಂದಕ್ಕೆ ಪಡೆದರು[152]. 27–01–1943 ರ ಬೆಳಿಗ್ಗೆ ಮಳವಳ್ಳಿ ಪ್ರೌಢಶಾಲೆಯ 25 ವಿದ್ಯಾರ್ಥಿಗಳು ಮಳವಳ್ಳಿಯಲ್ಲಿ ಪಟ್ಟಣದ ಮಾರುಕಟ್ಟೆ ಬೀದಿಯಲ್ಲಿ ಕಾಂಗ್ರೆಸ್ ಧ್ವಜದೊಂದಿಗೆ ಮೆರವಣಿಗೆ ಮಾಡಿದರು. ನಂತರ ಪ್ರೌಢಶಾಲೆಯ ಮುಂದಿರುವ ಮೈದಾನದಲ್ಲಿ ಸಭೆ ಸೇರಿ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಿದರು. ರಾಷ್ಟ್ರ ಹಾಡು 'ವಂದೇ ಮಾತರಂ' ಹಾಡಿದರು[153].

ಕ್ವಿಟ್ ಇಂಡಿಯಾ ಚಳುವಳಿ ಸಂದರ್ಭದಲ್ಲಿ ಹೆಚ್.ಸಿ. ದಾಸಪ್ಪನವರ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಿದ್ದಕ್ಕೆ ಅವರನ್ನು ಬಂಧಿಸಿ ಶಿವಮೊಗ್ಗ ಜೈಲಿನಿಂದ ವರ್ಗಾವಣೆ ಮಾಡಿ ಮಂಡ್ಯದ ಸೆರಮನೆಯಲ್ಲಿಡಲಾಯಿತು. ಹೆಚ್.ಸಿ. ದಾಸಪ್ಪನವರು ಮಂಡ್ಯದಲ್ಲಿ ಜೈಲುವಾಸವನ್ನು ಅನುಭವಿಸುತ್ತಿದ್ದಾಗ ಪೂನಾ ಬಳಿ ಆಗ ತಾನೆ ಅರಮನೆಯ ಸೆರೆಮನೆಯಲ್ಲಿದ್ದ ಕಸ್ತೂರಿ ಬಾ ಗಾಂಧೀ ತೀರಿಕೊಂಡರು. ಮಹಾತ್ಮ ಗಾಂಧೀಜಿಯವರ 'ಕ್ವಿಟ್ ಇಂಡಿಯಾ' ಘೋಷಣೆ ದೇಶದಲ್ಲಿ ಅಸಹಕಾರ ಚಳುವಳಿಗೆ ಕಾರಣವಾಯಿತು. ಅಹಿಂಸಾತ್ಮಕ ಚಳುವಳಿ ಹಿಂಸಾತ್ಮಕ ರೂಪವನ್ನು ತಾಳಿತು. ಜನರು ಹಿಂಸಾತ್ಮಕ ಮಾರ್ಗ ಹಿಡಿಯಲು ಗಾಂಧೀಜಿಯವರು ಕಾರಣವೆಂದು ವೈಸರಾಯ್ ಆಪಾದಿಸಿದರು. ಗಾಂಧೀಜಿಯವರಿಗೆ ಅಪಾರ ನೋವುಂಟು ಮಾಡಿತು. ಅದಕ್ಕಾಗಿ ಉಪವಾಸ ಮಾಡಿ ದೇಹವನ್ನು ದಂಡಿಸಲು ನಿಶ್ಚಯಿಸಿದರು. 10–02–1943 ರಿಂದ 3 ವಾರಗಳ ಉಪವಾಸ ಪ್ರಾರಂಭವಾಯಿತು. ಬ್ರಿಟಿಷರ ಬಂಧನದಲ್ಲೇ ಗಾಂಧೀಜಿ ಉಪವಾಸಕ್ಕೆ ತೊಡಗಿದುದರಿಂದ ಚಳುವಳಿ ಮತ್ತಷ್ಟು ತೀವ್ರಗೊಂಡಿತು[154].

ಮಹಾತ್ಮ ಗಾಂಧೀಜಿಯವರು ಉಪವಾಸವನ್ನು 10–02–1942 ರಿಂದ ಆರಂಭಿಸಿದರು. ಇವರ ಉಪವಾಸದೊಂದಿಗೆ ಹೆಚ್.ಸಿ. ದಾಸಪ್ಪನವರು ಕೂಡ ಮಂಡ್ಯದಲ್ಲಿ ಉಪವಾಸ ಆರಂಭಿಸಿದರು[155]. 10–02–1943 ರಿಂದ 12–02–1943 ರವರೆಗೆ 3 ದಿನಗಳ ಕಾಲ ಹೆಚ್.ಸಿ. ದಾಸಪ್ಪನವರ ಉಪವಾಸವಿದ್ದರು[156].

ಅಂತಿಮವಾಗಿ 18–02–1943 ರಂದು ಮಹಾತ್ಮ ಗಾಂಧೀಯವರಿಗೆ ಶೋಕ ಸಂದೇಶವನ್ನು ಕಳುಹಿಸಲು ಬಯಸಿದರು. ಸೆರೆಮನೆ ಅಧಿಕಾರಿಗಳು ಒಪ್ಪಲಿಲ್ಲ. ಮಹಾತ್ಮರಿಗೆ ಒಂದು ಶೋಕ ಸಂದೇಶವನ್ನು ಕಳುಹಿಸಲು ನಿರಾಕರಿಸಿದ ಜೈಲು ಅಧಿಕಾರಿಗಳ ಧೋರಣೆಯನ್ನು ಪ್ರತಿಭಟಿಸಿದರು. 25–02–1943 ರವರೆಗೂ ಉಪವಾಸವನ್ನು ಮುಂದುವರೆಸಿದರು[157]. ಉಪವಾಸದಿಂದ ಆರೋಗ್ಯದಲ್ಲಿ ಏರುಪೇರಾಗಿದ್ದನ್ನು ಗಮನಿಸಿದ ಅಧಿಕಾರಿಗಳು ಸಂತಾಪ ಸೂಚಕ ಸಂದೇಶವನ್ನು ಕಳುಹಿಸಲು ಒಪ್ಪಿದರು. ಯಶೋಧರಮ್ಮ ದಾಸಪ್ಪನವರು 27–02–1943 ರಂದು ಮಂಡ್ಯದ ಸೆರಮನೆಗೆ ಭೇಟಿ ನೀಡಿ ಮಹಾತ್ಮ ಗಾಂಧೀಜಿಯವರಿಗೆ ಟೆಲಿಗ್ರಾಂ ಸಂದೇಶವನ್ನು ಕಳುಹಿಸಿದರು. ದೇಶಕ್ಕಾಗಿ ಹಾಗೂ ಮಾನವತೆಗೆ ಶ್ರಮಿಸುತ್ತಿರುವ ಗಾಂಧೀಜಿಯವರ ಆರೋಗ್ಯ ಬೇಗ ಚೇತರಿಸಿಕೊಳ್ಳಲಿ ಎಂದು ಸಂದೇಶವನ್ನು ಕಳುಹಿಸಿದರು[158].

ಮದ್ದೂರು ತಾಲ್ಲೂಕಿನ ದೇಶಹಳ್ಳಿ ಗ್ರಾಮದ ಜಿ. ನಾರಾಯಣರವರು ಬೆಳಗಾವಿ ಜಿಲ್ಲೆಯ ಹುದಲಿ ಗ್ರಾಮದ 'ಗಾಂಧೀ ಆಶ್ರಮ' ವಿದ್ಯಾರ್ಥಿಗಳಾಗಿದ್ದರು. 1943ರ ಫೆಬ್ರವರಿ

ಎರಡನೇ ವಾರದಲ್ಲಿ ದೇಶಹಳ್ಳಿಗೆ ಮರಳಿದರು. ನಂತರ ಮಂಡ್ಯದ ಡೆಪ್ಯೂಟಿ ಕಮೀಷನರಿಗೆ ಪತ್ರ ಬರೆದು ಕಾಂಗ್ರೆಸನ್ನು ಪ್ರಚಾರ ಮಾಡುವುದಾಗಿಯೂ ಹಾಗೂ ತನ್ನ ಪ್ರದೇಶದಲ್ಲಿ ಕಾನೂನುಗಳನ್ನು ಮುರಿಯುವುದಾಗಿ ತಿಳಿಸಿದರು. ಇವರು ನಡೆಸುವ ಪ್ರತಿಯೊಂದು ಚಟುವಟಿಕೆ, ಕಾರ್ಯವೈಖರಿ ಮೇಲೆ ಮಂಡ್ಯದ ಡೆಪ್ಯೂಟಿ ಕಮೀಷನರ್‌ರವರು ನಿಗಾ ಇಡಲು ತಿಳಿಸಿದರು[159]. 1943ರ ಫೆಬ್ರವರಿ 20 ರಂದು ಮಂಡ್ಯದ ವರ್ತಕ ಸಂಘದ ಸದಸ್ಯರು ಮಹಾತ್ಮ ಗಾಂಧೀಜಿಯವರನ್ನು ಬಿಡುಗಡೆ ಮಾಡಬೇಕೆಂದು ಮಹಾರಾಜರ ವೈಸರಾಯ್‌ಗೆ ಟೆಲಿಗ್ರಾಂ ಸಂದೇಶವನ್ನು ಕಳುಹಿಸಿದರು. ಫೆಬ್ರವರಿ 21 ರಂದು ಮಂಡ್ಯದಲ್ಲಿ ಹರತಾಳವನ್ನು ಆಚರಿಸಲಾಯಿತು. ಹರತಾಳಕ್ಕೆ ಮಂಡ್ಯದಲ್ಲಿರುವ ಎಲ್ಲಾ ಹಿಂದೂ ಅಂಗಡಿಗಳು ಮುಚ್ಚಿ ಬೆಂಬಲ ಸೂಚಿಸಿದವು[160].

ಪಾಂಡವಪುರ ತಾಲ್ಲೂಕು ಮೇಲುಕೋಟೆಯಲ್ಲಿ 24–02–1943 ರಿಂದ 03–03–1943 ರವರೆಗೆ ಶಿವರಾಂ, ರಾಘವಚಾರಿ ಹಾಗೂ ಇತರ ಬಾಲಕರು ಭಜನೆಯನ್ನು ಆಯೋಜಿಸಿದ್ದರು. ಮಹಾತ್ಮ ಗಾಂಧೀಜಿಯವರ ಉಪವಾಸವನ್ನು ಯಶಸ್ವಿಯಾಗಿ ಪರಿಸಮಾಪ್ತಿಗೊಳಿಸಲೆಂದು ಪ್ರಾರ್ಥಿಸಿದರು. ಗ್ರಾಮದ ಪ್ರವೇಶದ ಕೋಟೆಯ ಪಕ್ಕ ತ್ರಿವರ್ಣ ಧ್ವಜವನ್ನು ಪ್ರತಿನಿತ್ಯ ಹಾರಿಸಿದರು. ಅದರ ಕೆಳಗಡೆ ಗಾಂಧೀಜಿಯವರ ಭಾವಚಿತ್ರವನ್ನಿಡಲಾಗಿತ್ತು. ರಂಗಪ್ಪ ಎಂಬುವವರ ಮನೆಯ ಮೇಲಿನಿಂದ ಧ್ವಜ ಹಾರಿಸಲಾಯಿತು[161].

ಶ್ರೀರಂಗಪಟ್ಟಣದಲ್ಲಿ ಬಂಧಿತರಾಗಿದ್ದ ಕೆ.ಎಸ್. ಬೋರೇಗೌಡರವರನ್ನು ಡೆಪ್ಯೂಟಿ ಕಮೀಷನರ್ 25–02–1943 ರಂದು ಪರೋಲ್ ಮೇಲೆ ಬಿಡುಗಡೆ ಹೊಂದಿದರು[162]. 10–03–1943 ರಂದು ಮಂಡ್ಯದ ಸೆರಮನೆಯಿಂದ ಹೆಚ್.ಸಿ. ದಾಸಪ್ಪನವರ ಪರೋಲ್ ಮೇಲೆ 14 ದಿನ ಮಟ್ಟಿಗೆ ಹೊರಬಂದರು[163]. ಮಂಡ್ಯದ ತೋಟಿಗೌಡ ಹಾಗೂ ಜಿ. ತಿಮ್ಮಯ್ಯ 15 ದಿನಗಳ ಮಟ್ಟಿಗೆ ಪರೋಲ್ ಪಡೆದ ಸೆರಮನೆಯಿಂದ ಹೊರಬಂದರು[164]. ಹೊಂಬೇಗೌಡರವರು 15 ದಿನಗಳ ಮಟ್ಟಿಗೆ ಪರೋಲ್‌ನಿಂದ ಸೆರಮನೆಯಿಂದ ಬಿಡುಗಡೆ ಹೊಂದಿದರು[165]. ಮಂಡ್ಯ ಜಿಲ್ಲಾ ಸಮಿತಿ ಸದಸ್ಯರಾದ ಕೆ.ಎಸ್. ಸಿದ್ದೇಗೌಡರವರು 15 ದಿನ ಮಟ್ಟಿಗೆ ಪರೋಲ್ ಪಡೆದು ಸೆರಮನೆಯಿಂದ ಬಿಡುಗಡೆ ಹೊಂದಿದರು[166]. ಮಳವಳ್ಳಿ ವೀರಪ್ಪನವರಿಗೆ ನೀಡಲಾಗಿದ್ದ ಪರೋಲ್ ಅವಧಿಯನ್ನು ಒಂದು ತಿಂಗಳ ಮಟ್ಟಿಗೆ ಹೆಚ್ಚಿಸಲಾಯಿತು[167].

ದಿನಾಂಕ 3–10–1943 ರಂದು ದಿವಾನರಾದ ಮಿರ್ಜಾ ಇಸ್ಮಾಯಿಲ್‌ರವರು ಪ್ರಜಾಪ್ರತಿನಿಧಿ ಸಭೆಯಲ್ಲಿ ಭಾಷಣ ಮಾಡುತ್ತಾ ಕಳೆದ ವರ್ಷ ನಡೆದ ರಾಜಕೀಯ ಗಲಭೆಗಳ ಸಂಬಂಧ (1942ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ

ನಿರತರಾದವರು)ವಾಗಿ ಕೆಲವರನ್ನು ಬಂಧನದಲ್ಲಿಡುವುದು ಅವಶ್ಯಕವೆಂದು ಸರ್ಕಾರದವರಿಗೆ ಕಂಡು ಬಂದಿತು. ಅದು ಈ ಸಭೆಯ ಸದಸ್ಯರಾದ ತಮಗೆ ತಿಳಿದೇ ಇದೆ. ಪ್ರಜಾ ನೆಮ್ಮದಿಯನ್ನು ಕಾಪಾಡುವ ಸಲುವಾಗಿ ಬಂಧಿಸಿದ್ದು, ಹೆಚ್ಚು ಕಾಲ ಯಾರನ್ನೂ ಬಂಧನದಲ್ಲಿಡಲಾಗದು ಸುಮಾರು 206 ರಾಜಕೀಯ ಬಂಧಿಗಳನ್ನು ಬಿಡುಗಡೆ ಮಾಡಲಾಗುವುದು. ಹಿಂದೆ 1,415 ಮಂದಿ ರಾಜಕೀಯ ಬಂಧಿಗಳಿದ್ದರು. ಅವರು ಸಂಸ್ಥಾನ ಜಿಲ್ಲೆಗಳಾದ ಮಂಡ್ಯ, ಮೈಸೂರು, ಹಾಸನ, ಬೆಂಗಳೂರು, ಚಿತ್ರದುರ್ಗ, ಕೋಲಾರ, ತುಮಕೂರು, ಕಡೂರು ಜಿಲ್ಲೆಗಳಿಗೆ ಸೇರಿದವರಾಗಿದ್ದು, ಈಚೆಗೆ ಅವರಲ್ಲಿ ಅನೇಕ ಬಿಡುಗಡೆಯಾಗಿರುವುದರಿಂದ ಈಗ ಅವರ ಸಂಖ್ಯೆ ಬಹಳ ಕಡಿಮೆಯಿದೆ. ರಾಜಕೀಯ ವಾತಾವರಣವು ಈಗ ತಿಳಿಯಾಗಿರುವುದೇ ಇದಕ್ಕೆ ಕಾರಣವೆಂದು ಹೇಳಿದರು[168].

ಕ್ವಿಟ್ ಇಂಡಿಯಾ ಚಳುವಳಿ ಸಂದರ್ಭದಲ್ಲಿ ಬಂಧಿಸಿದ 1,206 ಜನ ರಾಜಕೀಯ ಬಂಧಿಗಳನ್ನು 05–10–1943 ರಂದು ಬೆಂಗಳೂರಿನ ಸೆಂಟ್ರಲ್ ಜೈಲಿನಿಂದ ಬಿಡುಗಡೆ ಮಾಡಲಾಯಿತು. ಅವರ ಪೈಕಿ ಮೈಸೂರು ಜಿಲ್ಲೆಯಿಂದ 25, ಬೆಂಗಳೂರು ಜಿಲ್ಲೆಯಿಂದ 20, ಮಂಡ್ಯ ಜಿಲ್ಲೆಯಿಂದ 05 ಜನಗಳನ್ನು ಕ್ರಮವಾಗಿ ಬಿಡುಗಡೆ ಮಾಡಲಾಯಿತು. ಮಂಡ್ಯ ಜಿಲ್ಲೆಯ ರಾಜಕೀಯ ಬಂಧಿಗಳಾಗಿದ್ದವರಲ್ಲಿ ಪ್ರಮುಖವಾಗಿ ಪಾಲಹಳ್ಳಿ ಸೀತಾರಾಮಯ್ಯ, ಎಂ. ಶಂಕರಯ್ಯ ಬಿಡುಗಡೆ ಹೊಂದಿದರು[169].

ನಾಗಮಂಗಲ ಪ್ರಮುಖ ಕಾಂಗ್ರೆಸ್ ಮುಖಂಡರರು ಬಿಡುಗಡೆ ಹೊಂದಿದರು. ಎಂ.ಆರ್.ಎನ್. ಶಾಸ್ತ್ರಿ (ನಾಗಮಂಗಲ), ಎಸ್.ಎ. ಸಿದ್ದೇಗೌಡ (ಜಮೀನ್ದಾರರು, ಮಡುವಿನಕೋಡಿ ಹಾಗೂ ಪ್ರಜಾಪ್ರತಿನಿಧಿ ಸಭೆಯ ಸದಸ್ಯರು) ಕೆ.ಎಂ. ಕೃಷ್ಣಪ್ಪಗೌಡ ಜಮೀನ್ದಾರರು ಹಾಗೂ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರು, ಕರಡಹಳ್ಳಿ, ನಾಗಮಂಗಲ ತಾಲ್ಲೂಕು[170].

ಈ ಚಳುವಳಿಯು ಆರಂಭವಾದ ಸಂದರ್ಭದಲ್ಲಿ ಶ್ರೀರಂಗಪಟ್ಟಣದ ಸಿ. ಬಂದೀಗೌಡರು ಮೈಸೂರಿನ ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಎಂ.ಬಿ.ಬಿ.ಎಸ್. ಕೊನೆಯ ವರ್ಷದ ವಿದ್ಯಾರ್ಥಿಯಾಗಿದ್ದರು. ಅನೇಕ ರಾಷ್ಟ್ರೀಯ ನಾಯಕರನ್ನು ಬಂಧಿಸಿ ಸೆರಮನೆಗೆ ತಳ್ಳಿದ ವಿಷಯವನ್ನು ಪತ್ರಿಕೆಗಳಿಂದ ಓದಿ ತಾವು ಈ ಚಳುವಳಿಯಲ್ಲಿ ಸಹಭಾಗಿಗಳಾಗಬೇಕೆಂದು ನಿರ್ಧರಿಸಿದರು. ತಕ್ಷಣ ತಾವು ಅಭ್ಯಾಸ ಮಾಡುತ್ತಿದ್ದ ಕೃಷ್ಣರಾಜೇಂದ್ರ ಆಸ್ಪತ್ರೆಗೆ ತೆರಳಿ ತಮ್ಮ ಸಹಪಾಠಿಗಳೊಂದಿಗೆ ಚರ್ಚಿಸಿ ತಮ್ಮ ತಮ್ಮ ಅಭಿಪ್ರಾಯ ಹಂಚಿಕೊಂಡರು. ಎಲ್ಲರ ಸಹಮತದಂತೆ ಮೊದಲನೇ ಮತ್ತು ಎರಡನೇ ವರ್ಷದ ವಿದ್ಯಾರ್ಥಿಗಳು ಒಂದಾಗಿ ತಮ್ಮ ತಮ್ಮ ತರಗತಿಗಳನ್ನು ತ್ಯಜಿಸಿ ಹರತಾಳ

ಆಚರಿಸಬೇಕೆಂದು ನಿರ್ಣಯಕ್ಕೆ ಬಂದರು[171]. ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳು ಕಾಲೇಜಿಗೆ ಹೋಗದೆ ಮುಷ್ಕರ ನಡೆಸಿ ಮತ್ತು ಬ್ರಿಟೀಷರ ವಿರುದ್ಧ ಘೋಷಣೆಗಳನ್ನು ಹೇಳುತ್ತಾ ಮೆರವಣಿಗೆ ನಡೆಸಿದರು[172].

ಈ ರೀತಿಯಾಗಿ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಮಂಡ್ಯ ಜಿಲ್ಲೆಯಿಂದ ಪಾಲ್ಗೊಂಡಿದ್ದ ಪ್ರಮುಖರೆಂದರೆ ಎಚ್.ಕೆ.ವೀರಣ್ಣಗೌಡ, ಪಿ.ಎನ್.ಜವರಪ್ಪಗೌಡ, ಸಾಹುಕಾರ ಎಸ್.ಚನ್ನಯ್ಯ, ಎ.ಕೆಂಚಪ್ಪ, ಬಿ.ಕೆ.ಪುಟ್ಟೇಗೌಡ, ಮಳವಳ್ಳಿ ವೀರಪ್ಪ, ಮೇಲುಕೋಟೆಯ ಶ್ರೀನಿವಾಸ ಐಯ್ಯಂಗಾರ್, ಪಾಲಹಳ್ಳಿ, ಸೀತಾರಾಮಯ್ಯ, ಮೊದಲಾದವರ ನಾಯಕತ್ವದಲ್ಲಿ ಜಿಲ್ಲೆಯಾದ್ಯಂತ ಎಲ್ಲಾ ಕಡೆಗಳಲ್ಲೂ ವ್ಯಾಪಾಕವಾಗಿ ನಡೆಯಿತು[173]. ಅಲ್ಲದೇ ಮಳವಳ್ಳಿ, ಮಂಡ್ಯ, ಶ್ರೀರಂಗಪಟ್ಟಣ, ನಾಗಮಂಗಲ, ಕೆ.ಆರ್.ಪೇಟೆ, ಮದ್ದೂರು, ಪಾಂಡವಪುರ, ತಾಲ್ಲೂಕುಗಳಲ್ಲಿ ಪ್ರಮುಖ ನಾಯಕರು ಪ್ರಚೋದನಾತ್ಮಕ ಭಾಷಣ ಮಾಡಿ ಜನರು, ವಿದ್ಯಾರ್ಥಿಗಳಲ್ಲಿ ಕಾರ್ಮಿಕರಲ್ಲಿ, ಮಹಿಳೆಯರಲ್ಲಿ ಜಾಗೃತಗೊಳ್ಳುವಂತೆ ಮಾಡಿದರು. ಪ್ರಮುಖ ನಾಯಕರ ಬಂಧನಕ್ಕೆ ಒಳಗಾದ ನಂತರ ನಿರಂತರವಾಗಿ ಎರಡು ವರ್ಷಗಳ ಕಾಲ ಸತ್ಯಾಗ್ರಹಿಗಳಿಂದ ಯಶಸ್ವಿಯಾಗಿ ನಡೆಯಿತು. ಅಂತಿಮವಾಗಿ 1944ರ ವೇಳೆಗೆ ಸತ್ಯಾಗ್ರಹಿಗಳು, ಕಾಂಗ್ರೆಸ್ ಕಾರ್ಯಕರ್ತರನ್ನು ಬಂಧಿಸಿದ ಕಾರಣ ಚಳುವಳಿಗೆ ಹಿನ್ನಡೆಯಾಗಿ ಕ್ವಿಟ್ ಇಂಡಿಯಾ ಚಳುವಳಿ ಅಂತ್ಯಗೊಂಡಿತು.

1947ರ ಮೈಸೂರು ಚಲೋ ಚಳುವಳಿಯಲ್ಲಿ ಮಂಡ್ಯ ಜಿಲ್ಲೆಯ ಪಾತ್ರ

ಚಳುವಳಿಯ ಹಿನ್ನೆಲೆ : 1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕ ನಂತರ ನಡೆದ ಚಳುವಳಿಗಳಲ್ಲಿ ಮೈಸೂರು ಚಲೋ ಚಳುವಳಿ ಪ್ರಮುಖವಾದುದು. ಸ್ವಾತಂತ್ರ್ಯ ಪೂರ್ವ ಭಾರತದಲ್ಲಿ 562 ಸಂಸ್ಥಾನಗಳಲ್ಲಿ ಮೈಸೂರು ಸಂಸ್ಥಾನವೂ ಒಂದು. ಅಂದು ಬ್ರಿಟಿಷರು ಭಾರತವನ್ನು ಆಳುತ್ತಿದ್ದರು. ಅವರು ತಮ್ಮ ಸಹಾಯಕ ಸೈನ್ಯ ಒಪ್ಪಂದಂತೆ ರೆಸಿಡೆಂಟರ್ ಮೂಲಕ ಸಂಸ್ಥಾನಗಳಲ್ಲಿ ಆಳ್ವಿಕೆ ಮಾಡುತ್ತಿದ್ದರು. ಮೈಸೂರು ಸಂಸ್ಥಾನವನ್ನು ಶ್ರೀಮನ್ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಆಳುತ್ತಿದ್ದರು. ಅಂದು ಮಹಾರಾಜರು ಬ್ರಿಟೀಷರ ಅಧೀನದಲ್ಲಿದ್ದರು. ಮೈಸೂರಿನವರಲ್ಲಿ ರಾಜಕೀಯ ಭಕ್ತಿ ಹೆಚ್ಚು, ರಾಜಕೀಯ ಪ್ರಜ್ಞೆ ಕಡಿಮೆ ಎನ್ನುವ ಸ್ಥಿತಿಯಲ್ಲಿತ್ತು. ಹಾಗಾಗಿ ಮೈಸೂರಿನ ಪ್ರಜೆಗಳು ಇಮ್ಮಡಿ ಗುಲಾಮರಾಗಿದ್ದರು[174].

1934ರಲ್ಲಿ ಮಹಾತ್ಮ ಗಾಂಧೀಜಿಯವರ ಮೈಸೂರು ಸಂಸ್ಥಾನಕ್ಕೆ ಭೇಟಿನೀಡಿದ ನಂತರ ಅನೇಕ ರಾಜಕೀಯ ಬದಲಾವಣೆಗಳಾದವು. 1937ರ ಮೇ ತಿಂಗಳಲ್ಲಿ ಸಂಸ್ಥಾನದಲ್ಲೆಲ್ಲಾ, ರಾಜಕೀಯ ಚಳುವಳಿಯನ್ನು ಬಲಪಡಿಸುವ ಉದ್ದೇಶದಿಂದ,

ಸಂಸ್ಥಾನದ ಪ್ರತಿಯೊಂದು ಜಿಲ್ಲಾ ಸಮಿತಿಯ ಪ್ರತಿನಿಧಿಯಿಂದ ಕೂಡಿದ 'ಮೈಸೂರು ಕಾಂಗ್ರೆಸ್ ಬೋರ್ಡ್' ಎಂಬ ಕೇಂದ್ರ ಸಂಸ್ಥೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಲಾಯಿತು. ಟಿ.ಸಿದ್ದಲಿಂಗಯ್ಯನವರು ಅಧ್ಯಕ್ಷರಾಗಿ ನೇಮಕವಾದರು. ಸರಕಾರದ ದಬ್ಬಾಳಿಕೆಯ ನೀತಿಯನ್ನು ಖಂಡಿಸಿ, ನಾಗರಿಕ ಹಕ್ಕು ಬಾಧ್ಯತೆಗೆ ಧಕ್ಕೆ ತಗಲುವುದನ್ನು ಪ್ರತಿಭಟಿಸಲು ಹಾಗೂ ಕಾಂಗ್ರೆಸ್ ಸಂಸ್ಥೆಯನ್ನು ಬಲಪಡಿಸಲು ಕ್ರಿಯಾಸಮಿತಿಯನ್ನು ರಚಿಸಲಾಯಿತು. ಮದ್ದೂರಿನ ವೀರಕೇಸರಿಸೀತಾರಾಮಶಾಸ್ತ್ರೀ, ತಗಡೂರುರಾಮಚಂದ್ರರಾಯ, ವಿ.ಎಸ್.ನಾರಾಯಣರಾಯರು ಸದಸ್ಯರಾಗಿ ಕಾರ್ಯನಿರ್ವಹಿಸಿದರು. ಇಡೀ ಸಂಸ್ಥಾನದಲ್ಲಿ ಸ್ವಾತಂತ್ರ್ಯ ಚಳುವಳಿಯನ್ನು ಚೇತನಗೊಳಿಸುವ ಹಾಗೂ ಸಂಸ್ಥಾನದಲ್ಲಿ ಜವಾಬ್ದಾರಿಯುತ ಸರ್ಕಾರ ಸ್ಥಾಪನೆಯಾಗುವಂತೆ ಕಾರ್ಯಶೀಲವಾಗುವುದು ಈ ಕ್ರಿಯಾ ಸಮಿತಿಯ ಪ್ರಮುಖ ಉದ್ದೇಶವಾಗಿತ್ತು[175].

ಕೌನ್ಸಿಲ್ ಆಫ್ ಆಕ್ಷನ್ ಎಂಬ ಕ್ರಿಯಾ ಸಮಿತಿಯ ಅಧ್ಯಕ್ಷರಾದ ಟಿ.ಸಿದ್ದಲಿಂಗಯ್ಯನವರು ಸ್ವಾತಂತ್ರ್ಯ ಚಳುವಳಿಯ ಅಂಗವಾಗಿ ಕೈಗೊಂಡ ಮೊದಲ ಕಾರ್ಯವೆಂದರೆ ಕಾಂಗ್ರೆಸ್ ಸದಸ್ಯತ್ವವನ್ನು ಬೆಳೆಸುವುದು. ಜನಸಾಮಾನ್ಯರಿಗೂ ಚಳುವಳಿಯಲ್ಲಿ ತೊಡಗಿಸಿಕೊಳ್ಳುವ ಈ ಪ್ರಯೋಗ 'ನಾಲ್ಕಾಣಿ ಸದಸ್ಯತ್ವ' ಎಂದೇ ಪ್ರಸಿದ್ಧವಾಗಿತ್ತು. ಇದಕ್ಕಾಗಿ ಇಡೀ ರಾಜ್ಯದಲ್ಲಿ (ಮೈಸೂರು ಸಂಸ್ಥಾನದ 9 ಜಿಲ್ಲೆಗಳಲ್ಲಿ) ಪ್ರವಾಸ ಕೈಗೊಂಡರು. ಈ ಕಾರ್ಯ ಜುಲೈ 1937ರಲ್ಲಿ ಪ್ರಾರಂಭಗೊಂಡು 1938ರ ಫೆಬ್ರವರಿ ಕೊನೆಯ ವಾರದಲ್ಲಿ ಮೈಸೂರು ಕಾಂಗ್ರೆಸ್ ಸ್ಥಾಪನೆಗೂ ಕಾರಣವಾಯಿತು. ಈ ಮೂಲಕ ಕ್ರಿಯಾ ಸಮಿತಿಯ ಜವಾಬ್ದಾರಿ ಸರಕಾರ ಸ್ಥಾಪನೆ ಬಗ್ಗೆ ಜಾಗೃತಿ ಹಾಗೂ ಸದಸ್ಯತ್ವವನ್ನು ಹೆಚ್ಚಿಸುವಲ್ಲಿ ಯಶಸ್ವಿಯಾಯಿತು[176].

1938ರ ಫೆಬ್ರವರಿ ತಿಂಗಳಿನಲ್ಲಿ 'ಮೈಸೂರು ಕಾಂಗ್ರೆಸ್' ಸ್ಥಾಪನೆಯಾಯಿತು. ಇದರ ಮೊದಲ ಅಧಿವೇಶನವನ್ನು ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಶಿವಪುರದಲ್ಲಿ ನಡೆಯಿತು. ಏಪ್ರಿಲ್ 11, 12 ಹಾಗೂ 13 ರಂದು ಟಿ.ಸಿದ್ದಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಸರಕಾರದ ಪ್ರತಿಬಂಧಕಾಜ್ಞೆಗಳನ್ನು ಉಲ್ಲಂಘಿಸಿ ಒಂದು ತಿಂಗಳವರೆಗೂ ಧ್ವಜಾರೋಹಣ ಮಾಡಲಾಯಿತು. ಕಾಂಗ್ರೆಸ್ ಮುಖಂಡರನ್ನು ದಸ್ತಗಿರಿ ಮಾಡಲಾಯಿತು. ಅಧಿವೇಶನದಲ್ಲಿ ಶ್ರೀಮನ್ಮಹಾರಾಜರ ಕೃಪಾಶ್ರಯದಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸುವುದು ಮೈಸೂರು ಕಾಂಗ್ರೆಸ್‌ನ ಗುರಿ ಎಂದು ನಿರ್ಣಯ ಅಂಗೀಕರಿಸಲಾಯಿತು. ಇದು ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಚಳುವಳಿ ಹಾಗೂ ಜವಾಬ್ದಾರಿ ಸರ್ಕಾರ ಸ್ಥಾಪನೆಯ ಮೊದಲನೆಯ ಹೆಜ್ಜೆಯಾಯಿತು. ಮೊದಲ ಮೈಸೂರು ಕಾಂಗ್ರೆಸ್ ಅಧಿವೇಶನದ ಯಶಸ್ವಿಗೆ ಮಂಡ್ಯ ಜಿಲ್ಲೆಯ ಜನರು, ವಿದ್ಯಾರ್ಥಿಗಳು, ಮಹಿಳೆಯರು, ರೈತರು, ಕಾರ್ಮಿಕರು, ಪ್ರಮುಖ ಕಾಂಗ್ರೆಸ್ ಮುಖಂಡರುಗಳು ಕಾರಣರಾಗಿದ್ದರು.

ಶಿವಪುರ ರಾಷ್ಟ್ರಕೂಟ ಯಶಸ್ವಿಯಾಗಿ ನಡೆದ ನಂತರ ಮೈಸೂರು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆಯು 1939ರ ಜನವರಿ 1 ರಂದು ಮಂಡ್ಯದ ಬಳಿಯಿರುವ ಉಮ್ಮಡಹಳ್ಳಿಯಲ್ಲಿ ಟಿ.ಸಿದ್ದಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ವರ್ಕಿಂಗ್ ಕಮಿಟಿಯ ಸಭೆಯಲ್ಲಿ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯಲ್ಲಿ ತೆಗೆದುಕೊಂಡ ನಿರ್ಣಯಗಳಿಗೆ ಒಪ್ಪಿಗೆ ನೀಡಲಾಯಿತು. ಕ್ಲೋಸ್ ಪೇಟೆಯಲ್ಲಿ ಹೆಂಡದಂಗಡಿಗಳನ್ನು 'ಪಿಕೆಟಿಂಗ್' ಮಾಡಲು ಜಿಲ್ಲಾ ಬೋರ್ಡ್‌ಗಳ ಚುನಾವಣೆಗಳಿಗೆ ಅನುಮತಿಯನ್ನು ಕೊಟ್ಟರು. ಕಾಂಗ್ರೆಸ್ಸಿನವರನ್ನು ನಿಲ್ಲಿಸಲು ಒಪ್ಪಿಕೊಂಡಿತು. ಮೈಸೂರು ಕಾಂಗ್ರೆಸ್ಸಿಗೆ ನಿವೇಶನವನ್ನು ಕೊಟ್ಟುದಕ್ಕಾಗಿ ಬೆಂಗಳೂರು ನಗರಸಭೆಯನ್ನು ಅಭಿನಂದಿಸಿತು. ಮೈಸೂರು ಸಂಸ್ಥಾನದಲ್ಲಿ ಕಾಂಗ್ರೆಸ್ ಸಮಿತಿಗಳು ಸ್ಥಾಪನೆ ಮತ್ತು ವಿದುರಾಶ್ವತ್ತದಲ್ಲಿ ಅಖಿಲ ಮೈಸೂರು ಕಾಂಗ್ರೆಸ್ಸಿನ ದ್ವಿತೀಯ ಅಧಿವೇಶನವು 1939ರ ಏಪ್ರಿಲ್ ತಿಂಗಳಲ್ಲಿ ನಡೆಯುವಂತೆ ನಿರ್ಧರಿಸಲಾಯಿತು[177].

ಮೈಸೂರು ಕಾಂಗ್ರೆಸ್‌ನ ದ್ವಿತೀಯ ಅಧಿವೇಶನ ನಂತರ ಮಂಡ್ಯ ಜಿಲ್ಲೆ ಹಾಗೂ ಮೈಸೂರು ಸಂಸ್ಥಾನದಲ್ಲಿ ಎನ್.ಡಿ.ಶಂಕರ, ಎಚ್.ಕೆ.ವೀರಣ್ಣಗೌಡ ಹಾಗೂ ಇತರ ಕಾಂಗ್ರೆಸ್ ಮುಖಂಡರು ಜವಾಬ್ದಾರಿ ಸರ್ಕಾರ ಸ್ಥಾಪನೆ ಬಗ್ಗೆ ಜಾಗೃತಿ ಮೂಡಿಸಲು ಪ್ರಯತ್ನ ಆರಂಭಿಸಿದರು. ದಿನಾಂಕ 4ಮೇ 1939ರಂದು ಮಂಡ್ಯ ಜಿಲ್ಲೆಯ ಕೃಷ್ಣರಾಜ ಪೇಟೆ ತಾಲ್ಲೂಕಿನ ಸಂತೆ ಮೈದಾನದಲ್ಲಿ ಕಾಂಗ್ರೆಸ್ ಪ್ರಚಾರ ಸಭೆ ನಡೆಸಿದರು. ಎನ್.ಡಿ.ಶಂಕರ, ಟಿ.ಎಸ್.ಸುಬ್ಬಣ್ಣನವರ ಭಾಷಣದಲ್ಲಿ ಮೈಸೂರಿನ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿದರು[178]. ದಿನಾಂಕ 11.05.1939ರಂದು ಬೆಂಗಳೂರಿನ ವಿಶ್ವೇಶ್ವರಪುರಂ ಸರ್ಕಲ್‌ನಲ್ಲಿರುವ ಮೈದಾನದಲ್ಲಿ ಬಹಿರಂಗ ಸಭೆ ನಡೆಯಿತು. ಅಂದಿನ ಮೈಸೂರು ರಾಜಕೀಯ ಪರಿಸ್ಥಿತಿಯನ್ನು ಕುರಿತು ಹೆಚ್.ಕೆ.ವೀರಣ್ಣಗೌಡ, ಎನ್.ಡಿ.ಶಂಕರ ಹಾಗೂ ಕೆ.ಟಿ.ಭಾಷ್ಯಂ ಭಾಷಣ ಮಾಡಿದರು. ಜನರಲ್ಲಿ ಜವಾಬ್ದಾರಿ ಸರಕಾರದ ಬಗ್ಗೆ ಜಾಗೃತಿ ಮೂಡಿಸಿದರು[179]. ದಿನಾಂಕ 27.08.1939ರಂದು ಮೈಸೂರಿನ ಸುಬ್ರಾಯನಕೆರೆ ಮೈದಾನದಲ್ಲಿ ಎ.ಜಿ.ಬಂದೀಗೌಡರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ನಡೆಯಿತು. ಪಾಲಹಳ್ಳಿ ಸೀತಾರಾಮಯ್ಯ, ಎನ್.ಡಿ.ಶಂಕರ ಅವರು ಅಂದಿನ ಮೈಸೂರಿನ ರಾಜಕೀಯ ಪರಿಸ್ಥಿತಿಯ ವಿಚಾರ ಕುರಿತು ಭಾಷಣ ಮಾಡಿದರು ಹಾಗೂ ಜವಾಬ್ದಾರಿ ಸರಕಾರ ಅವಶ್ಯಕತೆ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿದರು[180].

ಮೈಸೂರು ಕಾಂಗ್ರೆಸ್ಸಿನ ಮೂರನೆಯ ಅಧಿವೇಶನವು 1940ರ ಏಪ್ರಿಲ್ 10, 11 ಮತ್ತು 12 ರಂದು ಶಿವಮೊಗ್ಗದಲ್ಲಿ ಕೆ.ಟಿ.ಭಾಷ್ಯಂ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಅಧಿವೇಶನ ನಡೆಯುವ ಸ್ಥಳಕ್ಕೆ 'ಆಜಾದನಗರ' ಎಂದು ಹೆಸರಿಡಲಾಗಿತ್ತು. ಈ ಅಧಿವೇಶನದಲ್ಲಿ ಮಂಡ್ಯ ಜಿಲ್ಲೆಯ ಕಾಂಗ್ರೆಸ್ ಮುಖಂಡರುಗಳು ಕೂಡಾ

ಭಾಗವಹಿಸಿದ್ದರು. ಅವರಲ್ಲಿ ಪ್ರಮುಖವಾಗಿ ಹೆಚ್.ಕೆ.ವೀರಣ್ಣಗೌಡ, ಎ.ಜಿ.ಬಂದೀಗೌಡ, ಚಿಕ್ಕಲಿಂಗಯ್ಯ, ಡಾ. ಪಶುಪತಿರಾವ್, ಕೆ.ಟಿ.ಭಾಷ್ಯಂ ಅವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಬ್ರಿಟಿಷ್ ಭಾರತದ ಪ್ರದೇಶಗಳಲ್ಲಿ ಸ್ವಯಂ ಆಡಳಿತ ಇರುವುದರ ಪ್ರಭಾವದಿಂದ ಮೈಸೂರು ಸಂಸ್ಥಾನದಲ್ಲಿಯ ಜವಾಬ್ದಾರಿ ಸರಕಾರದ ಬೇಡಿಕೆಯು ಹೆಚ್ಚಿದೆ ಎಂದು ಹೇಳಿದರು[181].

ಪಾಂಡವಪುರ ತಾಲ್ಲೂಕು ಕ್ಯಾತನಹಳ್ಳಿ ಸಮಾವೇಶ

1942ರ ಆಗಸ್ಟ್ 9 ರಂದು ಆರಂಭವಾದ ಕ್ವಿಟ್ ಇಂಡಿಯಾ ಚಳುವಳಿ ತೀವ್ರಗತಿಯಲ್ಲಿ ದೇಶಾದ್ಯಾಂತ ನಡೆಯಿತು. ಅದರಂತೆ ಮೈಸೂರು ಸಂಸ್ಥಾನದ ಜನರು ಮಹಾತ್ಮ ಗಾಂಧೀಜಿಯವರ ನೀಡಿದ ಕರೆಗೆ ಸಕಾರಾತ್ಮಕವಾಗಿ ಸ್ಪಂದಿಸಿದರು. 1945ರವರೆಗೂ ಮೈಸೂರು ಸಂಸ್ಥಾನದಲ್ಲಿ ಪ್ರತಿಬಂಧಕಾಜ್ಞೆ ಜಾರಿಗೆ ಇದ್ದ ಕಾರಣ ಕಾಂಗ್ರೆಸ್ ಅಧಿವೇಶನಗಳು, ಸಭೆಗಳು, ನಡೆಯಲೇ ಇಲ್ಲ. ಮೂರೂ ವರ್ಷಗಳ ನಂತರ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯ ಅಧಿವೇಶನವು ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ (ಫ್ರೆಂಚ್‌ರಾಕ್ಸ್) ಕ್ಯಾತನಹಳ್ಳಿಯಲ್ಲಿ 1945ರ ನವೆಂಬರ್ 10 ಮತ್ತು 11 ರಂದು ನಡೆಸುವುದಾಗಿ ಮೈಸೂರು ಕಾಂಗ್ರೆಸ್ ತೀರ್ಮಾನಿಸಿತು. ಕರ್ನಾಟಕ ರಾಷ್ಟ್ರ ಸೇವಾದಳದ ಸಭೆಯು 26 ಅಕ್ಟೋಬರ್ 1945ರಂದು ಮೈಸೂರಿನಲ್ಲಿ ನಡೆಯಿತು. ಅಖಿಲ ಮೈಸೂರು ಕಾಂಗ್ರೆಸ್ ಅಧಿವೇಶನಕ್ಕೆ ಸ್ವಯಂ ಸೇವಕರಾಗಿ ಸೇರಲಿಚ್ಛಿಸುವವರು ತಮ್ಮ ಹೆಸರುಗಳನ್ನು ದೇಶೀಯ ವಿದ್ಯಾಶಾಲೆ ಮತ್ತು ತಿಲಕ ಸಂಘಗಳಲ್ಲಿ ಕೊಡಬೇಕೆಂದು ತಿಳಿಸಲಾಯಿತು ಹಾಗೂ ಪತ್ರಿಕೆ ಪ್ರಕಟಣೆಯನ್ನು ಕೂಡಾ ನೀಡಲಾಯಿತು. ಸಭೆಯಲ್ಲಿ ಹಾಜರಿದ್ದ ಸ್ವಯಂ ಸೇವಕ ಮತ್ತು ಸೇವಕಿಯರಿಗೆ ಅಧಿವೇಶನದ ಬಗ್ಗೆ ಸಲಹೆ ಸೂಚನೆಗಳನ್ನು ನೀಡಲಾಯಿತು. 9 ನವೆಂಬರ್ 1945ರಂದು ಕ್ಯಾತನಹಳ್ಳಿ ಗ್ರಾಮಕ್ಕೆ ಬಂದು ಅಧಿವೇಶನದಲ್ಲಿ ಹಾಜರಾಗುವಂತೆ ಸ್ವಯಂ ಸೇವಕರಿಗೆ ಕರ್ನಾಟಕ ರಾಷ್ಟ್ರ ಸೇವಾದಳದ ವ್ಯವಸ್ಥಾಪಕರು ತಿಳಿಸಿದರು. 3 ನವೆಂಬರ್ 1945ರಂದು ಮಂಡ್ಯ ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯನಿರ್ವಾಹಕ ಮಂಡಲಿಯ ಫ್ರೆಂಚ್‌ರಾಕ್ಸ್ (ಪಾಂಡವಪುರ) ರೈಲ್ವೆ ನಿಲ್ದಾಣದಲ್ಲಿ ಸಭೆ ನಡೆಸಿದರು. ಮಂಡ್ಯ ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯನಿರ್ವಾಹಕ ಮಂಡಳಿಯ ಕಾರ್ಯದರ್ಶಿಗಳಾದ ಎಂ.ಆರ್.ಎನ್.ಶಾಸ್ತ್ರಿ ಅವರು ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯ ಅಧಿವೇಶನದ ಪೂರ್ವಸಿದ್ಧತೆಯನ್ನು ವಿವರಿಸಿದರು. ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರು ಅಧಿವೇಶನದಲ್ಲಿ ಭಾಗವಹಿಸುವಂತೆ ತಿಳಿಸಿದರು[182].

ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯ ಅಧಿವೇಶನದ ಸ್ವಾಗತ ಸಮಿತಿಯ ಅಧ್ಯಕ್ಷರಾದ ಕಪನಯ್ಯನವರ ನೇತೃತ್ವದಲ್ಲಿ ಅಧಿವೇಶನದ ಸಿದ್ಧತೆಯನ್ನು ಬಿರುಸಿನಿಂದ ಮಾಡಲಾಯಿತು. ಐದು ಸಾವಿರ ಜನಗಳು ಕೂಡಲು ಅನುಕೂಲವಾಗಿರುವಂತಹ ದೊಡ್ಡ ಹಸಿರಿನ ಚಪ್ಪರವನ್ನು ನಿರ್ಮಿಸಲಾಯಿತು. ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯ ಸದಸ್ಯರುಗಳು, ಅತಿಥಿಗಳು, ಪತ್ರಿಕಾ ಪ್ರತಿನಿಧಿಗಳು ಇರಲು ಪ್ರತ್ಯೇಕ ಸ್ಥಳಗಳಲ್ಲಿ ವ್ಯವಸ್ಥೆ ಮಾಡಲಾಗಿತ್ತು. ಊಟ ಉಪಚಾರಗಳಿಗೆ ಸಿದ್ಧತೆಯನ್ನು ಮಾಡಲಾಗಿತ್ತು. ಪ್ರೇಕ್ಷಕರಾಗಿರುವವರೆಗೆ ಒಂದು ಹೊತ್ತಿನ ಊಟಕ್ಕೆ 6 ಆಣೆ ನಿಗದಿ ಮಾಡಲಾಯಿತು. ಫ್ರೆಂಚ್‌ರಾಕ್ಸ್ ರೈಲ್ವೆ ನಿಲ್ದಾಣದಿಂದ ಕ್ಯಾತನಹಳ್ಳಿಗೆ ಹೋಗಲು ಎತ್ತಿನಗಾಡಿಗಳ ಏರ್ಪಾಡು ಮಾಡಲಾಗಿತ್ತು. ಕಾಲರಾ, ಪ್ಲೇಗ್ ಮುಂತಾದ ಯಾವ ವ್ಯಾಧಿಯೂ ಹರಡದಂತೆ ಕ್ರಮಕೈಗೊಳ್ಳಲಾಗಿತ್ತು[183].

ಮೈಸೂರು ಕಾಂಗ್ರೆಸ್ ಸಮಿತಿಯ ಅಧಿವೇಶನದ ಕಾರ್ಯಕ್ರಮಗಳು ಸಿದ್ಧತೆಯನ್ನು ಮಂಡ್ಯ ಜಿಲ್ಲಾ ಪೊಲೀಸ್ ಸೂಪರಿಟೆಂಡೆಂಟ್ ಹಾಗೂ ಎ.ಎಸ್.ಪಿ. ಅವರು ಕ್ಯಾತನಹಳ್ಳಿಗೆ ಭೇಟಿಕೊಟ್ಟು ಪರಿಶೀಲಿಸಿದರು. ಎಸ್.ಚನ್ನಯ್ಯ, ಎ.ಜಿ.ಬಂದೀಗೌಡರೂ ಕಾರ್ಯಕ್ರಮಗಳ ವಿವರವನ್ನು ಜಿಲ್ಲಾ ಪೊಲೀಸ್ ಅಧಿಕಾರಿಗಳಿಗೆ ತಿಳಿಸಿದರು[184]. ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯ ಅಧಿವೇಶನದ ಕಾರ್ಯಕ್ರಮಗಳಾ ಈ ಕೆಳಕಂಡ ವೇಳಾಪಟ್ಟಿಯಂತೆ ನಡೆಯಿತು. 9 ನವಂಬರ್ 1945ರ ಸಂಜೆ 4.30 ಗಂಟೆಗೆ ಫ್ರೆಂಚ್‌ರಾಕ್ಸ್ ರೈಲ್ವೆ ನಿಲ್ದಾಣದ ಬಳಿ ಕಾಂಗ್ರೆಸ್ ಅಧ್ಯಕ್ಷರಿಗೆ ಸ್ವಾಗತವನ್ನು ನೀಡಲಾಯಿತು. ಹಾಗೂ ಸಂಜೆ 6 ಗಂಟೆಗೆ ಅಧ್ಯಕ್ಷರ ಮೆರವಣಿಗೆ ನಡೆಯಿತು. 10 ಮತ್ತು 11 ನವಂಬರ್ 1945 ಬೆಳಿಗ್ಗೆ 8 ಗಂಟೆ ಧ್ವಜಾರೋಹಣ, ನಂತರ ಅಧಿವೇಶನದ ಕಾರ್ಯಕ್ರಮಗಳು ಹಾಗೂ ಸಂಜೆ 6 ಗಂಟೆಗೆ ಬಹಿರಂಗ ಸಭೆ ನಡೆಯಿತು[185]. ದಿನಾಂಕ 9 ನವೆಂಬರ್ 1945ರ ಸಂಜೆ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಎಸ್.ನಿಜಲಿಂಗಪ್ಪನವರು ಬೆಂಗಳೂರಿನಿಂದ ಫ್ರೆಂಚ್‌ರಾಕ್ಸ್ (ಪಾಂಡವಪುರ) ರೈಲ್ವೆ ನಿಲ್ದಾಣಕ್ಕೆ ಆಗಮಿಸಿದರು. ಅವರಿಗೆ ರೈಲ್ವೆ ನಿಲ್ದಾಣದಲ್ಲಿ ಸ್ವಾಗತ ನೀಡಲಾಯಿತು. ಸ್ವಯಂ ಸೇವಕರು ಗಾರ್ಡ್ ಆಫ್ ಆನರ್ ಅನ್ನು ನೀಡಿದರು. ಅನಂತರ ಕ್ಯಾತನಹಳ್ಳಿಯ ಪ್ರಮುಖ ಬೀದಿಗಳಲ್ಲಿ ಅಧ್ಯಕ್ಷರ ಮೆರವಣಿಗೆ ನಡೆಯಿತು. ಅಧ್ಯಕ್ಷರ ಮೆರವಣಿಯ ರಥಕ್ಕೆ 5 ಜೊತೆ ಎತ್ತುಗಳನ್ನು ಕಟ್ಟಿ ಅಲಂಕರಿಸಲಾಗಿತ್ತು. ದಾರಿಯುದ್ದಕ್ಕೂ ಸ್ವಯಂಸೇವಕರು, ಸೇವಕಿಯರು ಸಾಲಾಗಿ ಶಿಸ್ತಿನಿಂದ ಸಾಗಿದರು. ಶಿವಮೊಗ್ಗ ಜಿಲ್ಲೆಯ ಸ್ವಯಂಸೇವಕರ ತಂಡವು ಬ್ಯಾಂಡನ್ನು ಬಾರಿಸುತ್ತಾ ಮೆರವಣಿಗೆಯನ್ನು ಮುನ್ನಡೆಸಿದರು. ತಮಟೆ, ಕೊಂಬು, ಓಲಗಗಳೂ ಹಾಗೂ ಪೇಕ್ಷಕರು ಜಯಕಾರ ಕೂಗಿದರು. ಅನೇಕ ಕಡೆ ಚಪ್ಪರಗಳನ್ನು ಹಾಕಲಾಗಿತ್ತು. ಗ್ರಾಮ ನಿವಾಸಿಗಳು

ಅಲ್ಲಲ್ಲಿ ಅಧ್ಯಕ್ಷರಿಗೆ ಪುಷ್ಪಹಾರಗಳನ್ನು ಸಮರ್ಪಿಸಿದರು. ಸಭಾಮಂಟಪದವರೆಗೂ ಅಧ್ಯಕ್ಷರ ಮೆರವಣಿಗೆ ನಡೆಯಿತು[186].

10 ನವೆಂಬರ್ 1945ರ ಬೆಳಿಗ್ಗೆ 8 ಗಂಟೆಗೆ ಅಖಿಲ ಮೈಸೂರು ಕಾಂಗ್ರೆಸ್ ಅಧಿವೇಶನವು ಧ್ವಜಾರೋಹಣದೊಂದಿಗೆ ಆರಂಭವಾಯಿತು. ಕಾಂಗ್ರೆಸ್ ಅಧ್ಯಕ್ಷರಾದ ನಿಜಲಿಂಗಪ್ಪನವರು ರಾಷ್ಟ್ರಧ್ವಜವನ್ನು ಹಾಗೂ ಸ್ವಾಗತ ಸಮಿತಿಯ ಅಧ್ಯಕ್ಷರಾದ ಕಪನಯ್ಯನವರು ಮೈಸೂರು ಧ್ವಜವನ್ನು ಹಾರಿಸಿದರು. ಕಾಂಗ್ರೆಸ್ ಅಧ್ಯಕ್ಷರಾದ ನಿಜಲಿಂಗಪ್ಪನವರ ತಮ್ಮ ಭಾಷಣದಲ್ಲಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧ್ವಜದ ಸ್ಥಾನವೇನೆಂಬುದನ್ನು ವಿವರಿಸಿದರು. 1938ರ ಶಿವಪುರದ ಅಧಿವೇಶನದಲ್ಲಿ ಎತ್ತಿಹಿಡಿದ ಧ್ವಜದ ಗೌರವವನ್ನು ಮೈಸೂರು ಕಾಂಗ್ರೆಸ್ಸಿನವರು ಇದುವರೆಗೆ ಹೇಗೆ ರಕ್ಷಿಸಿಕೊಂಡು ಬಂದಿರುವರೆಂಬುದನ್ನು ಸಭೆಗೆ ತಿಳಿಸಿದರು. ಅನಂತರ ಸರ್ಕಾರದವರಿಗೂ ಕಾಂಗ್ರೆಸ್ಸಿಗೂ ಆದ ಒಪ್ಪಂದ ವಿಚಾರವನ್ನು ತಿಳಿಸಿ ರಾಷ್ಟ್ರ ಧ್ವಜದೊಡನೆ ಮೈಸೂರು ಧ್ವಜವನ್ನೂ ಹಾರಿಸುವ ಒಪ್ಪಂದವಾದುದನ್ನು ಅರಿಕೆ ಮಾಡಿದರು. ಬ್ರಿಟೀಷ್ ಇಂಡಿಯಾದವರೂ, ಸಂಸ್ಥಾನದವರೂ ಒಮ್ಮತದಿಂದ ಕೂಡಿ ದೇಶದ ಸ್ವಾತಂತ್ರ್ಯವನ್ನು ಗಳಿಸಬೇಕೆಂದು ಕೋರಿದರು[187].

ಬೆಳಿಗ್ಗೆ 10 ಗಂಟೆಗೆ ಅಧಿವೇಶನದ ಸಭೆಯು ರಾಷ್ಟ್ರಗೀತೆಯೊಡನೆ ಆರಂಭವಾಯಿತು. ಸ್ವಾಗತಾಧ್ಯಕ್ಷರಾದ ಕಪನಯ್ಯನವರು ಎಲ್ಲರಿಗೂ ಸ್ವಾಗತವನ್ನು ಬಯಸಿ ಭಾಷಣ ಮಾಡಿದರು. ನಂತರ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯ ಅಧಿವೇಶನವನ್ನು ಆರಂಭಿಸುತ್ತ ಎಸ್.ನಿಜಲಿಂಗಪ್ಪನವರು ಈ ರೀತಿಯಾಗಿ ಮೂರು ವರ್ಷಗಳ ಹಿಂದೆ ಈ ಸ್ಥಳದಲ್ಲಿ ಈ ಸಭೆಯು ನಡೆಯಬೇಕಾಗಿತ್ತು, ಈಗ ಇಲ್ಲಿಯೇ ನಡೆಯುತ್ತಿರುವುದು ಸಂತೋಷ ಸಂಗತಿ, ಮೂರು ವರ್ಷದಲ್ಲಿ ಅನೇಕ ಬದಲಾವಣೆಗಳು ಆಗಿ ಹೋಗಿವೆ, ಕ್ವಿಟ್ ಇಂಡಿಯಾ ನಿರ್ಣಯವನ್ನು ಅಖಿಲ ಭಾರತ ಕಾಂಗ್ರೆಸ್ ಸಭೆಯು ಮಾಡಿದ ಮೇಲೆ ದೇಶವು ಅಗ್ನಿಜ್ವಾಲೆಯನ್ನು ನುಗ್ಗಿ ಬಂದಿದೆ, ಕಾಂಗ್ರೆಸ್ಸಿನ ಶಕ್ತಿ ಈಗ ಅತ್ಯಂತ ಅಧಿಕವಾಗಿದೆ. ಬ್ರಿಟೀಷ್ ಸರ್ಕಾರದವರ ಧೋರಣೆಯಲ್ಲಿ ಯಾವ ಬದಲಾವಣೆಯೂ ಆಗಿಲ್ಲ, ಅಧಿಕಾರವನ್ನು ಪ್ರಜೆಗಳಿಗೆ ಬಿಟ್ಟು ಕೊಡುವ ಸೂಚನೆಯಿಲ್ಲ. ಸಂಸ್ಥಾನಗಳು ಬ್ರಿಟಿಷ್ ಸರ್ಕಾರದವರ ಕೊನೆಯ ಕಂದಕಗಳಾಂತಾಗಿವೆ, ಪ್ರಜೆಗಳ ಪ್ರೀತಿಯೇ ನಿಜವಾದ ರಕ್ಷಣೆಯೆಂದು ರಾಜರುಗಳು ತಿಳಿಯಬೇಕು, ದೇಶದ ಸ್ವಾತಂತ್ರ್ಯ ಸಾಧನೆಗೆ ಅವರೂ ಬೆಂಬಲ ಕೊಡಬೇಕು. ಕಾಂಗ್ರೆಸ್ಸಿನ ವಿಷಯದಲ್ಲಿ ಸರ್ಕಾರದ ಭಾವನೆ ವಿರೋಧಕರವಾಗಿಯೇ ಇದೆ. ಬ್ರಿಟಿಷ್ ಸರ್ಕಾರದವರು, ಚಾಕಚಕ್ಯತೆಯಿಂದಲೂ ಜಾಣ್ಮೆಯಿಂದಲೂ ವರ್ತಿಸುತ್ತಾರೆ. ನಮ್ಮವರು ವಿರೋಧವನ್ನೇ ತಾಳಿದ್ದಾರೆ. ನಮ್ಮದು ಮಾದರಿ ಸಂಸ್ಥಾನವೆಂದು ಹೆಸರು ಬಂದಿದೆ. ಬಹುಶಃ ಎಲ್ಲಿಯೂ ಪ್ರಜಾಪ್ರತಿನಿಧಿ

ಸಂಸ್ಥೆಗಳಿಲ್ಲದಿದ್ದಾಗ ಈ ಮಾತು ಸಲ್ಲುತ್ತಿತ್ತು, ಈಗ ಸಲ್ಲುವುದಿಲ್ಲ. ಮೈಸೂರು ಸಂಸ್ಥಾನದಲ್ಲಿ ಇನ್ನೂ ಜಾರಿಯಾಗುತ್ತಿವೆ. ದಸ್ತಗಿರಿಗಳೂ ಆಗುತ್ತಿವೆ. ನಮ್ಮ ಸರ್ಕಾರವು ಪ್ರಜೆಗಳ ಅಭಿಪ್ರಾಯದಂತೆ ನಡೆಯಬೇಕು, ಜವಾಬ್ದಾರಿ ಸರ್ಕಾರವೇ ಇದಕ್ಕೆ ದಿವ್ಯೌಷಧ, ಅದನ್ನು ಸಾಧಿಸಲು ಎಲ್ಲರೂ ಸಿದ್ಧರಾಗಿರಬೇಕು, ರಚನಾತ್ಮಕ ಕಾರ್ಯಕ್ರಮವನ್ನು ಕೈಗೊಳ್ಳಬೇಕು, ಎಲ್ಲರೂ ಒಗ್ಗಟ್ಟಾಗಿ ಸೇರಬೇಕು, ಕಾಂಗ್ರೆಸ್ಸಿಗೆ ಒಂದು ಲಕ್ಷ ಜನರನ್ನು ಸೇರಿಸಬೇಕು ಸಂಸ್ಥೆಗಳನ್ನು ಬಲಪಡಿಸಬೇಕು, ಪ್ರಪಂಚಕ್ಕೆ ಆದರ್ಶಪುರುಷರಾದ ಮಹಾತ್ಮ ಗಾಂಧಿಯವರ ನಾಯಕತ್ವದಲ್ಲಿ ಹೊಸ ಸಮಾಜವನ್ನೇ ನಿರ್ಮಿಸಲು ಸಕಲರೂ ಸಹಕಾರವನ್ನು ನೀಡಬೇಕು[188].

ಮೊದಲನೇ ದಿನ ಬಹಿರಂಗ ಸಭೆ ರಾತ್ರಿ 8.30 ಗಂಟೆವರೆಗೆ ನಡೆಯಿತು. ಈ ಕೆಳಕಂಡ ನಿರ್ಣಯಗಳು ಅಂಗೀಕೃತವಾದವು.

1) ಕ್ವಿಟ್ ಇಂಡಿಯಾ ನಿರ್ಣಯದ ಸಮರ್ಥನೆ ಮತ್ತು ಕಾಲಾನುಗುಣವಾಗಿ ಸಂಪೂರ್ಣ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸುವುದು.

2) ಭಾರತ ರಾಜ್ಯಾಂಗ ಘಟನೆ ಸಮಿತಿಯಲ್ಲಿ ಸಂಸ್ಥಾನಗಳ ಪರವಾಗಿ ಪ್ರಭುಗಳಿಂದ ಚುನಾಯಿತರಾದ ಪ್ರತಿನಿಧಿಗಳೇ ಇರಬೇಕು ಮತ್ತು ಸಮಿತಿಯ ಅಂಗರಚನೆಯೂ ಕಾರ್ಯಕ್ರಮವೂ ಸ್ಪಷ್ಟವಾಗಿ ನಮೂದಾಗಬೇಕು.

3) ಮೈಸೂರು ಸಂಸ್ಥಾನದಲ್ಲಿ ಸಂಪೂರ್ಣ ಜವಾಬ್ದಾರಿ ಸರ್ಕಾರವನ್ನು ಕೂಡಲೇ ಸ್ಥಾಪಿಸಬೇಕು.

4) ಭಾರತ ರಾಷ್ಟ್ರೀಯ ಸೇನೆಯ ಎಲ್ಲಾ ಅಧಿಕಾರಿಗಳನ್ನು ಸ್ತ್ರೀಪುರುಷರನ್ನೂ ಬ್ರಿಟಿಷ್ ಸರ್ಕಾರದವರು ಕೂಡಲೇ ಬಿಡುಗಡೆ ಮಾಡಬೇಕು.

ಇಂಡೋನೇಷಿಯಾ ಮತ್ತು ಇಂಡೋ ಚೀಣಾಗಳಲ್ಲಿ ನಡೆಯುತ್ತಿರುವ ಸ್ವಾತಂತ್ರ್ಯ ಚಳುವಳಿಗಳನ್ನು ತುಳಿಯಲು ಭಾರತೀಯ ಸೈನ್ಯಗಳನ್ನು ಉಪಯೋಗಿಸುತ್ತಿರುವುದನ್ನು ಖಂಡಿಸಲಾಯಿತು ಹಾಗೂ ಈ ಆಕ್ರಮಣವನ್ನು ಸಕಾಲದಲ್ಲಿ ತಡೆಯದಿದ್ದರೆ ಇನ್ನೊಂದು ಯುದ್ಧಕ್ಕೆ ಅವಕಾಶವಿರುವುದು ಇಂಡೋನೇಷಿಯನ್ನರಿಗೆ ಜಯವಾಗಲೆಂದು ಸಭೆಯ ಪರವಾಗಿ ಕೋರಲಾಯಿತು[189].

11.11.1945 ರಂದು ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯ 2ನೇ ದಿನದ ಕಾರ್ಯಕ್ರಮವು ಬೆಳಿಗ್ಗೆ ಎಂಟು ಗಂಟೆಗೆ ಕೆ.ಟಿ.ಭಾಷ್ಯಂರವರು ರಾಷ್ಟ್ರಧ್ವಜವನ್ನೂ, ಹೆಚ್.ಸಿದ್ದಯ್ಯನವರು ಮೈಸೂರು ಧ್ವಜವನ್ನು ಹಾರಿಸುವ ಮೂಲಕ ಆರಂಭಿಸಿದರು.

ಕೆ.ಟಿ.ಭಾಷ್ಯಂನವರು ತಮ್ಮ ಭಾಷಣದಲ್ಲಿ ಧೈರ್ಯ, ತ್ಯಾಗ, ಸತ್ಯ ಮೊದಲಾದವುಗಳಿಂದ ಸ್ವಾತಂತ್ರ್ಯವನ್ನು ಗಳಿಸಬೇಕೆಂದರು. ಹೆಚ್.ಸಿದ್ದಯ್ಯನವರ ಮೈಸೂರಿನ ಗಂಡಭೇರುಂಡ ಧ್ವಜದ ಇತಿಹಾಸವನ್ನು ವಿವರಿಸಿದರು. ವಿದ್ಯಾರ್ಥಿ ನಾಯಕರಾದ ಖಾದಿ ಶಾಮಣ್ಣನವರು ಭಾಷಣ ಮಾಡಿ ಸ್ವಾತಂತ್ರ್ಯ ಸಾಧನೆಯಲ್ಲಿ ತರುಣರ ಪಾತ್ರವನ್ನು ತಿಳಿಸಿ ಸ್ವಾತಂತ್ರ್ಯವನ್ನು ಕೇವಲ ಮಾತಿನಿಂದ ಸಾಧಿಸಲು ಸಾಧ್ಯವಿಲ್ಲವೆಂದೂ, ಕ್ರಿಯಾಶಕ್ತಿಬೇಕೆಂದೂ ಹೇಳಿದರು.

ಸಂಜೆ ನಡೆದ ಬಹಿರಂಗ ಸಭೆಯಲ್ಲಿ ಅಧ್ಯಕ್ಷರಾದ ನಿಜಲಿಂಗಪ್ಪನವರು ತಮ್ಮ ಮುಕ್ತಾಯ ಭಾಷಣದಲ್ಲಿ ಈ ರೀತಿ ನುಡಿದರು. ಕಾಲವು ವಿದ್ಯುದ್ವೇಗದಿಂದ ಚಲಿಸುತ್ತಿದೆ. ಇದು ಅಣು ಬಾಂಬುಗಳ ಯುಗ, ದಿನದಿನಕ್ಕೂ ವಿಪರೀತವಾದ ಬದಲಾವಣೆಗಳು ಆಗುತ್ತವೆ, ಸಾಮ್ರಾಜ್ಯಶಾಹಿಯು ಮಾಯವಾಗುತ್ತಿದೆ, ಪ್ರಜಾಭಿಪ್ರಾಯವೇ ರೂಢಮೂಲವಾಗುತ್ತಿದೆ. ಪ್ರಜಾಸೇವೆಯೇ ಮೈಸೂರು ಕಾಂಗ್ರೆಸ್ಸಿನ ಗುರಿ, ಪ್ರಭುಗಳ ಉದ್ದೇಶವೂ ಅದೇ ಆಗಿದೆ, ಆದ್ದರಿಂದ ಪ್ರಜೆಗಳೂ, ಪ್ರಭುಗಳೂ ಒಬ್ಬರೊಡನೊಬ್ಬರು ಕಲೆತು ಪ್ರಜಾಸೇವೆ ಮಾಡಬೇಕೆಂಬುದೇ ನಮ್ಮ ಬಯಕೆ. ಸಂಸ್ಥಾನದಲ್ಲಿ ಜವಾಬ್ದಾರೀ ಸರ್ಕಾರವನ್ನು ಸ್ಥಾಪಿಸುವುದು ಶ್ರೀಮನ್ಮಹಾರಾಜರವರ ಪವಿತ್ರ ಕರ್ತವ್ಯ, ದೇಶದ ದಾರಿದ್ರ್ಯ ಅನಕ್ಷರತೆ ಮತ್ತು ಇತರ ಕುಂದುಕೊರತೆಗಳನ್ನು ನೀಗಿಸಲು ನಾವುಗಳು ಎಷ್ಟು ಕಷ್ಟಪಟ್ಟರೂ ಸಾಲದು, ರೈತರ ಸ್ಥಿತಿಯು ಬಹಳ ಶೋಚನೀಯವಾಗಿದೆ, ರೈತರ ಮಕ್ಕಳು ಬಹಳ ಹೀನಸ್ಥಿತಿಯಲ್ಲಿರುವವರು ಅವರುಗಳಿಗೆ ಧಾರಾಳವಾಗಿ ಸಹಾಯ ಮಾಡಬೇಕು, ಸಮಾಜವನ್ನು ಉತ್ತಮ ಸ್ಥಿತಿಗೆ ತರಬೇಕು ಸಮಾಜದ ಹಿತಕ್ಕೆ ವಿರೋಧವಾದ ವ್ಯಕ್ತಿ ಮತ್ತು ಸಂಸ್ಥೆಗಳನ್ನು ಬದಲಾಯಿಸಬೇಕು, ಎಲ್ಲರೂ ದೇಶಸೇವೆಗಾಗಿ ತಮ್ಮ ಕೈಲಾದ ಸಹಾಯವನ್ನೆಲ್ಲಾ ನೀಡಬೇಕು ಎಂದರು.

ಅಧಿವೇಶನದ ಎರಡನೇ ದಿನ ಈ ಕೆಳಕಂಡ ನಿರ್ಣಯಗಳು ಅಂಗೀಕೃತವಾದುವು.

1) ತಿಮ್ಮಾರೆಡ್ಡಿ, ಹನುಮಂತಯ್ಯ ಮತ್ತು ಹೆಚ್.ಎಸ್.ಸೂರ್ಯನಾರಾಯಣರಾಯರ ದಸ್ತಗಿರಿಗಾಗಿ ಈ ಸಭೆಯು ಅತ್ಯಂತ ವ್ಯಸನಪಡುತ್ತದೆ, ಇವರ ಬಿಡುಗಡೆಗೆ ಆಗ್ರಹಿಸುತ್ತದೆ.

2) ಜನವಾಣಿ ಮತ್ತು ವಿಶ್ವಕರ್ನಾಟಕ ಪತ್ರಿಕೆಗಳ ಪ್ರಜಾಸೇವೆಗಾಗಿ ಅಭಿನಂದನೆ ಮತ್ತು ಅವುಗಳಿಗೆ ಠೇವಣಿ ಬಗ್ಗೆ ಕೊಟ್ಟಿರುವ ನೋಟೀಸುಗಳಿಗಾಗಿ ಕಳವಳ ವ್ಯಕ್ತಪಡಿಸಲಾಯಿತು.

3) ಈಸೂರು, ಶ್ರವಣಬೆಳಗೊಳ, ತಿಪಟೂರು, ದಾವಣಗೆರೆ ಮುಂತಾದ ಕಡೆಗಳ ಬಂಧಿಸಿರುವ ರಾಜಕೀಯ ಖೈದಿಗಳನ್ನು ಕೂಡಲೇ ಸರ್ಕಾರದವರು ಬಿಡುಗಡೆ ಮಾಡಬೇಕು[190].

ಧನ್ಯವಾದಗಳಾದ ನಂತರ ಜಯಕಾರದೊಡನೆ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯ ಅಧಿವೇಶನವು ಮುಕ್ತಾಯವಾಯಿತು.

ತರುವಾಯ 30 ಮತ್ತು 31 ಮಾರ್ಚ್ 1946ರಂದು ದಕ್ಷಿಣ ಭಾರತ ಸಂಸ್ಥಾನಗಳ ಪ್ರಜಾ ಸಮ್ಮೇಳನದ ಸಲಹಾ ಸಮಿತಿಯ ಸಭೆಯು ಮೈಸೂರಿನ ನಜರಬಾದ್‌ನಲ್ಲಿ ಜರುಗಿತು. ತಿರುವಾಂಕೂರು ಕಾಂಗ್ರೆಸ್ ಮುಖಂಡರಾದ ಪಟ್ಟಂತಾನು ಪಿಳ್ಳೆಯವರ ಅಧ್ಯಕ್ಷತೆಯನ್ನು ವಹಿಸಿದ್ದರು. ಸಂಸ್ಥಾನಗಳಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಬೇಕೆಂದು, ಪ್ರಜೆಗಳು ಕೋರುತ್ತಿರುವುದನ್ನು ನಿರಾಕರಿಸಿ ರಾಜರುಗಳೂ ಅವರ ಸಲಹೆಗಾರರೂ ತಮ್ಮ ನಿರಂಕುಶಾಧಿಕಾರವನ್ನೇ ಭದ್ರಪಡಿಸಿಕೊಳ್ಳಲು ಪ್ರಯತ್ನಿಸುತ್ತಿರುವುದನ್ನು ಪ್ರಜೆಗಳಿಗಿರುವ ಅಸಮಾಧಾನವನ್ನೂ ಸರಕಾರದವರ ಅರಿಯಬೇಕೆಂದು ತಿಳಿಸಿತು. ಪೂರ್ಣ ಜವಾಬ್ದಾರಿ ಸರ್ಕಾರವನ್ನೂ ಸ್ಥಾಪಿಸಬೇಕೆಂದು ಈ ಸಭೆಯ ಒತ್ತಾಯಪಡಿಸಿತು. ಸಭೆಯಲ್ಲಿ ಹೆಚ್.ಕೆ.ವೀರಣ್ಣಗೌಡ, ಎಸ್.ನಿಜಲಿಂಗಪ್ಪ ಹಾಜರಿದ್ದರು[191].

ಮೈಸೂರು ಸಂಸ್ಥಾನದಲ್ಲಿ ಸಂಪೂರ್ಣ ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ 1947ರ ಮೇ 1 ರಿಂದಲೇ ಮೈಸೂರು ಕಾಂಗ್ರೆಸ್ ಹೂಡಲಿರುವ ಸತ್ಯಾಗ್ರಹದಲ್ಲಿ ಭಾಗವಹಿಸಲು ಅಪೇಕ್ಷಿಸುವ ಮಹಿಳೆಯರೂ, ಮಹನೀಯರೂ, ಮೈಸೂರು ಸಯ್ಯಾಜಿರಾವ್ ರಸ್ತೆಯಲ್ಲಿರುವ ಕಾಂಗ್ರೆಸ್ ಕಛೇರಿಯಲ್ಲಿ ದಿನಾಂಕ 23.04.1947 ಬುಧವಾರದಿಂದ ತಮ್ಮ ಹೆಸರನ್ನು ಸತ್ಯಾಗ್ರಹದ ಪಟ್ಟಿಯಲ್ಲಿ ದಾಖಲು ಮಾಡಲು ಹಾಗೂ ಸತ್ಯಾಗ್ರಹ ಪ್ರತಿಜ್ಞೆಗೆ ರುಜು ಹಾಕಬೇಕೆಂದು ಕೋರಲಾಯಿತು[192]. ಕಾಂಗ್ರೆಸ್ ಅಧ್ಯಕ್ಷ ಕೆ.ಚಂಗಲರಾಯರೆಡ್ಡಿ ಮತ್ತು ದಿವಾನರಾದ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್‌ರಿಗೂ ಏಪ್ರಿಲ್ ಕೊನೆಯ ವಾರದಲ್ಲಿ ಮೈಸೂರು ರಾಜಕೀಯ ಬೆಳವಣಿಗೆಗಳ ಮೇಲೆ ಮಾತುಕತೆ ನಡೆಯಿತು. ರಾಜ್ಯಾಂಗ ಸಭೆಯ ಆರಂಭದ ವಿಷಯದಲ್ಲಿ ದಿವಾನರ ಅಭಿಪ್ರಾಯವು ಅನುಕೂಲಕರವಾಗಿರಲಿಲ್ಲ. ದಿವಾನರು ಮೇ ತಿಂಗಳಲ್ಲಿ ನವದೆಹಲಿಗೆ ಹೋಗುವುದಾಗಿ ತಿಳಿಸಿದರು. ಇದರಿಂದ ಕಾಂಗ್ರೆಸ್ ಮೇ ಒಂದರಿಂದ ಆರಂಭಿಸಬೇಕಾಗಿದ್ದ ಅರಮನೆ ಸತ್ಯಾಗ್ರಹ ಚಳುವಳಿಯನ್ನು ಮುಂದಕ್ಕೆ ಹಾಕಿತು[193]. ಮೈಸೂರು ಕಾಂಗ್ರೆಸ್ಸಿಗರ ಸಭೆಯು ದಿನಾಂಕ 30 ಏಪ್ರಿಲ್ ಮತ್ತು 1ನೇ ಮೇ 1947ರಂದು ಬೆಂಗಳೂರಿನ ಕಾಂಗ್ರೆಸ್ ಕಛೇರಿಯಲ್ಲಿ ಜರುಗಿತು. ಕೆ.ಸಿ.ರೆಡ್ಡಿ ಅವರ

ಅಧ್ಯಕ್ಷತೆ ವಹಿಸಿದ್ದರು. ಈ ಸಭೆಗೆ ಜಿಲ್ಲಾ ಕಾಂಗ್ರೆಸ್ ಬೋರ್ಡ್‌ಗೆ ಆಯ್ಕೆಯಾದ ಎಲ್ಲಾ ಜಿಲ್ಲಾ ಕಾಂಗ್ರೆಸ್ ಸದಸ್ಯರು ಭಾಗವಹಿಸಿದ್ದರು. ಆ ಪ್ರಕಾರವಾಗಿ ಮಂಡ್ಯ ಜಿಲ್ಲೆಯಿಂದ ಕೆ.ವಿ.ಶಂಕರಗೌಡ, ಜಿ.ಎಸ್.ಬೊಮ್ಮೇಗೌಡ, ಹೆಚ್.ಕೆ.ವೀರಣ್ಣಗೌಡ, ಬಿ.ಪಿ.ನಾಗರಾಜುಮೂರ್ತಿ, ಹೆಚ್.ವಿ.ವೀರೇಗೌಡ, ಕೆ.ಶ್ರೀಕಂಠೇಗೌಡ, ಕೆ.ಪುಟ್ಟಸ್ವಾಮಿ, ಎ.ಕಪನಯ್ಯಗೌಡ, ಬೋರೇಗೌಡ, ಬಿ.ಕೆಂಪೇಗೌಡ ಹಾಜರಿದ್ದರು, ಸಭೆಯಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆ ಮತ್ತು ದಿವಾನರ ಸ್ಥಾನಮಾನದ ಬಗ್ಗೆ ಚರ್ಚಿಸಲಾಯಿತು[194].

ಮೈಸೂರು ಸಂಸ್ಥಾನವು ರಾಜ್ಯಾಂಗ ಸಭೆಯಲ್ಲಿ ಸೇರಲು ನಿರ್ಧರಿಸಿರುವುದೆಂದು ದಿವಾನರಾದ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ 16 ಜೂನ್ 1947ರಂದು ನಡೆಸಿದ ಪತ್ರಿಕಾ ಸಭೆಯಲ್ಲಿ ತಿಳಿಸಿದರು. ಸಂಸ್ಥಾನಗಳು ರಾಜ್ಯಾಂಗ ಸಭೆಯಲ್ಲಿ ಸ್ವಂತ ಇಚ್ಛೆಯಿಂದ ಸೇರುವುದೆಂದೂ, ಯಾವ ಬಲತ್ಕಾರವೂ ಇರುವುದಿಲ್ಲವೆಂದು ಅವರು ಹೇಳಿದರು. ಕೇಂದ್ರ ಒಕ್ಕೂಟಕ್ಕೆ ವಹಿಸುವ ಅಂಶಗಳ ವಿಷಯದಲ್ಲಿಯೂ ಎಲ್ಲ ಅಂಶಗಳನ್ನು ಪರಿಶೀಲಿಸಿ ಮೈಸೂರು ಸಂಸ್ಥಾನದಿಂದ ಭಾರತ ರಾಜ್ಯಾಂಗ ಸಭೆಯಲ್ಲಿ ಭಾಗವಹಿಸಲು ಒಂದು ಮಂಡಳಿಯನ್ನು ಕಳುಹಿಸುವಂತೆ ಶ್ರೀಮನ್ಮಹಾರಾಜರವರು ತೀರ್ಮಾನಿಸಿರುತ್ತಾರೆಂದು. ಮೈಸೂರು ನಿಯೋಗದಲ್ಲಿ ಒಟ್ಟು ಏಳು ಪ್ರತಿನಿಧಿಗಳು ದಿವಾನರ ನೇತೃತ್ವದಲ್ಲಿ ಜುಲೈ 14ನೇ ತಾರೀಖು ಸೇರಲಿರುವ ರಾಜ್ಯಾಂಗ ಸಭೆಯಲ್ಲಿ ಭಾಗವಹಿಸಲು ಅನುಕೂಲವಾಗುವಂತೆ ವ್ಯವಸ್ಥೆ ಮಾಡಲಾಗಿತ್ತು. ವಿವಿಧ ಪಕ್ಷಗಳ ನಾಯಕರ ಸಲಹೆ ತೆಗೆದುಕೊಂಡು ಪ್ರತಿನಿಧಿಗಳನ್ನು ಆರಿಸಲಾಗುವುದು. ಮೂರು ಜನರನ್ನು ನಾಮಕರಣ ಮಾಡಿ ಮೂರು ಜನರನ್ನು ಚುನಾಯಿಸಲಾಗುವುದು ಇದು ತಮ್ಮ ಸ್ವಂತ ಅಭಿಪ್ರಾಯವೆಂದು ದಿವಾನರು ತಿಳಿಸಿದರು. ಈ ಬಗ್ಗೆ ಮೈಸೂರಿನ ಪ್ರತಿನಿಧಿಗಳೆಲ್ಲರೂ ತಮ್ಮ ನಿಲುವುಗಳನ್ನು ಸೂಚಿಸುವಂತೆ ದಿವಾನರು ಅಭಿಪ್ರಾಯ ವ್ಯಕ್ತಪಡಿಸಿದರು[195]. 27 ಜುಲೈ 1947ರಂದು ಶ್ರೀರಂಗಪಟ್ಟಣ ತಾಲ್ಲೂಕು ಕಾಂಗ್ರೆಸ್ ಸಮಿತಿಯ ಸಭೆಯು ಶ್ರೀರಂಗಪಟ್ಟಣದಲ್ಲಿ ನಡೆಯಿತು. ಸಭೆಯಲ್ಲಿ ಆಗಸ್ಟ್ 15ನೇ ತಾರೀಖು ಸ್ವಾತಂತ್ರ್ಯ ದಿನಾಚರಣೆಯ ಬಗ್ಗೆ ಸಮಾಲೋಚಿಸಿ ಆಗಸ್ಟ್ 15ನೇ ತಾರೀಖು ಸಾರ್ವಜನಿಕ ರಜಾ ದಿನವನ್ನಾಗಿ ಸಾರಬೇಕೆಂದು, ಬಂಧನದಲ್ಲಿರುವ ಎಲ್ಲ ರಾಜಕೀಯ ಮುಖಂಡರು ಹಾಗೂ ಇತರನ್ನು ಬಿಡುಗಡೆ ಮಾಡಬೇಕೆಂದೂ ಸರ್ಕಾರದವರನ್ನು ಒತ್ತಾಯಪಡಿಸುವ ನಿರ್ಣಯಗಳನ್ನು ಅಂಗೀಕರಿಸಿತು. ಜವಾಬ್ದಾರಿ ಸರಕಾರ ಸ್ಥಾಪನೆಗಾಗಿ ಮೈಸೂರು ಕಾಂಗ್ರೆಸ್ ಹೂಡಲಿರುವ ಸತ್ಯಾಗ್ರಹಕ್ಕೆ ಶ್ರೀರಂಗಪಟ್ಟಣ ತಾಲ್ಲೂಕು ಕಾಂಗ್ರೆಸ್ ಸಮಿತಿಯು ತನ್ನ ಪೂರ್ಣ ಬೆಂಬಲವನ್ನು ಕೊಡುವುದೆಂದು ಮೈಸೂರು ಕಾಂಗ್ರೆಸ್ ಅಧ್ಯಕ್ಷರಿಗೆ ತಿಳಿಸಲು ತೀರ್ಮಾನಿಸಿತು[196].

[illegible]

1947ರ ಆಗಸ್ಟ್ 1 ರಂದು ಮೈಸೂರು ನಗರ ಟೌನ್‌ಹಾಲ್‌ನಲ್ಲಿ ಅಖಿಲ ಮೈಸೂರು ಕಾಂಗ್ರೆಸ್‌ನ ಸಮಿತಿಯ ವಿಶೇಷ ಅಧಿವೇಶನ ನಡೆಸಿತು. ವೇದಿಕೆಯಲ್ಲಿ ಕೆ.ಟಿ.ಭಾಷ್ಯಂ, ಟಿ.ಸುಬ್ರಮಣ್ಯ, ಸಾಹುಕಾರ್ ಚನ್ನಯ್ಯ, ಕೆ.ಸಿ.ರೆಡ್ಡಿ, ಇತರರು ಆಸೀನರಾಗಿದ್ದರು. ಈ ಸಂದರ್ಭದಲ್ಲಿ ವೇದಿಕೆಗೆ ಆಗಮಿಸಿದ ಎಂ.ಎನ್.ಜೋಯಿಸ್ ಆಗಸ್ಟ್ 9 ರಂದು ಹೋರಾಟ ಆರಂಭಿಸಬೇಕು. ಜವಾಬ್ದಾರಿ ಸರ್ಕಾರದ ಗುರಿ ಸಾಧನೆಗೆ ಸ್ವಲ್ಪವೂ ಸಾವಕಾಶ ಆಗಬಾರದು, ಹೋರಾಟಕ್ಕೆ ದಿನಗೊತ್ತು ಮಾಡಿ ಎಂದು ಹಠ ಹಿಡಿದರು. ಆದರೆ ಹೋರಾಟದ ದಿನಾಂಕದ ಬಗ್ಗೆ ಜಿಜ್ಞಾಸೆ ಉಂಟಾಯತು. "ನಮ್ಮ ಕೈಕಟ್ಟಿಹಾಕಬೇಡಿ, ನಾವು ಸೂಕ್ತ ದಿನ ಗೊತ್ತು ಮಾಡಿ ಹೋರಾಟ ಆರಂಭಿಸುತ್ತೇವೆ" ಎಂದು ವರಿಷ್ಠರ ಪರವಾಗಿ ಟಿ.ಸುಬ್ರಮಣ್ಯಂ ಸಭೆಗೆ ತಿಳಿಸಿದರು. ಆಗ ಜೋಯಿಸರು ನೀವು ನಾಯಕರುಗಳು ನಿರ್ಧಾರ ಕೈಗೊಳ್ಳಲು ಮೀನಾ-ಮೇಷ ಎಣಿಸುತ್ತಿದ್ದೀರಿ. ಪ್ರಾಯಶಃ ಆಗಸ್ಟ್ 15 ರಂದು ದೆಹಲಿಯ ಸಂಭ್ರಮದ ಉತ್ಸವದಲ್ಲಿ ಭಾಗವಹಿಸಬೇಕೆಂಬ ಚಪಲ ನಿಮಗೆ ಇರಬಹುದು, ಹೋಗಿ ಬನ್ನಿ ಎಂಬ ಧಾಟಿಯಲ್ಲಿ ನಿಷ್ಠೂರವಾಗಿ ಮಾತನಾಡಿದರು. ಆಗ ಕೆ.ಸಿ.ರೆಡ್ಡಿ ನಮಗೆ ಅಂತಹ ಚಪಲವಿಲ್ಲ, ಹೋರಾಟಕ್ಕೆ ಸಿದ್ಧತೆ ಮಾಡಿಕೊಳ್ಳುತ್ತೇವೆ ನಿಮ್ಮ ಅಪೇಕ್ಷೆಯಂತೆ ಬೇಗನೆ ಹೋರಾಟ ನಡೆಯುತ್ತದೆ ಎಂದು ಹೇಳಿ ಹೋರಾಟಕ್ಕೆ ಬದ್ಧರಾದರು[197].

7 ಆಗಸ್ಟ್ 1947ರಂದು ಕೆ.ಸಿ.ರೆಡ್ಡಿಯವರು ಮೈಸೂರು ಪ್ರತಿನಿಧಿಗಳ ಸಂಘಟನಾ ಸಮಿತಿಯಲ್ಲಿ ಮೈಸೂರು ಸಂಸ್ಥಾನ ಕುರಿತು ಈ ರೀತಿಯಾಗಿ ಅಭಿಪ್ರಾಯ ವ್ಯಕ್ತಪಡಿಸಿದರು. ಮೈಸೂರಿನ ಆಂತರಿಕ ಸಮಸ್ಯೆ ಇನ್ನೂ ಸಮಸ್ಯೆಯೇ ಆಗಿರುವುದು. ಸರಕಾರದವರು ಪ್ರಜೆಗಳ ಬೇಡಿಕೆಯನ್ನು ಮನ್ನಿಸಿರುವುದಿಲ್ಲ. ಈ ಬೇಡಿಕೆಯನ್ನು ಇನ್ನೂ ಪೂರೈಸುವ ಉಪಾಯ ಕೈಗೊಳ್ಳಬೇಕು. ಇಲ್ಲವಾದರೆ ಪ್ರಬಲವಾದ ಹೋರಾಟ ಪ್ರಾರಂಭವಾಗುವುದು. ರಾಜಕೀಯ ಖೈದಿಗಳನ್ನು ಮುಕ್ತ ಮಾಡಿ ಇತಿಹಾಸ ಪ್ರಸಿದ್ಧ ಆಗಸ್ಟ್ 15ನೇ ದಿನದಂದು ಶಾಂತಿ ಮತ್ತು ಸೌಹಾರ್ದ ವಾತಾವರಣವಿರುವಂತೆ ತಪ್ಪದೆ ಮಾಡಬೇಕು. ದಿವಾನರಾದ ರಾಮಸ್ವಾಮಿಯವರೊಡನೆ ನಡೆದ ಸಂಧಾನದ ಮಾತುಕತೆ ಮುಗಿದಿದೆಯೆಂದು ತಿಳಿದುಕೊಳ್ಳಬೇಕು. ಆದ್ದರಿಂದ ನಮ್ಮ ಬೇಡಿಕೆ ಪೂರ್ಣವಾಗಬೇಕಾದರೆ ಹೋರಾಟ ಆರಂಭಿಸುವುದು ಅನಿವಾರ್ಯವಾಗಿರುವುದು[198].

ಆಗಸ್ಟ್ 9, 1947ರಂದು ಮೈಸೂರು ನಗರದ ಪುರ ಭವನದಲ್ಲಿ (ಟೌನ್ ಹಾಲಿನಲ್ಲಿ) ಕಾಂಗ್ರೆಸ್ ಅಧ್ಯಕ್ಷ ಕೆ.ಸಿ.ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಮೈಸೂರು ಕಾಂಗ್ರೆಸ್ ಕಾರ್ಯ ಸಮಿತಿಯು ಸಭೆ ಸೇರಿ ಸತ್ಯಾಗ್ರಹ ಚಳುವಳಿಯನ್ನು ಸೆಪ್ಟಂಬರ್ 1 ರಿಂದ ಆರಂಭಿಸುವ ಗೊತ್ತುವಳಿಯನ್ನು ಸಭೆ ಮುಂದೆ ಮಂಡಿಸಿದರು. ಮೈಸೂರು ಸರಕಾರದವರು ಜನತೆಯ ಬೇಡಿಕೆಯನ್ನು ಬದಿಗೊತ್ತಿ ಹಾಗೂ ಜವಾಬ್ದಾರಿ ಸರಕಾರ

ಸ್ಥಾಪಿಸಲು ತಪ್ಪಿದ್ದರಿಂದ ಮತ್ತು ರಾಜಕೀಯ ಖೈದಿಗಳನ್ನು ಬಿಡುಗಡೆ ಮಾಡಲು ನಿರಾಕರಿಸಿದ್ದರಿಂದ ಈ ಗೊತ್ತುವಳಿಯನ್ನು ಮಂಡಿಸಲಾಯಿತೆಂದು ಸಭೆಗೆ ತಿಳಿಸಿದರು. ನಂತರ ಕೆ.ಸಿ.ರೆಡ್ಡಿಯವರು ಭಾಷಣ ಮಾಡುತ್ತಾ 'ಕಾದು ನೋಡಿದ್ದು ಆಯಿತು, ಇನ್ನೂ ಉಳಿದಿರುವುದೊಂದೇ ಮಾರ್ಗ, ಅದು ಸತ್ಯಾಗ್ರಹ ಎಂದು ಘೋಷಿಸಿದರು. ಅಧ್ಯಕ್ಷರ ಈ ಘೋಷಣೆಯು 'ಮೈಸೂರು ಚಲೋ' ಚಳುವಳಿಯ ಆರಂಭಕ್ಕೆ ಕಾರಣವಾಯಿತು[199]. ಆಗಸ್ಟ್ 10, 1947ರಂದು ಭಾರತದ ಒಕ್ಕೂಟದ ಅಂಗವಾಗಿರಲು ಮೈಸೂರು ಸರಕಾರ ನಿರ್ಧರಿಸಿದೆಯೆಂದು ದಿವಾನರಾದ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಪ್ರಕಟಿಸಿದರು ಹಾಗೂ ಇನ್‌ಸ್ಟ್ರುಮೆಂಟ್ ಆಫ್ ಆಕ್ಸಿಷನ್‌ಗೆ ಮೈಸೂರು ಸಂಸ್ಥಾನದ ಪರವಾಗಿ ಜಯಚಾಮರಾಜ ಒಡೆಯರು ಸಹಿ ಹಾಕಿದರು. ಇದರಿಂದ ಮೈಸೂರು ಸಂಸ್ಥಾನ ಭಾರತದ ಒಂದು ಭಾಗವಾಗಿ ವಿಲೀನಗೊಂಡಿತು. ಈ ತೀರ್ಮಾನವನ್ನು ಮೈಸೂರು ಕಾಂಗ್ರೆಸ್ ಸ್ವಾಗತಿಸಿತು. ಜವಾಬ್ದಾರಿ ಸರಕಾರ ಸ್ಥಾಪನೆಗಾಗಿ ಸೆಪ್ಟಂಬರ್ 1 ರಿಂದ ಆರಂಭಿಸುವ ಸತ್ಯಾಗ್ರಹದ ನಿರ್ಧಾರವನ್ನು ಅದು ಬದಲಿಸಲಿಲ್ಲ. ಮೈಸೂರು ಸರಕಾರ ಸುಧಾರಣಾ ಸಲಹಾ ಸಮಿತಿಯನ್ನು ರಚಿಸಿ ಅದರಲ್ಲಿ ಕಾಂಗ್ರೆಸ್ಸಿಗೆ ನಾಲ್ಕು ಸ್ಥಾನಗಳನ್ನು ನೀಡಿತು. ಇದರಿಂದ ಕಾಂಗ್ರೆಸ್ ಅತೃಪ್ತಿಗೊಂಡು ಸಲಹಾ ಸಮಿತಿಯ ಕಾರ್ಯಕ್ರಮಗಳನ್ನು ಬಹಿಷ್ಕರಿಸಲು ತೀರ್ಮಾನಿಸಿತು[200].

1947ರ ಆಗಸ್ಟ್ 15 ರಂದು ಬ್ರಿಟಿಷರು ಭಾರತೀಯರಿಗೆ ಅಧಿಕಾರ ಹಸ್ತಾಂತರ ಮಾಡಿ ಭಾರತದಿಂದ ತೆರಳಿದರು. ಭಾರತವು ಅಂದು ಸ್ವತಂತ್ರ ರಾಷ್ಟ್ರವಾಯಿತು. ಆ ದಿನ ಇಡೀ ದೇಶದಲ್ಲೆಲ್ಲಾ ತ್ರಿವರ್ಣಧ್ವಜ ಹಾರಿಸಿ, ರಾಷ್ಟ್ರಗೀತೆ, ಜನಗಣಮನ ಹಾಡಿ, ಗಳಿಸಿರುವ ಸ್ವಾತಂತ್ರ್ಯವನ್ನು ಉಳಿಸಿಕೊಂಡು ರಾಷ್ಟ್ರದ ಐಕ್ಯತೆ ಮತ್ತು ಅಭಿವೃದ್ಧಿಗಾಗಿ ಕೆಲಸ ಮಾಡಲು ಜನರೆಲ್ಲರೂ ಪ್ರತಿಜ್ಞೆ ಕೈಗೊಂಡರು. ರಾಷ್ಟ್ರದ ಎಲ್ಲಾ ಕಡೆಗಳಂತೆಯೇ ಮೈಸೂರು ಸಂಸ್ಥಾನದಾದ್ಯಂತ ಸ್ವಾತಂತ್ರ್ಯ ದಿನಾಚರಣೆಯನ್ನು ಮೈಸೂರು ಕಾಂಗ್ರೆಸ್ಸಿಗರು, ವಿದ್ಯಾರ್ಥಿಗಳು, ಕಾರ್ಮಿಕರು, ಸಂಘ-ಸಂಸ್ಥೆಗಳು ವಿಜೃಂಭಣೆಯಿಂದ ಆಚರಿಸಿದರು. ಪ್ರಭಾತ್‌ಬೇರಿ, ಮೆರವಣಿಗೆ, ಸಭೆಗಳು ಧ್ವಜಾರೋಹಣದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು. ಬಹುತೇಕ ಮೈಸೂರು ಸಂಸ್ಥಾನದಾದ್ಯಂತ ಮೈಸೂರು ಕಾಂಗ್ರೆಸ್ಸಿಗರು ಆರಂಭಿಸುವ ಜವಾಬ್ದಾರಿ ಸರ್ಕಾರ ಚಳುವಳಿ ಬೆಂಬಲ ನೀಡುವುದಾಗಿ ಘೋಷಿಸಿದರು[201]. 15 ಆಗಸ್ಟ್ 1947ರಂದು ಶ್ರೀರಂಗಪಟ್ಟಣದಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ವೈಭವದಿಂದ ಆಚರಿಸಲಾಯಿತು. ನಗರದ ಎಲ್ಲ ಬೀದಿಗಳೂ ತಳಿರು ತೋರಣಗಳಿಂದಲೂ, ಚಪ್ಪರಗಳಿಂದಲೂ ಅಲಂಕೃತವಾಗಿದ್ದವು. 4 ಮೇ 1799ರಲ್ಲಿ ಟಿಪ್ಪು ಸುಲ್ತಾನ ಪತನವಾದ ದಿನದಿಂದ ಶ್ರೀರಂಗಪಟ್ಟಣ ಬತೇರಿಯ ಮೇಲೆ ಹಾರುತ್ತಿದ್ದ ಯೂನಿಯನ್ ಜಾಕ್‌ಧ್ವಜವನ್ನು ಕೆಳಗಿಳಿಸಿ ತ್ರಿವರ್ಣಧ್ವಜವನ್ನು ಹಾರಿಸಲಾಯಿತು.

ಹಿಂದಿನ ರಾತ್ರಿ 1 ಗಂಟೆಯಿಂದಲೇ ಸಭೆ, ಹರಿಕಥೆ, ಕೀರ್ತನೆ, ಭಾಷಣಗಳು ಜರುಗಿದವು. ಬೆಳಿಗ್ಗೆ ನಗರದ ಎಲ್ಲ ಬೀದಿಗಳಲ್ಲೂ ರಾಷ್ಟ್ರಧ್ವಜ ಮತ್ತು ರಾಷ್ಟ್ರ ನಾಯಕರ ಭಾವಚಿತ್ರದೊಂದಿಗೆ ಮೆರವಣಿಗೆ ನಡೆಯಿತು. ಪೌರಸಭೆಯವರಿಂದ ಎಲ್ಲರಿಗೂ ಸಿಹಿ ತಿಂಡಿಯನ್ನು ಹಂಚಲಾಯಿತು. ಶ್ರೀರಂಗಪಟ್ಟಣದಲ್ಲಿ ಶ್ರೀನಿವಾಸಯ್ಯನವರೂ, ಗಂಜಾಮಿನಲ್ಲಿ ಕೋದಂಡರಾಮಯ್ಯ ಮತ್ತು ಪುಟ್ಟಲಿಂಗಯ್ಯ ಮೊದಲಾದವರೂ ಬಡಬಗ್ಗರಿಗೆ ಅನ್ನದಾನವೇರ್ಪಡಿಸಿದರು. ಮುಸ್ಲಿಮರೂ ಸಹ ಈ ಸಮಾರಂಭದಲ್ಲಿ ಭಾಗವಹಿಸಿದ್ದರು[202].

ಸ್ವಾತಂತ್ರ್ಯ ಬಂದ ದಿನದಂದು ಮೈಸೂರು ರಾಜ್ಯದಲ್ಲಿ ಸರಕಾರ ಪರವಾಗಿ ಅಧಿಕೃತವಾಗಿ ಸಮಾರಂಭಗಳು ನಡೆಯಲಿಲ್ಲ. ಕಾರಣ ಮೈಸೂರು ಸರ್ಕಾರ ಈ ಬಗ್ಗೆ ವಿಚಾರ ಮಾಡಲಿಲ್ಲ. ರಾಜಧಾನಿ ಬೆಂಗಳೂರಿನಲ್ಲಿ ಇರುವ ಅಠಾರ ಕಛೇರಿ ಕಟ್ಟಡದ ಮೇಲೆ ರಾಜ್ಯದ ಗಂಡ ಭೇರುಂಡ ಧ್ವಜವೊಂದು ಮಾತ್ರ ಹಾರಾಡುತ್ತಿತ್ತು. ತ್ರಿವರ್ಣ ಧ್ವಜವನ್ನು ಹಾರಿಸಿರಲಿಲ್ಲ. ದಿವಾನರಾದ ಅರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಅವರು ಬೆಂಗಳೂರು ಪೌರಸಭೆ ಏರ್ಪಡಿಸಿದ್ದ ಸ್ವಾತಂತ್ರ್ಯ ದಿನಾಚರಣೆ ಸಮಾರಂಭದಲ್ಲಿ ಮಾತ್ರ ಹಾಜರಿದ್ದರು. ದಿವಾನರಾಗಿ ಸ್ವಾತಂತ್ರ್ಯ ಬಂದ ಸವಿದಿನವನ್ನು ಅಧಿಕೃತ ಸಮಾರಂಭದ ಮೂಲಕ ಅಚರಿಸಲೇ ಇಲ್ಲ. ಆಗ ಬೆಂಗಳೂರಿನ ಬಿನ್ನಿಮಿಲ್‌ನಲ್ಲಿ ಕೆಲಸ ಮಾಡುತ್ತಿದ್ದ ದೇಶಪ್ರೇಮಿ ನಾರಾಯಣಸ್ವಾಮಿ, ಸರ್ಕಾರ ಸ್ಮಶಾನಮೌನ ಆಚರಿಸುತ್ತಿರುವ ಬಗ್ಗೆ ಸಿಡಿದೆದ್ದು ಅಠಾರ ಕಛೇರಿ ಮೇಲಕ್ಕೆ ಹತ್ತಿ ತ್ರಿವರ್ಣ ಧ್ವಜವನ್ನು ಹಾರಿಸಿದರು. ಈ ಧ್ವಜ ಒಂದೆರಡು ಗಂಟೆ ಕಾಲ ಅಠಾರ ಕಛೇರಿ ಮೇಲೆದ್ದೀತು. ಇದು ಖಾಯಂ ಆಗಿ ಹಾರಾಡುವಂತೆ ಮಾಡಲು ಜವಾಬ್ದಾರಿ ಸರ್ಕಾರ ಸ್ಥಾಪನೆ ಚಳುವಳಿಗೆ ನಾಂದಿಯಾಯಿತು[203].

ಅದೇ ರೀತಿಯಾಗಿ ಮೈಸೂರಿನಲ್ಲಿ ಅರಮನೆಯ ಮೇಲೆ, ಸರಕಾರಿ ಕಛೇರಿಗಳ ಮೇಲೆ ತ್ರಿವರ್ಣ ಧ್ವಜ ಹಾರಿಸಲಿಲ್ಲ. ರಾಷ್ಟ್ರಗೀತೆ ಹಾಡಲಿಲ್ಲ. ಇದರಿಂದ ಮೈಸೂರು ಕಾಂಗ್ರೆಸ್ ಮತ್ತು ಮೈಸೂರು ಸಂಸ್ಥಾನದ ಜನತೆ ಬೇಸರಗೊಂಡರು. ತಮ್ಮ ಸಂಸ್ಥಾನದಲ್ಲಿಯೇ ತಮ್ಮ ಗುರಿ ಸಾಧನೆಯಾಗಲಿಲ್ಲವೆಂದು ಮೈಸೂರು ಕಾಂಗ್ರೆಸ್ 'ಮೈಸೂರು ಚಲೋ" ಚಳುವಳಿಯನ್ನು ಆರಂಭಿಸಲು ಸಿದ್ಧತೆಯನ್ನು ಆರಂಭಿಸಿತು[204].

ಮೈಸೂರು ಚಲೋ ಚಳುವಳಿಯ ಸಂಘಟನೆ

1947 ಆಗಸ್ಟ್ 16 ರಂದು ಪಾಂಡವಪುರ ತಾಲ್ಲೂಕು ಕಛೇರಿಯನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಲು ವೈ.ಸಿ.ಮರಿಯಪ್ಪನವರ ನೇತೃತ್ವದಲ್ಲಿ ಚಳುವಳಿಕಾರರು ತಾಲ್ಲೂಕು ಕಛೇರಿಯ ಆವರಣದಲ್ಲಿ ಘೇರಾಯಿಸಿದರು. ಮೊದಲೇ ತೀರ್ಮಾನಿಸಿದ್ದ

ಕಾರ್ಯಕ್ರಮವಾಗಿದ್ದುರಿಂದಲೇ ಸುತ್ತಮುತ್ತಲಿನ ಗ್ರಾಮಗಳಾದ ಹಾರೋಹಳ್ಳಿ, ಬೆಟ್ಟಹಳ್ಳಿ, ಶಂಭೂನಹಳ್ಳಿ, ಹಿರೇಮರಳಿ, ಕೆನ್ನಾಳು ಜನ ಚಳುವಳಿಯಲ್ಲಿ ಸೇರಿಕೊಂಡಿದ್ದರು. ಕೈಯಲ್ಲಿ ತ್ರಿವರ್ಣಧ್ವಜ ಹಿಡಿದಿದ್ದ ವೈ.ಸಿ.ಮರಿಯಪ್ಪನವರು ಉಪವಿಭಾಗಾಧಿಕಾರಿಯಾಗಿದ್ದ ವರದರಾಜಪಿಳ್ಳೆ ಅವರಿಗೆ ಮನವಿ ಸಲ್ಲಿಸಿದರು ಹಾಗೂ ತಾಲ್ಲೂಕು ಕಛೇರಿಯನ್ನು ತಮ್ಮ ವಶಕ್ಕೆ ಒಪ್ಪಿಸಲು ಕೇಳಿದರು. ಅದಕ್ಕೆ ಅವರು ಒಪ್ಪಲಿಲ್ಲ. ವೈ.ಸಿ. ಮರಿಯಪ್ಪನವರು ತಮ್ಮ ಅನುಯಾಯಿಗಳೊಂದಿಗೆ "ಬೋಲೋ ಭಾರತ್ ಮಾತಾಕಿ ಜೈ" ಎಂಬ ಘೋಷಣೆಯನ್ನು ಮಾಡುತ್ತಾ ಕಛೇರಿಯನ್ನು ಪ್ರವೇಶಿಸುವ ಪ್ರಯತ್ನ ಮಾಡಿದರು. ಇದರಿಂದ ಕೋಪಗೊಂಡ ಉಪವಿಭಾಗಾಧಿಕಾರಿಗಳು ಲಾಠಿ ಛಾರ್ಜ್‌ಗೆ ಆದೇಶ ನೀಡುತ್ತಾರೆ. ಇನ್ಸ್‌ಪೆಕ್ಟರ್ ಆಗಿದ್ದ ಸೈಯದ್ ಮುಸ್ತಾಫಾ ಹಾಗೂ ಸಬ್ ಇನ್ಸ್‌ಪೆಕ್ಟರ್ ಆಗಿದ್ದ ಚೆಣ್ಣ್ಯ ಕೃಷ್ಣಪ್ಪನವರು ಲಾಠಿಛಾರ್ಜ್ ಆರಂಭಿಸಿದರು. ಪೊಲೀಸ್ ಲಾಠಿಛಾರ್ಜ್ ಪ್ರತಿಯಾಗಿ ಸತ್ಯಾಗ್ರಹಿಗಳು ತಾಲ್ಲೂಕು ಕಛೇರಿಯ ಮೇಲೆ ಕಲ್ಲು ಬೀಸಿದರು. ಲಾಠಿ ಪ್ರಹಾರಕ್ಕೆ ಎದೆಗುಂದದೆ ವೈ.ಸಿ.ಮರಿಯಪ್ಪನವರು ಒಳಗಡೆಗೆ ಹೋಗಲು ಯತ್ನಿಸಿದಾಗ ಪೊಲೀಸರು ಮೊಣಕೈ, ಮೊಣಕಾಲುಗಳನ್ನು ಲಾಠಿಗಳಿಂದ ಚೆನ್ನಾಗಿ ಬಡಿದರು. ಇದರಿಂದ ಆವೇಶಗೊಂಡ ಸತ್ಯಾಗ್ರಹಿಗಳು ತಂಡೋಪತಂಡವಾಗಿ ತಾಲ್ಲೂಕು ಕಛೇರಿಗೆ ದಾವಿಸಿದರು. ಸಿಟ್ಟಿಗೆದ್ದ ಜನ ಕವಣೆಗಳನ್ನು ಬೀಸಿಕಲ್ಲು ಒಗೆಯಲು ಪ್ರಯತ್ನಿಸಿದರು. ಆಗ ಉಪವಿಭಾಗಾಧಿಕಾರಿಗಳ ಸೂಚನೆಯಂತೆ ಪೊಲೀಸರು ಗುಂಡುಹಾರಿಸಿದಾಗ ಬೆಟ್ಟಹಳ್ಳಿ ಗ್ರಾಮದ ಒಬ್ಬಯುವಕ ಅಸುನೀಗಿದನು ಈ ಸಾವು ಮಂಡ್ಯ ಜಿಲ್ಲೆಯಲ್ಲಿಯ ಸ್ವಾತಂತ್ರ್ಯ ಹೋರಾಟಕ್ಕಾಗಿ ಬಲಿಯಾದ ಮೊದಲ ಘಟನೆಯಾಯಿತು. ಹಾರೋಹಳ್ಳಿಯ ವೈರಮುಡಿಗೌಡ (ಮೊಂಡಣ್ಣ) ಪೆಟ್ಟಬಿದ್ದಿತು. ಗಾಯಗೊಂಡಿದ್ದ ಮರಿಯಪ್ಪನವರಾದಿಯಾಗಿ ಅನೇಕರನ್ನು ಬಂಧಿಸಲಾಯಿತು[205].

1947ರ ಆಗಸ್ಟ್ 19 ರಂದು ಮೈಸೂರು ಕಾಂಗ್ರೆಸ್‌ನ ಪ್ರಕಟಣಾ ಕಾರ್ಯದರ್ಶಿ ಎಚ್.ಕೆ.ವೀರಣ್ಣಗೌಡರು ಕಾರ್ಯಕಾರಿ ಸಮಿತಿಯ ಸಭೆ ನಡೆಸಿ ಒಂದು ಹೇಳಿಕೆ ಹೊರಡಿಸಿದರು. ಕಾಂಗ್ರೆಸ್ಸಿನ ಎಲ್ಲ ಬೇಡಿಕೆಗಳನ್ನು ಈಡೇರುವವರೆಗೂ 1947ರ ಸೆಪ್ಟಂಬರ್ 1 ರಿಂದ ಸತ್ಯಾಗ್ರಹ ಆರಂಭಿಸಲಾಯಿತು. ಕೆ.ಸಿ.ರೆಡ್ಡಿಯವರನ್ನು ಸತ್ಯಾಗ್ರಹದ ಪ್ರಥಮ ಸರ್ವಾಧಿಕಾರಿಯಾಗಿ ನೇಮಿಸಲಾಯಿತು. ಚಳುವಳಿಯನ್ನು ನಿಲ್ಲಿಸುವ ಅಧಿಕಾರವನ್ನು ಕಾರ್ಯಕಾರಿ ಸಮಿತಿಯ ಮೂಲ ಸದಸ್ಯರಿಗೆ ಮಾತ್ರ ವಹಿಸಲಾಯಿತು. ಶಾಸನಸಭೆಗಳಲ್ಲಿರುವ ಕಾಂಗ್ರೆಸ್ ಸದಸ್ಯರು ಸಹ ಚಳುವಳಿಯಲ್ಲಿ ಭಾಗವಹಿಸುವವರೆಂದೂ, ಆದರೆ ಅವರು ಶಾಸನಸಭೆಗಳಿಗೆ ತಮ್ಮ ಸ್ಥಾನಗಳನ್ನು ತ್ಯಜಿಸುವುದಿಲ್ಲವೆಂದೂ ತಿಳಿಸಿದರು. ಕಾಂಗ್ರೆಸ್ಸಿನ ಅಂಗರಚನಾ ನಿಯಮಗಳನ್ನು ತಾತ್ಕಾಲಿಕವಾಗಿ ರದ್ದುಗೊಳಿಸಿದರು. ಸತ್ಯಾಗ್ರಹದ ನಿರ್ಣಯ ಮತ್ತು ಈಗಿನ

ಪರಿಸ್ಥಿತಿಗಳನ್ನು ಕುರಿತು ಶ್ರೀಮನ್ಮಹಾರಾಜರವರಿಗೆ ಪತ್ರ ಬರೆಯಲು ಕಾರ್ಯಕಾರಿ ಸಮಿತಿಯ ನಿರ್ಧಾರವನ್ನು ತಿಳಿಸಿದರು. ಸೆಪ್ಟೆಂಬರ್ 1 ರಿಂದ ಸಂಸ್ಥಾನಾದ್ಯಂತ ಹರತಾಳ, ಪ್ರಭಾತ್‌ಬೇರಿ, ಮೆರವಣಿಗೆ, ರಾಷ್ಟ್ರಧ್ವಜಾರೋಹಣ, ಸಾರ್ವಜನಿಕ ಸಭೆ, ಸತ್ಯಾಗ್ರಹದ ಪ್ರತಿಜ್ಞೆ ಮೊದಲಾದವುಗಳನ್ನು ಎಲ್ಲರೂ ಕೈಗೊಳ್ಳಬೇಕೆಂದೂ ಕಾರ್ಯಕಾರಿ ಸಮಿತಿಯು ಪ್ರಾರ್ಥಿಸಿತು. ಅರಣ್ಯಶಾಸನ, ಅಬಕಾರಿ ಕಾನೂನು, ಪ್ರತಿಬಂಧಕಾಜ್ಞೆಗಳು ಇವುಗಳ ಭಂಗ, ಹೆಂಡ ಮತ್ತು ಸಾರಾಯಿ ಅಂಗಡಿಗಳ ಮುಂದೆ ಪಿಕೆಟಿಂಗ್ ನಡೆಸುವುದು, ವಿದ್ಯಾರ್ಥಿಗಳು ಮತ್ತು ಕಾರ್ಮಿಕರ ಮುಷ್ಕರಗಳನ್ನು ಏರ್ಪಡಿಸುವುದು, ಟಿಕೆಟ್ ಪಡೆಯದೆ ರೈಲುಗಳಲ್ಲಿ ಪ್ರಯಾಣ ಮಾಡುವುದು ಇವು ಸತ್ಯಾಗ್ರಹದ ಕಾರ್ಯಕ್ರಮಗಳೆಂದು ತಿಳಿಸಿದರು. ಸೆಪ್ಟಂಬರ್ 2ನೇ ತಾರೀಖು ಕಾಂಗ್ರೆಸ್ ನಾಯಕರು 3 ತಂಡಗಳಲ್ಲಿ ಕಾಲ್ನಡಗೆಯಲ್ಲಿ ಬೆಂಗಳೂರಿನಿಂದ ಹೊರಟು ಮೈಸೂರಿಗೆ 11ನೇ ತಾರೀಖು ತಲುಪಿ ಆ ದಿನದಿಂದ ಅರಮನೆ ಮುಂದೆ ಸತ್ಯಾಗ್ರಹವನ್ನು ಆಚರಿಸುವುದೆಂದು ತಿಳಿಸಿದರು[206]. ಮಂಡ್ಯದ ಮೈಸೂರು ಸಕ್ಕರೆ ಕಾರ್ಖಾನೆ ಉದ್ಯೋಗಿಗಳ ಆಶ್ರಯದಲ್ಲಿ ದಿನಾಂಕ 22ನೇ ಆಗಸ್ಟ್ 1947ರಂದು ಸಾರ್ವಜನಿಕ ಸಭೆ ನಡೆಯಿತು. ಎಚ್.ಎಸ್.ಮಾಸ್ತೀಗೌಡ, ನಾಗರಾಜ, ಬಿ.ಆರ್.ಶೇಷಗಿರಿರಾವ್, ಎ.ರಾಮಣ್ಣ, ಎಚ್.ಸಿ.ದಾಸಪ್ಪ (ಸಂಘಟನೆಯ ಅಧ್ಯಕ್ಷ) ಸಭೆಯಲ್ಲಿ ನೆರೆದ ಕಾರ್ಮಿಕರು, ರೈತರು ಮತ್ತು ಸಾರ್ವಜನಿಕರನ್ನು ಪ್ರೇರೇಪಿಸುತ್ತಾ ಜವಾಬ್ದಾರಿಯುತ ಸರಕಾರಕ್ಕಾಗಿ ಮೈಸೂರು ಕಾಂಗ್ರೆಸ್‌ನಿಂದ ದಿನಾಂಕ 1 ಸೆಪ್ಟಂಬರ್ 1947 ರಂದು ಪ್ರಾರಂಭವಾಗುವ ಚಳುವಳಿಗೆ ಸಂಪೂರ್ಣ ಬೆಂಬಲ ನೀಡಲು ಕೇಳಿಕೊಂಡರು[207].

ಕೆ.ಸಿ.ರೆಡ್ಡಿಯವರ ನಾಯಕತ್ವದಲ್ಲಿ ಕಾರ್ಯಕಾರಿ ಸಮಿತಿ ಸಭೆ ಸೇರಿ 1947ರ ಆಗಸ್ಟ್ 21 ರಿಂದ 1947ರ ಆಗಸ್ಟ್ 30 ರವರೆಗೆ ಸಂಸ್ಥಾನದಾದ್ಯಂತ ಪ್ರವಾಸ ಮಾಡಿ ಪೂರ್ಣ ಜವಾಬ್ದಾರಿ ಸರ್ಕಾರದ ಬಗ್ಗೆ ಜಾಗೃತಿ ಉಂಟು ಮಾಡಲು ಕಾರ್ಯಕ್ರಮಗಳನ್ನು ಪ್ರಕಟಿಸಿತು. ಅದರಂತೆ ಮೂರು ತಂಡಗಳನ್ನು ರಚಿಸಲಾಯಿತು. ಮೊದಲನೆಯ ತಂಡದಲ್ಲಿ ಕೆ.ಸಿ.ರೆಡ್ಡಿ, ಟಿ.ಸುಬ್ರಮಣ್ಯ, ರಾಜಶೇಖರ ಹಿರೇಮಠ ಮತ್ತು ಎಂ.ಹುಸೇನ್ ಇತರರು ಕೋಲಾರ, ತುಮಕೂರು, ಚಿತ್ರದುರ್ಗ, ಜಿಲ್ಲೆಗಳಲ್ಲಿಯೂ, ಎರಡನೆಯ ತಂಡದಲ್ಲಿ ಕೆ.ಟಿ.ಭಾಷ್ಯಂ, ಎಚ್.ಸಿದ್ದಯ್ಯ, ಎಂ.ಹುಚ್ಚೇಗೌಡ, ಎ.ಜಿ.ರಾಮಚಂದ್ರರಾವ್, ಕೆ.ಆರ್.ಮಾಧವರಾವ್, ಅವರು ಹಾಸನ, ಕಡೂರು, ಶಿವಮೊಗ್ಗ, ಜಿಲ್ಲೆಗಳಲ್ಲಿಯೂ, ಮೂರನೆಯ ತಂಡದಲ್ಲಿ ಟಿ.ಸಿದ್ದಲಿಂಗಯ್ಯ, ಕೆ.ಎಸ್.ಕುಮಾರನ್, ಎಸ್.ಚನ್ನಯ್ಯ, ನಂಜರಾಜೇಅರಸ್, ಎ.ಜಿ.ಬಂದೀಗೌಡ ಅವರು ಮಂಡ್ಯ, ಮೈಸೂರು, ಬೆಂಗಳೂರು ಜಿಲ್ಲೆಗಳಲ್ಲೂ ಪ್ರವಾಸ ಕೈಗೊಂಡು ಸಂಸ್ಥಾನದ ಒಂಭತ್ತು ಜಿಲ್ಲೆಗಳಲ್ಲೂ ಉತ್ತಮ ಸಂಘಟನಾ ಕಾರ್ಯವನ್ನು ಮಾಡಿದರು[208].

ದಿನಾಂಕ 01.09.1947ರಿಂದ ಮೈಸೂರು ಕಾಂಗ್ರೆಸ್‌ನಿಂದ ಪ್ರಾರಂಭವಾಗಲಿರುವ ಸತ್ಯಾಗ್ರಹದ ಸಲುವಾಗಿ ಜನರಿಂದ ಬೆಂಬಲ ಪಡೆಯಲು ಕಾಂಗ್ರೆಸ್ ನಾಯಕರಾದ ಚಂಗಲರಾಯರೆಡ್ಡಿ, ಕೆ.ಟಿ.ಭಾಷ್ಯಂ, ಟಿ.ಸುಬ್ರಮಣ್ಯ, ಟಿ.ಸಿದ್ದಲಿಂಗಯ್ಯ ಹಾಗೂ ಇತರ ನಾಯಕರು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸಂಚರಿಸಿದರು. ಟಿ.ಸಿದ್ದಲಿಂಗಯ್ಯ ಮತ್ತು ಅವರ ತಂಡದವರು ಮಂಡ್ಯ ಹಾಗೂ ಮೈಸೂರು ಜಿಲ್ಲೆಯ ಕರಡಹಳ್ಳಿ, ನಾಗಮಂಗಲ, ಸಿಂಧಘಟ್ಟ, ಕೃಷ್ಣರಾಜಪೇಟೆ, ಹೊಸಹೊಳಲು, ಕ್ಯಾತನಹಳ್ಳಿ, ಬೆಳಗೊಳ, ಶ್ರೀರಂಗಪಟ್ಟಣ, ಚಿಕ್ಕ ಅರಸಿನಕೆರೆ, ಮಳವಳ್ಳಿ, ಹಿಟ್ಟನಹಳ್ಳಿಕೊಪ್ಪಲು, ಹೊಳಲು ಮತ್ತು ಮಂಡ್ಯಗಳಲ್ಲಿ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದರು. ತಮ್ಮ ಭಾಷಣದಲ್ಲಿ ನಾಯಕರು ಭಾರತದಲ್ಲಿ ಸ್ವಾತಂತ್ರ್ಯದ ಆಗಮನವಾಗಿದೆ ಮತ್ತು ಮೈಸೂರು ರಾಜ್ಯದಲ್ಲಿ ಯಾವುದೇ ಸಂವಿಧಾನಿಕ ಪ್ರಗತಿಯು ಕಾಣದೇ ಇರುವುದು. ಈ ಕೊರತೆಯು ಮೈಸೂರು ಸರಕಾರದ ಭಾಗಕ್ಕೆ ಮತ್ತು ಮಹಾರಾಜರಿಗೆ ಯಾವುದೇ ಉತ್ಸವ ಅಥವಾ ಪರಮಾನಂದ ವಿಷಯವಾಗಿಲ್ಲ. ಅರಮನೆ ಮತ್ತು ಬೃಂದಾವನದಲ್ಲಿ ಸ್ವಾತಂತ್ರ್ಯದ ಕತ್ತಲು ಆವರಿಸಿದೆ. ರಾಜ್ಯದ ಯಾವುದೇ ಸರಕಾರಿ ಕಟ್ಟಡಗಳ ಮೇಲೆ ಡೋಮಿನಿಯನದ ಧ್ವಜವು ಹಾರಾಡುತ್ತಿಲ್ಲ ಹಾಗೂ ಆಗಸ್ಟ್ 15 ರಂದು ರಾಜಕೀಯ ಖೈದಿಗಳನ್ನು ಬಿಡುಗಡೆ ಮಾಡಿಲ್ಲ. ದಿವಾನರ Mark-Time ಈ ನೀತಿಯು ತಿರುವಾಂಕೂರು ಮತ್ತು ಇಂದೋರದಲ್ಲಿ ಬೆಳೆಯುತ್ತಿರುವ ರಾಜಕೀಯ ಬೆಳವಣಿಗೆಗಳು ಹೇಳುತ್ತಿರುವಂತೆಯು ಅಲ್ಲಿಯ ದಿವಾನರು, ಮಹಾರಾಜರಿಗೆ ಜನರ ಆಶಯದ ವಿರುದ್ಧವಾಗಿ ತಪ್ಪು ಮಾರ್ಗದರ್ಶನ ನೀಡುತ್ತಿದ್ದಾರೆ. ದಿವಾನರು ಮತ್ತು ರಾಜಕೀಯ ಕಾರ್ಯದರ್ಶಿಗಳು ಇದರಿಂದ ಪಾಠ ಕಲಿಯಬೇಕೆಂದು ತಿಳಿಸಿದರು[209].

27 ಆಗಸ್ಟ್ 1947ರ ಸಂಜೆ ಕಾಂಗ್ರೆಸ್ ನಾಯಕರಾದ ಟಿ.ಸಿದ್ದಲಿಂಗಯ್ಯ, ಕೆ.ಎಚ್.ಕುಮಾರ ಮತ್ತು ಎ.ಜಿ.ಬಂದೀಗೌಡರು ಶ್ರೀರಂಗಪಟ್ಟಣದ ಗಾಂಧೀ ಮೈದಾನದಲ್ಲಿ ಸತ್ಯಾಗ್ರಹದ ಪ್ರಚಾರ ಭಾಷಣ ಮಾಡಿದರು. ಬೆಂಗಳೂರಿನಿಂದ ಅರಮನೆಯ ಮುಂದೆ ಸತ್ಯಾಗ್ರಹ ಹೂಡಲು ಕಾಲ್ನಡಿಗೆಯಲ್ಲಿ ಬರುವ ಸತ್ಯಾಗ್ರಹಿಗಳ ತಂಡಗಳಿಗೆ ತಾವು ಊಟ ವಸತಿಗಳನ್ನು ಏರ್ಪಡಿಸುವುದಾಗಿ ಸಾಹುಕಾರ ಎಸ್.ವಿ.ಚಂದ್ರಶೇಖರಯ್ಯನವರು ಸಭೆಗೆ ತಿಳಿಸಿದರು ಹಾಗೂ ಸತ್ಯಾಗ್ರಹ ಪ್ರಚಾರ ಭಾಷಣಕ್ಕೆ ಆಗಮಿಸಿದ ಸತ್ಯಾಗ್ರಹಿಗಳಿಗೂ ಊಟ ವ್ಯವಸ್ಥೆಯನ್ನು ಏರ್ಪಡಿಸಿದ್ದರು[210].

ಮಂಡ್ಯದಲ್ಲಿ ಕಾಂಗ್ರೆಸ್ ನಾಯಕರಾದ ಹೆಚ್.ಹೊನ್ನಯ್ಯ, ಪಿ.ಎನ್.ಜವರಪ್ಪಗೌಡ, ಕೆ.ವಿ.ಶಂಕರಗೌಡ ಮೊದಲಾದವರು ಚಳವಳಿಯ ಪ್ರಚಾರಕ್ಕಾಗಿ ಜಿಲ್ಲಾದ್ಯಂತ ಪ್ರವಾಸ ಮಾಡಿದರು. ಹಳ್ಳಿಹಳ್ಳಿಗೂ ಭೇಟಿನೀಡಿ ಚಳುವಳಿಯ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿದರು. ಮಂಡ್ಯದ ಸಮೀಪದ ಗರುಡನಹಳ್ಳಿ ಬಳಿ ಪ್ರಚಾರ ಮಾಡುತ್ತಿದ್ದಾಗ

ದಫೇದಾರರೊಬ್ಬರಿಂದ ಕೆ.ವಿ.ಶಂಕರಗೌಡ ಹಾಗೂ ಪಿ.ಎನ್.ಜವರಪ್ಪಗೌಡರನ್ನು ದಸ್ತಗಿರಿ ಮಾಡಲು ವಾರೆಂಟ್ ಸಿದ್ಧವಾಗಿದೆ ಎಂಬ ವಿಷಯವನ್ನು ತಿಳಿಸಿದರು. ಕೂಡಲೇ ಜಾಗರೂಕರಾದ ಗೌಡರು ಪೊಲೀಸರಿಂದ ಬಂಧನವಾದರೆ ಚಳುವಳಿಯ ಪ್ರಚಾರ ಕಾರ್ಯ ನಿಂತು ಹೋಗುತ್ತದೆಂದು ತಿಳಿದು ಪಾಪೇಗೌಡರ ಹೆಂಡದ ಲಾರಿಯಲ್ಲಿ ಪೀಪಾಯಿ ಸಂದುಗಳಲ್ಲಿ ಕುಳಿತು ಪಾರಾದರು[211].

28 ಆಗಸ್ಟ್ 1947ರ ಸಂಜೆ ಮೈಸೂರು ನಗರದ ಪುರಭವನ (ಟೌನ್‌ಹಾಲಿನಲ್ಲಿ)ದಲ್ಲಿ ಮೈಸೂರು ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಸತ್ಯಾಗ್ರಹ ಪ್ರಚಾರದ ಭಾಷಣಗಳು ಆರಂಭವಾದವು. ಟಿ.ಸಿದ್ದಲಿಂಗಯ್ಯ, ಕೆ.ಎಸ್.ಕುಮಾರ, ಎಸ್.ಚನ್ನಯ್ಯ, ಎಂ.ಎಲ್.ನಂಜರಾಜೇಅರಸ್, ಮಂಡ್ಯದ ಪ್ರಮುಖ ಮುಖಂಡರಾದ ಎ.ಜಿ.ಬಂದೀಗೌಡ, ಪಾಲಹಳ್ಳಿ ಸೀತಾರಾಮಯ್ಯನವರುಗಳ ಭಾಷಣ ಮಾಡಿದರು.

ಪಾಲಹಳ್ಳಿ ಸೀತಾರಾಮಯ್ಯನವರ ತಮ್ಮ ಭಾಷಣದಲ್ಲಿ ಈ ರೀತಿ ಅಭಿಪ್ರಾಯ ವ್ಯಕ್ತಪಡಿಸಿದರು. ಕಾಂಗ್ರೆಸ್ಸಿನ ಹೋರಾಟವು ಜನತೆಯ ಆಂದೋಲನ. ಮನ್ಮಹಾರಾಜರವರ ಕೃಪಾಶ್ರಯದಲ್ಲಿ ಜವಾಬ್ದಾರಿ ಸರ್ಕಾರ ಬೇಕೆಂದು ಕೇಳುತ್ತಿದ್ದೇವೆ. ಅದಕ್ಕೆ ಯಾವ ಬಗೆಯ ಪ್ರತಿಕ್ರಿಯೆಯೂ ಬಂದಿರುವುದಿಲ್ಲ. ಬ್ರಿಟಿಷರ ಪರಮಾಧಿಕಾರವು ಮುಕ್ತಾಯಗೊಂಡ ಮೇಲೆ ನಿಜವಾಗಿ ನೋಡಿದರೆ ಸ್ವಾತಂತ್ರ್ಯ ಬಂದಿರುವುದು ಮನ್ಮಹಾರಾಜರವರಿಗೆ ಸ್ವಾತಂತ್ರ್ಯ ದಿನಾಚರಣೆಯ ದಿನ ಅವರು ಅದನ್ನು ಆಚರಿಸಲಿಲ್ಲವೆಂಬುದು ಎಷ್ಟು ವಿಷಾದದ ವಿಷಯ. ವೈಸರಾಯರಾಗಲೀ ಅಥವಾ ಯಾರಾದರೂ ಉನ್ನತ ಐರೋಪ್ಯ ಅಧಿಕಾರಿಗಳಾಗಲೀ ಸಂಸ್ಥಾನಕ್ಕೆ ಬಂದಾಗ ಪ್ರಭುತ್ವದವರು ಲಕ್ಷಾಂತರ ರೂಪಾಯಿಗಳನ್ನು ವೆಚ್ಚಮಾಡಿ ಅವರಿಗೆ ಷೋಡಷೋಪಚಾರಗಳನ್ನು ಮಾಡುತ್ತಿದ್ದರು. ನಮ್ಮ ಅವಿಶ್ರಾಂತ ಹೋರಾಟದಿಂದ ಆ ಗುಲಾಮಗಿರಿಯಿಂದ ಇವರುಗಳು ಇಂದು ಬಿಡುಗಡೆ ಹೊಂದಿದ್ದಾರೆ. ನಮ್ಮ ನೆರೆಯ ಪ್ರಾಂತ್ಯಗಳ ಪ್ರಜೆಗಳಿಗೆ ದೊರತಿರುವ ಸ್ವಾತಂತ್ರ್ಯ ನಮಗೂ ಬೇಕೆಂದು ಕೇಳುವುದು ನಮ್ಮ ಹಕ್ಕು. ಅದಕ್ಕಾಗಿಯೇ ಸತ್ಯಾಗ್ರಹ ಎಂಬುದಾಗಿ ತಮ್ಮ ಭಾಷಣದಲ್ಲಿ ನುಡಿದರು[212]. ಶ್ರೀರಂಗಪಟ್ಟಣದ ಎ.ಜಿ.ಬಂದೀಗೌಡರು ತಮ್ಮ ಭಾಷಣದಲ್ಲಿ ಬ್ರಿಟಿಷರು ಅಧಿಕಾರದಲ್ಲಿದ್ದಾಗ ದಂಡಿನ ಪ್ರದೇಶವನ್ನು ಸಂಸ್ಥಾನಕ್ಕೆ ವಾಪಸ್ಸು ಪಡೆಯಲೂ ಮತ್ತು ಪೊಗದಿಯನ್ನು ವಜಾಮಾಡಿಸಿಕೊಳ್ಳಲು ಭಗೀರಥ ಪ್ರಯತ್ನಗಳಾದವು ಅವು ಈಡೇರಲಿಲ್ಲ. ಕಾಂಗ್ರೆಸ್ ಸರ್ಕಾರವು ಅಧಿಕಾರಕ್ಕೆ ಬಂದೊಡನೆಯೇ ಯಾರ ಪ್ರಾರ್ಥನೆಯೂ ಇಲ್ಲದೆ ದಂಡು ಸಂಸ್ಥಾನಕ್ಕೆ ಕೊಡಲ್ಪಟ್ಟು ಪೊಗದಿಯು ರದ್ದಾಯಿತು. ಶ್ರೀ ಮನ್ಮಹಾರಾಜರವರ ಕೃಪಾಶ್ರಯದಲ್ಲಿ ಜವಾಬ್ದಾರೀ ಸರ್ಕಾರಬೇಕೆಂದು ಕೇಳಿದುದ್ದಕ್ಕೆ ದಿವಾನರು ಒಂದು ಬಗೆಯ ಜವಾಬ್ದಾರೀ ಸರ್ಕಾರದ ಯೋಚನೆ ಮಾಡುತ್ತಿದ್ದೇನೆ

ಎಂದು ಹೇಳಿದರು. ಅವರ ಉಪಾಯಗಳಿಗೆ ನಮ್ಮಲ್ಲಿ ಮರುಗಳಾಗುವವರು ಯಾರೂ ಇಲ್ಲ ಎಂದು ತಿಳಿಸಿದರು[213].

ವಿದ್ಯಾರ್ಥಿಗಳ ಸಂಘಗಳ ಪೈಕಿ ಪ್ರಾತಿನಿಧಿಕವಾಗಿಯೂ, ಪ್ರತಿಭಾನ್ವಿತವಾಗಿಯೂ ಕೆಲಸ ಮಾಡುತ್ತಿದ್ದ ವಿದ್ಯಾರ್ಥಿ ಕಾಂಗ್ರೆಸ್ ಸತ್ಯಾಗ್ರಹಕ್ಕೆ ವಿದ್ಯಾರ್ಥಿಗಳ ಬೆಂಬಲಗಳಿಸುವ ಕೆಲಸದಲ್ಲಿ ಮಹತ್ವದ ಪಾತ್ರ ವಹಿಸಿತು. ಪತ್ರಿಕಾ ಪ್ರಕಟಣೆಯ ಮೂಲಕ ಸೆಪ್ಟಂಬರ್ 1ನೇ ಆಗಸ್ಟ್ ಸಂಜೆಯ ವೇಳೆಗೆ ಮೈಸೂರಿಗೆ ಬರಬೇಕು ಹಾಗೇ ಆ ವೇಳೇಗೆ ಬರಲಾಗದಿದ್ದವರೂ 10ನೇ ಸೆಪ್ಟಂಬರ್ ವೇಳೆಗೆ ಬಂದು ಕಾಂಗ್ರೆಸ್ಸಿನ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕೆಂದು ತೀಳಿಸಲಾಯಿತು. ಸೆಪ್ಟಂಬರ್ 1ನೇ ತಾರೀಖು ಹರತಾಳ, ಸಭೆ, ಮೆರವಣಿಗೆ, ಪ್ರತಿಜ್ಞೆ ಸ್ವೀಕಾರಗಳನ್ನು ನಡೆಸಬೇಕೆಂದು ಕರೆ ನೀಡಿದರು. ಮೊದಲ ಕರ್ನಾಟಕ ಪ್ರಾಂತ ವಿದ್ಯಾರ್ಥಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳ ನಾಯಕತ್ವದಲ್ಲಿ ಪ್ರಥಮ ತಂಡವು ಅರಮನೆಯ ಮುಂದಕ್ಕೆ ಮೆರವಣಿಗೆ ಹೋಗಿ ಅಲ್ಲಿ ಸತ್ಯಾಗ್ರಹವನ್ನು ಆರಂಭಿಸುವುದು ಹಾಗೂ 2ನೇ ತಾರೀಖಿನಿಂದ 10 ರವರೆಗೆ ಅರಮನೆಯ ಮುಂದೆ ತಂಡ ತಂಡವಾಗಿ ಸತ್ಯಾಗ್ರಹ ನಡೆಸಲಾಗುವುದು. 10ನೇ ತಾರೀಖು ನಂತರ ಕಾಂಗ್ರೆಸ್ಸಿನವರೊಡನೆ ಸೇರಿ ಸತ್ಯಾಗ್ರಹದಲ್ಲಿ ಭಾಗವಹಿಸಬೇಕೆಂದು ವಿದ್ಯಾರ್ಥಿ ಕಾಂಗ್ರೆಸ್ ಕಾರ್ಯದರ್ಶಿಗಳಾದ ಪ್ರಾಣೇಶರಾಯರು ಪ್ರಕಟಣೆ ಮೂಲಕ ಮೈಸೂರು ಸಂಸ್ಥಾನದ ವಿದ್ಯಾರ್ಥಿಗಳಿಗೆ ತಿಳಿಸಿದರು[214].

1947ರ ಸಪ್ಟೆಂಬರ್ 1 ರಂದು 'ಮೈಸೂರುಚಲೋ' ಸತ್ಯಾಗ್ರಹಕ್ಕೆ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಹಾಗೂ ಬಿನ್ನಿಮಿಲ್, ಮಿನರ್ವಮಿಲ್, ಮೈಸೂರುಮಿಲ್, ಟಿ.ಆರ್.ಮಿಲ್, ಎಚ್.ಎ.ಎಲ್. ಸರ್ಕಾರಿ ಎಲೆಕ್ಟ್ರಿಕ್ ಕಾರ್ಖಾನೆ, ರೈಲ್ವೆ ಕಾರ್ಮಿಕರು, ಗಣಿ ಕಾರ್ಮಿಕರುಗಳು ಬೆಂಗಳೂರು ಅರಳೇಪೇಟೆಯ ಕಾಂಗ್ರೆಸ್ ಕಛೇರಿಯ ಬಳಿ ಬೆಳಗಿನಿಂದಲೇ ಸೇರಲಾರಂಭಿಸಿದರು. ಮೈಸೂರು ಕಾಂಗ್ರೆಸ್ ಸರ್ವಾಧಿಕಾರಿ ಕೆ.ಸಿ.ರೆಡ್ಡಿ ಆಗಮಿಸಿ ರಾಷ್ಟ್ರಧ್ವಜಾರೋಹಣ ಮಾಡಿ 'ಮೈಸೂರು ಚಲೋ' ಘೋಷಣೆಯೊಂದಿಗೆ ಸತ್ಯಾಗ್ರಹಕ್ಕೆ ಚಾಲನೆ ನೀಡಿದರು. ಕೆ.ಸಿ.ರೆಡ್ಡಿ ಮಾತನಾಡಿ 'ಇದೀಗ ನಮ್ಮ ಸತ್ಯಾಗ್ರಹ ಆರಂಭವಾಗಿದೆ. ಇಲ್ಲಿಂದ ಹೊರಡುವ ಮೆರವಣಿಗೆಯಲ್ಲಿ ಸಮಸ್ತ ಜನರೂ ಭಾಗವಹಿಸಬೇಕಾಗಿ ಕೋರಿದರು. ಅಲ್ಲದೆ ಸಂಜೆ ಬನಪ್ಪ ಪಾರ್ಕ್‌ನಲ್ಲಿ ಸಭೆ ನಡೆಯಲಿದೆ ಅದಕ್ಕೆ ಎಲ್ಲರೂ ತಪ್ಪದೇ ಬರಬೇಕಾಗಿ ವಿನಂತಿ" ಎಂದು ನುಡಿದರು. ಸಭೆ ಮುಗಿದ ನಂತರ ಹೊರಟ ಮೆರವಣಿಗೆ ಸುಮಾರು ಮೂರು ಮೈಲಿ ಉದ್ದವಿದ್ದ ಮೆರವಣಿಗೆಯನ್ನು ಕಂಡು ಸರ್ಕಾರಿ ಅಧಿಕಾರಿಗಳು ಅಚ್ಚರಿಗೊಂಡರು[215].

1947 ರ ಸೆಪ್ಟಂಬರ್ 1 ರಂದು ಸಂಜೆ ಬೆಂಗಳೂರಿನ ಬನಪ್ಪಪಾರ್ಕ್‌ನಲ್ಲಿ ಕೆ.ಟಿ.ಭಾಷ್ಯಂ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ನಡೆಯಿತು. ಕೆ.ಸಿ.ರೆಡ್ಡಿ ಜನಸ್ತೋಮವನ್ನು ಉದ್ದೇಶಿಸಿ "ಬೆಂಗಳೂರಿನಲ್ಲೆಂದು ಇಂತಹ ಸಭೆ ಸೇರಿರಲಿಲ್ಲವೆಂದೂ, ಆಡಳಿತ ಪ್ರಮುಖ ಈ ಸಭೆಯನ್ನು ಪ್ರತ್ಯಕ್ಷ ಕಂಡದ್ದೇ ಆದರೆ, ಮೈಸೂರಿನ ಜನ, ಪ್ರಜೆಗಳು, ಕೇವಲ ತಮ್ಮ ಹಿಂದಿರುವ ಸ್ವಾರ್ಥಿಗಳಷ್ಟೇ ಅಲ್ಲ ಎಂಬುದು ಅರಿವಾಗುತ್ತಿತ್ತೆಂದು ಹೇಳಿದರು. ಮಾಡೋಣ ಇಲ್ಲವೇ ಮಡಿಯೋಣ ಹಿಂದೆ ದಿಲ್ಲಿ ಚಲೋ ಎಂದು ಸುಭಾಷ್‌ಚಂದ್ರ ಬೋಸರು ಹೊರಟಿದ್ದರು. ರಕ್ತಕೋಟೆಯ ಮೇಲೆ ತ್ರಿವರ್ಣಧ್ವಜವನ್ನೇರಿಸಲು ನಾವೀಗ ಅರಮನೆಯ ಬಳಿಗೆ ಹೋಗೋಣ. 'ದೂರೆತನಕ ದೂರು' ಎಂಬ ನಾಣ್ಣುಡಿಯನ್ನು ಸ್ಮರಿಸೋಣ. ಮೈಸೂರು ಚಲೋ ನಮ್ಮ ಘೋಷಣೆಯಾಗಲಿ! ನಮ್ಮ ನಾಲ್ಕು ಬೇಡಿಕೆಗಳುಂಟು. ಅವುಗಳನ್ನು ಈಡೇರಿಸಿಕೊಳ್ಳಲು ಸೆಪ್ಟೆಂಬರ್ 4 ರಂದು ಮನೆ ಬಿಟ್ಟು ಹೊರಡುವ ಸ್ವಾತಂತ್ರ್ಯವೀರರು ಪೂರ್ಣ ಜವಾಬ್ದಾರಿ ಸರ್ಕಾರವನ್ನು ಪಡೆಯದೆ ತಮ್ಮ ಮನೆಗಳಿಗೆ ಹಿಂತಿರುಗಬಾರದು ಎಂದೂ; ಜವಾಬ್ದಾರಿ ಸರ್ಕಾರ ಬಂದರೂ ಅರಮನೆ ಮುಂದೆ ಹೋಗಿ ಪ್ರಭುಗಳನ್ನು ಅಭಿನಂದಿಸಿ ಬರುತ್ತವೆ ಎಂಬ ಗುರಿ ಸಾಧನೆ ಆಗಲಿ, ಆಗದಿರಲಿ ಮೈಸೂರು ಚಲೋ ಆಗಲೇಬೇಕು. ಮೈಸೂರು ಅರಮನೆಯ ಮುಂದೆ ಸತ್ಯಾಗ್ರಹ ನಡೆಸುವುದರ ಉದ್ದೇಶ ಮಹಾರಾಜರ ಕೀರ್ತಿಗಾಗಲಿ, ಗೌರವಕ್ಕಾಗಲಿ ಯಾವ ವಿಧವಾದ ಕುಂದುಂಟು ಮಾಡುವುದಿಲ್ಲ ಎಂದು ತ್ರಿಕರಣ ಪೂರ್ವಕವಾಗಿ ಘೋಷಿಸಿದರು[216].

ಆನಂತರ ಮಾತನಾಡಿದ ಟಿ.ಸಿದ್ದಲಿಂಗಯ್ಯನವರು ಮಹಾರಾಜರನ್ನು ಪಂಜರದಲ್ಲಿನ ಗಿಳಿಯಂತೆ ಇಟ್ಟಿದ್ದಾರೆ. ಅವರಿಗೆ ಸ್ವಾತಂತ್ರ್ಯವೇ ಇಲ್ಲವಾಗಿದೆ. ಪ್ರಜೆಗಳಾದ ನಾವು ಅವರನ್ನು ಆ ಪಂಜರದಿಂದ ಬಿಡಿಸಬೇಕಾಗಿದೆ. ಪ್ರಜೆಗಳಿಗೂ ಪ್ರಭುಗಳಿಗೂ ನಡುವೆ ಉದ್ಭವಗೊಂಡಿರುವ ಅಡ್ಡಗೋಡೆಯನ್ನು ಉರುಳಿಸಬೇಕಾಗಿದೆ. ಇದೇ ಮೈಸೂರು ಚಲೋ ಚಳುವಳಿಯ ಗುರಿ ಎಂದು ವಿವರಿಸಿದರು[217]. ಅಂತಿಮವಾಗಿ ಅಧ್ಯಕ್ಷತೆ ವಹಿಸಿದ ಕೆ.ಟಿ.ಭಾಷ್ಯಂ ಅವರು ನಾವು ಧರ್ಮಯುದ್ಧವನ್ನು ಆರಂಭಿಸಲು ಇಲ್ಲಿ ಸೇರಿದ್ದೇವೆ. ನಾವು ಮಾಡಬೇಕು ಇಲ್ಲ ಮಡಿಯಬೇಕು" ಎಂದು ಹೇಳಿದರು[218]. ಮೈಸೂರು ಕಾಂಗ್ರೆಸ್ ನಾಲ್ಕು ಬೇಡಿಕೆಗಳನ್ನು ಕೆ.ಸಿ.ರೆಡ್ಡಿ ಅವರ ಬಹಿರಂಗ ಸಭೆಗೆ ತಿಳಿಸಿದರು.

1) ಮೈಸೂರು ಸಂಸ್ಥಾನದಲ್ಲಿ ಕೂಡಲೇ ಸಂಪೂರ್ಣ ಜವಾಬ್ದಾರಿ ಸರ್ಕಾರದ ಘೋಷಣೆಯಾಗಬೇಕು.

2) ಪೂರ್ಣ ಜವಾಬ್ದಾರಿ ಸರ್ಕಾರದ ಸ್ಥಾಪನೆಯ ಉದ್ದೇಶಕ್ಕಾಗಿ ಒಂದು ರಾಜ್ಯಾಂಗ ರಚನೆ ಆಗುವವರೆಗೆ ಶಾಸನಸಭೆಗಳ ವಿಶ್ವಾಸಕ್ಕೆ ಪಾತ್ರವಾದ ಒಂದು ತಾತ್ಕಾಲಿಕ ಮಂತ್ರಿಮಂಡಲ ರಚನೆಯಾಗಬೇಕು.

3) ರಾಜ್ಯಾಂಗವನ್ನು ರಚಿಸಲು ಎರಡು ಸಭೆಗಳಿಂದ ಚುನಾಯಿತರಾದ ಪ್ರತಿನಿಧಿಗಳಿಂದ ಕೂಡಿದ ರಾಜ್ಯಾಂಗ ರಚನಾ ಸಭೆಯನ್ನು ರಚಿಸಬೇಕು.

4) ಬಂಧನದಲ್ಲಿರುವ ಎಲ್ಲಾ ರಾಜಕೀಯ ಖೈದಿಗಳನ್ನು ಬಿಡುಗಡೆ ಮಾಡಬೇಕು[219].

ಮೈಸೂರು ಕಾಂಗ್ರೆಸ್‌ನ ಸತ್ಯಾಗ್ರಹ ಘೋಷಣೆಯನ್ನು ಸ್ವಾಗತಿಸಿ, ಸಂಪೂರ್ಣ ನೆರವನ್ನು ನೀಡುವುದಾಗಿ ಮದ್ರಾಸ್ ಕಾಂಗ್ರೆಸ್ ಅಧ್ಯಕ್ಷರಾದ ಕೆ.ಕಾಮರಾಜ್‌ನಾಡರ್, ಮುಂಬಯಿ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಎಸ್.ಕೆ.ಪಾಟೀಲ್, ಅಲ್ಲದೆ ಕೊಡಗು, ಆಂಧ್ರ, ಕೇರಳ ಪ್ರದೇಶಗಳ ಸತ್ಯಾಗ್ರಹಿಗಳು ತಂಡೋಪತಂಡವಾಗಿ ಬೆಂಗಳೂರಿಗೆ ಬಂದು ಸೇರಲಾರಂಭಿಸಿದರು. ಜೊತೆಗೆ ಕನ್ನಡಿಗರೆಲ್ಲ ಮೈಸೂರು ಸತ್ಯಾಗ್ರಹದಲ್ಲಿ ಭಾಗವಹಿಸುವುದಾಗಿ ಘೋಷಿಸಿದ್ದು ಮಾತ್ರವಲ್ಲದೆ. ಜನಬಲ, ಧನ ಬಲವನ್ನು ಒದಗಿಸಲು ಸಿದ್ಧರಾದರು. ಇದು ಮೈಸೂರು ಕಾಂಗ್ರೆಸ್‌ಗೆ ಬಲ ಬಂದಂತಾಯಿತು[220].

1947ರ ಸೆಪ್ಟಂಬರ್ 2, ರಂದು ಕಾಂಗ್ರೆಸ್ ನಾಯಕರು ಸಭೆ ಸೇರಿ ಸತ್ಯಾಗ್ರಹ ಕಾರ್ಯಕ್ರಮದ ಪಟ್ಟಿಯನ್ನು ತಯಾರಿಸಿದರು. ಕೆ.ಚೆಂಗಲ್‌ರಾಯರೆಡ್ಡಿಯವರ ನಾಯಕತ್ವದಲ್ಲಿ ಬೆಂಗಳೂರಿನಿಂದ ಕಾಲ್ನಡಿಗೆಯಲ್ಲಿ ಸೆಪ್ಟಂಬರ್ 4 ರಂದು ಹೊರಡುವರು. ಮಧ್ಯಾಹ್ನ ನಾಯಂಡನಹಳ್ಳಿಯಲ್ಲಿ ಸಭೆ. ರಾತ್ರಿ ಕೆಂಗೇರಿಯಲ್ಲಿ ಬಹಿರಂಗ ಸಭೆ ನಡೆಸುವುದು. 5ನೇ ತಾರೀಖು ಕುಂಬಳಗೋಡಿನಲ್ಲಿ ಸಭೆ, ರಾತ್ರಿ ಬಿಡದಿಯಲ್ಲಿ ಬಹಿರಂಗ ಸಭೆ. 6ನೇ ತಾರೀಖು ಮಾಯಗಾನಹಳ್ಳಿಯಲ್ಲಿ ಸಭೆ, ರಾತ್ರಿ ಕ್ಲೋಸ್‌ಪೇಟೆ (ರಾಮನಗರ)ದಲ್ಲಿ ಬಹಿರಂಗ ಸಭೆ. 7ನೇ ತಾರೀಖು ಹನುಮಂತರಾಯನಗುಡಿಯಲ್ಲಿ (ಕೆಂಗಲ್) ಸಭೆ, ರಾತ್ರಿ ಭೈರಾಪಟ್ಟಣದಲ್ಲಿ ಬಹಿರಂಗ ಸಭೆ. 8ನೇ ತಾರೀಖು, ಮಂಡ್ಯ ಜಿಲ್ಲೆಯ ಪ್ರವೇಶ, ಮದ್ದೂರು ತಾಲ್ಲೂಕಿನ ನಿಡಘಟ್ಟದಲ್ಲಿ ಸಭೆ, ರಾತ್ರಿ ಮದ್ದೂರಿನಲ್ಲಿ ಬಹಿರಂಗ ಸಭೆ. 9ನೇ ತಾರೀಖು, ಹನಕೆರೆಯಲ್ಲಿ ಸಭೆ, ರಾತ್ರಿ ಮಂಡ್ಯದಲ್ಲಿ ಬಹಿರಂಗ ಸಭೆ.10ನೇ ತಾರೀಖು, ಕೊಡಿಯಾಲದಲ್ಲಿ ಸಭೆ, ರಾತ್ರಿ ಅರಕೆರೆಯಲ್ಲಿ ಬಹಿರಂಗ ಸಭೆ.11ನೇ ತಾರೀಖು, ದೊಡ್ಡಪಾಳ್ಯದಲ್ಲಿ ಸಭೆ, ರಾತ್ರಿ ಶ್ರೀರಂಗಪಟ್ಟಣದಲ್ಲಿ ಬಹಿರಂಗಸಭೆ. 12ನೇ ತಾರೀಖು ಸಿದ್ದಲಿಂಗಪುರದಲ್ಲಿ ಸಭೆ, ರಾತ್ರಿ ಮೈಸೂರಿನಲ್ಲಿ ಬಹಿರಂಗ ಸಭೆ.13ನೇ ತಾರೀಕು ಮೈಸೂರಿನಲ್ಲಿ ವಿಶ್ರಾಂತಿ. 14ನೇ ತಾರೀಖು ಬೆಳಿಗ್ಗೆ 10 ಗಂಟೆಗೆ ಅರಮನೆಯ ಮುಂದೆ ಸತ್ಯಾಗ್ರಹ[221].

ಒಂದು ಕಡೆ ಚಳುವಳಿಯ ಸಂಘಟನೆ ಆರಂಭವಾದರೆ, ಇನ್ನೊಂದೆಡೆ ಈ ಸತ್ಯಾಗ್ರಹವನ್ನು ನಿಲ್ಲಿಸಲು, ಸಂಸ್ಥಾನದ ಅನೇಕ ಜನರು ಪ್ರಯತ್ನಿಸಿದರು. ಅಂತವರಲ್ಲಿ ಎಂ.ರಾಮಚಂದ್ರರಾವ್‌ಸಿಂಧ್ಯ, ಮಂತ್ರಿ ಎನ್.ರುದ್ರಯ್ಯ, ಎಂ.ಕಸ್ತೂರಿ, ರಂಗಶೆಟ್ಟಿ, ಡಿ.ಆರ್.ಮಾಧವ ಕೃಷ್ಣಯ್ಯ, ವೆಂಕಟನಾರಾಯಣ, ಎಸ್.ಧೊಂಡುಸಾ, ಎಂ.ಶಿವರಾಮಯ್ಯಶೆಟ್ಟಿ, ಬಿ.ಸಿ.ಆಂಜನಪ್ಪ, ಎಸ್.ಬಿ.ನಂಜುಂಡಯ್ಯ, ಮುಂತಾದವರು ಕಾಂಗ್ರೆಸ್ಸೇತರ ಸಭೆಗಳನ್ನು ನಡೆಸಿದರು. ಯಾವಾಗ ಚಳುವಳಿಯು ತೀವ್ರವಾಗಿ ಸಂಘಟನೆಯ ಮೂಲಕ ಮುಂದುವರಿದಾಗ ಇವರೆಲ್ಲಾ ಕಾಂಗ್ರೆಸ್ ಜನತೆಯ ಸೇರಲು ಪ್ರಯತ್ನಿಸಿದರು[222]. ಇದೇ ಸಂದರ್ಭದಲ್ಲಿ ಅಖಿಲ ಕರ್ನಾಟಕ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಹೆಚ್.ನಿಜಲಿಂಗಪ್ಪನವರು ಮತ್ತು ಆರ್.ಆರ್.ದಿವಾಕರ ಅವರು ದೆಹಲಿಯಲ್ಲಿ ಡಾ.ರಾಜೇಂದ್ರಪ್ರಸಾದ್‌ರನ್ನು ಭೇಟಿ ಮಾಡಿ, ಮೈಸೂರು ಸತ್ಯಾಗ್ರಹ ಮತ್ತು ಪ್ರಾಂತೀಯ ರಚನೆಯ ಬಗ್ಗೆ ಮಾತುಕತೆ ನಡೆಸಿದರು[223].

ಮೈಸೂಗು ಸರಕಾರ ಬೆಂಗಳೂರು ಮತ್ತು ಮೈಸೂರಿನ ಕೆಲ ಪತ್ರಿಕೆಗಳ ಮೇಲಿನ ಪ್ರತಿಬಂಧಕ ಆಜ್ಞೆಯನ್ನು ಜಾರಿಗೊಳಿಸಿತು. ಈ ಮೂಲಕ ಕಾಂಗ್ರೆಸ್ ಸತ್ಯಾಗ್ರಹ ಸಂಬಂಧವಾಗಿ ಪ್ರಕಟವಾಗುತ್ತಿದ್ದ ಸುದ್ದಿಗಳಿಗೆ ತಡೆಯಾಜ್ಞೆ ಆಯಿತು. ಈ ಸಂದರ್ಭದಲ್ಲಿ ಮೈಸೂರು ವಿಜಯಪತ್ರಿಕೆ, ಬೆಂಗಳೂರು ತಾಯಿನಾಡು ಪತ್ರಿಕೆ, ಡೇಲಿನ್ಯೂಸ್, ದೇಶಬಂಧು, ಪೌರವಾಣಿ, ವಿಶ್ವಕರ್ಣಾಟಕ ವಾರಪತ್ರಿಕೆ, ಸ್ವತಂತ್ರೋದಯ ವಾರ್ತಾ ಪತ್ರಿಕೆಗಳು ತಮ್ಮ ಪತ್ರಿಕೆಗಳು ಪ್ರಕಟಣೆಯನ್ನು ನಿಲ್ಲಿಸಿದವು[224].

1947ರ ಸೆಪ್ಟಂಬರ್ 3ರ ಮಧ್ಯರಾತ್ರಿಯಲ್ಲಿ ಸಾರ್ವಜನಿಕ ರಕ್ಷಣಾ ಶಾಸನ ಪ್ರಕಾರ ಮೈಸೂರು ಪೊಲೀಸನವರು ಕಾಂಗ್ರೆಸ್ ಪ್ರಮುಖ ಮುಖಂಡರಾದ ಕೆ.ಸಿ.ರೆಡ್ಡಿ, ಕೆ.ಟಿ.ಭಾಷ್ಯಂ, ಟಿ.ಸುಬ್ರಮಣ್ಯಂ, ಹಾಗೂ ಮಂಡ್ಯ ಜಿಲ್ಲೆಯ ಪ್ರಮುಖ ಕಾಂಗ್ರೆಸ್ ಮುಖಂಡರಾದ ಹೆಚ್.ಕೆ.ವೀರಣ್ಣಗೌಡ, ಎ.ಜಿ.ಬಂದೀಗೌಡ ಮೊದಲಾದ 70 ಮಂದಿಯನ್ನು ದಸ್ತಗಿರಿ ಮಾಡಿ ಸೆಂಟ್ರಲ್ ಜೈಲಿಗೆ ಕರೆದೊಯ್ಯದರು. ಸೆರಮನೆಗೆ ಹೋಗುವ ಮುನ್ನ ಎಲ್ಲ ಕಾಂಗ್ರೆಸ್ ಮುಖಂಡರು ಹಸನ್ಮುಖದಿಂದದ್ದು ಅಹಿಂಸಾತತ್ವನ್ನು ಪಾಲಿಸಿದರು[225]. ಇದೇ ದಿನ ಮೈಸೂರಿನಲ್ಲಿ ಪಾಲಹಳ್ಳಿಸೀತಾರಾಮಯ್ಯ, ಅಗರಂರಂಗಯ್ಯ, ಎಸ್.ರಂಗರಾಮಯ್ಯ, ಜೆ.ಜನಾರ್ಧನನಾಯ್ಡು, ರಾಜುಶೆಟ್ಟಿ, ಎಂ.ಶಂಕರಯ್ಯ, ಟಿ.ಮರಿಯಪ್ಪ (ಶ್ರೀರಂಗಪಟ್ಟಣ), ವೆಂಕಟರಾವ್, ಕುಮಾರಸ್ವಾಮಿ, ಮಧ್ಯರಾತ್ರಿ ಸಾರ್ವಜನಿಕ ರಕ್ಷಣಾ ಶಾಸನದ ಪ್ರಕಾರ ದಸ್ತಗಿರಿ ಮಾಡಿದರು. ಜೊತೆಗೆ ಜಿಲ್ಲಾ ನ್ಯಾಯಾಧೀಶರು ಪೊಲೀಸ್ ಕಾನೂನಿನ 39 ಮತ್ತು 45 ನಿಬಂಧನೆಯಂತೆ ನಿಷೇಧಾಜ್ಞೆಗಳನ್ನು ಜಾರಿಗೆ ತಂದರು. ಪ್ರಮುಖ ಮುಖಂಡರ ದಸ್ತಗಿರಿ ವಾರ್ತೆ

ಹರಡಿದೊಡನೆ ಶಾಲಾ ವಿದ್ಯಾರ್ಥಿಗಳು ಶಾಲೆ ಬಿಟ್ಟು ಬಂದು ರಾಷ್ಟ್ರೀಯ ಬಾವುಟಗಳೊಡನೆ ಮೆರವಣಿಗೆ ನಡೆಸಿದರು[226].

ಸೆಪ್ಟಂಬರ್ 4 ರಂದು ಮಧ್ಯಾಹ್ನ ಮೈಸೂರು ಸರ್ಕಾರದವರು ಒಂದು ಪ್ರಕಟಣೆಯನ್ನು ಹೊರಡಿಸಿ ಮೈಸೂರು ಕಾಂಗ್ರೆಸ್ಸಿನವರು ಆರಂಭಿಸಿರುವ ಸತ್ಯಾಗ್ರಹವು ಸಂಸ್ಥಾನದಲ್ಲಿ ಸಾರ್ವಜನಿಕ ಶಾಂತಿಗೆ ಭಂಗ ಬರುವುದರಿಂದ ಸತ್ಯಾಗ್ರಹಿಗಳನ್ನು ಬಂಧನದಲ್ಲಿಡಬೇಕಾದ ಪರಿಸ್ಥಿತಿ ಒದಗಿತೆಂದೂ, ಸರ್ಕಾರದವರಿಗೆ ಬಲಪ್ರಯೋಗ ಮಾಡಿ ಜನಗಳ ಆಕಾಂಕ್ಷೆಯನ್ನು ತುಳಿಯಬೇಕೆಂಬ ಭಾವನೆ ಇಲ್ಲವೆಂದೂ, ಸಂಸ್ಥಾನದಲ್ಲಿ ಸದ್ಯದಲ್ಲೇ ರಾಜಕೀಯ ಸುಧಾರಣೆಯನ್ನು ಜಾರಿಗೆ ತರಲಾಗುವುದೆಂದೂ, ಆದ್ದರಿಂದ ಪ್ರತಿಯೊಬ್ಬ ಪ್ರಜೆಯೂ ಸರ್ಕಾರದೊಡನೆ ಸಹಕರಿಸಬೇಕೆಂದು ಪ್ರಕಟಣೆಯ ಮೂಲಕ ಕೋರಿದರು[227].

ಅರಮನೆ ಸತ್ಯಾಗ್ರಹ

ಸಂಸ್ಥಾನದಾದ್ಯಂತ ಸತ್ಯಾಗ್ರಹ ಚಳುವಳಿ ವ್ಯಾಪಕವಾಗಿ ಹಬ್ಬಿತು. ಎಲ್ಲಾ ಜಿಲ್ಲೆಗಳಿಂದಲೂ ಸತ್ಯಾಗ್ರಹಿಗಳು ತಂಡವಾಗಿ 'ಮೈಸೂರು ಚಲೋ' ಘೋಷಣೆಯನ್ನು ಕೂಗುತ್ತಾ ಅರಮನೆಯತ್ತ ಧಾವಿಸಿದರು. ಚನ್ನಪಟ್ಟಣ, ಕಾನಕಾನಹಳ್ಳಿ, ಪಾಂಡವಪುರ, ಕೃಷ್ಣರಾಜಸಾಗರ ತಾಲ್ಲೂಕುಗಳಿಂದ ಮೈಸೂರಿಗೆ ಹೋಗುತ್ತಿದ್ದ ಸತ್ಯಾಗ್ರಹಿಗಳ ಗುಂಪುಗಳನ್ನು ಪೊಲೀಸರು ಚದುರಿಸಿ ನಾಯಕರನ್ನು ಬಂಧಿಸಿದರು[228]. 1947ರಲ್ಲಿ ಮೈಸೂರು ಚಲೋ ಚಳುವಳಿ ಆರಂಭವಾದ ಸಂದರ್ಭದಲ್ಲಿ ಮಳವಳ್ಳಿ ತಾಲ್ಲೂಕು ಕಾಂಗ್ರೆಸ್ ಅಧ್ಯಕ್ಷರಾದ ಸುಬ್ಬಯ್ಯನವರ ನೇತೃತ್ವದಲ್ಲಿ ಬಾವುಟ ಹಿಡಿದು ಊರಿನ ಮುಖ್ಯಬೀದಿಗಳಲ್ಲ ಮೆರವಣಿಗೆ ನಡೆಸಿದರು. ಪೊಲೀಸರು ಎಚ್.ವಿ.ವೀರೇಗೌಡ, ಪುಟ್ಟಸ್ವಾಮಿಗೌಡರನ್ನು ಬಂಧಿಸಿ ಮಂಡ್ಯ ಜೈಲಿಗೆ ಕರೆದುಕೊಂಡು ಹೋದರು. ತರುವಾಯ ಮೈಸೂರು ಸೀಮೆಯ ಯಾವ ತಾಲ್ಲೂಕು ಕಛೇರಿ ಮೇಲೆ ಧ್ವಜ ಹಾರಿಸಲು ಸಾಧ್ಯವಾಗಿರಲ್ಲ. ಆದರೆ ಮಳವಳ್ಳಿ ತಾಲ್ಲೂಕು ಕಾಂಗ್ರೆಸ್ ಸಮಿತಿ ಧ್ವಜಹಾರಿಸುವಲ್ಲಿ ಯಶಸ್ವಿಯಾಯಿತು. ಕಾಂಗ್ರೆಸ್ ಸುಬ್ಬಯ್ಯನವರನ್ನು ಕುರಿತು ಸರ್ಕಲ್ ಇನ್ಸ್‌ಪೆಕ್ಟರ್ ಗಾಯಕವಾಡರು ಈ ರೀತಿ ಪ್ರತಿಕ್ರಿಯಿಸಿದರು. ನಿಮ್ಮ ಕಾರ್ಯಕ್ರಮ ಆಯಿತು. ನಿಮ್ಮ ಗುಂಪು ಕರೆದುಕೊಂಡು ಹೋಗಿ' ಎಂದರು. ನಂತರ ಮುತ್ತುರಾಯಶೆಟ್ರು, ಅಗಸನಪುರದ ಲಿಂಗೇಗೌಡರು, ರಾಜಶೇಖರ, ರಾಜು, ಟೈಲರ್ ನರಸಿಂಹಯ್ಯ, ಇಂಜಿನಿಯರ್ ಅಪ್ಪಾಜಿ, ಸಿದ್ದಪ್ಪ, ಮಾಯಣ್ಣ, ಕಾಲೋನಿ ಮರಿಯಪ್ಪ, ಸುಂದರ, ಮುತ್ತಯ್ಯನವರ ಮಗ ನಂಜಯ್ಯನವರನ್ನು ಪೊಲೀಸರು ಬಂಧಿಸಿ ಮಂಡ್ಯ ಜೈಲಿಗೆ ಸ್ಥಳಾಂತರಿಸಿದರು[229].

ಮಂಡ್ಯದಲ್ಲಿ ಸಕ್ಕರೆ ಕಂಪನಿ ಕಾರ್ಮಿಕರೂ ವಿದ್ಯಾರ್ಥಿಗಳೂ ಚಳವಳಿಗೆ ಪ್ರವೇಶಿಸಿದರು. ಸಾಕಷ್ಟು ದಸ್ತಗಿರಿಗಳೂ ಆದವು. ಮಂಡ್ಯದ ಪುರಭವನ ಮಿಲಿಟರಿ ಶಿಬಿರವಾದುದರಿಂದ ಪ್ರತಿಭಟನೆ ನಡೆಯಿತು. 'ತಂಬೂಚೆಟ್ಟಿ, ಚಟ್ಟಕಟ್ಟಿ' ಎಂಬ ಘೋಷಣೆ ಮಂಡ್ಯದಲ್ಲಿ ಹುಟ್ಟಿತು. ಮದ್ದೂರಿನಲ್ಲಿ ವಿದ್ಯಾರ್ಥಿಗಳ ಮೆರವಣಿಗೆ ನಡೆಸಿದರು. ದಿವಾನರ ಆಪ್ತರಾದ ಎಸ್.ಸಿ.ಮಲ್ಲಯ್ಯ ಅವರ ಕಡೆಯವರು ವಿದ್ಯಾರ್ಥಿಗಳಿಗೆ ಹೊಡೆದರು. ರಾಷ್ಟ್ರಧ್ವಜವನ್ನು ಹರಿದು ಹಾಕಿದರು. ಮಹದೇವಪ್ಪ ಎಂಬ ವಿದ್ಯಾರ್ಥಿಗೆ ಬಹಳ ಪೆಟ್ಟುಗಳು ಬಿದ್ದವು. ಎಸ್.ಸಿ.ಮಲ್ಲಯ್ಯ ಅವರು ರಾಷ್ಟ್ರಧ್ವಜವನ್ನು ಸುಟ್ಟರೆಂದು ಮಂಡ್ಯ ಜಿಲ್ಲಾ ಕಾಂಗ್ರೆಸ್ ಸಮಿತಿ ಕಾರ್ಯದರ್ಶಿ ಮಾದಯ್ಯ ಅವರು ವಲ್ಲಭಬಾಯಿ ಪಟೇಲರಿಗೆ ತಂತಿ ಕಳುಹಿಸಿದರು[230]. ಮಂಡ್ಯದ ಕಾಂಗ್ರೆಸ್ ನಾಯಕರಾದ ಹೆಚ್.ಹೊನ್ನಯ್ಯ, ಪಿ.ಎನ್.ಜವರಪ್ಪಗೌಡ, ವಿದ್ಯಾಧರಪ್ಪ, ಕೆ.ವಿ.ಶಂಕರಗೌಡ ಮೊದಲಾದವರನ್ನು 1947ರ ಸೆಪ್ಟಂಬರ್ 5 ರಂದು ಪೊಲೀಸರು ದಸ್ತಗಿರಿ ಮಾಡಿದರು[231]. ಈ ನಾಯಕರಲ್ಲದೇ ಜಿಲ್ಲೆಯ ಹಲವು ಸತ್ಯಾಗ್ರಹಿಗಳಾದ ಕೆ.ಸಿ.ಚನ್ನಯ್ಯ, ಗೌಡಗೆರೆ ನಾಗಪ್ಪ, ಕೆ.ಬೆಟ್ಟಶೆಟ್ಟಿ ಚಂದಗಾಲಿನಬೀಸೇಗೌಡರು, ಅನಂತರಾಮಶೆಟ್ಟಿ, ಪಾಲಗ್ರಹಾರದ ಪಿ.ಎನ್.ನರಸಿಂಹಯ್ಯ, ಪಿ.ಟಿ.ಕೃಷ್ಣಪ್ಪಗೌಡ, ಪಿ.ಕೆ.ವೆಂಕಟಾಚಲಶೆಟ್ಟಿ, ಓಬೇಗೌಡ, ಕರಡಹಳ್ಳಿ ಕೆ.ಎಂ.ಕೃಷ್ಣೇಗೌಡ, ಎಂ.ಆರ್.ಎನ್.ಶಾಸ್ತ್ರಿ, ಡಾ.ಪಶುಪತಿರಾವ್, ಎಂ.ಆರ್.ಕೃಷ್ಣಮೂರ್ತಿ, ಪಿ.ಸಿ.ಕೃಷ್ಣಪ್ಪಗೌಡ, ಬಿ.ಎಂ.ಸಿದ್ದೇಗೌಡ ಇವರನ್ನು ಸಹಾ ಬಂಧಿಸಿದರು. ಆಗ ತಾನೇ ಮಂಡ್ಯ ಬಂಧಿಖಾನೆ ನಿರ್ಮಾಣಗೊಂಡಿದ್ದು ಅಲ್ಲಿ ಹೆಚ್ಚು ಜನರಿಗೆ ಅವಕಾಶವಿರಲಿಲ್ಲ. ಅಲ್ಲದೆ ಚಳುವಳಿಗಾರರು ಬಂಧನದ ವಿಷಯ ತಿಳಿದು ಜೈಲಿಗೆ ಮುತ್ತಿಗೆ ಹಾಕುತ್ತಾರೆಂದು ಮುನ್ನೆಚ್ಚರಿಕೆ ವಹಿಸಿ ಕೆ.ವಿ.ಶಂಕರಗೌಡರು ಮತ್ತು ಇತರರನ್ನು ಬೆಂಗಳೂರಿನ ಸೆಂಟ್ರಲ್ ಜೈಲಿಗೆ ವರ್ಗಾಯಿಸಿದರು[232].

ಮಂಡ್ಯದಲ್ಲಿ ಬಂಧಿತ ಸತ್ಯಗ್ರಹಿಗಳ ಸಂಖ್ಯೆ ದಿನದಿನಕ್ಕೆ ಹೆಚ್ಚಿತು. ಸಿದ್ದರಾಮಯ್ಯ, ಆನಂತರಾಮಶೆಟ್ಟಿ, ಜಿ.ಎಸ್.ಬೊಮ್ಮಯ್ಯ ಸೆರೆಯಾದರು. ಮಂಡ್ಯದವರು ಮೈಸೂರಿಗೆ ಹೋಗಿ ಬರುವ ಸತ್ಯಾಗ್ರಹಿಗಳ ಊಟೋಪಚಾರಕ್ಕೆ ಏರ್ಪಾಡು ಮಾಡಿದರು. ಹಳ್ಳಿಗರು ಅಕ್ಕಿ, ಬೇಳೆ, ತರಕಾರಿ ಮೊದಲಾದ ಆಹಾರ ಸಾಮಗ್ರಿಗಳನ್ನು ಒದಗಿಸಿದರು. ತಾವೂ ಕೂಡ ಸತ್ಯಾಗ್ರಹದಲ್ಲಿ ಪಾಲ್ಗೊಂಡರು. ಹಳ್ಳಿಗಾಡು ಜನರು ಆಹಾರ ಪದಾರ್ಥ ಕೊಡುವುದರ ಜೊತೆಗೆ ಆತ್ಮಾರ್ಪಣೆಗೂ ಸಿದ್ಧರಾದರು. ಮಳವಳ್ಳಿ, ನಾಗಮಂಗಲ, ಬೆಂಗಳೂರು, ತುಮಕೂರು ಕಡೆಗಳಿಂದ ಮಂಡ್ಯಕ್ಕೆ ಬಂದ ಸತ್ಯಾಗ್ರಹಿಗಳನ್ನು ಪೊಲೀಸರು ತಡೆದು, ಬಸ್ಸುಗಳಲ್ಲಿ ತುಂಬಿಕೊಂಡು ದೂರ ಪ್ರದೇಶಕ್ಕೆ ಸಾಗಿಸಿ ಬಿಟ್ಟುಬಂದರು[233]. ದಿನಾಂಕ 7 ಸೆಪ್ಟಂಬರ್ 1947ರಂದು ಮಂಡ್ಯ ಟಿ.ನರಸೀಪುರ, ಯಳಂದೂರು, ಹುಣಸೂರು, ನಂಜನಗೂಡು, ಚಾಮರಾಜನಗರ, ಶಿವಮೊಗ್ಗ

ಮುಂತಾದ ಕಡೆಗಳಲ್ಲಿ ಚಳುವಳಿಗೆ ಸಂಬಂಧಿಸಿದಂತೆ ಗಲಭೆಗಳು ನಡೆದವು. ಪೋಲಿಸರಿಗೆ ನಿಯಂತ್ರಿಸಲು ಸಾಧ್ಯವಾಗದೇ ಹೋಯಿತು[234]. ನಾಗಮಂಗಲ ತಾಲ್ಲೂಕಿನಲ್ಲಿ ಪಿ.ಎನ್.ನರಸಿಂಹಯ್ಯ, ಎಂ.ಆರ್.ಎನ್.ಶಾಸ್ತ್ರಿ, ಕಪನೀಗೌಡರು ಪೊಲೀಸರ ಕೈ ಸಿಗದೇ ಜವಾಬ್ದಾರಿ ಸರ್ಕಾರದ ಕಾರ್ಯವನ್ನು ಚುರುಕಗೊಳಿಸಿದರು. ಕೊನೆಗೆ ಕದಬಹಳ್ಳಿ ಸಂತೆಯಲ್ಲಿ 7 ಸೆಪ್ಟಂಬರ್ 1947 ರಂದು ಈ ಮೂರು ಸತ್ಯಾಗ್ರಹಿಗಳನ್ನು ಪೊಲೀಶರು ದಸ್ತಗಿರಿ ಮಾಡಿ ಮಂಡ್ಯ ಜೈಲಿಗೆ ಕಳುಹಿಸಿದರು. ಒಂದು ತಿಂಗಳು ಮೂರು ದಿನಕಾಲ ಸೆರಮನೆ ವಾಸ ಅನುಭವಿಸಿದರು[235].

ಇದೇ ಸಂದರ್ಭದಲ್ಲಿ ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರೀ ಸರ್ಕಾರ ಸ್ಥಾಪನೆ ಬಗ್ಗೆ ಪ್ರಭುಗಳವರು ಈ ಕೆಳಕಂಡಂತೆ ಘೋಷಣೆಯನ್ನು 08 ಸೆಪ್ಟಂಬರ್ 1947ರಂದು ಹೊರಡಿಸಿದರು. ಪ್ರಜೆಗಳ ನ್ಯಾಯಬದ್ಧವಾದ ಬೇಡಿಕೆಯನ್ನು ಈಡೇರಿಸುವುದರಲ್ಲಿ ರಾಜಮನೆತನವು ಯಾವಾಗಲೂ ಸಿದ್ಧವಾಗಿರುವುದೆಂದೂ ಪೂಜ್ಯ ಹಿರಿಯರಿಂದ ಕೊಡಲ್ಪಟ್ಟಿರುವ ರಾಜ್ಯಾಂಗ ಪ್ರಗತಿಗೆ ಯಾವುದೇ ಕುಂದುಬಾರದಂತೆ, ಕಾಲ–ದೇಶಗಳಿಗನುಗುಣವಾಗಿ ನಡೆದುಕೊಳ್ಳುವುದಾಗಿ ತಿಳಿಸಿದರು[236]. 1947ರ ಸೆಪ್ಟಂಬರ್ 8 ರಂದು ಮಹಾರಾಜರು 'ಜವಾಬ್ದಾರಿ ಸರ್ಕಾರ' ದಯಪಾಲಿಸುವ ಘೋಷಣೆ ಮಾಡಿದರು. ಆಗ ಕೆ.ಸಿ.ರೆಡ್ಡಿಯವರು 'ಭಾರತ ರಾಜ್ಯಾಂಗ ರಚನಾ ಕಾರ್ಯ ಭಾರತ ದೇಶದ ಜನತಾ ಪ್ರತಿನಿಧಿಗಳಿಂದ ರೂಪುಗೊಳ್ಳುತ್ತಿರುವಾಗ ಸಂಸ್ಥಾನದ ಹೊರಗಿನವರಾದ ದಿವಾನರು, ಅವರಿಂದ ನೇಮಕವಾದ ಸಲಹಾ ಮಂಡಳಿ ಸಮಿತಿಯ ಸದಸ್ಯರು, ಇವರಿಂದ ರಚಿಸಲ್ಪಟ್ಟ ರಾಜ್ಯಾಂಗ ಎಷ್ಟರ ಮಟ್ಟಿಗೆ ಜನರ ಆಶೋತ್ತರಗಳನ್ನು ಸಾಧಿಸಬಹುದು" ಎಂಬುದುನ್ನು ಗಮನಿಸಿ ಮೈಸೂರಿನ ಜನರಿಂದ ಆರಿಸಲ್ಪಟ್ಟ ಪ್ರತಿನಿಧಿಗಳಿಂದೊಡಗೂಡಿದ ರಾಜ್ಯಾಂಗ ಸಭೆಯನ್ನು ಏರ್ಪಡಿಸುವವರೆಗೆ ಈ ಸತ್ಯಾಗ್ರಹವನ್ನು ನಿಲ್ಲಿಸಬಾರದೆಂದು 'ಪೌರವಾಣಿ' ಪತ್ರಿಕೆ ಮೂಲಕ ಜನತೆಗೆ ಕರೆ ಕೊಟ್ಟರು[237].

ಮೈಸೂರು ಚಲೋ ಚಳುವಳಿಯಲ್ಲಿ ಭಾಗವಹಿಸಿದ ಸತ್ಯಾಗ್ರಹಿಗಳಲ್ಲಿ ಕೆ.ಎಸ್.ಉಮಾಪತಿ ಒಬ್ಬರು. ಅವರು ಮೈಸೂರು ಚಲೋ (ಸತ್ಯಾಗ್ರಹ ಪತ್ರಗಳು) ಎಂಬ ಪುಸ್ತಕದಲ್ಲಿ ಮೈಸೂರು ಕಾಂಗ್ರೆಸ್ ಸಿದ್ಧಪಡಿಸಿದ ವೇಳೆ ಪಟ್ಟಿಯಂತೆ ಚಳುವಳಿಯಲ್ಲಿ ಭಾಗವಹಿಸಿದ್ದನ್ನು ದಾಖಲಿಸಿದ್ದಾರೆ. ಬೆಂಗಳೂರಿನಿಂದ ಸತ್ಯಾಗ್ರಹಿಗಳ ಜಾಥದ ಮೂಲಕ ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ನಿಡಘಟ್ಟಕ್ಕೆ 1947ರ ಸೆಪ್ಟೆಂಬರ್ 9 ರಂದು ಭೇಟಿ ನೀಡಿದ್ದರು. ಈ ವೇಳೆಯಲ್ಲಿ ಪೊಲೀಸ್ ಸೂಪರಿಂಟೆಂಡೆಂಟ್ 'ಸತ್ಯಾಗ್ರಹಿಗಳಿಗೆ ಒಂದು ತೊಟ್ಟು ನೀರನ್ನು ಕೊಟ್ಟವರಿಗೆಲ್ಲಾ ಅನ್ನ ನೀರಿಲ್ಲದಂತೆ ಮಾಡಿ ಕಣ್ಣಿಂದ ರಕ್ತ ಬರಿಸುತ್ತೇವೆ' ಎಂದು ಗ್ರಾಮದ ಜನರಿಗೆ ಎಚ್ಚರಿಕೆ ನೀಡಿದ್ದರು. ಆದರೂ ನಿಡಘಟ್ಟದ

ಗಣ್ಯರೊಬ್ಬರು ಸತ್ಯಾಗ್ರಹಿಗಳಿಗೆ ಊಟದ ವ್ಯವಸ್ಥೆ ಮಾಡಿದ್ದರು. ಕೆ.ಎಸ್.ಉಮಾಪತಿ ಹಾಗೂ ಇತರೆ 10 ರಿಂದ 12 ಜನ ಸತ್ಯಾಗ್ರಹಿಗಳು ಊಟದ ನಂತರ ಸತ್ಯಾಗ್ರಹಿಗಳ ವೇಳಪಟ್ಟಿಯಂತೆ ಸಂಜೆ ವೇಳೆಗೆ ಮದ್ದೂರು ತಲುಪಿದರು. ಮದ್ದೂರಿನಲ್ಲಿ ಸಂಜೆ ನಡೆದ ಬಹಿರಂಗ ಸಭೆಯಲ್ಲಿ ಭಾಷಣ ಮಾಡುತ್ತಾ –'ಶ್ರೀಮನ್ ಮಹಾರಾಜರವರ ಘೋಷಣೆ ತಿರಸ್ಕೃತವಾಗುವಂತಹುದೂ, ಪೂರ್ಣ ಜವಾಬ್ದಾರೀ ಸರಕಾರ ಬರುವವರೆವಿಗೂ ಹೋರಾಟ ನಿಲ್ಲಿಸಬಾರದೆಂದೂ ಘೋಷಿಸಿದರು. ಜವಾಬ್ದಾರಿ ಸರಕಾರ ಬಂದರೂ ಅರಮನೆ ಮುಂದೆ ಹೋಗಿ ಪ್ರಜೆಗಳನ್ನು ಅಭಿನಂದಿಸಬೇಕು. ಗುರಿಸಾಧನೆ ಆಗಲಿ ಆಗದಿರಲಿ ಮೈಸೂರು ಚಲೋ ಆಗಲೇಬೇಕು ಎಂದಿದ್ದ ಕೆ.ಸಿ.ರೆಡ್ಡಿ ಅವರ ಮಾತುಗಳನ್ನು ಜನರ ನೆನಪಿಗೆ ತಂದರು[238].

ಸತ್ಯಾಗ್ರಹ ಚಳುವಳಿಗೆ ಸಾರ್ವಜನಿಕರು ಬೆಂಬಲ ಸೂಚಿಸುವಂತೆ ಮಂಡ್ಯ ನಗರದ ಕಾಂಗೆಸ್ಸಿಗರು ಮತ್ತು ವಿದ್ಯಾರ್ಥಿಗಳು ಪ್ರಚಾರದ ಸಭೆ ನಡೆಸಿ ಮನವಿ ಮಾಡಿದರು. ಹೆಂಡದ ಅಂಗಡಿಗಳ ಮುಂದೆ ಪಿಕೆಟಿಂಗ್ ಮಾಡಲಾಯಿತು. ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ವಿದ್ಯಾರ್ಥಿಗಳು ಮೆರವಣಿಗೆ ನಡೆಸಿದರು. 10 ಸೆಪ್ಟಂಬರ್ 1947ರಂದು ಮೈಸೂರು ಪಬ್ಲಿಕ್ ಸೆಕ್ಯೂರಿಟಿ ಆ್ಯಕ್ಟ್‌ನ 3 ಸೆಕ್ಷನ್ ಅಡಿಯಲ್ಲಿ ಕಾಂಗ್ರೆಸ್ ಕಮಿಟಿಯ ತಾಲ್ಲೂಕು ಅಧ್ಯಕ್ಷರು ಹಾಗೂ ಜಿಲ್ಲಾ ಬೋರ್ಡ್‌ನ ಸದಸ್ಯರಾದ ಡಾ. ಸಿ.ಬಂದೀಗೌಡರನ್ನು ಬಂಧಿಸಲಾಯಿತು[239].

10 ಸೆಪ್ಟಂಬರ್ 1947 ರಿಂದ ಮದ್ದೂರಿನಿಂದ ಗೆಜ್ಜಲಗೆರೆ ತಲುಪಿದಾದ ಮೈಸೂರು ಚಲೋ ಚಳುವಳಿಯ ಜಾಥದಲ್ಲಿ ಸತ್ಯಾಗ್ರಹಿಗಳ ಸಂಖ್ಯೆ ನೂರನ್ನು ದಾಟಿತು. ಎಚ್.ಕೆ.ವೀರಣ್ಣಗೌಡರು ನೆಂಟರ ಮನೆಯಲ್ಲಿ ಸತ್ಯಾಗ್ರಹಿಗಳಿಗೆ ಊಟದ ವ್ಯವಸ್ಥೆ ಮಾಡಲಾಗಿತ್ತು. ಆ ಹಳ್ಳಿ ಪೂರ್ಣ ಕಾಂಗ್ರೆಸ್ ಪಕ್ಷದ ತತ್ವಸಿದ್ಧಾಂತಗಳನ್ನು ಅಳವಡಿಸಿಕೊಂಡಿತ್ತು. ಮೈಸೂರು ಚಲೋ ಚಳುವಳಿಯ ಸತ್ಯಾಗ್ರಹಿಗಳು ಬರುವರೆಂಬ ನಿರೀಕ್ಷೆಯಿಂದ 10,000 ಮಂದಿಗಾಗುವಷ್ಟು ಆಹಾರ ಧಾನ್ಯಗಳನ್ನು ಶೇಖರಿಸಿ ಇಡಲಾಗಿತ್ತು. ಊರ ಮುಂಭಾಗದಲ್ಲಿ ದೊಡ್ಡದಾದ ರಾಷ್ಟ್ರಧ್ವಜವನ್ನು ಹಾರಿಸಲಾಗಿತ್ತು. ಸತ್ಯಾಗ್ರಹಿಗಳೂ ಬೂದನೂರು ಮಾರ್ಗವಾಗಿ ಸಂಜೆ ವೇಳೆಗೆ ಮಂಡ್ಯವನ್ನು ತಲುಪಿದರು. ಸುಮಾರು 7 ಗಂಟೆಗೆ ಮಂಡ್ಯ ಸಕ್ಕರೆ ಕಾರ್ಖಾನೆಯ ಕೆಲಸಗಾರರ ಮುಖಂಡರಾದ ನಾಗಪ್ಪನವರು ಸತ್ಯಾಗ್ರಹಿಗಳನ್ನು ಆತ್ಮೀಯವಾಗಿ ಸ್ವಾಗತಿಸಿದರು. ನಂತರ ಬಹಿರಂಗ ಸಭೆ ನಡೆಯಿತು. ಸುಮಾರು ಹತ್ತು ಸಾವಿರ ಜನರು ನೆರೆದಿದ್ದರು[240].

ಕಾಂಗ್ರೆಸ್ ವೇಳಾಪಟ್ಟಿಯಂತೆ ಅರಮನೆ ಮುಂದೆ ಸತ್ಯಾಗ್ರಹ ಮಾಡಲು ಬೇರೆ ಬೇರೆ ಜಿಲ್ಲೆಗಳಿಂದ ಸುಮಾರು 600 ಮಂದಿ ಸತ್ಯಾಗ್ರಹಿಗಳು ಶ್ರೀರಂಗಪಟ್ಟಣವನ್ನು 11

ಸೆಪ್ಟಂಬರ್ 1947ರಂದು ತಲುಪಿದರು. ಶ್ರೀರಂಗಪಟ್ಟಣದ ಪೌರರು ಸತ್ಯಗ್ರಹಿಗಳಿಗೆ ಆತಿಥ್ಯವನ್ನು ನೀಡಿದರು.

ಶ್ರೀರಂಗಪಟ್ಟಣದಲ್ಲಿ ಮೈಸೂರು ಚಲೋ ಚಳುವಳಿಯಲ್ಲಿ ಪಾಲ್ಗೊಂಡ ಸತ್ಯಾಗ್ರಹಿಗಳಿಗೆ ಊಟದ ವ್ಯವಸ್ಥೆ ಮಾಡಲಾಗಿತ್ತು. ಸತ್ಯಾಗ್ರಹಿಗಳ ಊಟದ ನಂತರ ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ ಘೋಷಣೆ ಕೂಗುತ್ತಾ ಮೆರವಣಿಗೆಗೆ ನಡೆಸಿದರು. ಶ್ರೀರಂಗಪಟ್ಟಣ ತಾಲ್ಲೂಕು ಕಛೇರಿ ಮುಂದೆ ಸತ್ಯಾಗ್ರಹಿಗಳ ಮೇಲೆ ಪೊಲೀಸರು ಗುಂಡುಹಾರಿಸಿ ಒಬ್ಬನನ್ನು ಕೊಂದರು. ಮಹಾರಾಜರ ಆಪ್ತ ಕಾರ್ಯದರ್ಶಿಗಳಾಗಿದ್ದ ತಂಬೂಚೆಟ್ಟರು ಜನನಾಯಕರನ್ನು ಬಂಧಿಸಲು ಆಜ್ಞೆಯಿತ್ತರು. ಎ.ಕೆಂಚಪ್ಪ, ಎ.ಸಿ.ಮಾದೇಗೌಡ ಮುಂತಾದ ಅನೇಕ ಶ್ರೀರಂಗಪಟ್ಟಣದ ಗಣ್ಯರು ಈ ಸಮಯದಲ್ಲಿ ಬಂಧಿತರಾದರು. ತಮ್ಮ ನಾಯಕರನ್ನೆಲ್ಲಾ ಬಂಧಿಸಿದ್ದರಿಂದ ಕುಪಿತರಾದ ಜನ "ಆರ್ಕಾಟ್ ಬಾಯ್ಕಾಟ್, ತಂಬೂಚಟ್ಟಿ ಚಟ್ಟಕಟ್ಟಿ, ಕೆ.ಸಿ.ರೆಡ್ಡಿ ಪಟ್ಟಕಟ್ಟಿ", ಯಾರದು ಜೈಲು, ನಮ್ಮದು ಜೈಲು, ಯಾರದು ರೈಲು ನಮ್ಮದು ರೈಲು, ಎಂಬ ಘೋಷಣೆಗಳನ್ನು ಕೂಗಿದರು. ಲಾಟಿಏಟು, ಗೋಲಿಬಾರ್, ಬಂಧನಗಳು ಲೆಕ್ಕವಿಲ್ಲದಷ್ಟು ನಡೆದವು. ಪಾಂಡವಪುರ ವೈ.ಸಿಮರಿಯಪ್ಪ, ಸಿಂಧಘಟ್ಟದ ಸುಬ್ಬೇಗೌಡರು ಸೆರೆಮನೆ ಪಾಲಾದರು[241].

ಮಳವಳ್ಳಿ ತಾಲ್ಲೂಕು ಕಛೇರಿ ಮುಂದೆ ರಾಷ್ಟ್ರೋಧ್ವಜಾರೋಹಣ ಮಾಡಿದ ವ್ಯಾಪಾರಿ ಸುಬ್ಬಯ್ಯ ಮತ್ತು ಹನ್ನೆರಡು ಮಂದಿ ವಿದ್ಯಾರ್ಥಿಗಳು ಸೆರೆಯಾದರು. ನಾಗಮಂಗಲದ ಪೊಲೀಸರು ಕೋಟೆಗೌಡ, ನರಸಿಂಹೇಗೌಡ, ಎನ್.ವಿ.ಸುಬ್ಬರಾವ್ ಮೊದಲಾದ 25 ಮಂದಿಯನ್ನು ಸೆರೆಮನೆಗೆ ಕಳುಹಿಸಿದರು. ಮೈಸೂರು ಕಡೆಗೆ ಧಾವಿಸಿದ ಸತ್ಯಾಗ್ರಹಿಗಳನ್ನು ತಡೆಯಲು ಶ್ರೀರಂಗಪಟ್ಟಣದ ಪಶ್ಚಿಮವಾಹಿನಿ ಬಳಿ ರಸ್ತೆಗೆ ಆನೆಗಳನ್ನು ಅಡ್ಡಲಾಗಿ ನಿಲ್ಲಿಸಲಾಯಿತು. ಎರಡೂ ಕಡೆ ಕಾವೇರಿ ನದಿ ಇರುವುದೊಂದೇ ದಾರಿ. ಆನೆಗಳನ್ನು ದಾಟಿ ಮುಂದುವರಿಯುವುದು ಕಷ್ಟ. ಕಾವೇರಿ ನದಿಯನ್ನು ಈಜಿ ದಾಟಬಹುದೆಂದು ನದಿಗೆ ಹೆಚ್ಚು ನೀರು ಬಿಡಲಾಗಿತ್ತು[242].

ಫ್ರೆಂಚ್‌ರಾಕ್ಸ್ ತಾಲ್ಲೂಕಿನ ಹರನಹಳ್ಳಿ ಗ್ರಾಮದಲ್ಲಿ ಜಾಥಾ ಹೊರಡುತ್ತಿದ್ದ 50 ಜನರನ್ನು ಬಂಧಿಸಲಾಯಿತು. ತಾಲ್ಲೂಕು ಕಛೇರಿ ಬಳಿ ಜನರ ಗುಂಪು ಸೇರಿ ಅದರ 3 ಕಡೆಯಿಂದ ಪೊಲೀಸರ ಮೇಲೆ ಕಲ್ಲುಗಳನ್ನು ಮತ್ತು ಕ್ಷಿಪಣಿಗಳನ್ನು ಎಸೆದರು. ಆ ಸಂದರ್ಭದಲ್ಲಿ ಪೊಲೀಸರು ತಮ್ಮ ಸ್ವಯಂರಕ್ಷಣೆಗಾಗಿ ಬಂದೂಕು ಚಲಾಯಿಸಿದರು. ಇದರ ಪರಿಣಾಮವಾಗಿ ಸ್ಥಳದಲ್ಲೇ ಒಬ್ಬ ಬಾಲಕ ಮರಣ ಹೊಂದಿದನು. ಬಹಳಷ್ಟು ಪೊಲೀಸರು ಕಲ್ಲು ಎಸೆತದಿಂದಾಗಿ ಗಾಯಗೊಂಡರು. ಮುನ್ನೆಚ್ಚರಿಕೆ ಕ್ರಮವಾಗಿ ಶ್ರೀರಂಗಪಟ್ಟಣದಿಂದ ಸೈನ್ಯವು ಫ್ರೆಂಚ್‌ರಾಕ್ಸ್ ಸ್ಥಳಕ್ಕೆ ಧಾವಿಸಿತು[243].

ಮೈಸೂರು ಸಕ್ಕರೆ ಕಾರ್ಖಾನೆಯ ಸಂಘಟನೆಯ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳಾದ ಎಚ್.ಸಿ.ದಾಸಪ್ಪ ಮತ್ತು ಎ.ರಾಮಣ್ಣ ಅವರ ಬಂಧನವನ್ನು ವಿರೋಧಿಸಿ 12 ಸೆಪ್ಟಂಬರ್ 1947ರಂದು ಮೈಸೂರು ಸಕ್ಕರೆ ಕಾರ್ಖಾನೆಯ ಕಾರ್ಮಿಕರು ಮಂಡ್ಯದಲ್ಲಿ ಕೆಲಸವನ್ನು ನಿಲ್ಲಿಸಿ ಚಳುವಳಿಯನ್ನು ನಡೆಸಿದರು ಹಾಗೂ ಚಳುವಳಿಯನ್ನು ಶಾಂತಿಯಿಂದ ಮುಂದುವರಿಸಿದರು[244].

ಈ ಸಂದರ್ಭದಲ್ಲಿ ಸೆಪ್ಟಂಬರ್ 24 ರಂದು ಮಹಾರಾಜರು ಎರಡನೆಯ ಘೋಷಣೆಯನ್ನು ಹೊರಡಿಸಿದರು. ಅದರಂತೆ ಶಾಖೆಗಳನ್ನೆಲ್ಲ ಎರಡು ಭಾಗಗಳಾಗಿ ವಿಂಗಡಿಸಿದರು. ಮೊದಲನೆಯ ಭಾಗದಂತೆ ಅರಮನೆ, ರಾಜ ಭಂಡಾರ, ಸೈನ್ಯ, ಹೈಕೋರ್ಟ್, ಪಬ್ಲಿಕ್ ಸರ್ವಿಸ್ ಕಮೀಷನರ್ ನೇಮಕ, ನ್ಯಾಯ ವಿಧಾಯಕ ಸಭೆ, ಪ್ರಜಾಪ್ರತಿನಿಧಿ ಸಭೆಗಳನ್ನು ಸೇರಿಸುವ ಅಧಿಕಾರ, ಆಡಳಿತ ನಡೆಸಲಾಗದ ಪರಿಸ್ಥಿತಿಯೊದಗಿದಾಗ ಕೆಲಸ ಮುಂದುವರೆಸುವ ವಿಶೇಷಾಧಿಕಾರಿ ಇವು ಮಹಾರಾಜರಿಗೆ ಸೇರಿದ್ದು, ಎರಡನೆಯ ಭಾಗದಂತೆ ಉಳಿದ ಆಡಳಿತ ಶಾಖೆಗಳೆಲ್ಲ ಪ್ರಜಾಪ್ರತಿನಿಧಿಗಳಿಂದ ಆರಿಸಿದ ಮಂತ್ರಿಗಳಿಗೆ ಸೇರಿದ್ದು, ಇತ್ಯಾದಿ ವಿವರಣೆ ಕೊಡಲಾಯಿತು. ಆದರೆ ಈ ಯಾವುದಕ್ಕೂ ಕೆ.ಸಿ.ರೆಡ್ಡಿ ಅವರು ಒಪ್ಪದೆ 'ರಾಜಘೋಷಣೆ'ಯನ್ನು ತಿರಸ್ಕರಿಸಿದರು[245]. 1947ರ ಸೆಪ್ಟಂಬರ್ 30 ರಂದು ಮಂಡ್ಯದಲ್ಲಿ ಸರಕಾರಿ ಪ್ರೌಢಶಾಲೆ ಮತ್ತು ಮನಿಸ್ಸಿಪಲ್ ಪ್ರೌಢಶಾಲೆಗಳು ಪುನರಾಂಭಗೊಂಡವು. ಈ ಸಮಯದಲ್ಲಿ ಮುನ್ಸಿಪಲ್ ಪ್ರೌಢಶಾಲೆಯ ಕೆಲವು ವಿದ್ಯಾರ್ಥಿಗಳು ಸ್ಥಳೀಯ ವಿದ್ಯಾರ್ಥಿಗಳೊಂದಿಗೆ ಸೇರಿಕೊಂಡು ಪಿಕೆಟಿಂಗ್‌ನ್ನು ಯಶಸ್ವಿಯಾಗಿ ಆಚರಿಸಿದರು. ಪ್ರತಿಬಂಧಕಾಜ್ಞೆ ವಿರುದ್ಧ ವಿದ್ಯಾರ್ಥಿಗಳು ಪ್ರತಿಭಟನಾ ಸಭೆ ನಡೆಸಿದರು. ವಿದ್ಯಾರ್ಥಿಗಳನ್ನು ಚದುರಿಸಿ 12 ವಿದ್ಯಾರ್ಥಿ ನಾಯಕರನ್ನು ಬಂಧಿಸಲಾಯಿತು. ಹಾಗೂ ಕಾನೂನು ಕ್ರಮವನ್ನು ಕೈಗೊಳ್ಳಲಾಯಿತು[246]. ಈ ಮಧ್ಯೆ ಅಕ್ಟೋಬರ್ 2 ರಂದು ಸರಕಾರವು ಒಂದು ಆಜ್ಞೆಯನ್ನು ಹೊರಡಿಸಿ ಮೈಸೂರು ಧ್ವಜದ ಜೊತೆಯಲ್ಲಿಯೇ ರಾಷ್ಟ್ರೀಯ ಧ್ವಜವನ್ನು ಹಾರಿಸಬೇಕೆಂದು ತಿಳಿಸಿದರು[247].

6 ಅಕ್ಟೋಬರ್ 1947ರಂದು ನಾಗಮಂಗಲದಲ್ಲಿ 8 ವಿದ್ಯಾರ್ಥಿಗಳು ನಿಷೇಧಾಜ್ಞೆಯನ್ನು ಉಲ್ಲಂಘಿಸಿ ನಾಗಮಂಗಲ ತಾಲ್ಲೂಕು ಕಛೇರಿ ಎದುರು ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆ ನಡೆಸಿದರು. ಅದೇ ದಿನ ಅವರನ್ನು ಬಂಧಿಸಲಾಯಿತು. ಈ ಘಟನೆಯನ್ನು ಹೊರತುಪಡಿಸಿ ಮಂಡ್ಯ ಜಿಲ್ಲೆಯಾದ್ಯಂತ ಪರಿಸ್ಥಿತಿಯು ಶಾಂತ ರೀತಿಯಿದ್ದಿತು[248]. ಅಕ್ಟೋಬರ್ ಮೊದಲನೇ ವಾರದಲ್ಲಿ ಮಹಾರಾಜರು ಮೂರನೆಯ ಘೋಷಣೆ ಹೊರಡಿಸಿದರು. ಅದರಂತೆ ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಘನೆಯಾಗುವುದು ಸರಿಯೆಂದು ತಿಳಿಸಿದರು[249]. 42 ದಿನಗಳವರೆಗೂ ನಡೆದ ಮೈಸೂರು ಚಲೋ ಚಳುವಳಿಯ ನಂತರ ಸರಕಾರವು

ಕಾಂಗ್ರೆಸ್ ಪಕ್ಷದೊಡನೆ ಒಂದು ಒಪ್ಪಂದಕ್ಕೆ ಬಂದಿತು. ಜವಾಬ್ದಾರಿ ಸರಕಾರ ಸ್ಥಾಪಿಸುವುದಕ್ಕೆ ದಿವಾನರೂ ಮಹಾರಾಜರಿಗೆ ಸೂಚನೆ ನೀಡಿದರು. ಅಕ್ಟೋಬರ್ 6 ರಂದು ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರೆನ್ನೆಲ್ಲಾ ಬಿಡುಗಡೆ ಮಾಡಲು ಸರಕಾರ ತೀರ್ಮಾನಿಸಿತು[250]. ಅಕ್ಟೋಬರ್ 6, 1947ರಂದು ಬೆಂಗಳೂರಿನ ಸೆಂಟ್ರಲ್ ಜೈಲಿನಲ್ಲಿರುವ ಹೆಚ್.ಕೆ.ವೀರಣ್ಣಗೌಡ, ಹುಚ್ಚೇಗೌಡ, ಹುಸೇನ ಸಾಹೇಬರನ್ನು ಸಂಜೆ ಬಿಡುಗಡೆ ಮಾಡಲಾಯಿತು ಹಾಗೂ ಮೈಸೂರು ಸಬ್ ಜೈಲಿನಲ್ಲಿದ್ದ ನಿಜಲಿಂಗಪ್ಪನವರನ್ನು ಬಿಡುಗಡೆ ಮಾಡಲಾಯಿತು. ಸಂಸ್ಥಾನದ ಇತರೆ ಸರೆಮನೆಗಳಲ್ಲಿದ್ದ ಎಲ್ಲಾ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಬಿಡುಗಡೆ ಮಾಡಲಾಯಿತು[251]. ಬಂಧನದಿಂದ ಬಿಡುಗಡೆ ನಂತರ ಮಂಡ್ಯ ಪ್ರಮುಖ ನಾಯಕರಾದ ಎ.ಜಿ.ಬಂದೀಗೌಡ ಈ ರೀತಿಯಾಗಿ ಹೇಳಿಕೆಯನ್ನು ನೀಡಿದರು. 'ಈಗ ದೇಶಾದ್ಯಂತವೂ ನಡೆದಿರುವ ದೌರ್ಜನ್ಯಗಳೆಲ್ಲಾ ಸರ್ಕಾರದ ಆಡಳಿತಗಾರರೇ ಮುಖ್ಯ ಕಾರಣ. ಈಗ ಇದನ್ನು ತಡೆಗಟ್ಟಿ ದೇಶದಲ್ಲಿ ಶಾಂತಿ, ಸುಖ, ಸೌಹಾರ್ದತೆ ನೆಲಸುವಂತೆ ಮಾಡುವುದು ಮಹಾರಾಜರ ಕೈಯಲ್ಲಿದೆ[252]. ಬಂಧನದಿಂದ ಬಿಡುಗಡೆಯಾದ ಮೇಲೆ ಅಕ್ಟೋಬರ್ 11, 1947ರಂದು ಮೈಸೂರು ಪ್ರಯಾಣಿಸುವ ಸಂದರ್ಭದಲ್ಲಿ ಮೈಸೂರು ನಗರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಚನ್ನಯ್ಯನವರಿಗೆ ಹಾಗೂ ಇತರೆ ಸತ್ಯಾಗ್ರಹಿಗಳಿಗೆ ಶ್ರೀರಂಗಪಟ್ಟಣದ ಟೋಲ್‌ಗೇಟ್ ಬಳಿ ಸ್ವಾಗತ ನೀಡಲಾಯಿತು[253].

ಅಕ್ಟೋಬರ್ 11 ಮತ್ತು 12 ರಂದು ಬೆಂಗಳೂರಿನಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಪರವಾಗಿ ಕೆ.ಚೆಂಗಲರಾಯರೆಡ್ಡಿಯವರಿಗೂ ಹಾಗೂ ಮೈಸೂರು ಸರ್ಕಾರದ ಪರವಾಗಿ ಮೈಸೂರು ಸಂಸ್ಥಾನದ ದಿವಾನರಾದ ಸರ್.ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ನಡುವೆ ಚರ್ಚೆ ನಡೆಯಿತು. ಪ್ರಮುಖವಾಗಿ ಹೊಸ ಮಂತ್ರಿಮಂಡದ ರಚನೆ ಮತ್ತು ಅದಕ್ಕಾಗಿ ಅನುಸರಿಸಬೇಕಾದ ಪದ್ಧತಿಗಳ ಬಗ್ಗೆ ಒಮ್ಮತವಾದ ನಿರ್ಧಾರಕ್ಕೆ ಬರಲಾಯಿತು. ಪೂರ್ಣ ಜವಾಬ್ದಾರಿ ಸರ್ಕಾರ ಸ್ಥಾಪನೆಗೆ ಬೇಕಾದ ರಾಜ್ಯಾಂಗ ಮಸೂದೆಯನ್ನು ರಚಿಸಲು ರಾಜ್ಯಾಂಗ ರಚನಾ ಸಮಿತಿಯನ್ನು ರಚಿಸುವ ಒಪ್ಪಂದಕ್ಕೆ ಸಹಿಹಾಕಲಾಯಿತು[254].

ಹೀಗೆ 'ಮೈಸೂರು ಚಲೋ' ಚಳುವಳಿಯು 12 ಅಕ್ಟೋಬರ್ 1947ರಂದು ಯಶಸ್ವಿಯಾಗಿ ಮುಕ್ತಾಯವಾಯಿತು. ಕೆ.ಸಿ.ರೆಡ್ಡಿ ಅವರು ಅಂದು ಸಂಜೆ ಸುಬ್ಬರಾಯನ ಕರೆಯಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಭಾಷಣ ಮಾಡಿದರು. ತಮ್ಮ ಭಾಷಣದಲ್ಲಿ ಮೈಸೂರಿನ 77 ಲಕ್ಷ ಪ್ರಜೆಗಳ ಆಶೋತ್ತರವೂ ಈಡೇರಿದೆ. ಇದರಲ್ಲಿ ಸಹಕರಿಸಿದ ಸಂಸ್ಥಾನದ ಒಳಗಿನ ಮತ್ತು ಹೊರಗಿನ ಪ್ರಜಾವರ್ಗದವರೆಲ್ಲರಿಗೂ ಕೃತಜ್ಞತೆಗಳನ್ನು ಅರ್ಪಿಸಿದರು. ಹಾಗೂ ಪೊಲೀಸರಿಂದ ಕಷ್ಟನಷ್ಟಗಳನ್ನು ಹೊಂದಿದವರೆಗೂ,

ಹುತಾತ್ಮರಿಗೂ ಸಂತಾಪವನ್ನು ವ್ಯಕ್ತಪಡಿಸಿದರು. ಇಂದಿನಿಂದ ಸಂಸ್ಥಾನದಲ್ಲಿ ಹೊಸಯುಗವು ಆರಂಭವಾಗಿದ್ದು, ಇದುವರೆಗೆ ಕಾಂಗ್ರೆಸ್ ಹೋರಾಟದಲ್ಲಿ ಮಗ್ನವಾಗಿದ್ದಿತು. ಇನ್ನು ಮುಂದೆ ಪ್ರಜೆಗಳ ಜವಾಬ್ದಾರಿ ಗುರುತರವಾದುದು. ಅವರಿಗಾಗಿ ರಚನಾತ್ಮಕ ಕಾರ್ಯಗಳಲ್ಲಿ ತೊಡಗಬೇಕಾಗಿದೆ ಎಂದರು. ಮುಂದುವರಿದು ಚಲೋ ಮೈಸೂರು ಘೋಷಣೆಯೊಡನೆಯೇ ಧ್ವಜ ಸತ್ಯಾಗ್ರಹವನ್ನು ಸಹ ಆರಂಭಿಸಲಾಗಿತ್ತು. ಆಗಸ್ಟ್ 15ನೇ ತಾರೀಖು ಸ್ವಾತಂತ್ರ್ಯ ದಿನಾಚರಣೆಯ ದಿನ ಭಾರತದ ಡೋಮಿನಿಯನ್ ರಾಷ್ಟ್ರಧ್ವಜಕ್ಕೆ ರಾಜಪ್ರಭುತ್ವದವರು ಗೌರವವನ್ನು ಸಲ್ಲಿಸದೇ ಇದ್ದುದ್ದರಿಂದ ಸಂಸ್ಥಾನದಲ್ಲಿ ಪೂರ್ಣ ಜವಾಬ್ದಾರಿ ಸರಕಾರವು ಸ್ಥಾಪಿತವಾಗುವವರೆಗೂ ಮೈಸೂರು ಧ್ವಜಕ್ಕೆ ಗೌರವವನ್ನು ಸಲ್ಲಿಸಲಾಗುವುದಿಲ್ಲವೆಂದು ಘೋಷಿಸಲಾಗಿತ್ತು. ಮೈಸೂರು ಚಲೋ ಘೋಷಣೆಯಂತೆಯೇ ಧ್ವಜ ಸತ್ಯಗ್ರಹವು ಸಹ ಜಯಗೊಳಿಸಿದೆ ಎಂದರು[255].

ಅಕ್ಟೋಬರ್ 13 ರಂದು ಬೆಳಿಗ್ಗೆ 9 ಗಂಟೆಗೆ ವಿದ್ಯಾರ್ಥಿ ಕಾಂಗ್ರೆಸ್ ಆಶ್ರಯದಲ್ಲಿ ಸುಬ್ಬರಾಯನ ಕೆರೆಯ ಮೈದಾನದಲ್ಲಿ ಎಸ್.ನಿಜಲಿಂಗಪ್ಪನವರು ರಾಷ್ಟ್ರಧ್ವಜವನ್ನು ಹಾರಿಸಿದರು. ಕಾಂಗ್ರೆಸ್ ಅಧ್ಯಕ್ಷರಾದ ಕೆ.ಸಿ.ರೆಡ್ಡಿ ಮತ್ತು ಇತರ ಕಾರ್ಯಕಾರಿ ಸಮಿತಿಯವರೆಗೆ ಅಕ್ಟೋಬರ್ 12ರ ಸಂಜೆ ಸಂಪೂರ್ಣ ಜವಾಬ್ದಾರಿ ಸರಕಾರ ದಯಪಾಲಿಸಿದ್ದು ಹಾಗೂ ಮಹಾಪ್ರಭುಗಳನ್ನು ಭೇಟಿ ಮಾಡಿದ ವಿಷಯವನ್ನು ನಿಜಲಿಂಗಪ್ಪನವರು ತಮ್ಮ ಭಾಷಣದಲ್ಲಿ ವಿವರಿಸಿದರು. ಸದ್ಯದಲ್ಲೇ ಹೊಸಮಂತ್ರಿ ಮಂಡಲ ಹಾಗೂ ಅಖಂಡ ಕರ್ನಾಟಕ ಸ್ಥಾಪನೆಯಾಗಲಿದೆಎಂದರು. ಪೊಲೀಸಿನವರ ವರ್ತನೆಯನ್ನು ಖಂಡಿಸಿದರು. ಸತ್ಯಾಗ್ರಹದಲ್ಲಿ ಭಾಗವಹಿಸಿದ ಯುವಕರು, ಮುದಕರು, ಹೆಂಗಸರು, ಮಕ್ಕಳಾದಿಯಾಗಿ ಎಲ್ಲರಿಗೂ ವಂದನೆಸಲ್ಲಿಸಿದರು. ಸಂಸ್ಥಾನದಲ್ಲಿ ಶಾಂತಿ ಮತ್ತು ಸೌಹಾರ್ದವು ನೆಲೆಸಲು ಎಲ್ಲರೂ ಸಹಕರಿಸಬೇಕು ಎಂದು ನಿಜಲಿಂಗಪ್ಪನವರು ನುಡಿದರು[256]. ಅಕ್ಟೋಬರ್ 13 ರಂದು ಸರಕಾರವು ರಾಜ್ಯಾಂಗ ಸುಧಾರಣೆಗಳನ್ನು ಘೋಷಿಸಿತು. ಕಾಂಗ್ರೆಸ್ಸಿನ ನಾಯಕ ಮುಖ್ಯಮಂತ್ರಿಯಾಗಿರುವುದಾಗಿಯೂ, ದಿವಾನರು ಸದ್ಯದಲ್ಲಿ ಸ್ವಲ್ಪಕಾಲ ಮುಂದುವರಿಯುವರೆಂದೂ ತೀರ್ಮಾನವಾಯಿತು. ಮಂತ್ರಿಮಂಡಲ ರಚನೆಯಲ್ಲಿ ಬಹುಮತ ಪಡೆದಿರುವ ಕಾಂಗ್ರೆಸ್ ಪಕ್ಷದಿಂದ 6 ಜನರನ್ನು. ಇನ್ನಿತರ ಪಕ್ಷಗಳಿಂದ 3 ಜನರನ್ನು ತೆಗೆದುಕೊಳ್ಳುವುದೆಂದೂ ತೀರ್ಮಾನವಾಯಿತು. ಮಂತ್ರಿಮಂಡಲವು ರಾಜ್ಯಾಂಗ ರಚನಾ ಸಭೆ ಸೇರಲು ಕ್ರಮಕೈಗೊಳ್ಳಬೇಕೆಂದೂ ಅದು 1948ರ ಜುಲೈ ಕೊನೆಯ ಹೊತ್ತಿಗೆ ಸಂಸ್ಥಾನಕ್ಕೆಂದು ಒಂದು ರಾಜ್ಯಾಂಗವನ್ನು ಸಿದ್ಧಪಡಿಸಬೇಕೆಂದು ತೀರ್ಮಾನವಾಯಿತು[257].

ಕಾಂಗ್ರೆಸ್ ಘೋಷಿಸಿದ ಸತ್ಯಾಗ್ರಹದ ಸಂಬಂಧವಾಗಿ ಬಂಧನದಲ್ಲಿರುವ ಎಲ್ಲ ರಾಜಕೀಯ ಬಂಧಿಗಳನ್ನು ಬಿಡುಗಡೆ ಮಾಡಲು ಸರ್ಕಾರದವರು ಆಜ್ಞೆ ಮಾಡಿದರು

ಹಾಗೂ ಪ್ರತಿಬಂಧಕಾಜ್ಞೆಗಳನ್ನೆಲ್ಲಾ ಪತ್ರಿಕೆಗಳ ಮೇಲೆ ಹಾಕಿದ್ದ ಬಹಿಷ್ಕಾರವನ್ನು ಸರ್ಕಾರದವರು ಅಕ್ಟೋಬರ್ 13 ರಿಂದ ವಾಪಸ್ಸು ತೆಗೆದುಕೊಂಡರು[258].

ಮೈಸೂರು ಸಂಸ್ಥಾನದಲ್ಲಿ ಈ ರಚನಾತ್ಮಕ ಬೆಳವಣಿಗೆಯನ್ನು ಅಕ್ಟೋಬರ್ 17 ರಂದು ಬಿರ್ಲಾಭವನದ ಪ್ರಾರ್ಥನಾ ವೇಳೆಯಲ್ಲಿ ಮಹಾತ್ಮಗಾಂಧೀಜಿಯವರು ತಿಳಿದು ಮೈಸೂರು ಮಹಾರಾಜರನ್ನು ಹಾಗೂ ಕಾಂಗ್ರೆಸ್ ನಾಯಕರನ್ನು ಅಭಿನಂದಿಸಿ ಈ ಬೆಳವಣಗೆಯನ್ನು ಉಳಿದರೆಲ್ಲರೂ ಅನುಸರಿಸಬೇಕೆಂದು ತಿಳಿಸಿದರು[259].

ಮೈಸೂರು ಸಂಸ್ಥಾನದ ಇತಿಹಾಸದಲ್ಲಿ 1947ರ ಅಕ್ಟೋಬರ್ 24 ಮಹಾದಿನ ದಿವಾನ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್‌ರ ಅಧಿಕಾರ ಕೊನೆಗೊಂಡು. ಕೆ.ಸಿ.ರೆಡ್ಡಿ ನೇತೃತ್ವದಲ್ಲಿ ಮಂತ್ರಿಮಂಡಲ ಬೆಂಗಳೂರು ಅಠಾರ ಕಛೇರಿಯಲ್ಲಿ ರಾಜ್ಯದ ಆಡಳಿತ ಸೂತ್ರವನ್ನು ವಹಿಸಿಕೊಂಡಿತು. ದಿವಾನ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಮತ್ತು ಕಾಂಗ್ರೆಸ್ಸಿನವರ ನಡುವೆ ಆದ ಒಪ್ಪಂದದಂತೆ ಕಾಂಗ್ರೆಸ್ಸಿನಿಂದ ಆರು ಜನ ಮಂತ್ರಿಗಳು, ಸರ್ಕಾರದಿಂದ ಮೂರುಜನ ಮಂತ್ರಿಗಳು ಹಾಗೂ ದಿವಾನರನ್ನು ಒಳಗೊಂಡು ಸರ್ಕಾರವನ್ನು ಸ್ಥಾಪಿಸಲಾಯಿತು. ಕಾಂಗ್ರೆಸ್ಸಿನ ಪರವಾಗಿ ಕೆ.ಸಿ.ರೆಡ್ಡಿ, ಕೆ.ಟಿ.ಭಾಷ್ಯಂ, ಹೆಚ್.ಸಿ.ದಾಸಪ್ಪ, ಹೆಚ್.ಸಿದ್ದಯ್ಯ, ಟಿ.ಮರಿಯಪ್ಪ, ಚೆನ್ನಿಗರಾಮಯ್ಯ ಅವರೂ ಕಾಂಗ್ರೆಸೇತರ ಪರವಾಗಿ ಡಿ.ಹೆಚ್.ಚಂದ್ರಶೇಖರಯ್ಯ, ಮಹಮದ್ ಷರೀಪ್, ಸ್ವತಂತ್ರರಾಗಿ ಪಾಮಡಿ ಸುಬ್ಬರಾಯಶೆಟ್ಟಿಯವರು ಅಧಿಕಾರ ಸ್ವೀಕರಿಸಿದರು. ಅಧಿಕಾರ ವಹಿಸಿಕೊಂಡ ನಂತರ ಬೆಂಗಳೂರಿನ ಬನಪ್ಪ ಪಾರ್ಕಿನಲ್ಲಿ ನಡೆದ ಪ್ರಚಂಡ ಬಹಿರಂಗ ಸಭೆಯಲ್ಲಿ ಭಾಷಣ ಮಾಡುತ್ತ ರೆಡ್ಡಿಯವರು 'ಇಂದಿನಿಂದ ಮೈಸೂರಿನಲ್ಲಿ ಪ್ರಜಾಯುಗ ಆರಂಭವಾಗಿದೆ. ಅದರ ಜೊತೆಗೆ ಪ್ರಜೆಗಳ ಮೇಲೆ ಮಹತ್ತರವಾದ ಜವಾಬ್ದಾರಿ ಬಿದ್ದಿದೆ. ಜನತೆಯು ಸತ್ಯಕ್ಕೆ ಕಟ್ಟುಬಿದ್ದು, ದೇಶಭಕ್ತಿಯುತರಾಗಿ ಎಲ್ಲ ಕ್ಷೇತ್ರಗಳಲ್ಲಿಯೂ ಪ್ರಾಮಾಣಿಕವಾಗಿ ನಡೆದುಕೊಳ್ಳದಿದ್ದರೆ ಇಂದು ಆರಂಭವಾಗಿರುವ ಪ್ರಜಾಯುಗವು ಪ್ರಗತಿಪಥದಲ್ಲಿ ಮುಂದುವರೆಯಲಾರದು. ಮೈಸೂರು ರಾಜ್ಯದ ಸರ್ವ ಪ್ರಜೆಗಳ ತ್ಯಾಗ, ಬಲಿದಾನ ಮತ್ತು ಅಮೋಘವಾದ ಸೇವೆಯಿಂದ ಪ್ರಜಾ ಸರ್ಕಾರ ಏರ್ಪಟ್ಟಿದೆ. ಪ್ರಜಾ ಸೇವಾ ಕಂಕಣಬದ್ಧರಾಗಿ ನಾವೆಲ್ಲ ಇಂದು ಅಧಿಕಾರ ವಹಿಸಿಕೊಂಡಿದ್ದೇವೆ. ರಾಷ್ಟ್ರಪಿತ ಬಾಪೂಜಿಯವರ ಛಾಯಾನುವರ್ತಿಗಳಾಗಿ ಜನ ಸೇವೆಯನ್ನು ಮುಂದುವರೆಸೋಣ ಎಂದು ಹೇಳಿದರು[260]. 1947ರ ಅಕ್ಟೋಬರ್ 12ನೇ ತಾರೀಖು ರಾಜ್ಯಾಂಗ ಸಭೆಯ ರಚನೆ ಮತ್ತು ತಾತ್ಕಾಲಿಕ ಮಂತ್ರಿಮಂಡಲದ ಸ್ಥಾಪನೆಗಳ ಒಪ್ಪಂದಕ್ಕೆ (ಕಾಂಗ್ರೆಸ್ ಅಧ್ಯಕ್ಷರಾದ ಕೆ.ಸಿ.ರೆಡ್ಡಿ ಮತ್ತು ದಿವಾನರಾದ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ನಡುವೆ ನಡೆದ ಒಪ್ಪಂದ) ಮಹಾರಾಜರಾದ ಜಯಚಾಮರಾಜೇಂದ್ರ ಒಡೆಯರ್ ಅಂಗೀಕಾರವನ್ನು ನೀಡಿದರು[261].

ಮೈಸೂರಿನಲ್ಲಿ ಜವಾಬ್ದಾರಿ ಸರಕಾರ ಸ್ಥಾಪನೆ ಮಾಡುವಲ್ಲಿ ಯಶಸ್ವಿಯಾಗಿ ಮಂಡ್ಯ ಜಿಲ್ಲೆಯ ಅನೇಕ ಭಾಗಗಳಲ್ಲಿ ವಿಜಯೋತ್ಸವ ಕಾರ್ಯಕ್ರಮಗಳು ನಡೆದವು. ಶ್ರೀರಂಗಪಟ್ಟಣ ತಾಲ್ಲೂಕು ಅರಕೆರೆ ಹೋಬಳಿ ಚಿಕ್ಕನಹಳ್ಳಿ ಗ್ರಾಮದಲ್ಲಿ 1947ರ ನವಂಬರ್ 1ನೇ ತಾರೀಖು ಮೈಸೂರು ಸ್ವಾತಂತ್ರ್ಯ ದಿನಾಚರಣೆಯ ಬಹಳ ವಿಜೃಂಭಣೆಯಿಂದ ನಡೆಯಿತು. ಬೆಳಿಗ್ಗೆ ಮಹಾತ್ಮಗಾಂಧೀಯವರ ಭಾವಚಿತ್ರ ಮತ್ತು ರಾಷ್ಟ್ರಧ್ವಜದೊಡನೆ ಪ್ರಭಾತಪೇರಿಯೂ, ಸಂಜೆ ಬಹಿರಂಗ ಸಭೆಯೂ ನಡೆಯಿತು. ನಂಜೇಗೌಡರು ಮತ್ತು ಆರ್.ರಾಮಸ್ವಾಮಿಯವರು ಪ್ರಜಾಪ್ರಭುತ್ವ ಸರಕಾರದ ವಿಷಯವಾಗಿ ಭಾಷಣ ಮಾಡಿ ನೂತನ ಸರ್ಕಾರದ ಪ್ರಜೆಗಳ ಬೆಂಬಲವನ್ನು ಕೋರಿದರು[262].

1947ರ ನವಂಬರ್ 3 ರಂದು ಶ್ರೀರಂಗಪಟ್ಟಣದಲ್ಲಿ ತಾಲ್ಲೂಕು ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಮೈಸೂರಿನಲ್ಲಿ ಜವಾಬ್ದಾರಿ ಸ್ಥಾಪಿಸಿದಕ್ಕಾಗಿ ವಿಜಯೋತ್ಸವವನ್ನು ಆಚರಿಸಲಾಯಿತು. ಬತೇರಿಯ ಮೇಲೆ ರಾಷ್ಟ್ರಧ್ವಜ ಮತ್ತು ಮೈಸೂರು ಧ್ವಜಗಳನ್ನು ಹಾರಿಸಲಾಯಿತು. ಸಂಜೆ ಕೋಟೆಯ ಬಳಿ ಎ.ಜಿ.ಬಂದೀಗೌಡರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆಯು ನಡೆಯಿತು. ವಿದ್ಯಾಸಚಿವರಾದ ಪಿ.ಹೆಚ್.ಚಂದ್ರಶೇಖರಯ್ಯನವರು ಭಾಷಣ ಮಾಡಿ ಸ್ವಾತಂತ್ರ್ಯವನ್ನು ಗಳಿಸಿರುವುದಕ್ಕಿಂತಲೂ ಅದರ ಸದ್ವಿನಿಯೋಗವು ಜನತೆಯ ಮೇಲೆ ಬಿದ್ದಿರುವ ಗುರುತರವಾದ ಭಾರವೆಂದು ಹೇಳಿ ದೇಶದಲ್ಲೆಲ್ಲಾ ತಾಂಡವವಾಡುತ್ತಿರುವ ಆಹಾರ ಅಭಾವ, ಲಂಚಕೋರನ ಮತ್ತು ಕಾಳಸಂತೆಗಳನ್ನು ನಿರ್ಮೂಲಗೊಳಿಸಲು ಎಲ್ಲರೂ ನೆರವಾಗಬೇಕೆಂದು ಪ್ರಾರ್ಥಿಸಿದರು. ಡಾ. ಸಿ.ಬಂದೀಗೌಡ ಮತ್ತು ಮಳವಳ್ಳಿ ವೀರಪ್ಪನವರ ಸಹ ಭಾಷಣ ಮಾಡಿದರು. ಅಧ್ಯಕ್ಷರು ಮಾತನಾಡಿ ನೂತನ ಮಂತ್ರಿಮಂಡಲಕ್ಕೆ ಸಾರ್ವಜನಿಕರು ಪೂರ್ಣ ಬೆಂಬಲ ನೀಡಬೇಕೆಂದು ಕೋರಿದರು. ಸ್ವಾತಂತ್ರ್ಯ ಸಮರದಲ್ಲಿ ತ್ಯಾಗ ಮಾಡಿದ ವೀರರಿಗೆ ಧನ್ಯವಾದಗಳನ್ನು ಅರ್ಪಿಸಿದರು. ಹೋರಾಟ ಮುಗಿದಿರುವುದರಿಂದ ಇನ್ನು ಮುಂದೆ ಎಲ್ಲರೂ ರಚನಾತ್ಮಕ ಕಾರ್ಯಗಳಲ್ಲಿ ತೊಡಗಬೇಕೆಂದು ಕೋರಿದರು. ಅಂತಿಮವಾಗಿ ಸಭೆಯಲ್ಲಿ ರಾಷ್ಟ್ರಗೀತೆ ಹಾಡಿನೊಂದಿಗೆ ಸಮಾರಂಭವು ಮುಕ್ತಾಯವಾಯಿತು[263].

1947ರ ನವಂಬರ್ 14 ರಂದು ಫ್ರೆಂಚ್‌ರಾಕ್ಸ್ (ಪಾಂಡವಪುರ) ತಾಲ್ಲೂಕು ಚಿನಕುರಳಿ ಹೋಬಳಿ ಹರವು ಗ್ರಾಮದಲ್ಲಿ ಮೈಸೂರಿನಲ್ಲಿ ಜವಾಬ್ದಾರಿ ಸರಕಾರ ಸ್ಥಾಪಿಸಿದ್ದಕ್ಕಾಗಿ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು. ಬೆಳಿಗ್ಗೆ ಪ್ರಭಾತಪೇರಿ ಮತ್ತು ಸಂಜೆ ಮೂರು ಜೊತೆ ಎತ್ತುಗಳನ್ನು ಕಟ್ಟಿದ ರಥದಲ್ಲಿ ಗಾಂಧೀಜಿ ಮತ್ತು ದೇಶದ ಪ್ರಮುಖ ನಾಯಕರುಗಳ ಭಾವಚಿತ್ರಗಳ ಮೆರವಣಿಗೆ ನಡೆಯಿತು. ಎಂ.ಸಿ.ಲಿಂಗೇಗೌಡರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ಜರುಗಿತು. ಗುಂಡಿನೇಟಿಗೆ ತುತ್ತಾಗಿ ದೇಶ ಸೇವೆಯಲ್ಲಿ

ಪ್ರಾಣ ನೀಡಿದ ಕಪನೀಗೌಡ ಮತ್ತು ಸಣ್ಣಪ್ಪಗೌಡರ ಆತ್ಮಕ್ಕೆ ಶಾಂತಿ ಕೋರಲಾಯಿತು. ಅಧಿಕಾರಿಗಳ ದೌರ್ಜನ್ಯ ಕೃತ್ಯಗಳ ಬಗ್ಗೆ ತೀವ್ರಗತಿಯಲ್ಲಿ ಕ್ರಮಕೈಗೊಳ್ಳಬೇಕೆಂದು ನೂತನ ಸರ್ಕಾರವನ್ನು ಪ್ರಾರ್ಥಿಸಲಾಯಿತು[264]. 1947ರ ನವಂಬರ್ 6 ರಂದು ಶ್ರೀರಂಗಪಟ್ಟಣ ತಾಲ್ಲೂಕು ಬೆಳಗೊಳದಲ್ಲಿ ಮೈಸೂರಿನಲ್ಲಿ ಜವಾಬ್ದಾರಿ ಸರಕಾರಿ ಸ್ಥಾಪನೆಗಾಗಿ ವಿಜಯೋತ್ಸವ ಆಚರಿಸಲಾಯಿತು. 600 ಹರಿಜನರಿಗೆ ಅನ್ನದಾನ ಮಾಡಲಾಯಿತು. ಸಂಜೆ 15 ಜೊತೆ ಎತ್ತುಗಳನ್ನು ಕಟ್ಟಿದ ರಥದಲ್ಲಿ ಗಾಂಧೀಜಿ ಮತ್ತು ಇತರೆ ನಾಯಕರುಗಳ ಭಾವಚಿತ್ರಗಳ ಮೆರವಣಿಗೆ ನಡೆಯಿತು. ಬಹಿರಂಗ ಸಭೆ ನಡೆದ ನಂತರ ಮಂತ್ರಿಮಂಡಲಕ್ಕೆ ಶುಭಾಶಯಗಳನ್ನು ಕೋರಲಾಯಿತು[265].

ಮೈಸೂರು ಚಲೋ ಚಳುವಳಿ ಮಂಡ್ಯ ಜಿಲ್ಲೆಯ ಜನತೆಯ ಪಾಲಿಗೆ ಅಭೂತಪೂರ್ವ ಹೋರಾಟವಾಗಿತ್ತು. ಹಾಗೂ ಮೈಸೂರು ಸಂಸ್ಥಾನದಾದ್ಯಂತ ಜನರು ಭಾರೀ ಪ್ರಮಾಣದಲ್ಲಿ ಭಾಗವಹಿಸಿದ ಕೊನೆಯ ಹೋರಾಟ ಇದು. ಇಡೀ ಭಾರತ ದೇಶ ಸ್ವಾತಂತ್ರ್ಯ ಗಳಿಸಿದಾಗ ಅನುಭವಿಸಿದಂತಹ ಸಂತೋಷ ಮೈಸೂರು ಜನರ ಪಾಲಿಗೆ ಒಂದೂವರೆ ತಿಂಗಳ ನಂತರ ಸಿಕ್ಕಿತು. ಮೈಸೂರು ರಾಜ್ಯದಲ್ಲಿ ಕಾಂಗ್ರೆಸ್ 1938ರಲ್ಲಿ ಆರಂಭಿಸಿದ ಜವಾಬ್ದಾರಿ ಸರ್ಕಾರ ಸ್ಥಾಪನೆ ಹೋರಾಟಕ್ಕೆ ಅಂತಿಮ ಜಯ ದೊರೆತಂತಾಯಿತು. 1942ರ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಬಳಸಿದ ತಂತ್ರಗಳನ್ನೇ ಮೈಸೂರು ಸಂಸ್ಥಾನದ ಜನತೆ ಸಮರ್ಪಕವಾಗಿ ಬಳಸಿ ಮೈಸೂರು ಚಲೋ ಚಳುವಳಿ ಪೂರ್ಣ ಯಶಸ್ವಿಯಾಗಲು ಕಾರಣೀಭೂತರಾದರು[266]. ಮೈಸೂರು ಸಂಸ್ಥಾನದ ಜಿಲ್ಲೆಗಳಲ್ಲಿ ಮಂಡ್ಯ ಕೂಡ ಒಂದು. ಮಂಡ್ಯ ಜಿಲ್ಲೆಯ ತಾಲ್ಲೂಕುಗಳಾದ ಮದ್ದೂರು, ಶ್ರೀರಂಗಪಟ್ಟಣ, ಫ್ರೆಂಚ್‌ರಾಕ್ಸ್ (ಪಾಂಡವಪುರ), ನಾಗಮಂಗಲ, ಮಳವಳ್ಳಿ, ಕೆ.ಆರ್.ಪೇಟೆ, ಮಂಡ್ಯ ತಾಲ್ಲೂಕಿನ ಜನರು, ರೈತರು, ಸಕ್ಕರೆ ಕಾರ್ಖಾನೆಯ ಕಾರ್ಮಿಕರು, ಶಾಲಾ-ಕಾಲೇಜಿನ ವಿದ್ಯಾರ್ಥಿಗಳು, ಮಹಿಳೆಯರು ಕಾಂಗ್ರೆಸ್ ಮುಖಂಡರುಗಳು ಹಾಗೂ ಸದಸ್ಯರು ಸಕ್ರೀಯವಾಗಿ ಭಾಗವಹಿಸಿದರು ಹಾಗೂ ಬೇರೆ ಬೇರೆ ಜಿಲ್ಲೆಗಳಿಂದ ಆಗಮಿಸಿದ ಸತ್ಯಾಗ್ರಹಿಗಳಿಗೆ ಆತಿಥ್ಯವಹಿಸಿದ್ದರು.

ಸ್ವಾತಂತ್ರ್ಯ ಚಳುವಳಿಯಲ್ಲಿ ಮಂಡ್ಯ ಜಿಲ್ಲೆಯ ಶ್ರೀಸಾಮಾನ್ಯರು

ಭಾರತದ ಸ್ವಾತಂತ್ರ್ಯ ಚಳುವಳಿಯು ಸುದೀರ್ಘವಾದದ್ದು ಹಾಗೂ ಭಾರತದ ಇತಿಹಾಸದಲ್ಲಿ ಮಾತ್ರವಲ್ಲದೇ ಜಗತ್ತಿನ ಇತಿಹಾಸದಲ್ಲಿಯೇ ಪ್ರಮುಖವಾದುದು. ಸ್ವಾತಂತ್ರ್ಯ ಚಳುವಳಿಯಲ್ಲಿ ಮಹಾತ್ಮ ಗಾಂಧೀಜಿಯವರ ಪ್ರವೇಶವಾದ ನಂತರ ದೇಶದುದ್ದಗಲಕ್ಕೂ ಚಳುವಳಿ ತೀವ್ರವಾಯಿತು. ಮಹಾತ್ಮ ಗಾಂಧೀಜಿಯವರು ಸ್ವಾತಂತ್ರ್ಯದ ಕರೆಗೆ ಓಗೊಟು ಲಕ್ಷೋಪಲಕ್ಷ ಜನಸಾಮಾನ್ಯರು ಚಳುವಳಿಯಲ್ಲಿ

ಭಾಗವಹಿಸಿದ್ದರು. ಅದಂತೆ ಮಂಡ್ಯ ಜಿಲ್ಲೆಯ ಜನಸಾಮಾನ್ಯರ ಚಳುವಳಿಗೆ ಸ್ಪಂದಿಸಿ ಸ್ವಾತಂತ್ರ್ಯ ಚಳುವಳಿಯಲ್ಲಿ ತಮ್ಮದೇ ಆದ ವಿಶಿಷ್ಟವಾದ ಛಾಪೂ ಮೂಡಿಸಿದ್ದಾರೆ. 1934ರಲ್ಲಿ ಮಹಾತ್ಮ ಗಾಂಧೀಜಿಯವರ ಹರಿಜನನಿಧಿ ಸಂಗ್ರಹದ ಸಂದರ್ಭದಲ್ಲಿ ಮಂಡ್ಯ ಜಿಲ್ಲೆಗೆ ಭೇಟಿ ನೀಡಿದ್ದರು[267]. ಅವರಿಂದ ಪ್ರಭಾವಿತರಾದವರಲ್ಲಿ ಮಂಡ್ಯದ ಕಲ್ಲಹಳ್ಳಿ ಸಿದ್ದೇಗೌಡರು ಒಬ್ಬರು. "ವಿದ್ಯಾದಾನವೇ ಮಹಾದಾನ" ಎಂಬ ಶ್ರೇಷ್ಠ ವಚನಕ್ಕನುಸಾರವಾಗಿ ನಿರ್ವಂಚನಾದೃಷ್ಟಿಯಿಂದ ದಾನ ಮಾಡಿ ವಿದ್ಯಾರ್ಥಿಗಳ ಪ್ರೇಮವನ್ನು ಸಂಪಾದಿಸಿಕೊಂಡಿದ್ದರು. ಮಂಡ್ಯದ ಮಾಧ್ಯಮಿಕ ಪಾಠಶಾಲೆಯ ಎಲ್ಲಾ ಕೋಮಿನ ಬಡ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಧರ್ಮಾರ್ಥವಾಗಿ ನೀಡುತ್ತಿದ್ದರು. ಈ ಕೆಲಸವನ್ನು ಹಲವು ವರ್ಷಗಳಿಂದಲೂ ಕೈಗೊಂಡಿದ್ದರು. ದಿನಾಂಕ 11ನೇ ಜುಲೈ 1937ರಲ್ಲಿ 15 ರೂಪಾಯಿ ಹೊಸ ಪುಸ್ತಕಗಳು, 15 ರೂಪಾಯಿ ಬೆಳೆಬಾಳತಕ್ಕ ಹಳೆ ಪುಸ್ತಕಗಳು ಒಟ್ಟು 30 ರೂಪಾಯಿ ಬೆಲೆಬಾಳುವ ಪುಸ್ತಕಗಳನ್ನು ದಾನವಾಗಿ ನೀಡಿದ್ದರು. 1937ರಲ್ಲಿ ಹದಿನೈದು ಮಂದಿ ಹರಿಜನ ಬಾಲಕರುಗಳಿಗೆ ಪುಸ್ತಕಗಳನ್ನು ದಾನವಾಗಿ ನೀಡಿದ್ದರು[268].

ಕಾಂಗ್ರೆಸ್ ಸಭೆ ಮತ್ತು ಪ್ರಚಾರದಲ್ಲಿ ಜನಸಾಮಾನ್ಯರು

26ನೇ ನವೆಂಬರ್ 1937ರಂದು ಸದಾಶಿವರಾವ್‌ರವರ ಅಧ್ಯಕ್ಷತೆಯಲ್ಲಿ ನಾಗಮಂಗಲ ತಾಲೂಕು ನಗರಕೆರೆಯಲ್ಲಿ ಗಿಡದ ಜಾತ್ರೆಯ ಸಂದರ್ಭದಲ್ಲಿ ಕಾಂಗ್ರೆಸ್ ಸಭೆಯು ನಡೆಯಿತು. ಸಭೆಯಲ್ಲಿ ಟಿ.ಮರಿಯಪ್ಪ, ಶಂಕರಪ್ಪ, ಎಂ.ಎನ್.ಜೋಯಿಸ್ ಇವರ ಹಾಗೂ ಇತರೆ ಕಾಂಗ್ರೆಸ್ ಮುಖಂಡರು ಸಭೆಯಲ್ಲಿ ಈ ರೀತಿಯಾಗಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಸರಕಾರ ರೈತರ ಹಣವನ್ನು ಅನಾವಶ್ಯಕವಾದ ವಸ್ತುಗಳಿಗೆ ಖರ್ಚು ಮಾಡಿ ರೈತರ ಸಮಸ್ಯೆಗಳನ್ನು ನಿವಾರಿಸಲಾಗಿಲ್ಲ. ಕಾಂಗ್ರೆಸ್ ಪಕ್ಷವು ರೈತರ ಹಿತಕ್ಕಾಗಿ ಜವಾಬ್ದಾರಿ ಸರಕಾರ ಸ್ಥಾಪಿಸಲು ಹೋರಾಟ ಮಾಡುತ್ತದೆ. ಆದರೆ ಸರಕಾರವು ಅದಕ್ಕೆ ತಡೆಯೊಡ್ಡಿ ಅವರನ್ನು ಶಿಕ್ಷೆಗೆ ಗುರಿಮಾಡುತ್ತದೆ. ಕಾಂಗ್ರೆಸ್‌ನ್ನು ಸೇರುವಂತೆ ಕೇಳಿಕೊಂಡರು[269]. ಧರಣೇಂದ್ರಯ್ಯನವರು 28–01–1938ರಿಂದ ನಾಗಮಂಗಲದಲ್ಲಿ, 30–01–1938 ರಂದು ಬೋಗಾದಿ ಸಂತೆಯಲ್ಲಿ ಹಾಗೂ 01–02–1938ರಂದು ಬೆಳ್ಳೂರಿನಲ್ಲಿ ಕಾಂಗ್ರೆಸ್ ಸಭೆ ಸೇರುವಂತೆ ಮತ್ತು ಗ್ರಾಮಗಳಲ್ಲಿ ಕಾಂಗ್ರೆಸ್ ಕೈಗೊಂಡಿರುವ ರಚನಾತ್ಮಕ ಕಾರ್ಯಗಳ ಬಗ್ಗೆ ಪ್ರಚಾರ ಮಾಡಿದರು. ಮೇಸ್ತ್ರಿ ನಂಜಪ್ಪನವರ ಮಗನಾದ ಬಸವೇಗೌಡರವರು ತಟ್ಟಕೇರಿ ಹಾಗೂ ಬೋಗಾದಿ ಸಂತೆಯಲ್ಲಿ ಜನಗಳನ್ನು ಕಾಂಗ್ರೆಸ್ ಸೇರುವಂತೆ ಪ್ರೇರೇಪಿಸಿದರು[270]. ದಿನಾಂಕ 7ನೇ ಫೆಬ್ರವರಿ 1938ರಂದು ಪಾಂಡವಪುರ (ಫ್ರೆಂಚ್‌ರಾಕ್ಸ್) ತಾಲೂಕಿನ ಚಿಕ್ಕಾಡೆ ಗ್ರಾಮದ ಜಾತ್ರೆಯ ಸಂದರ್ಭದಲ್ಲಿ ವೈ.ಸಿ.ಮರಿಯಪ್ಪ, ಶ್ರೀರಂಗಪಟ್ಟಣದ ಎ.ಜಿ. ಬಂದೀಗೌಡ, ನೀಲನಹಳ್ಳಿಯ

ಎನ್.ಭದ್ರಯ್ಯನವರ ಗ್ರಾಮಕ್ಕೆ ಭೇಟಿ ನೀಡಿದರು. ಜಾತ್ರೆಯಲ್ಲಿ 300 ರಿಂದ 400 ಜನ ಸೇರಿದ್ದರು. ಜನರನ್ನುದ್ದೇಶಿಸಿ ಮಾತನಾಡುತ್ತಾ ಖಾದಿ ಬಳಕೆ, ಜವಾಬ್ದಾರಿ ಸರಕಾರ ಸ್ಥಾಪಿಸಲು ಹೋರಾಟ, ಕಾಂಗ್ರೆಸ್ ಸೇರುವಂತೆ ಮನವಿ ಮಾಡಿದರು[271].

ದಿನಾಂಕ 8ನೇ ಫೆಬ್ರವರಿ 1938ರಂದು ಕೆ.ಆರ್.ಪೇಟೆ ತಾಲೂಕಿನ ಹೇಮಗಿರಿ ಜಾತ್ರೆಯ ಸಂದರ್ಭದಲ್ಲಿ ಹೇಮಗಿರಿಯಲ್ಲಿ ಸಾರ್ವಜನಿಕ ಸಭೆ ಸೇರಲಾಯಿತು. ಗಣಪತಿಶಾಸ್ತ್ರಿಯವರ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಕಾಂಗ್ರೆಸ್ ಉದ್ದೇಶಗಳನ್ನು ವಿವರಿಸುತ್ತಾ ಜವಾಬ್ದಾರಿ ಸರಕಾರ ಸ್ಥಾಪಿಸಲು ನಡೆಸುತ್ತಿರುವ ಹೋರಾಟವನ್ನು ವಿವರಿಸಿದರು. ಹಿಂದೂ–ಮುಸ್ಲಿಂ ಐಕ್ಯತೆ ಬಗ್ಗೆ ತಿಳಿಸಿದ್ದರು. ಕಾಂಗ್ರೆಸ್‌ನ ಅಭ್ಯರ್ಥಿಗಳ ಪರವಾಗಿ ಮತ ಚಲಾಯಿಸುವಂತೆ ಮನವಿ ಮಾಡಿದರು[272]. 10ನೇ ಫೆಬ್ರವರಿ 1938ರಂದು ಕೆ.ಆರ್.ಪೇಟೆ ತಾಲೂಕಿನ ಹೇಮಗಿರಿಯಲ್ಲಿ ಜಾತ್ರೆ ಸಂದರ್ಭದಲ್ಲಿ ಜಿ.ಹೆಚ್.ವೆಂಕಟಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಸಭೆಯಲ್ಲಿ ಮಾತನಾಡುತ್ತಾ ರೈತರ ಮತ್ತು ಹಳ್ಳಿಗಳ ಸುಧಾರಣೆಗಾಗಿ ಕಾಂಗ್ರೆಸ್ ಹೋರಾಟ ನಡೆಸುತ್ತಿದ್ದ ಹಣಕಾಸಿನ ಸಹಾಯದೊಂದಿಗೆ ಕಾಂಗ್ರೆಸ್ ಬೆಂಬಲಿಸಬೇಕೆಂದರು[273]. 14ನೇ ಫೆಬ್ರವರಿ 1938ರಂದು ನಾಗಮಂಗಲ ತಾಲೂಕಿನ ಕಾಂಗ್ರೆಸ್ ಸಮಿತಿಯ ಸಭೆಯು ಕೋಟೆ ಬೆಟ್ಟದ ಜಾತ್ರೆಯ ಸಂದರ್ಭದಲ್ಲಿ ನಡೆಯಿತು. ಎಂ.ಆರ್.ಎನ್.ಶಾಸ್ತ್ರಿ ಮತ್ತು ನಾರಾಯಣರಾವ್ ಸಭೆಯಲ್ಲಿ ಮಾತನಾಡಿದರು. ಖಾದಿ ಬಳಸುವಂತೆ ಮತ್ತು ಕಾಂಗ್ರೆಸ್ ಬೆಂಬಲಿಸುವಂತೆ ಕೇಳಿಕೊಂಡರು[274]. ದಿನಾಂಕ 15ನೇ ಫೆಬ್ರವರಿ 1938ರಂದು ನಾಗಮಂಗಲದ ಕೋಟೆ ಬೆಟ್ಟದಲ್ಲಿ ಸಭೆ ಸೇರಲಾಯಿತು. ಸಭೆಯನ್ನುದ್ದೇಶಿಸಿ ಮಾತನಾಡಿದ ವೆಂಕಟಪತಿ ದೇಸಾಯಿಯವರ ಜಾನವಾರ ರಕ್ಷಣೆ ಮತ್ತು ರೈತರಿಗೆ ಸಹಾಯಕವಾಗುವ ಸೌಕರ್ಯಗಳನ್ನು ಒದಗಿಸಬೇಕೆಂದರು. ರೈತರ ಹಣವನ್ನು ಕಟ್ಟಡ ನಿರ್ಮಾಣ ಮತ್ತು ಇತರೆ ಕೆಲಸಗಳಿಗೆ ಖರ್ಚುಮಾಡಿ ರೈತರಿಗೆ ನಷ್ಟವನ್ನುಂಟು ಮಾಡಲಾಗುತ್ತದೆ.

ದಿನಾಂಕ: 16ನೇ ಫೆಬ್ರವರಿ 1938 ಹಾಗೂ 17ನೇ ಫೆಬ್ರವರಿ 1938ರಂದು ನಾಗಮಂಗಲ ತಾಲೂಕಿನ ಸ್ಥಳೀಯ ಕಾಂಗ್ರೆಸ್ ಸದಸ್ಯರು ಕೋಟಿಬೆಟ್ಟದ ಜಾತ್ರೆಯ ಸಂದರ್ಭದಲ್ಲಿ ಸಭೆಯನ್ನು ಆಯೋಜಿಸಿದರು. 16–02–1938 ರ ಸಭೆಯಲ್ಲಿ ನಾರಾಯಣರಾವ್‌ರವರ ತಮ್ಮ ಭಾಷಣದಲ್ಲಿ ಜನಗಳು ಖಾದಿಯನ್ನು ಧರಿಸುವಂತೆ, ಪ್ರೋತ್ಸಾಹಿಸುವಂತೆ ಕೋರಿದರು. ಲಿಂಗೇಗೌಡರು, ಹೆಚ್.ಸಿ.ದಾಸಪ್ಪ, ಕೆ.ಟಿ.ಭಾಷ್ಯಂ, ಕೆ.ಸಿ.ರೆಡ್ಡಿರವರು ಅನುಕೂಲ ಸ್ಥಿತಿಯಲ್ಲಿರುವರು, ಉನ್ನತಶಿಕ್ಷಣ ಪಡೆಯುವರ ಜನ ಸಾಮಾನ್ಯರಾಗಿ, ಜವಾಬ್ದಾರಿ ಸರಕಾರ ಸ್ಥಾಪಿಸಲು ಹಾಗೂ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದ್ದಕ್ಕೆ ಸೆರಮನೆಯ ವಾಸವನ್ನು ಅನುಭವಿಸುತ್ತಿದ್ದಾರೆ. ಜನರಲ್ಲಿ ಏಕತೆಯಿಂದ ಕಾಂಗ್ರೆಸ್ ಬೆಂಬಲಿಸಬೇಕೆಂದರು[275].

ಶಿವಪುರ ರಾಷ್ಟ್ರಕೂಟದಲ್ಲಿ ಶ್ರೀ ಸಾಮಾನ್ಯರು

ಆ ದಿನಗಳಲ್ಲಿ ಸುಮಾರು 10 ಸಾವಿರ ರೂಪಾಯಿಗಳವರೆಗೂ ಖರ್ಚಾಗುವ ರಾಷ್ಟ್ರಕೂಟಕ್ಕೆ ಹಣ ಸಂಗ್ರಹಿಸುವ ಜವಾಬ್ದಾರಿಯನ್ನು ಹೆಚ್.ಕೆ.ವೀರಣ್ಣಗೌಡ, ಸಾಹುಕಾರ್ ಚನ್ನಯ್ಯನವರು ವಹಿಸಿಕೊಂಡರು. ಮದ್ದೂರು ತಾಲ್ಲೂಕಿನ ವಳಗೆರೆಹಳ್ಳಿ, ಗೆಜ್ಜಲಗೆರೆ, ಸಾದಳೊಲು, ಕುದುರಗುಂಡಿ, ಕೆಸ್ತೂರು, ದೇಶಹಳ್ಳಿ, ನಗರಕೆರೆ, ಚನ್ನಸಂದ್ರ, ಗೊರವನಹಳ್ಳಿ, ಗೌಡಗೆರೆ ಮೊದಲಾದ ಗ್ರಾಮಗಳಲ್ಲಿ ಭೇಟಿ ನೀಡಿ ರಾಷ್ಟ್ರಕೂಟದ ಉದ್ದೇಶವನ್ನು ವಿವರಿಸಿ ಚಂದಾ ವಸೂಲಿ ಮಾಡಿದರು. ಹೆಚ್.ಕೆ.ವೀರಣ್ಣಗೌಡರ ನೇತೃತ್ವದಲ್ಲಿ ಶ್ರೀಮತಿ ಬಳ್ಳಾರಿಸಿದ್ದಮ್ಮ, ಎಂ.ಎನ್.ಜೋಯಿಸ್, ಹೆಚ್.ಸಿ.ದಾಸಪ್ಪ, ಸುಬ್ಬಮ್ಮ ಜೋಯಿಸ್, ಟಿ.ಸುನಂದಮ್ಮ, ವೀರಕೇಸರಿಸೀತಾರಾಮಶಾಸ್ತ್ರೀ, ಯಶೋಧರಮ್ಮ ದಾಸಪ್ಪ, ಕೆ.ಟಿ.ಭಾಷ್ಯಂ, ಟಿ.ಸಿದ್ಧಲಿಂಗಯ್ಯ ಮೊದಲಾದ ಮುಖಂಡರ ಪ್ರಚಾರ ಕಾರ್ಯದಲ್ಲಿ ಪಾಲ್ಗೊಂಡರು. ವಳಗೆರೆಹಳ್ಳಿಯ ಜನರು ಅಪಾರವಾದ ಚಂದಾ ಹಣ ನೀಡಿದ್ದಲ್ಲದೇ, ಬಹಿರಂಗ ಅಧಿವೇಶನದ ರಂಗಮಂಟಪ ಮತ್ತು ವೇದಿಕೆಯನ್ನು ನಿರ್ಮಿಸಿದರು. ಶ್ರೀರಂಗಪಟ್ಟಣ ತಾಲ್ಲೂಕಿನ ಅರಕೆರೆ ಹೋಬಳಿಯ ಕೊಡಿಯಾಲದ ಸಾಹುಕಾರರು 100 ರೂಪಾಯಿ ಕೊಟ್ಟು ಯಶಸ್ಸು ಕೋರಿದರು[276].

ಹೆಚ್.ಸಿ.ದಾಸಪ್ಪ ಮತ್ತು ಹೆಚ್.ಕೆ.ವೀರಣ್ಣಗೌಡರು ಮದ್ದೂರು ತಾಲ್ಲೂಕು, ಗೌಡಗೆರೆ ಎಂಬ ಹಳ್ಳಿಗೆ ಭೇಟಿ ನೀಡಿದಾಗ ಸಾಯಂಕಾಲವಾಗಿದ್ದು, ಊರಿನ ಮುಖಂಡರು ತಿರುಪತಿ ಯಾತ್ರೆಗೆ ಹೋರಟಿದ್ದರು. ಯಾತ್ರೆಗಾಗಿ ಊರಿನ ಹೊರಗಿನ ದೇವಾಲಯದಲ್ಲಿ ತಂಗಿದ್ದರು. ಊರೊಳಗೆ ಹೋಗುವಂತಿರಲಿಲ್ಲ. ಸ್ವಾತಂತ್ರ್ಯ ಸಮರಕ್ಕೆ ಕಾಣಿಕೆ ಸಲ್ಲಿಸದಿರಲೂ ಸಾಧ್ಯ. ಈ ಸಂದರ್ಭದಲ್ಲಿ ರೈತರೊಬ್ಬರು "ದೇಶದ ಕೆಲಸ ದೇವರ ಕೆಲಸಕ್ಕಿಂತ ಕಡಿಮೆಯದ್ದೇನೂ ಅಲ್ಲ, ನಮ್ಮಲ್ಲಿ ದೇವರ ಹರಕೆಯ ಹಣವಿದೆ, ಅದನ್ನು ಕೊಡುತ್ತೇವೆ ತೆಗೆದುಕೊಂಡು ಹೋಗಿ" ಎಂದು ಹೇಳಿ ತಮ್ಮಲ್ಲಿದ್ದ ಕಾಣಿಕೆಯ ಹಣವನ್ನು ರಾಷ್ಟ್ರೀಯ ಹೋರಾಟಕ್ಕೆ ನೀಡಿದರು[277]. ದಿನಾಂಕ 19, ಮಾರ್ಚ್ 1938ರಂದು ಫ್ರೆಂಚ್‌ರಾಕ್ಸ್‌ನಲ್ಲಿ ಕಾಂಗ್ರೆಸ್ ಪಕ್ಷದ ಸಾರ್ವಜನಿಕ ಸಭೆ ನಡೆಯಿತು. ಸೂರ್ಯನಾರಾಯಣರಾವ್‌ರವರು ತಮ್ಮ ಭಾಷಣದಲ್ಲಿ ಜನಸಾಮಾನ್ಯರು ಸರ್ಕಾರದ ಸೇವಕರಿಗೆ ಅಂಜಬೇಕಾಗಿಲ್ಲ. ಸರ್ಕಾರದ ಸೇವಕರಿಗಿಂತ ಕಾಂಗ್ರೆಸ್ ಸದಸ್ಯರು. ನಾಯಕರು ಗೌರವವುಳ್ಳರಾಗಿದ್ದಾರೆ. ಹೆಚ್.ಸಿ.ದಾಸಪ್ಪನವರು ಸಭೆಯಲ್ಲಿ ಸರ್ಕಾರದ ಬಗ್ಗೆ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದರು. ಸರ್ಕಾರ ಜನಗಳಿಗೆ ಅಧಿಕ ತೆರಿಗೆಗಳನ್ನು ವಿಧಿಸುತ್ತದೆ. ಹಳ್ಳಿಗಳ ರಸ್ತೆಗಳು ದುಃಸ್ಥಿತಿಯಲ್ಲಿವೆ, ರೈತರ ಹಣದಿಂದ ದಿವಾನರು ಸರ್ಕಲ್‌ಗಳು, ಕಮಾನುಗಳು, ಉದ್ಯಾನವನಗಳು, ಅತಿಥಿಗೃಹಗಳನ್ನು ನಿರ್ಮಾಣ ಮಾಡುವುದನ್ನು ಖಂಡಿಸಿದರು. ರೈತರಿಗೆ ನೀರಿನ ಸೌಲಭ್ಯ, ಶಿಕ್ಷಣ, ಆಸ್ಪತ್ರೆಗಳನ್ನು

ಒದಗಿಸಬೇಕು ಹಾಗೂ ಅಧಿಕ ಕಂದಾಯವನ್ನು ಕಡಿತಗೊಳಿಸಬೇಕು. ಅಧಿಕ ವೇತನ ಪಡೆಯುತ್ತಿರುವ ಅಧಿಕಾರಿಗಳಿಂದ ಭಯಪಡಬೇಕಾಗಿಲ್ಲ. ರಚನಾತ್ಮಕ ಕಾರ್ಯಗಳನ್ನು ಮಾಡದೇ ಇರುವುದು ಜನಪ್ರತಿನಿಧಿಗಳಲ್ಲ ಎಂದು ಟೀಕಿಸಿದರು[278].

ದಿನಾಂಕ 18-04-1938 ರಂದು ನಾಗಮಂಗಲ ತಾಲ್ಲೂಕು ಮೈಸೂರು ಕಾಂಗ್ರೇಸ್ ಸಮಿತಿಯು ಸೌಮ್ಯಕೇಶವ ಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ಬಹಿರಂಗ ಸಭೆ ನಡೆಸಿತು. ಶಿವಪುರ ಕಾಗ್ರೇಸ್ ಅಧಿವೇಶನ ಕಾಲದಲ್ಲಿ ಕಾಂಗ್ರೆಸಿನ ಪ್ರಮುಖ ಮುಖಂಡರನ್ನು ದಸ್ತಗಿರಿ ಮಾಡಿದ್ದಕ್ಕೆ ಸರ್ಕಾರದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು. ನಾಗಮಂಗಲದಲ್ಲಿ ಸಂಪೂರ್ಣ ಹರತಾಳವನ್ನು ಆಚರಿಸುವ ಮೂಲಕ ದಸ್ತಗಿರಿಯಾದ ಮುಖಂಡರಿಗೆ ಸಹಾನುಭೂತಿಯನ್ನು ವ್ಯಕ್ತಪಡಿಸಿತು[279]. ಮದ್ದೂರು ತಾಲ್ಲೂಕಿನ ಹಳ್ಳಿಗಳಿಂದ ಪ್ರತಿದಿನ ಸಾಮಾನ್ಯ ಜನರು ಧ್ವಜಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ದಿನಾಂಕ 14 ನೇ ಏಪ್ರಿಲ್ 1938 ರಂದು ಬೆಳಗ್ಗೆ 6 ಗಂಟೆಗೆ ಶಿವಮೋಗ್ಗದ ಪಾರ್ಥನಾರಾಯಣ ಪಂಡಿತ್ ರವರು ಧ್ವಜಾರೋಹಣವನ್ನು ಯಶಸ್ವಿಯಾಗಿ ಮಾಡಿದರು. ಸುಮಾರು 50 ಸಾಮಾನ್ಯ ಜನರು ಹಾಜರಿದ್ದರು[280]. ಧ್ವಜ ಸತ್ಯಾಗ್ರಹದ 2 ನೇ ದಿವಸ ಅಂದರೆ ದಿನಾಂಕ 15 ನೇ ಏಪ್ರಿಲ್ 1938 ರಂದು ಪ್ರಮುಖ ಮುಖಂಡರಾದ ತಗಡೂರು ರಾಮಚಂದ್ರರಾವ್. ಚಿತ್ರದುರ್ಗದ ಬೀಮಪ್ಪ ನಾಯ್ಕ ಮತ್ತು ಎಚ್.ಕೆ.ವೀರಣ್ಣಗೌಡ, ಶಿವಮೊಗ್ಗದ ವಾಸಪ್ಪ ಜೋಗಿ ಹಾಗು 15 ಜನ ಸ್ವಯಂ ಸೇವಕರೊಂದಿಗೆ 2 ಸೂಚಕ ಫಲಕ ಹಾಗೂ ಕಾಂಗ್ರೆಸ್ ಬಾವುಟದೊಂದಿಗೆ ಪ್ರಭಾತಪೇರಿ ಆರಂಭಿಸಿದರು. ಬೆಂಗಳೂರು ಮೈಸೂರು ರಸ್ತೆಯಲ್ಲಿ ಪ್ರಭಾತಫೇರಿ ನಡೆಸಿ ಸತ್ಯಾಗ್ರಹಶ್ರಮದಿಂದ ಹಿಂದಿರುಗಿದರು. ಭೀಮಪ್ಪ ನಾಯ್ಕ ಮತ್ತು ವಾಸಪ್ಪ ಜೋಗಿರವರು ಮಾತನಾಡುತ್ತ ಏಪ್ರಿಲ್ ದಿನಾಂಕ 11, 12 ಮತ್ತು 13 ರಂದು ಧ್ವಜಾರೋಹಣ ಸಂದರ್ಭದಲ್ಲಿ ಮೈಸೂರು ಕಾಂಗ್ರೆಸ್ ಮುಖಂಡರನ್ನು ಬಂಧಿಸಿದ್ದು ತಾವು ಈಗ ಧ್ವಜಾರೋಹಣ ಮಾಡುವುದಾಗಿ ಘೋಷಿಸಿದರು. 8 ಗಂಟೆ 30 ನಿಮಿಷಕ್ಕೆ ಭೀಮಪ್ಪ ನಾಯ್ಕ ಮತ್ತು ವಾಸಪ್ಪ ಜೋಗಿ ಧ್ವಜಾರೋಹಣವನ್ನು ಯಸ್ವಿಯಾಗಿ ನಡೆಸಿದರು.ಸಂಜೆ 6 ಗಂಟೆಗೆ ಭೀಮಪ್ಪ ನಾಯ್ಕ ಧ್ವಜಾರೋಹಣ ಮಾಡಿದರು. ಸುಮಾರು 80 ಜನ ಹಾಜರಿದ್ದರು[281].

ದಿನಾಂಕ 16.04.1938ರಂದು ತಗಡೂರು ರಾಮಚಂದ್ರರಾವ್, ಡಿ.ಆರ್. ರಾಮಚಂದ್ರಪ್ಪ, ಬಿ.ಆರ್.ಪುಟ್ಟನಂಜಪ್ಪ ಹಾಗು 14 ಜನ ಸ್ವಯಂ ಸೇವಕರೊಂದಿಗೆ ಸತ್ಯಾಗ್ರಹಾಶ್ರದಿಂದ ರೈಲು ಸ್ಟೇಷನ್ ವರೆಗೆ ಪ್ರಭಾತ್‌ಪೇರಿ ಮಾಡಲಾಯಿತು. ಡಿ.ಆರ್. ಮಾನಪ್ಪ ಹಾಗು ಬಿ.ಆರ್. ಪುಟ್ಟನಂಜಪ್ಪ ನವರು 8 ಗಂಟೆ ಯಶಸ್ವಿಯಾಗಿ ಧ್ವಜಾರೋಹಣ ನಡೆಸಿದರು. 60 ಜನರು ಹಾಜರಿದ್ದರು. ಸಾಮಾನ್ಯ ಜನರಿಗೆಂದು 3 ನೇ

ದಿನದ ಸತ್ಯಾಗ್ರಹ ಯಶಸ್ವಿಯಾಗಿ ನಡೆಯಿತು[282]. ದಿನಾಂಕ 17-04-1938 ರಂದು ಬೆಳಗ್ಗೆ 6 ಗಂಟೆಗೆ ಚಿತ್ರದುರ್ಗದ ಆನೆಕೊಂಡ ಗ್ರಾಮದ ಚನ್ನಬಸಪ್ಪ, ತಗಡೂರು ರಾಮಚಂದ್ರರಾವ್, ಹೆಚ್.ಕೆ.ವೀರಣ್ಣಗೌಡ, ರಾಮಚಂದ್ರ ಜೋಯಿಸ್, ಸುಬ್ಬರಾವ್ಉಪದ್ಯಾಯ, ಹಾಗು 12 ಜನ ಸ್ವಯಂ ಸೇವಕರೊಂದಿಗೆ ಶಿವಪುರ ಮತ್ತು ಮದ್ದೂರುಗಳಲ್ಲಿ ಧ್ವಜ ಪ್ರದರ್ಶನ ಮತ್ತು ಮೆರವಣಿಗೆ ಮಾಡಲಾಯಿತು. ಆಜ್ಞೆಯನ್ನು ಉಲ್ಲಂಘಿಸಿ ಚನ್ನ ಬಸಪ್ಪನವರು ದ್ವಜಾರೋಹಣ ಮಾಡಿದರು[283]. ದಿನಾಂಕ 18-04-1938 ರಂದು ಬೆಳಗ್ಗೆ 6 ಗಂಟೆಗೆ ತಗಡೂರು ರಾಮಚಂದ್ರ ರಾವ್. ಕೋಲಾರದ ಟಿ. ರಾಮಚಾರ್ಯ. ಸೂರ್ಯ ನಾರಾಯಣ ಪಂಡಿತ್ ಹಾಗೂ 14 ಜನ ಸ್ವಯಂ ಸೇವಕರೊಂದಿಗೆ ಮೆರವಣಿಗೆ ಮತ್ತು ಧ್ವಜ ಪ್ರದರ್ಶನ ಮಾಡಲಾಯಿತು. ಶಿವಪುರ ಸತ್ಯಾಗ್ರಹಾಶ್ರಮದಿಂದ ಮೇಗಳದೊಡ್ಡಿಯವರೆಗೆ ಮೆರವಣಿಗೆ ಮಾಡಿ ಮರಳಿ ಸತ್ಯಗ್ರಹಾಶ್ರಮಕ್ಕೆ ಬರಲಾಯಿತು. ಸರಿಯಾಗಿ ಬೆಳಗ್ಗೆ 8 ಗಂಟೆಗೆ ಕೊಲಾರದ ಟಿ. ರಾಮಚಾರ್ಯರವರು ದ್ವಜಾರೋಹಣ ಮಾಡಿದರು. ಸಂಜೆ 6 ಗಂಟೆ 30 ನಿಮಿಷಕ್ಕೆ ಸರಿಯಾಗಿ ರಾಮಯ್ಯನವರು ಧ್ವಜಾಅವರೋಹಣ ಮಾಡಿದರು[284]. 19-04-1938ರಂದು ಚಿಕ್ಕಬಳ್ಳಾಪುರದ ವಕೀಲರಾದ ಕೆ.ಸಂಪಗಿರಿರಾಯ. ತಗಡೂರು ರಾಮಚಂದ್ರರಾವ್. ಸುರ್ಯನಾರಾಯಣ ಪಂಡಿತ್, ಚನ್ನ ಬಸಪ್ಪ, ಬಾಗಮನೆ ದೇವೇಗೌಡ. ಹಾಗೂ 8 ಜನ ಸ್ವಯಂ ಸೇವಕರು ಮೇಗಳದೊಡ್ಡಿಯವರೆಗೆ ಮೆರವಣಿಗೆ ಮಾಡಿ ಸತ್ಯಾಗ್ರಹಾಶ್ರಮಕ್ಕೆ ಮರಳಿದರು. ಬೆಳಗ್ಗೆ 8 ಗಂಟೆಗೆ ಕೆ. ಸಂಪಂಗಿರಾಯರು ದ್ವಜಾರೋಹಣ ಮಾಡಿದರು ಹಾಗು ಸಂಜೆ 6 ಗಂಟೆಗೆ ಧ್ವಜ ಅವರೋಹಣ ಮಾಡಿದರು[285].

ಈ ರೀತಿಯಾಗಿ ಶಿವಪುರ ಕಾಂಗ್ರೇಸ್ ಅಧಿವೇಶನದ ಮೂರುದಿನಗಳ ನಂತರ ಒಂದು ತಿಂಗಳವರೆಗೂ ಧ್ವಜಾರೋಹಣವು ಯಶಸ್ವಿಯಾಗಿ ನಡೆಯಲು ಮದ್ದೂರು ಹಾಗೂ ಸುತ್ತಮುತ್ತಲಿನ ಗ್ರಾಮದ ಸಾಮಾನ್ಯ ಜನರು ಕಾರಣರಾದರು.

ವಿದುರಾಶ್ವತ್ಥ ನಿಧಿಗೆ ಸಾಮಾನ್ಯ ಜನರು ಸಹಾಯಧನ : ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕು, ಶಿವಪುರದಲ್ಲಿ ನಡೆದ ತಿರುಮಲೇಗೌಡರ ತಂಗಿಯ ವಿವಾಹ ಸಂದರ್ಭದಲ್ಲಿ ಸಾಮಾನ್ಯ ಜನರು, ರಾಷ್ಟ್ರಭಕ್ತರು, ಅಗ್ರ ತಾಂಬೂಲವನ್ನು ಮೈಸೂರು ಕಾಂಗ್ರೆಸ್ಸಿಗೆ ಅರ್ಪಿಸಿದರು. ಈ ಸಂದರ್ಭದಲ್ಲಿ ಹೆಚ್.ಸಿ.ದಾಸಪ್ಪನವರೂ ಹಾಗೂ ಎಂ.ಎನ್.ಜೋಯಿಸರೂ ರಾಷ್ಟ್ರಭಕ್ತರನ್ನು, ಭಾಗವಹಿಸಿದ ಜನರನ್ನು ಉದ್ದೇಶಿಸಿ ಭಾಷಣ ಮಾಡಿದರು. ಅಲ್ಲದೇ "ವಿದುರಾಶ್ವತ್ಥ ನಿಧಿ"ಗೆ ಸಹಾಯಧನ ನೀಡುವಂತೆ ಮನವಿ ಮಾಡಿದರು. ಆಗ ಸ್ರಂಗಹವಾದ 54 ರೂಪಾಯಿಗಳನ್ನು ಸಹಾಯನಿಧಿಗೆ ನೀಡಿದರು.

ಇದು ಮಂಡ್ಯ ಜಿಲ್ಲೆಯ ಜನರು ಉದಾರವಾಗಿ ಈ ನಿಧಿಗೆ ಅರ್ಪಿಸಿದ ಕಾಣಿಕೆಯಾಗಿದೆ[286].

ಕಸ್ತೂರಿ ಬಾ ನಿಧಿಗೆ ಸಾಮಾನ್ಯರು ಸಹಾಯಧನ : ಶಿವಪುರ ಕಾಂಗ್ರೆಸ್ ಅಧಿವೇಶನದ ನಂತರ 1944ರಲ್ಲಿ ಕಸ್ತೂರ ಬಾ ಗಾಂಧಿಯವರು ಸೆರೆಮನೆಯಲ್ಲಿ ನಿಧನರಾದ ನಂತರ ಅವರ ನೆನಪಿಗಾಗಿ ಒಂದು ಸ್ಮಾರಕವನ್ನು ನಿರ್ಮಿಸಬೇಕೆಂದು ತೀರ್ಮಾನಿಸಿ ಅವರ ಸ್ಮಾರಕಾರ್ಥ ನಿಧಿಯನ್ನು ಸಂಗ್ರಹಿಸಲು ರಾಷ್ಟ್ರೀಯ ಮಟ್ಟದ ಸಮಿತಿಯನ್ನು ರಚಿಸಲಾಯಿತು. ದೇಶಾದ್ಯಾಂತ ಕಸ್ತೂರಿ ಬಾ ಗಾಂಧಿಯವರ ಸ್ಮಾರಕ ನಿಧಿಗೆ ಜನಗಳು ಧನಸಹಾಯ ಮಾಡಿದರು. ಅದರಂತೆ ಮಂಡ್ಯ ಜಿಲ್ಲೆಯ ಪ್ರಮುಖ ಸಭೆ ಸಮಾರಂಭಗಳಿಗೆ ಜನ ಸಾಮಾನ್ಯರು ಭಾಗವಹಿಸಿ ಕಸ್ತೂರಿ ಬಾ ಗಾಂಧಿಯವರ ಸ್ಮಾರಕ ನಿಧಿಗೆ ಹಣವನ್ನು ಅರ್ಪಿಸಿದರು[287]. 4.10.1944ರಂದು ಎಸ್.ಚನ್ನಯ್ಯ, ಹೆಚ್.ಕೆ.ವೀರಣ್ಣಗೌಡ ಮತ್ತು ಕೆ.ಎಂ.ಕೃಷ್ಣಪ್ಪಗೌಡರು ಮಂಡ್ಯ ನಗರದ ಪ್ರಮುಖ ಬೀದಿಗಳಲ್ಲಿ ಭೇಟಿ ನೀಡಿ ಕಸ್ತೂರಿ ಬಾ ನಿಧಿಗೆ ಹಣ ಸಂಗ್ರಹಿಸಿದರು. ಸಾಮಾನ್ಯ ಜನರು ಕಸ್ತೂರಿ ಬಾ ನಿಧಿಗೆ ಹಣ ಅರ್ಪಿಸಿದರು. ಮಂಡ್ಯ ನಗರದಿಂದ 784 ರೂಪಾಯಿಗಳು, ಕರಡಹಳ್ಳಿ ಕೃಷ್ಣಪ್ಪಗೌಡರು ಸಂಗ್ರಹಿಸಿದ್ದ 41 ರೂಪಾಯಿಗಳನ್ನು ಹಾಗೂ ನಾಗಮಂಗಲ ತಾಲ್ಲೂಕಿನಿಂದ ಸಂಗ್ರಹವಾದ 1500 ರೂಪಾಯಿಗಳನ್ನು ಕಸ್ತೂರಿ ಬಾ ಸ್ಮಾರಕನಿಧಿಗೆ ಅರ್ಪಿಸಿದರು[288].

ಸ್ವಾತಂತ್ರ್ಯ ಚಳುವಳಿಯಲ್ಲಿ ಮಂಡ್ಯ ಜಿಲ್ಲೆಯ ರೈತರು, ಮಹಿಳೆಯರು, ಕಾರ್ಮಿಕರು ಹಾಗೂ ವಿದ್ಯಾರ್ಥಿಗಳು ಯುವಜನರುಗಳ ಪಾತ್ರ

1934ರಲ್ಲಿ ಮಹಾತ್ಮ ಗಾಂಧೀಜಿಯವರ ಮೈಸೂರು ಸಂಸ್ಥಾನಕ್ಕೆ ಭೇಟಿ ನೀಡಿದ ನಂತರ ಅವರಿಂದ ಪ್ರಭಾವಿತರಾಗಿ ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸಲು ಈ ಭಾಗದ ಜನರಿಗೆ ಪ್ರೇರಣೆಯಾಯತು. 1938ರಲ್ಲಿ ಮೈಸೂರು ಕಾಂಗ್ರೆಸ್ ಸ್ಥಾಪನೆಯಾದ ನಂತರ ಸಂಸ್ಥಾನದ್ಯಾಂತ ಕಾಂಗ್ರೆಸ್ ಬಹಿರಂಗ ಸಭೆಗಳು, ಪ್ರಚಾರ, ಪ್ರಭಾತ್‌ಪೇರಿ, ಮೆರವಣಿಗೆಗಳು ನಡೆದವು. ಈ ಸಭೆಗಳಲ್ಲಿ ಪ್ರಮುಖ ರಾಜಕೀಯ ಮುಖಂಡರೊಂದಿಗೆ ಸ್ಥಳೀಯ ರೈತರು, ಕಾರ್ಮಿಕರು, ಮಹಿಳೆಯರು, ವಿದ್ಯಾರ್ಥಿಗಳು, ಯುವಜನರು ಹೆಚ್ಚಿನ ಸಂಖ್ಯೆಗಳಲ್ಲಿ ಭಾಗವಹಿಸಿದ್ದರು. ತರವಾಯ 1938ರಲ್ಲಿ ನಡೆದ ಶಿವಪುರ ಸತ್ಯಾಗ್ರಹ, 1939 ಹ್ಯಾಮಿಲ್ಟನ್ ಸತ್ಯಾಗ್ರಹ, 1942ರ ಕ್ವಿಟ್ ಇಂಡಿಯಾ ಚಳುವಳಿ, ಸ್ವಾತಂತ್ರ್ಯದ ನಂತರ ಜವಾಬ್ದಾರಿ ಸರಕಾರಕ್ಕಾಗಿ 1947ರಲ್ಲಿ ಮೈಸೂರು ಚಲೋ ಚಳುವಳಿಗಳು ನಡೆದವು. ಈ ಚಳುವಳಿಗಳು ಯಶಸ್ವಿಯಾಗಿ ನಡೆಯುವಲ್ಲಿ ಮಂಡ್ಯ ಜಿಲ್ಲೆಯ ರೈತರು,

ಮಹಿಳೆಯರು, ಕಾರ್ಮಿಕ ವರ್ಗದವರು, ವಿದ್ಯಾರ್ಥಿ, ಯುವಜನರ ಪಾತ್ರ ಕೂಡ ಹಿರಿದದು.

ವಿದ್ಯಾರ್ಥಿಗಳು ಮತ್ತು ಯುವ ಜನರ ಪಾತ್ರ

ಮಹಾತ್ಮ ಗಾಂಧೀಜಿಯವರು ಪ್ರಕಟಿಸುತ್ತಿದ್ದ ಯಂಗ್ ಇಂಡಿಯಾ ಮತ್ತು ಹರಿಜನ ಪತ್ರಿಕೆಗಳಿಂದ ಪ್ರಚೋದನೆ ಪಡೆದ ಹಲವು ಯುವಕ-ಯುವತಿಯರು, ವಿದ್ಯಾರ್ಥಿಗಳು, ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಿದರು. ಶಾಲಾ-ಕಾಲೇಜು, ಉದ್ಯೋಗ, ಮನೆಮಠ ತೊರೆದರು, ತಂದೆ-ತಾಯಿ ಬಂಧು-ಬಾಂಧವರಿಂದ ದೂರಾದರು. ಅವರ ಗುರಿ, ಧ್ಯೇಯ, ಧೋರಣೆ, ಒಂದೇ ಆಗಿತ್ತು. ದೇಶವನ್ನು ಸ್ವಾತಂತ್ರ್ಯಗೊಳಿಸುವುದು[289]. ಅದೇ ರೀತಿಯಾಗಿ ಸ್ವಾತಂತ್ರ್ಯ ಚಳುವಳಿಯಲ್ಲಿ ಮಂಡ್ಯ ಜಿಲ್ಲೆಯ ಯುವಜನರು ವಿದ್ಯಾರ್ಥಿಗಳು ಕೂಡಾ ವಿಶಿಷ್ಟವಾದ ಕೊಡುಗೆಗಳನ್ನು ನೀಡಿದ್ದಾರೆ. ಮೈಸೂರು ಸಂಸ್ಥಾನದಲ್ಲಿ ಯುವಜನ ಸಮ್ಮೇಳನ 29-05-1937 ರಲ್ಲಿ ಬೆಂಗಳೂರಿನಲ್ಲಿ ನಡೆದಿತ್ತು. ಆ ಸಮ್ಮೇಳನದಲ್ಲಿ ರಂಗನಾಥ ದಿವಾಕರ ಭಾಷಣವನ್ನು ಮಾಡಿದ್ದರು. ಆ ಸಮ್ಮೇಳನಕ್ಕೆ ಮಂಡ್ಯ ಜಿಲ್ಲೆಯಿಂದ ಕೆ.ವಿ.ಶ್ರೀನಿವಾಸನ್ ಹಾಗೂ ಮದ್ದೂರಿನಿಂದ ಎಂ.ಎಲ್.ವಿಶ್ವನಾಥ ಇಬ್ಬರು ಸದಸ್ಯರು ತಮ್ಮ ಸಂಘಟನೆಯೊಂದಿಗೆ ಭಾಗವಹಿಸಿದ್ದರು[290]. ಶಿವಪುರದಲ್ಲಿ ನಡೆಯುವ ಮೈಸೂರು ರಾಷ್ಟ್ರಕೂಟದ ಸಂದರ್ಭದಲ್ಲಿ ಮೈಸೂರು ಸಂಸ್ಥಾನದ ಯುವಜನ ಮಹಾಸಮ್ಮೇಳನವನ್ನು ನಡೆಸಿ ದೇಶದ ಎಲ್ಲಾ ಯುವಕರನ್ನು ಸ್ವಾಗತಿಸಲು ಹಾಗೂ ಯುವಜನ ಸಮ್ಮೇಳನವನ್ನು ಕೂಡ ನಡೆಸಲು ತೀರ್ಮಾನಿಸಲಾಯಿತು[291].

ಶಿವಪುರದಲ್ಲಿ ನಡೆಯುವ ಯುವಜನ ಸಮ್ಮೇಳನದಲ್ಲಿ ವಿದ್ಯಾರ್ಥಿಗಳನ್ನು ಭಾಗವಹಿಸುವಂತೆ ಪ್ರೋತ್ಸಾಹಿಸಲಾಯಿತು. ಈ ಕಾರ್ಯವನ್ನು ಎಸ್.ಕೆ.ವೆಂಕಟರಂಗ, ವಿ.ಎಸ್.ನಾರಾಯಣರಾವ್, ತಿಮ್ಮರೆಡ್ಡಿ ಹಾಗೂ ಇತರ ಮುಖಂಡರುಗಳು ವಿದ್ಯಾರ್ಥಿಗಳನ್ನು ಕರೆತರುವಲ್ಲಿ ಯಶಸ್ವಿಯಾದರು[292]. ಇನ್ನೂ ಒಂದೆರಡು ಸಂದರ್ಭಗಳಲ್ಲಿ ಯುವಜನ ಸಮ್ಮೇಳನ ನಡೆದುದನ್ನು ಹೊರತುಪಡಿಸಿದರೆ ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಶಿವಪುರದಲ್ಲಿ ನಡೆದ ಯುವಜನ ಸಮ್ಮೇಳನ ಪ್ರಮುಖವಾಯಿತು. ಈ ಅಧಿವೇಶನವು ದೊಡ್ಡ ಪ್ರಮಾಣ ಹಾಗೂ ಮಹತ್ವ ಪೂರ್ಣವಾದದು 11ನೇ ಮಾರ್ಚ್ 1938ರಂದು ಮೈಸೂರಿನ ಗೋಪಾಲಕೃಷ್ಣ ಶೆಟ್ಟಿಯವರ ಮನೆಯಲ್ಲಿ ಮೈಸೂರು ಕಾಂಗ್ರೆಸ್ ಮೊದಲ ಅಧಿವೇಶನ ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಶಿವಪುರದಲ್ಲಿ ನಡೆಸಲು ತೀರ್ಮಾನಿಸಲಾಯಿತು. ಇದೇ ಸಂದರ್ಭ ಮೈಸೂರು ಕಾಂಗ್ರೆಸ್ಸಿನ ಕಾರ್ಯಕಾರಿ ಮಂಡಳಿಯು ಮೈಸೂರು ಸಂಸ್ಥಾನದ ಯುವಜನ ಸಮ್ಮೇಳನವನ್ನು ನಡೆಸಿ ದೇಶದ ಎಲ್ಲಾ ಬಗೆಯ ಶಿಸ್ತಿನ ಯುವಜನ

ಸಂಘಗಳ ಸಮಾಜದ ಪ್ರತಿನಿಧಿಗಳಾದ ಯುವಕರೂ ಸೇರಿ ನಿರುದ್ಯೋಗ, ರಾಜಕೀಯ ಸಮಸ್ಯೆಗಳನ್ನು ಬಗೆಹರಿಸಲು ಹಾಗೂ ಯುವಕರು ಕೈಗೊಳ್ಳಬೇಕಾದ ಕಾರ್ಯಗಳನ್ನು ಕೂಲಂಕುಷವಾಗಿ ಚರ್ಚಿಸಲು ತೀರ್ಮಾನಿಸಿತು. ದೇಶದ ಎಲ್ಲಾ ಯುವಕರನ್ನು ಸ್ವಾಗತಿಸಲು ಹಾಗೂ ಯುವಜನ ಸಮ್ಮೇಳನವನ್ನು ಕೂಡ ನಡೆಸಲು ತೀರ್ಮಾನಿಸಲಾಗಿತ್ತು[293]. ಅದರಂತೆ ಅಧ್ಯಕ್ಷರ ಮೆರವಣಿಗೆ ಮುಗಿದ ದಿನಾಂಕ 10 ನೇ ಏಪ್ರಿಲ್ 1938ರ ಭಾನುವಾರ ರಾತ್ರಿ 10 ಗಂಟೆಗೆ ಮೈಸೂರು ಸಂಸ್ಥಾನದ ಯುವಜನ ಸಮ್ಮೇಳನ ನಡೆಯಿತು. ತಗಡೂರು ರಾಮಚಂದ್ರರಾವ್‌ರವರ ಅಧ್ಯಕ್ಷತೆಯಲ್ಲಿ ಶಿವಪುರದ ವಿಶಾಲವಾದ ಬಹಿರಂಗ ಅಧಿವೇಶನದ ಸಭಾಂಗಣದಲ್ಲಿ 3,000 ಯುವಕರು ಹಾಜರಿದ್ದರು. ನಂಜನಗೂಡಿನ ಕೆ.ವಿಶ್ವೇಶ್ವರಗೌಡರು ಯುವಜನ ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದರು. ಹೆಚ್.ಸಿ.ದಾಸಪ್ಪನವರು ಯುವಜನ ಸಮ್ಮೇಳನವನ್ನು ಉದ್ಘಾಟಿಸಿದರು. ಟಿ.ಸುನಂದಮ್ಮನವರು ಸ್ವಾತಂತ್ರ್ಯ ಹೋರಾಟಕ್ಕೆ ಪ್ರೇರಣೆಯಾಗಿದ್ದ ಬಂಕಿಮ ಚಂದ್ರ ಚಟರ್ಜಿಯವರು ಬರೆದ "ವಂದೇ ಮಾತರಂ" ಗೀತೆಯನ್ನು ಪ್ರಾರ್ಥನೆಯಾಗಿ ಹಾಡುವ ಮೂಲಕ ಶಿವಪುರ ರಾಷ್ಟ್ರಕೂಟದ ಯುವಜನ ಸಮ್ಮೇಳನ ಪ್ರಾರಂಭವಾಯಿತು[294]. ಕೆ.ಟಿ.ಭಾಷ್ಯಂರವರು ಭಾಷಣ ಮಾಡುವವರಿದ್ದರು ಆದರೆ ತುರ್ತು ಕಾರ್ಯದ ನಿಮಿತ್ತ ಬೆಂಗಳೂರಿಗೆ ತೆರಳಬೇಕಾಗಿ ಬಂದ ಕಾರಣ ಆಗಲಿಲ್ಲ. ಅವರ ಸ್ಥಾನದಲ್ಲಿ ಹೆಚ್.ಸಿ.ದಾಸಪ್ಪನವರು ಮಾತನಾಡಿದರು. ತಮ್ಮ ಭಾಷಣದಲ್ಲಿ ದಾಸಪ್ಪನವರು ಮಾತನಾಡುತ್ತಾ ಯುವಕರು ಪಾಶ್ಚಿಮಾತ್ಯ ಯುವಕರೊಂದಿಗೆ ಕರ್ತವ್ಯದ ಬಗ್ಗೆ ಹೋಲಿಕೆ ಮಾಡುತ್ತಾ ಸ್ವಾತಂತ್ರ್ಯ ಭಾರತದ ಸಲುವಾಗಿ ಸಮಯವನ್ನು ವ್ಯರ್ಥ ಮಾಡಬಾರದು ಎಂದು ತಿಳಿಸಿದರು. ನಂತರ ಯುವ ಸಮಾವೇಶದ ಕಾರ್ಯದರ್ಶಿಗಳಾಗಿರುವ ವಿಶ್ವೇಶ್ವರಗೌಡರು ಮಾತನಾಡುತ್ತಾ ಉತ್ತಮ ನಾಯಕನ ಕೆಳಗೆ ತಾವುಗಳು ಸಂಘಟಿತರಾಗಬೇಕೆಂದು ತಿಳಿಸಿದರು. ಗ್ರಾಮೀಣ ಪ್ರದೇಶದ ಕಡೆಗೆ ತಮ್ಮ ಗಮನ ಹರಿಸಬೇಕೆಂದು, ಅವರ ಜೀವನ ಸ್ಥಿತಿ ಉತ್ತರಿಸಬೇಕೆಂದು ತಿಳಿಸಿದರು. ಹಾಗೂ ಮಹಿಳೆಯರ ಶಿಕ್ಷಣದ ಬಗ್ಗೆ ಸಲಹೆ ನೀಡಿದರು.

ಅಧ್ಯಕ್ಷರು ಮಾತನಾಡುತ್ತಾ ಯುವಕರು ಕೈ ಕಟ್ಟಿ ಬಹಳ ದಿನಗಳವರೆಗೆ ಕುಳಿತುಕೊಳ್ಳದೇ ಜಗತ್ತಿನಲ್ಲಿ ಆಗುತ್ತಿರುವ ಬದಲಾವಣೆಗಳಿಗೆ ತಕ್ಕಂತೆ ವರ್ತಿಸಬೇಕೆಂದು ವಿವರಿಸಿದರು. ಆದರೆ ಜನ ಸಮೂಹದ ಜನಜೀವನ ಉತ್ತಮ ಪಡಿಸುವಲ್ಲಿ ಕ್ರಿಯಾಶೀಲರಾಗಬೇಕೆಂದು ತಿಳಿಸಿದರು. ರಾಜ್ಯದಲ್ಲಿ ಜವಾಬ್ದಾರಿಯುತ ಸರ್ಕಾರ ಸ್ಥಾಪಿಸುವ ಸಲುವಾಗಿ ಯುವಕರು ಸತ್ಯಾಗ್ರಹ ಚಳುವಳಿ ಸೇರಿಸಬೇಕೆಂದು ಆಗ್ರಹಿಸಿದರು. ಅಲ್ಲದೇ ತಮ್ಮ ಜೀವನ, ಆಸ್ತಿ, ತ್ಯಾಗಕ್ಕೂ ಸಿದ್ಧರಾಗಬೇಕೆಂದು ತಿಳಿಸಿದರು. ಅವರ ದೀರ್ಘ ಭಾಷಣದಲ್ಲಿ ಕಂಡು ಬಂದ ಮುಖ್ಯಾಂಶಗಳು ಹೀಗಿವೆ: "ಶಿವಪುರ ಕಾಂಗ್ರೆಸ್

ಅಧಿವೇಶನದ ಉದ್ದೇಶ, ಯುವಕರು ಎರಡನೇ ಮಹಾಯುದ್ಧಕ್ಕೆ ಸೇರಬಾರದು. ಪ್ರತಿಯೊಬ್ಬ ಯುವಕನೂ ಸತ್ಯಾಗ್ರಹ ಶಾಂತಿ ಶಿಬಿರಕ್ಕೆ ಸೇರಬೇಕು. ಯುವಕರು ಗ್ರಾಮಸೇವೆಗೆ ಸಿದ್ಧರಾಗಬೇಕು. ಬಡವರ ಸುಧಾರಿಸಲು ಯುವಕರು ಶ್ರಮಿಸಬೇಕು[295].

ಯುವಜನ ಸಮ್ಮೇಳನದಲ್ಲಿ ತೆಗೆದುಕೊಂಡ ನಿರ್ಣಯಗಳು.

1) ಮೈಸೂರು ಸರ್ಕಾರ ವಾರ್ಧಾ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರಬೇಕು.

2) ಮೈಸೂರು ಸರ್ಕಾರ ಜಾರಿಗೆ ತಂದಿರುವ ರಾಜಕೀಯ ಸುಧಾರಣಾ ಸಮಿತಿ ಮತ್ತು ಫೆಡರೇಷನ್ ಸಮಿತಿಗಳನ್ನು ತಿರಸ್ಕರಿಸಬೇಕು.

3) ಆಲ್ ಇಂಡಿಯಾ ಫೆಡರೇಷನನ್ನು ಅನ್ನು ಬಹಿಷ್ಕರಿಸಬೇಕು.

4) ವಿಶ್ವವಿದ್ಯಾನಿಲಯದ ಪದವೀಧರರಿಗೆ ಗ್ರಾಮಾಭಿವೃದ್ಧಿಯ ಬಗೆಗೆ ಕಡ್ಡಾಯವಾಗಿ ತರಬೇತಿ ನೀಡಬೇಕು[296].

ಮೈಸೂರು ವಿದ್ಯಾರ್ಥಿ ಸಮ್ಮೇಳನ

ದಿನಾಂಕ 12ನೇ ಏಪ್ರಿಲ್ 1938ರ ಬೆಳಿಗ್ಗೆ 9 ಗಂಟೆ 30 ನಿಮಿಷಕ್ಕೆ ಯುವಜನ ಸಮ್ಮೇಳನ' ಚಪ್ಪರದಲ್ಲಿ ಮೈಸೂರು ವಿದ್ಯಾರ್ಥಿ ಸಮ್ಮೇಳನ ನಡೆಯಿತು. ಬೆಂಗಳೂರಿನ ವಕೀಲರಾದ ವಿ.ಕೆ.ಗೊವಿಂದರಾಜುಲು ಅವರು ಅಧ್ಯಕ್ಷತೆ ವಹಿಸಿದ್ದರು. ಮೈಸೂರು ಸಂಸ್ಥಾನದ ವಿವಿಧ ವಿದ್ಯಾರ್ಥಿ ಪರಿಷತ್ತಿನ ಪ್ರತಿನಿಧಿಗಳು ಸಮ್ಮೇಳನದಲ್ಲಿ ಹಾಜರಿದ್ದರು. ಮೈಸೂರು ಸಂಸ್ಥಾನದ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಏನೆಲ್ಲಾ ಸಮಸ್ಯೆಗಳ ಬಗೆಗೆ ಸೂಕ್ತವಾದ ಪರಿಹಾರವನ್ನು ಕಂಡುಕೊಳ್ಳುವುದು ವಿದ್ಯಾರ್ಥಿ ಸಮ್ಮೇಳನದ ಮುಖ್ಯ ಉದೇಶವಾಗಿತ್ತು. 1938 ನೇ ಜುಲೈ ಕೊನೆಯ ವಾರದಲ್ಲಿ "ಅಖಿಲ ಮೈಸೂರು ವಿದ್ಯಾರ್ಥಿ ಸಮ್ಮೇಳನದ" ಪ್ರಥಮ ಅಧಿವೇಶನವನ್ನು ನಡೆಸಬೇಕೆಂದೂ ನಿರ್ಣಯ ಮಾಡಲಾಯಿತು. ವಿದ್ಯಾರ್ಥಿ ಸಮ್ಮೇಳನಕ್ಕೆ ಸಂಬಂಧಿಸಿದಂತೆ ಸ್ವಾಗತ ಸಮಿತಿಯನ್ನು ರಚಿಸಲಾಯಿತು. ಅದರ ಪದಾಧಿಕಾರಿಗಳ ವಿವರ. ಎಲ್.ವಿ. ರಾಜಗೋಪಾಲ್ (ಅಧ್ಯಕ್ಷರು), ಕೆ.ಎಂ.ಜೆ.ಸಾದಿಖ್, ಸುಬ್ರಹ್ಮಣರಾಜ ಅರಸ್ (ಕಾರ್ಯದರ್ಶಿ), ಟಿ.ಮಾದಪ್ಪಗೌಡ.(ಖಜಾಂಚಿ). ನಂತರ ಕಾರ್ಯದರ್ಶಿಗಳು ಮಾತನಾಡುತ್ತಾ ಮೈಸೂರು ವಿದ್ಯಾರ್ಥಿ ಸಮ್ಮೇಳನವನ್ನು ಅಖಿಲ ಭಾರತ ಸಮ್ಮೇಳನಕ್ಕೆ ಏಕೀಕರಿಸಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದರು. ಜುಲೈ ತಿಂಗಳಲ್ಲಿ ನಡೆಯುವ ಸಮ್ಮೇಳನ ಯಶಸ್ವಿಗೆ ಸಹಕರಿಸುವಂತೆ ಕೋರುತ್ತಾ ಮೈಸೂರಿನ ವಿದ್ಯಾರ್ಥಿ ಚಳುವಳಿಯ ಇತಿಹಾಸದಲ್ಲಿ ಪ್ರಥಮ ಸಮ್ಮೇಳನವಾಗುತ್ತದೆ ಎಂದರು[297].

ಶಿವಪುರ ಕಾಂಗ್ರೆಸ್ ಅಧಿವೇಶನದ ನಂತರ ಮಂಡ್ಯ ಜಿಲ್ಲೆಯ ವಿದ್ಯಾರ್ಥಿ ಸಮೂಹದ ಮೇಲೆ ಸ್ವಾತಂತ್ರ್ಯ ಚಳುವಳಿಯ ಬಗ್ಗೆ ಅಪಾರವಾದ ಪ್ರಭಾವ ಬೀರಿತು. ತರುವಾಯ 3 ಸೆಪ್ಟಂಬರ್ 1944ರಂದು ನಾಗಮಂಗಲದ ಶ್ರೀರಾಮಕೃಷ್ಣ ಆಶ್ರಮದಲ್ಲಿ ವಿದ್ಯಾಗಣಪತಿ ಪೂಜೆಯನ್ನು ನೇರವೇರಿಸಲಾಯಿತು. ಹಿರೇಳ್ಳಿ ದಾಸಪ್ಪನವರು ಭಾಷಣ ಮಾಡುತ್ತಾ ವಿದ್ಯಾರ್ಥಿಗಳಿಗೆ ದೇಶಸೇವೆಯನ್ನು, ವಿದ್ಯಾರ್ಥಿಗಳಿಗೆ ರಾಜ್ಯದ ಭವಿಷ್ಯ ತಮಗೆ ಸೇರಿದ್ದು, ಮಹಾತ್ಮಗಾಂಧೀಜಿಯವರು ಭಾವಿ ಪ್ರಜೆಗಳಾದ ನಿಮಗೆ ಸ್ವತಂತ್ರ್ಯವಾದ ಭಾರತವನ್ನು ಬಿಟ್ಟು ಹೋಗಬೇಕೆಂಬುದೇ ಅವರ ಆಶಯ. ಭಾರತದಲ್ಲಿ ನಿಮ್ಮ ಕರ್ತವ್ಯವನ್ನು ನೀವು ಅರಿತುಕೊಳ್ಳಬೇಕು. ವಿದ್ಯಾವಂತರಾಗಿ ಆ ಮೂಲಕ ದೇಶದಲ್ಲಿರುವ ಜನರ ಅಜ್ಞಾನವನ್ನು ಹೋಗಲಾಡಿಸಿ ಅಂತರ್‌ಜ್ಯೋತಿಯನ್ನು ಬೆಳೆಗಿಸಬೇಕು ಎಂದರು. ಅಂತಿಮವಾಗಿ ವಿದ್ಯಾರ್ಥಿಗಳು ಕಸ್ತೂರಿ ಬಾ ನಿಧಿಗೆ ಅರ್ಪಿಸಿದ ಹತ್ತು ರೂಪಾಯಿಗಳ ಕಾಣಿಕೆಯನ್ನು ಸ್ವೀಕರಿಸಿದರು[298].

ಮಂಡ್ಯ ಜಿಲ್ಲೆಯಲ್ಲಿ ವಿದ್ಯಾರ್ಥಿಗಳು ರಾಷ್ಟ್ರಮಟ್ಟದ ನಾಯಕರ ಜನ್ಮದಿನಾಚರಣೆಗಳನ್ನು ಆಚರಿಸುವ ಮೂಲಕ ರಾಷ್ಟ್ರೀಯ ಪ್ರಜ್ಞೆಯನ್ನು ಹೊಂದಿದ್ದರು. ಪ್ರಮುಖ ಜನ್ಮದಿನಾಚರಣೆಗಳನ್ನು ಆಚರಿಸಿದ ವಿವರ ಈ ರೀತಿ ಇದೆ. ದಿನಾಂಕ 05.10.1944ರಂದು ಮಂಡ್ಯದ ಪ್ರೌಢಶಾಲೆಯ ವಿದ್ಯಾರ್ಥಿಗಳು ಗಾಂಧಿ ಜಯಂತ್ಯೋತ್ಸವವನ್ನು ಬಹುವಿಜೃಂಭಣೆಯಿಂದ ಆಚರಿಸಿದರು. ಬೆಟ್ಟಶೆಟ್ಟಿ, ಮಾಧವರಾವ್, ಕೃಷ್ಣಪ್ಪ ಮತ್ತು ನರಸಿಂಹಮೂರ್ತಿಯವರು ಭಾಷಣ ಮಾಡಿ ಗಾಂಧೀಜಿಯವರು ಹೇಳಿರುವ ರಚನಾತ್ಮಕ ಕಾರ್ಯಗಳಲ್ಲಿ ದೇಶದ ನಿರಕ್ಷರತೆಯನ್ನು ಹೋಗಲಾಡಿಸಲು ವಿದ್ಯಾರ್ಥಿಗಳು ಪ್ರಯತ್ನಿಸಬೇಕೆಂದರು. ಈ ಮೂಲಕ ಗಾಂಧೀಜಿಯವರ ಮನಸ್ಸನ್ನು ಸಂತೋಷಪಡಿಸಬೇಕೆಂದು ಕೋರಿದರು[299]. ದಿನಾಂಕ 09.10.1944 ರಂದು ಮದ್ದೂರು ತಾಲ್ಲೂಕಿನ ಬೆಸಗರಹಳ್ಳಿಯಲ್ಲಿ ಗಾಂಧಿ ಜಯಂತ್ಸೋವವನ್ನು ವಿದ್ಯಾರ್ಥಿಗಳು ವೈಭವದಿಂದ ಆಚರಿಸಿದರು. ಮಹಾತ್ಮಜೀಯವರ ಭಾವಚಿತ್ರದೊಂದಿಗೆ, ಶೃಂಗರಿಸಿದ ಎತ್ತಿನ ಗಾಡಿಯಲ್ಲಿ ಊರಿನ ಮುಖ್ಯ ಬೀದಿಗಳಲ್ಲಿ ಮೆರವಣಿಗೆಯು ಜರುಗಿತು. ಶಿವಲಿಂಗಯ್ಯನವರ ಭಾಷಣ ಮಾಡಿ ಮಹಾತ್ಮಜಿಯವರು ಚಿರಾಯುವಾಗಲೆಂದು ತಿಳಿಸಿದರು[300]. ದಿನಾಂಕ 11.01.1946ರಂದು ಮಂಡ್ಯ ಜಿಲ್ಲಾ ವಿದ್ಯಾರ್ಥಿ ಕಾಂಗ್ರೆಸ್ ಸಭೆಯು ಪ್ರಖ್ಯಾತ ವಕೀಲರು ಹಾಗೂ ಸ್ವಾತಂತ್ರ್ಯ ಹೋರಾಟಗಾರರಾದ ಮಹಾಬಲರಾವ್‌ರವರ ಅಧ್ಯಕ್ಷತೆಯಲ್ಲಿ ಮಂಡ್ಯದಲ್ಲಿ ನಡೆಯಿತು ಸುಮಾರು 200 ವಿದ್ಯಾರ್ಥಿಗಳು ಸಭೆಗೆ ಹಾಜರಿದ್ದರು. ಕಾಂಗ್ರೆಸ್‌ನ ಪ್ರಮುಖ ವಿದ್ಯಾರ್ಥಿ ನಾಯಕ ಹಾಗೂ ಬೆಂಗಳೂರು ವಿದ್ಯಾರ್ಥಿ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿಯಾದ ಕನ್ನಾರವರು ಸಭೆಯನ್ನುದ್ದೇಶಿಸಿ ಭಾಷಣ ಮಾಡುತ್ತಾ ಭಾರತದ ವಿದ್ಯಾರ್ಥಿ

ಚಳುವಳಿಯ ಇತಿಹಾಸ, ಬೆಳವಣಿಗೆ ಹಾಗೂ ಲಾಲಲಜಪತರಾಯ್ ರವರ ಸಂದೇಶಗಳ ಬಗ್ಗೆ ತಿಳಿಸಿದರು. ವಿದ್ಯಾರ್ಥಿಗಳನ್ನು ಎಚ್ಚರಿಸುತ್ತಾ ಕಾಂಗ್ರೆಸ್ ಸಂಸ್ಥೆಯನ್ನು ಬಲಪಡಿಸಲು ಮತ್ತು ಸದಸ್ಯತ್ವ ಸಂಖ್ಯೆಯನ್ನು ಹೆಚ್ಚಿಸಲು ಪ್ರೇರಿಪಿಸಿದರು[301]. ವಿದ್ಯಾರ್ಥಿಗಳು ಟಿಕೇಟ್ ಇಲ್ಲದೆ ಪ್ರಯಾಣಿಸುವ ಮೂಲಕ ಪೊಲೀಸ್ ಕಾಯ್ದೆಯನ್ನು ಉಲ್ಲಂಘಿಸುತ್ತಿದ್ದರು. 4 ನವೆಂಬರ್ 1946ರಂದು ಶ್ರೀರಂಗಪಟ್ಟಣದಲ್ಲಿ 78 ವಿದ್ಯಾರ್ಥಿ ಕಾಂಗ್ರೆಸ್ ಸ್ವಯಂಸೇವಕರನ್ನು ಟಿಕೇಟ್ ಇಲ್ಲದೆ ಪ್ರಯಾಣ ಮಾಡಿದುದಕ್ಕಾಗಿ ಬಂಧಿಸಲಾಯಿತು. ರೈಲ್ವೆ ಶಾಸನದ 84ನೇ ಕಲಮಿನ ಪ್ರಕಾರ ಮೊದಲನೇ ಮ್ಯಾಜಿಸ್ಟ್ರೇಟರ್ ಮುಂದೆ ವಿಚಾರಣೆಗೆ ಗುರಿಯಾಗಿದ್ದ 78 ವಿದ್ಯಾರ್ಥಿಗಳಿಗೆ ತಲಾ ರೂ. 4–4–3 ಜುಲ್ಮಾನೆ, ತಪ್ಪಿದರೆ ಒಂದು ವಾರ ಸಾದಾ ಸಜೆಯನ್ನು ವಿಧಿಸಲಾಯಿತು. ಅವರ ಪೈಕಿ 4 ಜನರು ಜುಲ್ಮಾನೆಯನ್ನು ಕೊಟ್ಟು ಬಿಡುಗಡೆಯಾದರು. ಇತರ ಕಾರಾಗೃಹಕ್ಕೆ ತೆರಳಿದರು. ಇವೆಲ್ಲರನ್ನು ಶ್ರೀರಂಗಪಟ್ಟಣದ ಸಬ್ ಜೈಲಿನಲ್ಲಿ ಇಡಲಾಯಿತು[302]. 8 ನವೆಂಬರ್ 1946ರಂದು ಬಂಧಿತರಾಗಿದ್ದು, 74 ಮಂದಿ ವಿದ್ಯಾರ್ಥಿ ಕಾಂಗ್ರೆಸ್ ಸ್ವಯಂಸೇವಕರನ್ನು 4 ಘಂಟೆಗೆ ಬಿಡುಗಡೆ ಮಾಡಲಾಯಿತು. ಸದರಿ ವಿದ್ಯಾರ್ಥಿಗಳು ಒಂದು ಹೇಳಿಕೆ ಹೊರಡಿಸಿ ತಮ್ಮ ವರ್ತನೆಯ ಬೆಂಗಳೂರಿನಲ್ಲಿ ನಡೆದ ವಿದ್ಯಾರ್ಥಿ ಕಾಂಗ್ರೆಸ್ ಅಧೀವೇಶನದ ನಿರ್ಧಾರಕ್ಕೆ ಅನುಗುಣವಾಗಿದ್ದಿತೆಂದೂ, ಅದಕ್ಕೆ ತಾವೇ ಸ್ವತಃ ಜವಾಬ್ದಾರರೇ ವಿನಹ ಯಾವ ಸಂಸ್ಥೆ ಅಥವಾ ವ್ಯಕ್ತಿಗಳೂ ಅಲ್ಲವೆಂದೂ ತಿಳಿಸಿದರು[303].

5ನೇ ಆಗಸ್ಟ್ 1946ರಂದು ಅಖಿಲ ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ಸಿನ ಅಂಗಸಂಸ್ಥೆಗಳ ಕಾರ್ಯಕರ್ತರ ಸಮಾವೇಶವು ಬೆಂಗಳೂರು ನಗರದ ಕಾಂಗ್ರೆಸ್ ಭವನದಲ್ಲಿ ಜರುಗಿತು. ಸಂಸ್ಥಾನದ ಎಲ್ಲಾ ಜಿಲ್ಲೆಗಳಿಂದ 60 ಜನರು ಭಾಗವಹಿಸಿದ್ದರು. ಈ ಸಮಾವೇಶದಲ್ಲಿ ಮಂಡ್ಯ ಜಿಲ್ಲೆಯ ವಿದ್ಯಾರ್ಥಿಗಳು ಸಹ ಭಾಗವಹಿಸಿದ್ದರು. ಲಕ್ನೋ ವಿದ್ಯಾರ್ಥಿ ಕಾಂಗ್ರೆಸ್ ಅಧ್ಯಕ್ಷರಾದ ಟಿ.ಎಲ್.ವಿ.ಶೆಟ್ಟಿಯವರು ಅಧ್ಯಕ್ಷತೆ ವಹಿಸಿದ್ದರು. ಅಖಿಲ ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ ಮುಂದೆ ಅನುಸರಿಬೇಕಾಗಿರುವ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಲಾಯಿತು. ಸಮಾವೇಶದಲ್ಲಿ ಈ ಕೆಳಗೆಕಂಡ ನಿರ್ಣಯಗಳನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

1) ಪೂರ್ಣ ಜವಾಬ್ದಾರಿ ಸರಕಾರಕ್ಕಾಗಿ ಕಾಂಗ್ರೆಸ್ಸಿನಲ್ಲಿ ಈಗ ಕಂಡು ಬರುತ್ತಿರುವ ಜಡತ್ವ ಹೋಗಿ ಕೂಡಲೇ ಕ್ರಾಂತಿಪಥ ಹಿಡಿಯಬೇಕಂದೂ, ಇದಕ್ಕೆ ಸಂಸ್ಥಾನದ ಎಲ್ಲಾ ವಿದ್ಯಾರ್ಥಿಗಳ ಬೆಂಬಲವಿರುವುದೆಂದೂ ತಿಳಿಸಿತು.

2) ಕರ್ನಾಟಕ ಏಕೀಕರಣದ ಬಗ್ಗೆಯೂ, ವಿದ್ಯಾರ್ಥಿಗಳ ಕುಂದುಕೊರತೆಗಳು ವಿಚಾರವಾಗಿಯೂ ವಿಶ್ವಕರ್ಣಾಟಕದ ವಿರುದ್ಧವಾಗಿಯೂ ಸರ್ಕಾರವು ಮಾಡಿರುವ ಆಜ್ಞೆಯನ್ನು ಮಂಡಿಸುವ ನಿರ್ಣಾಯಗಳನ್ನು ಮಾಡಲಾಯಿತು[304].

ಮಂಡ್ಯ ಜಿಲ್ಲೆಯ ಸ್ವಾತಂತ್ರ್ಯ ಚಳುವಳಿಯಲ್ಲಿ ಮಹಿಳೆಯರ ಪಾತ್ರ

ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರ ಪಾತ್ರವು ಗುರುತರವಾಗಿರುವುದರ ಜೊತೆಗೆ ಮಹತ್ವ ಪೂರ್ಣವು, ಶ್ಲಾಘನೀಯವೂ ಆಗಿದೆ. ಮಹಾತ್ಮಗಾಂಧಿಜೀಯವರು "ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯ ದೊಡ್ಡಶಕ್ತಿ ಎಂದು ಭಾವಿಸಿದ್ದರು" ಅದರಂತೆ ರಾಷ್ಟ್ರೀಯ ಮಟ್ಟದ ಹೋರಾಟದಲ್ಲಿನ ಮಹಿಳಾ ಹೋರಾಟಗಾರ್ತಿಯರಂತೆ ಅವರಿಂದ ಪ್ರಭಾವ ಹೊಂದಿದ ಮೈಸೂರು ರಾಜ್ಯದ ಮಹಿಳೆಯರು ಮತ್ತು ಸ್ವಾತಂತ್ರ್ಯ ಹೋರಾಟಗಾರ್ತಿಯರು ಸಹಸ್ರಾರು ಸಂಖ್ಯೆಯಲ್ಲಿ ಪಾಲ್ಗೊಂಡು ಅನೇಕ ತ್ಯಾಗಗಳಿಗೆ ಸಿದ್ಧರಾಗಿದ್ದರು. ಈ ಮಹಿಳೆಯರು ಅವಿದ್ಯಾವಂತರಾಗಿದ್ದರೂ, ತಾವು ಏತಕ್ಕಾಗಿ ಹೋರಾಟ ನಡೆಸುತ್ತಿದ್ದೇವೆ ಎಂಬುದರ ಬಗ್ಗೆ ಸರಿಯಾಗಿ ಚಿತ್ರಣವಿಲ್ಲದಿದ್ದರು ಗಾಂಧೀಜಿಯವರ ಕರೆಗೆ ಓಗೊಟ್ಟು ಹಲವಾರು ನೋವು ಹಿಂಸೆಗಳನ್ನು ಅನುಭವಿಸಿದರೂ ತಾಳ್ಮೆ ಸಹನೆಯಿಂದ ಸ್ವಾತಂತ್ರ್ಯ ಹೋರಾಟದಲ್ಲಿ ಮೈಸೂರು ರಾಜ್ಯದ ಮಹಿಳೆಯರು ಪಾಲ್ಗೊಂಡರು[305]. ಅದೇ ರೀತಿಯಲ್ಲಿ ಮೈಸೂರು ಸಂಸ್ಥಾನದ ಜಿಲ್ಲೆಗಳಲ್ಲಿ ಒಂದಾದ ಮಂಡ್ಯ ಜಿಲ್ಲೆಯ ಮಹಿಳೆಯರ ಕೂಡ ಭಾಗವಹಿಸಿದ್ದರು. ಶಿವಪುರ ಕಾಂಗ್ರೆಸ್ ಅಧಿವೇಶನ ನಡೆಯುವ ಪೂರ್ವದಲ್ಲಿ ಜಿಲ್ಲೆಯಾದ್ಯಾಂತ ಕಾಂಗ್ರೆಸ್ ಮತ್ತು ಅಧಿವೇಶನದ ಪ್ರಚಾರ ಮಾಡಲಾಯಿತು. ಈ ಪ್ರಚಾರ ಕಾರ್ಯಕ್ರಮದಲ್ಲಿ ಪ್ರಮುಖ ಮಹಿಳಾ ಸ್ವಾತಂತ್ರ್ಯ ಹೋರಾಟಗಾರ್ತಿಯರಾದ ಟಿ.ಸುನಂದಮ್ಮ ಅನೇಕ ಸಭೆಗಳಲ್ಲಿ ಭಾಗವಹಿಸಿ ಜನರನ್ನು ಜವಾಬ್ದಾರಿ ಸರ್ಕಾರದ ಬಗ್ಗೆ ಪ್ರೇರೇಪಿಸಿದರು.

ದಿನಾಂಕ 14ನೇ ಫೆಬ್ರವರಿ 1938ರಂದು ಸುನಂದಮ್ಮನವರ ಅಧ್ಯಕ್ಷತೆಯಲ್ಲಿ ಮದ್ದೂರಿನಲ್ಲಿ ಕಾಂಗ್ರೆಸ್ ಸಭೆ ನಡೆಯಿತು. ಸುಮಾರು 800 ಜನ ಸೇರಿದ್ದರು. ಎಚ್.ಕೆ.ವೀರಣ್ಣಗೌಡ ಸಭೆಯಲ್ಲಿ ಮಾತನಾಡುತ್ತ ಪ್ರಸ್ತುತ ಸರಕಾರದ ರಾಜಕೀಯ ನೀತಿಯು ಕಾಂಗ್ರೆಸ್‌ಗೆ ಅರ್ಥವಾಗುತ್ತಿಲ್ಲ. ಮೊದಲ ಬಂಧನದಲ್ಲಿರುವ ರಾಜಕೀಯ ನಾಯಕರನ್ನು ಬಿಡುಗಡೆ ಮಾಡಬೇಕೆಂದರು. ಪತ್ರಿಕಾ ಸ್ವಾತಂತ್ರ್ಯಕ್ಕೆ ಇರುವ ಪ್ರತಿಬಂಧಕಾಜ್ಞೆಗಳನ್ನು ತೆರವುಗೊಳಿಸಬೇಕೆಂದರು. ಮಳವಳ್ಳಿ ವೀರಯ್ಯನವರ ತಮ್ಮ ಜೈಲಿನಲ್ಲಿ ಕಳೆದ ಅನುಭವಗಳನ್ನು ವಿವರಿಸಿ ಯಾವುದೇ ತೊಂದರೆಗಳಿಗೆ ಹೆದರದೇ ಜವಾಬ್ದಾರಿ ಸರಕಾರ ಸ್ಥಾಪಿಸಲು ಹೋರಾಟ ಮಾಡಬೇಕೆಂದು ಮನವಿ ಮಾಡಿದರು[306].

17ನೇ ಫೆಬ್ರವರಿ 1938ರಂದು ಮಂಡ್ಯದ ಸ್ಥಳೀಯ ಕಾಂಗ್ರೆಸ್ ಸಮಿತಿಯು ಮಂಡ್ಯದಲ್ಲಿ ಸಭೆಯಲ್ಲಿ ಆಯೋಜಿಸಿತು. ಮೈಸೂರಿನ ಸೂರ್ಯನಾರಾಯಣ ಪಂಡಿತ್ ಅಧ್ಯಕ್ಷತೆಯನ್ನು ವಹಿಸಿದ್ದರು. ಸುಬ್ಬಮ್ಮನವರು ಮಾತನಾಡುತ್ತಾ ಖಾದಿಯನ್ನು ಪ್ರೋತ್ಸಾಹಿಸಬೇಕೆಂದರು. ಬಾಲಸುಂದರಮ್ಮನವರು ಮದ್ಯಪಾನ ಸೇವನೆಯಿಂದ ಅನೇಕ ದುಷ್ಪರಿಣಾಮಗಳು ಉಂಟಾಗುತ್ತವೆ. ಮದ್ಯಪಾನವನ್ನು ತ್ಯಜಿಸಲು ಸಲಹೆ ನೀಡಿದರು. ರೈತರಿಂದ ಸರಕಾರವು ಅಧಿಕ ಕಂದಾಯವನ್ನು ಸಂಗ್ರಹಿಸುತ್ತಿರುವುದನ್ನು ಟೀಕಿಸಿದರು. ಶ್ರೀನಿವಾಸರಾವ್‌ರವರು ಜನರು ಖಾದಿ ಧರಿಸುವಂತೆ ಮನವಿ ಮಾಡಿದರು. ತಾವು ಖಾದಿ ಅಂಗಡಿಯನ್ನು ಆರಂಭಿಸಿದ್ದು ಹಳ್ಳಿಯ ಮನೆ ಮನೆಗೂ ಮಾರಾಟ ಮಾಡಲಾಗುವುದು. ಕಾಳೇನಹಳ್ಳಿಯ ಕುರುಡ ವ್ಯಕ್ತಿಯಾದ ಸಿದ್ದಯ್ಯನವರು ಶ್ರೀನಿವಾಸರಾವ್ ಅಭಿಪ್ರಾಯವನ್ನು ಬೆಂಬಲಿಸಿದರು. ಹೆಚ್.ಹೊನ್ನಯ್ಯನವರ ಮೈಸೂರಿನಲ್ಲಿ ಜವಾಬ್ದಾರಿ ಸರಕಾರ ಸ್ಥಾಪಿಸಲಾಗುವುದು. ಜನಗಳ ಕಾಂಗ್ರೆಸ್ ಸೇರಬೇಕೆಂದು ಕರೆ ನೀಡಿದರು. ಕೆ.ಕೆಂಪೇಗೌಡರವರ ಸಹಕಾರ ಬಗ್ಗೆ ವಿವರಿಸಿದರು[307].

19ನೇ ಫೆಬ್ರವರಿ 1938 ರಂದು ಮದ್ದೂರು ತಾಲೂಕಿನ ಗೆಜ್ಜಲಗೆರೆ ಗ್ರಾಮದ ಸಿದ್ದಪ್ಪನವರ ತೆಂಗಿನ ತೋಟದಲ್ಲಿ ಮದ್ದೂರು ತಾಲೂಕು ಕಾಂಗ್ರೆಸ್ ಸಮಿತಿಯು ಸಾರ್ವಜನಿಕ ಸಭೆ ನಡೆಯಿತು. ಸುಮಾರು 300 ಜನರು ಸೇರಿದ್ದರು. ಸುನಂದಮ್ಮನವರ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಹರಿಜನ ಉದ್ಧಾರ ಮುಖ್ಯವಾಗಿದೆ. ಅವರಿಗೆ ಎಲ್ಲ ಸೌಕರ್ಯಗಳನ್ನು ಒದಗಿಸಬೇಕು. ದೇವರ ಕಣ್ಣಿನಲ್ಲಿ ಎಲ್ಲರೂ ಸಮಾನರು. ಖಾದಿ ಪ್ರೋತ್ಸಾಹಿಸಬೇಕು ಹಾಗೂ ವಿದೇಶಿ ವಸ್ತುಗಳನ್ನು ಬಹಿಷ್ಕಾರ ಬೇಕೆಂದರು. ಮಹಾತ್ಮ ಗಾಂಧೀಜಿಯವರ ಅಭಿಪ್ರಾಯದಲ್ಲಿ 20 ಕೋಟಿ ಖಾದಿ ನಷ್ಟವಾಗಿದ್ದನ್ನು ತಮ್ಮ ಭಾಷಣದಲ್ಲಿ ಉಲ್ಲೇಖಿಸಿದರು. ಸರಕಾರದ ಅನುದಾನ ಹಣವನ್ನು ಸಮರ್ಪಕವಾಗಿ ಬಳಕೆ ಮಾಡಲಾಗುತ್ತಿಲ್ಲ. ನುಡಿಹಬ್ಬದ ಸಂದರ್ಭದಲ್ಲಿ ಸಂಗ್ರಹಿಸಿದ ಹಣದ ಖರ್ಚು-ವೆಚ್ಚವನ್ನು ಗ್ರಾಮದ ಪ್ರತಿಯೊಬ್ಬರಿಗೂ ಹಾಗೂ ರೈತರಿಗೆ ಕೇಳುವ ಹಕ್ಕಿದೆ. ಕಾಂಗ್ರೆಸ್ ಅಭ್ಯರ್ಥಿಗಳ ಪರವಾಗಿ ಮತ ಚಲಾಯಿಸಿ ಜವಾಬ್ದಾರಿ ಸರಕಾರ ಸ್ಥಾಪಿಸಲು ಹೋರಾಡಬೇಕೆಂದರು. ದಿನಾಂಕ 20ನೇ ಫೆಬ್ರವರಿ 1938ರಂದು ಮದ್ದೂರು ತಾಲೂಕು ಕಾಂಗ್ರೆಸ್ ಸಮಿತಿಯ ಸಾರ್ವಜನಿಕ ಸಭೆಯು ಬಿದರಕೋಟೆಯಲ್ಲಿ ನಡೆಯಿತು. ಹೆಚ್.ಕೆ. ವೀರಣ್ಣಗೌಡ ಮತ್ತು ಟಿ.ಸುನಂದಮ್ಮನವರು ಕಾಂಗ್ರೆಸನ್ನು ಬೆಂಬಲಿಸುವಂತೆ ಕೇಳಿಕೊಂಡರು. ಅದೇ ದಿನ ಇನ್ನೊಂದು ಸಾರ್ವಜನಿಕ ಸಭೆಯು ಗೆಜ್ಜಲಗೆರೆ ಗ್ರಾಮದಲ್ಲಿ ನಡೆಯಿತು. ಟಿ.ಸುನಂದಮ್ಮನವರ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಭಾರತವು ಶ್ರೀಮಂತ ದೇಶವಾಗಿದ್ದು, ಬ್ರಿಟೀಷರು ಭಾರತಕ್ಕೆ ವ್ಯಾಪಾರ ಮಾಡುವ ಉದ್ದೇಶದಿಂದ ಬಂದು ಕ್ರಮೇಣ ದೇಶೀಯ ಅರಸರನ್ನು ಸೋಲಿಸಿ ತಮ್ಮ ಸೇವಕರನ್ನಾಗಿ

ಮಾಡಿಕೊಂಡರು. ಆದರೆ ಪ್ರಸ್ತುತ ಕಾಂಗ್ರೆಸ್ ನಾಯಕರಾದ ಮಹಾತ್ಮ ಗಾಂಧೀಜಿ. ಜವಹರಲಾಲ್ ನೆಹರೂ ಹಾಗೂ ಇತರೆ ನಾಯಕರ ಬಗ್ಗೆ, ಹೋರಾಟದ ಬಗ್ಗೆ ವಿವರಿಸಿದರು. ಪ್ರಸ್ತುತ ಇರುವ ಪ್ರಜಾಪ್ರತಿನಿಧಿ ಸಭೆ ಹಾಗೂ ಶಾಸಕಾಂಗ ಸಭೆಯನ್ನು ಯಾವುದೇ ಜನಪರ ಯೋಜನೆಗಳನ್ನು ಕೈಗೊಳ್ಳುತ್ತಿಲ್ಲವೆಂದು ಟೀಕಿಸಿದರು. ಕಾಂಗ್ರೆಸ್ ಪಕ್ಷದ ಸದಸ್ಯತ್ವ ಪಡೆದ ಪ್ರಚಾರ ಕಾರ್ಯದಲ್ಲಿ ಭಾಗವಹಿಸುವಂತೆ ತಿಳಿಸಿದರು. ಮಹಿಳೆಯರು ಕಾಂಗ್ರೆಸ್ ಪಕ್ಷ ಸೇರುವಂತೆ, ಬೆಂಬಲಿಸುವಂತೆ ಮನವಿ ಮಾಡಿದರು. ಇದೇ ದಿನ ಸಂಜೆ ಕೊಪ್ಪ, ಹೊಸಕೆರೆ ಮತ್ತು ಬೆಸಗರಹಳ್ಳಿಯಲ್ಲಿ ಮದ್ದೂರು ತಾಲೂಕಿನ ಕಾಂಗ್ರೆಸ್ ಸಮಿತಿಯ ಸಭೆ ನಡೆಯಿತು ಕ್ರಮವಾಗಿ ಸುಮಾರು 500 ಜನರು, 300 ಜನರು ಹಾಗೂ 500 ಜನರು ಪ್ರತಿನಿಧಿಸಿದ್ದರು. ಜವಾಬ್ದಾರಿ ಸರಕಾರ ಸ್ಥಾಪನೆಗಾಗಿ ಹೋರಾಟ ನಡೆಸಲು ಕಾಂಗ್ರೆಸ್ ಸೇರುವಂತೆ ಮನವಿ ಮಾಡಲಾಯಿತು[308].

ಮಂಡ್ಯ ತಾಲೂಕು ಕಾಂಗ್ರೆಸ್ ಸಮಿತಿಯ ಸಭೆಯು 23ನೇ ಫೆಬ್ರವರಿ 1938 ರಂದು ಶಿವಳ್ಳಿಯಲ್ಲಿ ನಡೆಯಿತು. ಅದರಲ್ಲಿ ಪ್ರಮುಖವಾಗಿ ಪುರುಷರು, ಮಹಿಳೆಯರು, ಮಕ್ಕಳು, ರೈತರು, ಕಾರ್ಮಿಕರು ಹಾಜರಾಗಿದ್ದರು. ಟಿ.ಸುನಂದಮ್ಮ ಸಭೆಯಲ್ಲಿ ಮಾತನಾಡುತ್ತಾ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಕಾಂಗ್ರೆಸ್ ಸೇರಬೇಕೆಂದರು. ಮದ್ರಾಸ್ ಸರ್ಕಾರ ವಿದೇಶಿ ವಸ್ತುಗಳಿಗೆ ಬಹಿಷ್ಕಾರ ಮತ್ತು ಶಿಕ್ಷಣಕ್ಕೆ ಬೆಂಬಲ ನೀಡುತ್ತಿರುವುದನ್ನು ವಿವರಿಸಿದರು. ಹೆಚ್.ಹೊನ್ನಯ್ಯನವರ ಸಭೆಗೆ ಬಹಳಷ್ಟು ಸಂಖ್ಯೆಯಲ್ಲಿ ಜನಸೇರಿದ್ದಕ್ಕೆ ಹರ್ಷವನ್ನು ವ್ಯಕ್ತಪಡಿಸುತ್ತಾ ಧನ್ಯವಾದಗಳನ್ನು ತಿಳಿಸಿದರು[309]. ಅದೇ ದಿನದಂದು ಹೊಳಲು ಗ್ರಾಮದಲ್ಲಿ ಮಂಡ್ಯ ತಾಲೂಕು ಕಾಂಗ್ರೆಸ್ ಸಭೆ ನಡೆಯಿತು. ಹೆಚ್.ಕೆ.ವೀರಣ್ಣಗೌಡ ಮತು ಟಿ.ಸುನಂದಮ್ಮನವರ ಸಭೆಯಲ್ಲಿ ಮಾತನಾಡುತ್ತಾ ಜನಗಳಿಗೆ ಕಾಂಗ್ರೆಸ್ ಸೇರುವಂತೆ ಕೇಳಿಕೊಂಡರು[310].

ದಿನಾಂಕ 24-02-1938 ರಂದು ಮಂಡ್ಯದಲ್ಲಿ ಕಾಂಗ್ರೆಸ್ ಸಮಿತಿಯ ಸಭೆ ನಡೆಯಿತು. ಎಂ.ಎಲ್.ಲಿಂಗೇಗೌಡ, ಸುನಂದಮ್ಮ, ಹೆಚ್.ಕೆ.ವೀರಣ್ಣಗೌಡ ಸಭೆಯಲ್ಲಿ ಮಾತನಾಡಿದರು. ಸುನಂದಮ್ಮನವರ ಸಭೆಯಲ್ಲಿ ಈ ರೀತಿಯಾಗಿ ಹೇಳಿದರು. ಸರಕಾರ ಅನೇಕ ವಿಧದಲ್ಲಿ ತೆರಿಗೆಗಳನ್ನು ಸಂಗ್ರಹಿಸುತ್ತಿದ್ದ ರೈತರ ಕಷ್ಟದ ಜೀವನವನ್ನು ನಡೆಸುತ್ತಿದ್ದಾರೆ. ರೈತರು ನಿಜವಾದ ಮಾಲೀಕರು, ಸರಕಾರದ ಸೇವಕರು ಸುಖಮಯವಾದ ಜೀವನವನ್ನು ನಡೆಸುತ್ತಿದ್ದಾರೆ. ಸರಕಾರವನ್ನು ದಿವಾನರು ಮತ್ತು ಕೌನ್ಸಿಲ್ ಸದಸ್ಯರು ನಡೆಸುತ್ತಿದ್ದಾರೆ. ಪ್ರಸ್ತುತ ಸರಕಾರದ ಸಂವಿಧಾನವನ್ನು ಬದಲಾವಣೆ ಮಾಡಲು ಮತ್ತು ಸಾರ್ವಜನಿಕರ ನೋವುದಿಂದ ದೂರಮಾಡಲು ಎಲ್ಲರೂ ಕಡ್ಡಾಯವಾಗಿ ಕಾಂಗ್ರೆಸ್ ಸೇರಬೇಕೆಂದರು. ಹೆಚ್.ಕೆ.ವೀರಣ್ಣಗೌಡರು ಸಭೆಯಲ್ಲಿ ಮಾತನಾಡುತ್ತಾ ಅಧಿಕ ವೇತನ ಪಡೆಯುತ್ತಿರುವ ಸರಕಾರಿ ಅಧಿಕಾರಿಗಳ ವೇತನವನ್ನು

ಕಡಿತಗೊಳಿಸಬೇಕು. ರೈತರಿಗೆ ಅಧಿಕ ಕಂದಾಯವನ್ನು ಹೇರಬಾರದು. ಪ್ರತಿಯೊಬ್ಬರು ಕಾಂಗ್ರೆಸನ್ನು ಬೆಂಬಲಿಸಬೇಕು[311].

ದಿನಾಂಕ 25ನೇ ಫೆಬ್ರವರಿ 1938ರಂದು ಮಂಡ್ಯ ತಾಲೂಕಿನ ಕೆರಗೋಡು ಗ್ರಾಮದಲ್ಲಿ ಕಾಂಗ್ರೆಸ್ ಸಮಿತಿಯ ಸಭೆ ನಡೆಯಿತು. ಮಂಡ್ಯದ ವಕೀಲರಾದ ಚಿಕ್ಕಲಿಂಗಯ್ಯನವರ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಟಿ.ಸುನಂದಮ್ಮನವರು ಸಭೆಯಲ್ಲಿ ಮಾತನಾಡುತ್ತಾ ಸರಕಾರ ಅಧಿಕ ಕಂದಾಯ ವಸೂಲಿ ಮಾಡುತ್ತದೆ. ಹಳ್ಳಿಗಳಲ್ಲಿ ಶಾಲೆ ಮತ್ತು ಆಸ್ಪತ್ರೆಗಳ ಸೌಲಭ್ಯಗಳು ಕೊರತೆಯಿದೆ. ಕಂದಾಯದ ಹಣದಿಂದ ನಗರಗಳ ಸೌಂದರ್ಯ ಹೆಚ್ಚಾಗುತ್ತದೆ. ಸರಕಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ಉತ್ತಮವಾದ ಜೀವನವನ್ನು ನಡೆಸುತ್ತಿದ್ದಾರೆ. ಅಧಿಕಾರಿಗಳ ಜೀವನ ಉತ್ತಮವಾಗುತ್ತದೆ. ರೈತರ ಜೀವನವಲ್ಲ ಜನಗಳ ಕಾಂಗ್ರೆಸ್ ಸದಸ್ಯರಾಗಿ ನೊಂದಣಿಯನ್ನು ಪಡೆಯುವ ಮೂಲಕ ಬೆಂಬಲಿಸಬೇಕೆಂದರು. ಹೆಚ್.ಕೆ.ವೀರಣ್ಣಗೌಡರ ಸಭೆಯಲ್ಲಿ ಈ ರೀತಿ ಅಭಿಪ್ರಾಯ ವ್ಯಕ್ತಪಡಿಸಿದರು. ದಿವಾನರ ಸದನದಲ್ಲಿ ರೈತರ ಜೀವನ ಉತ್ತಮವಾಗಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದನ್ನು ಖಂಡಿಸಿದರು. ಚುನಾವಣೆಗಳ ಮೂಲಕ ಅಧಿಕಾರಿಗಳನ್ನು ಬಿಡುಗಡೆ ಮಾಡಬೇಕು ಜನಗಳು ಕಾಂಗ್ರೆಸ್ ಸದಸ್ಯತ್ವನ್ನು ಪಡೆಯುವಂತೆ ಮನವಿ ಮಾಡಿದರು. ಅದೇ ದಿನ ಸಂಜೆ ಹುಲಿವಾನದಲ್ಲಿ ಚಿಕ್ಕಲಿಂಗಯ್ಯನವರ ಅಧ್ಯಕ್ಷತೆಯನ್ನು ಸಭೆ ನಡೆಯಿತು. ಸುನಂದಮ್ಮ, ಹೆಚ್.ಕೆ. ವೀರಣ್ಣಗೌಡರು ಸಭೆಯಲ್ಲಿ ಮಾತನಾಡಿದರು. ಚಿಕ್ಕಲಿಂಗಯ್ಯನವರ ತಮ್ಮ ಅಧ್ಯಕ್ಷತೆಯ ಭಾಷಣದಲ್ಲಿ ಜವಾಬ್ದಾರಿ ಸರಕಾರ ಸ್ಥಾಪಿಸಬೇಕೆಂದರು[312].

ಮೈಸೂರು ಕಾಂಗ್ರೆಸ್ಸಿನ ಪ್ರಥಮ ಅಧಿವೇಶನ ಶಿವಪುರ ರಾಷ್ಟ್ರಕೂಟ ಯಶಸ್ವಿಯಾಗಲು ಮಹಿಳೆಯರು ನೀಡಿದ ಸಹಕಾರ ಪ್ರಮುಖವಾದುದು. ಮಂಡ್ಯ, ಮದ್ದೂರು ತಾಲ್ಲೂಕಿನ ಮಹಿಳೆಯರು ಸ್ವಯಂ ಸೇವಕರಾಗಿ ಅಧಿವೇಶನದಲ್ಲಿ ಭಾಗವಹಿಸಿದ್ದು, ಕರಪತ್ರಗಳನ್ನು ಹಂಚುವ ಕಾರ್ಯ, ಅಧ್ಯಕ್ಷರ ಮೆರವಣಿಗೆಯಲ್ಲಿ ಘೋಷಣೆ ಕೂಗುತ್ತಾ ಮುನ್ನಡೆಸಿದ್ದು, ಅಧಿವೇಶನದಲ್ಲಿ ಹೋರಾಟಗಾರರಿಗೆ ಅಡುಗೆ ಮಾಡುವ ಕಾರ್ಯಗಳನ್ನು ಮಾಡಿದರು. ಅಂತಿಮವಾಗಿ ಧ್ವಜ ರಕ್ಷಣೆಗಾಗಿ ತಮ್ಮ ಜೀವನವನ್ನು ತ್ಯಾಗ ಮಾಡಲು ಸಿದ್ದರಾಗಿದ್ದರು. ಅಮ್ಮತೂರಿನ ಶೇಷಾದ್ರಿ ಅಯ್ಯಾಂಗಾರ್‌ರ ಮುಖಂಡತ್ವದಲ್ಲಿ ಇಪ್ಪತ್ತೈದು ಜನ ಸ್ವಯಂಸೇವಕರು ಚಿತ್ರದುರ್ಗದ ಭೀಮಪ್ಪ ನಾಯಕರ ಸಂಗಡಿಗರಾದ ಭೀಮಕುಮಾರರೂ ಮತ್ತು ಅವರ ಸಂಗಡಿಗರೂ, ಬೆಂಗಳೂರಿನಿಂದ ಬಿ.ಎಂ.ಶೀನಪ್ಪನವರೂ ಕೆಲವು ಸ್ವಯಂ ಸೇವಕರೊಡನೆ ಬಂದ ಕಾರ್ಯಗಳನ್ನು ನಿರ್ವಹಿಸಿದರು. ಪಾಲಹಳ್ಳಿ ಸೀತಾರಾಮಯ್ಯನವರ ಹೆಂಡತಿ

ವೆಂಕಮ್ಮನವರು ಇಪ್ಪತ್ತನಾಲ್ಕು ಮಂದಿ ಮಹಿಳೆಯರಿಗೆ ಮೈಸೂರಿನಲ್ಲಿ ಸ್ವಯಂ ಸೇವೆಯ ತರಬೇತಿ ನೀಡಿ ಏಪ್ರಿಲ್ ಮೊದಲ ವಾರದಲ್ಲೇ ಶಿವಪುರಕ್ಕೆ ಬಂದು ತಿರುಮಲೇಗೌಡರ ಮಹಡಿ ಮನೆಯಲ್ಲಿದ್ದುಕೊಂಡು ಕಾರ್ಯಕಲಾಪಗಳಲ್ಲಿ ಭಾಗವಹಿಸಿದರು. ಜಯಲಕ್ಷ್ಮಮ್ಮ ಉಪನಾಯಕಿಯಾಗಿ ಕೆಲಸ ಮಾಡಿದರು. ಸಾಹುಕಾರ ಚನ್ನಯ್ಯ ಅವರ ಮಗಳು ಕುಮಾರಿ ಪ್ರಮೀಳ ಪಾಲಹಳ್ಳಿ ಸೀತಾರಾಮಯ್ಯ ಅವರ ಮಗಳು, ಹೆಚ್.ಸಿ.ದಾಸಪ್ಪ ಮತ್ತು ಟಿ.ಸಿದ್ಧಲಿಂಗಯ್ಯನವರ ಗಂಡು ಮಕ್ಕಳೂ ಸ್ವಯಂ ಸೇವಕ–ಸೇವಕರಾಗಿ ತಮಗೆ ವಹಿಸಿದ ಕೆಲಸಗಳನ್ನು ಶ್ರದ್ಧೆಯಿಂದ, ಶಿಸ್ತಿನಿಂದ ನಿರ್ವಹಿಸಿದರು. ಸ್ವಯಂ ಸೇವಕರ ಹಾಗೂ ಸ್ವಯಂ ಸೇವಕಿಯರ ಶಿಸ್ತಿನ ಕವಾಯಿತು, ಕಾರ್ಯ ಚಟುವಟಿಕೆಗಳು, ಹಳ್ಳಿಗರಿಗೆ ರಾಷ್ಟ್ರಕೂಟದಲ್ಲಿ ಭಾಗವಹಿಸಿಲು ಪ್ರೇರಣೆಯಾಯಿತು. ಸ್ವಯಂ ಸೇವಕರನ್ನು ಹಲವು ಗುಂಪುಗಳಾಗಿ ವಿಂಗಡಿಸಿ ಪ್ರತಿಯೊಂದು ಗುಂಪನ್ನೂ ರಾಷ್ಟ್ರನಾಯಕರ ಹೆಸರಿನಿಂದ ಕರೆಯುತ್ತಿದ್ದರು. ಉದಾಹರಣೆಗೆ ತಿಲಕದಸ್ತ, ಭಗತ್‌ಸಿಂಗ್‌ದಸ್ತ, ಪಟೇಲ್‌ದಸ್ತ ಇತ್ಯಾದಿ[313].

ಶಿವಪುರ ರಾಷ್ಟ್ರಕೂಟದ ಮೊದಲ ದಿನದ ಧ್ವಜಾರೋಹಣಕ್ಕೆ ಸಂಬಂಧಿಸಿದಂತೆ ಸ್ವಯಂ ಸೇವಕ ಕೆ.ಹನುಮಂತಯ್ಯ ಅವರ ದಿನಚರಿಯಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯದಲ್ಲಿ ಮಹಿಳೆಯರು ಭಾಗವಹಿಸಿದ್ದನ್ನು ವಿವರಿಸುತ್ತದೆ. ನಂತರ ಪೋಲೀಸ್ ಸೂಪರಿಂಟೆಂಡೆಂಟರು ಸಬ್‌ಡಿವಿಜನಲ್ ಆಫೀಸರೂ ಧ್ವಜವನ್ನು ಕಿತ್ತುಹಾಕಲು ವೇದಿಕೆಯ ಮೇಲೆ ಪ್ರವೇಶಿಸಿದಾಗ 'ಈ ಧ್ವಜಸ್ತಂಭವನ್ನು ಮುಟ್ಟಲು ನಿಮಗೆ ಅಧಿಕಾರವಿಲ್ಲ' ಎಂದು ಕೆ.ಹನುಮಂತಯ್ಯ ಅಡ್ಡವಾಗಿ ನಿಂತರು. ಅವರು ಮುಂದುವರಿಯಲಿಲ್ಲ. ಹೆಚ್.ಸಿ.ದಾಸಪ್ಪ, ಸುನಂದಾದೇವಿ, ಜಯಮ್ಮ, ಬಳ್ಳಾರಿ ಸಿದ್ದಮ್ಮ, ಯಶೋಧರಮ್ಮ ದಾಸಪ್ಪ ಮುಂತಾದವರು ಧ್ವಜಸ್ತಂಭ ವೇದಿಕೆಯ ಮೇಲೆ ಕುಳಿತು ಧ್ವಜ ರಕ್ಷಣೆ ಮಾಡಿದರು[314]. ಏಪ್ರಿಲ್ 12, 1938ರಂದು ಶಿವಪುರ ಅಧಿವೇಶನದಲ್ಲಿ ವಿಷಯ ನಿಯಾಮಕ ಸಭೆ ನಡೆಯಿತು. ಆ ಸಭೆಯಲ್ಲಿ ಬಳ್ಳಾರಿ ಸಿದ್ದಮ್ಮ, ಮದ್ದೂರಿನ ತಾಯಮ್ಮ ವೀರಣ್ಣಗೌಡ ಕೂಡ ಭಾಗವಹಿಸಿದ್ದರು. ತಾಯಮ್ಮ ವೀರಣ್ಣಗೌಡ ಸಭೆಯಲ್ಲಿ ಈ ರೀತಿಯಾಗಿ ಮನವಿ ಮಾಡಿದರು. ನನ್ನ ಸಹೋದರಿ ಹಾಗೂ ಮಹಿಳೆಯರು ದೇಶದ ಉದಯಕ್ಕೆ ಬೆಳವಣಿಗೆಗೆ ಸಹಾಯ ಮಾಡಬೇಕು. ನನ್ನ ಸಹೋದರರು ಈ ಅಧಿವೇಶನದಲ್ಲಿ ಸರಿಯಾದ ನಿರ್ಧಾರ, ಮಾರ್ಗದಲ್ಲಿದ್ದಾರೆ ಎಂದರು[315].

ಏಪ್ರಿಲ್ 13, 1938ರಂದು ಕೆ.ಟಿ.ಭಾಷ್ಯಂ, ಹೆಚ್.ಸಿದ್ದಯ್ಯ, ಬಳ್ಳಾರಿಸಿದ್ದಮ್ಮ ಮೊದಲಾದವರನ್ನು ಬಂಧಿಸಲಾಯಿತು. ಅಧಿವೇಶನದ ಪ್ರತಿದಿನ ಟಿ.ಸುನಂದಮ್ಮ ಇವರು 'ವಂದೇಮಾತರಂ' ಗೀತೆಯನ್ನು ಹಾಡುವ ಮೂಲಕ ದೇಶಾಭಿಮಾನವನ್ನು ಮೂಡಿಸಿದರು. ಯಶೋಧರಮ್ಮ ದಾಸಪ್ಪ, ಬಳ್ಳಾರಿ ಸಿದ್ದಮ್ಮ, ಸುಬ್ಬಮ್ಮ ಜೋಯಿಷ ಧ್ವಜ

ಸತ್ಯಾಗ್ರಹವನ್ನು ಸಂಘಟಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಸುಶೀಲಮ್ಮ ನಾಗೇಶ್ವರರಾವ್, ತಾಯಮ್ಮ ವೀರಣ್ಣಗೌಡ ಮತ್ತು ವೆಂಕಮ್ಮ ಪಾಲಹಳ್ಳಿಯವರು ಕಾರ್ಯಕರ್ತರಿಗೆ ಧ್ವಜಾರೋಹಣದ ಬಗ್ಗೆ ದಿನವಿಡೀ ಮಾರ್ಗದರ್ಶನ ನೀಡಿದರು. ಈ ಮೂಲಕ ಮಹಿಳೆಯರು ಶಿವಪುರ ರಾಷ್ಟ್ರಕೂಟವು ಯಶಸ್ವಿಯಾಗಿ ನಡೆಯಲು ಶ್ರಮಿಸಿದರು. ಶಿವಪುರ ಧ್ವಜ ಸತ್ಯಾಗ್ರಹದಲ್ಲಿ ಪಾಲ್ಗೊಂಡ ಪ್ರಮುಖ ಮಹಿಳೆಯರು. ವೆಂಕಮ್ಮ ಸೀತಾರಾಮಯ್ಯ ಪಾಲಹಳ್ಳಿ, ಜಯಲಕ್ಷ್ಮಮ್ಮ, ಕುಮಾರಿ ಪ್ರಮೀಳಾ, ಕಮಲಮ್ಮ, ಸಾವಿತ್ರಮ್ಮ, ನಾಗುಬಾಯ್, ಸೋನುಬಾಯ್, ಬಳ್ಳಾರಿ ಸಿದ್ದಮ್ಮ, ಯಶೋಧರಮ್ಮ ದಾಸಪ್ಪ, ಟಿ.ಸುನಂದಮ್ಮ, ಸುಬ್ಬಮ್ಮ ಜೋಯಿಸ್, ಸುಶೀಲಬಾಯಿ ನಾಗೇಶ್ವರರಾವ್, ತಾಯಮ್ಮ ವೀರಣ್ಣಗೌಡ, ಪಾರ್ವತಮ್ಮ ಟಿ.ಸಿದ್ದಲಿಂಗಯ್ಯ[316].

18.04.1938ರಂದು ಮೈಸೂರು ಸಂಸ್ಥಾನದಾದ್ಯಂತ ಮೈಸೂರು ಸರಕಾರದ ಅನ್ಯಾಯದ ವರ್ತನೆಯನ್ನು ಖಂಡಿಸಿ ಹರತಾಳವನ್ನು ಆಚರಿಸಲಾಯಿತು. ಮದ್ದೂರಿನ ಪ್ರತ್ಯೇಕ ಸ್ಥಳದಲ್ಲಿ ಹೆಚ್.ಕೆ.ವೀರಣ್ಣಗೌಡರ ಪತ್ನಿ ತಾಯಮ್ಮ ವೀರಣ್ಣಗೌಡರು ಧ್ವಜಾರೋಹಣ ಮಾಡಿದರು. ಮಂಡ್ಯದಲ್ಲಿ ಹೆಚ್.ಹೊನ್ನಯ್ಯನವರ ಬಂಗಲೆ – ಪ್ರದೇಶದಲ್ಲಿ ಕಾಂಗ್ರೆಸ್ ದ್ವಜಾರೋಹಣ ಮಾಡಿದರು. ಪಶುಪತಿ ರಾವ್, ಆರ್.ರಾಮಸ್ವಾಮಿ ಅಯ್ಯಂಗಾರ್ ಹಾಗೂ ಇತರರು ಭಾರತ ಮಾತೆಯ ಭಾವಚಿತ್ರದೊಂದಿಗೆ ಪೇಟೆ ಬೀದಿಯಲ್ಲಿ ಮೆರವಣಿಗೆ ಮಾಡಿದರು. ಸಂಜೆ 6 ಗಂಟೆಗೆ ಜ್ಯೂಬಿಲಿ ಪಾರ್ಕ್‌ನಲ್ಲಿ ಸಭೆ ನಡೆಸಿದರು. ಸಭೆಯಲ್ಲಿ ಅನಂತರಾಮಭಟ್‌ಶರ್ಮ, ವೆಂಕಟಗಿರಿ, ಬಿ.ಪಿ.ಕೃಷ್ಣ. ಮಹಾಬಲರಾಮ ಹಾಜರಿದ್ದರು. ವಿದೇಶಿ ವಸ್ತುಗಳ ಬಹಿಷ್ಕಾರ, ಹಿಂದಿ ಭಾಷೆ ಕಲಿಕೆಗೆ ವಿರೋಧ, ಶಿವಪುರ ಅಧಿವೇಶನ,ಸರಕಾರಿ ಅಧಿಕಾರಿಗಳು ಪಡೆಯುವ ಅಧಿಕ ಸಂಬಳ, ಜವಾಬ್ದಾರಿ ಸರಕಾರದ ಸ್ಥಾಪನೆ, ಸರಕಾರದ ಪ್ರತಿಬಂಧಕಾಜ್ಞೆ ವಿಷಯಗಳ ಬಗ್ಗೆ ಮಾತನಾಡಿದರು[317]. 1947ರಲ್ಲಿ ಮೈಸೂರು ಚಲೋ ಚಳುವಳಿಯಲ್ಲಿ ಪಾಂಡವಪುರ ಎನ್.ಎಸ್.ಗೌರಮ್ಮ ಭಾಗವಹಿಸಿ, ತಮ್ಮ ಎರಡು ವರ್ಷದ ಮಗುವಿನೊಂದಿಗೆ 2 ತಿಂಗಳ ಕಾಲ ಬೆಂಗಳೂರಿನ ಸೆಂಟ್ರಲ್ ಜೈಲ್‌ನಲ್ಲಿ ಸೆರೆವಾಸ ಅನುಭವಿಸಿದರು[318].

ಮಂಡ್ಯ ಜಿಲ್ಲೆಯ ಸ್ವಾತಂತ್ರ್ಯ ಚಳುವಳಿಯಲ್ಲಿ ರೈತರ ಪಾತ್ರ

ಮಂಡ್ಯ ಜಿಲ್ಲೆಯಲ್ಲಿ 1931–32ರಲ್ಲಿ ಇರ್ವಿನ್ ನಾಲಾ ರೈತ ಚಳುವಳಿಯ ಮೂಲಕ ಸರ್ಕಾರದ ಗಮನ ಸೆಳೆಯುವಲ್ಲಿ ಹೆಚ್.ಕೆ.ವೀರಣ್ಣಗೌಡ ಹಾಗೂ ಹೆಚ್.ಹೊನ್ನಯ್ಯ ನೇತೃತ್ವದ ರೈತ ಸಂಘಟನೆ ಯಶಸ್ವಿಯಾಗಿತ್ತು. ಇದಕ್ಕೆ ಪೂರಕವಾಗಿ ಹೆಚ್.ಕೆ.ವೀರಣ್ಣಗೌಡ ಮೈಸೂರು ಕಾಂಗ್ರೆಸ್ ಮೊದಲ ಅಧಿವೇಶನ ಶಿವಪುರ ನಡೆಸಲು

ಒಪ್ಪಿಕೊಂಡರು. ಆಗ ಕಾಂಗ್ರೆಸ್ ನಾಯಕರರೊಂದಿಗೆ ರೈತರ ಮುಂದಾಳುಗಳೇ ಈ ಅಧಿವೇಶನ ಸಂಘಟನೆಯಲ್ಲಿ ಸಕ್ರಿಯವಾಗಿ ದುಡಿದರು[319]. ಶಿವಪುರ ಅಧಿವೇಶನ ಪೂರ್ವದಲ್ಲಿ ನಡೆದ ಕಾಂಗ್ರೆಸ್ ಸಭೆಗಳಲ್ಲಿ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

18ನೇ ಫೆಬ್ರವರಿ 1938 ರಂದು ಮದ್ದೂರು ತಾಲೂಕು ಕಾಂಗ್ರೆಸ್ ಸಮಿತಿಯು ಸಾರ್ವಜನಿಕ ಸಭೆಯನ್ನು ನಿಡಘಟ್ಟದಲ್ಲಿ ಆಯೋಜಿಸಿತ್ತು. ಸುಮಾರು 300 ಜನ ಸೇರಿದ್ದರು. ಸೀತರಾಮಶಾಸ್ತ್ರಿಯವರ ಜವಾಬ್ದಾರಿ ಸರಕಾರ ಸ್ಥಾಪನೆ ಹಾಗೂ ಪ್ರಸ್ತುತ ಸರಕಾರದ ಬಗ್ಗೆ ವಿವರಿಸಿದರು. ಸರಕಾರದ ಅಧಿಕಾರಿಗಳು ರೈತರ ಹಣವನ್ನು ಖರ್ಚುಮಾಡಿ ಸುಖಪಡುತ್ತಿದ್ದಾರೆ. ಇದರ ಲೆಕ್ಕವನ್ನು ಕೇಳುವುದು ಪ್ರತಿಯೊಬ್ಬ ರೈತನ ಹಕ್ಕಾಗಿದೆ. ಜವಾಬ್ದಾರಿ ಸರಕಾರದಲ್ಲಿ ಮಂತ್ರಿಗಳು ಮತು ಕೌನ್ಸಿಲ್ ಸದಸ್ಯರುಗಳನ್ನು ಮತದಾನದ ಮೂಲಕ ಆಯ್ಕೆಮಾಡಲಾಗುತ್ತದೆ. ಇದಕ್ಕಾಗಿ ಕಾಂಗ್ರೆಸ್ ಹೋರಾಟ ಮಾಡುತ್ತದೆ. ಬಂಧನದಲ್ಲಿರುವ ರಾಜಕೀಯ ನಾಯಕರನ್ನು ಬಿಡುಗಡೆ ಮಾಡಬೇಕೆಂದರು. ಮದ್ಯಪಾನದಿಂದ ಜನರು ತಮ್ಮ ಆಸ್ತಿಯನ್ನು ಕಳೆದುಕೊಂಡರು. ಇದರ ವಿರುದ್ಧ ಪಿಕೆಟಿಂಗ್ ಆಚರಿಸುವ ಕಾಂಗ್ರೆಸಿಗರನ್ನು ಬಂಧಿಸಿ ಜೈಲಿಗೆ ಕಳುಹಿಸುತ್ತಾರೆ. ಅಮಲ್ದಾದಾರ ಹಳ್ಳಿಗಳಿಗೆ ಭೇಟಿ ನೀಡುತ್ತಿಲ್ಲ, ರೈತರ ತೊಂದರೆಗಳಿಗೆ ಸ್ಪಂಧಿಸುತ್ತಿಲ್ಲವೆಂದರು. ಜವಾಬ್ದಾರಿ ಸರಕಾರ ಸ್ಥಾಪಿಸಲು ಹೋರಾಟ ಮಾಡಬೇಕೆಂದರು. ಸಭೆಯಲ್ಲಿ ಎಚ್.ಕೆ.ವೀರಣ್ಣಗೌಡ, ಎಂ.ಟಿ.ನರಸಿಂಹ ಅಯ್ಯಂಗಾರ್ ಮಾತನಾಡಿದರು. ಅದೇ ದಿನದಂದು ಮದ್ದೂರು ತಾಲೂಕಿನ ಮಲ್ಲನಕುಪ್ಪೆಯಲ್ಲಿ (18–02–1938) ತಾಲೂಕು ಕಾಂಗ್ರೆಸ್ ಸಮಿತಿಯು ಸಾರ್ವಜನಿಕ ಸಭೆಯನ್ನು ಏರ್ಪಡಿಸಿತ್ತು. ಹೆಚ್.ಕೆ. ವೀರಣ್ಣಗೌಡ, ದೇಶಹಳ್ಳಿಯ ತಮ್ಮಯ್ಯ, ಭೀಮಯ್ಯನವರ ಜವಾಬ್ದಾರಿ ಸರಕಾರ ಸ್ಥಾಪನೆ, ರೈತರ ಹಿತರಕ್ಷಣೆ ಬಗ್ಗೆ ಮಾತನಾಡಿದರು. ಸುಮಾರು 100 ಜನ ಸೇರಿದ್ದರು[320].

19ನೇ ಫೆಬ್ರವರಿ 1938ರಂದು ಮದ್ದೂರು ತಾಲ್ಲೂಕಿನ ಗೆಜ್ಜಲಗೆರೆ ಗ್ರಾಮದ ಸಿದ್ದಪ್ಪನವರ ತೆಂಗಿನ ತೋಟದಲ್ಲಿ ಕಾಂಗ್ರೆಸ್ ಸಮಿತಿಯ ಸಾರ್ವಜನಿಕ ಸಭೆ ನಡೆಯಿತು. ಆ ಸಭೆಯಲ್ಲಿ ಹೆಚ್.ಕೆ.ವೀರಣ್ಣಗೌಡರು ಸರಕಾರದ ಅಧಿಕಾರಿಗಳನ್ನು ಬಾಡಿಗೆ ಭಂಟರು ಎಂದು ಟೀಕಿಸಿದರು. ತಾವು ರೈತರ ಪರವಾಗಿ ಕಾರ್ಯ ನಿರ್ವಹಿಸುತ್ತಿದ್ದು ಮೈಸೂರಿನಲ್ಲಿ ಜವಾಬ್ದಾರಿ ಸರಕಾರ ಸ್ಥಾಪಿಸಲು, ಪ್ರತಿಯೊಬ್ಬರು ಕಾಂಗ್ರೆಸ್ ಸೇರಬೇಕೆಂದು ರೈತರಲ್ಲಿ ಮನವಿ ಮಾಡಿದರು ಅದೇ ದಿನದೊಂದು ಮದ್ದೂರ ತಾಲೂಕಿನ ಚಿಕ್ಕ ಅರಸಿನಕೆರೆ ಮತ್ತು ವಳಗೆರಹಳ್ಳಿಯಲ್ಲಿ ಮದ್ದೂರು ತಾಲ್ಲೂಕಿನ ಕಾಂಗ್ರೆಸ್ ಸಮಿತಿಯು ಸಾರ್ವಜನಿಕ ಸಭೆಯನ್ನು ಆಯೋಜಿಸಿತ್ತು. ದೊಡ್ಡ ಬೋರದೇವರ ದೇವಸ್ಥಾನದಲ್ಲಿ ಸಂತೆಯ ದಿನದಂದು ಸಭೆ ನಡೆಯಿತು. ಸುನಂದಮ್ಮ ಮತ್ತು ಹೆಚ್.ಕೆ. ವೀರಣ್ಣಗೌಡರ

ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಕಾಂಗ್ರೆಸ್ ಬೆಂಬಲಿಸುವಂತೆ ಕೇಳಿಕೊಂಡರು. ಸುಮಾರು 500 ಜನರು ಸೇರಿದ್ದರು[321]. ಶಿವಪುರ ಕಾಂಗ್ರೆಸ್ ಅಧಿವೇಶನ ಯಶಸ್ವಿಯಾಗಲು ರೈತರು ಉದಾರವಾದ ಧೇಣಿಗಳನ್ನು ನೀಡಿದರು. ಆರ್ಥಿಕವಾಗಿ ಶ್ರೀಮಂತ ರೈತರಾಗಿದ್ದ ಶಿವಪುರದ ತಿರುಮಲೇಗೌಡ 300 ರೂಪಾಯಿ, ಕೊಪ್ಪದ ಜೋಗೀಗೌಡರು 100 ರೂಪಾಯಿ, ಮದ್ದೂರಿನ ಚನ್ನಪ್ಪನವರು 100 ರೂಪಾಯಿ ಧೇಣಿಗೆ ನೀಡಿದರು. ಅಲ್ಲದೇ ಸುತ್ತಮುತ್ತಲ ಗ್ರಾಮಗಳ ಕೆಲವು ರೈತರು ತಮ್ಮ ಸಾಮರ್ಥ್ಯದ ಮಿತಿಯಲ್ಲಿ ದವಸಧಾನ್ಯ ಮುತ್ತಿತರ ಅಗತ್ಯಗಳನ್ನು ಒದಗಿಸಿದರು[322].ಈ ರೀತಿಯಾಗಿ ಶಿವಪುರ ಕಾಂಗ್ರೇಸ್ ಅಧಿವೇಶನದ ಯಶಸ್ವಿಯಾಗಿ ನಡೆಯಲು ಮದ್ದೂರು ಹಾಗೂ ಸುತ್ತಮುತ್ತಲಿನ ಗ್ರಾಮದ ರೈತರು ಶ್ರಮವಹಿಸಿದರು. ತರುವಾಯ 2 ಅಕ್ಟೋಬರ್ 1940ರಂದು ಮದ್ದೂರಿನ ರೈತರು ಮಹಾತ್ಮಗಾಂಧಿಜೀ ಜನ್ಮ ದಿನಾಚರಣೆಯನ್ನು 72 ಎತ್ತುಗಳೊಂದಿಗೆ ಮೆರವಣಿಗೆ ಮಾಡಿ ಆಚರಿಸಲು ನಿರ್ಧರಿಸಿದರು. ಈ ಸಂದರ್ಭದಲ್ಲಿ ಮೈಸೂರು ಪೊಲೀಸ್ ವಿಭಾಗದ 45ನೇ ಕಾಯ್ದೆಯು ಮೆರವಣಿಗೆಯನ್ನು ನಡೆಸದಂತೆ ಆದೇಶವನ್ನು ಮಂಡ್ಯ ಜಿಲ್ಲಾಧಿಕಾರಿಗಳು ಜಾರಿಗೆ ಮಾಡಿದರು. ಆದರೆ ಮಂಡ್ಯದ ಪ್ರಮುಖ ಹೋರಾಟಗಾರರಾದ ಹಾಗೂ ವಕೀಲರಾದ ಮಹಾಬಲರಾವ್‌ರವರು ಮದ್ದೂರಿನಲ್ಲಿ ಗಾಂಧೀಜಿಯವರ ಭಾವಚಿತ್ರದೊಂದಿಗೆ ಏಕಜೋಡಿ ಎತ್ತುಗಳನ್ನು ಎಳೆಯುವ ಒಂದು ಬಂಡಿಯೊಂದಿಗೆ ಮೆರವಣಿಗೆಯನ್ನು ನಡೆಸಿದರು. ಈ ಮೆರವಣಿಗೆಯಲ್ಲಿ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. 6 ಅಕ್ಟೋಬರ್ 1946ರಂದು ಫ್ರೆಂಚ್‌ರಾಕ್ಸ್ (ಪಾಂಡವಪುರ) ತಾಲ್ಲೂಕು ಹರವು ಗ್ರಾಮದ ವಯಸ್ಕರ ವಿದ್ಯಾಶಾಲೆಯಲ್ಲಿ ಗಾಂಧಿ ಜಯಂತಿಯನ್ನು ರೈತರು ಆಚರಿಸಿದರು. ಊರಿನ ಪ್ರಮುಖ ಬೀದಿಗಳಲ್ಲಿ ಗಾಂಧೀಜಿ, ನೆಹರೂ, ನೇತಾಜಿಯವರ ಭಾವಚಿತ್ರಗಳ ಮೆರವಣಿಗೆ ನಡೆಯಿತು. ರಾತ್ರಿ ಹೆಚ್.ಆರ್.ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ಬಹಿರಂಗಸಭೆಯು ಜರುಗಿತು ಹೆಚ್.ಆರ್.ನಾರಾಯಣಗೌಡರು ಗಾಂಧೀಜಿ ಜೀವನ ಮತ್ತು ಅವರ ತತ್ವಗಳ ವಿಚಾರವಾಗಿ ಭಾಷಣ ಮಾಡಿದರು. ಹೆಚ್.ಆರ್.ವಿಶ್ವೇಶ್ವರಯ್ಯನವರು ಸಭೆಯಲ್ಲಿ ಮಾತನಾಡಿ ಎಲ್ಲಾ ವಿಧದಲ್ಲಿಯೂ ಹರಿಜನರನ್ನು ಸವರ್ಣ ಹಿಂದುಗಳ ಮಟ್ಟಕ್ಕೆ ತರಬೇಕೆಂದು ರೈತರಲ್ಲಿ ಪ್ರಾರ್ಥಿಸಿಕೊಂಡರು. ವಂದೇ ಮಾತರಂ ಗೀತೆಯೊಡನೆ ಸಭೆ ಮುಕ್ತಾಯವಾಯಿತು[323].

ಮಂಡ್ಯ ಜಿಲ್ಲೆಯ ಸ್ವಾತಂತ್ರ್ಯ ಚಳುವಳಿಯಲ್ಲಿ ಕಾರ್ಮಿಕರ ಪಾತ್ರ

ಜಿಲ್ಲೆಯ ಸ್ವಾತಂತ್ರ್ಯ ಹೋರಾಟದಲ್ಲಿ ಕೇವಲ ರಾಷ್ಟ್ರೀಯ ನಾಯಕರು ಮಾತ್ರವಲ್ಲದೇ ದುಡಿಯುವ ವರ್ಗವು ಸಹ ಸಕ್ರಿಯವಾಗಿ ಹೋರಾಟದಲ್ಲಿ ತೊಡಗಿಕೊಂಡಿದ್ದರು ಆ ಸಂಬಂಧ ಇವರನ್ನು ಸಂಘಟಿಸಲು 2ನೇ ಡಿಸೆಂಬರ್ 1937 ರಂದು ಮಂಡ್ಯದ ಸಂತೇ ಮೈದಾನದಲ್ಲಿ ಹೆಚ್.ಹೊನ್ನಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಸಭೆಯಲ್ಲಿ ಮೈಸೂರಿನ ಶಂಕರಯ್ಯನವರು ಜನರಲ್ಲಿ ಜೈಲಿನಲ್ಲಿರುವ ಮುಖಂಡರಿಗೆ ಕಾಂಗ್ರೆಸನ್ನು ಸೇರುವ ಮೂಲಕ ಬೆನ್ನೆಲುಬು ಆಗಬೇಕೆಂದು ಮನವಿ ಮಾಡಿದರು. ಹೆಚ್.ಸಿ.ದಾಸಪ್ಪನವರ ಜನರನ್ನುದ್ದೇಶಿಸಿ ಈ ರೀತಿಯಾಗಿ ಮಾತನಾಡಿದರು. ಸರಕಾರಕ್ಕೆ ಬರುತ್ತಿರುವ ಆದಾಯ ರೈತರಿಂದ ಬರುತ್ತದೆ. ಆದರೆ ರೈತರ ಹಿತಕ್ಕಾಗಿ ಹಣವನ್ನು ಬಳಕೆ ಮಾಡಲಾಗುತ್ತಿಲ್ಲ. ಜವಾಬ್ದಾರಿ ಸರಕಾರ ಸ್ಥಾಪಿಸಲು ಸತ್ಯಾಗ್ರಹ ನಡೆಸಬೇಕು. ಸೆರೆಮನೆಯಲ್ಲಿರುವ ಕಾಂಗ್ರೆಸ್ ಮುಖಂಡರನ್ನು ಹಿತರಕ್ಷಣೆ ಮಾಡಲು ಹೋರಾಟ ಮಾಡಬೇಕು. ಸರಕಾರದಲ್ಲಿರುವ ಅಧಿಕಾರಿಗಳಿಗೆ ನೀಡುವ ಅಧಿಕವೇತನ ಕಡಿತಗೊಳಿಸಲು ತಮ್ಮ ಹೋರಾಟಕ್ಕೆ ಬೆಂಬಲ ಕೇಳಿಕೊಂಡರು. ಮಂಡ್ಯದ ಸಕ್ಕರೆ ಕಾರ್ಖಾನೆಯ ನೌಕರರಾದ ಎಂ.ಎಸ್.ಶ್ರೀನಿವಾಸ್‌ರಾವ್‌ರವರ ಸರಕಾರವು ಕಾಂಗ್ರೆಸ್ ಪಕ್ಷದ ಮುಖಂಡರನ್ನು ಬಂಧಿಸಿರುವುದು ಎಷ್ಟರ ಮಟ್ಟಿಗೆ ಸರಿಯೆಂದು ಪ್ರಶ್ನಿಸಿದರು. ಹಾಗೂ ಬೆಂಗಳೂರಿನ ಗಲಭೆಯಲ್ಲಿ ಗೋಲಿಬಾರ್ ಘಟನೆಯನ್ನು ಕೆಂಪುಕೋತಿ ಪೊಲೀಸ್‌ನವರ ವರ್ತನೆಯಲ್ಲಿ ತಪ್ಪಿಲ್ಲವೆಂದು ಹೇಗೆ ಸಮರ್ಥಿಸಿಕೊಂಡಿರುವುದನ್ನು ಜನರಲ್ಲಿ ಪ್ರಶ್ನಿಸಿದರು. ಆ ಕೆಂಪು ಕೋತಿ ಪೊಲೀಸ್ ಅಧಿಕಾರಿಯು ನಮ್ಮ ಸಹೋದರರಲ್ಲಿ ಒಬ್ಬರನ್ನು ಗುಂಡಿನಿಂದ ಹೊಡೆಸಿದ್ದು ನ್ಯಾಯವೇ? 5–6 ಸಾವಿರ ಮೈಲಿನಿಂದ ಹೊಟ್ಟೆಗೆ ಹಿಟ್ಟುಯಿಲ್ಲದೆ ಬಂದು ನಮ್ಮ ಕೂಳನ್ನು ತಿಂದು ನಮ್ಮನ್ನು ಕೊಲ್ಲುತ್ತಾರೆ. ಇವರಿಗೆ ಇದಕ್ಕೆ ಸಾವಿರಾರು ರೂಪಾಯಿ ಸಂಬಳಗಳು. ತಾರೀಖು 25–10–1937ರಲ್ಲಿ ಬೆಂಗಳೂರಿನಲ್ಲಿ ದುರ್ಘಟನೆಯ ದಿನ. ಅಂದೂ ನಮ್ಮ ಬಾಲಕನ ಮರಣ ತಾರೀಖು 25–11–1937 ಇಂದು ನಮ್ಮ ದಿವಾನರಿಗೆ ಸತ್ಕಾರ, ನಮ್ಮ ಮಹಾರಾಜರಿಗೆ ಇನ್ನು ದಯಾ ಬಂದಿಲ್ಲ. 29–11–1937ರಂದು ನಮ್ಮ ರಂಗರಾಮಯ್ಯನವರ ದಸ್ತಗಿರಿ, ಹುಮಾಯಾನ ಮಿರ್ಜಾರವರ ದಿವಾನಗಿರಿ ನಮ್ಮ ಮಹಾರಾಜರವರಿಂದ ಇನ್ನೂ ಜವಾಬ್ದಾರಿ ಸರಕಾರವನ್ನು ಕೋರರಿಲ್ಲಾ ಮತ್ತು ನಮ್ಮ ರಕ್ತವನ್ನು ಹೀರಿ ರುಚಿಯನ್ನು ನೋಡಿದ್ದಾರೆ. ಇಂಥವರಿಗೆ ಇನ್ನೂ 5 ವರ್ಷ ಜೀವದಾನ ಕೊಟ್ಟಿದ್ದಾರೆ. ಸರಕಾರದವರು ಹೆಂಡದಂಗಡಿಗಳೆಂಬ ಇಂದ್ರಜಾಲವನ್ನು ಹೂಡಿ ತಮ್ಮ ಹಣವನ್ನು ದೋಚಿದ್ದಾರೆ[324]. ಈ ಸಭೆಯಲ್ಲಿ ಆಕ್ಷೇಪಾರ್ಹ ಭಾಷಣ ಮಾಡಿದ ಮಂಡ್ಯದ ಸಕ್ಕರೆ ಕಾರ್ಖಾನೆಯ ನೌಕರರಾದ ಶ್ರೀನಿವಾಸರಾವ್‌ರವರ ಕಾರ್ಖಾನೆಯ ಕೆಲಸದಿಂದ

4ನೇ ಡಿಸೆಂಬರ್ 1937ರಂದು ತೆಗೆದುಹಾಕಲಾಯಿತು. ಶ್ರೀನಿವಾಸರಾವ್‌ರವರ ತರುಣ ವಯಸ್ಸಿನಲ್ಲಿ ಜೀವನದಲ್ಲಿ ಉತ್ತಮ ಸ್ಥಾನಮಾನ ಹಾಗೂ ಗೌರವ ಹೊಂದಬೇಕೆಂಬ ಅಭಿಲಾಷೆಯನ್ನು ಹೊಂದಿದ್ದರು. ಆದರೆ ಮೈಸೂರು ಜಿಲ್ಲಾ ನ್ಯಾಯಾಲಯು 124 ಎ ಕಾಯ್ದೆ ಅನ್ವಯ ಕ್ರಮಕೈಗೊಂಡಿದ್ದು ಹಾಗೂ ಇವರ ನಡವಳಿಕೆ ಮೇಲೆ ಸದಾ ಗಮನವಿರಿಸಲಾಯಿತು[325]. ಕಾರ್ಖಾನೆಯ ಮ್ಯಾನೇಜರಾದ ಮಿ॥ ಪೆನ್ನಿಂಗ್‌ರವರು ಕೆಲಸದಿಂದ ತೆಗೆದುಹಾಕಿದರು. ಕೆಲಸದಿಂದ ತೆಗೆದು ಹಾಕಲು ಈ ಕಾರಣಗಳೊಂದಿಗೆ ಪತ್ರದಲ್ಲಿ ತಿಳಿಸಿದರು. ಮಂಡ್ಯದ ಸಕ್ಕರೆ ಕಾರ್ಖಾನೆಯ ಸುಣ್ಣದ ಶಾಖೆಯ ಆಪರೇಟರಾದ ಎಂ.ಎಸ್.ಶ್ರೀನಿವಾಸರಾಯರಿಗೆ ತಿಳಿಸುವುದೇನೆಂದರೆ. ನೀವು ಒಬ್ಬ ಪ್ರಮುಖ ಭಾಷಣಕಾರರಾಗಿದ್ದೀರೆಂದೂ ಮಂಡ್ಯ ಗ್ರಾಮದಲ್ಲಿ ಬಹಿರಂಗ ಭಾಷಣ ಮಾಡಿ ದಿವಾನರನ್ನು ಹೀಯ್ಯಾಳಿಸುತ್ತಲೂ ಸಭಿಕರನ್ನು ಉದ್ರೇಕಪಡಿಸುತ್ತಲೂ ಇರುವರೆಂದೂ ತಿಳಿದು ಬಂದಿದೆ. ನಮ್ಮದು ಸಕ್ಕರೆ ಕಾರ್ಖಾನೆ ಸಕ್ಕರೆಯನ್ನು ತಯಾರು ಮಾಡುವುದರಲ್ಲಿ ಮುತುವರ್ಜಿ ವಹಿಸುವವರು ನಮಗೆ ಬೇಕೇ ವಿನಹ, ರಾಜನೀತಜ್ಞರಲ್ಲ, ಕಾರ್ಖಾನೆಯ ಒಬ್ಬ ನೌಕರನ ಅವ್ಯಾವರ್ತಕತನದಿಂದ ಇಡೀ ಕಾರ್ಖಾನೆಯೇ ಒಂದು ರಾಜದ್ರೋಹದ ಆಪಾದನೆಯಲ್ಲಿ ಸಿಕ್ಕಿನರಳಲು ನಾವು ಸಿದ್ಧರಾಗಿಲ್ಲ. ಆದ್ದರಿಂದ ದುರ್ನಡತೆಯಿಂದ ನಿಮ್ಮನ್ನು ಕೆಲಸದಿಂದ ತೆಗೆದುಹಾಕಿದೆ ನೀವು ಕಾರ್ಖಾನೆಯನ್ನು ಕೂಡಲೇ ಬಿಟ್ಟು ಹೊರಡಬೇಕು. ಪುನಃ ಬರಕೂಡದು ಈ ರೀತಿಯಾಗಿ ಕಾಂಗ್ರೆಸ್ ಚಳವಳಿಯಲ್ಲಿ ಭಾಗವಹಿಸಿದ್ದ ಎಂ.ಎಸ್. ಶ್ರೀನಿವಾಸರಾವ್‌ರವರನ್ನು ರಾಜದ್ರೋಹ ಆಪಾದನೆ ಮೇಲೆ ಕೆಲಸದಿಂದ ತೆಗೆದು ಹಾಕಿದರು[326]. ಸಕ್ಕರೆ ಕಾರ್ಖಾನೆ ಕೆಲಸಗಾರರ ಸಂಘದ ಕಾರ್ಯ ನಿರ್ವಾಹಕ ಮಂಡಲಿಯ ವಿಶೇಷ ಸಭೆಯು ದಿನಾಂಕ 8 ಅಕ್ಟೋಬರ್ 1945ರಂದು ಹೆಚ್.ಕೆ.ವೀರಣ್ಣಗೌಡರ ಅಧ್ಯಕ್ಷತೆಯಲ್ಲಿ ಮಂಡ್ಯದಲ್ಲಿ ಸಭೆ ಜರುಗಿತು. ಸಭೆಯಲ್ಲಿ ಸಕ್ಕರೆ ಕಾರ್ಖಾನೆ ಕೆಲಸಗಾರರ ಸಂಘದ ಸದಸ್ಯರು, ಕಾರ್ಯನಿರ್ವಾಹಕ ಮಂಡಲಿಯ ಸದಸ್ಯರು ಭಾಗವಹಿಸಿದ್ದರು. ಸಭೆಯಲ್ಲಿ ಈ ನಿರ್ಣಯಗಳನ್ನು ಅಂಗೀಕರಿಸಿತು. ಮೈಸೂರು ಕಾಂಗ್ರೆಸ್ ಸಮಿತಿಗಳ ಮೇಲಿರುವ ಪ್ರತಿಬಂಧಕಾಜ್ಞೆಗಳನ್ನು ಹಾಗೂ ಕಾಂಗ್ರೆಸ್ ಮುಖಂಡರ ಮೇಲಿರುವ ಆಜ್ಞೆಗಳನ್ನು ಹಿಂದಕ್ಕೆ ಪಡೆಯಬೇಕೆಂದೂ ಸಭೆಯು ಕೋರಿತು[327].

9 ಮಾರ್ಚ್ 1946ರ ಸಂಜೆ ಮಂಡ್ಯದ ಸಕ್ಕರೆ ಕಂಪನಿಯ ಕೂಲಿಗಾರರು ಚಿನ್ನದ ಗಣಿಯ ಮುಷ್ಕರಕಾರರಿಗೆ ಸಹಾನುಭೂತಿ ತೋರಿಸಲು ಮಂಡ್ಯದಲ್ಲಿ ಸಭೆ ಸೇರಿದ್ದರು. ಹೆಚ್.ಎಸ್.ಮಾಸ್ತೀಗೌಡರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಹೆಚ್.ಸಿ.ದಾಪ್ಪನವರು ತಮ್ಮ ಭಾಷಣದಲ್ಲಿ ಚಿನ್ನದ ಗಣಿಯ ಮುಷ್ಕರಕಾರರು ತಮ್ಮ ನ್ಯಾಯವಾದ ಬೇಡಿಕೆಗಳು ಈಡೇರಿದಿದ್ದುರಿಂದ ಮುಷ್ಕರ ಹೂಡಿರುವವರೆಂದೂ ಮುಂದೆ

ಸರ್ಕಾರವನ್ನು ರಚಿಸಿ ಆಳುವವರು ಕೂಲಿಗಾರರೆಂದೂ ತಿಳಿಸಿದರು. ಹೆಚ್.ಸಿ.ದಾಸಪ್ಪನವರ ಸೂಚನೆಯಂತೆ ಸಕ್ಕರೆ ಕಂಪನಿ ಕೂಲಿಗಾರರು ಗಣಿ ಕೂಲಿಗಾರರಿಗೆ ತಮ್ಮ ಒಂದು ದಿನದ ಕೂಲಿಯನ್ನು ಕೊಡಲು ಒಪ್ಪಿಕೊಂಡರು[328]. 16 ಡಿಸೆಂಬರ್ 1946ರ ಸಾಯಂಕಾಲ ಮಂಡ್ಯದ ಸಕ್ಕರೆ ಕಂಪನಿ ಕೆಲಸಗಾರರ ಸಂಘದ ಸಭೆಯು ಕಾರ್ಖಾನೆಯ ಮುಂಭಾಗದಲ್ಲಿ ಜರುಗಿತು. ಸಂಘದ ಅಧ್ಯಕ್ಷರಾದ ಎಂ.ಮಹಾಬಲರಾವ್‌ರವರ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಕೆ.ಸಿ.ರೆಡ್ಡಿ ಅವರಿಗೆ ಒಂದು ಭಿನ್ನವತ್ತಳೆ ಹಾಗೂ 101 ರೂ. ಗಳ ನಿಧಿಯನ್ನು ಅರ್ಪಿಸಿದರು. ಸಂಘದ ಉಪಾಧ್ಯಕ್ಷರಾದ ಹೆಚ್.ಎಸ್.ಮಾಸ್ತಿಗೌಡರು ಭಿನ್ನವತ್ತಳೆಯನ್ನು ರೆಡ್ಡಿಯವರಿಗೆ ಓದಿ ಒಪ್ಪಿಸಿದರು. ಕೆ.ಸಿ.ರೆಡ್ಡಿಯವರು ಅನಂತರ ಭಿನ್ನವತ್ತಳೆಗೆ ಉತ್ತರವಿತ್ತು ಈ ರೀತಿಯಾಗಿ ಹೇಳಿದರು. ದೇಶದ ಕೆಲಸಗಾರರ ಸ್ಥಿತಿ ತುಂಬಾ ಹೀನಾಯವಾಗಿದೆಯೆಂದು ಹೇಳಿ ಕಾರ್ಮಿಕರ ಹಿತರಕ್ಷಣೆಗಾಗಿ ಕೈಗಾರಿಕೆಗಳೆಲ್ಲಾ ರಾಷ್ಟ್ರೀಕರಣವಾಗಬೇಕು, ದೇಶದಲ್ಲಿ ಕೂಡಲೇ ಜವಾಬ್ದಾರಿ ಸರ್ಕಾರ ಸ್ಥಾಪನೆಯಾಗಬೇಕು ಎಂದು ಒತ್ತಿ ಹೇಳಿದರು. ಸಂಘದ ಮಾಜಿ ಅಧ್ಯಕ್ಷರಾದ ಹೆಚ್.ಕೆ.ವೀರಣ್ಣಗೌಡ ಹಾಗೂ ಕಾರ್ಯದರ್ಶಿ ಎ.ರಾಮಣ್ಣನವರ ಸಭೆಯಲ್ಲಿ ಹಾಜರಿದ್ದರು. ನಂತರ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಕೆ.ಸಿ.ರೆಡ್ಡಿಯವರ ಮಂಡ್ಯ ಜಿಲ್ಲೆಯ ಪ್ರವಾಸ ಸಂದರ್ಭದಲ್ಲಿ ಶ್ರೀರಂಗಪಟ್ಟಣ ತಾಲ್ಲೂಕಿನಿಂದ 747 ರೂ.ಗಳ ಕಾಣಿಕೆಯನ್ನು ಸ್ವೀಕರಿಸಿದರು[329]. ಮಂಡ್ಯದ ಮೈಸೂರು ಸಕ್ಕರೆ ಕಾರ್ಖಾನೆಯ ಕಾರ್ಮಿಕ ಸಂಘದ ಸಾರ್ವಜನಿಕ ಸಭೆಯು ದಿನಾಂಕ 30 ಡಿಸೆಂಬರ್ 1946 ರಂದು ಷುಗರ್ ಕಾಲೋನಿ ಪಾರ್ಕ್‌ನಲ್ಲಿ ಜರುಗಿತು. ಎಂ.ಆರ್.ಮಹಾಬಲರಾವ್ ಅವರ ಅಧ್ಯಕ್ಷತೆ ವಹಿಸಿದ್ದರು. ಮಂಡ್ಯ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಮಳವಳ್ಳಿ ವೀರಪ್ಪ, ಲಿಂಗೇಗೌಡ, ಕೆ.ಪುಟ್ಟಸ್ವಾಮಿ, ಎ.ರಾಮಣ್ಣ, ಹಾಜರಿದ್ದು ಸಭೆಯನ್ನುದ್ದೇಶಿಸಿ ಮಾತನಾಡಿದರು. ಸಭೆಯಲ್ಲಿ ಕೆ.ಹನುಮಂತಯ್ಯನವರನ್ನು ಬಂಧಿಸಿದ್ದನ್ನು ಖಂಡಿಸಲಾಯಿತು[330].

ಮಂಡ್ಯ ಜಿಲ್ಲೆಯ ಸ್ವಾತಂತ್ರ್ಯ ಚಳುವಳಿಯಲ್ಲಿ ಕೆಳವರ್ಗದವರ ಪಾತ್ರ

ಸ್ವಾತಂತ್ರ್ಯ ಚಳುವಳಿಯಲ್ಲಿ ಮಂಡ್ಯ ಜಿಲ್ಲೆಯ ಕೆಳವರ್ಗದವರು ಸಹಿತ ಪ್ರಮುಖ ಪಾತ್ರವನ್ನು ವಹಿಸಿದ್ದಾರೆ. ಕೆಳವರ್ಗದವರು ಸಂಘಟನೆಯ ಮೂಲಕ ಜವಾಬ್ದಾರಿ ಸರ್ಕಾರಕ್ಕಾಗಿ ಹಾಗೂ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಬಂಧಿಸಿದ್ದವರ ಪರವಾಗಿ ಬಿಡುಗಡೆಗೆ ಒತ್ತಾಯಿಸಿ ಮೈಸೂರಿನಲ್ಲಿ ಸಮ್ಮೇಳನ ನಡೆಸಿದರು. 5 ಅಕ್ಟೋಬರ್ 1946 ಮಧ್ಯಾಹ್ನ ಮೈಸೂರಿನ ಸುಬ್ಬರಾಯನ ಕೆರೆಯಲ್ಲಿ ಮೈಸೂರು ಮತ್ತು ಮಂಡ್ಯ ಜಿಲ್ಲೆಗಳ ಕೂಲಿಕಾರರ ಸಮ್ಮೇಳನವು ನೆರವೇರಿತು. ಮಂಡ್ಯ ಮತ್ತು ಮೈಸೂರು ಜಿಲ್ಲೆಯಿಂದ ಸಾವಿರಾರು ಜನ ಕಾರ್ಮಿಕರೂ, ಅವರ ಹಿತೈಷಿಗಳೂ ಬಂದು ಹಾಜರಿದ್ದರು. ಇದೇ

ಸಂದರ್ಭದಲ್ಲಿ ಕೆಲಸಗಾರರು ಮಹಾತ್ಮ ಗಾಂಧಿಯವರ ಭಾವಚಿತ್ರದೊಂದಿಗೆ ಟೌನ್‌ಹಾಲ್ ಮೈದಾನದಿಂದ ಮೆರವಣಿಗೆ ಮಾಡಿಕೊಂಡು, ಜಯಕಾರಗಳನ್ನು ರಾಷ್ಟ್ರ ಘೋಷಣೆಗಳನ್ನು ಮಾಡುತ್ತಾ, ಸುಬ್ಬರಾಯನ ಕೆರೆಗೆ ಬಂದರು. ಟಿ.ಮರಿಯಪ್ಪನವರ ಅಧ್ಯಕ್ಷತೆಯನ್ನು ವಹಿಸಿದ್ದರು. ಲಾವಣಿಯೊಡನೆ ಕಾರ್ಯಕ್ರಮವು ಆರಂಭವಾಯಿತು. ಶ್ರೀಕಂಠಪ್ಪನವರು ಭಾಷಣ ಮಾಡಿ ಸಮ್ಮೇಳನದ ಉದ್ದೇಶಗಳನ್ನು ವಿವರಿಸಿ ಎಲ್ಲರಿಗೂ ಸ್ವಾಗತವನ್ನು ಬಯಸಿದರು.

ಮಂಡ್ಯದಲ್ಲಿ 18 ಡಿಸೆಂಬರ್ 1955 ರಂದು ಮೈಸೂರು ವಿಲೀನ ವಿರೋಧಿ ಸಮ್ಮೇಳನದ ಸಿದ್ಧತೆಗಳು ತ್ವರಿತವಾಗಿ ನಡೆದವು. ಸ್ವಾಗತ ಸಮಿತಿಯ ಪ್ರಕಟಣಾಧಿಕಾರಿಯಾದ ಪಿ.ಎನ್.ಜವರಪ್ಪಗೌಡ 12 ಸಹಸ್ರ ಪ್ರತಿನಿಧಿ ಪತ್ರಗಳನ್ನು ಹಂಚಿದರು ಹಾಗೂ ಇಪ್ಪತ್ತು ಸಹಸ್ರ ಪ್ರತಿನಿಧಿಗಳು ಭಾಗವಹಿಸುವ ನಿರೀಕ್ಷೆಯೊಂದಿಗೆ ಸಿದ್ಧತೆಯನ್ನು ಮುಂದುವರಿಸಿದರು. 18 ಡಿಸೆಂಬರ್ 1955 ರಂದು ಸೇರಬೇಕೆಂದು ಗೊತ್ತು ಮಾಡಲ್ಪಟ್ಟಿತು. ತರುವಾಯ ಸಮ್ಮೇಳನ 1 ಜನವರಿ 1956ಕ್ಕೆ ಮುಂದೂಲ್ಪಟ್ಟಿತ್ತು. ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದ ಕೆ.ವಿ.ಶಂಕರಗೌಡರು ಪತ್ರಿಕಾ ಪ್ರಕಟಣೆ ನೀಡುವ ಮೂಲಕ ಪುನಃ ತಾರೀಖನ್ನು ಬದಲಾಯಿಸಲಾಗುವುದಿಲ್ಲವೆಂದೂ, ಪ್ರತಿನಿಧಿಗಳಾಗಬಯಸುವವರು 22 ಡಿಸೆಂಬರ್ 1955ರ ಸಂಜೆಯೊಳಗಾಗಿ ತಮ್ಮ ಪತ್ರಗಳನ್ನು ಕಳುಹಿಸುವಂತೆ ಮನವಿ ಮಾಡಿದರು[38].

ಡಿಸೆಂಬರ್ 21, 1955ರಂದು ಮಂಡ್ಯದಲ್ಲಿ ಹೆಚ್.ಕೆ.ವೀರಣ್ಣಗೌಡ ಅಧ್ಯಕ್ಷತೆಯಲ್ಲಿ ಹಲವಾರು ಪ್ರದೇಶ ಕಾಂಗ್ರೆಸ್ ಸದಸ್ಯರು ಹಾಗೂ ಶಾಸನಸಭೆ ಸದಸ್ಯರು ಸಭೆ ಸೇರಿದ್ದರು. ಸಭೆಯಲ್ಲಿ ಮೈಸೂರು ವಿಲೀನ ವಿರೋಧಿ ಸಮ್ಮೇಳನ ಬಗ್ಗೆ ವಿಚಾರ ವಿನಿಮಯ ನಡೆಸಿ ಹಾಸನದ ಕೆ.ಲಕ್ಕಪ್ಪನವರನ್ನು ಅಧ್ಯಕ್ಷರಾಗಿ ಚುನಾಯಿಸಿದರು. ಇದೇ ಸಂದರ್ಭದಲ್ಲಿ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಚನ್ನಯ್ಯನವರು ಮೈಸೂರು ವಿಲೀನ ವಿರೋಧಿ ಚಳುವಳಿಯಲ್ಲಿ ಕಾಂಗ್ರೆಸ್ಸಿನವರು ಸೇರಕೂಡದೆಂದು, ಮಂಡ್ಯದ ಸಮ್ಮೇಳನದಲ್ಲಿ ಭಾಗವಹಿಸಿಕೊಡದೆಂದೂ ಮನವಿ ಮಾಡಿದರು[39].

ದಿನಾಂಕ 29 ಡಿಸೆಂಬರ್ 1955 ರಂದು ಕಬ್ಬು ಬೆಳೆಯುವ ರೈತರ ಸಾರ್ವಜನಿಕ ಸಭೆಯು ಮಂಡ್ಯದ ಕಾಳಮ್ಮದೇವಿಯ ದೇವಾಲಯದ ಆವರಣದಲ್ಲಿ ನಡೆಯಿತು. ಕೆ.ಚಿಕ್ಕಲಿಂಗಯ್ಯನವರು ಅಧ್ಯಕ್ಷತೆಯನ್ನು ವಹಿಸಿದ್ದರು. ಸುಮಾರು 2000 ಜನರು ಭಾಗವಹಿಸಿದ್ದರು. ಜೆ.ದೇವಯ್ಯ ಸಭೆಯಲ್ಲಿ ಸೇರಿದವರನ್ನು ಉದ್ದೇಶಿಸಿ ಮಾತನಾಡುತ್ತಾ ಸಂಘಟನೆ ಮೂಲಕ ತಮ್ಮಲ್ಲಿ ಒಗ್ಗಟ್ಟನ್ನು ಉಳಿಸಿಕೊಳ್ಳಬೇಕೆಂದು ಕರೆ ನೀಡಿದರು. ಕೆ.ಚಿಕ್ಕಲಿಂಗಯ್ಯ, ಜೆ.ದೇವಯ್ಯ, ವೆಂಕಟಾಚಾರ್ ಮತ್ತು ನಾರಾಯಣಶೆಟ್ಟಿಯವರು ಒಳಗೊಂಡಿರುವ ಕಮಿಟಿಯನ್ನು ಸಂಘಕ್ಕೆ ಸಂಬಂಧಿಸಿದಂತೆ ಕಾರ್ಯಕೈಗೊಳ್ಳಲು

ರಚಿಸಲಾಯಿತು. ಕರ್ನಾಟಕ ರಾಜ್ಯ ನಿರ್ಮಾಣಕ್ಕೆ ಸಂಬಂಧಿಸಿದಂತೆ ಜೆ.ದೇವಯ್ಯ ಕಾಂಗ್ರೆಸ್ ಹೈ–ಕಮಾಂಡ್ ಸೂಚಿಸಿದಂತೆ ನಡೆದುಕೊಳ್ಳೋಣ ಮತ್ತು ಸಾರ್ವಜನಿಕರು ಕರ್ನಾಟಕ ರಚನೆಯನ್ನು ಸ್ವಾಗತಿಸುತ್ತಾರೆಂದು ಆಶಿಸಿದರು[40].

ದಿನಾಂಕ 1 ಜನವರಿ 1956ರಂದು ಮಂಡ್ಯದಲ್ಲಿ ಸೇರುವ ಮೈಸೂರು ವಿಲೀನ ವಿರೋಧ ಸಮ್ಮೇಳನದಲ್ಲಿ ಭಾಗವಹಿಸುವವರಿಗೆ ವಿಶೇಷ ರೈಲು ವ್ಯವಸ್ಥೆ ಮಾಡಲಾಯಿತು. ಎಂ.ಸಿ.ನರಸಿಂಹಯ್ಯನವರು ಪತ್ರಿಕೆಗಳಲ್ಲಿ ಪ್ರಕಟಣೆ ನೀಡಿದರು. ಸ್ವಾಧಿ ಪತ್ರಿಕೆಯಲ್ಲಿ ಈ ರೀತಿಯಾಗಿ ಪ್ರಕಟಣೆ ನೀಡಲಾಗಿತ್ತು. ಸಮ್ಮೇಳನಕ್ಕೆ ಹೋಗುವವರ ಸೌಕರ್ಯಕ್ಕಾಗಿ ಬೆಳ್ಳಿಗೆ 8 ಗಂಟೆಗೆ ಮಂಡ್ಯ ವಿಶೇಷ ರೈಲು ಮೈಸೂರಿನಿಂದ ಮಂಡ್ಯಕ್ಕೆ ಹೊರಟು ರಾತ್ರಿ 8 ಗಂಟೆಗೆ ಮಂಡ್ಯದಿಂದ ವಾಪಸ್ಸು ಬರುವಂತೆ ಏರ್ಪಡಿಸಲಾಗಿದೆಯೆಂದೂ ರಿಯಾಯಿತಿ ಪಡೆಯಲಿಚ್ಚಿಸುವವರು 31 ಡಿಸೆಂಬರ್ 1955 ಸಂಜೆ 5 ರಿಂದ 8 ಗಂಟೆವರೆಗೆ ಪತ್ರಿಕೆ ಕಛೇರಿಯಲ್ಲಿ ಭೇಟಿ ಮಾಡಬಹುದೆಂದರು[41].

ಮಂಡ್ಯದಲ್ಲಿ ಮೈಸೂರು ವಿಲೀನ ವಿರೋಧ ಸಮ್ಮೇಳನಕ್ಕೆ 1 ಜನವರಿ 1956ರಂದು ಸುತ್ತಮುತ್ತಲ ಪ್ರದೇಶಗಳಿಂದ ತಂಡ ತಂಡವಾಗಿ ರೈತರು ಬಂದು ಸೇರಿದ್ದರು. ಸುಮಾರು 6000 ಜನ ಸಮಾವೇಶದಲ್ಲಿ ಪಾಲ್ಗೊಂಡಿದ್ದರು. ಪ್ರತಿಯೊಬ್ಬ ಪ್ರತಿನಿಧಿಯಿಂದ 1 ರೂಪಾಯಿಯಂತೆ ಒಟ್ಟು 11,626 ರೂಪಾಯಿಗಳನ್ನು ಸಂಗ್ರಹಿಸಲಾಗಿತ್ತು. ಮಂಡ್ಯ ನಗರದಲ್ಲೆಲ್ಲಾ "ಮೈಸೂರನ್ನುಳಿಸಿ" ಎಂಬ ಪೋಸ್ಟರ್‌ಗಳನ್ನು ಅಂಟಿಸಲಾಗಿತ್ತು. ರೈಲ್ವೆಗಳಲ್ಲಿಯೂ, ಬಸ್ಸುಗಳು ಮೂಲಕವಾಗಿಯೂ ನಾಲ್ಕುನೂರು ಜನರಿಗೆ ವಿಲೀನ ವಿರೋಧ ಸಮ್ಮೇಳನಕ್ಕೆ ಹೋಗಿ ಬರುವ ಉಚಿತ ಪ್ರಯಾಣದ ಸೌಕರ್ಯವನ್ನು ನಗರದ ಕೆಲವು ಮಹನೀಯರ ಸಹಾಯದಿಂದ ನೀಡಲಾಯಿತು. ಸ್ವಂತ ಖರ್ಚಿನಿಂದ ಸಮ್ಮೇಳನಕ್ಕೆ ಸಾವಿರಕ್ಕೂ ಮಿಗಿಲಾಗಿ ಜನರು ಬಂದು ಭಾಗವಹಿಸಿದ್ದರು. ಬೆಂಗಳೂರು ಪ್ಯಾಸೆಂಜರ್ ಟ್ರೈನ್‌ಗೆ ಮೈಸೂರಿನ ಗಂಡ ಭೇರುಂಡ ಧ್ವಜ, ರಾಷ್ಟ್ರಧ್ವಜ, ಮೈಸೂರು ಸಂಸ್ಥಾನ ಪ್ರತ್ಯೇಕವಾಗಿ ಉಳಿಯಲಿ ಎಂದು ನಾಮಫಲಕಗಳು ಮತ್ತು ತಳಿರುಗಳಿಂದ ಅಲಂಕೃತಗೊಳಿಸಲಾಗಿತ್ತು. ಮೈಸೂರು ಪ್ರತ್ಯೇಕವಾಗಿ ಉಳಿಯಲಿ, ರಾಜ ಪ್ರಮುಖರ ಸ್ಥಾನಮಾನಗಳು ವಂಶಪಾರಂಪರ್ಯವಾಗಿ ಮುಂದುವರಿಯಲಿ ಎಂದು ಜಯಘೋಷಗಳ ಮೂಲಕ ಜನರು ಸಮ್ಮೇಳನದಲ್ಲಿ ಭಾಗವಹಿಸಿದ್ದರು[42].

ಮೈಸೂರು ಸಂಸ್ಥಾನದ ವಿವಿಧ ಭಾಗಗಳಿಂದ 2000 ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು. ಬೆಳಗ್ಗೆ 8.45 ಘಂಟೆಗೆ ಮಂಡ್ಯ ಒಕ್ಕಲಿಗರ ವಿದ್ಯಾರ್ಥಿ ನಿಲಯದ ಆವರಣದಲ್ಲಿ ಹೆಚ್.ಕೆ.ವೀರಣ್ಣಗೌಡ ರಾಷ್ಟ್ರಧ್ವಜಾರೋಹಣ ಮಾಡಿ ಧ್ವಜದ ಹಿರಿಮೆಯನ್ನು ವಿವರಿಸಿದರು. ಮತ್ತು ಎಲ್ಲ ರಾಷ್ಟ್ರದ ಭಾಗಗಳಿಗೂ ಸಮಾನವಾದ

ಗೌರವವನ್ನು ನೀಡಬೇಕೆಂದು ಸೂಚಿಸಿದರು. ಮೈಸೂರಿನ ವೈಶಿಷ್ಟ್ಯವನ್ನು ಅವರು ತಿಳಿಸಿ ಆಡಳಿತದ ಹಿತದೃಷ್ಟಿಯಿಂದ ಮೈಸೂರು ಕರ್ನಾಟಕದಲ್ಲಿ ಐಕ್ಯವಾಗುವುದು ಸರಿಯಲ್ಲವೆಂದು ಸೂಚಿಸಿದರು. ನಂತರ 10.30 ಗಂಟೆಗೆ ನಗರದ ಬೀದಿಗಳಲ್ಲಿ ಸಮ್ಮೇಳನದ ಅಧ್ಯಕ್ಷರಾದ ಲಕ್ಕಪ್ಪನವರನ್ನು ತೆರೆದ ಕಾರಿನಲ್ಲಿ ಮೆರವಣಿಗೆ ಮಾಡಲಾಯಿತು. ಮಾರ್ಗ ಮಧ್ಯದಲ್ಲಿ ಅನೇಕ ಕಡೆ ಹಾರ ತುರಾಯಿಗಳನ್ನು ಅರ್ಪಿಸಲಾಯಿತು. ಎಚ್.ಕೆ.ವೀರಣ್ಣಗೌಡ, ಕೆ.ವಿ.ಶಂಕರಗೌಡ ಮುಂತಾದವರು ಮೆರವಣಿಗೆಯ ಮುಂದೆ ಕಾಲ್ನಡಿಗೆಯಲ್ಲಿ ಹೋಗುತ್ತಿದ್ದರು. 11 ಗಂಟೆಗೆ ಸರಿಯಾಗಿ ಸಮ್ಮೇಳನದ ಚಪ್ಪರದಬಳಿ ಅಧ್ಯಕ್ಷರು ಬಂದಾಗ ಕೆ.ವಿ.ಶಂಕರಗೌಡ ಮುಂತಾದ ನಾಯಕರು ಅವರನ್ನು ಸ್ವಾಗತಿಸಿದರು. ಸದ್ಗುರು ಸೇವಾ ಸಂಗೀತ ಶಾಲೆಯವರಿಂದ ಪ್ರಾರ್ಥನೆಯೊಡನೆ ಸಮ್ಮೇಳನವು ಆರಂಭವಾಯಿತು. ವೇದಿಕೆಯ ಮೇಲೆ ಹೆಚ್.ಕೆ.ವೀರಣ್ಣಗೌಡ, ಹುಚ್ಚುಮಾಸ್ತಿಗೌಡ, ಕೆ.ವಿ.ಶಂಕರಗೌಡ ಮುಂತಾದ ನಾಯಕರುಗಳು ಕುಳಿತಿದ್ದರು. ನಂತರ ಸ್ವಾಗತ ಸಮಿತಿಯ ಅಧ್ಯಕ್ಷ ಕೆ.ವಿ.ಶಂಕರಗೌಡರು ಭಾಷಣ ಮಾಡಿ ಮೈಸೂರಿನ ಇತಿಹಾಸದಲ್ಲಿ ಮೊಟ್ಟ ಮೊದಲನೆ ಬಾರಿಗೆ ಇಂತಹ ಸಮ್ಮೇಳನವು ನಡೆಯುತ್ತಿರುವುದಾಗಿಯೂ, ಇದಕ್ಕೆ ಅನೇಕ ರೀತಿಯ ಎಡರು ತೊಡರುಗಳನ್ನು ವಿರೋಧಿಗಳು ತಂದೊಡ್ಡುತ್ತಿರುವರೆಂದೂ ತಿಳಿಸಿದರು. ಸಮ್ಮೇಳನದ ಧ್ಯೇಯಗಳನ್ನು ಅವರು ವಿವರಿಸಿ, ಮುಖ್ಯಮಂತ್ರಿಗಳು ಮತ್ತು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ದಾಕ್ಷಿಣ್ಯಕ್ಕಾಗಿ ಜನತೆ ತನ್ನ ನಿಜವಾದ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿಲ್ಲವೆಂದು ತಿಳಿಸಿದರು[43]. ತಮ್ಮ ಸ್ವಾಗತ ಭಾಷಣದಲ್ಲಿ ಅಖಂಡ ಮೈಸೂರು ರಾಜ್ಯದ ರಚನೆ ಸುಖೀರಾಜ್ಯ ಸ್ಥಾಪನೆಯ ದೃಷ್ಟಿಯಿಂದ, ಆಡಳಿತ ಸೌಕರ್ಯ ದೃಷ್ಟಿಯಿಂದ, ಮೈಸುರು ಸಂಸ್ಥಾನದ ಪರಂಪರೆಯ ದೃಷ್ಟಿಯಿಂದ ಜನತೆಯ ಹಿತದೃಷ್ಟಿಯಿಂದ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ರಾಜಕೀಯ ದೃಷ್ಟಿಯಿಂದ ಮತ್ತು ಎಲ್ಲಾ ವಾಸ್ತವಿಕದೃಷ್ಟಿಯಿಂದ ಧರ್ಮವಾದುದಲ್ಲ, ನ್ಯಾಯವಾದುದಲ್ಲ ಮತ್ತು ವಿಹಿತವಾದುದಲ್ಲವೆಂದರು.[43A]

ಅಧ್ಯಕ್ಷರು ಮಾತನಾಡುತ್ತಾ ಮೈಸೂರು ರಾಜ್ಯ ಪ್ರತ್ಯೇಕವಾಗಿ ಇರಲು ಸಾರ್ವಜನಿಕರು ಬೆಂಬಲ ನೀಡುವಂತೆ ಮನವಿ ಮಾಡಿದರು ಮತ್ತು ಹೈಕಮಾಂಡ್ ಕಾಂಗ್ರೆಸ್‌ನವರಿಗೆ ನೀಡಿದ ನಿರ್ದೇಶನವನ್ನು ಮರುಪರಿಶೀಲಿಸುವಂತೆ ಮನವಿ ಮಾಡಿದರು. ನೀಲಗಿರಿ ಸಂಜೀವಯ್ಯ ಮತ್ತು ಶಿವಮೊಗ್ಗದ ರಾಮಕೃಷ್ಣ ಇದೇ ಅಭಿಪ್ರಾಯ ವ್ಯಕ್ತಪಡಿಸಿದರು. ಅಧ್ಯಕ್ಷರು ಇದೇ ವಿಷಯಕ್ಕೆ ಸಂಬಂಧಿಸಿದಂತೆ ಸಂಸ್ಥಾನದ ಪ್ರತಿಯೊಂದು ಜಿಲ್ಲೆಯ ಸದಸ್ಯರನ್ನೊಳಗೊಂಡ ವಿಷಯ ನಿಯಾಮಕ ಸಮಿತಿ ರಚಿಸಿದರು.

ಬೆಂಗಳೂರು ಜಿಲ್ಲೆಯ ಸಮಿತಿಗೆ ಸದಸ್ಯರಾಗಿ ವಿ.ವೆಂಕಟಪ್ಪ, ಆರ್.ಶ್ರೀನಿವಾಸಯ್ಯ,, ಬಿ.ಕೆ.ಪುಟ್ಟರಾಮಯ್ಯ, ಬೆಂಗಳೂರು ನಗರದ ಸಮಿತಿಗೆ ಸದಸ್ಯರಾಗಿ ಕೆ.ಪಿ.ಮುದ್ದಪ್ಪ, ಮೈಸೂರು ಜಿಲ್ಲೆಯ ಸಮಿತಿಗೆ ಸದಸ್ಯರಾಗಿ ಎ.ರಾಮಣ್ಣ, ಎಚ್.ನಿರಂಜನರಾಜ್ ಅರಸ್, ಹಾಸನ ಜಿಲ್ಲೆಯ ಸಮಿತಿಗೆ ಸದಸ್ಯರಾಗಿ ಎಲ್.ಟಿ.ಕಾರ್ಲೆ, ಜಿ.ಆರ್.ಕರಿಗೌಡ, ಚಿಕ್ಕಮಗಳೂರು ಜಿಲ್ಲೆಯ ಸಮಿತಿಗೆ ಸದಸ್ಯರಾಗಿ ಎನ್.ಪಿ.ಗೋವಿಂದೇಗೌಡ, ಚಂದ್ರಯ್ಯಹೆಗ್ಗಡೆ, ಶಿವಮೊಗ್ಗ ಜಿಲ್ಲೆಯ ಸಮಿತಿಗೆ ಸದಸ್ಯರಾಗಿ ರಾಮಕೃಷ್ಣರಾವ್, ಎಸ್.ಆರ್.ನಾಗಪ್ಪಶೆಟ್ಟಿ, ತುಮಕೂರು ಜಿಲ್ಲೆಯ ಸಮಿತಿಗೆ ಸದಸ್ಯರಾಗಿ ಎನ್.ಹುಚ್ಚಮಾಸ್ತಿಗೌಡ, ಟಿ.ಎನ್.ಮೂಡಲಗಿರಿಗೌಡ, ಮಂಡ್ಯ ಜಿಲ್ಲೆಯ ಸಮಿತಿಗೆ ಸದಸ್ಯರಾಗಿ ಹೆಚ್.ಕೆ.ವೀರಣ್ಣಗೌಡ, ಕೆ.ವಿ.ಶಂಕರಗೌಡ, ಬಿ.ವೈ.ನೀಲೇಗೌಡ, ಕೋಲಾರ ಜಿಲ್ಲೆಯ ಸಮಿತಿಗೆ ಸದಸ್ಯರಾಗಿ ಕೆ.ಹೆಚ್.ತಿಮ್ಮಯ್ಯ, ಪಾಪಣ್ಣ, ಚಿತ್ರದುರ್ಗ ಜಿಲ್ಲೆಯ ಸಮಿತಿಗೆ ಸದಸ್ಯರಾಗಿ ಬಿ.ಎಲ್.ಗೌಡ, ಜಿ.ಅಂಜನಪ್ಪರನ್ನು ನೇಮಕ ಮಾಡಲಾಯಿತು[44].

ಮೈಸೂರು ವಿಲೀನ ವಿರೋಧಿ ಸಮಾವೇಶದಲ್ಲಿ ಈ ಕೆಳಕಂಡ ನಿರ್ಣಯಗಳನ್ನು ಅಂಗೀಕರಿಸಲಾಯಿತು.

1. ಭವಿಷ್ಯದಲ್ಲಿ ಮೈಸೂರನ್ನೊಳಗೊಂಡ ಏಕೀಕೃತ ಕರ್ನಾಟಕ ರಚನೆಗೆ ಸಂಬಂಧಿಸಿದಂತೆ ರಾಜ್ಯ ಪುನರ್ ವಿಂಗಡಣಾ ಆಯೋಗದ ಸೂಚನೆಗಳನ್ನು ಬಲವಾಗಿ ಟೀಕಿಸಿದ್ದಲ್ಲದೇ ಮೈಸೂರಿಗೆ ಇದು ಹಾನಿಕರ ಹೀಗಾಗಿ ಅದು ಮೊದಲಿನಂತೆ ಉಳಿಯಲಿ.

2. ಮೈಸೂರಿನ ಉತ್ತರ ಮತ್ತು ದಕ್ಷಿಣಕ್ಕೆ ಇರುವ ಜನರು ಒಪ್ಪಿದರೆ ಮೈಸೂರಿಗೆ ಸೇರ್ಪಡೆಯಾಗುವುದನ್ನು ಸ್ವಾಗತಿಸುವುದು.

3. ರಾಜ್ಯ ಪುನರ್ ವಿಂಗಡನಾ ಆಯೋಗದ ಸೂಚನೆಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಲು ಎಲ್ಲಾ ಸದಸ್ಯರಿಗೆ ಇನ್ನೊಂದು ಅವಕಾಶ ನೀಡುವುದು.

4. ಮೈಸೂರಿನಿಂದ ಹೊರಗೆ ವಾಸಿಸುತ್ತಿರುವ ಕನ್ನಡಿಗರು ಅವರಷ್ಟಕ್ಕೆ ಪ್ರತ್ಯೇಕ ರಾಜ್ಯ ರಚಿಸಿಕೊಳ್ಳಲು ಮನವಿ ಮಾಡುವುದು ಮತ್ತು ಈ ಸಮಾವೇಶದ ಪರವಾಗಿ ಬೆಂಬಲ ನೀಡುವುದು.

5. ಗೌರವಾನ್ವಿತ ಮೈಸೂರಿನ ಮಹಾರಾಜರು ಮೈಸೂರು ಸಂಸ್ಥಾನದ ರಾಜರಾಗಿ ಮುಂದುವರೆಯುವುದು.

6. ವಿಷಯ ನಿಯಾಮಕ ಸಮಿತಿಯ ಅಧ್ಯಕ್ಷರಾದ ಹೆಚ್.ಕೆ.ವೀರಣ್ಣಗೌಡ ಹಾಗೂ ಸಮಿತಿಯ 25 ಸದಸ್ಯರಿಗೆ ಸಮಾವೇಶದ ನಿರ್ಣಯಗಳನ್ನು ಜಾರಿಗೆ ತರುವ ಅಧಿಕಾರ ನೀಡುವುದು.

7. ಕಾಶ್ಮೀರ ಮತ್ತು ಗೋವಾ ಪ್ರದೇಶದ ಸಮಸ್ಯೆ ಬಗೆಹರಿಯುವವರೆಗೆ ರಾಜ್ಯಪುನರ್ ವಿಂಗಡಣಾ ಆಯೋಗದ ಶಿಫಾರಸ್ಸುಗಳನ್ನು ಜಾರಿಗೆ ತರುವುದನ್ನು ಮುಂದೂಡುವುದು.

8. ರಾಜ್ಯ ಪುನರ್ ವಿಂಗಡಣಾ ಆಯೋಗದ ವರದಿಯನ್ನು ಅಂಗೀಕರಿಸುವುದರಿಂದ ಒಕ್ಕಲಿಗರು ಮತ್ತು ಲಿಂಗಾಯಿತ ಸಮುದಾಯದ ಮಧ್ಯೆ ಅಹಿತಕರ ಭಾವನೆ ತರುತ್ತಿದೆ ಎಂದು ವರದಿಯನ್ನು ಖಂಡಿಸಲಾಯಿತು[45].

ಕರ್ನಾಟಕ ಏಕೀಕರಣದ ಬಗ್ಗೆ ಅಂದಿನ ಕರ್ನಾಟಕ ನಾಯಕ ವರ್ಗದಲ್ಲೇ ಸ್ಪಷ್ಟತೆ ಇರಲಿಲ್ಲ. ಪರಸ್ಪರರ ನಡುವೆ ಇದ್ದ ವೈಯಕ್ತಿಕ ಭಿನ್ನಾಭಿಪ್ರಾಯದ ಜೊತೆಗೆ ಜಾತಿಯ ಹಿತಾಸಕ್ತಿಗಳ ಪ್ರಭಾವ, ಅಧಿಕಾರ ಲಾಲಸೆ ಎದ್ದು ಕಾಣತೊಡಗಿತು. ಇದರ ಜೊತೆಗೆ ಕೇಂದ್ರಿಯ ನಾಯಕರಲ್ಲಿನ ಅಸ್ಪಷ್ಟತೆ, ಇದರೊಂದಿಗೆ ಭಾಷಾವಾರು ಪ್ರಾಂತಗಳು ರಾಷ್ಟ್ರೀಯ ಹಿತಾಸಕ್ತಿಗೆ ಮಾರಕವಾಗುತ್ತದೆಂಬ ಭಯ ವಿಶಾಲ ಕರ್ನಾಟಕ ರಚನೆಗೆ ಶ್ರಮಿಸಿದರೆ, ಕಡಿದಾಳ ಮಂಜಪ್ಪ ಕೇವಲ ಭಾಷೆಯ ಆಧಾರದ ಮೇಲೆ ರಾಜ್ಯಗಳನ್ನು ಪುನರಚನೆ ಮಾಡುವುದು ರಾಷ್ಟ್ರದ ಐಕ್ಯತೆಯ ದೃಷ್ಟಿಯಿಂದ ಯುಕ್ತವಲ್ಲ ಎಂದರು. ವಿಶಾಲ ಕರ್ನಾಟಕ ರಾಜ್ಯ ಸ್ಥಾಪನೆ ಕೆಂಗಲ್ ಹನುಮಂತಯ್ಯ ನಿರಂತರವಾಗಿ ಪ್ರಯತ್ನಿಸಿದರೆ, ಹೆಚ್.ಕೆ.ವೀರಣ್ಣಗೌಡ ಎರಡು ಕರ್ನಾಟಕಕ್ಕೆ ಪಣ ತೊಟ್ಟಿದ್ದರಂತೆ ಕಂಡು ಬಂದಿತು[46].

ಇದರ ಪರಿಣಾಮವಾಗಿ ಮೈಸೂರು ವಿಲೀನ ವಿರೋಧಿ ಸಮ್ಮೇಳನ 1956 ಜನವರಿ 1 ರಂದು ಮಂಡ್ಯದಲ್ಲಿ ಹೆಚ್.ಕೆ.ವೀರಣ್ಣಗೌಡ, ಪಿ.ಎನ್.ಜವರಪ್ಪಗೌಡ, ಕೆ.ವಿ.ಶಂಕರಗೌಡ, ಎನ್.ಹುಚ್ಚಮಾಸ್ತಿಗೌಡ, ಕೆ.ಲಕ್ಕಪ್ಪಗೌಡ ಮೊದಲಾದ ನಾಯಕರ ನೇತೃತ್ವದಲ್ಲಿ ಯಶಸ್ವಿಯಾಗಿ ನಡೆಯಿತು. ಆದರೆ ನಾಯಕರ ಬದಲಾದ ನಿಲುವಿನಿಂದ ಮೈಸೂರು ವಿಲೀನ ವಿರೋಧಿ ಚಳುವಳಿಗೆ ಸೋಲಾಯಿತು. ಇದರಿಂದ ಅಂತಿಮವಾಗಿ ಚಳುವಳಿಯು ಅಖಂಡ ಕರ್ನಾಟಕ ಏಕೀಕರಣದ ನಿಲುವಿಗೆ ವಿಧಿ ಇಲ್ಲದೇ ಬದ್ಧವಾಗಬೇಕಾಯಿತು[47].

ಮಂಡ್ಯ ಜಿಲ್ಲೆಯಲ್ಲಿ ಏಕೀಕರಣದ ಪರ ಮತ್ತು ವಿರೋಧಿ ನಿಲುವುಗಳು

1 ಜನವರಿ 1956 ರಂದು ಮಂಡ್ಯದಲ್ಲಿ ಮೈಸೂರು ವಿಲೀನ ವಿರೋಧ ಸಮ್ಮೇಳನ ನಡೆಯಿತು. ನಗರದಲ್ಲೆಲ್ಲಾ "ಮೈಸೂರನ್ನುಳಿಸಿ" ಎಂಬ ಭಿತ್ತಿಚಿತ್ರ ಅಂಟಿಸಲಾಗಿತ್ತು. ಇದಕ್ಕೆ ಪ್ರತಿಯಾಗಿ ವಿಶಾಲ ಮೈಸೂರಾಗಬೇಕೆಂದು ಸೂಚಿಸುವ ಸಾವಿರಾರು ಹಸ್ತ ಪತ್ರಿಕೆಗಳನ್ನು ಕೂಡ ಅಂಟಿಸಲಾಗಿತ್ತು. 1 ಜನವರಿ 1956 ನಂತರದ ದಿನಗಳಲ್ಲಿ ಮಂಡ್ಯದಲ್ಲಿ ಏಕೀಕರಣ ಪರ ಮತ್ತು ವಿರೋಧ ನಿಲುವುಗಳ ಗುಂಪುಗಳಲ್ಲಿ ಚಟುವಟಿಕೆಗಳು ತೀವ್ರಗೊಂಡವು. ಏಕೀಕರಣ ಪರದ ತಂಡದಲ್ಲಿ ವಿಶಾಲ ಮೈಸೂರು ಪ್ರಾಂತ ರಚನೆಯ ಬಗ್ಗೆ ಒಲುವನ್ನು ಹೊಂದಿದ್ದರೆ ಏಕೀಕರಣ ವಿರೋಧಿ ತಂಡದಲ್ಲಿ ಮೈಸೂರು ಸಂಸ್ಥಾನವನ್ನು ಯಥಾಸ್ಥಿತಿ ಉಳಿಸಿಕೊಳ್ಳಲು ನಿರಂತರ ಪ್ರಯತ್ನಗಳನ್ನು ಮುಂದುವರಿಸಿದರು[48].

ವಿಲೀನ ವಿರೋಧಿ ಸಮ್ಮೇಳನ ನಡೆಯುವ ಪೂರ್ವದಲ್ಲಿಯೇ ಮಂಡ್ಯಜಿಲ್ಲೆಯ ಕೆಲವು ಭಾಗಗಳಲ್ಲಿ ಏಕೀಕರಣ ಪರವಾಗಿ ಸಭೆಗಳು ನಡೆದವು. ಅವುಗಳಲ್ಲಿ ಪ್ರಮುಖವಾಗಿ 28ನೇ ಅಕ್ಟೋಬರ್ 1955ರಂದು ಮಂಡ್ಯಜಿಲ್ಲೆಯ ನಾಗಮಂಗಲದಲ್ಲಿ ಎಸ್.ಗುರುಪ್ಪಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ನಡೆಯಿತು. ಸುಮಾರು 150 ಜನರು ಭಾಗವಹಿಸಿದರು. ಎನ್.ಹೆಚ್.ಹನುಮಯ್ಯ, ಬಿ.ವಿ.ಶಾಮಣ್ಣ, ದವಸಧಾನ್ಯಗಳ ವ್ಯಾಪಾರಿ ಸಂಘದ ಅಧ್ಯಕ್ಷರಾದ ಚನ್ನವೀರಪ್ಪನವರು ಏಕೀಕರಣ ಕರ್ನಾಟಕ ರಾಜ್ಯ ನಿರ್ಮಾಣದ ಪರವಾಗಿ ಮಾತನಾಡಿದರು. ಹಾಗೂ ಎರಡು ಕರ್ನಾಟಕ ರಾಜ್ಯಗಳ ಪ್ರತಿಪಾದನೆಯನ್ನು ಟೀಕಿಸಿದರು[49]. 21 ನವಂಬರ್ 1955 ರಂದು ಪ್ರಜಾಸಮಾಜವಾದಿ ಸದಸ್ಯರ ಸಭೆಯು ಪಾಂಡವಪುರ ತಾಲ್ಲೂಕು ಮೇಲುಕೋಟೆಯಲ್ಲಿ ವೇದಾಂತ ಹೆಮ್ಮಿಗೆಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಕರ್ನಾಟಕದ ಪರ ವಾದ ಮಾಡುವವರ ಮೇಲೆ ವಿರೋಧಿಗಳು ನಡೆಸುತ್ತಿರುವ ಅನುಚಿತ ಅಶಾಂತಿ ವರ್ತನೆಯನ್ನು ಖಂಡಿಸುವ ನಿರ್ಣಯವನ್ನು ಸಭೆಯಲ್ಲಿ ಮಾಡಲಾಯಿತು. ಕನ್ನೇಗೌಡನ ಕೊಪ್ಪಲಿನ ನಾರಾಯಣಸ್ವಾಮಿ, ಮೇಲುಕೋಟೆಯ ಪೌರ ಸಭಾಧ್ಯಕ್ಷರ ಸಂಪತ್ತುಕುಮಾರಚಾರ್‌ರವರ ಕರ್ನಾಟಕ ಏಕೀಕರಣ ಪರವಾಗಿ ಭಾಷಣ ಮಾಡಿದರು[50].

16 ನವಂಬರ್ 1955ರಲ್ಲಿ ಕೆ.ಹನುಮಂತಯ್ಯನವರು ಭಾಷಣ ಮಾಡುತ್ತಾ ಕರ್ನಾಟಕ ಏಕೀಕರಣವಾದಿಗಳಲ್ಲಿ ನನಗೆ ಸ್ನೇಹಿತರು ಇದ್ದಾರೆ. ದ್ವಿಕರ್ನಾಟಕಕ್ಕಾಗಿ ವಾದಿಸತಕ್ಕ ಗುಂಪಿನಲ್ಲೂ ನನಗೆ ಸ್ನೇಹಿತರು ಇದ್ದಾರೆ. ಏಕೀಕರಣದಿಂದ ಹಳೆಯ ಮೈಸೂರಿಗೆ ನಷ್ಟವಾಗುತ್ತದೆ. ಇತರ ಕನ್ನಡ ಭಾಗಗಳು ಮೈಸೂರಿನಷ್ಟು ವಿದ್ಯಾಸಂಸ್ಥೆ, ಕೆರೆಕಟ್ಟೆ, ನೀರಾವರಿ, ರಸ್ತೆ, ಆಸ್ಪತ್ರೆ ಮುಂತಾದವುಗಳಲ್ಲಿ ಮುಂದುವರೆಯದೆ ತುಂಬ

[illegible]

ಹಿಂದೆ ಬಿದ್ದಿವೆ. ಅವುಗಳನ್ನೆಲ್ಲಾ ಹಳೆಯ ಮೈಸೂರು ಮಟ್ಟಕ್ಕೆ ತರಲು ಬಹಳ ಹಣ ಬೇಕಾಗುತ್ತದೆ. ಆದ್ದರಿಂದ ಹಳೆಯ ಮೈಸೂರಿನ ಅಭಿವೃದ್ಧಿ ಕಾರ್ಯಗಳು ಕುಂಠಿತಗೊಳ್ಳುತ್ತವೆ. ಪ್ರಾಂತ್ಯ ಆರ್ಥಿಕವಾಗಿ ಸ್ವಾವಲಂಬಿಯಾಗಲಾರದು ಎಂಬ ಭಯ ಅನೇಕರಲ್ಲಿ ಪ್ರಾಮಾಣಿಕವಾಗಿ ಉಂಟಾಗಿದೆ ಎಂದರು[51].

ಹೀಗೆ ವಿಶಾಲ ಮೈಸೂರು ರಾಜ್ಯ ನಿರ್ಮಾಣದ ಕುರಿತು ಮಂತ್ರಿಗಳೇ ವಿರೋಧಿಸಿ ಭಿನ್ನಾಭಿಪ್ರಾಯ ಉಂಟಾಗಿ ಕಾಂಗ್ರೆಸ್ ಪಕ್ಷದ ಶಾಸಕರು ಶಾಸನಸಭೆಯಲ್ಲಿ ಏಕೀಕರಣ ಪರ ಮತ್ತು ವಿರೋಧವಾಗಿ ಅಭಿಪ್ರಾಯ ವ್ಯಕ್ತಪಡಿಸುವ ಗುಂಪುಗಳಾದವು. ನಂತರದ ದಿನಗಳಲ್ಲಿ ವಿಶಾಲ ಮೈಸೂರು ಪ್ರಾಂತ ರಚನೆಯ ಬಗ್ಗೆ ಜನತೆ ಸೂಕ್ತ ತಿಳುವಳಿಕೆಯನ್ನು ನೀಡಲು ದಿನಾಂಕ 18 ಜನವರಿ 1956ರಂದು ಮಂಡ್ಯನಗರದಲ್ಲಿ ಸಭೆ ನಡೆಯಿತು. ವಿಧಾನಪರಿಷತ್ತಿನ ಸದಸ್ಯರಾದ ಜೆ.ದೇವಯ್ಯನವರು ಅಧ್ಯಕ್ಷತೆಯನ್ನು ವಹಿಸಿದ್ದರು. ಸುಮಾರು 300ಮಂದಿ ಪ್ರಮುಖರು ಸಭೆಯಲ್ಲಿ ಭಾಗವಹಿಸಿದ್ದರು. ಕೆ.ಚಿಕ್ಕಲಿಂಗಯ್ಯ, ಅನಂತರಾಮಭಟ್ಟ ಮತ್ತು ಎಂ.ಆರ್.ಎನ್.ಶಾಸ್ತ್ರಿ ಮುಂತಾದವರು ಭಾಷಣ ಮಾಡಿ ಎಲ್ಲಾ ಕನ್ನಡ ಭಾಗಗಳ ವಿಶಾಲವಾದ ಒಂದು ಪ್ರಾಂತ ರಚನೆಯ ಬಗ್ಗ ಸಂಶಯ ಬರುವ ರೀತಿಯಲ್ಲಿ ಹಲವರು ಅಲ್ಲಲ್ಲಿ ಅಪಪ್ರಚಾರ ಮಾಡಿದ್ದರೆಂದು ಆ ಬಗ್ಗ ಸರಿಯಾದ ವಿಷಯಗಳನ್ನು ಜನತೆಯ ಮುಂದೆ ಮಂಡಿಸಬೇಕಾದ್ದು ಅಗತ್ಯವೆಂದು ತಿಳಿಸಿದರು[52].

ಸಭೆಯಲ್ಲಿ ಕೆಲವು ನಿರ್ಣಯಗಳನ್ನು ಅಂಗೀಕರಿಸಲಾಯಿತು.

1. ಕೇಂದ್ರಸರ್ಕಾರವು ಭಾಷಾವಾರು ಪ್ರಾಂತ ನಿರ್ಮಾಣ ಮಾಡುವುದನ್ನು ಸ್ವಾಗತಿಸುವುದು.

2. ವಿಶಾಲವಾದ ಕನ್ನಡ ಪ್ರಾಂತಕ್ಕೆ ಮೈಸೂರೆಂದು ಹೆಸರಿಡಲು ನಿರ್ಧರಿಸುವುದಕ್ಕಾಗಿ ಕೇಂದ್ರಸರ್ಕಾರವನ್ನು ಅಭಿನಂದಿಸುವುದು.

3. ಜನತೆಗೆ ವಿಶಾಲ ಮೈಸೂರು ಪ್ರಾಂತ ರಚನೆಯ ಬಗ್ಗೆ ಸೂಕ್ತ ತಿಳುವಳಿಕೆಯನ್ನು ನೀಡಲು ಸಂಸ್ಥಾನದ ಎಲ್ಲಾ ಜಿಲ್ಲಾ ಪ್ರತಿನಿಧಿಗಳನ್ನೊಳಗೊಂಡ ಸಮ್ಮೇಳನವೊಂದನ್ನು ಕರೆಯುವುದು[53].

ಅಂತಿಮವಾಗಿ ಈ ಕೆಳಕಂಡ ಸಮಿತಿಗಳನ್ನು ರಚಿಸಲಾಯಿತು. ವಿಶಾಲ ಮೈಸೂರು ಪ್ರಾಂತ್ಯದ ಸ್ವಯಂಸಮಿತಿಗೆ ಕೆ.ಚಿಕ್ಕಲಿಂಗಯ್ಯ – ಅಧ್ಯಕ್ಷರಾಗಿ ಎಂ.ಎಲ್.ಲಿಂಗಣ್ಣ – ಉಪಾಧ್ಯಕ್ಷರಾಗಿ ಹಾಗೂ ಖಜಾಂಚಿಯಾಗಿ ಹೆಚ್.ಟಿ.ನಾರಾಯಣಶೆಟ್ಟಿ, ಕೆ.ಟಿ.ರಾಮಸ್ವಾಮಿ, ಸಹಕಾರ್ಯದರ್ಶಿಗಳಾಗಿ ಜೆ.ಪುಟ್ಟಸ್ವಾಮಿ,

ಎಂ.ವಿ.ಅನಂತರಾಮಭಟ್ಟ, ಸ್ವಾಗತ ಸಮಿತಿಗೆ ಜೆ.ದೇವಯ್ಯ (ವಿಧಾನಪರಿಷತ್ತು ಸದಸ್ಯರು) – ಅಧ್ಯಕ್ಷರಾಗಿ ಜಿ.ಪುಟ್ಟಸ್ವಾಮಿ, ಎಂ.ವಿ. ಅನಂತರಾಮಭಟ್ಟ, ಕಾರ್ಯದರ್ಶಿಗಳಾಗಿ ಕಾರ್ಯಕಾರಿ ಸಮಿತಿಯ ವಿವರ ಮುನ್ಸಿಪಲ್ ಕೌನ್ಸಿಲ್‌ನ ಉಪಾಧ್ಯಕ್ಷರಾದ ಎಂ.ಹೆಚ್. ಬೋರಯ್ಯ ಅಧ್ಯಕ್ಷರಾಗಿ ಹಾಗೂ 9 ಜನ ಗೌರವಾನ್ವಿತ ಸದಸ್ಯರುಗಳು ಸಾರ್ವಜನಿಕ ಸಮಿತಿ ಎಂ.ಎಲ್.ಲಿಂಗಯ್ಯ ಅಧ್ಯಕ್ಷರಾಗಿ ಹಾಗೂ 11 ಜನ ಸದಸ್ಯರನ್ನು ನೇಮಿಸಲಾಗಿತು[54].

ರಾಜ್ಯ ಪುನರ್ವಿಂಡಣಾ ಆಯೋಗವು ಮೈಸೂರು ಸಂಸ್ಥಾನಕ್ಕೆ ಭೇಟಿನೀಡಿದಾಗ ಏಕೀಕೃತ ಕರ್ನಾಟಕ ರಚನೆಯ ತೀರ್ಮಾನದ ಕೊನೆಯ ಘಟ್ಟವೆಂಬುದನ್ನು ಪ್ರತಿಯೊಬ್ಬರೂ ಮನಗಂಡರು. ಆದುದರಿಂದ ಪ್ರತ್ಯೇಕತಾವಾದಿಗಳು ಅವರದು ಅತಿಚಿಕ್ಕ ಗುಂಪಿದ್ದರೂ, ಪ್ರಕಟಣೆ ವಿರೋಧಕ್ಕೆ ಅಣಿಯಾದರು. ಮೈಸೂರು ಇದ್ದಂತೆಯೇ ಇದ್ದು, ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕೆಂಬುದಾಗಿ ಮೈಸೂರಿನ ಮೂವರು ನಿವೃತ್ತ ದಿವಾನರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಮೈಸೂರು ಮಂತ್ರಿಮಂಡಲದಲ್ಲಿದ್ದರೂ ಮೂವರು ಮಂತ್ರಿಗಳು 'ಎರಡು ಕರ್ನಾಟಕ' ಗಳ ಪರವಾಗಿ ಹೇಳಿಕೆಯನ್ನು ನೀಡಿದರು. ಆದರೆ ಮೈಸೂರನ್ನೊಳಗೊಂಡ ಏಕೀಕೃತ ಕರ್ನಾಟಕದ ಬಹುಜನರ ಪ್ರಚಂಡ ಬೆಂಬಲವಿದ್ದಿತು. 1953ರ ಜನವರಿ 18ರಂದು ಮೈಸೂರು ಶಾಸನ ಮಂಡಲದ ಐವತ್ತಾರು ಜನ ಸದಸ್ಯರು ಪ್ರಧಾನಮಂತ್ರಿ ನೆಹರು ಅವರಿಗೆ ಪತ್ರವೊಂದನ್ನು ಬರೆದು ತಾವು ಸಹ ಮೈಸೂರಿಗರು ಏಕೀಕರಣಕ್ಕೆ ಹಾತೊರೆದಿರುವುದಾಗಿ ತಿಳಿಸಿದರು. ಇದಕ್ಕೆ ವಿಧಾನಮಂಡಲದ ಕೆಲವು ಸದಸ್ಯರು ವಿರೋಧವನ್ನು ವ್ಯಕ್ತಪಡಿಸಿದರು[55].

ದಿನಾಂಕ 19 ಜನವರಿ 1956ರಂದು ಮಂಡ್ಯದ ಬಿ.ಎನ್.ಕೃಷ್ಣರ ನಿವಾಸದಲ್ಲಿ ವಿಶಾಲ ಮೈಸೂರು ಪ್ರಾಂತ್ಯ ರಚನೆ ವಿರೋಧಿಸಿ ಸಭೆ ನಡೆಯಿತು. ವಕೀಲರಾದ ಕೆ.ಮರಿಯಪ್ಪನವರು ಅಧ್ಯಕ್ಷತೆಯನ್ನು ವಹಿಸಿದ್ದರು. ವಿಶಾಲ ಮೈಸೂರು ಪ್ರಾಂತ್ಯ ರಚನೆ ಹಾಗೂ ಮೈಸೂರು ಸಂಸ್ಥಾನವನ್ನು ಯಥಾಸ್ಥಿತಿ ಉಳಿಸಿಕೊಳ್ಳಲು ತೆಗೆದುಕೊಳ್ಳುವ ಕ್ರಮದ ಬಗ್ಗೆ ಚರ್ಚಿಸಲಾಯಿತು. ಈ ವಿಷಯಕ್ಕೆ ಸಂಬಂಧಿಸಿದಂತೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲು ಸಮಿತಿಯನ್ನು ರಚಿಸಲಾಯಿತು. ಕೆ.ಮರಿಯಪ್ಪ ಅಧ್ಯಕ್ಷರಾಗಿ ಜಿ.ಮಾದೇಗೌಡ, ಜಿ.ನಾಗಪ್ಪ, ಚಿಕ್ಕಲಿಂಗೇಗೌಡ, ಉಪಾಧ್ಯಕ್ಷರಾಗಿ ಎ.ಸಿ.ಶ್ರೀಕಾಂತ, ಬಿ.ಎನ್.ಕೃಷ್ಣಗೌಡ, ಬನ್ನೂರುಸಿದ್ದೇಗೌಡ, ಕಾರ್ಯದರ್ಶಿಗಳಾಗಿ ಸಿ.ಬಿ.ಚೌಡಯ್ಯ – ಖಜಾಂಚಿಯಾಗಿ ಹೆಚ್.ಎಲ್.ರಂಗನಾಥ, ಜಿ.ವೆಂಕಟೇಶ್ ಪ್ರಚಾರ ಸಮಿತಿ ಸದಸ್ಯರಾಗಿ ಹಣಕಾಸಿನ ಉಪಸಮಿತಿಯನ್ನೂ ಕೂಡ ರಚಿಸಲಾಯಿತು., ಸಿ.ಚೌಡಯ್ಯ ಅಧ್ಯಕ್ಷರಾಗಿ, ಹೆಚ್.ಡಿ. ಚೌಡಯ್ಯ ಕೆ.ವಿ. ತಿಮ್ಮೆಗೌಡ, ಸಿ.ಪುಟ್ಟಣ್ಣ ಸದಸ್ಯರಾಗಿ ಆಯ್ಕೆ ಮಾಡಲಾಯಿತು[56]. ಸಭೆಯಲ್ಲಿ ಫೆಬ್ರವರಿ ತಿಂಗಳದ 2ನೇ ವಾರದಲ್ಲಿ

[illegible]

ಏಕೀಕರಣವಿರೋಧಿ ಯುವಕರ ಸಮ್ಮೇಳನವನ್ನು ನಡೆಸಬೇಕೆಂದು ತೀರ್ಮಾನಿಸಿದರು. ಹಾಗೂ ಕೆ.ಮರಿಯಪ್ಪನವರ ಅಧ್ಯಕ್ಷತೆಯಲ್ಲಿ ಸ್ವಾಗತಸಮಿತಿಯೊಂದನ್ನು ರಚಿಸಲಾಯಿತು. ಫೆಬ್ರವರಿ 2, 1956ರಂದು ಪ್ರಧಾನಿಗಳಾದ ಜವಹರಲಾಲ್‌ನೆಹರೂರವರು ಬೆಂಗಳೂರಿಗೆ ಭೇಟಿ ನೀಡಿದಾಗ ಮೈಸೂರು ವಿಲೀನವನ್ನು ವಿರೋಧಿಸಿ ಶಾಂತಿಯುತ ಪ್ರದರ್ಶನ ನಡೆಸಬೇಕೆಂದು ನಿರ್ಧರಿಸಿದರು[57].

ದಿನಾಂಕ 21 ಜನವರಿ 1956ರಂದು ವಿಲೀನ ವಿರೋಧಿ ವಿಷಯನಿಯಾಮಕ ಸಮಿತಿ ಸದಸ್ಯರು ಮಂಡ್ಯದಲ್ಲಿ ವಿಲೀನ ವಿರೋಧಿ ಸಮಿತಿಯ ಸಮಾವೇಶವನ್ನು ನಡೆಸಿದರು. ರಾಜ್ಯದ ಜನರ ಆರ್ಥಿಕತೆಗೆ ಅಡೆತಡೆಯಾಗುವ ವಿಶಾಲ ಮೈಸೂರು ಪ್ರಾಂತ ರಚನೆಯನ್ನು ಕೇಂದ್ರಸರಕಾರವು ಪರಿಶೀಲಿಸಲಿ ಎಂಬ ನಿರ್ಣಯವನ್ನು ಕೈಗೊಳ್ಳಲಾಯಿತು. ಇದಲ್ಲದೇ ಪ್ರಧಾನಮಂತ್ರಿಗಳ ಬಳಿ ನಿಯೋಗವನ್ನು ಕಳಿಸಿ ಮೈಸೂರು ಸ್ವತಂತ್ರವಾಗಿ ಉಳಿಯಲಿ ಎಂದು ಕೇಳಿಕೊಳ್ಳಲು ನಿರ್ಧರಿಸಿದರು. ಈ ಕೆಳಕಂಡ ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸಲಾಯಿತು. ಹೆಚ್.ಕೆ.ವೀರಣ್ಣಗೌಡ (ಅಧ್ಯಕ್ಷರಾಗಿ), ಕೆ.ವಿ.ಶಂಕರಗೌಡ ಉಪಾಧ್ಯಕ್ಷರಾಗಿ, ಎನ್.ಹುಚ್ಚಮಾಸ್ತಿಗೌಡ ಕಾರ್ಯದರ್ಶಿಗಳಾಗಿ, ಎನ್.ವೆಂಕಟಪ್ಪ ಖಜಾಂಚಿಯಾಗಿದ್ದರು[58].

ಪ್ರಧಾನಿ ನೆಹರು ಅವರು 1956ರ ಫೆಬ್ರವರಿ 2ನೇ ತಾರೀಖು ಬೆಂಗಳೂರಿಗೆ ಬಂದಾಗ ಸಮಿತಿಯ ಸದಸ್ಯರು ಭೇಟಿ ಮಾಡಿ ಪ್ರಾಂತ ಪುನರ್ವಿಂಗಡಣಾ ಸಮಿತಿಯ ವರದಿ ಶಿಫಾರಸ್ಸುಗಳನ್ನು ಕಾರ್ಯಗತ ಮಾಡುವುದನ್ನು ಮುಂದೆ ಹಾಕುವಂತೆ ಕೋರುವ ಮನವಿಯನ್ನು ಒಪ್ಪಿಸಬೇಕೆಂದು ನಿರ್ಧರಿಸಲಾಯಿತು. ಜಿಲ್ಲಾ ಮತ್ತು ತಾಲ್ಲೂಕುಗಳಲ್ಲಿ ಸಮ್ಮೇಳನಗಳನ್ನು ನಡೆಸುವುದು, ಸಂಸ್ಥಾನದಲ್ಲೆಲ್ಲಾ ಮುಖಂಡರು ಪ್ರವಾಸಿ ಮಾಡಿ ವಿಶಾಲ ಮೈಸೂರು ಪ್ರಾಂತ ರಚನೆಯಿಂದ ಉಂಟಾಗುವ ಅಡೆತಡೆಗಳನ್ನು ವಿವರಿಸುವುದು, ಪತ್ರಿಕೆಯನ್ನು ಹೊರಡಿಸುವುದು ಇವೆ ಮುಂತಾದ ನಿರ್ಣಯಗಳನ್ನು ಮಾಡಲಾಯಿತು. ಬಿ.ವೆಂಕಟಪ್ಪ, ಎಲ್.ಟಿ.ಕಾರ್ಲೆ, ಕೆ.ವಿ.ಶಂಕರಗೌಡ ಮತ್ತು ಎನ್.ಹುಚ್ಚುಮಾಸ್ತಿಗೌಡ ಸಭೆಯಲ್ಲಿ ಹಾಜರಿದ್ದರು[59].

ಭಾರತವನ್ನು ಐದು ಪ್ರಾದೇಶಿಕ ಪ್ರಾಂತ್ಯಗಳಾಗಿ ವಿಂಗಡಿಸುವ ಸಲಹೆಯನ್ನು ಮೈಸೂರು ಪ್ರದೇಶ ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷರೂ ಹಾಗೂ ಮೈಸೂರು ವಿಲೀನ ವಿರೋಧ ಸಮ್ಮೇಳನದ ಸ್ಥಾಯಿಸಮಿತಿ ಅಧ್ಯಕ್ಷರಾದ ಹೆಚ್.ಕೆ.ವೀರಣ್ಣಗೌಡರು ಸ್ವಾಗತಿಸಿದರು. ಇದನ್ನು ಮಂಡ್ಯಜಿಲ್ಲೆ ಕಾಂಗ್ರೆಸ್ಸಿನ ಅಧ್ಯಕ್ಷರಾದ ಶಂಕರಗೌಡರೂ ಪುಷ್ಟೀಕರಿಸಿದರು. ದಕ್ಷಿಣಪ್ರದೇಶದ ರಚನೆ ಬಗ್ಗೆ ಅಂದಿನ ಪ್ರಧಾನಿಗಳಾಗಿದ್ದ ಜವಹಾರಲಾಲನೆಹರು, ಗೃಹಮಂತ್ರಿ ಗೋವಿಂದವಲ್ಲಭಪಂತ್, ಶಿಕ್ಷಣಮಂತ್ರಿಗಳಾಗಿದ್ದ

ಮೌಲಾನ್ ಆಜಾದ್ ಮತ್ತು ಅಖಿಲ ಭಾರತ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಯು.ಎನ್.ದೇಬರ್‌ರವರಿಗೆ ಪತ್ರವನ್ನು ಬರೆದು ದಕ್ಷಿಣ ಪ್ರದೇಶದ ರಚನೆಗೆ ಮೈಸೂರು ವಿರೋಧಿ ಸಮಿತಿಯು ಬೆಂಬಲ ನೀಡುವುದಾಗಿ ತಿಳಿಸಿದರು. ಅಲ್ಲದೇ 29 ಜನವರಿ 1956ರಂದು ಬೆಂಗಳೂರಿನಲ್ಲಿ ಸಭೆ ನಡೆಸಿ ಪ್ರಾದೇಶಿಕ ಪ್ರಾಂತಗಳ ರಚನೆಯ ಬಗ್ಗೆ ಚರ್ಚಿಸಿ ದಕ್ಷಿಣದ ಪ್ರಾಂತ್ಯ ರಚನೆಗಾಗಿ ವಿಶೇಷ ಸಮಿತಿಯನ್ನು ನೇಮಿಸುವಂತೆ ಕೇಂದ್ರ ಸರಕಾರವನ್ನು ಒತ್ತಾಯ ಮಾಡಿದರು[60]. ಇದೇ ಸಂದರ್ಭದಲ್ಲಿ ಮುಖ್ಯಮಂತ್ರಿಗಳಾದ ಕೆ.ಹನುಂತಯ್ಯನವರು ದಕ್ಷಿಣಪ್ರದೇಶದ ರಚನೆಗೆ ಸಂಬಂಧವಾಗಿ 31 ಜನವರಿ 1956ರಂದು ಬೆಂಗಳೂರಿನಲ್ಲಿ 50 ಮಂದಿ ಶಾಸನಸಭೆ ಸದಸ್ಯರೊಡನೆ ಸಮಾಲೋಚನೆ ನಡೆಸಿ ಅವರ ಅಭಿಪ್ರಾಯವನ್ನು ಪಡೆದರು. ಹಾಗೂ ಮೈಸೂರು ವಿಲೀನ ವಿರೋಧ ಸಮಿತಿಯ 20 ಸದಸ್ಯರು ಚರ್ಚಿಸಿದಾಗ ಅವರು ದಕ್ಷಿಣಪ್ರದೇಶದ ರಚನೆಗೆ ಒಪ್ಪಿಗೆ ಸೂಚಿಸಿದರು[61].

ಆದರೆ ಮೈಸೂರು ವಿಲೀನ ವಿರೋಧ ಸಮ್ಮೇಳನದ ಸ್ಥಾಯಿಸಮಿತಿ ಸದಸ್ಯರಾದ ಎ.ರಾಮಣ್ಣನವರು ಪತ್ರಿಕೆ ಹೇಳಿಕೆಯಿತ್ತು ದಕ್ಷಿಣ ಪ್ರದೇಶದ ಯೋಜನೆಯು ಸಾಧ್ಯವಾದುದೆಂದೂ, ಪ್ರಾಂತ ಪುನರ್ವಿಂಗಡನೆಯ ಯೋಜನೆಯನ್ನೇ ಕೈ ಬಿಡುವುದು ಸೂಕ್ತವೆಂದೂ ತಿಳಿಸಿದರು. ಚಿಕ್ಕ ಸಂಸ್ಥಾನಗಳಿದ್ದರೆ ಆಡಳಿತ ದಕ್ಷತೆ ಉಳಿಯುವುದೆಂಬ ಅಭಿಪ್ರಾಯದಿಂದ ಮೈಸೂರು ವಿಲೀನ ವಿರೋಧಿ ಸಮಿತಿಯು ಅಖಂಡ ಕರ್ನಾಟಕ ವಿರೋಧ ಚಳುವಳಿಯನ್ನು ನಡೆಸಿತೆಂದೂ, ದಕ್ಷಿಣಭಾರತದಲ್ಲಿ ಮೊದಲು ಹುಟ್ಟಿದ ಭಾಷಾವಾರು ಪ್ರಾಂತಗಳ ಚಳುವಳಿಯ ಪರಿಣಾಮವಾಗಿ ಪರಸ್ಪರ ಘರ್ಷಣೆಗಳಿರುವ ಪ್ರದೇಶಗಳನ್ನು ಪುನಃ ಒಂದುಗೂಡಿಸುವುದು ಸರಿಯಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸಿದರು. ಪ್ರಜಾ ಸಮಾಜವಾದಿ ಪಕ್ಷದ ಜಂಟಿ ಕಾರ್ಯದರ್ಶಿ ವೇದಾಂತ ಹೆಮ್ಮಿಗೆಯವರು ತಮ್ಮ ಅಭಿಪ್ರಾಯವನ್ನು ಈ ರೀತಿಯಾಗಿ ವ್ಯಕ್ತಪಡಿಸಿದರು. ದೇಶವನ್ನು 5–6 ಪ್ರದೇಶಗಳಾಗಿ ವಿಂಗಡಿಸಬೇಕೆಂದು ಹೇಳಲು ಹೊರಟಿರುವುದು ಅವಿವೇಕದ ಸಲಹೆಯೆಂದು, ಇದರಿಂದ ಭಾಷಾವಾರು ಪ್ರಾಂತಗಳ ತತ್ವಕ್ಕೆ ಧಕ್ಕೆ ಬರುವುದೆಂದೂ ದಕ್ಷಿಣಪ್ರದೇಶದ ರಚನೆಯ ಪ್ರಯತ್ನವನ್ನು ನಿಲ್ಲಿಸುವುದು ಒಳ್ಳೆಯದೆಂದೂ ಅವರು ಹೇಳಿದರು[62]. 30 ಜನವರಿ 1956 ರಂದು ಮಂಡ್ಯದಲ್ಲಿ ವಿಶಾಲ ಮೈಸೂರು ಪ್ರಾಂತ ರಚನಾ ಸಮ್ಮೇಳನದ ಸಮಿತಿಯ ಸಭೆಯು ನಡೆಯಿತು. ವಿಧಾನಪರಿಷತ್ ಸದಸ್ಯರಾದ ಜೆ.ದೇವಯ್ಯನವರು ಅಧ್ಯಕ್ಷತೆಯನ್ನು ವಹಿಸಿದ್ದರು. ಸಭೆಯಲ್ಲಿ ಈ ಕೆಳಕಂಡ ನಿರ್ಣಯಗಳನ್ನು ಅಂಗೀಕರಿಸಲಾಯಿತು.

(1) ವಿಶಾಲ ಮೈಸೂರು ಪ್ರಾಂತ ರಚನಾ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಲು ಬೇಕಾದ ಸಹಾಯ ಮತ್ತು ಸಲಹೆಗಳನ್ನು ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು ನೀಡುವಂತೆ ಪ್ರಾರ್ಥಿಸಲು ತೀರ್ಮಾನಿಸಲಾಯಿತು.

(2) ಹೆಚ್.ಕೆ.ವೀರಣ್ಣಗೌಡ ದಕ್ಷಿಣ ಪ್ರದೇಶದ ರಚನೆಗೆ ಸಂಬಂಧಿಸಿದಂತೆ ನೀಡಿರುವ ಹೇಳಿಕೆ ಅನಿರೀಕ್ಷಿತ ಹಾಗೂ ಸಾರ್ವಜನಿಕರಿಂದ ನಗೆಗೇಡಿತನಕ್ಕೆ ಕಾರಣವಾಗಿದೆ.

(3) ವಿಶಾಲ ಮೈಸೂರು ಪ್ರಾಂತ ರಚನೆಗೆ ಇಷ್ಟಪಡುವ 18 ವರ್ಷಕ್ಕೆ ಕಮ್ಮಿಯಿಲ್ಲದವರು ಸ್ವಾಗತ ಸಮಿತಿಯ ಸದಸ್ಯರಾಗಬಹುದೆಂತಲೂ, ಕನಿಷ್ಠಪಕ್ಷ 10ರೂಗಳು ಮತ್ತು ಮೇಲ್ಪಟ್ಟು ಕೊಟ್ಟ ನೋಂದಣಿ ಮಾಡಿಕೊಳ್ಳಲು ತಿಳಿಸಲಾಯಿತು.

(4) ವಿಶಾಲ ಮೈಸೂರು ಪ್ರಾಂತ ರಚನೆಗೆ ಸಮಾವೇಶ ನಡೆಸುವ ಕುರಿತು ಸ್ವಾಗತ ಸಮಿತಿಗೆ ಕ್ರಮ ತೆಗೆದುಕೊಳ್ಳುವಂತೆ ತಿಳಿಸಲಾಯಿತು[63].

ಮಂಡ್ಯಜಿಲ್ಲೆಯ ಸೋಶಿಯಾಲಿಸ್ಟ್ ಪಕ್ಷದ ಎನ್.ಎಲ್.ನಾಗಪ್ಪ ಮತ್ತು ಲಿಂಗಯ್ಯ ಜಂಟಿಯಾಗಿ ದಕ್ಷಿಣ ಪ್ರದೇಶವನ್ನು ರಚಿಸಬೇಕೆನ್ನುವವರ ವಿರುದ್ಧವಾಗಿ ಮುದ್ರಿತ ಕರಪತ್ರವನ್ನು ಹೊರಡಿಸಿ ಒಂದೇ ಕರ್ನಾಟಕ ರಚನೆಗೆ ಸಾರ್ವಜನಿಕರು ಬೆಂಬಲ ಕೊಡಬೇಕೆಂದು ಮನವಿ ಸಲ್ಲಿಸಿದರು. ಏಕೀಕೃತ ಕರ್ನಾಟಕ ವಿರೋಧಿಸಿ ದಕ್ಷಿಣ ಪ್ರದೇಶ ರಚನೆ ಮಾಡುವರ ಹೇಳಿಕೆಗಳಿಗೆ ಆಕರ್ಷಿತರಾಗಬಾರದೆಂದು ಕರೆನೀಡಿದರು[64]. ಇದಾದ ಕೆಲವು ದಿನಗಳ ನಂತರ ಶಾಸನಸಭೆಯಲ್ಲಿ ರಾಜ್ಯ ಪುನರ್ವಿಂಗಡಣೆ ವರದಿ ಮಸೂದೆಯಾಗಿ ಅಂಗೀಕಾರಕ್ಕಾಗಿ ಚರ್ಚೆ ಪ್ರಾರಂಭವಾಯಿತು. ಮೈಸೂರು ವಿಲೀನ ವಿರೋಧಿ ಸಮ್ಮೇಳನದಲ್ಲಿ ಭಾಗವಹಿಸಿದ ಪ್ರಮುಖ ನಾಯಕರು ಮೈಸೂರು ಯಥಾಸ್ಥಿತಿ ಉಳಿಯಲಿ ಎಂದು ಏಕೀಕರಣ ವಿರೋಧವಾಗಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಅವರಲ್ಲಿ ಪ್ರಮುಖವಾಗಿ ಶ್ರೀರಂಗಪಟ್ಟಣ ಶಾಸನಸಭೆಯ ಸದಸ್ಯರಾದ ಕೆ.ಪುಟ್ಟಸ್ವಾಮಿ, ಮದ್ದೂರಿನ ಶಾಸನಸಭಾ ಸದಸ್ಯರಾದ ಹೆಚ್.ಕೆ. ವೀರಣ್ಣಗೌಡ, ಚನ್ನರಾಯಪಟ್ಟಣದ ಶಾಸನಸಭಾ ಸದಸ್ಯರಾದ ಕೆ.ಲಕ್ಕಪ್ಪ, ಚನ್ನಪಟ್ಟಣದ ವಿ.ವೆಂಕಟಪ್ಪ ಹಾಗೂ ಮೈಸೂರಿನ ಶಿವನಂಜೇಗೌಡ ವಿರೋಧ ವ್ಯಕ್ತಪಡಿಸಿದರು. ಸದನದಲ್ಲಿ ವಿಶಾಲ ಮೈಸೂರು ರಾಜ್ಯದ ಪರವಾಗಿ ಅಂದಿನ ಮುಖ್ಯಮಂತ್ರಿಗಳಾದ ಕೆ.ಹನುಮಂತಯ್ಯ, ಆರ್.ಮುನಿಸ್ವಾಮಯ್ಯ, ಬಿ.ಮಾಧವಾಚಾರ್ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. 21 ಫೆಬ್ರವರಿ 1956 ರಂದು ಶಾಸನಸಭೆಯಲ್ಲಿ ಪ್ರಾಂತಗಳ ವಿಂಗಡಣೆಯ ವಿಚಾರವಾಗಿ ಚರ್ಚೆ ಆರಂಭವಾಯಿತು.

ಶಾಸನ ಸಭೆಯಲ್ಲಿ ಏಕೀಕರಣ ಕುರಿತು ಚರ್ಚೆಗಳು

ಏಕೀಕರಣ ಕುರಿತು ಸಾರ್ವಜನಿಕ ಚರ್ಚೆಗಳೇ ಅಲ್ಲದೆ ಶಾಸನ ಸಭೆಗಳಲ್ಲೂ ದೀರ್ಘ ಚರ್ಚೆಗಳಾದವು. ಅಂದಿನ ಶ್ರೀರಂಗಪಟ್ಟಣದ ಶಾಸನಸಭಾದ ಸದಸ್ಯರಾದ ಕೆ.ಪುಟ್ಟಸ್ವಾಮಿ ಅವರು 21 ಫೆಬ್ರವರಿ 1956ರಂದು ಶಾಸನಸಭೆಯಲ್ಲಿ ಪ್ರಾಂತಗಳ ವಿಂಗಡಣೆಯ ವಿಚಾರವಾಗಿ ತಮ್ಮ ಅಭಿಪ್ರಾಯವನ್ನು ಈ ರೀತಿಯಾಗಿ ವ್ಯಕ್ತಪಡಿಸಿದರು. ಪ್ರಾಂತ್ಯ ಪುನರ್ವಿಂಗಡಣೆಯ ವಿಚಾರದಲ್ಲಿ ನಮ್ಮಲ್ಲಿ ಯಾರು ತೆಲುಗರು, ಯಾರು ಕನ್ನಡಿಗರು, ಯಾರು ತಮಿಳರು, ಯಾವ ಯಾವ ಭಾಷೆ ಮಾತನಾಡುತ್ತಾರೆ ಎನ್ನವುದು ಯಾರ ಗಮನದಲ್ಲಿಯೂ ಇರಲಿಲ್ಲ. ನಮ್ಮ ದೇಶದಲ್ಲಿ ಹಲವಾರು ವರ್ಷಗಳ ಹೋರಾಟದ ಫಲವಾಗಿ ಜವಾಬ್ದಾರಿ ಸರ್ಕಾರ ಸ್ಥಾಪನೆಯಾದಾಗ ಮೊಟ್ಟಮೊದಲು ಮುಖ್ಯಮಂತ್ರಿಗಳಾದ ಕೆ.ಚಂಗಲರಾಯರೆಡ್ಡಿಯರು ಆಗ ತೆಲುಗರಾಗಿರಲಿಲ್ಲ ಅವರು ಮೈಸೂರಿನವರಾಗಿದ್ದರು. ಅವರು ನಮ್ಮ ದೃಷ್ಟಿಯಲ್ಲಿ ಕನ್ನಡಿಗರ ಹಾಗೆ ತೆಲುಗರಿಗೆ ತೆಲುಗರ ಹಾಗೆ ತಮಿಳರಿಗೆ ತಮಿಳರ ಹಾಗೆ ದೇಶದಲ್ಲಿ ಬೇರೆ ಭಾಷೆ ಮಾತೃಭಾಷೆಯಾಗಿದ್ದ ಜನರು ಕೂಡ ಮಂತ್ರಿಗಳಾಗಿದ್ದರು. ಆಗ ಯಾರ ಮನಸ್ಸಿನಲ್ಲಿಯೇ ಆಗಲಿ ಕನ್ನಡಿಗರು ಈ ದೇಶದಲ್ಲಿ ಅಧಿಕಾರ ನಡೆಸಬೇಕು ಎಂದು ಬಂದಿರಲಿಲ್ಲ. ದ್ವಿಭಾಷಾ ಪ್ರಾಂತ್ಯ ರಚಿಸಲು ವಿಶಾಲವಾದ ಮೈಸೂರಿನ ಪ್ರಜಾ ಸಂಖ್ಯೆ ಎರಡು ಕೋಟಿಯಾಗುತ್ತದೆ. ವಿಸ್ತೀರ್ಣ 873,750 ಚದರ ಮೈಲಿಗಳಾಗುತ್ತದೆ. ಪ್ರಜಾ .ಸಂಖ್ಯೆಯ ದೃಷ್ಠಿಯಿಂದ ನೋಡಿದರೂ ಮತ್ತು ವಿಸ್ತೀರ್ಣದ ದೃಷ್ಠಿಯಿಂದ ನೋಡಿದರು ಮೈಸೂರು ರಾಜ್ಯ ಇನ್ನೂ ವಿಶಾಲವಾಗುವುದಕ್ಕೆ ಅವಕಾಶವಿದೆ ಎಂದು ಕಾಣುತ್ತದೆ. ಮೈಸೂರಿನಲ್ಲಿ ಅನೇಕ ಕಡೆಗಳಲ್ಲಿ ಮೈಸೂರು ಮತ್ತು ಆಂಧ್ರಗಳೆರಡು ಒಂದಾಗಬೇಕೆಂಬ ಅಭಿಪ್ರಾಯ ವ್ಯಕ್ತಪಟ್ಟಿದೆ. ದೇಶದಲ್ಲಿ ಐಕ್ಯತೆಯನ್ನು ಮತ್ತು ಸಾಮರಸ್ಯವನ್ನು ಏರ್ಪಡಿಸುವುದಕ್ಕೂ ಮತ್ತು ಕ್ಷಿಪ್ರವಾದ ಆರ್ಥಿಕ ಪ್ರಗತಿ ಸಾಧಿಸಲು ದ್ವಿಭಾಷಾರಾಜ್ಯದಿಂದ ಇದನ್ನು ಸಾಧಿಸಲು ಸಾಧ್ಯವಾಗುತ್ತದೆ[65]. ದ್ವಿಭಾಷಾ ಪ್ರಾಂತ್ಯ ಆಗಬೇಕು. ಆ ತತ್ವ ಒಪ್ಪುವುದಾದರೆ ಆಂಧ್ರ–ಮೈಸೂರು ಆಗಬಹುದು; ಅದು ಆಗುವುದಿಲ್ಲ ಎಂದರೆ ಇನ್ನಾವುದಾದರೂ ಪ್ರಾಂತ್ಯದೊಡನೆ ಸೇರಲು ಒಪ್ಪಬಹುದು. ಆದ್ದರಿಂದ ಅದು ಅಷ್ಟು ಹೆಚ್ಚಲ್ಲ, ದ್ವಿಭಾಷಾ ಪ್ರಾಂತ್ಯದ ವಿಚಾರವಾಗಿ ಕೂಲಂಕುಶವಾಗಿ ಪರಿಶೀಲನೆ ಮಾಡಿ ಒಂದು ತೀರ್ಮಾನ ತೆಗೆದುಕೊಳ್ಳಬೇಕಾದ್ದು ಅಗತ್ಯ.

ಅಂದಿನ ಮುಖ್ಯಮಂತ್ರಿಗಳಾದ ಕೆ.ಹನುಮಂತಯ್ಯನವರು 1956ರ ಪುನರ್ವಿಂಗಡಣೆ ಮಸೂದೆಯ ಪರವಾಗಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಸಂಸ್ಥಾನಗಳ ಪುನರ್‌ವ್ಯವಸ್ಥೆಯ ಮಾರ್ಗದಲ್ಲಿ ಮೂರು ಪ್ರಮುಖ ವಿಷಯ ಚರ್ಚೆಯಾದವು. ಮೊದಲನೆಯದು ಮೈಸೂರು ಸಂಸ್ಥಾನ ವಿಸ್ತಾರದಲ್ಲಿ ದ್ವಿಗುಣವಾಗಿ

ಪರಿಣಮಿಸಬೇಕು ಮತ್ತು ವಿವಾದದಲ್ಲಿರತಕ್ಕಂಥ ಕೆಲವು ಸ್ಥಳಗಳು ಮೈಸೂರಿನಲ್ಲಿಯೇ ಉಳಿಯಬೇಕು. ಹಾಗೂ ಮೈಸೂರು ಎಂಬ ಹೆಸರು ಮುಂದುವರಿಯಬೇಕೆಂಬುದು. ಈ ಮೂರು ವಿಷಯಗಳಲ್ಲೂ ಕೂಡ ಕೇಂದ್ರ ಸರಕಾರದವರು ಈ ಸಭೆಯ ಅಭಿಪ್ರಾಯಕ್ಕೆ ಮನ್ನಣೆ ನೀಡಿದ್ದಾರೆ. ದಕ್ಷಿಣ ಪ್ರದೇಶ ಎನ್ನತಕ್ಕದ್ದನ್ನು ದಕ್ಷಿಣ ಭಾರತದಲ್ಲಿ ರಚಿಸುವುದು ಸೂಕ್ತ ಎಂದು ಹೇಳಿದ ಮುಖಂಡರ ವಾದ ಕಡಿಮೆಯಾಯಿತು. ಹಾಗೂ ದಕ್ಷಿಣ ಭಾರತ ದೇಶದಲ್ಲಿರತಕ್ಕ ಸಂಸ್ಥಾನಗಳು, ಎರಡಾಗಲಿ, ಮೂರಾಗಲಿ, ನಾಲ್ಕಾಗಲಿ ಸೇರಿ ಒಂದು ಸಂಸ್ಥಾನ ಆಗಬೇಕು ಎನ್ನತಕ್ಕ ವಾದ, ಅದು ಸರಿಯಾದ ವಾದ ಅಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಕರ್ನಾಟಕ ಏಕೀಕರಣ 'Is an end in itself' ಎಂದು ವಾದಿಸ ತಕ್ಕದ್ದು ಸರಿಯಲ್ಲ, "Mysore for Mysoreans" ಎಂದು ವಾದಿಸತಕ್ಕದ್ದು ಸರಿಯಲ್ಲ. ಉತ್ತರಕರ್ನಾಟಕದವರೂ ಮತ್ತು ದಕ್ಷಿಣಕರ್ನಾಟಕದವರೂ ಚೀನಾದ ಮಹಾಗೋಡೆ ರೀತಿ ಮಧ್ಯ ಗೋಡೆಯನ್ನು ಕಟ್ಟಿಕೊಳ್ಳುವುದಕ್ಕಾಗುವುದಿಲ್ಲ. ನೆಮ್ಮದಿಯಿಂದ ಬಾಳತಕ್ಕಂಥ ಪರಿಸ್ಥಿತಿಯನ್ನು ರೂಪಿಸಬೇಕಾಗಿರತಕ್ಕ ಜವಾಬ್ದಾರಿ ನಮ್ಮದೇ ಆಗಿದೆ ಎಂದಿದ್ದರು[66].

ಅಂದಿನ ಮದ್ದೂರಿನ ಶಾಸನಸಭಾ ಸದಸ್ಯರಾದ ಹೆಚ್.ಕೆ.ವೀರಣ್ಣಗೌಡ ಅವರು 2 ಏಪ್ರಿಲ್ 1956ರಂದು ರಾಜ್ಯ ವಿಂಗಡಣೆಯ ಮಸೂದೆಯ ಕುರಿತು ವಿರೋಧವಾಗಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಈ ಪ್ರಾಂತಗಳ ವಿಂಗಡಣೆ ಏಕ ಬೇಡ ಎಂಬುದನ್ನು ಒಂದೆರಡು ಮಾತಿನಲ್ಲಿ ಹೇಳಬಹುದು. ನಮ್ಮಲ್ಲಿ ಒಂದು ಸುವ್ಯವಸ್ಥಿತ ಸರ್ಕಾರ, ಒಂದು ಆಡಳಿತ ಕ್ರಮವಿದೆ. ಬೇರೆ ಭಾಗಗಳಿಂದ ಬರತಕ್ಕವರ ಆಡಳಿತ ಕ್ರಮಕ್ಕೂ ನಮ್ಮ ಆಡಳಿತ ಕ್ರಮಕ್ಕೂ ವ್ಯತ್ಯಾಸವಿದೆ. ಹಾಗೂ ಕಾನೂನುಗಳಿಗೂ ವ್ಯತ್ಯಾಸವಿದೆ. ಬೇರೆ ಕಡೆಯಿಂದ ಬರತಕ್ಕ ಜನರ ನಡೆ, ನುಡಿ, ಆಚಾರ, ವಿಚಾರ, ವ್ಯವಹಾರಗಳಿಗೂ ನಮ್ಮದಕ್ಕೂ ವ್ಯತ್ಯಾಸವಿದೆ. ಹೀಗೆ ಏರುಪೇರಾಗಿರತಕ್ಕ ಎರಡೂ ಭಾಗಗಳನ್ನು ಒಟ್ಟುಗೂಡಿಸುತ್ತೇವೆಂದರೆ ಹತ್ತಾರು ವರ್ಷಗಳಾದರೂ ಈ ಏರು ಪೇರನ್ನು ಸಮತೂಗಿಸಿ ಒಂದು ಮಟ್ಟಕ್ಕೆ ತರುವುದಕ್ಕೆ ನಿಧಾನವಾಗುತ್ತದೆ, ಕಷ್ಟವಾಗುತ್ತದೆ. ಅದುವರೆಗೂ ಇಲ್ಲಿಯ ಜನಗಳಿಗೆ ತೊಂದರೆಯಾಗುತ್ತದೆಂಬುದು ತಮ್ಮ ಉದ್ದೇಶ ಎಂದರು. ಮೈಸೂರು–ಮೈಸೂರಾಗಿಯೇ ಉಳಿಯಬೇಕೆಂದು ವಾದಿಸಿದವರನ್ನು ಹಿಂದೆ ಅನೇಕ ಸಾರಿ ಅವರಲ್ಲಿರುವುದು ಸಂಕುಚಿತ ಮನೋಭಾವವೆಂದೂ, ಅಸಂಸ್ಕೃತಿ ಮನೋಭಾವನೆಯೆಂದೂ, ಅವರ ಮನಸ್ಸು ವಿಶಾಲವಾಗಬೇಕೆಂದೂ, ಅವರಿಗೆ ವಿಶಾಲ ದೃಷ್ಠಿ ಇರಬೇಕೆಂದು ಹೇಳುತ್ತಿದ್ದರು. ರಾಜ್ಯ ವಿಸ್ತರಣೆಗೆ ಯುದ್ಧ ಮಾಡುತ್ತಾರೆ, ಕಾದಾಡುತ್ತಾರೆ, ಅಂತದರಲ್ಲಿ ತಾನಾಗಿ ತಾನು ಬಂದರೆ, ಮನೆಗೆ ಬಂದ ಲಕ್ಷ್ಮೀಯನ್ನು ಎಡಗಾಲಿನಿಂದ ಒದ್ದು ಓಡಿಸಿದರು ಎಂಬಂತೆ ಇವರು ಬೇಡವೆನ್ನುತ್ತಾರೆ ಎಂದು ಅನೇಕ

ವಿಧವಾಗಿ ಆಕ್ಷೇಪಣೆ ಮಾಡಿದ್ದಾರೆ. ಗಡಿನಾಡು ಭಾಗಗಳಾಗಿ ಒಬ್ಬರಿಗೊಬ್ಬರಿಗೆ ಜಗಳ ಬೇಡ, ಹೊಡೆದಾಟ ಬೇಡ. ಗಡಿನಾಡು ವ್ಯಾಜ್ಯಗಳನ್ನು ಬಗೆಹರಿಸಲು ಯಾವ ಒಂದು ಸಮಿತಿಯೂ ಬೇಕಾಗಿಲ್ಲ. ನಾವೆಲ್ಲರೂ ಒಂದಾದರೆ ಯಾವ ವ್ಯಾಜ್ಯವು ಇರುವುದಿಲ್ಲ. ಗಡಿಯ ವಿಚಾರದಲ್ಲಿ ಈ ಊರು ಬೇಕು, ಆ ಊರು ಬೇಕು ಎಂಬ ವ್ಯಾಜ್ಯವೇ ಇರುವುದಿಲ್ಲ. ಉತ್ತರ ಕರ್ನಾಟಕದವರಿಗೂ ನಮಗೂ ಬಹಳ ವಿಧಗಳಲ್ಲಿ ವ್ಯತ್ಯಾಸವಿದೆ. ದೇಶಗಳ ಪುನರ್ವಿಂಗಡಣೆಯ ಪ್ರಶ್ನೆಯನ್ನು ಇನ್ನೂ ಹತ್ತು ವರ್ಷಗಳ ಕಾಲ ಕೈ ಬಿಟ್ಟುಬಿಡುವುದು ಒಳ್ಳೆಯದು. ಈ ಭಾಷಾ ವ್ಯಾಜ್ಯ, ಊರಿನ ವ್ಯಾಜ್ಯ, ನೀರಿನ ವ್ಯಾಜ್ಯ, ಗಡಿವ್ಯಾಜ್ಯಗಳ ಯೋಜನೆಗೆ ಹೋಗುವುದು ಬೇಡ. ಇದು ದೇಶದ ಐಕ್ಯಮತ್ಯವನ್ನು ಕಲಕಲು ಅವಕಾಶ ಕೊಟ್ಟ ಹಾಗೆ ಆಗುತ್ತದೆ. ಇದರಿಂದ ದೇಶದಲ್ಲಿ ಗೊಂದಲವೆದ್ದಿದೆ. ಆದುದರಿಂದ ಪ್ರಾಂತ್ಯ ಪುನರ್ವಿಂಗಡಣೆಯನ್ನು ಮುಂದುವರಿಸದೆ ಇಷ್ಟಕ್ಕೆ ಕೈ ಬಿಡುವುದು ಒಳ್ಳೆಯದು. ಮೈಸೂರು ಮೈಸೂರಿದ್ದ ಹಾಗೆ ಇದ್ದರೆ ಇದರಿಂದ ಏನು ಅನಾನುಕೂಲವಾಗುತ್ತದೆ? ನೂರಾರು ವರ್ಷಗಳಿಂದಲೂ ಇದು ಹೀಗೆಯೇ ಮಂದುವರೆದುಕೊಂಡು ಬಂದಿರುವಾಗ ಇನ್ನು ಎಂಟು ಹತ್ತು ವರ್ಷಗಳು ಹೀಗೆಯೆ ಮುಂದುವರಿಯಲಿ ಎಂದು ಹೇಳಿದರೆ ಇದರಿಂದ ಆಗ ತಕ್ಕ ತೊಂದರೆಯಾದರೂ ಏನಿದೆ? ಈ ಪ್ರಶ್ನೆಯನ್ನು ಇನ್ನೂ ಹತ್ತು ವರ್ಷಗಳ ಕಾಲ ಮುಂದಕ್ಕೆ ಹಾಕತಕ್ಕದ್ದು ಉಚಿತವಾದುದೆಂದು ಅಭಿಪ್ರಾಯ ವ್ಯಕ್ತಪಡಿಸಿದರು[67].

ಬೆಂಗಳೂರು ಶಾಸನಾಸಭಾ ಸದಸ್ಯರಾದ ಆರ್.ಮುನಿಸ್ವಾಮಯ್ಯ ಅವರು ರಾಜ್ಯ ಪುನರ್ವಿಂಗಡಣೆ ಆಯೋಗದ ಮಸೂದೆಯ ಪರವಾಗಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಈಗ ಹೊಸದಾಗಿ ಮೈಸೂರೊಡನೆ ಸೇರತಕ್ಕ ಜನರೊಂದಿಗೆ ಒಟ್ಟು ಮನಸ್ಸಿನಿಂದ ಕೂಡಿಕೊಂಡು ಎಲ್ಲರೂ ಸುಖದಿಂದ ಬಾಳಿ ಬದುಕೋಣ. ಎಷ್ಟೋ ವರ್ಷಗಳಿಂದ ಹೀಗೆ ಒಂದಾಗಿರಬೇಕಾಗಿದ್ದ ರಾಜ್ಯ ಒಡೆದು ಛಿದ್ರ ಛಿದ್ರವಾಗಿ ಅನೇಕ ಪಾಳೇಗಾರರ ಮತ್ತು ರಾಜ ಮಹಾರಾಜರ ಆಡಳಿತಕ್ಕೆ ಸಿಕ್ಕಿ ಕಷ್ಟಕ್ಕೆ ಈಡಾಗಿತ್ತು. ಈ ದಿವಸ ಈ ಭಾಗಗಳೆಲ್ಲವೂ ಮಹಾತ್ಮಗಾಂಧೀಯವರ ಅನುಗ್ರಹದಿಂದ ಒಂದು ಆಡಳಿತಕ್ಕೆ ಸಿಕ್ಕುವಂತೆ ಅವಕಾಶ ಉಂಟಾಗಿದೆ. ಆದ ಕಾರಣ ಈಗ ನಮ್ಮ ಮುಂದೆ ಬಂದಿರತಕ್ಕ ಬಿಲ್ಲನ್ನು ಎಲ್ಲರೂ ಒಂದೇ ಮನಸ್ಸಿನಿಂದ ಸ್ವಾಗತಿಸಿ ತನ್ಮೂಲಕ ಒಂದು ವಿಶಾಲ ಕನ್ನಡ ರಾಜ್ಯವನ್ನು ಕಟ್ಟೋಣ. ಮುಂದೆ ಸಾಗುವುದಾದರೆ ದಕ್ಷಿಣ ಪ್ರದೇಶ ಅಥವಾ ದ್ವಿಭಾಷಾ, ಬಹುಭಾಷಾ ರಾಜ್ಯಗಳ ವಿಚಾರ ಮಾಡೋಣ. ಆದರೆ ಈಗ ಸಧ್ಯದಲ್ಲಿ ನಾವು ಭಾರತದ ಭದ್ರತೆ ಮತ್ತು ಐಕ್ಯಮತ್ಯಗಳನ್ನು ನಮ್ಮೆಲ್ಲರ ದೃಷ್ಟಿಯಲ್ಲಿಟ್ಟುಕೊಂಡು ರಾಜ್ಯ ಪುನರ್ವಿಂಗಡಣೆ ಮಸೂದೆಯನ್ನು ಸ್ವಾಗತಿಸೋಣವೆಂದು ಹೇಳಿದರು[68].

[illegible]

ಮೈಸೂರು ವಿಲೀನ ವಿರೋಧಿ ಸಮ್ಮೇಳನದ ಅಧ್ಯಕ್ಷರಾದ ಕೆ.ಲಕ್ಕಪ್ಪನವರು ರಾಜ್ಯ ಪುನರ್ವಿಂಗಡಣೆಯ ಆಯೋಗದ ವರದಿ ವಿರೋಧವಾಗಿ ಸದನದಲ್ಲಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಮೈಸೂರು ಸಂಸ್ಥಾನವು ಮೈಸೂರು ಸಂಸ್ಥಾನವಾಗಿಯೇ ಮುಂದೆಯೂ ಉಳಿಯಬೇಕು ಎಂದು ವಾದ ಮಾಡಿ ಮಿತ್ರರಲ್ಲಿ ತಾವೂ ಒಬ್ಬರಾಗಿದ್ದು ಆ ದೃಷ್ಟಿಯಿಂದ ಕಾರ್ಯಸಾಧನೆಗಾಗಿ ಮಂಡ್ಯದಲ್ಲಿ ಸಮ್ಮೇಳನ ಮಾಡಲಾಯಿತು. ಸಮ್ಮೇಳನದಲ್ಲಿ ನೆರೆದಿದ್ದಂತ ಜನಗಳಲ್ಲಿ ಮೈಸೂರನ್ನು ಮೈಸೂರಾಗಿಯೇ ಉಳಿಸಿಕೊಳ್ಳಬೇಕೆಂಬ ಉತ್ಸಾಹ, ಹುಮ್ಮಸ್ಸು, ಮನೋಭಾವನೆ ಎಲ್ಲರಲ್ಲೂ ತಾಂಡವ ಆಡುತ್ತಿತ್ತು. ಆ ಗುರಿ ಸಾಧನೆಗಾಗಿ ಏನು ಬೇಕಾದರೂ ತ್ಯಾಗ ಮಾಡುವುದಕ್ಕೆ ಸಹ ಜನಗಳು ಸಿದ್ಧರಾಗಿದ್ದರು. ಅಂತಹ ಸನ್ನಿವೇಶವನ್ನು ಉಪಯೋಗಿಸಿಕೊಂಡು ಬೊಂಬಾಯಿಯಲ್ಲಿ ಮತ್ತು ಒರಿಸ್ಸಾದಲ್ಲಿ ನಡೆದಂತಹ ಘೋರ ಕೃತ್ಯಗಳನ್ನು ಇಲ್ಲೂ ನಡೆಸುವುದಕ್ಕೆ ಅವಕಾಶವಿತ್ತು. ಆದರೆ ಅಂತಹ ಕೃತ್ಯಗಳನ್ನು ನಡೆಸುವುದರಿಂದ – ಅದು ರಾಷ್ಟ್ರಘಾತಕವಾಗುತ್ತದೆ. ನಮ್ಮ ರಾಷ್ಟ್ರದ ಐಕ್ಯತೆಗೆ ಧಕ್ಕೆ ಬರುತ್ತದೆ, ನಮ್ಮ ಜನರಲ್ಲಿರತಕ್ಕ ಸದ್ಭಾವನೆಯನ್ನು ಕಲಕುವ ಸನ್ನಿವೇಶ ಬರಬಹುದು. ನಮ್ಮ ಆಸ್ತಿಪಾಸ್ತಿಗಳು ನಷ್ಟವಾಗಬಹುದು. ಆ ಮಾರ್ಗವನ್ನು ಹಿಡಿಯತಕ್ಕಂಥದ್ದು ಸೂಕ್ತವಲ್ಲ ಎಂಬ ಸದ್ಭಾವನೆಯಿಂದ ಬೇರೆ ರೀತಿಯಾದ ಮಾರ್ಗವನ್ನು ಅನುಸರಿಸುವುದು ಸೂಕ್ತ ಎಂಬುವುದನ್ನು ಯೋಚನೆ ಮಾಡಿದ ರೀತಿಯಲ್ಲಿ ನಡೆದುಕೊಂಡು ಬರುತ್ತಾ ಇದ್ದೇವೆ. ಮೈಸೂರು ಮೈಸೂರಾಗಿಯೇ ಉಳಿಯಬೇಕೆಂಬ ವಾದಕ್ಕೆ ಮುಖ್ಯವಾದ ಕಾರಣ ಈ ರೀತಿಯಾಗಿದೆ. ಮೈಸೂರು ದೇಶ ಎಲ್ಲಾ ಕ್ಷೇತ್ರಗಳಲ್ಲೂ ಎಲ್ಲಾ ರಂಗದಲ್ಲೂ ಮುಂದೆ ಬಂದಿದೆ. ನಮ್ಮನ್ನು ಸೇರಲಿರುವ ನಮ್ಮ ಅಕ್ಕಪಕ್ಕದ ಪ್ರಾಂತ್ಯಗಳು ನಮಗಿಂತ ಆರ್ಥಿಕ ಸ್ಥಿತಿಯಲ್ಲಿ ಮತ್ತು ಇತರ ಕ್ಷೇತ್ರಗಳಲ್ಲಿ ಹಿಂದೆ ಬಿದ್ದಿದೆ. ಆದುದರಿಂದ ನಮ್ಮ ಪ್ರಗತಿಗೆ ಧಕ್ಕೆ ಬಂದೀತು, ಅದಕ್ಕೆ ಅವಕಾಶವಾಗದ ರೀತಿಯಲ್ಲಿ ಇರಬೇಕು, ಆ ಪ್ರಗತಿ ಮಾರ್ಗದಲ್ಲಿ ಯಾವ ವೇಗದಲ್ಲಿ ಹೋಗುತ್ತಾ ಇದ್ದೇವೆಯೋ ಅದೇ ವೇಗದಲ್ಲಿ ಅದೇ ವೇಗವನ್ನು ಉಳಿಸಿಕೊಳ್ಳಬೇಕೆಂದು ಹೇಳಿದರು[69].

ಚನ್ನಪಟ್ಟಣದ ಶಾಸನಸಭಾ ಸದಸ್ಯರಾದ ವಿ.ವೆಂಕಟಪ್ಪ ಅವರು ಪ್ರಾಂತ ಪುನರ್ವಿಂಗಡಣೆಯ ವಿರೋಧವಾಗಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಮೈಸೂರು ಮೈಸೂರಾಗಿಯೇ ಉಳಿಯಬೇಕೆಂದು ಹೇಳಿದರ ಪೈಕಿ ತಾವು ಒಬ್ಬರೆಂದೂ ಹೇಳುತ್ತಾ ಮೈಸೂರು ವಿಲೀನ ವಿರೋಧ ಸಮ್ಮೇಳನದ ಅಧ್ಯಕ್ಷರಾಗಿ ಭಾಷಣ ಮಾಡಿದ ಲಕ್ಕಪ್ಪನವರು ಹೇಳಿದಂತೆ ವಿಷಯ ಸಂಗ್ರಹ ವರದಿಯಲ್ಲಿರತಕ್ಕ ಅನೇಕ ವಿಷಯಗಳನ್ನು ಕ್ರೋಢೀಕರಿಸಿ ಮೈಸೂರು ದೇಶದಲ್ಲಿರತಕ್ಕ ರಸ್ತೆಗಳು ಕಡಿಮೆ ಎಂದು ಹೇಳುತ್ತೇವೆ. ಮೈಸೂರು ದೇಶದಲ್ಲಿ ಹತ್ತು ಸಾವಿರ ಚದರ ಮೈಲಿಗಳಿಗೆ ಎಷ್ಟು ರಸ್ತೆಗಳಿವೆಯೋ ಇತರ

ಕಡೆಗಳಲ್ಲಿ ಈಗ ಮೈಸೂರು ದೇಶಕ್ಕೆ ಸೇರಬೇಕು ಎಂದು ತೀರ್ಮಾನವಾಗಿದೆಯೋ ಆ ಪ್ರಾಂತ್ಯಗಳಲ್ಲಿ ರಸ್ತೆಗಳನ್ನು ನಮ್ಮ ದೇಶದ ಮಟ್ಟಕ್ಕೆ ತರಬೇಕಾಗುತ್ತದೆ. ಹಾಗೇ ಮಾಡಬೇಕಾದರೆ ಕಮಿಟಿಯವರು ಹೇಳಿರುವ ರೀತಿಯಲ್ಲಿ 12 1/2 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಮೈಸೂರು ದೇಶಕ್ಕೆ ಸಮಾನವಾಗಿ ಪ್ರಾಂತಗಳನ್ನು ಮಾಡ ಬೇಕಾದರೆ ಹೆಚ್ಚು ಹಣ ಬೇಕಾಗುತ್ತದೆ. ಆ ಹಣವನ್ನು ಒದಗಿಸಬೇಕಾದರೆ ಜನರು ಹೆಚ್ಚು ಹೆಚ್ಚು ಕಂದಾಯವನ್ನು ಕೊಡಬೇಕು. ಈ ಭಾರವನ್ನು ಹೊರತಕ್ಕ ಶಕ್ತಿ ನಮ್ಮ ಜನರಿಗಿಲ್ಲವೆಂಬುದನ್ನು ಅನೇಕ ವರ್ಷಗಳಿಂದ ಹೇಳಿಕೊಂಡು ಬಂದಿದ್ದೇವೆ. ಅದು ಈಗ ಹೆಚ್ಚಾಗತಕ್ಕದ್ದು ಸರಿಯಲ್ಲವೆಂದು ಅದು ತಮ್ಮ ಅಭಿಪ್ರಾಯವೆಂದು ಈ ರೀತಿ ಆಗದೇ ಇದ್ದರೆ ಒಳ್ಳೆಯದು. ಅವರುಗಳು ಬೇರೆ ಒಂದು ಪ್ರಾಂತವನ್ನು ಮಾಡಿಕೊಳ್ಳುವುದರಲ್ಲಿ ಯಾವ ತೊಂದರೆಯು ಆಗಲಾರದು. ಅದೇ ರೀತಿ ನಾವೆಲ್ಲರೂ ಒಮ್ಮತದಿಂದ ಒಪ್ಪಿಕೊಂಡಿದ್ದೇವೆಂದು ಮುಖ್ಯಮಂತ್ರಿಗಳು ಹೇಳುವುದು ಸರಿಯಲ್ಲ. ಬಹುಮಟ್ಟಿನ ಜನರು ಅದಕ್ಕೆ ವಿರೋಧವಾದ ಅಭಿಪ್ರಾಯವನ್ನಿಟ್ಟಿರತಕ್ಕವರಿದ್ದಾರೆಂದು ವೀರಣ್ಣಗೌಡರು ಹೇಳಿದರು. ಆ ವಿಷಯವನ್ನು ಮುಖ್ಯಮಂತ್ರಿಗಳಾದ ಕೆ.ಹನುಮಂತಯ್ಯನವರು ಈ ರೀತಿಯಾಗಿ ಹೇಳಿದ್ದಾರೆ The people of mysore are not happy in agreeing to the formation of karnataka. Compeeled by pressure, they have agreed. ಮುಖ್ಯಮಂತ್ರಿಗಳಾದ ಕೆ.ಹನುಮಂತಯ್ಯನವರು ರಾಮನಗರದಲ್ಲಿ ಭಾಷಣ ಮಾಡುತ್ತಾ 'ದೇಶದಲ್ಲಿ ಯಾರಿಗೆ ಏನೂ ಕೇಡಾಗುವುದಿಲ್ಲ ಎಂದು ವಾದ ಹೂಡುವುದಕ್ಕೆ ಬದಲಾಗಿ' ಕೆಲವರು ಒಂದು ಪಿಸುಮಾತಿನಲ್ಲಿ ಒಕ್ಕಲಿಗರಿಗೆ ತೊಂದರೆಯಾಗುತ್ತದೆ, ಲಿಂಗಾಯಿತರು ಬಹುಮತದವರಾಗುತ್ತಾರೆ ಎಂದು ಕಿವಿಯಲ್ಲಿ ಹೇಳಿದರೆ ನಂಬಬೇಡಿ ಎಂದು ಹೇಳಿದರು. ಇದು ಬಹಳ ವಿಷಾದದ ಸಂಗತಿ, ನಾವು ಯಾರಿಗೂ ಆ ರೀತಿ ಹೇಳತಕ್ಕವರಲ್ಲ. ಪಿಸುಮಾತಿನಲ್ಲಿ ಹೇಳತಕ್ಕ ಹೇಡಿಗಳೇನೂ ನಾವಲ್ಲ. ಆ ಭಾವನೆಯನ್ನಿಟ್ಟುಕೊಂಡು ಇದುವರೆಗೆ ಯಾವ ಕಾರ್ಯವನ್ನು ಮಾಡಿಲ್ಲ. ಒಂದು ಕೋಮಿನವರು ಮುಂದುವರಿಯುತ್ತಿದ್ದಾರೆ, ನಾವು ಹಿಂದುಳಿದಿದ್ದೇವೆ, ನಮ್ಮನ್ನೂ ಹಾಗೇ ಮುಂದುವರಿಸಿ ಎಂದು ಹೇಳಿದವನು ನಾನಲ್ಲ, ಆ ವಿಧವಾಗಿ ತಾವು ಮುಂದುವರಿದಿಲ್ಲ. ಇಂಥ ಆಪಾದನೆಯನ್ನು ಹನುಮಂತಯ್ಯನವರೇಕೆ ಮಾಡಿದರೋ ಏನೋ ಗೊತ್ತಿಲ್ಲ. ಜನರನ್ನು ಉದ್ರೇಕಗೊಳಿಸಿ ಅವರನ್ನು ನಮ್ಮ ಮೇಲೆ ಎತ್ತಿ ಕಟ್ಟುವುದಕ್ಕೆ ಇಂಥ ಮಾತುಗಳನ್ನು ಆಡಿದ್ದಾರೆಂದು ಹೇಳಿದರೆ ಬೇರೆ ವಿಧಿ ಇಲ್ಲ. ತಾವು ನಿಜವಾಗಿಯೂ ದೇಶದ ಹಿತದೃಷ್ಟಿಯಿಂದ ಮೈಸೂರು ದೇಶದ ಜನಕ್ಕೆ ತೊಂದರೆಯಾಗುತ್ತದೆಯೋ ಏನೋ ಎನ್ನುವ ಭಾವನೆಯಿಂದ ಕರ್ನಾಟಕ ಪ್ರಾಂತ್ಯ ರಚನೆಯನ್ನು ವಿರೋಧಿಸಿದೆವು[70].

ಬಿ.ಮಾಧವಾಚಾರ್ ವಿಶಾಲ ಮೈಸೂರು ರಾಜ್ಯದ ಪರವಾಗಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಯಾರೂ ಈ ಹಿಂದೆ ಈ ಮೈಸೂರು ಒಂದು ಪ್ರತ್ಯೇಕ ಪ್ರಾಂತ್ಯವಾಗಿರಬೇಕು ಎಂದು ಆಗ್ರಹ ಪೂರ್ವಕವಾದ ವಾದವನ್ನು ಹೂಡಿದ್ದರೋ ಅವರೆಲ್ಲರೂ ಸಹ ವಿಶಾಲಹೃದಯದಿಂದ ನಮ್ಮೆಲ್ಲರಿಗಿಂತಲೂ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ದೊಡ್ಡ ದೊಡ್ಡ ಪ್ರಾಂತ್ಯಗಳು ನಿರ್ಮಾಣವಾಗಬೇಕೆಂದು ಹೇಳಿರತಕ್ಕದ್ದು ಸಂತೋಷ ಮತ್ತು ಸೋಜಿಗವಾದಂಥ ವಿಚಾರ. ಈ ಹೊಸ ಪ್ರಾಂತ್ಯದಲ್ಲಿ ತನ್ನದೇ ಆದ ಒಂದು ಸಂಸ್ಕೃತಿ, ಭಾಷೆ, ಕಲೆ ಇತ್ಯಾದಿಗಳೆಲ್ಲಾ ಮತ್ತೆ ಬೆಳೆದು, ಕೃಷಿ ಕೈಗಾರಿಕೆಗಳ ಅಭಿವೃದ್ಧಿಯಿಂದ ಕೂಡಿ ಈ ನಾಡು ಭಾರತಾಂಬೆಗೆ ಹೆಚ್ಚಿನ ಸೇವೆಯನ್ನು ಸಲ್ಲಿಸತಕ್ಕಂಥ ಒಂದು ಮಹಾ ಸುದೈವವು ನಮಗೀಗ ದೊರೆತಿದೆ ಎಂದು ಭಾವಿಸಿ ನಾವೆಲ್ಲರೂ ಅನ್ಯೋನ್ಯತೆಯಿಂದ ಇದಕ್ಕಾಗಿ ಶ್ರಮಿಸೋಣ, ದುಡಿಯೋಣ. ಇಂಥ ಒಂದು ರಾಜ್ಯ ಬೇಗ ಉದಯವಾಗಲಿ ಎಂದರು[71]. ಮೈಸೂರು ತಾಲ್ಲೂಕಿನಿಂದ ಆಯ್ಕೆಯಾದ ಶಿವನಂಜೇಗೌಡ ಅವರು ಶಾಸನಸಭೆಯಲ್ಲಿ ರಾಜ್ಯಗಳ ಪುನರ್ವಿಂಗಡಣಾ ಮಸೂದೆ ಕುರಿತು ಮಾತನಾಡುತ್ತಾ ಹಳೆ ಮೈಸೂರಿನ ವೈಶಿಷ್ಟ್ಯ ಹೋಗಬಾರದು, ಅಭಿವೃದ್ಧಿ ಕಾರ್ಯ ನಡೆದ ಮೇಲೆ ಹತ್ತಾರು ವರ್ಷಗಳಾದ ಮೇಲೆ ಅಕ್ಕಪಕ್ಕದ ಪ್ರಾಂತಗಳನ್ನು ಸೇರಿಸೋಣ ಎಂಬ ಅಭಿಪ್ರಾಯವನ್ನು ಮಂಡ್ಯದಲ್ಲಿ ನಡೆದ ವಿರೋಧ ಸಮ್ಮೇಳನದಲ್ಲಿ ಸ್ಥಾಯಿ ಸಮಿತಿ ಮಾಡಿ ಅದರ ಮೂಲಕ ಸೂಚಿಸಿದ್ದೆವು. ದೇಶದ ಹಿತಕ್ಕ ಧಕ್ಕೆ ಬಾರದಿರುವ ಹಾಗೆ ನ್ಯಾಯ ಬದ್ಧವಾಗಿರುವ ಕಾರ್ಯ ಕೈಕೊಂಡಿದ್ದವು. ಈ ಬಿಲ್ಲಿನಲ್ಲಿ ಒಂದು ಸೂಚನೆ ಬಂದಿದೆ. ಅದನ್ನು ಸೇರಿಸಿಕೊಂಡು ಆಮೇಲೆ ಮುಂದಿನ ಯೋಚನೆ ಮಾಡೋಣ ಎಂಬ ಮಾತು ನನಗೆ ಸಮ್ಮತವಲ್ಲ ಎಂದು ಮಂಡ್ಯದಲ್ಲಿ ಸಮ್ಮೇಳನ ಮಾಡಿದೆವೆಂಬುದನ್ನು ಅಧಿವೇಶನದಲ್ಲಿ ಉಲ್ಲೇಖಸಿದರು[72].

ಅಂತಿಮವಾಗಿ ಅಂದಿನ ಮುಖ್ಯಮಂತ್ರಿಗಳಾದ ಕೆ.ಹನುಮಂತಯ್ಯ ಅವರು ಸದನದಲ್ಲಿ ವಿಶಾಲ ಮೈಸೂರು ರಾಜ್ಯದ ರಚನೆ ಕುರಿತು ಪರವಾಗಿ ಮಾತನಾಡಿದರು. ಮೈಸೂರು ಎನ್ನತಕ್ಕ ಹೆಸರು ಇರಲಿ, ಈ ಹೆಸರು ಏನಿದ್ದರೆ ಏನು ಎಂದು ಹೇಳಿ, ಇದು ಇರಬೇಕು ಎನ್ನಲು ಕಾರಣ ಏನು ಹೇಳಿರೆಂದರೆ 'ಮೈಸೂರು ದೇಶದಲ್ಲಿರುವ ನೂರಾರು ಶಾಸನಗಳು ಏನಿವೆಯೋ ಅವುಗಳನ್ನು ಬದಲಾಯಿಸಬೇಕಾಗುತ್ತದೆ. ಅದು ಒಂದು ದೊಡ್ಡ ಕಷ್ಟ ಎಂದು ಹೇಳಿದರು. ಅದೇನು ದೊಡ್ಡ ಕಷ್ಟವಲ್ಲ ಒಂದು ಹಾಳೆ ಇರತಕ್ಕ ಒಂದು ಮಸೂದೆಯನ್ನು ತೆಗೆದುಕೊಂಡು ಬಂದು ಎಲ್ಲೆಲ್ಲಿ ಮೈಸೂರು ಎಂದು ಇದೆಯೋ ಅಲ್ಲಲ್ಲಿ ಕರ್ನಾಟಕ ಎಂದು ಸೇರಿಸಿದರೆ ಈ ಸಭೆ ಐದು ನಿಮಿಷದಲ್ಲಿ ಒಪ್ಪಬಹುದು. ಡಿಸೆಂಬರ್ 1ನೇ ತಾರೀಖಿನ ದಿವಸ ಈ ಸಭೆ ಯಾವ ನಿರ್ಣಯವನ್ನು ಅಂಗೀಕರಿಸುತ್ತೋ ಅದನ್ನು ಅವರು ಮರೆತಿದ್ದಾರೆ. ಅದಕ್ಕೆ ಅವರ ಜ್ಞಾಪಕಕ್ಕಾಗಿ

ಓದುತ್ತೇನೆ. This Assembly is further of opinion that in order to preserver its composite character the new state should continue to be called mysore state. ಯಾವ ದೇಶದಲ್ಲಿ ಭಾಷೆಯ ಆಧಾರದ ಮೇಲೆ ಯಾವ ಘರ್ಷಣೆಯು ಯಾರಲ್ಲೂ ಉಂಟಾಗಲಿಲ್ಲವೋ ಅಂತ ಒಳ್ಳೆಯ ಪರಿಸ್ಥಿತಿಯನ್ನು ಮುಂದುವರಿಸಿ ಕೊಂಡು ಬರುವುದು ಶ್ರೇಯಸ್ಕರ ಎನ್ನುವುದು ನಮ್ಮೆಲ್ಲರ ಉದ್ದೇಶ, ಈ ಉದ್ದೇಶವನ್ನು ಉತ್ತರ ಕರ್ನಾಟಕದ ಪ್ರತಿನಿಧಿಗಳಿಗೆ ಪ್ರೀತಿ ಪೂರ್ವಕವಾಗಿ ವಿವರಿಸಿದರೆ ಅವರು ಒಪ್ಪಿಕೊಳ್ಳುತ್ತಾರೆ. ಉತ್ತರ ಕರ್ನಾಟಕದಲ್ಲಿ ಸಮಾರು 25 ವರ್ಷಗಳ ಕಾಲ ಕರ್ನಾಟಕವಾಗಬೇಕೆಂದು ಹೇಳಿ ಪ್ರಚಾರ ನಡೆಸಿ, ಅದು ಬಾಯಿಪಾಠ ಆಗಿ ಹೋಗಿದೆ. ಆ ಬಾಯಿ ಪಾಠವನ್ನು ಬಿಡಿಸತಕ್ಕದ್ದು ಪ್ರಾಯಸದ ಕೆಲಸ. ಭಾರತೀಯರೆಲ್ಲರೂ ಒಂದೇ ಜನಾಂಗ ಎನ್ನತಕ್ಕ ಮನಸ್ಸನ್ನು ಬೆಳೆಸಿಕೊಂಡರೆ ಭೇದಗಳಿಗೆ ಅವಕಾಶವಿರುವುದಿಲ್ಲ. ವೀರಣ್ಣಗೌಡರು ಆಗಾಗ್ಗೆ ಎತ್ತು ಏರಿಗೆ ಎಳೆದರೆ ಎಮ್ಮೆ ನೀರಿಗೆ ಎಳೆಯಿತು ಎಂದು ಹೇಳುತ್ತಾರೆ. ಉತ್ತರ ಕರ್ನಾಟಕದ ಜನರಾಗಲಿ, ದಕ್ಷಿಣಕರ್ನಾಟಕದ ಜನಗಳಾಗಲಿ ಎತ್ತು ಎಮ್ಮೆಗಳಲ್ಲ ಎಲ್ಲರೂ ಮನುಷ್ಯರೆ. ಆದ್ದರಿಂದ ಎತ್ತು ಎಮ್ಮೆಗಳ ಸೌಮ್ಯ ಈ ಸಂದರ್ಭದಲ್ಲಿ ಹೊಂದಿಕೊಳ್ಳುವುದಿಲ್ಲ. ಉತ್ತರಕರ್ನಾಟಕದಲ್ಲಿ ಇರತಕ್ಕವರು ಭಾರತೀಯರು, ಇಲ್ಲಿರತಕ್ಕವರು ಭಾರತೀಯರು ತಮಿಳುನಾಡಿನಲ್ಲಿರತಕ್ಕವರು ಭಾರತೀಯರು, ಆಂಧ್ರರೂ ಭಾರತೀಯರು ಇದು ರಾಜ್ಯಾಂಗದಲ್ಲಿ ಅಂಗೀಕಾರವಾಗಿದೆ. ಆದುದರಿಂದ ಇವರೆಲ್ಲರೂ ಒಂದೇ ವರ್ಗಕ್ಕೆ ಅಥವಾ ಜಾತಿಗೆ ಸೇರತಕ್ಕವರು. ಆದುದರಿಂದ ಸಹಬಾಳ್ವಿಕೆ ಸಹಜವಾಗಿಯೇ ಇದೆ. ಶಿವನಂಜೇಗೌಡರು ನಮ್ಮದು ಒಂದು ವಿಲೀನ ವಿರೋಧ ಸಮಿತಿ ಇದೆ ಎಂದು ಹೇಳಿದರು. ಅದು ಇತ್ತು. ಅದು ಏನಾಯಿತು ಅಂದರೆ ಡಾ.ಬಿ.ಸಿ.ರಾಯ್ ಮತ್ತು ಸಿನ್ಹರವರು ಎರಡು ಪ್ರಾಂತ್ಯಗಳು ಸೇರಿ ಒಂದಾಗಬೇಕು ಎಂದು ಘೋಷಣೆ ಹೊರಡಿಸಿ ಅದಕ್ಕೆ ವರ್ಕಿಂಗ್ ಕಮಿಟಿಯ ಬೆಂಬಲ ದೊರಕಿ ನೆಹರು ಇತ್ಯಾದಿ ಪ್ರಮುಖರು ದೇಶದ ಎಲ್ಲಾ ಕಡೆಗಳಲ್ಲೂ ಆ ಮಾರ್ಗವನ್ನು ಅನುಸರಿಸುವುದು ಉತ್ತಮ ಎಂದು ಹೇಳಿದ ಮೇಲೆ ಈ ವಿಲೀನ ವಿರೋಧ ಸಮಿತಿ ಏನಾಯಿತು ಎಂದರೆ ವಿರೋಧ ಹೊರಟು ಹೋಯಿತು. ಮೈಸೂರು ವಿಲೀನ ಸಮಿತಿ ಆಯಿತು. ಈಗ ಎಲ್ಲಿಗೆ ಬಂದಿದೆ ಎಂದರೆ ಮೈಸೂರು ಉತ್ತರ ಕರ್ನಾಟಕವೇ ಅಲ್ಲ ಕೇರಳ ಬೇಕಾದರೂ ಸೇರಲಿ, ಆಂಧ್ರ ಬೇಕಾದರು ಸೇರಲಿ, ತಮಿಳು ದೇಶ ಬೇಕಾದರೂ ಸೇರಲಿ ಎಂದು ಹೇಳಿ "ಮೈಸೂರು ಮಹಾ ವಿಲೀನ ಸಮಿತಿ" ಆಗಿದೆ. ಯಾವಾಗಲೂ ವಿಲೀನಕ್ಕೆ ಸಿದ್ಧವಾಗಿದ್ದ ನಾವೆಲ್ಲರೂ ಕೂಡ ಅವರ ಮಾರ್ಗವನ್ನು ಒಪ್ಪಿದ್ದೇವೆ. ನಾವು ವಿಲೀನ ಎಂದು ಹೇಳಿದಾಗ ಅದು ಸರಿ, ಮತ್ತೊಬ್ಬರು ವಿಲೀನ ಎಂದು ಹೇಳಿದಾಗ ತಪ್ಪು ಎಂಬ ಗೋಜಿಗೆ ಹೋಗಬಾರದು. ವಿಲೀನ ಸಾಧ್ಯಸಾಧ್ಯತೆಯನ್ನು ಬೇರೆಯಾಗಿ ಪ್ರಸ್ತಾಪ ಮಾಡೋಣ. ಆದರೆ ಯಾವ ವಿಲೀನ ತತ್ವಕ್ಕೆ ಈ ಸಭೆ ಬಹುಮತದ

[illegible]

ನಿರ್ಣಯವನ್ನು ಅಂಗೀಕರಿಸಿ ಅದೇ ರೀತಿ ಮತ್ತು ವಿಲೀನವಾದರೆ ಮತ್ತೂ ಸಂತೋಷ ಎನ್ನುವುದನ್ನು ಮನಸ್ಸಿನಲ್ಲಿಟ್ಟುಕೊಂಡು ಸರ್ವಾನುಮತದಿಂದ ಅಂಗೀಕರಿಸಬೇಕೆಂದು ಪ್ರಾರ್ಥನೆ ಮಾಡಬೇಕೆಂದರು[73].

ತರುವಾಯ ಮೈಸೂರು ಒಂದು ಭಾಗವಾಗುವುದಕ್ಕೆ ದ್ವಿಭಾಷಾ ಅಥವಾ ನಾನಾ ಭಾಷಾ ಸಂಸ್ಥಾನವನ್ನು ರಚಿಸುವುದಕ್ಕೆ ಅನುಕೂಲವಾಗುವಂತೆ ಸಂಸ್ಥಾನ ಪುನರ್ವಿಂಗಡಣಾ ಮಸೂದೆಯಲ್ಲಿ ಸೂಕ್ತ ಮಾರ್ಪಾಡಾಗಬೇಕೆಂದು ಮೈಸೂರು ವಿಲೀನ ವಿರೋಧಿ ಸಮ್ಮೇಳನದ ಸ್ಥಾಯಿ ಸಮಿತಿಯವರು ಒತ್ತಾಯ ಮಾಡಿದರು. ಕೇಂದ್ರ ಸರಕಾರ ಮತ್ತು ಸಂಸ್ಥಾನ ಶಾಸನಸಭಾ ಸದಸ್ಯರು ಮೈಸೂರನ್ನೊಳಗೊಂಡ ಮಿಶ್ರಸಂಸ್ಥಾನವನ್ನು ಸ್ಥಾಪಿಸಲು ಬೆಂಬಲ ನೀಡಬೇಕೆಂದು ಕೋರಲಾಯಿತು[74].

ಏಕೀಕರಣಕ್ಕೆ ವಿರೋಧವಾಗಿದ್ದ ಅನೇಕ ನಾಯಕರು ಅಭಿಪ್ರಾಯ ಬದಲಿಸಿ ಏಕೀಕರಣ ವಿರುದ್ಧ ನಡೆಯುತ್ತಿದ್ದ ಹೋರಾಟಕ್ಕೆ ಭಂಗವನ್ನುಂಟು ಮಾಡಿದರು. ವಿಶಾಲ ಮೈಸೂರು ವಿರೋಧಿ ಸಮ್ಮೇಳನದ ಅಧ್ಯಕ್ಷರಾಗಿದ್ದ ಕೆ.ಲಕ್ಕಪ್ಪಗೌಡರೇ ಪತ್ರಿಕೆಗಳಿಗೆ ಹೇಳಿಕೆಯನ್ನು ನೀಡಿ ದೇಶದ ಹಿತದೃಷ್ಟಿಯಿಂದ ಕರ್ನಾಟಕ ಏಕೀಕರಣ ಆಗಲೇಬೇಕೆಂದೂ ಅದನ್ನು ತಪ್ಪಿಸಲು ಮಾಡುವ ಪ್ರಯತ್ನ ಒಳ್ಳೆಯದಲ್ಲವೆಂದೂ ಅರ್ಥ ಬರುವ ಹೇಳಿಕೆ ನೀಡಿದರು. ನಂತರ ಎಸ್.ಚನ್ನಯ್ಯ, ಕೆ.ಹನುಮಂತಯ್ಯ ಇನ್ನೂ ಮೊದಲಾದವರು ಸಹಾ ತಮ್ಮ ಅಭಿಪ್ರಾಯವನ್ನು ಬದಲಿಸಿಕೊಂಡರು[75].

ಇದರಿಂದಾಗಿ ಏಕೀಕರಣ ವಿರೋಧಿಗಳಲ್ಲಿ ಸ್ಪಷ್ಟತೆಯಿರಲಿಲ್ಲವೆಂಬುದನ್ನು ಅರ್ಥ ಮಾಡಿಕೊಳ್ಳಬಹುದಾಗಿದೆ. ಏಕೀಕರಣವನ್ನು ವಿರೋಧಿಸುವ ಹೆಚ್.ಕೆ.ವೀರಣ್ಣಗೌಡನವರ ಗುಂಪು ದಿನೇ ದಿನೇ ಬಲಹೀನವಾಗತೊಡಗಿತು. ನಂತರ ಏಕೀಕರಣವನ್ನು ವಿರೋಧಿಸುವ ನಾಯಕ ವರ್ಗ ತನ್ನ ಮಹತ್ವವನ್ನು ಕಳೆದುಕೊಳ್ಳಲಾರಂಭಿಸಿದರು. ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಗೋಪಾಲಗೌಡರ ಹೆಸರು ಸಹ ಪ್ರಮುಖವಾದದ್ದು. ಅಖಂಡ ಕರ್ನಾಟಕಕ್ಕಾಗಿ ಶ್ರಮಿಸಿದ್ದ ಸ್ಮರಣೀಯ ವ್ಯಕ್ತಿಗಳಲ್ಲಿ ಕೆ.ಆರ್. ಕಾರಂತ, ಎಸ್.ನಿಜಲಿಂಗಪ್ಪ, ಅ.ನ.ಕೃ, ದೊಡ್ಡಮೇಟಿಯವರಂತೆ ಗೋಪಾಲಗೌಡರೂ ಒಬ್ಬರು. ಕರ್ನಾಟಕ ಏಕೀಕರಣವಾದರೆ ಲಿಂಗಾಯಿತರ ಪ್ರಾಬಲ್ಯ ಬೆಳೆಯುವುದೆಂದು ಹಳೆಯ ಮೈಸೂರಿನ ಒಕ್ಕಲಿಗರು ಆತಂಕಗೊಂಡಿದ್ದ ಕಾಲ. ಹೆಚ್.ಕೆ.ವೀರಣ್ಣಗೌಡ, ಕೆ.ವಿ.ಶಂಕರಗೌಡ ಮೊದಲಾದವರೂ ಈ ಆತಂಕಕ್ಕೆ ಈಡಾಗಿದ್ದು, ಇಂಥ ವಿಷಮ ಪರಿಸ್ಥಿತಿಯಲ್ಲೂ ಒಕ್ಕಲಿಗರನ್ನು ಒಲಿಸಿಕೊಂಡು ಏಕೀಕರಣದ ಹಾದಿಯನ್ನು ಸುಗಮಗೊಳಿಸಿದ ಶ್ರೇಯಸ್ಸಿನ ಪ್ರಮುಖ ಪಾಲು ಗೋಪಾಲಗೌಡರಿಗೆ ಸಲ್ಲುತ್ತದೆ[76].

ಹೀಗೆ ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಮಂಡ್ಯಜಿಲ್ಲೆಯಲ್ಲಿ ಪರ ಮತ್ತು ವಿರೋಧಿ ನಿಲುವುಗಳನ್ನು ಕಾಣಬಹುದು. ಏಕೀಕರಣ ವಿರೋಧವಾಗಿ ಮಂಡ್ಯದಲ್ಲಿ ಆರಂಭಗೊಂಡಿದ್ದ ಮೈಸೂರು ವಿಲೀನ ವಿರೋಧಿ ಚಳುವಳಿಯ ಹಲವಾರು ನಾಯಕರ ಬದಲಾದ ನಿಲುವಿನಿಂದ ಸೋಲನ್ನಪ್ಪಿತು. ಚಳುವಳಿಯ ಮುಂಚೂಣಿಯಲ್ಲಿದ್ದ ಅಗ್ರನಾಯಕರೇ ಕೇಂದ್ರ ನಾಯಕರನ್ನು ಸಂಪ್ರೀತಿಗೊಳಿಸುವ, ಸ್ವಾರ್ಥ ಸಾಧಿಸಿಕೊಳ್ಳುವ ಉದ್ದೇಶದಿಂದಲೇ ಈ ವ್ಯಕ್ತಿಗಳು ಏಕೀಕರಣದ ಕಡೆ ವಾಲಿದರು. ಈ ಬದಲಾವಣೆ ಮಂಡ್ಯಜಿಲ್ಲೆಯ ಪ್ರಮುಖ ನಾಯಕರಾದ ಕೆ.ವಿ.ಶಂಕರಗೌಡ, ಹೆಚ್.ಕೆ.ವೀರಣ್ಣಗೌಡ ಇನ್ನೂ ಮುಂತಾದ ನಾಯಕರಿಗೆ ಬೇಸರವನ್ನುಂಟು ಮಾಡಿತು. ಇದರಿಂದ ಅಂತಿಮವಾಗಿ ಅಖಂಡ ಕರ್ನಾಟಕದ ಏಕೀಕರಣದ ನಿಲುವಿಗೆ ಒಪ್ಪಿಗೆ ಸೂಚಿಸಿದರು[77].

ವಿಧಾನಸಭೆಯಲ್ಲಿ ದಿನಾಂಕ 05 ಏಪ್ರಿಲ್ 1956 ರಂದು ರಾಜ್ಯ ಪುನರ್ವಿಂಗಡಣೆಗೆ ಸಂಬಂಧಿಸಿದ ಮಸೂದೆಯನ್ನು ಸರ್ವಾನುಮತದಿಂದ ಅಂಗೀಕರಿಸಿತು. ಮಸೂದೆಗೆ ಹಲವಾರು ತಿದ್ದುಪಡಿಗಳು ಸೂಚಿಸಲ್ಪಟ್ಟ ಅಂಗೀಕೃತವಾಯಿತು. ಮಸೂದೆಯ ಪ್ರಕಾರ ನೂತನ ಮೈಸೂರು ರಾಜ್ಯ ಅಕ್ಟೋಬರ್ 1, 1956 ರಂದು ಜಾರಿಗೆ ಬರುವುದು[78]. ನಂತರ ವಿಧಾನಪರಿಷತ್ತಿನಲ್ಲಿ ದಿನಾಂಕ 6 ಏಪ್ರಿಲ್ 1956 ರಂದು ರಾಜ್ಯ ಪುನರ್ವಿಂಗಡಣೆ ಮಸೂದೆಯನ್ನು ಅಂಗೀಕರಿಸಿತು. ಹಾಗೂ ಗಡಿ ವಿವಾದವನ್ನು ಪ್ರಾದೇಶಿಕ ಮಂಡಳಿಯು ಪರಿಶೀಲಿಸಿದಂತೆ ಇರಬೇಕೆಂದು ಮಂತ್ರಿಗಳಾದ ಎ.ಜಿ.ರಾಮಚಂದ್ರರಾಯರು ತಂದಿದ್ದ ತಿದ್ದುಪಡಿಯನ್ನು ಅಂಗೀಕರಿಸಲಾಯಿತು[79]. ರಾಜ್ಯ ಪುನರ್‌ವಿಂಗಡಣೆ ಆಯೋಗದ ವರದಿಯ ಬಗೆಗೆ ಸಾರ್ವಜನಿಕರ ಅಭಿಪ್ರಾಯಗಳನ್ನು ಗಮನಿಸಿದ ಕೇಂದ್ರಸರ್ಕಾರವು ಸುದೀರ್ಘ ಚರ್ಚೆಯ ನಂತರ 16-03-1956 ರಂದು ಪ್ರಕಟಿಸಿದ ನಿರ್ಣಯದ ಪ್ರಕಾರ ಕೆಳಕಂಡ ಪ್ರದೇಶಗಳು ನೂತನವಾಗಿ ರಚನೆಯಾಗಲಿದ್ದ ಕರ್ನಾಟಕದಲ್ಲಿ ಸೇರುತ್ತಿದ್ದವು.

(1) ಇಡಿಯಾಗಿ ಮೈಸೂರು ರಾಜ್ಯ

(2) ಮುಂಬಾಯಿ ರಾಜ್ಯದ ಬಿಜಾಪುರ, ಧಾರವಾಡ, ಉತ್ತರಕನ್ನಡ, ಮತ್ತು ಬೆಳಗಾವಿ ಜಿಲ್ಲೆಗಳು

(3) ಹೈದರಾಬಾದ್ ರಾಜ್ಯದ ಗುಲ್ಬರ್ಗ ಜಿಲ್ಲೆ (ಕೋಡಂಗಲ್ ಮತ್ತು ತಾಂಡೂರು ತಾಲ್ಲೂಕುಗಳನ್ನು ಬಿಟ್ಟು), ರಾಯಚೂರು ಜಿಲ್ಲೆ (ಆಲಂಪುರ ಮತ್ತು ಗದ್ವಾಲ ತಾಲ್ಲೂಕಗಳನ್ನು ಬಿಟ್ಟು) ಬೀದರ್ ಜಿಲ್ಲೆ

(4) ಮದರಾಸು ರಾಜ್ಯದ ದಕ್ಷಿಣಕನ್ನಡ ಜಿಲ್ಲೆ (ಕಾಸರಗೋಡ ತಾಲ್ಲೂಕು ಮತ್ತು ಅಮೀನಗಡ ದ್ವೀಪಗಳನ್ನು ಬಿಟ್ಟು) ಮತ್ತು ಕೊಯಮತ್ತೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕು

(5) ಕೊಡಗು.

18–04–1956 ರಂದು ಲೋಕಸಭೆಯಲ್ಲಿ ಮಂಡಿತವಾಗಿ, ಸುದೀರ್ಘ ಚರ್ಚೆಯ ನಂತರ ಲೋಕಸಭೆ ಮತ್ತು ರಾಜ್ಯಸಭೆಗಳೆರಡಲ್ಲೂ ಸ್ವೀಕೃತವಾದ ವಿಧೇಯಕಕ್ಕೆ 31–08–1956ರಂದು ರಾಷ್ಟ್ರಪತಿಗಳ ಅಂಗೀಕಾರವೂ ಲಭಿಸಿತು. ಹೀಗೆ 1 ನವಂಬರ್ 1956ರಂದು ವಿಶಾಲ ಮೈಸೂರು ರಾಜ್ಯ ಅಸ್ತಿತ್ವಕ್ಕೆ ಬಂದಿತು[80].

ನಂತರ ಮೈಸೂರು ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಸಂಘದ ಆಶ್ರಯದಲ್ಲಿ 14 ನವಂಬರ್ 1956ರಂದು ನಡೆದ ಚರ್ಚಾಕೂಟದಲ್ಲಿ ಹೆಚ್.ಕೆ.ವೀರಣ್ಣಗೌಡರು ಅಧ್ಯಕ್ಷ ಭಾಷಣ ಮಾಡಿ, ಮೈಸೂರಿಗೆ ಸೇರಬೇಕಾದ ಹಲವಾರು ಕನ್ನಡ ಭಾಗಗಳ ವಿಷಯವನ್ನು ಪ್ರಾದೇಶಿಕ ಮಂಡಳಿಯಲ್ಲಿ ಪ್ರಸ್ತಾಪನೆ ನಿರ್ಧಾರವನ್ನು ಕೈಗೊಳ್ಳಬಹುದೆಂದರು. ತಾವು ಮೈಸೂರು ವಿಲೀನದ ವಿರೋಧಿಗಳಾಗಿದ್ದುದಾಗಿಯೂ, ಆದರೆ ಹಿರಿಯ ನಾಯಕರು ಸಮಗ್ರ ದೇಶ ದೃಷ್ಟಿಯಿಂದ, ಈ ಬಗ್ಗೆ ನಿರ್ಧಾರ ಕೈಗೊಂಡು ಪಾರ್ಲಿಮೆಂಟು ಆಖೈರಾಗಿ ತನ್ನ ತೀರ್ಮಾನ ಕೊಟ್ಟ ಮೇಲೆ ಎಲ್ಲರೂ ವಿಶಾಲ ಮೈಸೂರು ರಾಜ್ಯದ ಪರವಾಗಿ ತಲೆ ಭಾಗ ಬೇಕಾಯಿತೆಂದು ನುಡಿದರು[81].

ಕೊನೆ ಟಿಪ್ಪಣಿಗಳು :

1. ಪುಟ್ಟಸ್ವಾಮಯ್ಯ.ಬಿ., ಭಾರತ ಬೆಳಗುತ್ತಿದೆ, ಎಸ್.ನಿಜಲಿಂಗಪ್ಪನವರ ಜೀವನ ದರ್ಶನ, ಪು. 44
2. ಜನಪದ ಮಾಸ ಪತ್ರಿಕೆ ನವಂಬರ್ 1998, ಸಂಪುಟ 33, ಸಂಚಿಕೆ 08, ಪು. 15
3. ಗೊರೂರು ರಾಮಸ್ವಾಮಿ ಅಯ್ಯಂಗಾರ್, ಕರ್ನಾಟಕ ಏಕೀಕರಣದ ಕಥೆ, ಪು. 41
4. ಗೋವಿಂದರಾಜು.ಸಿ.ಆರ್., ಕರ್ನಾಟಕದ ಏಕೀಕರಣ ಚಳವಳಿ ಮತ್ತು ಕನ್ನಡ ಸಾಹಿತ್ಯ, ಪು. 74
5. ನಾರಾಯಣ.ಹೆಚ್.ಜಿ., ಮೈಸೂರು ಮತ್ತು ಏಕೀಕರಣ, ಪು. 67
6. ಪುಟ್ಟಸ್ವಾಮಿಯ್ಯ.ಬಿ, ಪೂರ್ವೋಕ್ತ, ಪು. 47

7. ಗೋಪಾಲರಾವ್.ಎಚ್.ಎಸ್., (ಸಂ.), ಕರ್ನಾಟಕ ಏಕೀಕರಣ ಇತಿಹಾಸ, ಪು. 145

8. ಸಾಧ್ವಿ ದಿನಪತ್ರಿಕೆ, ದಿನಾಂಕ 02.04.1949 ಸಂಪುಟ 07, ಸಂಚಿಕೆ 202, ಪು. 02

9. ಪಾಟೀಲ ಪುಟ್ಟಪ್ಪ, ಕರ್ನಾಟಕ ಕಥೆ, ಬೆಂಗಳೂರು, 1991, ಪು. 31

10. Mysore legislative Assembly debates, 22nd July 1953

11. Mysore Legislative assembly debates, 27th July 1953

12. ಸಾಧ್ವಿ ದಿನಪತ್ರಿಕೆ, ದಿನಾಂಕ 08.11.1953 ಭಾನುವಾರ, ಸಂಪುಟ 2, ಸಂಚಿಕೆ 92, ಪು. 02

13. ರಾಜ್ಯ ಪತ್ರಗಾರ ಇಲಾಖೆ, ಬೆಂಗಳೂರು ರಾಜ್ಯಗಳ ಪುನರ್ವಿಂಗಡಣೆಯ ಕಮಿಷನ್‌ರವರ ವರದಿ, 1955

14. ವೀರಣ್ಣಗೌಡ.ಎಚ್.ಕೆ., ಬದುಕು–ಮೆಲುಕು, ಪು. 258

15. ಸಾಧ್ವಿ ದಿನಪತ್ರಿಕೆ, ದಿನಾಂಕ 06.09.1954, ಸಂಪುಟ 13, ಸಂಚಿಕೆ 33, ಪು. 02

16. ರಂಗನಾಥ ದಿವಾಕರ, ಕರ್ನಾಟಕ ಏಕೀಕರಣದ ಕಥೆ, ಪು. 119

17. Special Branch Abstract no. 22/55, 21st May 1955, p. 109-110

18. ಜವರಪ್ಪಗೌಡ.ಪಿ.ಎನ್. ನನ್ನ ಜೀವನ ಯಾತ್ರೆ, ಪು. 225

19. Special Branch Abstract no. 23/1955, Bangalore, Date 04.06.1955 Saturday, p. 123

20. ಸಾಧ್ವಿ ದಿನಪತ್ರಿಕೆ, ದಿನಾಂಕ 12.10.1955 ಬುಧವಾರ, ಸಂಪುಟ 4, ಸಂಚಿಕೆ 60, ಪು. 01

21. ಸಾಧ್ವಿ ದಿನಪತ್ರಿಕೆ, ದಿನಾಂಕ 13.09.1955 ಮಂಗಳವಾರ, ಸಂಪುಟ 14, ಸಂಚಿಕೆ 33, ಪು. 01

22. ಸಾಧ್ವಿ ದಿನಪತ್ರಿಕೆ, ದಿನಾಂಕ 12.10.1955 ಬುಧವಾರ, ಸಂಪುಟ 14, ಸಂಚಿಕೆ 60, ಪು. 01

23. Special branch Abstract no. - 44/1955, Date 29th October 1955, p. 278

24. ಸಾಧ್ವಿ ದಿನಪತ್ರಿಕೆ, ದಿನಾಂಕ 28.10.1955 ಶುಕ್ರವಾರ, ಸಂಪುಟ 4, ಸಂಚಿಕೆ 75, ಪು. 02

25. ಸಾಧ್ವಿ ದಿನಪತ್ರಿಕೆ, ದಿನಾಂಕ 01.11.1955 ಮಂಗಳವಾರ, ಸಂಪುಟ 14, ಸಂಚಿಕೆ 78, ಪು. 01

26. ಜವರಪ್ಪಗೌಡ.ಪಿ.ಎನ್., ಪೂರ್ವೋಕ್ತ, ಪು. 225

27. ಸಾಧ್ವಿ ದಿನಪತ್ರಿಕೆ, ದಿನಾಂಕ 09.11.1955 ಬುಧವಾರ, ಸಂಪುಟ 14, ಸಂಚಿಕೆ 86, ಪು. 01

28. ಸಾಧ್ವಿ ದಿನಪತ್ರಿಕೆ, ದಿನಾಂಕ 11.10.1955 ಗುರುವಾರ, ಸಂಪುಟ 14, ಸಂಚಿಕೆ 88, ಪು. 01

29. ಸಾಧ್ವಿ ದಿನಪತ್ರಿಕೆ, ದಿನಾಂಕ 24.11.1955 ಗುರುವಾರ, ಸಂಪುಟ 14, ಸಂಚಿಕೆ 100, ಪು. 01

30. SBA No. 48/55, 26th November 1955, p. 302

31. ಸಾಧ್ವಿ ದಿನಪತ್ರಿಕೆ, ದಿನಾಂಕ 01.12.1956 ಗುರುವಾರ, ಸಂಪುಟ 14, ಸಂಚಿಕೆ 75, ಪು. 107

32. Reactions to the S.R.C. Report, Antikarnataka Agitation, Special Branch Abstract no.50/1955, 10th December 1955, p. 311

33. Special Branch Abstract no. 50/1955, Date 10th Decenver 1955, p. 311

34. ಸಾಧ್ವಿ ದಿನಪತ್ರಿಕೆ, ದಿನಾಂಕ, 07.12.1955 ಬುಧವಾರ, ಸಂಪುಟ 14, ಸಂಚಿಕೆ 113, ಪು. 01

35. ಸಾಧ್ವಿ ದಿನಪತ್ರಿಕೆ, ದಿನಾಂಕ, 08.12.1955 ಗುರುವಾರ, ಸಂಪುಟ 14, ಸಂಚಿಕೆ 114, ಪು. 02

36. ಸಾಧ್ವಿ ದಿನಪತ್ರಿಕೆ ದಿನಾಂಕ, 13.12.1955 ಮಂಗಳವಾರ, ಸಂಪುಟ 14, ಸಂಚಿಕೆ 19, ಪು. 01

37. ಸಾಧ್ವಿ ದಿನಪತ್ರಿಕೆ, ದಿನಾಂಕ, 12.12.1955 ಸೋಮವಾರ, ಸಂಪುಟ 14, ಸಂಚಿಕೆ 118, ಪು. 02

38. ಸಾಧ್ವಿ ಪತ್ರಿಕೆ ದಿನಾಂಕ, 15.12.1955 ಗುರುವಾರ, ಸಂಪುಟ 14, ಸಂಚಿಕೆ 120, ಪು. 02

39. ಸಾಧ್ವಿ ಪತ್ರಿಕೆ ದಿನಾಂಕ, 22.12.1955 ಗುರುವಾರ ಸಂಪುಟ 14, ಸಂಚಿಕೆ 126, ಪು. 02

40. Special Branch Abstrct no. 53/55, 31th December 1955, p. 338

41. ಸಾಧ್ವಿ ದಿನಪತ್ರಿಕೆ, ದಿನಾಂಕ 31.12.1955 ಶನಿವಾರ, ಸಂಪುಟ 14, ಸಂಚಿಕೆ 135, ಪು. 01

42. ಸಾಧ್ವಿ ದಿನಪತ್ರಿಕೆ, ದಿನಾಂಕ 03.01.1956 ಮಂಗಳವಾರ, ಸಂಪುಟ 14, ಸಂಚಿಕೆ 138, ಪು. 02

43. ಸಾಧ್ವಿ ದಿನಪತ್ರಿಕೆ, ದಿನಾಂಕ 01.01.1956 ಭಾನುವಾರ, ಸಂಪುಟ 14, ಸಂಚಿಕೆ 136, ಪು. 01

43. (ಎ) ಮಂಡ್ಯದಲ್ಲಿ ನಡೆದ ಮೈಸೂರು ವಿಲೀನ ವಿರೋಧ ಸಂಸ್ಥಾನದ ಸಮ್ಮೇಳನದ ಸ್ವಾಗತ ಭಾಷಣದ ಪ್ರತಿಯಿಂದ, ಕೆ.ವಿ.ಶಂಕರಗೌಡ ಸ್ವಾಗತ ಸಮಿತಿ, ಮಂಡ್ಯ 1ನೇ ಜನವರಿ 1956

44. Special Branch Abstract no. 1/56, 7th Jan 1956, p. 6

45. Ibid, p. 6

46. ನಾರಾಯಣ.ಹೆಚ್.ಜಿ., ಪೂರ್ವೋಕ್ತ, ಪು. 74

47. ಶಿವರಾಮು.ಎಸ್., ಮಂಡ್ಯ ಜಿಲ್ಲೆಯ ಜನಪರ ಚಳುವಳಿಗಳು, ಪು. 67

48. ಸಾಧ್ವಿ ದಿನಪತ್ರಿಕೆ, ದಿನಾಂಕ 01.01.1956 ಭಾನುವಾರ, ಸಂಪುಟ 14, ಸಂಚಿಕೆ 136, ಪು. 01

49. Special Branch Abstrct no. 45/55, 5th November 1955, p. 285

50. ಸಾಧ್ವಿಪತ್ರಿಕೆ, ದಿನಾಂಕ 24.11.1955 ಗುರುವಾರ, ಸಂಪುಟ 14, ಸಂಚಿಕೆ 100, ಪು. 02

51. ಲಕ್ಕಪ್ಪಗೌಡ.ಹೆಚ್.ಜೆ.(ಸಂ), ರಾಷ್ಟ್ರರತ್ನ ಕೆಂಗಲ್ ಹನುಮಂತಯ್ಯನವರ ಅಭಿನಂದನಾ ಸಂಚಿಕೆ, ಪು. 72

52. Special Branch Abstrct no. 3/56, 21st Jan 1956, p. 16

53. Special Branch Abstrct no.5/56, 21st Jan 1956, p. 17

54. ಸಾಧ್ವಿ ದಿನಪತ್ರಿಕೆ, ದಿನಾಂಕ 20.01.1956 ಶುಕ್ರವಾರ, ಸಂಪುಟ 14, ಸಂಚಿಕೆ 15, ಪು. 04

55. ದಿವಾಕರು.ರಂ.ರಾ. (ಸಂ.), ಕರ್ನಾಟಕ ಪರಂಪರೆ, ಪು. 573

56. Special Branch Abstrct no. 3/56, 21th Jan 1956, p. 17

57. ಸಾಧ್ವಿ ದಿನಪತ್ರಿಕೆ, ನಾಂಕ, 23.01.1956 ಶನಿವಾರ, ಸಂಪುಟ 14, ಸಂಚಿಕೆ 152, ಪು. 01

58. Special Branch Abstrct no. 4/56, 28th Jan. 1956, p. 21

59. ಸಾಧ್ವಿ ದಿನಪತ್ರಿಕೆ, ದಿನಾಂಕ 23.01.1956 ಸೋಮವಾರ, ಸಂಪುಟ 14, ಸಂಚಿಕೆ 154, ಪು. 02

60. ಸಾಧ್ವಿ ದಿನಪತ್ರಿಕೆ, ದಿನಾಂಕ 27.01.1956, ಸಂಪುಟ 14, ಸಂಚಿಕೆ 157, ಪು. 02

61. ಸಾಧ್ವಿ ದಿನಪತ್ರಿಕೆ, ದಿನಾಂಕ 01.02.1956 ಬುಧವಾರ, ಸಂಪುಟ 14, ಸಂಚಿಕೆ 161, ಪು. 01

62. ಸಾಧ್ವಿ ದಿನಪತ್ರಿಕೆ, ದಿನಾಂಕ 01.02.1956 ಬುಧವಾರ, ಸಂಪುಟ 14, ಸಂಚಿಕೆ 161, ಪು. 02

63. Special Branch Abstrct no. 5/56, 4th Feb. 1956, p. 33

64. Special Branch Abstrct no. 6/56, 15th Feb,1956, p. 85

65. The legislative Assembly debates, 21st February 1956

66. The legislative Assembly debates, 31st March 1956

67. The legislative Assembly debates 2nd April 1956, p. 1441

68. Ibid, p. 1449

69. Ibid, p. 1449

70. Ibid, p. 1460

71. Ibid, p. 1447

72. Mysore legisative Assembly Debates, 3rd April 1956, p. 1552

73. Ibid, p. 1526

74. ಸಾಧ್ವಿ ದಿನಪತ್ರಿಕೆ, 01.04.1956 ಭಾನುವಾರ, ಸಂಪುಟ 14, ಸಂಚಿಕೆ 222, ಪು. 01

75. ವೀರಣ್ಣಗೌಡ.ಹೆಚ್.ಕೆ., ಬದುಕು–ಮೆಲುಕು ಪು. 260

76. ವೆಂಕಪ್ಪಗೌಡ ಕೋಣಂದೂರು (ಸಂ.), ಜೀವಂತ ಜ್ವಾಲೆ, ಪು. 163–164

77. ದೇಜಗೌ (ಸಂ.), ಸುವರ್ಣ ಮಂಡ್ಯ, ಪು. 243

78 ಸಾಧ್ವಿ ದಿನಪತ್ರಿಕೆ, ದಿನಾಂಕ 06.04.1956 ಶುಕ್ರವಾರ, ಸಂಪುಟ 14, ಸಂಚಿಕೆ 227, ಪು. 01

79. ಸಾಧ್ವಿ ದಿನಪತ್ರಿಕೆ, ದಿನಾಂಕ 07.04.1956 ಶನಿವಾರ, ಸಂಪುಟ 14 ಸಂಚಿಕೆ–228 ಪು. 01

80. ಜನಪದ ಸಂಪುಟ 33, ಸಂಚಿಕೆ 08 ನವೆಂಬರ್ 1988, ಪು. 20

81. ಸಾಧ್ವಿ ದಿನಪತ್ರಿಕೆ, ದಿನಾಂಕ 15.11.1956 ಗುರುವಾರ, ಸಂಪುಟ 15, ಸಂಚಿಕೆ 103, ಪು. 01

ಅಧ್ಯಾಯ–5

ಸಮಾರೋಪ

ಒಂದು ರಾಷ್ಟ್ರದ ಚರಿತ್ರೆಯಲ್ಲಿ ಸ್ವಾತಂತ್ರ್ಯ ಚಳುವಳಿಯ ಅಧ್ಯಯನವು ನಿರಂತರವಾಗಿ ಮಹತ್ವದ ಕಾಲಘಟ್ಟವಾಗಿರುತ್ತದೆ. ಸ್ವಾತಂತ್ರ್ಯ ಚಳುವಳಿಯು ಆ ರಾಷ್ಟ್ರದ ಪ್ರತಿಯೊಂದು ಪ್ರದೇಶದ ಜನತೆಯ ಪಾಲ್ಗೊಳ್ಳುವಿಕೆ ಮೂಲಕ ರಾಷ್ಟ್ರೀಯ ಆಂದೋಲನವಾಗಿ ಪರಿವರ್ತನೆಯಾಗುತ್ತದೆ. 19ನೇ ಶತಮಾನದಲ್ಲಿ ಆರಂಭವಾದ ರಾಷ್ಟ್ರೀಯ ಆಂದೋಲನವು, ವಸಾಹತುಷಾಹಿ ಆಳ್ವಿಕೆ ವಿರುದ್ಧ ಪ್ರತಿಭಟಿಸುವಲ್ಲಿ ಭಾರತೀಯರು ಮುಂದಾಗಿದ್ದರು. ಸ್ವಾತಂತ್ರ್ಯ ಪೂರ್ವದಲ್ಲಿ ಭಾರತವು ಸುಮಾರು 562 ಸಂಸ್ಥಾನಗಳಲ್ಲಿ ಹರಿದು ಹಂಚಿಹೋಗಿತ್ತು. ಆ ಸಂಸ್ಥಾನಗಳಲ್ಲಿ ಮೈಸೂರು ಸಂಸ್ಥಾನವು ಕೂಡ ಒಂದಾಗಿತ್ತು. ಮೈಸೂರು ಸಂಸ್ಥಾನದ ಜಿಲ್ಲೆಗಳಲ್ಲಿ ಒಂದಾದ ಮಂಡ್ಯ ಜಿಲ್ಲೆಯು ಕೂಡ ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಗೆ ವಿಶಿಷ್ಟವಾದ ಕೊಡುಗೆಯನ್ನು ನೀಡಿದೆ.

ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಮಹಾತ್ಮ ಗಾಂಧೀಜಿಯವರು ಪ್ರವೇಶವಾದ ನಂತರ ಸತ್ಯ, ಅಹಿಂಸೆ, ಸತ್ಯಾಗ್ರಹ, ತತ್ವಗಳಿಂದ ಜನರು ಪ್ರಭಾವಿತರಾಗಿದ್ದರು. ಮಂಡ್ಯ ಜಿಲ್ಲೆ ಜನತೆಯು ಕೂಡ ಮಹಾತ್ಮ ಗಾಂಧೀಜಿಯವರನ್ನು 1927 ಹಾಗೂ 1934ರಲ್ಲಿ ನೋಡುವ ಸದಾ ಅವಕಾಶ ಪಡೆದುಕೊಂಡಿದ್ದರು. ಆ ಮೂಲಕ ಮಹಾತ್ಮಗಾಂಧೀಜಿಯವರ ಹರಿಜನ ನಿಧಿಗೆ ಅಪಾರವಾದ ಧನ ಸಹಾಯ ಮಾಡಿದ್ದರು. ಇದು ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಯಲ್ಲಿ ಜಿಲ್ಲೆಯ ಶ್ರೀರಂಗಪಟ್ಟಣ, ಮಂಡ್ಯ, ಮದ್ದೂರು, ಸೋಮನಹಳ್ಳಿ, ಜನರು ಪಾಲ್ಗೊಳ್ಳಲು ಪ್ರೇರಣೆಯಾಯಿತು. ಅಲ್ಲದೇ ಜಿಲ್ಲೆಯ ತಾಲ್ಲೂಕುಗಳಾದ ಮದ್ದೂರು, ಮಳವಳ್ಳಿ, ಮಂಡ್ಯ, ಕೆ.ಆರ್.ಪೇಟೆ, ನಾಗಮಂಗಲ, ಪಾಂಡವಪುರ, ಶ್ರೀರಂಗಪಟ್ಟಣಗಳಿಗೂ ಸ್ವಾತಂತ್ರ್ಯ ಚಳುವಳಿ ವ್ಯಾಪಿಸಿತು. ಚಳುವಳಿ ನಿರಂತರವಾಗಿ ನಡೆಯುವಲ್ಲಿ ಈ ಎಲ್ಲ ತಾಲ್ಲೂಕುಗಳಲ್ಲಿ ಕಾಂಗ್ರೆಸ್ ಪ್ರಚಾರ ಸಭೆಗಳು, ಬಹಿರಂಗ ಅಧಿವೇಶನಗಳಗಳನ್ನು ನಡೆಸಿದ್ದರು. ಪ್ರಮುಖ ಕಾಂಗ್ರೆಸ್ ನಾಯಕರಾದ ಹೆಚ್.ಸಿ.ದಾಸಪ್ಪ, ಟಿ.ಸುನಂದಮ್ಮ, ಯಶೋಧರಮ್ಮ ದಾಸಪ್ಪ, ಪಾಲಹಳ್ಳಿ ಸೀತಾರಾಮಯ್ಯ, ಹೆಚ್.ಕೆ.ವೀರಣ್ಣಗೌಡ, ಪಿ.ಎನ್.ಜವರಪ್ಪಗೌಡ, ಎಂ.ಮಹಾಬಲರಾವ್, ಮಳವಳ್ಳಿ ವೀರಪ್ಪ, ಟಿ.ಮರಿಯಪ್ಪ, ಎಂ.ಆರ್.ಎನ್.ಶಾಸ್ತ್ರಿ ಅವರು ಭಾಷಣಗಳಿಂದ ಜನರು ರಾಷ್ಟ್ರೀಯ ಚಳುವಳಿ, ಘಟನೆಗಳ ಬಗ್ಗೆ ತಿಳಿದುಕೊಳ್ಳಲು ಸಾಧ್ಯವಾಗಿತ್ತು. ಹಾಗೂ ಕಾಂಗ್ರೆಸ್ ಸದಸ್ಯತ್ವ ಪಡೆದುಕೊಂಡು ಚಟುವಟಿಕೆಗಳಲ್ಲಿ ನಿರಂತರವಾಗಿ ಭಾಗವಹಿಸಿದ್ದರು.

ಸ್ವಾತಂತ್ರ್ಯ ಪೂರ್ವದಲ್ಲಿ ಮಂಡ್ಯ ಜಿಲ್ಲೆಯೂ ರಾಜ ಪ್ರಭುತ್ವದ ಆಳ್ವಿಕೆಗೆ ಒಳಪಟ್ಟಿದ್ದರು ಕೂಡ ಜನರು ಜವಾಬ್ದಾರಿ ಸರಕಾರಕ್ಕಾಗಿ ಹೋರಾಟ ಆರಂಭಿಸಿದ್ದನ್ನು ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಶಿವಪುರ ಕಾಂಗ್ರೆಸ್ ಅಧಿವೇಶನದಿಂದ ಗುರುತಿಸಬಹುದು. ರಾಷ್ಟ್ರಮಟ್ಟದಲ್ಲಿ ಹರಿಪುರದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ನಂತರ ವೈಯಕ್ತಿಕ ಅಥವಾ ಸಂಘಟನೆ ಮೂಲಕ ಸ್ವಾತಂತ್ರ್ಯ ಚಳುವಳಿ ಭಾಗವಹಿಸಬಹುದೆಂಬ ನಿರ್ಣಯದಿಂದ 1938 ಫೆಬ್ರವರಿ 28 ರಂದು ಮೈಸೂರು ಕಾಂಗ್ರೆಸ್ ಸ್ಥಾಪನೆಗೆ ಕಾರಣವಾಯಿತು. ಮೈಸೂರು ಕಾಂಗ್ರೆಸ್ ಅಧಿವೇಶನ ನಡೆಸಲು ತೀರ್ಮಾನವಾದ ಮೂಲಕ ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಚಳುವಳಿಯ ಒಂದು ಭಾಗವಾದ ಜವಾಬ್ದಾರಿ ಸರಕಾರ ಸ್ಥಾಪನೆ ಕಾರ್ಯವನ್ನು ಆರಂಭಿಸಿದ್ದರು. ಮೈಸೂರು ಸಂಸ್ಥಾನದಲ್ಲಿ ನಂಜನಗೂಡು, ಶ್ರೀರಂಗಪಟ್ಟಣದಲ್ಲಿ ಅಧಿವೇಶನ ನಡೆಸಲು ಸಾಧ್ಯವಾಗದ ಪರಿಸ್ಥಿತಿಯಲ್ಲಿ ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕು ಶಿವಪುರದಲ್ಲಿ ಅಧಿವೇಶನ ನಡೆಸಲು ರೈತಾಪಿ ಕುಟುಂಬದ ಹಿನ್ನೆಲೆಯಿಂದ ಬಂದ ಹೆಚ್.ಕೆ.ವೀರಣ್ಣಗೌಡ, ತಿರುಮಲೇಗೌಡ, ಕೊಪ್ಪದ ಜೋಗೀಗೌಡ ನೇತೃತ್ವದಲ್ಲಿ ಅಧಿವೇಶನ ನಡೆಸಿದ್ದರು. ಅಂದಿನ ಕಾಲಕ್ಕೆ ಹತ್ತು ಸಾವಿರ ರೂಪಾಯಿಗಳಿಂತ ಹೆಚ್ಚು ಖರ್ಚು ಆಗುವ ಸಂದರ್ಭದಲ್ಲಿ ಮಂಡ್ಯ ಜಿಲ್ಲೆಯ ತಾಲ್ಲೂಕುಗಳಲ್ಲಿ ಪ್ರಚಾರ ಸಭೆ ನಡೆಸಿದ್ದರು ಹಾಗೂ ಸುತ್ತಮುತ್ತಲಿನ ಸಾಮಾನ್ಯಜನರು, ರೈತರು, ಅಧಿವೇಶನಕ್ಕೆ ಬೇಕಾಗುವ ಸಾಮಗ್ರಿಗಳನ್ನು, ಧನ ಸಹಾಯ ಒದಗಿಸಿದ್ದರು.

ಭಾರತದ ಚರಿತ್ರೆಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ಹಳ್ಳಿಯಲ್ಲಿ ಮೊದಲ ಬಾರಿಗೆ ನಡೆದಿದ್ದು ಹರಿಪುರದಲ್ಲಿ ಅದೇ ರೀತಿ ದಕ್ಷಿಣ ಭಾರತದಲ್ಲಿಯೇ ಮೊದಲು ಎನ್ನುಬಹುದಾದ ಶಿವಪುರ ಕಾಂಗ್ರೆಸ್ ಅಧಿವೇಶನ 1938ರ ಏಪ್ರಿಲ್ 11, 12 ಮತ್ತು 13 ರಂದು ನಡೆಯಿತು. ಅಧಿವೇಶನದಲ್ಲಿ ರೈತರು, ವಿದ್ಯಾರ್ಥಿಗಳು, ಯುವಜನರು, ಕಾರ್ಮಿಕರು ಮತ್ತು ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಸರಕಾರದ ನಿಷೇಧಾಜ್ಞೆ ಹೊರತಾಗಿ 25 ಸಾವಿರಕ್ಕಿಂತ ಹೆಚ್ಚು ಜನರು ಭಾಗವಹಿಸಿದ್ದು ಮೈಸೂರು ಸಂಸ್ಥಾನದ ಚರಿತ್ರೆಯಲ್ಲಿ ವಿಶಿಷ್ಟವಾದುದು. ಅಲ್ಲದೇ ಸರಕಾರದ ನಿಷೇಧಾಜ್ಞೆಯು ಒಂದು ತಿಂಗಳ ಕಾಲ ಮುಂದುವರಿಸಿದಾಗ ಸುತ್ತಮುತ್ತಲಿನ ಹಳ್ಳಿಯ ಸಾಮಾನ್ಯ ಜನರು, ಮಹಿಳೆಯರು ಒಂದು ತಿಂಗಳ ಕಾಲ ಧ್ವಜಾರೋಹಣ, ಮೆರವಣಿಗೆ ನಡೆಸಿದ್ದು, ಭಾರತದ ಇತಿಹಾಸದಲ್ಲಿ ಬೇರೆ ಯಾವುದೇ ಪ್ರದೇಶದಲ್ಲಿ ಕಂಡು ಬರುವುದಿಲ್ಲ. ಈ ಮೂಲಕ ಮಂಡ್ಯ ಜಿಲ್ಲೆಯ ಜನರು ಸತ್ಯ ಮತ್ತು ಅಹಿಂಸೆ ತತ್ವದ ಪಾಲನೆ ಮೂಲಕ ಯಶಸ್ಸು ಕಂಡಿದ್ದನ್ನು ತಿಳಿಯಬಹುದು.

[illegible]

[illegible]

ತರುವಾಯ 1939ರಲ್ಲಿ ಮೈಸೂರು ಸರಕಾರಿ ಕಟ್ಟಡಕ್ಕೆ ಪೊಲೀಸ್ ಅಧಿಕಾರಿಯ ಹ್ಯಾಮಿಲ್ಟನ್ ಹೆಸರನ್ನು ಇಟ್ಟಿರುವುದಕ್ಕೆ ಹ್ಯಾಮಿಲ್ಟನ್ ಸತ್ಯಾಗ್ರಹ ನಡೆಯಿತು. 1939ರ ಫೆಬ್ರವರಿ 15 ರಿಂದ ಏಪ್ರಿಲ್ 10 ರವರೆಗೆ ಸತ್ಯಾಗ್ರಹ ನಡೆಯಿತು. ಹ್ಯಾಮಿಲ್ಟನ್ ಸತ್ಯಾಗ್ರಹದಲ್ಲಿ ಮಂಡ್ಯ ಜಿಲ್ಲೆಯ ಸತ್ಯಾಗ್ರಹಿಗಳು ಬ್ರಿಟಿಷ್ ವಸಾಹತುಷಾಹಿ ನೀತಿಯನ್ನು ಪ್ರತಿಭಟಿಸಿದ್ದಕ್ಕೆ ಉತ್ತಮ ನಿದರ್ಶನ ಎನ್ನಬಹುದು. ಈ ಸತ್ಯಾಗ್ರಹದಲ್ಲಿ ಮಂಡ್ಯ, ನಾಗಮಂಗಲ, ಕೆ.ಆರ್.ಪೇಟೆ, ಶ್ರೀರಂಗಪಟ್ಟಣದಿಂದ ಸತ್ಯಾಗ್ರಹಿಗಳು ಮಂಡ್ಯದಿಂದ ಮೈಸೂರಿಗೆ ರೈಲಿನಲ್ಲಿ ಪ್ರಯಾಣ ಬೆಳೆಸಿ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ಸತ್ಯಾಗ್ರಹದಲ್ಲಿ ಹ್ಯಾಮಿಲ್ಟನ್ ಹೆಸರು ಅಳಿಸಲು ಪ್ರಯತ್ನಿಸಿದ್ದರು. ಅಲ್ಲದೇ ಸಂಜೆ ನಡೆಯುತ್ತಿದ್ದ ಸುಬ್ಬರಾಯನ ಕೆರೆ ಬಹಿರಂಗ ಅಧಿವೇಶನದಲ್ಲಿ ಮಂಡ್ಯದ ಸತ್ಯಾಗ್ರಹಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದು ವಸಾಹತುಷಾಹಿ ನೀತಿಯನ್ನು ಪ್ರತಿಭಟಿಸುವ ಪ್ರಯತ್ನದಲ್ಲಿ ಯಶಸ್ಸು ಕಂಡಿದ್ದರು. ತಗಡೂರು ರಾಮಚಂದ್ರರಾಯರು ಹ್ಯಾಮಿಲ್ಟನ್ ಸತ್ಯಾಗ್ರಹವನ್ನು ನಿಲ್ಲಿಸುವ ನಿರ್ಧಾರದಿಂದ ಚಳುವಳಿ ವಿಫಲವಾಯಿತು. ವಸಾಹತುಷಾಹಿ ನೀತಿಯನ್ನು ಪ್ರತಿಭಟಿಸುವಲ್ಲಿ ಜಿಲ್ಲೆಯ ಪಿ.ಎನ್. ಜವರಪ್ಪಗೌಡ, ಯು.ಕೆಂಚಯ್ಯ, ಎಂ.ಮಹಾಬಲರಾವ್ ಅವರೊಂದಿಗೆ ಜಿಲ್ಲೆಯ ಸತ್ಯಾಗ್ರಹಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ತರುವಾಯ 1942ರಲ್ಲಿ ಕ್ವಿಟ್ ಇಂಡಿಯಾ ಚಳುವಳಿ ದೇಶಾದ್ಯಂತ ನಡೆಯಿತು. ಮಹಾತ್ಮ ಗಾಂಧೀಜಿಯವರು ನೀಡಿದ ಮಾಡು ಇಲ್ಲವೇ ಮಡಿ ಎಂಬ ಸಂದೇಶಕ್ಕೆ ಮಂಡ್ಯ ಜಿಲ್ಲೆಯು ಕೂಡಾ ಸಕಾರಾತ್ಮಕವಾಗಿ ಸ್ಪಂದಿಸಿದ್ದರು. ಮಂಡ್ಯ ಜಿಲ್ಲೆಯ ತಾಲ್ಲೂಕುಗಳಾದ ಮದ್ದೂರು, ಮಳವಳ್ಳಿ, ಮಂಡ್ಯ, ಶ್ರೀರಂಗಪಟ್ಟಣ, ಪಾಂಡವಪುರ (ಫ್ರೆಂಚ್‌ರಾಕ್ಸ್), ನಾಗಮಂಗಲ, ಕೆ.ಆರ್.ಪೇಟೆ, ತಾಲ್ಲೂಕುಗಳಲ್ಲಿ ಕ್ವಿಟ್ ಇಂಡಿಯಾ ಚಳುವಳಿ ವ್ಯಾಪಕವಾಗಿ ನಡೆಯಿತು. ವಿದ್ಯಾರ್ಥಿಗಳು, ಉಪಾಧ್ಯಾಯರು ತರಗತಿಗಳನ್ನು ಬಹಿಷ್ಕರಿಸಿದ್ದರು. ನಗರದ ಪ್ರಮುಖ ಬೀದಿ ಬೀದಿಗಳಲ್ಲಿ ಧ್ವಜದೊಂದಿಗೆ ಮೆರವಣಿಗೆಯನ್ನು ನಡೆಸಿದ್ದರು. ಅಲ್ಲದೇ ಕಾರ್ಮಿಕರು ಕೆಲಸವನ್ನು ತ್ಯಜಿಸಿ ಮುಷ್ಕರ ನಡೆಸಿದ್ದರು. ಹಾಗೂ ಈಚಲುಮರಗಳನ್ನು ಕಡಿಯುವುದು, ಸರ್ಕಾರಿ ಕಟ್ಟಡಗಳಿಗೆ ಬೆಂಕಿ ಹಚ್ಚಿ, ತಂತಿ ಕತ್ತರಿಸುವುದು, ಸೇಂದಿ ಅಂಗಡಿಗಳನ್ನು ಸುಟ್ಟುಹಾಕುವುದು, ಸಂತೆಗಳಲ್ಲಿ ಪಿಕೆಟಿಂಗ್ ನಡೆಸುವ ಕಾರ್ಯ ಮಾಡಿದರು. ಪ್ರಮುಖ ನಾಯಕರುಗಳಾದ ಇಂಡುವಾಳುಹೊನ್ನಯ್ಯ, ಪಿ.ಎನ್.ಜವರಪ್ಪಗೌಡ, ಹೆಚ್.ಕೆ.ವೀರಣ್ಣಗೌಡ ಬಂಧನವಾದರೂ ವಿದ್ಯಾರ್ಥಿಗಳು, ಕಾರ್ಮಿಕರು ಕ್ವಿಟ್ ಇಂಡಿಯಾ ಚಳುವಳಿಯನ್ನು ಒಂದು ವರ್ಷದವರೆಗೆ ಮುಂದುವರಿಸಿದ್ದರು. ಈ ಮೂಲಕ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಮಂಡ್ಯ ಜಿಲ್ಲೆಯ ವಿದ್ಯಾರ್ಥಿಗಳು, ಯುವಕರು, ಕಾರ್ಮಿಕರು, ರೈತರು

[illegible]

ಮಹಿಳೆಯರು ನಡೆಸಿದ ಹೋರಾಟವು ಮತ್ತು ಮಂಡ್ಯ ಜಿಲ್ಲೆಯ ಚರಿತ್ರೆಯಲ್ಲಿ ಅವಿಸ್ಮರಣೀಯಾಗಿದೆ. ಮುಖ್ಯವಾಗಿ ಗಾಂಧೀಜಿಯವರ ತತ್ವಗಳ ಮೂಲಕ ಚಳುವಳಿಯನ್ನು ನಡೆಸಿದ್ದು ವಿಶಿಷ್ಟವಾದುದು. ಆದರೆ ಜಿಲ್ಲೆಯಲ್ಲಿ ಮದ್ದೂರು, ನಾಗಮಂಗಲದಲ್ಲಿ ಎಸ್.ಸಿ.ಮಲ್ಲಯ್ಯ, ಎಂ.ಸಿ.ಲಿಂಗಯ್ಯ ರಾಜನಿಷ್ಠ ಸಭೆಯ ನಡೆಸಿದ್ದು, ಚಳುವಳಿಯ ಮೇಲೆ ವ್ಯತಿರಿಕ್ತ ಪ್ರಭಾವ ಬೀರಿತ್ತು. ಈ ರೀತಿಯಾಗಿ 1942ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಜಿಲ್ಲೆಯಲ್ಲಿ ರಾಜ ನಿಷ್ಠೆಯೊಂದಿಗೆ ವಿಭಿನ್ನ ನಿಲುವುಗಳು ಹೊಂದಿದ ಹಾಗೂ ರಾಷ್ಟ್ರೀಯ ಆಂದೋಲನವಾದ ಸ್ವಾತಂತ್ರ್ಯ ಚಳುವಳಿಯಲ್ಲಿ ಮಂಡ್ಯ ಜಿಲ್ಲೆಯ ಜನರು ಭಾಗವಹಿಸಿದ್ದರು ಎಂದು ತೀರ್ಮಾನಿಸಬಹುದು.

ತರುವಾಯ ಜವಾಬ್ದಾರಿ ಸರಕಾರ ಸ್ಥಾಪನೆಗಾಗಿ ಜಿಲ್ಲೆಯಲ್ಲಿ ನಿರಂತರ ಪ್ರಯತ್ನಗಳು ನಡೆದಿದ್ದನ್ನು ಕಾಣಬಹುದು. 1945 ನವೆಂಬರ್ 10 ಮತ್ತು 11 ರಂದು ಪಾಂಡವಪುರದ ಕ್ಯಾತನಹಳ್ಳಿ ಎರಡು ದಿನ ಕಾಲ ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ ಎಸ್.ನಿಜಲಿಂಗಪ್ಪ ಅಧ್ಯಕ್ಷತೆಯಲ್ಲಿ ಅಧಿವೇಶನ ನಡೆಯಿತು. ಅಧಿವೇಶನದಲ್ಲಿ ಜವಾಬ್ದಾರಿ ಸರಕಾರ ಸ್ಥಾಪನೆಯ ನಿರ್ಣಯ ತೆಗೆದುಕೊಳ್ಳುತ್ತದೆ. ಮಂಡ್ಯ ಜಿಲ್ಲೆಯ ಪಾಂಡವಪುರದ ಕ್ಯಾತನಹಳ್ಳಿ ಗ್ರಾಮದಲ್ಲಿ ನಡೆದ ಎರಡು ದಿನ ಕಾಂಗ್ರೆಸ್ ಅಧಿವೇಶನ ಕುರಿತು ಕರ್ನಾಟಕ ಚರಿತ್ರೆಯಲ್ಲಿ ಸಮಗ್ರವಾಗಿ ದಾಖಲಾಗದಿರುವುದು ವಿಷಾದನೀಯವಾದುದು. ನಂತರ 1947ರಲ್ಲಿ ಭಾರತ ದೇಶ ಸ್ವಾತಂತ್ರ್ಯಗೊಂಡರೂ ಮೈಸೂರು ಸಂಸ್ಥಾನದಲ್ಲಿ ರಾಜಪ್ರಭುತ್ವ ಮುಂದುವರಿದಿತ್ತು. ಇದರ ವಿರುದ್ಧ ಕೆ.ಸಿ. ರೆಡ್ಡಿ ಅವರ ನಾಯಕತ್ವದಲ್ಲಿ ಮೈಸೂರು ಚಲೋ ಚಳುವಳಿ ನಡೆಯಿತು. ಸೆಪ್ಟಂಬರ್ 1 ರಿಂದ ಆರಂಭವಾದ ಚಳುವಳಿಯಲ್ಲಿ ಮಂಡ್ಯ ಜಿಲ್ಲೆಯ ಪ್ರಮುಖ ನಾಯಕರಾದ ಇಂಡುವಾಳುಹೊನ್ನಯ್ಯ, ಕೆ.ವಿ.ಶಂಕರಗೌಡ, ಹೆಚ್.ಕೆ.ವೀರಣ್ಣಗೌಡ, ಪಾಲಹಳ್ಳಿ ಸೀತಾರಾಮಯ್ಯ, ಪಿ.ಎನ್.ಜವರಪ್ಪಗೌಡ, ಮಳವಳ್ಳಿ ವೀರಪ್ಪರವರ ನೇತೃತ್ವದಲ್ಲಿ ಮಂಡ್ಯ ಜಿಲ್ಲೆಯ ಸತ್ಯಾಗ್ರಹಿಗಳೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಅಲ್ಲದೇ ಮೈಸೂರು ಚಲೋ ಚಳುವಳಿಯಲ್ಲಿ ಮದ್ದೂರು ತಾಲ್ಲೂಕಿನ ನಿಡಘಟ್ಟ, ಮದ್ದೂರು ಗೆಜ್ಜಲಗೆರೆ, ಮಂಡ್ಯ ತಾಲ್ಲೂಕಿನ ಹಳೆಬೂದನೂರು, ಮಂಡ್ಯ, ಹನಕೆರೆ, ಶ್ರೀರಂಗಪಟ್ಟಣ ತಾಲ್ಲೂಕಿನ ಅರಕೆರೆ, ಶ್ರೀರಂಗಪಟ್ಟಣ ಹಾಗೂ ಪಾಂಡವಪುರದ ಸತ್ಯಾಗ್ರಹಿಗಳು ಸಕ್ರಿಯವಾಗಿ ಭಾಗವಹಿಸಿದ್ದರು ಮತ್ತು ಹೊರ ಜಿಲ್ಲೆಗಳಿಂದ ಬಂದ ಸತ್ಯಾಗ್ರಹಿಗಳಿಗೆ ಆತಿಥ್ಯವನ್ನು ಸಹ ನೀಡಿದ್ದರು. ಜಿಲ್ಲೆಯ ಯುವಕರು, ವಿದ್ಯಾರ್ಥಿಗಳು, ವಿದ್ಯಾರ್ಥಿಸಂಘಗಳು ರಾಷ್ಟ್ರ ನಾಯಕರ ಜನ್ಮದಿನಾಚರಣೆ ಆಚರಿಸಿ ಕೆಲವು ಉಪನ್ಯಾಸ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಭಾವಚಿತ್ರಗಳೊಂದಿಗೆ ಊರಿನ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಪ್ರಮುಖ ನಾಯಕರನ್ನು ಬಂಧಿಸಿದಾಗ ಪ್ರತಿಭಟನೆ ಹಾಗೂ ಹರಳಾತವನ್ನು ಆಚರಿಸಿದ್ದರು. ಜಿಲ್ಲೆಯ ಜನರು ರಾಷ್ಟ್ರೀಯ

ಆಂದೋಲನದಲ್ಲಿ ನಿರಂತರವಾದ ಸಂಪರ್ಕದ ಮೂಲಕ ಹಾಗೂ ಚಟುವಟಿಕೆಗಳ ಮೂಲಕ ಪ್ರತಿಕ್ರಿಯಿಸುತ್ತಿದ್ದರು. 1938ರಲ್ಲಿ ಶಿವಪುರ ಸತ್ಯಾಗ್ರಹದಿಂದ ಆರಂಭವಾಗಿ 1947ರಲ್ಲಿ ಮೈಸೂರು ರಾಜ್ಯದಲ್ಲಿ ಜವಾಬ್ದಾರಿ ಸ್ಥಾಪನೆ ಮೂಲಕ ಮೈಸೂರು ಸಂಸ್ಥಾನದ ದಿವಾನರ ಆಡಳಿತವನ್ನು ಸಂಪೂರ್ಣವಾಗಿ ಕಿತ್ತುಹಾಕುವಲ್ಲಿ ಮಂಡ್ಯ ಜಿಲ್ಲೆಯ ಅಗ್ರಪಂಕ್ತಿಯ ನಾಯಕರ ಹಾಗೂ ಜನಸಾಮಾನ್ಯರ ಹೋರಾಟಕ್ಕೆ ಜಯಸಿಕ್ಕಿತು. ಸ್ವಾತಂತ್ರ್ಯ ಚಳುವಳಿಯು ರಾಷ್ಟ್ರೀಯ ಆಂದೋಲನವಾಗಿದ್ದು, ಏಕೀಕರಣ ಪ್ರಾಂತ್ಯಗಳಲ್ಲಿ ನಡೆದ ಚಳುವಳಿಯಾಗಿತ್ತು. ಹರಿದು ಹಂಚಿಹೋಗಿದ್ದ ಕನ್ನಡ ಮಾತನಾಡುವ ಜನರು ಒಂದುಗೂಡಿಸುವುದೇ ಏಕೀಕರಣದ ಉದ್ದೇಶವಾಗಿತ್ತು. ಸ್ವಾತಂತ್ರ್ಯ ಮತ್ತು ಏಕೀಕರಣ ಚಳುವಳಿಗಳು ಜೊತೆ ಜೊತೆಯಲ್ಲಿ ನಡೆದವು. ಏಕೀಕರಣಕ್ಕೆ ವಿವಿಧ ಪ್ರಾಂತ್ಯಗಳಲ್ಲಿ ಪರ-ವಿರೋಧ ಅಭಿಪ್ರಾಯಗಳ ವ್ಯಕ್ತವಾಗಿದ್ದವು. ಅದೇ ರೀತಿಯಲ್ಲಿ ಮಂಡ್ಯ ಜಿಲ್ಲೆಯಲ್ಲೂ ಕೂಡ ಏಕೀಕರಣ ಚಳುವಳಿಯಲ್ಲಿ ಪರ-ವಿರೋಧಿ ನಿಲುವುಗಳು ವ್ಯಕ್ತವಾಗಿದ್ದವು.

ಏಕೀಕರಣ ಚಳುವಳಿಯ ಸಂದರ್ಭದಲ್ಲಿ ಮೈಸೂರು ಯಥಾಸ್ಥಿತಿಯಲ್ಲಿ ಉಳಿಯಲಿ ಎಂದು 1956 ಜನವರಿ 1 ರಂದು ಮೈಸೂರು ಸಂಸ್ಥಾನದ ಎಂಟು ಜಿಲ್ಲೆಯ ಬೆಂಬಲದೊಂದಿಗೆ ಮೈಸೂರು ವಿಲೀನ ವಿರೋಧಿ ಸಮ್ಮೇಳನವು ಕೆ.ಲಕ್ಕಪ್ಪಗೌಡ ಅವರ ಅಧ್ಯಕ್ಷತೆಯಲ್ಲಿ ಮಂಡ್ಯದಲ್ಲಿ ನಡೆಸಿದ್ದರು. ಮಂಡ್ಯದ ಪ್ರಮುಖ ನಾಯಕರಾದ ಹೆಚ್.ಕೆ.ವೀರಣ್ಣಗೌಡ, ಪಿ.ಎನ್.ಜವರಪ್ಪಗೌಡ, ಕೆ.ವಿ.ಶಂಕರಗೌಡ, ನೇತೃತ್ವದಲ್ಲಿ ಸುಮಾರು ಆರು ಸಾವಿರ ಜನರು ಭಾಗವಹಿಸಿದರು. ಕರ್ನಾಟಕ ಏಕೀಕರಣ ಚಳುವಳಿ ಪ್ರಬಲ ವಿರೋಧ ವ್ಯಕ್ತವಾದದ್ದು. ಉತ್ತರ ಕರ್ನಾಟಕದ ಜನರು, ಸಾಹಿತಿಗಳು, ಪ್ರಮುಖ ರಾಜಕೀಯ, ನಾಯಕರುಗಳಲ್ಲಿ ಅಸಮಾಧಾನಕ್ಕೆ ಕಾರಣವಾಗಿತ್ತು. ಈ ಭಾಗದ ರಾಜಕೀಯ ಮುಖಂಡರಲ್ಲಿ ರಾಜಕೀಯ ಆಡಳಿತ ಕೈತಪ್ಪಿ ಇನ್ನೊಂದು ಪಂಗಡ ಪ್ರಬಲವಾಗುತ್ತದೆ ಎಂಬ ಭಯವಾಗಿತ್ತು. ಅಖಂಡ ಮೈಸೂರು ರಾಜ್ಯ ರಚನೆಯಿಂದ ಹಿಂದುಳಿದ ಪ್ರದೇಶಗಳ ಸೇರ್ಪಡೆಯಿಂದ ಅಭಿವೃದ್ಧಿಗಾಗಿ ಅಧಿಕ ಸಮಯ ವಿನಿಯೋಗಿಸಬೇಕಾಗುತ್ತದೆ. ಅಲ್ಲದೆ ಬಹುಸಂಖ್ಯಾತ ಎರಡು ಪಂಗಡಗಳ ಮಧ್ಯೆ ಭಿನ್ನಾಭಿಪ್ರಾಯ ಉಂಟಾಗಬಹುದೆಂಬ ಅಭಿಪ್ರಾಯವ್ಯಕ್ತವಾಗಿತ್ತು.

ರಾಜ್ಯ ಪುನರ್ ವಿಂಗಡಣಾ ಮಸೂದೆಯ ಅಂಗೀಕಾರಕ್ಕಾಗಿ ಶಾಸನಸಭೆಯಲ್ಲಿ ನಡೆದ ಚರ್ಚೆಯಲ್ಲಿ ಕೂಡಾ ಜಿಲ್ಲೆಯ ಶ್ರೀರಂಗಪಟ್ಟಣದ ಶಾಸನ ಸಭೆಯ ಸದಸ್ಯರಾದ ಕೆ.ಪುಟ್ಟಸ್ವಾಮಿ ಹಾಗೂ ಮದ್ದೂರಿನ ಶಾಸನಸಭಾ ಸದಸ್ಯರಾದ ಹೆಚ್.ಕೆ.ವೀರಣ್ಣಗೌಡ ಸ್ಪಷ್ಟವಾಗಿ ವಿರೋಧ ಅಭಿಪ್ರಾಯ ವ್ಯಕ್ತಪಡಿಸಿದರು. ತರುವಾಯ ಏಕೀಕರಣವನ್ನು ವಿರೋಧಿಸುವ ಗುಂಪಿನ ಸದಸ್ಯರು ಏಕೀಕರಣ ಪರವಾಗಿ ಅಭಿಪ್ರಾಯ ವ್ಯಕ್ತಪಡಿಸಿದ್ದು ಜಿಲ್ಲೆಯ ಅಖಂಡ ಮೈಸೂರು ರಾಜ್ಯ ವಿರೋಧಿ ಸಮಿತಿಗೆ ಸೋಲಾಯಿತು. ಕನ್ನಡ

ಪ್ರಮುಖ ಸಾಹಿತಿಗಳು ರಾಜಕೀಯ ನಾಯಕರ ಒತ್ತಾಯದಿಂದ ಜಿಲ್ಲೆಯ ಏಕೀಕರಣ ವಿರೋಧಿ ಚಳುವಳಿಗೆ ಹಿನ್ನಡೆಯಾಗಿತ್ತು. ಜಿಲ್ಲೆಯಲ್ಲಿ ಏಕೀಕರಣ ಪರವಾಗಿ ನಾಗಮಂಗಲ ಮತ್ತು ಮಂಡ್ಯದಲ್ಲಿ ಜೆ.ದೇವಯ್ಯ ನಾಯಕತ್ವದಲ್ಲಿ ಏಕೀಕರಣದ ಪರವಾಗಿ ಅಭಿಪ್ರಾಯ ವ್ಯಕ್ತಪಡಿಸಿದ್ದರು. ಹೀಗೆ ಜಿಲ್ಲೆಯಲ್ಲಿ ಪರವಿರೋಧ ನಿಲುವುಗಳು ವ್ಯಕ್ತವಾಗಿದ್ದನ್ನು ಸಂಶೋಧನೆಯಿಂದ ಗುರುತಿಸಲಾಗಿದೆ. ಆದರೆ ಅಂತಿಮವಾಗಿ ಜಿಲ್ಲೆಯ ಪ್ರಮುಖ ನಾಯಕರು ಕೆ.ವಿ.ಶಂಕರಗೌಡ, ಎಚ್.ಕೆ.ವೀರಣ್ಣಗೌಡ, ಪಿ.ಎನ್.ಜವರಪ್ಪಗೌಡ ಮತ್ತು ಜನಸಾಮಾನ್ಯರು ರಾಷ್ಟ್ರದ ಹಿತದೃಷ್ಟಿಯಿಂದ ಏಕೀಕರಣಕ್ಕೆ ವಿಧಿ ಇಲ್ಲದೆ ಒಪ್ಪಿಕೊಳ್ಳಬೇಕಾಯಿತು. ಮಂಡ್ಯ ಜಿಲ್ಲೆಯಲ್ಲಿ ಏಕೀಕರಣ ವಿರೋಧಿ ಚಳುವಳಿಯಲ್ಲಿ ನಾಯಕರಿಗೆ ಹಿನ್ನಡೆಯನ್ನು ಅನುಭವಿಸಿದರು ಕೂಡ ಏಕೀಕರಣಗೊಂಡ ರಾಜ್ಯಕ್ಕೆ ಮೈಸೂರು ರಾಜ್ಯ ಎಂದು ಹೆಸರು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದರು ಹಾಗೂ ರಾಜರ ಆಳ್ವಿಕೆ ಅಂತ್ಯಗೊಂಡರು ರಾಜರಿಗೆ ಸಂವಿಧಾನಬದ್ಧವಾಗಿ ರಾಜ್ಯಪಾಲ ಹುದ್ದೆ ದೊರೆಯುವಲ್ಲಿ ಜಿಲ್ಲೆಯ ನಾಯಕರ ಹೋರಾಟ ಫಲ ನೀಡಿತು. 1956ರಲ್ಲಿ ಜಯಚಾಮರಾಜೇಂದ್ರ ಒಡೆಯರ್ ಆಖಂಡ ಮೈಸೂರು ರಾಜ್ಯ ಮೊದಲ ರಾಜ್ಯಪಾಲರಾಗಿ ಆಯ್ಕೆಯಾಗಿದ್ದರು. ಹೀಗೆ ಸ್ವಾತಂತ್ರ ಮತ್ತು ಏಕೀಕರಣ ಚಳುವಳಿಯಲ್ಲಿ ಮಂಡ್ಯ ಜಿಲ್ಲೆಯಲ್ಲಿ ಅಗ್ರಪಂಕ್ತಿಯ ನಾಯಕರೊಂದಿಗೆ ಜನಸಾಮಾನ್ಯರು, ಮಹಿಳೆಯರು, ಯುವಕರು, ವಿದ್ಯಾರ್ಥಿಗಳು, ಕೆಳವರ್ಗದವರು, ರೈತರು, ಕಾರ್ಮಿಕರು ವಿಭಿನ್ನ ನಿಲುವುಗಳನ್ನು ವ್ಯಕ್ತಪಡಿಸಿ ಚಳುವಳಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದಾರೆ. ಸ್ವಾತಂತ್ರ್ಯ ಮತ್ತು ಏಕೀಕರಣ ಚಳುವಳಿಯಲ್ಲಿ ಭಾಗವಹಿಸಿದ ವ್ಯಕ್ತಿಗಳ ಕುರಿತು ಇಂದಿನ ಪೀಳಿಗೆ ಸ್ಮರಣೀಯ ಮಾಡುವುದು ಮಹತ್ವದ್ದಾಗಿದೆ. ದೇಶ ಸೇವೆಯನ್ನು ಮಾಡಿದವರನ್ನು ಗುರುತಿಸಿ ಚರಿತ್ರೆಯಲ್ಲಿ ದಾಖಲಿಸುವುದು, ಮುಂದಿನ ಪೀಳಿಗೆಗೆ ತಿಳಿಸುವುದು, ಸಂಶೋಧನಾ ದೃಷ್ಟಿಯಿಂದ ಅಗತ್ಯವಾಗಿದೆ.

ಅಧ್ಯಯನದ ಫಲಿತಗಳು

* ಭಾರತ ಸ್ವಾತಂತ್ರ್ಯ ಚಳುವಳಿಯ ಹಿನ್ನೆಲೆಯಲ್ಲಿ ವ್ಯಕ್ತಿಗತ ನೆಲೆಯಲ್ಲಿ ಸ್ವಾತಂತ್ರ್ಯದ ಕಿಡಿಯನ್ನು ಹೊತ್ತಿಸಿದ್ದು ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದಿಂದ ಆಳ್ವಿಕೆ ನಡೆಸುತ್ತಿದ್ದ ಹೈದರಾಲಿ ಮತ್ತು ಟಿಪ್ಪುಸುಲ್ತಾನ್ ಎಂದು ಹೇಳಬಹುದು. ಪ್ರಜಾಪ್ರತಿನಿಧಿಸಭೆ ಬರೀ ಜನಪ್ರತಿನಿಧಿಗಳ ಶೋಭೆಗಿರುವ ವೇದಿಕೆಯಾಗಿರದೇ ರಾಜಕೀಯ ಹಕ್ಕು, ಜನರ ಸಮಸ್ಯೆಗಳನ್ನು ಬಿಂಬಿಸುವ ಸಂಸ್ಥೆ ಎಂಬುದನ್ನು ಮಂಡ್ಯ ಜಿಲ್ಲೆಯ ಕೆಲವು ನಾಯಕರು ಸಾಬೀತು ಮಾಡಿದ ಘಟನೆಗಳನ್ನು ಸಂಶೋಧನೆಯಲ್ಲಿ ಸಂದರ್ಭೋಚಿತವಾಗಿ ವಿವರಿಸಲಾಗಿದೆ. ಎಸ್.ಸಿ.ಮಲ್ಲಯ್ಯ ನವರು ನಿರಂತರವಾಗಿ ಪ್ರಜಾಪ್ರತಿನಿಧಿ ಸಭೆಯಲ್ಲಿ ಮಂಡ್ಯ ಪ್ರದೇಶದ ಜನರ

[illegible]

ಆಶೋತ್ತರಗಳು, ದುಃಖದುಮ್ಮಾನಗಳನ್ನು ಎಳೆಎಳೆಯಾಗಿ ಬಿಚ್ಚಿಟ್ಟು ಮಂಡ್ಯ ಜಿಲ್ಲೆಯ ರೂಪುಗೊಳ್ಳವಂತೆ ಮಾಡಿದರು.

* ಮೈಸೂರು ದಿವಾನರ ಆಳ್ವಿಕೆಯ ಬಗ್ಗೆ ವಿರೋಧಿ ಭಾವನೆಗಳು ಜಿಲ್ಲೆಯ ಜನರಲ್ಲಿ ಅಂತರ್ಗತವಾಗಿದ್ದವು. ಹೆಚ್ಚಿನ ಕಂದಾಯ ಸಂಗ್ರಹಣೆ, ತೆರಿಗೆ ಹಣವನ್ನು ವೇತನ್ನಕಾಗಿ, ನಗರ ಸೌಂದರ್ಯಕ್ಕಾಗಿ, ಬ್ರಿಟೀಷ್ ನಾಯಕರ ಆಹ್ವಾನದ ಅದ್ದೂರಿ ಸಿದ್ಧತೆಗಾಗಿ ಅನಾವಶ್ಯಕವಾದ ದುಂದುವೆಚ್ಚಗಳು ಜನರಲ್ಲಿ ವಿರೋಧಿ ಭಾವನೆಗಳು ಬೆಳೆಯಲು ಕಾರಣವಾದ ಘಟನೆಗಳು, ಕಾಂಗ್ರೆಸ್ ಸಭೆ, ಸಮಾರಂಭ, ಬಹಿರಂಗ ಅಧಿವೇಶನಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳನ್ನು ಅಧ್ಯಯನದಲ್ಲಿ ತಿಳಿಸಲಾಗಿದೆ.

* 1927 ಹಾಗೂ 1934 ರಲ್ಲಿ ಮಹಾತ್ಮ ಗಾಂಧೀಜಿಯವರ ಮೈಸೂರು ಸಂಸ್ಥಾನಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ, ಮಂಡ್ಯ, ಮದ್ದೂರು, ಸೋಮನಹಳ್ಳಿಗೆ ಭೇಟಿ ನೀಡಿದ್ದನ್ನು ಸಂಶೋಧನೆಯಿಂದ ಗುರುತಿಸಲಾಗಿದೆ. ಇದು ಮುಂದೆ ಸ್ವಾತಂತ್ರ್ಯ ಚಳುವಳಿಯಲ್ಲಿ ಜಿಲ್ಲೆಯ ಜನರು ಭಾಗವಹಿಸಲು ಪ್ರೇರಣೆಯಾಗಿದ್ದು ಸ್ವಾತಂತ್ರ್ಯ ನಂತರ ಅವರ ವ್ಯಕ್ತಿತ್ವದ ಮಾದರಿಗಳೆಂಬಂತೆ ಜಿಲ್ಲೆಯಲ್ಲಿ ಅನೇಕರು ಬದುಕಿ ಬಾಳಿದರು. ಇಂಥವರಲ್ಲಿ ಶ್ರೀರಂಗಪಟ್ಟಣದ ಸಿ.ಬಂದೀಗೌಡ ಒಬ್ಬರು. ಇವರು ಸರ್ವೋದಯ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಜನರ ಸೇವೆ ಮಾಡಿದರು. ಇವರ ಸಾಲಿಗೆ ಸೇರಬಹುದಾದ ಮತ್ತೊಬ್ಬರು ಎಂದರೆ ಕೆ.ವಿ.ಶಂಕರಗೌಡರು.

* ಮೈಸೂರು ಕಾಂಗ್ರೆಸ್ ಸ್ಥಾಪನೆ ನಂತರ ಮಂಡ್ಯ ಜಿಲ್ಲೆಯ ಹಳ್ಳಿ ಹಳ್ಳಿಗೂ ಕಾಂಗ್ರೆಸ್ ಚಟುವಟಿಕೆಗಳು ವ್ಯಾಪಿಸಿ ಮೈಸೂರು ಸಂಸ್ಥಾನ ನಿಷ್ಠೆ, ರಾಜ್ಯಭಕ್ತಿಯಿಂದ ಕೂಡಿದ್ದ ಗ್ರಾಮೀಣ ಬದುಕು, ದಿವಾನರ ಆಡಳಿತ ವಿರುದ್ಧ ಪರ್ಯಾಯ ನಾಯಕತ್ವದ ಹುಡುಕಾಟದೊಂದಿಗೆ ತಮ್ಮೆಲ್ಲ ಸಮಸ್ಯೆಗಳಿಗೆ ಉತ್ತರ ಕಂಡುಕೊಳ್ಳುವ ಪ್ರಯತ್ನವನ್ನು ಕಾಂಗ್ರೆಸ್ ಸಭೆಗಳು, ಹರತಾಳ, ಪಿಕೆಟಿಂಗ್, ಕರನಿರಾಕರಣೆ, ಕಾಯ್ದೆಭಂಗ ಚಳುವಳಿ, ದಿನಾಚರಣೆಗಳಾದ ದಮನ ನಿಗ್ರಹದಿನ, ದೇಶಭಕ್ತರ ದಿನ, ಗಾಂಧಿ ಜನ್ಮದಿನಾಚರಣೆ ಮುಂತಾದ ಕ್ರಮಗಳ ಮೂಲಕ ಸ್ವಾತಂತ್ರ್ಯ ಕಂಡುಕೊಳ್ಳಲು ಮಂಡ್ಯ ಜಿಲ್ಲೆಯ ಜನರು ಪ್ರಯತ್ನಿಸಿದ್ದನ್ನು ಸಂಶೋಧನೆಯಿಂದ ಸ್ಪಷ್ಟಪಡಿಸಲಾಗಿದೆ.

* ಶಿವಪುರ ರಾಷ್ಟ್ರಕೂಟ ಕರ್ನಾಟಕ ಚರಿತ್ರೆಯಲ್ಲಿ ಒಂದು ಮಹಾನ್ ಘಟನೆಯಾಯಿತು. ಸ್ವಾತಂತ್ರ್ಯ ಚಳುವಳಿಯ ಒಂದು ಭಾಗವಾದ ಜವಾಬ್ದಾರಿ

ಸರಕಾರ ಸ್ಥಾಪನೆಗಾಗಿ ಈ ಭಾಗದ ಎಲ್ಲಾ ಜನವರ್ಗಗಳ ಧ್ವನಿ, ಆಶಯ. ನಿರೀಕ್ಷೆ, ಸ್ಥಾನ, ಅವಕಾಶ, ಇತರೆ ಎಲ್ಲಾ ಸಾಧ್ಯತೆಗಳ ಅರಿವು ಈ ಮೂಲಕವೇ ವ್ಯಕ್ತಗೊಳ್ಳುವಂತಹ ಪರಿಸ್ಥಿತಿ ಸೃಷ್ಟಿಸಿಕೊಟ್ಟಿತು ಅಧಿಕಾರಶಾಹಿ ವ್ಯವಸ್ಥೆಯ ಆಮಿಷಗಳೊಂದಿಗೆ ರಾಜಿ ಮಾಡಿಕೊಳ್ಳದ ದಿಟ್ಟ ನಾಯಕತ್ವ ಪ್ರದರ್ಶಿಸುವ ಮೂಲಕ ಜಿಲ್ಲಾ ನಾಯಕತ್ವವನ್ನು ಹುಟ್ಟುಹಾಕಿತು. ಅವರಲ್ಲಿ ಪ್ರಮುಖವಾಗಿ ಎಚ್.ಕೆ.ವೀರಣ್ಣಗೌಡ, ಕೆ.ವಿ.ಶಂಕರಗೌಡ, ಪಿ.ಎನ್.ಜವರಪ್ಪಗೌಡ, ಇಂಡುವಾಳು ಹೆಚ್.ಹೊನ್ನಯ್ಯ, ಡಾ.ಸಿ.ಬಂದೀಗೌಡ, ಎ.ಜಿ.ಬಂದೀಗೌಡ, ಮಳವಳ್ಳಿ ವೀರಪ್ಪ, ಎಂ.ಆರ್.ಎನ್.ಶಾಸ್ತ್ರಿ, ಪಾಲಹಳ್ಳಿ ಸೀತಾರಾಮಯ್ಯ, ಟಿ.ಮರಿಯಪ್ಪ ಮುಂತಾದವರ ನಿಸ್ವಾರ್ಥ ಹೋರಾಟ ಚಳುವಳಿಗೆ ಅಭೂತಪೂರ್ವ ಶಕ್ತಿ ನೀಡಿತು. ಅಲ್ಲದೇ ಬೇರೆ ಬೇರೆ ಜಿಲ್ಲೆಯ ನಾಯಕರಾದ ಹೆಚ್.ಸಿ.ದಾಸಪ್ಪ, ಟಿ.ಸಿದ್ದಲಿಂಗಯ್ಯ, ಕೆ.ಸಿ.ರೆಡ್ಡಿ, ಕೆಂಗಲ್ ಹನುಮಂತಯ್ಯ ಅಂತವರಿಗೆ ಜವಾಬ್ದಾರಿ ಸರಕಾರ ಸ್ಥಾಪನೆಗಾಗಿ ಮಂಡ್ಯ ಜಿಲ್ಲೆಯನ್ನು ಕರ್ಮಭೂಮಿಯನ್ನಾಗಿಸಿ ಕೊಂಡು ಚಳುವಳಿಯನ್ನು ನಡೆಸಿದ್ದರು. ಪುರುಷರಂತೆ ಮಹಿಳಾ ಚಳುವಳಿಗಾರ್ತಿಯರು ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿಯಲ್ಲಿ ಪ್ರಭಾವಿಯಾಗಿದ್ದರು. ಅವರಲ್ಲಿ ಪ್ರಮುಖವಾಗಿ ಯಶೋಧರಮ್ಮ ದಾಸಪ್ಪ, ಸುಬ್ಬಮ್ಮ ಜೋಯಿಸ್, ಪಾರ್ವತಮ್ಮ ಸಿದ್ದಲಿಂಗಯ್ಯ, ಬಳ್ಳಾರಿ ಸಿದ್ದಮ್ಮ, ಟಿ.ಸುನಂದಮ್ಮ, ತಾಯಮ್ಮ ವೀರಣ್ಣಗೌಡ, ವೆಂಕಟಮ್ಮ ಸೀತಾರಾಮಯ್ಯ ಜಿಲ್ಲೆಯಲ್ಲಿ ನಡೆದ ಚಳುವಳಿಯಲ್ಲಿ ಪುರುಷನಾಯಕರೊಂದಿಗೆ ನಿಸ್ವಾರ್ಥದಿಂದ ಸೇವೆ ಸಲ್ಲಿಸಿದ್ದರು ಎಂಬುದನ್ನು ಅಧ್ಯಯನದಿಂದ ಖಚಿತಪಡಿಸಲಾಗಿದೆ.

* ಅಗ್ರಪಂಕ್ತಿಯ ನಾಯಕರು ಮಾತ್ರವಲ್ಲದೆ ಸಾಮಾನ್ಯ ಜನರು ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡ ಬಗೆಯನ್ನು ಸಂಶೋಧನೆ ಅನಾವರಣಗೊಳಿಸಿದ್ದು ಕಳೆಸ್ತರ ಅಧ್ಯಯನ ದೃಷ್ಟಿಯಿಂದ ಪರಿಚಯಿಸುತ್ತದೆ. ಜಿಲ್ಲೆಯ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದವರಲ್ಲಿ ವಿದ್ಯಾರ್ಥಿಗಳು, ಮಹಿಳೆಯರು, ಕಾರ್ಮಿಕರು, ರೈತರು, ಕೆಳವರ್ಗದವರು ಅಗ್ರಗಣ್ಯ ನಾಯಕರನ್ನು ಬಂಧಿಸಿದಾಗ ಚಳುವಳಿಯ ಮುನ್ನಡೆಗೆ ಕಾರಣರಾದರು. ಸಾಮಾನ್ಯ ಜನರು ವಿದುರಾಶ್ವತ್ಥ ಹಾಗೂ ಕಸ್ತೂರಿ ಬಾ ನಿಧಿಗೆ ಸಹಾಯಧನ ನೀಡಿದ್ದು, ಶಿವಪುರ ರಾಷ್ಟ್ರಕೂಟದ ಯಶಸ್ವಿಗೆ ರೈತರು ದೇಣಿಗೆ ನೀಡಿದ್ದು ಚಳುವಳಿಯು ವಿಶಾಲವಾಗಿ ಅನಾವರಣಗೊಳ್ಳಲು ಅನುವಾಯಿತು.

* ಜಿಲ್ಲೆಯಲ್ಲಿ ನಡೆದ ಕೆಲವು ನೈಜ ಘಟನೆಗಳು ರಾಷ್ಟ್ರೀಯ ಚಳುವಳಿಗೆ ನೈಜರೂಪ, ಭದ್ರನೆಲೆಗಟ್ಟಿಗೆ ಕಾರಣವಾಗಿದೆ. ಅವುಗಳಲ್ಲಿ ಪ್ರಮುಖವಾಗಿ

ಶಿವಪುರ ರಾಷ್ಟ್ರಕೂಟ ನಡೆಸದಂತೆ ಆಮಿಷವೊಡ್ಡಿದ ಅಮಲ್ದಾರ ವರ್ತನೆಯನ್ನು ಎಚ್.ಕೆ.ವೀರಣ್ಣಗೌಡ ನಯವಾಗಿ ತಿರಸ್ಕರಿಸಿದ್ದು, ಶಿವಪುರದ ಅಧಿವೇಶನದ ಅಡುಗೆ ಕೆಲಸಕ್ಕೆಂದು ದೊಡ್ಡ ದೊಡ್ಡ ಪಾತ್ರೆಗಳನ್ನು ಕೊಟ್ಟ ತರಕಾರಿ ಅನಂತರಾಮಯ್ಯನವರನ್ನು ಸರ್ಕಾರಿ ನೌಕರಿಯಿಂದ ವಜಾಮಾಡಲ್ಪಟ್ಟ ಪ್ರಸಂಗ, ಗೌಡಗೆರೆ ಹಳ್ಳಿಯ ಜನರು ತಿರುಪತಿಯಾತ್ರೆ ಹೊರಟ ಸಂದರ್ಭದಲ್ಲಿ ದೇಶ ಸೇವೆಗೆಂದು ಹರಕೆಯ ಹಣವನ್ನು ರಾಷ್ಟ್ರೀಯ ಆಂದೋಲನಕ್ಕೆ ನೀಡಿದ್ದು ಸ್ವಾತಂತ್ರ್ಯ ಚಳುವಳಿಯಲ್ಲಿ ಜನಸಾಮಾನ್ಯರ ಪಾತ್ರದ ಬಗ್ಗೆ ತಿಳಿಸುತ್ತದೆ. ಸರ್ಕಾರದ ದಬ್ಬಾಳಿಕೆಯ ಸ್ಮಾರಕಗಳಂತಿದ್ದ ಜೈಲುಗಳಿಗೆ ಜಿಲ್ಲೆಯ ಅಗ್ರಗಣ್ಯ ನಾಯಕರೊಂದಿಗೆ, ಸಾಮಾನ್ಯ ಜನರು ಹೋಗಿ ಹೋರಾಡಿದ್ದು ಅವಿಸ್ಮರಣೀಯವಾದುದು. ಅದರಲ್ಲಿ ಪ್ರಮುಖವಾಗಿ ಸಕ್ಕರೆ ಕಾರ್ಖಾನೆಯ ಸಾಮಾನ್ಯ ಕಾರ್ಮಿಕನಾದ ಶ್ರೀನಿವಾಸಯ್ಯ ಕಾಂಗ್ರೆಸ್ ಬಹಿರಂಗ ಸಭೆಯಲ್ಲಿ ಭಾಷಣ ಮಾಡಿದ ಕಾರಣ ರಾಜದ್ರೋಹ ಆಪಾದನೆಯಿಂದ ಜೈಲಿಗೆ ಹೋಗಿದ್ದು, ಸಾಮಾನ್ಯ ಜನರು ಕೂಡಾ ಜೈಲಿಗೆ ಹೋಗಲು ಸ್ವಯಂ ಸಿದ್ಧರಾಗಿದ್ದರೆಂದು ಖಚಿತ ಪಡಿಸಲಾಗಿದೆ.

* 1942 ರಲ್ಲಿ ಮಹಾತ್ಮ ಗಾಂಧೀಜಿಯವರು ನೀಡಿದ ಕ್ವಿಟ್ ಇಂಡಿಯಾ ಚಳುವಳಿಯ ಕರೆಗೆ ಮಂಡ್ಯ ಜಿಲ್ಲೆಯ ತಾಲ್ಲೂಕುಗಳಾದ ಮದ್ದೂರು, ಮಳವಳ್ಳಿ, ಮಂಡ್ಯ, ಶ್ರೀರಂಗಪಟ್ಟಣ, ಪಾಂಡವಪುರ, ಕೆ.ಆರ್.ಪೇಟೆ, ನಾಗಮಂಗಲದ ಜನತೆ ಪ್ರತಿಸ್ಪಂದಿಸುವ ಮೂಲಕ ರಾಷ್ಟ್ರೀಯ ಆಂದೋಲನದ ಭಾಗವಾಗಿ ಮಂಡ್ಯ ಜಿಲ್ಲೆಯ ಜನತೆ ತಮ್ಮನ್ನು ಇಡಿಯಾಗಿ ಗುರುತಿಸಿಕೊಂಡಿದ್ದರು. 1945ರಲ್ಲಿ ಪಾಂಡವಪುರ ತಾಲ್ಲೂಕು, ಕ್ಯಾತನಹಳ್ಳಿಯಲ್ಲಿ ಕಾಂಗ್ರೆಸ್ ಅಧಿವೇಶನ ಎಸ್.ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಅವರು ಭಾಷಣದಲ್ಲಿ ಸ್ವಾತಂತ್ರ್ಯ ಚಳುವಳಿಗೆ ಮಹಾರಾಜರು ಬೆಂಬಲ ನೀಡಬೇಕೆಂದು ಪ್ರಾರ್ಥಿಸಿದ್ದರು. ಈ ಅಧಿವೇಶನದ ನಂತರ ಜವಾಬ್ದಾರಿ ಸರ್ಕಾರದ ಕೂಗು ಜಿಲ್ಲೆ ಮತ್ತು ಮೈಸೂರು ಸಂಸ್ಥಾನದಲ್ಲಿ ಬಲವಾಗಿ ಕೇಳಿಸಿತ್ತಲ್ಲದೇ ರಾಜಪ್ರಭುತ್ವ ವ್ಯವಸ್ಥೆಗೆ ಹಾಗೂ ದಿವಾನರಿಂದ ಕೂಡಿದ ರಾಜಕೀಯ ವ್ಯವಸ್ಥೆ ಮತ್ತು ಅಧಿಕಾರಶಾಹಿ ವ್ಯವಸ್ಥೆ ತೊಲಗಿಸಲು ನಡೆದ ಹೋರಾಟವನ್ನು 1947ರಲ್ಲಿ ನಡೆದ ಮೈಸೂರು ಚಲೋ ಚಳುವಳಿ ಮೂಲಕ ಅಧ್ಯಯನ ನಿರೂಪಿಸಿದೆ.

* ಮೈಸೂರು ಕಾಂಗ್ರೆಸ್ ಎಲ್ಲರಿಂದ ಸ್ವೀಕೃತವಾಗಿರಲಿಲ್ಲ. ಜಿಲ್ಲೆಯಲ್ಲಿ ಇದನ್ನು ವಿರೋಧಿಸಿದ ಅನೇಕರು ದಿವಾನರು, ಮಹಾರಾಜರ ಪರವಾಗಿದ್ದು, ಕಾಂಗ್ರೆಸ್‌ಗೆ ಪರ್ಯಾಯವಾಗಿ ಕ್ವಿಟ್ ಇಂಡಿಯಾ ಚಳುವಳಿ ಸಂದರ್ಭದಲ್ಲಿ ಮದ್ದೂರು,

ನಾಗಮಂಗಲಗಳಲ್ಲಿ ರಾಜನಿಷ್ಠೆ ಸಭೆಯನ್ನು ನಡೆಸಿ ಕಾಂಗ್ರೆಸಿಗರನ್ನೇ ಟೀಕಿಸಿದ್ದು, ಚಳುವಳಿಯನ್ನು ಹತ್ತಿಕ್ಕಲು ನಡೆಸಿದ ಪ್ರಯತ್ನಗಳನ್ನು ಸಂಶೋಧನೆಯಲ್ಲಿ ವಿವರಿಸಲಾಗಿದೆ.

* ಜಿಲ್ಲೆಯ ಸ್ವಾತಂತ್ರ್ಯ ಚಳುವಳಿಯಲ್ಲಿ ಒಲವು ಹೊಂದಿದ್ದ ದಾಖಲಾಗದ ತೆರೆಮರೆಯಲ್ಲಿಯೇ ಉಳಿದಿರುವ ಅನೇಕ ನಾಯಕರು ಇದ್ದಾರೆ. ಅಂಥವರಲ್ಲಿ ಪ್ರಮುಖವಾಗಿ ದಲಿತ ನಾಯಕರಾದ ಜಿ.ವೆಂಕಟಯ್ಯ. ಈ ಚಳುವಳಿಗಾರರ ಸಾರ್ಥಕ ಹೋರಾಟಕ್ಕೆ ಮಹತ್ವ ನೀಡಿ ಅಧ್ಯಯನದಲ್ಲಿ ದಾಖಲಿಸಲಾಗಿದೆ.

* ಮಂಡ್ಯ ಜಿಲ್ಲೆಯು ಸ್ವಾತಂತ್ರ್ಯ ಪೂರ್ವದಲ್ಲಿ ಮೈಸೂರು ಸಂಸ್ಥಾನದ ಆಳ್ವಿಕೆಗೆ ಒಳಗಾಗಿದ್ದರಿಂದ ಇತರೆ ಪ್ರಾಂತ್ಯಗಳಲ್ಲಿ ನಡೆಯುತ್ತಿದ್ದ ಏಕೀಕರಣ ಚಳುವಳಿ ಇಲ್ಲಿ ವ್ಯಾಪಕವಾಗಿ ಹರಡಲಿಲ್ಲ. ಹಾಗೆಯೇ ಪರಭಾಷೆಯ ದಬ್ಬಾಳಿಕೆ ಇರಲಿಲ್ಲವಾದುದ್ದರಿಂದ ಇವರಿಗೆ ಏಕೀಕರಣದ ವಿಷಯದಲ್ಲಿ ಅಷ್ಟಾಗಿ ತುರ್ತು ಇದ್ದಂತೆ ಕಾಣಲಿಲ್ಲ. ಮೈಸೂರು ಸಂಸ್ಥಾನದ ಒಂದು ಭಾಗವಾಗಿದ್ದ ಮಂಡ್ಯ ಜಿಲ್ಲೆಯು ಸಾಂಸ್ಕೃತಿಕವಾಗಿ ಮತ್ತು ಆರ್ಥಿಕವಾಗಿ ಮುಂದುವರೆದ ಪ್ರದೇಶವಾಗಿದ್ದು ಸ್ವಾತಂತ್ರ್ಯ ಪೂರ್ವದಲ್ಲಿ ಏಕೀಕರಣಕ್ಕೆ ಒಲವು ಕಂಡು ಬಂದಿರಲಿಲ್ಲ. ಆದರೆ ಮೈಸೂರು ಸಂಸ್ಥಾನದಲ್ಲಿ ಸಾಹಿತಿಗಳು, ಪತ್ರಿಕೆಗಳು ಏಕೀಕರಣದತ್ತ ಪ್ರಾಮಾಣಿಕ ಪ್ರಯತ್ನವನ್ನು ಮುಂದುವರಿಸಿದ್ದವು.

* ಅಖಂಡ ಕರ್ನಾಟಕ ರಚನೆಯ ವಿಷಯವಾಗಿ ಮಂಡ್ಯ ಜಿಲ್ಲೆಯಲ್ಲಿ ಭಿನ್ನಾಭಿಪ್ರಾಯಗಳಿದ್ದು ಸಹಜ. ಇದಕ್ಕೆ ಕರ್ನಾಟಕದ ಎರಡು ಪ್ರಬಲ ಜಾತಿಗಳಾದ ಲಿಂಗಾಯಿತ ಮತ್ತು ಒಕ್ಕಲಿಗ ಜಾತಿಗಳ ನಡುವಿನ ಸೂಕ್ಷ್ಮ ಸಂಘರ್ಷವನ್ನು ಗುರುತಿಸಬಹುದಾಗಿದ್ದು, ಅಖಂಡ ಕರ್ನಾಟಕ ರಚನೆಯಾದರೆ ಆಗ ಲಿಂಗಾಯಿತರು ಬಹುಸಂಖ್ಯಾತರಾಗಿ ತಮ್ಮ ಅಧಿಕಾರಕ್ಕೆ ಚ್ಯುತಿ ಬರುತ್ತದೆಂಬ ಭಯ ಮೈಸೂರು ಸಂಸ್ಥಾನ ಹಾಗೂ ಮಂಡ್ಯ ಜಿಲ್ಲೆಯ ಒಕ್ಕಲಿಗ ಮುಖಂಡರನ್ನು ಕಾಡದೆ ಇರಲಿಲ್ಲ. ದೇಶವನ್ನು ಹೆಚ್ಚುಕಾಲ ಆಳ್ವಿಕೆ ಮಾಡಿದವರು ಅಲ್ಪಸಂಖ್ಯಾತರೆ ಹೊರತು ಬಹುಸಂಖ್ಯಾತರಲ್ಲವೆಂಬ ಸತ್ಯವನ್ನು ಈ ವರ್ಗದ ಜನನಾಯಕರು ಅರಿಯದೆ ಹೋದರು, ಆದರೆ ಮಂಡ್ಯ ಜಿಲ್ಲೆಯಲ್ಲಿ ಉಳಿದ ವರ್ಗದವರು, ಭೇದವಿಲ್ಲದೇ ಎಲ್ಲರೂ ಭಾಷವಾರು ಪ್ರಾಂತ್ಯರಚನೆಯ ಚಳುವಳಿಗೆ ಸಹಕರಿಸಿದರು. ಕರ್ನಾಟಕದ ವಿವಿಧ ಪ್ರಾಂತ್ಯಗಳಿಗೆ ಹೋಲಿಸಿದರೆ ಏಕೀಕರಣ ಚಳುವಳಿ ಮಂಡ್ಯ ಜಿಲ್ಲೆಯನ್ನು ಪ್ರವೇಶಿಸಿದ್ದು ಸ್ವಾತಂತ್ರ್ಯ ನಂತರದಲ್ಲಿ ಎಂದು ಹೇಳಬಹುದು. ಸ್ವಾತಂತ್ರ್ಯ

ಚಳುವಳಿಯಲ್ಲಿ ಪ್ರಮುಖ ಪಾತ್ರವಹಿಸಿದ ಜಿಲ್ಲೆಯ ಅಗ್ರಪಂಕ್ತಿಯ ನಾಯಕರಾದ ಕೆ.ವಿ.ಶಂಕರಗೌಡ, ಎಚ್.ಕೆ.ವೀರಣ್ಣಗೌಡ, ಪಿಎನ್.ಜವರಪ್ಪಗೌಡ ಅವರು ಮೈಸೂರು ಯಥಾಸ್ಥಿತಿಯಲ್ಲಿ ಉಳಿಯಲಿ ಎಂದು ಮೈಸೂರು ಸಂಸ್ಥಾನ ವಿಲೀನ ವಿರೋಧಿ ಸಮಿತಿಯನ್ನು ರಚಿಸಿಕೊಂಡಿದ್ದರು ಹಾಗೂ 1956 ಜನವರಿ 1 ರಂದು ಮಂಡ್ಯದಲ್ಲಿ ಮೈಸೂರು ಸಂಸ್ಥಾನದ ಒಂಬತ್ತು ಜಿಲ್ಲೆಯ ಬೆಂಬಲದೊಂದಿಗೆ ಮೈಸೂರು ಸಂಸ್ಥಾನ ವಿಲೀನ ವಿರೋಧಿ ಸಮ್ಮೇಳನ ನಡೆಸುವ ಮೂಲಕ ಏಕೀಕರಣಕ್ಕೆ ವಿರೋಧ ಅಭಿಪ್ರಾಯ ವ್ಯಕ್ತಪಡಿಸಿದ್ದ ವಿವಿಧ ಪ್ರಾಂತ್ಯಗಳ ಜನರು, ಸಾಹಿತಿಗಳು, ರಾಜಕೀಯ ನಾಯಕರಲ್ಲಿ ಅಸಮಧಾನಕ್ಕೆ ಕಾರಣರಾಗಿದ್ದರು.

* ಮಂಡ್ಯ ಜಿಲ್ಲೆಯಲ್ಲಿ ಅಖಂಡ ಕರ್ನಾಟಕ ರಚನೆಯ ವಿರೋಧದ ನಡುವೆಯು ಏಕೀಕರಣ ಪರವಾದ ಅಭಿಪ್ರಾಯವನ್ನು ನಾಗಮಂಗಲ, ಮಂಡ್ಯ, ಮೇಲುಕೋಟೆ ಪ್ರದೇಶಗಳಲ್ಲಿ ಜಿ.ದೇವಯ್ಯ ನೇತೃತ್ವದಲ್ಲಿ ಸಭೆಗಳು ನಡೆದಿದ್ದವು. ಈ ಮೂಲಕ ಚಳುವಳಿಗೆ ಜಿಲ್ಲೆಯಲ್ಲಿ ಪರ-ವಿರೋಧ ಅಭಿಪ್ರಾಯಗಳ ವ್ಯಕ್ತವಾಗಿದ್ದು ಸಂಶೋಧನೆಯು ಬೆಳಕು ಚೆಲ್ಲುತ್ತದೆ. ಇದರಿಂದ ಜಿಲ್ಲೆಯಲ್ಲಿ ಏಕೀಕರಣಕ್ಕೆ ಸಂಪೂರ್ಣ ವಿರೋಧವಿರಲ್ಲವೆಂಬ ತೀರ್ಮಾನಕ್ಕೆ ಬರಬಹುದು.

* ಮಂಡ್ಯ ಜಿಲ್ಲೆಯು ಏಕೀಕರಣ ಚಳುವಳಿ ಆರಂಭವಾಗುವ ಪೂರ್ವದಲ್ಲಿಯೇ ಮಹಾರಾಜರು, ಕಮಿಷನರುಗಳು ಹಾಗೂ ಪ್ರಗತಿಪರ ದಿವಾನರುಗಳ ಆಡಳಿತ ಕ್ರಮದಿಂದ ಉತ್ತರ ಕರ್ನಾಟಕ ಪ್ರದೇಶಗಳಿಗಿಂತ ಕೃಷಿ, ಕೈಗಾರಿಕೆ, ನೀರಾವರಿ, ಶಿಕ್ಷಣ ,ಇನ್ನಿತರ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಿತ್ತು. ಇಲ್ಲಿನ ವಿಫುಲವಾದ ಸಂಪನ್ಮೂಲಗಳನ್ನು ಇತರೆ ಭಾಗಗಳಿಗೆ ಹಂಚಿಕೊಳ್ಳಬೇಕೆಂಬ ಅಳಕು ಇವರನ್ನು ಕಾಡಿ ಏಕೀಕರಣಕ್ಕೆ ವಿರೋಧ ವ್ಯಕ್ತಪಡಿಸಿದ್ದು ಉಂಟು.

* ಮೈಸೂರು ವಾದಿಗಳಾದ ಹೆಚ್.ಕೆ.ವೀರಣ್ಣಗೌಡ, ಕೆ.ಪುಟ್ಟಸ್ವಾಮಿ ಇವರು ಕೇವಲ ಭಾಷೆಯೊಂದೆ ಪ್ರಾಂತ್ಯ ರಚನೆಗೆ ಆಧಾರವಾಗಿಟ್ಟುಕೊಳ್ಳದೆ ಇತರೆ ಅಂಶಗಳನ್ನು ಪರಿಗಣಿಸಬೇಕೆಂದು ಶಾಸನಸಭೆಯ ಒಳಗೆ ಮತ್ತು ಹೊರಗೆ ಪ್ರಯತ್ನ ನಡೆಸಿ, ವಿಶಾಲ ಮೈಸೂರು ರಾಜ್ಯ ರಚಿಸಿದರೆ ಮೈಸೂರಿಗೆ ಮುಂದೆ ಉಂಟಾಗುವ ತೊಂದರೆಗಳೇನು ಎಂದು ಅಂಕಿ ಅಂಶ ಸಹಿತವಾಗಿ ವಿವರಿಸಿದರು. ಅಲ್ಲದೆ ಹಿಂದಿ ಮಾತನಾಡುವ ಹಲವಾರು ರಾಜ್ಯಗಳಿರುವಾಗ ಕನ್ನಡ ಮಾತನಾಡುವ ಎರಡು ರಾಜ್ಯಗಳಿರಬಾರದೇಕೆ ಎಂದು ತಮ್ಮವಾದ ಮಂಡಿಸಿದ್ದರು. ಆದರೂ ಈ

ವಾದ ಕೆಂಗಲ್ ಹನುಮಂತಯ್ಯನವರ ವಿಶಾಲರಾಜ್ಯ ರಚನೆಯ ದೃಢ ನಿಲುವಿನ ಮುಂದೆ ಗೌಣವಾಯಿತು.

* ಏಕೀಕರಣ ಚಳುವಳಿಯ ಉದ್ದಕ್ಕೂ ಏಕೀಕರಣ ವಾದಿಗಳಲ್ಲಿ ಸಂಘರ್ಷ, ತಳಮಳವಿದ್ದರೂ, ನಾಡಿನ ಜನರನ್ನು ಸಾಂಸ್ಕೃತಿಕ, ಭಾವನಾತ್ಮಕವಾಗಿ ಒಂದುಗೂಡಿಸುವಲ್ಲಿ ಏಕೀಕರಣ ಚಳುವಳಿ ಸಫಲವಾಯಿತು. ಆದರೆ ಮೈಸೂರು ವಾದಿಗಳು ಒತ್ತಡಕ್ಕೆ ಮಣಿದ ಬಹುಭಾಷಾ ಸಂಸ್ಕೃತಿಯ ಪ್ರಾಂತಕ್ಕೆ 'ಮೈಸೂರು ರಾಜ್ಯ' ಎಂದು ನಾಮಕರಣ ಮಾಡುವಲ್ಲಿ ಹಾಗೂ ಜಯಚಾಮರಾಜಒಡೆಯರನ್ನು ರಾಜ್ಯಪಾಲರಾಗಿ ನೇಮಿಸುವಲ್ಲಿ ಯಶಸ್ವಿಯಾಗಿದ್ದರು. ಮುಂದೆ 1973 ನವೆಂಬರ್ 1 ರಂದು ರಾಜ್ಯಕ್ಕೆ ಕರ್ನಾಟಕವೆಂದು ನಾಮಕರಣವಾಯಿತು.

* ಪ್ರಸ್ತುತ ದಿನಗಳಲ್ಲಿ ಮಂಡ್ಯ ಜಿಲ್ಲೆಯ ನಾಡು-ನುಡಿ, ಜಲ ರಕ್ಷಣೆಯ ಸಮಸ್ಯೆಗಳಿಗೆ ಜಿಲ್ಲೆಯು ಮೊದಲ ಧ್ವನಿಯನ್ನು ಎತ್ತಿ ಹಿಡಿಯುತ್ತದೆ. ಕನ್ನಡತನ ಮತ್ತು ಗ್ರಾಮೀಣ ಸಂಸ್ಕೃತಿಯನ್ನು ಉಳಿಸಿಕೊಳ್ಳುವ ಮೂಲಕ ಭಾರತೀಯ ಸಂಸ್ಕೃತಿಯ ಬೆಳೆಸುವ ಸಂಸ್ಕೃತಿ ಪ್ರವೇಶವಾಗಿದೆ. ಇದರೊಂದಿಗೆ ಅಭಿವೃದ್ಧಿ ಕಡೆಗೆ ಜಿಲ್ಲೆಯು ದಾಪುಗಾಲು ಇಡುವುದು ಅವಶ್ಯಕವಾಗಿದೆ. ಅಂದು ಏಕೀಕರಣ ವಿರೋಧಿಸಿ ಚಳುವಳಿ ನಡೆದ ಸ್ಥಳದಲ್ಲಿ ಇಲ್ಲಿಯವರೆಗೂ ಪ್ರತ್ಯೇಕ ರಾಜ್ಯದ ಕೂಗು ಕೇಳಿಸಿಲ್ಲ. ಆದರೆ ಏಕೀಕರಣದ ಚಳುವಳಿ ಬಲವಾಗಿ ನಡೆದ ಸ್ಥಳಗಳಲ್ಲಿ ಒಡಕಿನ ಧ್ವನಿಗಳು ಕೇಳಿ ಬರುತ್ತಿದ್ದು ಅಖಂಡ ಕರ್ನಾಟಕದ ಏಕತೆಗೆ ಧಕ್ಕೆ ತರುತ್ತದೆ. ಅನೇಕ ಜನರ ಪರಿಶ್ರಮ ಮತ್ತು ಚಳುವಳಿಯ ಫಲವಾಗಿ ನಾವು ಕಟ್ಟಿಕೊಂಡ ಕರ್ನಾಟಕ ವಿಭಜನೆಯಾಗಬಾರದು ಹಾಗೂ ಸ್ವಾತಂತ್ರ್ಯ ಎಂದೆಂದಿಗೂ ಪರಕೀಯರ ಪಾಲಾಗಬಾರದು.

ಗ್ರಂಥ ಸೂಚಿ

I PRIMARY SOURCES

Karnataka State Archives Bangalore-Private Collections

1. H.K.Veerannagowda Collections.
2. N.D.Shankar Collections.
3. M.Shankaralinge gowda collections.
4. Kadidal Manjappa collections.
5. R.R.Diwakar Collections (1938-1943)
6. T.T. Sharma Collections (1940-1983)

Reports / Files

1. The Report on the Administration of Mysore for the year 1937-38 to 1956-57
2. The Congress convention shivapura report 1938
3. The Mysore Congress report (01.04.1938 to 22.06.1938)
4. The Mysore Administration Report (1939-40 August 27th 1939) Attended the opening ceremony of District office at Mandya by his highness of the Maharaja nalwadi Krishnaraja wodeyer.
5. The Mysore congress reports (24.01.1938 to 29.12.1938 and 03.07.1939 to 30.12.1939)
6. The Hamithon Building satyagraha Mysore-1939 Report, (15.02.1939 to 05.03.1939)
7. The Hamithon Building satyagraha Mysore-1939 Report, (06.03.1939 to 31.03.1939)

8. The Mysore congress vol-10 Mysore congress working committe file (02.01.1939 to 29.06.1939)

9. The Special Branch Abstracts Report (1937 to 1957)

10. The National Youth league Report (24.04.1935 to 16.06.1937)

11. The Congress Socialist party Report (03.03.1937 to 03.01.1937)

12. The French Rockes District files (01.01.1938 to 30.06.1938)

13. The Mysore legislative Assembly Debates 1953 to 1956)

14. ಧಾರ್ ಸಮಿತಿ (ಭಾಷಾವಾರು ಪ್ರಾಂತ ಸಮಿತಿ) ಯ ವರದಿ –1948

15. ರಾಜ್ಯಗಳ ಪುನರ್ವಿಂಗಡಣೆಯ ಕಮಿಷನ್‌ರವರ ವರದಿ–1955

16. ರಾಜ್ಯಭಾಷಾ ಆಯೋಗದ ವರದಿ 1956 (ಬಿ.ಜಿ.ಖೇರ)

II ಆನುಷಂಗಿಕ ಆಕರಗಳು

ಕನ್ನಡ ಆಕರ ಗ್ರಂಥಗಳು

01. ಅರ್ಜುನಪುರಿ ಅಪ್ಪಾಜಿಗೌಡ – **ಸಂಘಟನಾ ಚತುರ ಎಚ್.ಕೆ.ವೀರಣ್ಣಗೌಡ,** ಬಂಧುಮಿತ್ರ ಪ್ರಕಾಶನ ಕಿರಗಂದೂರು, ಮಂಡ್ಯ, 2005

02. ಅನಂತರಾಮು.ಕೆ. – **ಸಕ್ಕರೆ ಸೀಮೆ,** ಅನಂತ ಪ್ರಕಾಶನ, ಮೈಸೂರು, 1982

03. ಅನಿತಾ.ಎಂ.ಎಸ್. – **ಆಧುನಿಕ ಮೈಸೂರಿನ ಇತಿಹಾಸದಲ್ಲಿ ನಾಲ್ವಡಿಕೃಷ್ಣ ರಾಜ್ಯ ಒಡೆಯರ್** (ಪರಿವರ್ತನಾಶೀಲ ಸಂಪ್ರದಾಯ ಬದ್ಧ ಸಮಾಜದ ಮೇಲೆ ಪಾಶ್ಚಿಮಾತ್ಯ ಪ್ರಭಾವ ಒಂದು ಸಮಗ್ರ ಅಧ್ಯಯನ, ಪ್ರಿಯ ದರ್ಶಿನಿ ಪ್ರಕಾಶನ, ಮೈಸೂರು, 2016.

04. **ಅಶ್ವಥನಾರಾಯಣ** – **ಮೈಸೂರು ಸಂಸ್ಥಾನದಲ್ಲಿನ ರಾಷ್ಟ್ರೀಯ ಚಳುವಳಿಯ ಒಳನೋಟಗಳು 1870–1940,** ಮಾದರ ದೂಳಯ್ಯ ಪ್ರಕಾಶನ, ಮೈಸೂರು, 2008.

05. **ಉಮಾಪತಿ.ಕೆ.ಎಸ್.** – **ಮೈಸೂರು ಚಲೋ, (ಸತ್ಯಾಗ್ರಹ ಪತ್ರಗಳು),** ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು– 1998

06. **ಕಲ್ಲೂರ ಕೃಷ್ಣಕುಮಾರ** – **ಕರ್ನಾಟಕ ನಾಮಕರಣ ಮಹೋತ್ಸವ,** ಸಂಪುಟ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2006.

07. **ಕಾವಟೆ.ಎಸ್.ಎಚ್. ಪೂಜಾರ.ವಿ.ಜಿ** – **ಪ್ರತಿಭಾನ್ವಿತ ಸಂಸದೀಯ ಪಟುಗಳ ಬದುಕು ಬರಹ–ಮಾಲಿಕೆ, ಕಡಿದಾಳ್ ಮಂಜಪ್ಪ,** ವಿಧಾನಸಭಾ, ಸಚಿವಾಲಯ, ಬೆಂಗಳೂರು–1999

08. **ಕಾಳೇಗೌಡ.ಕೆ.** – **ಮಂಡ್ಯ ಜಿಲ್ಲಾ ದರ್ಶನಿ,** ನುಡಿಭಾರತಿ ಪ್ರಕಾಶನ, ಮಂಡ್ಯ–1990

09. **ಕಾಮಾಕ್ಷಮ್ಮ.ಬಿ.** – **ಯಶೋಧರಮ್ಮದಾಸಪ್ಪ,** ಐಬಿಎಚ್, ಪ್ರಕಾಶನ, ಬೆಂಗಳೂರು–1980

10. **ಕ್ಯಾತನಹಳ್ಳಿ ರಾಮಣ್ಣ (ಸಂ.)** – **ಸ್ನೇಹವೀರ, ಕೆ.ಟಿ.ವೀರಪ್ಪ ಗೌರವಗ್ರಂಥ,** ಕೆ.ಟಿ.ವೀರಪ್ಪ, ಅಭಿನಂದನಾ ಸಮಿತಿ, ಮೈಸೂರು, 2016

11. **ಕೃಷ್ಣರಾವ್.ಎಂ.ವಿ. ಮತ್ತು ಕೇಶವಭಟ್ಟ.ಎಂ. (ಸಂ.)** – **ಕರ್ನಾಟಕ ಇತಿಹಾಸ ದರ್ಶನ,** ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು–1970

12. **ಕೃಷ್ಣಸ್ವಾಮಿ.ಎನ್.** – **ಕರ್ನಾಟಕದಲ್ಲಿ ಗಾಂಧಿ,** ಗಾಂಧೀ ಸ್ಮಾರಕನಿಧಿ, ಬೆಂಗಳೂರು–1969

13. ಕೃಷ್ಣರಾಯ.ಅ.ನ. – **ಅಖಂಡಕರ್ನಾಟಕ,** ಪ್ರಗತಿಶೀಲ ಲೇಖಕರ ಸಂಘ, ಬೆಂಗಳೂರು, 1946

14. ಕೃಷ್ಣಯ್ಯ.ಎಂ.ಎಚ್. ಚಕ್ಕರೆ ಶಿವಶಂಕರ್ – **ನಾಡೋಜ ದೇಶಹಳ್ಳಿ, ಜಿ.ನಾರಾಯಣ ಅಭಿನಂದನ ಸಂಪುಟ,** ನಾಡೋಜ. ಜಿ. ನಾರಾಯಣ ಅವರ ಅಭಿನಂದನಾ ಸಮಿತಿ, ಬೆಂಗಳೂರು, 2006

15. ಕೋಣಂದೂರು ವೆಂಕಟಪ್ಪಗೌಡ – **ಜೀವಂತಜ್ವಾಲೆ,** ಶಾಂತವೇರಿ ಗೋಪಾಲಗೌಡಸ್ಮರಣೀಯ ಗ್ರಂಥ, ಬೆಂಗಳೂರು–1981

16. ಕೋಣಂದೂರು ವೆಂಕಟಪ್ಪಗೌಡ – **ನವ ಮೈಸೂರು ಶಿಲ್ಪಿ ಕೆಂಗಲ್ ಹನುಮಂತಯ್ಯ,** ಬೆಂಗಳೂರು, 1985.

17. ಗುಂಡಪ್ಪ.ಡಿ.ವಿ. – **ಮೈಸೂರಿನ ದಿವಾನರುಗಳು ಜ್ಞಾಪಕ ಚಿತ್ರಶಾಲೆ,** ಸಂಪುಟ–4, ಕಾವ್ಯಾಲಯ ಪ್ರಕಾಶನ, ಮೈಸೂರು, 1971

18. ಗೋಪಾಲರಾವ್.ಎಚ್.ಎಸ್.(ಸಂ.)– **ಕರ್ನಾಟಕ ಏಕೀಕರಣ ಇತಿಹಾಸ,** ನವಕರ್ನಾಟಕ ಪ್ರಕಾಶನ, ಬೆಂಗಳೂರು, 1996,

19. ಗೋಪಾಲ್.ಆರ್. (ಸಂ.) – **ಮಂಡ್ಯ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ,** ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ, ಮೈಸೂರು, 2007

20. ಗೋವಿಂದರಾಜು. ಸಿ.ಆರ್. – **ಕರ್ನಾಟಕ ಏಕೀಕರಣ ಮತ್ತು ಕನ್ನಡ ಸಾಹಿತ್ಯ ಪರಿಷತ್ತು,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು–1995

21. ಗೋವಿಂದರಾಜು.ಸಿ.ಆರ್. – **ಕರ್ನಾಟಕ ಏಕೀಕರಣ ಹಾಗೂ ನಾಮಕರಣ,** ವಿಧಾನಸಭೆ ಸಚಿವಾಲಯ, ಬೆಂಗಳೂರು, 2005

22. ಗೋವಿಂದರಾಜು.ಸಿ.ಆರ್. – **ಕರ್ನಾಟಕ ಏಕೀಕರಣ ಚಳುವಳಿ ಮತ್ತು ಕನ್ನಡ ಸಾಹಿತ್ಯ,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು – 2006

23. ಗೋವಿಂದರಾಜು.ಸಿ.ಆರ್. – **ಚಾರಿತ್ರಿಕ ಕರ್ನಾಟಕ,** ಗ್ರಂಥಾಲಯ ಸಮಿತಿ, ವಿಧಾನಸೌಧ, ಬೆಂಗಳೂರು, 2010

24. ಚಂದ್ರಶೇಖರ.ಎಸ್. – **ಸಾಮಾಜಿಕ ಹಿನ್ನಲೆಯಲ್ಲಿ ಮೈಸೂರು ರಾಜಕೀಯ ಕೆಲವು ಒಳನೋಟಗಳು; 1881–1940,** ಅಂಕಣ ಪ್ರಕಾಶನ, ಬೆಂಗಳೂರು–1983.

25. ಚಂದ್ರಶೇಖರ್.ಎಸ್.
ಕನ್ನಡಕ್ಕೆ : ಸಿ.ನಾಗಣ್ಣ – **ದಕ್ಷಿಣ ಭಾರತ; ವಸಾಹತುಶಾಹಿ, ರಾಷ್ಟ್ರೀಯತೆ ಮತ್ತು ಸಂಘರ್ಷ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2000

26. ಚಂದ್ರಶೇಖರ್.ಎಸ್. – **ಆಧುನಿಕ ಕರ್ನಾಟಕದ ಆಂದೋಲನಗಳು,** ನಮ್ಮ ಪ್ರಕಾಶನ, ಬಿಳಿಗೆರೆ, ತಿಪಟೂರು, 2002.

27. ಚಂದ್ರಶೇಖರ್.ಎಸ್. – **ವಸಾಹತುಕಾಲೀನ ಕರ್ನಾಟಕ,** ಕನ್ನಡ ಸಂಸ್ಕೃತಿ ಮತ್ತು ಇಲಾಖೆ, ಬೆಂಗಳೂರು, 2006.

28. ಚಂದ್ರಶೇಖರ್.ಎಸ್.
ಶಶಿಧರ್.ಎಂ. (ಸಂ.) – **ಕರ್ನಾಟಕ ಚರಿತ್ರೆ; ಇಣುಕು ನೋಟಗಳು,** ಪ್ರಸಾರಾಂಗ, ಬೆಂಗಳೂರು, 2007

29. ಚಿನ್ನಸ್ವಾಮಿ ಸೋಸಲೆ ಎನ್. – **ಕರ್ನಾಟಕ ರಾಜಕೀಯ ಚರಿತ್ರೆ ಮತ್ತು ಸಾಹಿತ್ಯ ,** ಸಿ.ವಿ.ಜಿ. ಪಬ್ಲಿಕೇಷನ್, ಬೆಂಗಳೂರು. 2002

30. **ಚಿನ್ನಸ್ವಾಮಿ ಸೋಸಲೆ ಎನ್.** – **ಸಾಮ್ರಾಜ್ಯ ಮತ್ತು ಸಂಸ್ಥಾನ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2004

31. **ಚಿನ್ನಸ್ವಾಮಿ ಸೋಸಲೆ ಎನ್.** – **ನಾಲ್ವಡಿ ಕೃಷ್ಣನ ಮೈಸೂರು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2005

32. **ಚಿನ್ನಸ್ವಾಮಿ ಸೋಸಲೆ ಎನ್.** – **ವಸಾಹತು ಕಾಲಘಟ್ಟದ ಮೈಸೂರು ಸಂಸ್ಥಾನ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2010.

33. **ಚಿನ್ನಸ್ವಾಮಿ ಸೋಸಲೆ ಎನ್.** – **ದಿವಾನ್ ಸರ್ ಮಿರ್ಜಾ.ಎಂ. ಇಸ್ಮಾಯಿಲ್ ಕಾಲದ ಮೈಸೂರು ಸಂಸ್ಥಾನ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2012.

34. **ಚಿನ್ನಸ್ವಾಮಿ ಸೋಸಲೆ ಎನ್.** – **ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2013.

35. **ಚಿನ್ನಸ್ವಾಮಿ ಸೋಸಲೆ.ಎನ್.** – **ಜಯಚಾಮರಾಜೇಂದ್ರ ಒಡೆಯರ್ ಕಾಲದ ಮೈಸೂರು ಸಂಸ್ಥಾನ,** ಸುಂದರ ಪ್ರಕಾಶನ, ಬೆಂಗಳೂರು–2016.

36. **ಜಯಪ್ರಕಾಶಗೌಡ ಲಿಂಗಣ್ಣ ಬಂಧೂಕಾರ್ (ಸಂ.)** – **ಮಂಡ್ಯಜಿಲ್ಲೆಯ ಸ್ವಾತಂತ್ರ್ಯವೀರರು,** ಪರಂಪರಾವಲೋಕನ ಸಮಿತಿ, ಮಂಡ್ಯ–2006.

37. **ಜಗದೀಶ್ ಕೊಪ್ಪ.ಎನ್.** – **ಸಿರಿನಾಡು,** ಮಂಡ್ಯ ಜಿಲ್ಲೆಯ ಕುರಿತು ಒಂದು ಅವಲೋಕನ, ಅಪೂರ್ವ ಪ್ರಕಾಶನ, ಮಂಡ್ಯ, 1999

38. **ಜವರೇಗೌಡ.ದೇ. (ಸಂ.)** – **ಕರ್ನಾಟಕದ ರೂವಾರಿ,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2006

39. **ಜವರೇಗೌಡ ದೇ. (ಸಂ.)** – **ಶ್ರೀಮತಿ ಯಶೋಧರದಾಸಪ್ಪ, ಜನ್ಮಶತಮಾನೋತ್ಸವ, ಯಶೋಧರಾಗಾಥೆ ಮತ್ತು ಕರ್ನಾಟಕ ಸಾಧಕಿಯರು,** ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು, 2012.

40. **ಜವರಪ್ಪಗೌಡ.ಪಿ.ಎನ್.** – **ಶಿವಪುರ ಧ್ವಜಸತ್ಯಾಗ್ರಹ,** ಸಾಹಿತ್ಯ ಮಂದಿರ, ಬೆಂಗಳೂರು, 1996

41. **ಜವರಪ್ಪಗೌಡ.ಪಿ.ಎನ್. (ಸಂ.),** – **ಶಿವಪುರ ರಾಷ್ಟ್ರಕೂಟ,** ಸುವರ್ಣೋತ್ಸವ ಕೈಪಿಡಿ, ಮಂಡ್ಯ ಜಿಲ್ಲಾ ಪರಿಷತ್, ಮಂಡ್ಯ 1988

42. **ಜವರಯ್ಯ.ಮ.ನ.** – **ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅಂಬೇಡ್ಕರ್,** ಸಿದ್ದಾರ್ಥ ಗ್ರಂಥಮಾಲೆ, ಮೈಸೂರು, 2002.

43. **ಜೋಯಿಸ್.ಎಂ.ಎನ್.(ಸಂ.)** – **ಕರ್ಮಯೋಗಿ,** ತಗಡೂರು ರಾಮಚಂದ್ರ ರಾಯರ ಆತ್ಮಕಥನ ಮತ್ತು ಅಭಿನಂದನ ಗ್ರಂಥ, ಮೈಸೂರು, 1974

44. **ಜೋಶಿ.ಕೃ.ಪ. (ಸಂ.)** – **ಭಾರತ ಸ್ವಾತಂತ್ರ್ಯ ಸಿದ್ದಾಂತ** ಅರ್ಥವಿಕಾಸ ಕನ್ನಡ ವಾರಪತ್ರಿಕೆ, ಹುಬ್ಬಳ್ಳಿ, ಅಗಸ್ಟ್ 1997

45. **ಜೋಶಿ.ಕೃ.ಪ. (ಸಂ.)** – **ಭಾರತ ಸ್ವಾತಂತ್ರ್ಯ ಸಂಗ್ರಾಮ ದರ್ಶನ** ಅರ್ಥವಿಕಾಸ ಕನ್ನಡ ವಾರಪತ್ರಿಕೆ, ಹುಬ್ಬಳ್ಳಿ, ಮಾರ್ಚ್ 1998

46. **ತಿಪ್ಪೇಸ್ವಾಮಿ.ಜಿ.ಆರ್.** – **ಜಿ.ವೆಂಕಟಯ್ಯ,** ಪ್ರಚಾರ ಪುಸ್ತಕ ಮಾಲೆ, ಪ್ರಸಾರಾಂಗ, ಮನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, 2007

47. **ತಿಮ್ಮನಹಳ್ಳಿ ವೇಣುಗೋಪಾಲ್** – **ರೈತರು, ಮೈಸೂರು ಅಧಿಕಾರಶಾಹಿ ಮತ್ತು ರಾಷ್ಟ್ರೀಯ ಚಳುವಳಿ, 1881–1947,** ಧಾತ್ರಿ ಪ್ರಕಾಶನ, ಬೆಂಗಳೂರು, 2010

48. **ತಿರುಮಲೆ ಶ್ರೀರಂಗಾಚಾರ್ಯ ಎಂ.ಕುಮಾರಸ್ವಾಮಿ(ಸಂ.)** – **ಮೈಸೂರು ಸಂಸ್ಥಾನದ ವೃತ್ತಪತ್ರಿಕಾ ಇತಿಹಾಸ** – ಲೇಖನಗಳ ಸಂಕಲನ, ನವನೀತ ಪ್ರಕಾಶನ, ಬೆಂಗಳೂರು, 2006.

49. **ತಿರುಮಲೆ ತಾತಾಚಾರ್ಯಶರ್ಮ** – **ಮೈಸೂರು ರಾಜಕೀಯ ಸುಧಾರಣೆಗಳ ತಿರುಳು,** ವಿಶ್ವಕರ್ನಾಟಕ, ಬೆಂಗಳೂರು, 1940

50. **ತಿರುಮಲೆ ತಾತಾಚಾರ್ಯಶರ್ಮ** – **ಮೈಸೂರು ಸಂಸ್ಥಾನದ ಸಂಗ್ರಾಮೇತಿಹಾಸ ಸಂಗ್ರಹ,** ಮೈಸೂರು ಸರ್ಕಾರದ ಮುದ್ರಣಾಲಯ, ಬೆಂಗಳೂರು, 1956

51. **ತಿರುಮಲೆ ತಾತಾಚಾರ್ಯಶರ್ಮ** – **ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ, ಸಾಹಿತ್ಯ ಸಂಘ,** ಧಾರವಾಡ, 1973

52. **ತಿರುಮಲೆ ತಾತಾಚಾರ್ಯಶರ್ಮ** – **ಮೈಸೂರು ಇತಿಹಾಸದ ಹಳೆಯ ಪುಟಗಳು,** ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು, 2006.

53. **ದಕ್ಷಿಣಮೂರ್ತಿ.ಜಿ.** – **ಪ್ರತಿಭಾವಂತ ಸಂಸದೀಯ ಪಟುಗಳ ಬದುಕು ಬರಹಮಾಲಿಕೆ, ಟಿ.ಸಿದ್ದಲಿಂಗಯ್ಯ,** ಕರ್ನಾಟಕ ವಿಧಾನಸೌಧ, ಸಚಿವಾಲಯ, ಬೆಂಗಳೂರು – 1999

54. **ದಿವಾಕರ.ಆರ್.ಆರ್.,** – **ಕರ್ನಾಟಕ ಏಕೀಕರಣದ ಕಥೆ, 1956,** ಲೋಕಶಿಕ್ಷಣ ಟ್ರಸ್ಟ್, ಹುಬ್ಬಳ್ಳಿ, 1956

55. **ದಿವಾಕರ.ಆರ್.ಆರ್. (ಸಂ.)** – **ಕರ್ನಾಟಕದ ಪರಂಪರೆ,** ಸಂಪುಟ–02, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು–1992.

56. **ದೀಕ್ಷಿತ್.ಜಿ.ಎಸ್. (ಕನ್ನಡಕ್ಕೆ)** ಮೂಲ : ತಾರಾಚಂದ್ – **ಭಾರತದಲ್ಲಿ ಸ್ವಾತಂತ್ರ್ಯ ಚಳುವಳಿ,** ಸಂಪುಟ–1, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಧಾರವಾಡ, 1992

57. **ದೊರೆಸ್ವಾಮಿ.ಹೆಚ್.ಎಸ್.** – **ಹೋರಾಟದ ದಿಟ್ಟ ಹೆಜ್ಜೆಗಳು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2006.

58. **ನರಸಿಂಹಯ್ಯ.ಹೆಚ್.** – **ಹೋರಾಟದ ಹಾದಿ,** ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಂಗಳೂರು. 1995

59. **ನಾರಾಯಣ.ಹೆಚ್.ಜಿ.** – **ಮೈಸೂರು ಮತ್ತು ಏಕೀಕರಣ,** ಅನ್ನಪೂರ್ಣ, ಪ್ರಕಾಶನ, ಬೆಂಗಳೂರು, 2012.

60. **ನಾರಾಯಣ.ಮ.ಸಿ.** – **ನಮ್ಮೂರು ಮಳವಳ್ಳಿ,** ಮಂಜು ಆರ್ಟ್ಸ್, ಮಳವಳ್ಳಿ, 2005

61. **ನಾರಾಯಣರಾವ್.ವಿ.ಎಸ್.** – **ಸ್ವಾತಂತ್ರ್ಯ ಸಂಗ್ರಾಮದಲ್ಲಿ ಶ್ರೀಸಾಮಾನ್ಯ,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1978

62. **ಪಂಡಿತ.ಮ.ಮಲ್ಲಪ್ಪ** – **ಮಳವಳ್ಳಿ ತಾಲ್ಲೂಕು ದರ್ಶನ,** ಐ.ಬಿ.ಎಚ್.ಪ್ರಕಾಶ, ಬೆಂಗಳೂರು–1987

63. **ಪಾರ್ಥಸಾರಥಿ ಟಿ.ಎ.(ಪ್ರಸಂ.),** – **ಮಂಡ್ಯ ಜಿಲ್ಲಾ ಗ್ಯಾಸೆಟಿಯರ್,** ಕರ್ನಾಟಕ ರಾಜ್ಯ ಸರ್ಕಾರ, ಬೆಂಗಳೂರು 2003

64. **ಪ್ರಮೀಳಾದೇವಿ.ಬಿ.ಕೆ.** – **ಮೈಸೂರು ಸಂಸ್ಥಾನದಲ್ಲಿ ಹಿಂದುಳಿದ ವರ್ಗಗಳ ಚಳುವಳಿ ಹಾಗೂ ರಾಜಕೀಯ ಜಾಗೃತಿ–ಒಂದು ಒಳನೋಟ,** 1881–1938, ರೂಪ ಪ್ರಕಾಶನ, ಮೈಸೂರು, 2010.

65. ಪ್ರಾಣೇಶರಾವ್.ಬಿ.ಆರ್., – **ಯಶೋಧರಾ ದಾಸಪ್ಪ ಮತ್ತು ಹೆಚ್.ಸಿ.ದಾಸಪ್ಪ ಜೀವನ ಮತ್ತು ಸಾಧನೆ,** ಭಾರತೀ ಪ್ರಕಾಶನ, ಮೈಸೂರು, 1997

66. ಪುಟ್ಟಸ್ವಾಮಯ್ಯ.ಬಿ. – **ಸಿ.ನಿಜಲಿಂಗಪ್ಪನವರ ಜೀವನ ದರ್ಶನ,** ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ, ಬೆಂಗಳೂರು, 1968

67. ಪೂರ್ಣಿಮಾ.ಬಿ.ಸಿ. – **ಪ್ರತಿಭಾವಂತ ಸಂಸದೀಯ ಪಟುಗಳ ಬದುಕು–ಬರಹ ಮಾಲಿಕೆ, ಎಸ್.ಸಿ.ಮಲ್ಲಯ್ಯ,** ಕರ್ನಾಟಕ ವಿಧಾನ ಮಂಡಲ ಗ್ರಂಥಾಲಯ ಸಮಿತಿ, ವಿಧಾನಸೌಧ, ಬೆಂಗಳೂರು–2005.

68. ಪ್ರೇಮಲತಾ ಸುಂದರೇಶನ್ ಮತ್ತು ಇತರರು (ಸಂ.) – **ಸ್ವಾತಂತ್ರ್ಯದೆಡೆಗೆ, ಎಂ.ಎನ್.ಜೋಯಿಸ್ ಅಭಿನಂದನಾ ಗ್ರಂಥ,** ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು, 1991.

69. ಬೆಟಗೇರಿ ಕೃಷ್ಣಶರ್ಮ, – **ಕರ್ನಾಟಕ ಜನಜೀವನ,** ಸಮಾಜ ಪುಸ್ತಕಾಲಯ, ಧಾರವಾಡ, 1963

70. ಬರಗೂರುರಾಮಚಂದ್ರಪ್ಪ (ಸಂ.) – **ಕರ್ನಾಟಕ ಸಂಗಾತಿ,** ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು–2013

71. ಭಗವಾನ್ ಕೆ.ಎಸ್.(ಸಂ.) – **ಕೆಂಗಲ್ಲರ ಭಾಷಣಗಳು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2006.

72. ಬಿಪನ್ ಚಂದ್ರ (ಕನ್ನಡಕ್ಕೆ ಎಂ.ಕೆ.ಅನಿಲ್) – **ಮಹಾಸಂಗ್ರಾಮ** ಓರಿಯಂಟ್ **ಲಿಮಿಟೆಡ್,** ಬೆಂಗಳೂರು–1993

73. ಮಂಜುನಾಥ.ಕೆ.ಸಿ. (ಪ್ರಸಂ.) – **ಮಂಡ್ಯ ಮಾರ್ಗದರ್ಶಿ–ಸಕ್ಕರೆ ನಾಡಿನ ಸಾಧಕರ ಕೃತಿ,** ಸಿಂಚನ ಪ್ರಕಾಶನ, ಮಂಡ್ಯ, 2016

74. **ಮುಹಮ್ಮದ್ ಕಲೀಂ ಉಲ್ಲಾ,** – **ನಾಗಮಂಗಲ ತಾಲ್ಲೂಕು ದರ್ಶನ,** ಉದಯಕಾಲ ಪ್ರಕಾಶನ, ಮಂಡ್ಯ, 2011

75. **ಮುನ್ನೇಕೋಟೆ ಕೇಶವರಾವ್,** – **ಮಂಡ್ಯ ಜಿಲ್ಲೆ ದರ್ಶನ,** ಐ.ಬಿ.ಎಚ್. ಪ್ರಕಾಶನ, ಬೆಂಗಳೂರು–1978

76. **ಮುದ್ದೇಗೌಡ.ಎಚ್.ಎಸ್.** – **ಇಂಡುವಾಳು ಹೆಚ್.ಹೊನ್ನಯ್ಯ,** ಜನದನಿ ಪ್ರಕಾಶನ, ಮಂಡ್ಯ, 2014.

77. **ಮುಖ್ಯಮಂತ್ರಿ ಚಂದ್ರು (ಪ್ರ.ಸಂ.) – ಗೋಪಾಲರಾವ್.ಎಚ್.ಎಸ್. (ಸಂ.)** **ಕರ್ನಾಟಕ ಏಕೀಕರಣಕ್ಕೆ ದುಡಿದ ಮಹನೀಯರು,** ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು, 2012.

78. **ಮೋಹನ್‌ಕೃಷ್ಣ ರೈ** – **ಪ್ರಭುತ್ವ ಮತ್ತು ಜನತೆ, ಪ್ರಸಾರಾಂಗ,** ಕನ್ನಡ ವಿಶ್ವವಿದ್ಯಾಲಯ, ಹಂಪಿ, 2010

79. **ರವೀಂದ್ರನಾಥ ಆರ್.ವಿ.,** – **ಮಹಾನ್ ಸಾಧಕ ಕೆ.ಸಿ.ರೆಡ್ಡಿ,** ಶ್ರೀ ಅನ್ನಪೂರ್ಣೇಶ್ವರಿ ಪ್ರಕಾಶನ, ಕೋಲಾರ, 2014.

80. **ರಾಮಚಂದ್ರೇಗೌಡ.ಹಿ.ಶಿ. (ಪ್ರ.ಸಂ.)** – **ಕನ್ನಡ ವಿಷಯ ವಿಶ್ವಕೋಶ, ಕರ್ನಾಟಕ ಸಂಪುಟ–02,** ಮೈಸೂರು ವಿಶ್ವವಿದ್ಯಾಲಯ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು–2007.

81. **ರಾಮಕೃಷ್ಣ.ಮ** – **ರೈತಮಿತ್ರ ಜಿ.ಮಾದೇಗೌಡ,** ಬಂಧು–ಮಿತ್ರ ಪ್ರಕಾಶನ ಕಿರಗಂದೂರು, ಮಂಡ್ಯ–2012

82. **ರಾಮೇಗೌಡ ಭೈರಮಂಗಲ** – **ಕೆಂಗಲ್ ಹನುಮಂತಯ್ಯ ಮತ್ತು ಕನ್ನಡ ಸಂಸ್ಕೃತಿ,** ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2009

83. **ರಾಘವೇಂದ್ರರಾವ್.ಕೆ.** – **ಕರ್ನಾಟಕ ಏಕೀಕರಣದ ನಾಲ್ವರು ಚಿಂತಕರು ಮನೋಹರ ಗ್ರಂಥ ಮೂಲಾ,** ಧಾರವಾಡ, 2005.

84. **ರಾಕೇಶ.ಹೆಚ್.ಎಸ್.** – **ಮೈಸೂರು ಚಲೋ ಚಳುವಳಿ,** ರೂಪ ಪ್ರಕಾಶನ, ಮೈಸೂರು, 2011.

85. **ರಾಜೇಗೌಡ.ಹ.ಕ.(ಸಂ.)** – **ಸಿಂಗಾರ (ಕೆ.ಸಿಂಗಾರಿಗೌಡ ಅಭಿನಂದನ ಗ್ರಂಥ),** ಕೆ.ಸಿಂಗಾರಿಗೌಡ, ಅಭಿನಂದನ ಸಮಿತಿ, ಮಂಡ್ಯ. 1988

86. **ರಾಜೇಗೌಡ.ಹ.ಕ. (ಸಂ.)** – **ಚಿತ್ರಗುಪ್ತ ಸ್ಮರಣೆ (ಎಚ್.ಕೆ.ವೀರಣ್ಣಗೌಡ ಸ್ಮರಣೆ ಗ್ರಂಥ),** ಎಚ್.ಕೆ.ವೀರಣ್ಣಗೌಡ ಸ್ಮಾರಕ ಪ್ರಕಾಶನ, ಮದ್ದೂರು, 1994

87. **ರಾಜೇಗೌಡ.ಹ.ಕ. (ಸಂ.)** – **ನನ್ನ ಜೀವನ ಯಾತ್ರೆ, ಪಿ.ಎನ್.ಜವರಪ್ಪಗೌಡರ ಆತ್ಮಕಥೆ,** ಕರ್ನಾಟಕ ಸಂಘ, ಮಂಡ್ಯ 2015.

88. **ರಾಜೇಗೌಡ.ಹ.ಕ. ಜಯಪ್ರಕಾಶಗೌಡ (ಸಂ.),** – **ಸಾಹಸಿಯಾತ್ರಿ (ಪಿ.ಎನ್.ಜವರಪ್ಪಗೌಡ, ಅಭಿನಂದನ ಗ್ರಂಥ),** ಮಂಡ್ಯ 1989

89. **ರಾಜೇಂದ್ರ.ಡಿ.ಕೆ. (ಸಂ.), ಮಲೆಯೂರು ಗುರುಸ್ವಾಮಿ ತಿಪ್ಪೇಸ್ವಾಮಿ.ಜಿ.ಆರ್.** – **ಮೈಸೂರು ದರ್ಶನ,** ಸಂಪುಟ 01, ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು, 2011

90. **ಲಿಂಗಯ್ಯ.ಡಿ.** – **ಶಿವಪುರ ಧ್ವಜಸತ್ಯಾಗ್ರಹ,** ಸ್ವಾತಂತ್ರ್ಯ ಸಂಗ್ರಾಮದ ಚರಿತ್ರೆ, ಗೋಧೂಳಿ ಪ್ರಕಾಶನ, ಬೆಂಗಳೂರು, 2011

91. **ಲಿಂಗಯ್ಯ.ಡಿ.** – **ರಾಷ್ಟ್ರರತ್ನ ಕೆಂಗಲ್ ಹನುಮಂತಯ್ಯ ಸಮಗ್ರ ಜೀವನ ಚರಿತ್ರೆ,** ಗೋಧೂಳಿ ಪ್ರಕಾಶನ, ಬೆಂಗಳೂರು –2010

92. **ಲಿಂಗಯ್ಯ.ಡಿ.** – **ಸತ್ಯಾಗ್ರಹಿಗಳ ಸಂದರ್ಶನ,** ದಿನಕರ ಪ್ರಕಾಶನ, ಬೆಂಗಳೂರು– 1998

93. ಲಿಂಗಯ್ಯ.ಡಿ. – ಎಚ್.ಕೆ.ವೀರಣ್ಣಗೌಡ ಸಂಕ್ಷಿಪ್ತ ಜೀವನ ಚರಿತ್ರೆ, ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, 1999

94. ವಿಜಯ ಪೂಣಚ್ಚ ತಂಬಂಡ (ಪ್ರಸಂ.) – ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ; 04 ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2001.

95. ವಿಜಯ ಪೂಣಚ್ಚ ತಂಬಂಡ (ಪ್ರಸಂ.) – ಕನ್ನಡ ವಿಶ್ವವಿದ್ಯಾಲಯ ಚರಿತ್ರೆ, ಸಂಪುಟ 02 ಮತ್ತು 03, ಭಾರತ ಉಪಖಂಡದ ಆಧುನಿಕ ಚರಿತ್ರೆ ವಿವಿಧ ಆಯಾಮಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, 2010.

96. ವಿಜಯ ಪೂಣಚ್ಚ ತಂಬಂಡ (ಪ್ರಸಂ.)– ಚಿನ್ನಸ್ವಾಮಿ ಸೋಸಲೆ, (ಸಂಪುಟ ಸಂ.) ಕನ್ನಡ ವಿಶ್ವವಿದ್ಯಾನಿಲಯ, ಚರಿತ್ರೆ ಸಂಪುಟ–06, ಸಮಕಾಲೀನ ಕರ್ನಾಟಕ ಚರಿತ್ರೆಯ ವಿವಿಧ ಆಯಾಮಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, 2010.

97. ವೀರಣ್ಣಗೌಡ.ಎಚ್.ಕೆ. – ಬದುಕು–ಮೆಲುಕು (ಆತ್ಮಕಥೆ) ಎಚ್.ಕೆ. ವೀರಣ್ಣಗೌಡ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು – 1974, ಮರುಮುದ್ರಣ 2006.

98. ವೀರತ್ತಪ್ಪ.ಕೆ. – ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳುವಳಿ, ವಿಜಯರವಿ ಪ್ರಕಾಶನ, ಬೆಂಗಳೂರು – 1977

99. ವಿರೂಪಾಕ್ಷಿ ಪೂಜಾರಹಳ್ಳಿ (ಸಂ.)– ದಲಿತರು ಮತ್ತು ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2005

100. ವಿಘ್ನೇಶ.ಎನ್.ಭಟ್ – ಪ್ರತಿಭಾವಂತ ಸಂಸದೀಯ ಪಟುಗಳ ಬದುಕು–ಬರಹ ಮಾಲಿಕೆ–ಕೆ.ಟಿ. ಭಾಷ್ಯಂ, ಕರ್ನಾಟಕ ವಿಧಾನಸಭೆ, ಸಚಿವಾಲಯ, ಬೆಂಗಳೂರು, 2000

101. ವೆಂಕಟಸ್ವಾಮಿ – **ಮಂಡ್ಯ ಜಿಲ್ಲೆ ನಿರ್ಮಾತೃ ಸೋಮನಹಳ್ಳಿ ಚಿಕ್ಕೇಗೌಡ ಮಲ್ಲಯ್ಯ,** ಜೆ.ಪಿ. ಪ್ರಕಾಶನ, ಬೆಂಗಳೂರು – 2003.

102. ಶಂಕರನಾರಾಯಣ.ಎಸ್.ಎನ್. – **ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು,** ನವಕರ್ನಾಟಕ, ಬೆಂಗಳೂರು, 1991

103. ಶಿವರಾಮು.ಎಸ್. – **ಮಂಡ್ಯ ಜಿಲ್ಲೆಯ ಜನಪರ ಚಳುವಳಿಗಳು,** ಮನೋಜ್ ಪಬ್ಲಿಕೇಷನ್, ಬೆಂಗಳೂರು, 2011

104. ಶಿವರಾಮು.ಎಸ್. – **ಸಮಾಜಮುಖಿ ಚಿಂತಕ; ಕೆ.ವಿ.ಶಂಕರಗೌಡ,** ಕರ್ನಾಟಕ ಸಂಘ, ಮಂಡ್ಯ, 2014.

105. ಶಿವರಾಮು.ಎಸ್. – **ನಾಲ್ವಡಿ ಕೃಷ್ಣರಾಜ ಒಡೆಯರು ಮತ್ತು ಮಂಡ್ಯ ಜಿಲ್ಲೆ,** ಗಾನಶ್ರೀ ಪ್ರಕಾಶನ, ಆಲಕೆರೆ, ಮಂಡ್ಯ, 2015

106. ಶಿವರಾಮು.ಎಸ್. – **ಕೆ.ವಿ.ಶಂಕರಗೌಡ ಜೀವನ ಸಾಧನೆ,** ಕರ್ನಾಟಕ ಸಂಘ, ಮಂಡ್ಯ, 2015.

107. ಶಿವತಾರಕ.ಕೆ.ಬಿ, – **ಕರ್ನಾಟಕದ ಪುರಾತತ್ವ ನೆಲೆಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, 2001

108. ಶ್ರೀನಿವಾಸಯ್ಯ.ಹೊ. – **ನಾಗಮಂಗಲ ತಾಲ್ಲೂಕು ದರ್ಶನ,** ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, 1991

109. ಶ್ರೀನಿವಾಸಯ್ಯ.ಹೊ. – **ಭಾರತದ ಸ್ವಾತಂತ್ರ್ಯ ಚಳವಳಿ; ಒಂದು ಪಕ್ಷಿನೋಟ,** ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೆಂಗಳೂರು, 2016

110. ಷೇಕ್ಆಲಿ.ಬಿ. (ಪ್ರಸಂ.), ಚಂದ್ರಶೇಖರ್.ಎಸ್. – **ಕರ್ನಾಟಕ ಚರಿತ್ರೆ,** ಸಂಪುಟ–07, (ಕ್ರಿ.ಶ. 1900–1956), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1997

111. **ಸರಸ್ವತಿ.ಎನ್.** – **ಸ್ವಾತಂತ್ರ್ಯ ಹೋರಾಟದಲ್ಲಿ ಮೈಸೂರು ಸಂಸ್ಥಾನದ ಮಹಿಳೆಯರ ಪಾತ್ರ,** ರಾಸಿಪುಸ್ತಕ, ಪ್ರಕಾಶನ, ಮೈಸೂರು, 2008

112. **ಸಿದ್ದವ್ವನಹಳ್ಳಿ ಕೃಷ್ಣಶರ್ಮ (ಸಂ.)** – **ಗಾಂಧಿ ಮತ್ತು ಕರ್ನಾಟಕ,** ಗಾಂಧೀಸ್ಮಾರಕ ನಿಧಿ, ಬೆಂಗಳೂರು, 1969

113. **ಸಿದ್ಧರಾಮಯ್ಯ. ಸಿ.** – **ಕರ್ನಾಟಕ ದಿಗ್ಗಜ ಕೆಂಗಲ್ (ಕೆಂಗಲ್ ಹನುಮಂತಯ್ಯನವರ ಜೀವನ ಮತ್ತು ಸಾಧನೆ),** ಸಿದ್ದೇಶ್ವರ ಪ್ರಕಾಶನ, ಸರಸ್ವತಿಪುರಂ, ಮೈಸೂರು, 1988

114. **ಸುಂದರರಾವ್.ಬ.ನ.** – **ಚಲೋ ಮೈಸೂರು,** ವನವಿಹಾರಿ ಪ್ರಕಾಶನ, ಬೆಂಗಳೂರು, 1981

115. **ಸುಂದರರಾವ್.ಬ.ನ.** – **ಬೆಂಗಳೂರಿನ ಇತಿಹಾಸ, [ಸ್ಥಾಪನೆಯಿಂದ ಹಿಡಿದು ಸ್ವರಾಜ್ಯ ಲಭಿಸುವವರೆಗೆ],** ವನವಿಹಾರಿ ಪ್ರಕಾಶನ, ಬೆಂಗಳೂರು, 1985

116. **ಸೂರ್ಯನಾಥ ಕಾಮತ್ (ಸಂ.)** – **ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು,** ಸಂಪುಟ, **1, 2, 3**, ಗೀತಾಬುಕ್‌ಹೌಸ್, ಮೈಸೂರು, 1977

117. **ಸೂರ್ಯನಾಥ ಕಾಮತ್ (ಸಂ.)** – **ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಸಂಪುಟ–1, 2** ಕರ್ನಾಟಕ ಸರ್ಕಾರ, ಬೆಂಗಳೂರು, 1984

118. **ಸೂರ್ಯನಾಥ ಕಾಮತ್ (ಸಂ.)** – **ಕರ್ನಾಟಕದಲ್ಲಿ ಕ್ವಿಟ್ ಇಂಡಿಯಾ ಚಳುವಳಿ,** ಲೋಕಶಿಕ್ಷಣ ಟ್ರಸ್ಟ್ ಗ್ರಂಥಮಾಲೆ, ಹುಬ್ಬಳಿ, 1992

[illegible]

119. **ಸೂರ್ಯನಾಥ ಕಾಮತ್** – **ಕರ್ನಾಟಕದ ಸಂಕ್ಷಿಪ್ತ ಇತಿಹಾಸ (ಇತಿಹಾಸ ಪೂರ್ವ ಕಾಲದಿಂದ ಏಕೀಕರಣದವರೆಗೆ)** ಎಂ.ಸಿ.ಸಿ. ಪಬ್ಲಿಕೇಷನ್ಸ್, ಬೆಂಗಳೂರು–2005

120. **ಸಂಧ್ಯಾರೆಡ್ಡಿ.ಕೆ.** – **ಪ್ರತಿಭಾವಂತ ಸಂಸದೀಯ ಪಟುಗಳ ಬದುಕು ಬರಹ ಮಾಲಿಕೆ– ಕೆ.ಸಿ. ರೆಡ್ಡಿ,** ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ, ವಿಧಾನಸೌಧ, ಬೆಂಗಳೂರು–2006

121 . **ಹರವು ದೇವೇಗೌಡ** – **ಪಾಂಡವಪುರ ತಾಲ್ಲೂಕು ದರ್ಶನ,** ಸ್ಫೂರ್ತಿ ಪ್ರಕಾಶನ, ಪಾಂಡವಪುರ, 2003

III ಅಪ್ರಕಟಿತ ಆಕರಗಳು

ಎ) ಎಂ.ಫಿಲ್. ನಿಬಂಧನೆಗಳು

1. **ಮಹಾಂತೇಶ ಕುತನಿ** – **ಸಿ.ಬಂದೀಗೌಡರ ಜೀವನ ಮತ್ತು ಸಾಧನೆ,** ಅಪ್ರಕಟಿತ ಎಂ.ಫಿಲ್., ನಿಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ–2012

2. **ಯಶೋಧ.ಎನ್.** – **ಪ್ರತ್ಯೇಕ ಮಂಡ್ಯ ಜಿಲ್ಲೆಯ ರಚನೆ 1939,** ಅಪ್ರಕಟಿತ ಎಂ.ಫಿಲ್., ನಿಬಂಧ, ಮೈಸೂರು ವಿಶ್ವವಿದ್ಯಾಲಯ, ಮೈಸೂರು–2012

ಬಿ) ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧಗಳು

1. **ಗೋಪಾಲ.ಜಿ.ವಿ.** – **ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳುವಳಿಯಲ್ಲಿ ರೈತರ ಪಾತ್ರ** (1881–1947) ಬೆಂಗಳೂರು, ವಿಶ್ವವಿದ್ಯಾಲಯ, ಬೆಂಗಳೂರು 2008

2. ನಾಗರತ್ನಮ್ಮ.ಎಸ್. – **ಕರ್ನಾಟಕದಲ್ಲಿ ಅಸಹಕಾರ ಮತ್ತು ನಾಗರೀಕ ಕಾನೂನುಭಂಗ ಚಳುವಳಿ** (1920–1939) ಅಪ್ರಕಟಿತ ಪಿಎಚ್‌ಡಿ ಪ್ರಬಂಧ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, 2003

3. ನಾಗರತ್ನ.ಬಿ.ಎಸ್. – **ಕರ್ನಾಟಕದಲ್ಲಿ ಬೆಳೆದ ರಾಷ್ಟ್ರೀಯತೆಯ ಸಾಮಾಜಿಕ ಹಿನ್ನಲೆ** (1857–1947) ಅಪ್ರಕಟಿತ ಪಿಎಚ್.ಡಿ., ಪ್ರಬಂಧ, ಮೈಸೂರು ವಿಶ್ವವಿದ್ಯಾಲಯ, ಮೈಸೂರು 2014

4. ನಾರಾಯಣ.ಎಚ್.ಜಿ. – **ಕರ್ನಾಟಕ ಏಕೀಕರಣ–ಒಂದು ಅಧ್ಯಯನ,** ಅಪ್ರಕಟಿತ ಪಿಎಚ್.ಡಿ. ಪ್ರಬಂಧ, ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು 2011.

5. ಪ್ರಮೀಳಾದೇವಿ.ಬಿ.ಕೆ. – **An Assessment of H.C.Dasappa as Social Activist Freedom Fighter and a Political Leader,** ಅಪ್ರಕಟಿತ ಪಿಎಚ್.ಡಿ., ಪ್ರಬಂಧ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, 2005

6. ಮಹದೇವಯ್ಯ – **ಮೈಸೂರು ಸಂಸ್ಥಾನದ ದಲಿತೋದ್ಧಾರದ ಚಾರಿತ್ರಿಕ ಹಿನ್ನೆಲೆಯಲ್ಲಿ ಗಾಂಧಿ ಮತ್ತು ಡಾ. ಅಂಬೇಡ್ಕರ್ ರವರ ಕೊಡುಗೆಗಳ ತೌಲನಿಕ ಅಧ್ಯಯನ** 1925–1956) ಅಪ್ರಕಟಿತ ಪಿಎಚ್.ಡಿ., ಪ್ರಬಂಧ, ಮೈಸೂರು ವಿಶ್ವವಿದ್ಯಾಲಯ, ಮೈಸೂರು 2014.

7. ಮೀನಾಕ್ಷಿ.ಎಂ.ಜಿ. – **The Role of Backward Class leaders in the Movement for Responisble Governament in princely state of Mysore 1930 to 1948.** ಅಪ್ರಕಟಿತ ಪಿಎಚ್.ಡಿ. ಪ್ರಬಂಧ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, 2012

8. ರಮೇಶ.ಸಿ. – **ಗಾಂಧೀಜಿಯವರ ಪ್ರಭಾವದ ಚಾರಿತ್ರಿಕ ಹಿನ್ನಲೆಯಲ್ಲಿ ಆಧುನಿಕ ಮೈಸೂರು ಸಂಸ್ಥಾನದ ಸಾಮಾಜಿಕ ಮತ್ತು ಆರ್ಥಿಕ ಸುಧಾರಣೆಗಳು** (1925–1947), ಅಪ್ರಕಟಿತ ಪಿಎಚ್.ಡಿ., ಪ್ರಬಂಧ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, 2014.

9. ವೇಣುಗೋಪಾಲ.ಆರ್. – **ರೈತರು: ಮೈಸೂರು ಸಂಸ್ಥಾನಿಕ ಆಳ್ವಿಕೆ ಮತ್ತು ರಾಷ್ಟ್ರೀಯ ಚಳುವಳಿ,** ಅಪ್ರಕಟಿತ ಪಿಎಚ್.ಡಿ. ಪ್ರಬಂಧ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 2007.

10. ಸೋಮಶೇಖರ.ಹೆಚ್.ಬಿ. – **"ಸ್ವಾತಂತ್ರ್ಯ ಹೋರಾಟ ಹಾಗೂ ರಚನಾತ್ಮಕ ಕಾರ್ಯಕ್ರಮಗಳಲ್ಲಿ ತಗಡೂರು ರಾಮಚಂದ್ರ ರಾಯರ ಪಾತ್ರ – ಒಂದು ಅಧ್ಯಯನ,** ಅಪ್ರಕಟಿತ ಪಿಎಚ್.ಡಿ. ಪ್ರಬಂಧ, ಮೈಸೂರು ವಿಶ್ವವಿದ್ಯಾ ಲಯ, ಮೈಸೂರು, 2011.

11. ಸಂಜಯ್.ಕೆ. – **ಪಿ.ಎನ್.ಜವರಪ್ಪಗೌಡ ಜೀವನ ಮತ್ತು ಸಾಧನೆ,** ಅಪ್ರಕಟಿತ ಪಿಎಚ್.ಡಿ., ಪ್ರಬಂಧ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, 2011.

12. **ಸುರೇಶ.ಕೆ.ಜಿ.** – **ಮಂಡ್ಯ ಜಿಲ್ಲಾ ರೈತ ಚಳುವಳಿ ಒಂದು ಅಧ್ಯಯನ,** ಅಪ್ರಕಟಿತ, ಪಿ.ಎಚ್.ಡಿ., ಪ್ರಬಂಧ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, 2009

IV ಸ್ಮರಣ ಸಂಚಿಕೆಗಳು

1. **ಕೃಷ್ಣೇಗೌಡ ಹುಸ್ಕೂರು (ಪ್ರಸಂ.)** – **'ಮಳವಳ್ಳಿ ಮುತ್ತು',** ಮಳವಳ್ಳಿ ತಾಲ್ಲೂಕು, ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ಸ್ಮರಣ ಸಂಚಿಕೆ, 2011

2. **ಚೆಲುವೇಗೌಡ.ಎನ್. (ಪ್ರಸಂ.)** – **ಕುರುವಂಕ,** ಪಾಂಡವಪುರ ತಾಲ್ಲೂಕು, 3ನೇ ಕನ್ನಡ ಸಾಹಿತ್ಯ ಸಮ್ಮೇಳನ ನೆನಪಿನ ಸಂಪುಟ, ಪಾಂಡವಪುರ, 2012

3. **ಜವರೇಗೌಡ.ದೇ. (ಸಂ.)** – **ಸಿರಿಯೊಡಲು,** 63ನೇ ಕನ್ನಡ ಸಾಹಿತ್ಯ ಸಮ್ಮೇಳನ, ಮಂಡ್ಯ, 1994

4. **ಜವರೇಗೌಡ.ದೇ. (ಸಂ.)** – **ಸುವರ್ಣಮಂಡ್ಯ,** 63ನೇ ಕನ್ನಡ ಸಾಹಿತ್ಯ ಸಮ್ಮೇಳನ, ಮಂಡ್ಯ, 1994

5. **ಪರಮಶಿವಯ್ಯ.ಜಿ.ಶಂ., ಕೆ.ಭೈರವಮೂರ್ತಿ (ಸಂ.),** – **ಇಕ್ಷು ಗಂಗಾ,** ಮಂಡ್ಯ ಜಿಲ್ಲಾ ಸಾಹಿತ್ಯ ಸಮ್ಮೇಳನ ನೆನಪಿನ ಹೊತ್ತಿಗೆ, ಮಂಡ್ಯ, 1970

6. **ಪರಮಶಿವಯ್ಯ.ಜಿ.ಶಂ. (ಪ್ರಸಂ.)** – **ಲೋಕಪಾವನಿ,** ಮಂಡ್ಯ ಜಿಲ್ಲಾ ವಿದ್ಯಾರ್ಥಿ ಬಳಗ ಮೈಸೂರು, 1973–2006

7. **ಬೋರೇಗೌಡ, ಚಿಕ್ಕಮರಳಿ (ಸಂ.),**– **ಮುತ್ತಿನಕೆರೆ** (5ನೆಯ ಮಂಡ್ಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣಸಂಚಿಕೆ) ಪಾಂಡವ ಪುರ, 1999.

8. **ಬೋರೇಗೌಡ ಚಿಕ್ಕಮರಳಿ (ಸಂ.)** – **ಭತ್ತದ ಸಿರಿ,** (2ನೇ ಪಾಂಡವಪುರ ತಾಲ್ಲೂಕು, ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಹೊರಬಂದ ಕೃತಿ) ತಾಲ್ಲೂಕು ಕನ್ನಡ ಪರಿಷತ್ತು, ಪಾಂಡವಪುರ, 2001

9. **ರಾಜೇಗೌಡ.ಹ.ಕ. (ಸಂ.),** – **ಇಕ್ಷು ಸಂಚಯ** (ಮದ್ದೂರಿನಲ್ಲಿ ನಡೆದ ಮಂಡ್ಯ ಜಿಲ್ಲಾ ಪ್ರಥಮ ಸಾಹಿತ್ಯ ಸಮ್ಮೇಳನದಲ್ಲಿ ಮಂಡಿಸಲಾದ ಲೇಖನಗಳ ಸಂಗ್ರಹ), ಮಂಡ್ಯ 1970

10. **ರಾಜಶೇಖರ.ಹೆಚ್.ಬಿ.(ಸಂ.)** – **ನೇಗಿಲ ಭಾಗ್ಯ,** ಮಂಡ್ಯ ತಾಲ್ಲೂಕು ವಿಶೇಷ ಸಂಚಿಕೆ, ಸಂಪುಟ, 02, ನವೆಂಬರ್,2011

11. **ಲಕ್ಷ್ಮಿನಾರಾಯಣ.ಕಿ.ನಾ. (ಪ್ರಸಂ.)**– **ನಾಗಸಂಪಿಗೆ**–2ನೇ ನಾಗಮಂಗಲ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣ ಸಂಚಿಕೆ, ಕನ್ನಡ ಸಾಹಿತ್ಯ ಪರಿಷತ್ತು, ನಾಗಮಂಗಲ, 2007

12. **ಲಕ್ಕಪ್ಪಗೌಡ.ಎಚ್.ಜೆ. (ಸಂ.)** – **ರಾಷ್ಟ್ರರತ್ನ ಕೆಂಗಲ್ ಹನುಮಂತಯ್ಯ,** 72ನೇ ಜನ್ಮದಿನೋತ್ಸವ ಅಭಿನಂದನ ಸಂಚಿಕೆ, ಕೆಂಗಲ್ ಹನುಮಂತಯ್ಯ ಜನ್ಮದಿನೋತ್ಸವ ಸಮಿತಿ, ಬೆಂಗಳೂರು, 1980

13. **ಲೀಲಾ ಅಪ್ಪಾಜಿ (ಸಂ.)** – **ಅಮೃತ ಮಂಡ್ಯ** (ಮಂಡ್ಯ ಜಿಲ್ಲೆ 75ರ ಸಂಭ್ರಮದ ನೆನಪಿನ ಸಂಪುಟ) ಅಮೃತ ಮಹೋತ್ಸವ ಸಮಿತಿ, ಮಂಡ್ಯ. 2015.

14. **ವೀರಪ್ಪ.ಕೆ.ಟಿ. ಸಿ.ಪಿ.ಕೃಷ್ಣಕುಮಾರ್ (ಸಂ.)** – **ಇಕ್ಷು ಕಾವೇರಿ** ನಲವತ್ತೆಂಟನೆಯ ಕನ್ನಡ ಸಾಹಿತ್ಯ ಸಮ್ಮೇಳನದ ನೆನಪಿನ ಸಂಚಿಕೆ–1975

15. **ವೀರಪ್ಪ.ಕೆ.ಟಿ. ಮತ್ತು ರಾಮೇಗೌಡ (ಸಂ.)** – **ಲೋಕಪಾವನಿ** (ಮಂಡ್ಯ ಜಿಲ್ಲೆಯ ಕುರಿತ ಸಂಸ್ಮರಣ ಗ್ರಂಥ) ಮಂಡ್ಯ ಜಿಲ್ಲಾ ವಿದ್ಯಾರ್ಥಿಗಳ ಬಳಗ, ಮೈಸೂರು–1971

16. **ವೀರಪ್ಪ.ಜಿ.ಟಿ. (ಸಂ.)** – **ಪುಣ್ಯಕೋಟಿ** (4ನೇ ಮಂಡ್ಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣ ಸಂಚಿಕೆ, ಮದ್ದೂರು) ಮಂಡ್ಯ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಮಂಡ್ಯ – 1995

17. **ಸುಶೀಲಾ ಸುಬ್ರಹ್ಮಣ್ಯ (ಸಂ.)** – **ಕರ್ನಾಟಕ ಸ್ವಾತಂತ್ರ್ಯ ಹೋರಾಟಗಾರರು ಸ್ವಾತಂತ್ರ್ಯ ಯೋಧರು ಮತ್ತು ಉತ್ತರಾಧಿಕಾರಿಗಳು** ಕ್ವಿಟ್ ಇಂಡಿಯಾ ಸುವರ್ಣ ಮಹೋತ್ಸವ ಸ್ಮರಣ ಸಂಚಿಕೆ, ಬೆಂಗಳೂರು–1993

V ದಿನ ಪತ್ರಿಕೆಗಳು

1. ಕನ್ನಡಪ್ರಭ
2. ಕಂಠೀರವ
3. ತಾಯಿನಾಡು
4. ನವ ಜೀವನ
5. ಪ್ರಜಾವಾಣಿ
6. ವಿಜಯಕರ್ನಾಟಕ
7. ವಿಶ್ವಕರ್ನಾಟಕ
8. ಸತ್ಯವಾದಿ
9. ಸಾಧ್ವಿ ಪತ್ರಿಕೆ
10. ಸಂಯುಕ್ತ ಕರ್ನಾಟಕ

VI ವಾರ ಪತ್ರಿಕೆಗಳು

1. ಕರ್ಮವೀರ 29 ಮಾರ್ಚ್ 2009
2. ಕೊಳಲು, ಮೇ 14, 2015
3. ಸುಧಾ ಸಂಪುಟ, 29, ಸಂಚಿಕೆ–48, 28 ನವೆಂಬರ್–1993
4. ತರಂಗ, ಸಂಪುಟ–01, ಸಂಚಿಕೆ–34, 21 ಆಗಸ್ಟ್–1993
5. ಪ್ರಜಾಮತ, ನವೆಂಬರ್–03, 1985
6. ಭಾನುವಾರ – 2014

VII ಮಾಸಿಕ ಪತ್ರಿಕೆಗಳು

1. ಕನ್ನಡ ನುಡಿ
2. ಜನಪದ –1998, 2016ರ ಸಂಚಿಕೆಗಳು
3. ಯುವಕರ್ನಾಟಕ – 2005
4. ಸಕ್ಕರೆ ನುಡಿ, ಸಂಪುಟ–01, ಸಂಚಿಕೆ–02, ಜುಲೈ 2012.

VIII ಭಾಷಣಗಳ ಪ್ರತಿಗಳು

1. **ಚನ್ನಯ್ಯ.ಎಸ್.** – **ಸ್ವಾಗತ ಸಮಿತಿಯ ಅಧ್ಯಕ್ಷರು, ಮೈಸೂರು ಕಾಂಗ್ರೆಸ್‌ನ ಪ್ರಥಮ ಅಧಿವೇಶನ ಶಿವಪುರ,** ಮದ್ದೂರು, 11ನೇ ಏಪ್ರಿಲ್ 1938
2. **ಶಂಕರೇಗೌಡ.ಕೆ.ವಿ.** – **ಸ್ವಾಗತ ಸಮಿತಿಯ ಅಧ್ಯಕ್ಷರು, ಮಂಡ್ಯದಲ್ಲಿ ನಡೆದ ಮೈಸೂರು ವಿಲೀನ ವಿರೋಧ ಸಂಸ್ಥಾನ ಸಮ್ಮೇಳನ ಮಂಡ್ಯ** 1ನೇ ಜನವರಿ 1956.
3. **ಸಿದ್ಧಲಿಂಗಯ್ಯ.ಟಿ.** – **ಅಧ್ಯಕ್ಷರು, ಮೈಸೂರು ಕಾಂಗ್ರೆಸ್‌ನ ಪ್ರಥಮ ಅಧಿವೇಶನ ಶಿವಪುರ,** ಮದ್ದೂರು, 11ನೇ ಏಪ್ರಿಲ್, 1938.

Works in English

1. **Anantharamaiah.O** - **Krishnaraja Wadiyar IV the marker of modern mysore 1902-1940,** Director, Prasaranga Manasagangotri, University of Mysore Mysore. 2016.

2. **Bhatt.S.C. (Ed)** - **Encylopadedic District Gazetters of India (South Zone) Vol. I,** Mandya District, New Delhi – 1998.

3. **Diwakar R.R. (Ed)** - **Karnataka Through the Ages.** Govt. Of Mysore 1968.

4. **Doreswamy H.S** - **From Princely Autocracy to People's Government,** Sahithya mandira Bangalore 1993.

5. **Gayathri.M.B.** - **Development of Mysore state prasaranga, University of mysore, 1997.**

6. **Handa R.L.** - **Histroy of Freedom Struggle in Prineely States,** Delhi – 1968.

7. **Hettne Bjorn** - **Political Economy of Indirect Rule in Mysore (1881-1941),** 1977

8. **Jagirdar. R.V.** - **A Case for the Unification of Karnatka All Karnataka Unification League,** Dharwar-1946.

9. **Krishna Rao M.V. (Ed)** - **History of Freedom Movement in Karnataka Vol. I, Bangalore, 1962**

10. **Krishan Rao M.V. & Halappa G.S. (Ed)** - **History of Freedom Movement in** **Karnataka,** Govt. of Mysore Vol. II, 1964.

11. **Manor James** - **Political Change in an Indian State Mysore 1917–1955,** Manohar Publishers, Delhi-1977.

12. **Mune Gowda.K.S.** - **Development of Karnataka Legislature,** prasaranga, University of Mysore, 1988

13. **Sathyan.B.N. (Ed)** - **Mandya District Gazetter,** Karnatka Gazetteer Department, Bangalore, 1967

14. **Suryanath Kamath** - **Quit India Movement in Karnatka,** Lipi Prakashana, Bangalore, 1989.

15. **Veerathappa.K.** - **Readings in Modern History of Mysore**, New Delhi – 1985.

ಅನುಬಂಧ

1. ಮಂಡ್ಯ ಜಿಲ್ಲೆಯ ಚಳುವಳಿಗಾರರ ಪಟ್ಟಿ :

ಕ್ರ ಸಂ.	ಚಳುವಳಿಗಾರರ ಹೆಸರು	ಸ್ಥಳ (ತಾಲ್ಲೂಕು) ಹೆಸರು	ಭಾವಹಿಸಿದ ಚಳುವಳಿ	ಚಳುವಳಿಯ ವರ್ಷ
1.	ಅಪ್ಪುಗೌಡ (ಕರೀಗೌಡ)	ಎಣ್ಣೆಹೊಳೆ ಕೊಪ್ಪಲು, ಪಾಂಡವಪುರ	ಕ್ವಿಟ್ ಇಂಡಿಯಾ ಚಳುವಳಿ	1942
2.	ಅನಂತರಾಮಭಟ್ಟ.ಎಂ. ಬಿ.	ಮಂಡ್ಯ	ಏಕೀಕರಣ ಚಳುವಳಿ	1955–56
3.	ಈರೇಗೌಡ.ಎಂ.	ಕ್ಯಾತನಹಳ್ಳಿ, ಪಾಂಡವಪುರ	ಶಿವಪುರ ಸತ್ಯಾಗ್ರಹ, ಕ್ವಿಟ್ ಇಂಡಿಯಾ ಚಳುವಳಿ, ಮೈಸೂರು ಚಲೋ ಚಳುವಳಿ,	1938, 1942, 1947
4.	ಕರಡಣ್ಣಯ್ಯ	ಕುದುರೆಗುಂಡಿ, ಮದ್ದೂರು	ಶಿವಪುರ ಸತ್ಯಾಗ್ರಹ, ಕ್ವಿಟ್ ಇಂಡಿಯಾ ಚಳುವಳಿ,	1938, 1942
5.	ಕಪನೀಗೌಡ	ಕ್ಯಾತನಹಳ್ಳಿ, ಪಾಂಡವಪುರ	ಕ್ವಿಟ್ ಇಂಡಿಯಾ ಚಳುವಳಿ	1942
6.	ಕಪನೀಗೌಡ.ಟಿ.ಎಂ.	ತಟ್ಟೇಕೆರೆ, ನಾಗಮಂಗಲ	ಶಿವಪುರ ಸತ್ಯಾಗ್ರಹ, ಹ್ಯಾಮಿಲ್ಟನ್ ಸತ್ಯಾಗ್ರಹ	1938, 1939
7.	ಕಾಂಗ್ರೆಸ್ ಸುಬ್ಬಯ್ಯ	ಮಳವಳ್ಳಿ	ಶಿವಪುರ ಸತ್ಯಾಗ್ರಹ, ಹ್ಯಾಮಿಲ್ಟನ್ ಸತ್ಯಾಗ್ರಹ	1938, 1939
8.	ಕಾಳಯ್ಯ, ಬಾಂಬರ್	ಮಲ್ಲನಾಯಕನಕಟ್ಟೆ, ಮಂಡ್ಯ.	ಕ್ವಿಟ್ ಇಂಡಿಯಾ ಚಳುವಳಿ	1942
9.	ಕೆಂಪಣ್ಣ.ಬಿ.ಐ.	ಬೆನಮನಹಳ್ಳಿ,	ಕ್ವಿಟ್ಇಂಡಿಯಾ ಚಳುವಳಿ	1942
10.	ಕೆಂಚಪ್ಪ.ಎ.	ಅರಕೆರೆ, ಶ್ರೀರಂಗಪಟ್ಟಣ	ಶಿವಪುರ ಸತ್ಯಾಗ್ರಹ, ಕ್ವಿಟ್ ಇಂಡಿಯಾ, ಮೈಸೂರು ಚಲೋ ಚಳುವಳಿ	1938, 1942, 1947

11.	ಕುಳ್ಳನಿಂಗೇಗೌಡ	ಕ್ಯಾತನಹಳ್ಳಿ, ಪಾಂಡವಪುರ	ಕ್ವಿಟ್ ಇಂಡಿಯಾ ಚಳುವಳಿ	1942
12.	ಕೃಷ್ಣಯ್ಯಂಗಾರ್.ಪಿ.ಟಿ.	ಮೇಲುಕೋಟೆ, ಪಾಂಡವಪುರ	ಹ್ಯಾಮಿಲ್ಟನ್ ಸತ್ಯಾಗ್ರಹ	1939
13.	ಗೌಡಯ್ಯ.ಎಚ್.	ಹೊನ್ನಾವರ, ನಾಗಮಂಗಲ	ಮೈಸೂರು ಚಲೋ ಚಳುವಳಿ	1947
14.	ಗುರುಪ್ಪಶೆಟ್ಟಿ.ಎಸ್.	ನಾಗಮಂಗಲ	ಏಕೀಕರಣ ಚಳುವಳಿ	1955–56
15.	ಗುಂಡೂರಾವ್.ಕೆ.ಆರ್.	ಕೊಪ್ಪ, ಮದ್ದೂರು	ಹ್ಯಾಮಿಲ್ಟನ್ ಸತ್ಯಾಗ್ರಹ, ಮೈಸೂರು	1939, 1947
16.	ಗೋವಿಂದೇಗೌಡ	ಎಣ್ಣೆಹೊಳೆಕೊಪ್ಪಲು, ಪಾಂಡವಪುರ	ಕ್ವಿಟ್ ಇಂಡಿಯಾ ಚಳುವಳಿ	1942
17.	ಗೋಪಾಲ್.ಕೆ.ಬಿ.	ಮೇಲುಕೋಟೆ, ಪಾಂಡವಪುರ	ಶಿವಪುರ ಸತ್ಯಾಗ್ರಹ,	1938
18.	ಗೋವಿಂದೇಗೌಡ.ಪಿ.	ಕ್ಯಾತನಹಳ್ಳಿ, ಪಾಂಡವಪುರ	ಕ್ವಿಟ್ ಇಂಡಿಯಾ ಚಳುವಳಿ	1942
19.	ಗೌರಮ್ಮ.ಎನ್.ಎಸ್.	ಪಾಂಡವಪುರ	ಮೈಸೂರು ಚಲೋ ಚಳುವಳಿ	1947
20.	ಚನ್ನಯ್ಯ.ಕೆ.ಸಿ.	ಕೀಲಾರ, ಮಂಡ್ಯ	ಶಿವಪುರ ಸತ್ಯಾಗ್ರಹ, ಕ್ವಿಟ್ ಇಂಡಿಯಾ, ಮೈಸೂರು ಚಲೋಚಳುವಳಿ	1938, 1942, 1947
21.	ಚಲುವೇಗೌಡ.ಬಿ.ಜೆ.	ಬನ್ನಂಗಾಡಿ, ಪಾಂಡವಪುರ	ಕ್ವಿಟ್ ಇಂಡಿಯಾ ಚಳುವಳಿ	1942
22.	ಚೌಡೇಗೌಡ	ಹಿರೇಮರಳಿ, ಪಾಂಡವಪುರ	ಮೈಸೂರು ಚಲೋ ಚಳುವಳಿ	1947
23.	ಚಿಕ್ಕಣ್ಣಗೌಡ.ಟಿ.	ಮಹದೇಶ್ವರಪುರ, ಪಾಂಡವಪುರ	ಕ್ವಿಟ್ಇಂಡಿಯಾ ಚಳುವಳಿ	1942
24.	ಚಿಕ್ಕಲಿಂಗಯ್ಯ.ಕೆ.	ಮಂಡ್ಯ	ಏಕೀಕರಣ ಚಳುವಳಿ	1955–56

25.	ಚಲುವೇಗೌಡ	ಲಕ್ಷ್ಮೀಸಾಗರ, ಪಾಂಡವಪುರ	ಕ್ವಿಟ್‌ಇಂಡಿಯಾ, ಮೈಸೂರು ಚಲೋ ಚಳುವಳಿ	1942, 1947
26.	ಜವರಪ್ಪಗೌಡ.ಪಿ.ಎನ್.	ಪಾಲಗ್ರಹಾರ, ನಾಗಮಂಗಲ	ಶಿವಪುರ ಸತ್ಯಾಗ್ರಹ, ಹ್ಯಾಮಿಲ್ಟನ್, ಕ್ವಿಟ್ ಇಂಡಿಯಾ ಚಳುವಳಿ, ಮೈಸೂರು ಚಲೋ ಚಳುವಳಿ, ಮೈಸೂರು ವಿಲೀನ ವಿರೋಧಿ ಚಳುವಳಿ	1938, 1939, 1942, 1947, 1955–1956
27.	ಜವರೇಗೌಡ (ಬಂಗಿ)	ಎಣ್ಣೆಹೊಳೆಕೊಪ್ಪಲು, ಪಾಂಡವಪುರ	ಕ್ವಿಟ್ ಇಂಡಿಯಾ ಚಳುವಳಿ	1942
28.	ಜೋಗೀಗೌಡ	ಕೊಪ್ಪ, ಮದ್ದೂರು	ಶಿವಪುರ ಸತ್ಯಾಗ್ರಹ,	1938
29.	ತಾಯಮ್ಮ ವೀರಣ್ಣಗೌಡ	ಮದ್ದೂರು	ಶಿವಪುರ ಸತ್ಯಾಗ್ರಹ,	1938
30.	ತಿರುಮಲೇಗೌಡ.ಐ.	ಶಿವಪುರ, ಮದ್ದೂರು	ಶಿವಪುರ ಸತ್ಯಾಗ್ರಹ,	1938
31.	ತಿಮ್ಮೇಗೌಡ	ಮಣಿಯೂರು, ನಾಗಮಂಗಲ	ಶಿವಪುರ ಸತ್ಯಾಗ್ರಹ,	1938
32.	ತಿಮ್ಮೇಗೌಡ.ಕೆ.ಜಿ.	ಕ್ಯಾತನಹಳ್ಳಿ, ಪಾಂಡವಪುರ	ಕ್ವಿಟ್ ಇಂಡಿಯಾ ಮೈಸೂರು ಚಲೋ ಚಳುವಳಿ	1942, 1947
33.	ದಮಯಂತಿ ಬೋರೇಗೌಡ	ಶ್ರೀರಂಗಪಟ್ಟಣ	ಮೈಸೂರು ಚಲೋ ಚಳುವಳಿ	1947
34.	ದಾಸೇಗೌಡ	ಎಣ್ಣೆಹೊಳೆ ಕೊಪ್ಪಲು, ಪಾಂಡವಪುರ	ಕ್ವಿಟ್ ಇಂಡಿಯಾ ಚಳುವಳಿ	1942
35.	ದೇವಯ್ಯ.ಜೆ.	ಮಂಡ್ಯ	ಏಕೀಕರಣ ಚಳುವಳಿ	1955–56

36.	ದೊಡ್ಡತಿಮ್ಮೇಗೌಡ	ಹರವು, ಪಾಂಡವಪುರ	ಕ್ವಿಟ್ ಇಂಡಿಯಾ ಚಳುವಳಿ	1942
37.	ನರಸಿಂಹಯ್ಯ.ಪಿ.ಎನ್.	ಪಾಲಗ್ರಹಾರ, ನಾಗಮಂಗಲ	ಕ್ವಿಟ್ ಇಂಡಿಯಾ ಮೈಸೂರು, ಚಳುವಳಿ	1942, 1947
38.	ನಾಗರಾಜು.ಕೆ.ಬಿ.	ಮೇಲುಕೋಟೆ, ಪಾಂಡವಪುರ	ಕ್ವಿಟ್ ಇಂಡಿಯಾ ಚಳುವಳಿ	1942
39.	ನಾರಾಯಣಸ್ವಾಮಿ.ಬಿ.	ಬಿಂಡಿಗನವಿಲೆ, ನಾಗಮಂಗಲ	ಕ್ವಿಟ್ ಇಂಡಿಯಾ ಮೈಸೂರು ಚಲೋ ಚಳುವಳಿ	1942, 1947
40.	ನಾರಾಯಣಸ್ವಾಮಿ	ಕನ್ನೇಗೌಡಕೊಪ್ಪಲು, ಪಾಂಡವಪುರ	ಏಕೀಕರಣ ಚಳುವಳಿ	1955–56
41.	ನಾರಾಯಣಶೆಟ್ಟಿ.ಹೆಚ್. ಟಿ.	ಮಂಡ್ಯ	ಏಕೀಕರಣ ಚಳುವಳಿ	1955–56
42.	ನಿಂಗಯ್ಯ ಗಾಳಿ	ಕ್ಯಾತನಹಳ್ಳಿ, ಪಾಂಡವಪುರ	ಕ್ವಿಟ್ ಇಂಡಿಯಾ ಚಳುವಳಿ	1942
43.	ನಂಜುಂಡಯ್ಯ, ಕೆ.ಎಚ್.	ಕ್ಯಾತನಹಳ್ಳಿ, ಪಾಂಡವಪುರ	ಶಿವಪುರ ಸತ್ಯಾಗ್ರಹ, ಕ್ವಿಟ್ ಇಂಡಿಯಾ ಚಳುವಳಿ, ಮೈಸೂರು ಚಲೋ ಚಳುವಳಿ	1938, 1942, 1947
44.	ನಂಜೇಗೌಡ.ಎಂ.	ಕ್ಯಾತನಹಳ್ಳಿ, ಪಾಂಡವಪುರ	ಮೈಸೂರು ಚಲೋ ಚಳುವಳಿ	1947
45.	ಪಶುಪತಿರಾಯರು. ಎನ್.ಡಿ.	ಸಾತನೂರು, ಮಂಡ್ಯ.	ಶಿವಪುರ ಸತ್ಯಾಗ್ರಹ,	1938
46.	ಪುಟ್ಟಣ್ಣ.ಎಚ್.ಕೆ.	ಹೊನಗಾನಹಳ್ಳಿ, ಪಾಂಡವಪುರ	ಹ್ಯಾಮಿಲ್ಟನ್ ಸತ್ಯಾಗ್ರಹ	1939
47.	ಪುಟ್ಟಸ್ವಾಮಿಗೌಡ.ಕೆ.ಎಂ .	ಕ್ಯಾತನಹಳ್ಳಿ, ಪಾಂಡವಪುರ	ಕ್ವಿಟ್ ಇಂಡಿಯಾ, ಮೈಸೂರುಚಲೋ ಚಳುವಳಿ	1942, 1947

48.	ಪುಟ್ಟಸ್ವಾಮಿ.ಕೆ.	ಅರಕೆರೆ, ಶ್ರೀರಂಗಪಟ್ಟಣ	ಶಿವಪುರ ಸತ್ಯಾಗ್ರಹ, ಕ್ವಿಟ್ ಇಂಡಿಯಾ ಚಳುವಳಿ, ಮೈಸೂರು ಚಲೋ ಚಳುವಳಿ, ಮೈಸೂರು ವಿಲೀನವಿರೋಧಿಚಳುವಳಿ	1938, 1942, 1947, 1955–1956
49.	ಪುಟ್ಟೇಗೌಡ.ಎಂ.	ಅರಕೆರೆ, ಶ್ರೀರಂಗಪಟ್ಟಣ	ಶಿವಪುರ ಸತ್ಯಾಗ್ರಹ, ಕ್ವಿಟ್ ಇಂಡಿಯಾ, ಮೈಸೂರುಚಲೋ ಚಳುವಳಿ	1938, 1942, 1947
50.	ಪುಟ್ಟಸ್ವಾಮಿಗೌಡ	ಪಾಂಡವಪುರ	ಕ್ವಿಟ್ ಇಂಡಿಯಾ ಚಳುವಳಿ	1942
51.	ಪುಟ್ಟಸ್ವಾಮಿ.ಜಿ.	ಮಂಡ್ಯ	ಏಕೀಕರಣ ಚಳುವಳಿ	1955–56
52.	ಬಂದೀಗೌಡ.ಎ.ಜಿ.	ಅರಕೆರೆ, ಶ್ರೀರಂಗಪಟ್ಟಣ	ಶಿವಪುರ ಸತ್ಯಾಗ್ರಹ, ಕ್ವಿಟ್ ಇಂಡಿಯಾ, ಮೈಸೂರು ಚಲೋ ಚಳುವಳಿ	1938, 1942, 1947
53.	ಬಂದೀಗೌಡ.ಸಿ.	ಶ್ರೀನಿವಾಸ ಅಗ್ರಹಾರ, ಶ್ರೀರಂಗಪಟ್ಟಣ	ಶಿವಪುರ ಸತ್ಯಾಗ್ರಹ, ಕ್ವಿಟ್ ಇಂಡಿಯಾ, ಮೈಸೂರುಚಲೋ ಚಳುವಳಿ, ಮೈಸೂರು ವಿಲೀನ ವಿರೋಧಿ ಚಳುವಳಿ	1938, 1942, 1947, 1955–1956
54.	ಬಂದೀಗೇಗೌಡ ಬಿನ್. ಮಾದೇಗೌಡ	ಚನ್ನೇಗೌಡನದೊಡ್ಡಿ, ಮಳವಳ್ಳಿ	ಕ್ವಿಟ್ ಇಂಡಿಯಾ ಮೈಸೂರು ಚಲೋ ಚಳುವಳಿ	1942, 1947
55.	ಬಸಪ್ಪಗೌಡ.ಟಿ.ಎನ್.	ತಟ್ಟೇಕೆರೆ, ನಾಗಮಂಗಲ	ಮೈಸೂರು ಚಲೋ ಚಳುವಳಿ	1947
56.	ಭದ್ರಯ್ಯ.ಸಿ.	ನೀಲನಹಳ್ಳಿ, ಪಾಂಡವಪುರ	ಮೈಸೂರು ಚಲೋ ಚಳುವಳಿ	1947
57.	ಬೆಟ್ಟಶೆಟ್ಟಿ.ಕೆ.	ಕ್ಯಾತುಂಗೆರೆ, ಮಂಡ್ಯ	ಮೈಸೂರು ಚಲೋ ಚಳುವಳಿ	1947

58.	ಭದ್ರೇಗೌಡ	ಕ್ಯಾತನಹಳ್ಳಿ, ಪಾಂಡವಪುರ	ಕ್ವಿಟ್ ಇಂಡಿಯಾ ಚಳುವಳಿ	1942
59.	ಭೈರಪ್ಪ.ಎ.ಸಿ.	ಅರಕೆರೆ, ಶ್ರೀರಂಗಪಟ್ಟಣ	ಶಿವಪುರ ಸತ್ಯಾಗ್ರಹ,	1938
60.	ಬೊಮ್ಮೇಗೌಡ.ಎಂ.ಕೆ.	ಮಾಚಗೋನಹಳ್ಳಿ, ಕೆ.ಆರ್.ಪೇಟೆ	ಕ್ವಿಟ್ಇಂಡಿಯಾ ಚಳುವಳಿ	1942
61.	ಬೊಮ್ಮೇಗೌಡ.ಜಿ.ಎಸ್.	ಗಾಣದಾಳು, ಮಂಡ್ಯ.	ಮೈಸೂರು ಚಲೋ ಚಳುವಳಿ, ಮೈಸೂರು ವಿಲೀನ ವಿರೋಧಿ ಚಳುವಳಿ	1947, 1955–1956
62.	ಬೋರೇಗೌಡ, ಚೂರ್‌ದಾರ	ಕ್ಯಾತನಹಳ್ಳಿ, ಪಾಂಡವಪುರ	ಕ್ವಿಟ್ ಇಂಡಿಯಾ ಚಳುವಳಿ	1942
63.	ಮಲ್ಲಿಕಾರ್ಜುನಯ್ಯ.ಕೆ. ಎಚ್.	ಕ್ಯಾತನಹಳ್ಳಿ, ಪಾಂಡವಪುರ	ಕ್ವಿಟ್ ಇಂಡಿಯಾ ಚಳುವಳಿ	1942
64.	ಮಹಾಬಲರಾವ್.ಎಂ. ಆರ್.	ಮಂಡ್ಯ.	ಶಿವಪುರ ಸತ್ಯಾಗ್ರಹ, ಕ್ವಿಟ್ ಇಂಡಿಯಾ, ಮೈಸೂರು ಚಲೋ ಚಳುವಳಿ	1938, 1942, 1947
65.	ಮರಿಯಪ್ಪ	ಗೌಡಗೆರೆ ಕಾಲೋನಿ, ಮಳವಳ್ಳಿ	ಕ್ವಿಟ್ ಇಂಡಿಯಾ ಚಳುವಳಿ	1942
66.	ಮರಿಯಪ್ಪ.ಟಿ.	ನಾಗಮಂಗಲ	ಕ್ವಿಟ್ ಇಂಡಿಯಾ ಚಳುವಳಿ, ಮೈಸೂರು ವಿಲೀನ ವಿರೋಧಿ ಚಳುವಳಿ	1942, 1955–1956
67.	ಮರಿಯಪ್ಪ.ವೈ.ಸಿ.	ಚಿಂದಗಿರಿ ಕೊಪ್ಪಲು, ಪಾಂಡವಪುರ	ಕ್ವಿಟ್ ಇಂಡಿಯಾ, ಮೈಸೂರು ಚಲೋ ಚಳುವಳಿ	1942, 1947
68.	ಮಾದೇಗೌಡ.ಜಿ.	ಗುರುದೇವನಹಳ್ಳಿ, ಮದ್ದೂರು	ಶಿವಪುರ ಸತ್ಯಾಗ್ರಹ, ಕ್ವಿಟ್ ಇಂಡಿಯಾ ಚಳುವಳಿ, ಮೈಸೂರು ಚಲೋ ಚಳುವಳಿ, ಮೈಸೂರು ವಿಲೀನ ವಿರೋಧಿ ಚಳುವಳಿ	1938, 1942, 1947, 1955–1956

69.	ಮಾದೇಗೌಡ	ಕ್ಯಾತನಹಳ್ಳಿ, ಪಾಂಡವಪುರ	ಕ್ವಿಟ್ ಇಂಡಿಯಾ ಚಳುವಳಿ	1942
70.	ಮೊಗಣ್ಣಗೌಡ.ಎಲ್.ಸಿ.	ಲಕ್ಷ್ಮೀಸಾಗರ, ಪಾಂಡವಪುರ	ಕ್ವಿಟ್ ಇಂಡಿಯಾ ಚಳುವಳಿ	1942
71.	ಯಾಲಕ್ಕಿಗೌಡ.ಕೆ.ವಿ.	ಕ್ಯಾತನಹಳ್ಳಿ, ಪಾಂಡವಪುರ	ಮೈಸೂರು ಚಲೋ ಚಳುವಳಿ	1947
72.	ರಾಮಯ್ಯ.ಪಿ.ಆರ್.	ಪಾಲಹಳ್ಳಿ, ಶ್ರೀರಂಗಪಟ್ಟಣ	ಮೈಸೂರು ಚಲೋ ಚಳುವಳಿ	1947
73.	ರಾಮಲಿಂಗಮ್ಮ	ಶ್ರೀರಂಗಪಟ್ಟಣ	ಮೈಸೂರು ಚಲೋ ಚಳುವಳಿ	1947
74.	ರಾಮಲಿಂಗಯ್ಯ.ಎಂ.	ಪಾಂಡವಪುರ	ಮೈಸೂರು ಚಲೋ ಚಳುವಳಿ	1947
75.	ರಾಮಸ್ವಾಮಿ.ಕೆ.ಟಿ.	ಮಂಡ್ಯ	ಏಕೀಕರಣ ಚಳುವಳಿ	1955–56
76..	ರಾಮಚಂದ್ರಯ್ಯ.ಎಚ್.ಕೆ.	ಮಳವಳ್ಳಿ	ಕ್ವಿಟ್ ಇಂಡಿಯಾ ಮೈಸೂರು ಚಲೋ ಚಳುವಳಿ	1942, 1947
77.	ರಾಮೇಗೌಡ.ಪಿ.	ಅರಳುಕುಪ್ಪೆ, ಪಾಂಡವಪುರ	ಮೈಸೂರು ಚಲೋ ಚಳುವಳಿ	1947
78.	ರಾಜೇಗೌಡ	ಕಟ್ಟೇರಿ, ಪಾಂಡವಪುರ	ಮೈಸೂರುಚಲೋ ಚಳುವಳಿ	1947
79.	ಲಿಂಗಣ್ಣ.ಎಂ.ಎಲ್.	ಮಂಡ್ಯ	ಏಕೀಕರಣ ಚಳುವಳಿ	1955–56
80.	ಲಿಂಗೇಗೌಡ.ಎನ್.ಕೆ.	ನೀತಿಮಂಗಲ, ಕೆ.ಆರ್.ಪೇಟೆ	ಕ್ವಿಟ್ ಇಂಡಿಯಾ ಚಳುವಳಿ	1942
81.	ಲಿಂಗೇಗೌಡ.ಎ.ಎಲ್.	ಅಗಸನಪುರ, ಮಳವಳ್ಳಿ	ಕ್ವಿಟ್ ಇಂಡಿಯಾ ಚಳುವಳಿ	1942
82.	ಲಿಂಗೇಗೌಡ.ಕೆ.ಎಂ.	ಕ್ಯಾತನಹಳ್ಳಿ ಪಾಂಡವಪುರ	ಶಿವಪುರಸತ್ಯಾಗ್ರಹ, ಕ್ವಿಟ್ ಇಂಡಿಯಾ ಮೈಸೂರು ಚಲೋ ಚಳುವಳಿ	1938, 1942, 1947

83.	ವೀರೇಗೌಡ	ಹಿಟ್ಟನಹಳ್ಳಿಕೊಪ್ಪಲು, ಮಳವಳ್ಳಿ	ಕ್ವಿಟ್ ಇಂಡಿಯಾ ಚಳುವಳಿ	1942
84.	ವೀರೇಗೌಡ.ಕೆ.	ಹಿರೇಮರಳಿ, ಪಾಂಡವಪುರ	ಕ್ವಿಟ್ ಇಂಡಿಯಾ ಚಳುವಳಿ	1942
85.	ವೀರಣ್ಣಗೌಡ.ಎಚ್.ಕೆ.	ಮದ್ದೂರು	ಶಿವಪುರ ಸತ್ಯಾಗ್ರಹ, ಕ್ವಿಟ್ ಇಂಡಿಯಾ, ಮೈಸೂರು ಚಲೋ ಚ.ಮೈಸೂರು ವಿಲೀನವಿರೋಧಿಚಳುವಳಿ	1938, 1942, 1947, 1955–1956
86.	ವೀರಪ್ಪ ಮಳವಳ್ಳಿ	ಮಳವಳ್ಳಿ	ಶಿವಪುರ ಸತ್ಯಾಗ್ರಹ, ಕ್ವಿಟ್ ಇಂಡಿಯಾ ಚಳುವಳಿ, ಮೈಸೂರು ಚಲೋ ಚಳುವಳಿ	1938, 1942, 1947
87.	ವೇದಾಂತ ಹೆಮ್ಮಿಗೆ	ಪಾಂಡವಪುರ	ಏಕೀಕರಣ ಚಳುವಳಿ	1955–56
88.	ವೆಂಕಮ್ಮ, ಸೀತಾರಾಮಯ್ಯ	ಪಾಲಹಳ್ಳಿ, ಶ್ರೀರಂಗಪಟ್ಟಣ	ಕ್ವಿಟ್ ಇಂಡಿಯಾ ಚಳುವಳಿ, ಮೈಸೂರು ಚಲೋ ಚಳುವಳಿ	1938, 1942
89	ವೈಕುಂಠೇಗೌಡ.ವೈ.	ಎಣ್ಣೆಹೊಳೆಕೊಪ್ಪಲು, ಪಾಂಡವಪುರ	ಶಿವಪುರ ಸತ್ಯಾಗ್ರಹ, ಕ್ವಿಟ್ ಇಂಡಿಯಾ, ಮೈಸೂರು ಚಲೋ ಚಳುವಳಿ	1938, 1942, 1947
90.	ವೈರಿಮುದಿಗೌಡ (ಮೊಂಡಣ್ಣ)	ಹಾರೋಹಳ್ಳಿ, ಪಾಂಡವಪುರ	ಮೈಸೂರು ಚಲೋ ಚಳುವಳಿ	1947
91.	ವೆಂಕಟರಾಮೇಗೌಡ	ಮಹದೇಶ್ವರಪುರ, ಪಾಂಡವಪುರ	ಕ್ವಿಟ್ ಇಂಡಿಯಾ ಚಳುವಳಿ	1942
92.	ಶಾಮಣ್ಣ ಖಾದ್ರಿ	ಮೇಲುಕೋಟೆ, ಪಾಂಡವಪುರ	ಕ್ವಿಟ್ ಇಂಡಿಯಾ ಚಳುವಳಿ	1942
93.	ಶಾಮಣ್ಣ.ಬಿ.ವಿ.	ನಾಗಮಂಗಲ	ಏಕೀಕರಣ ಚಳುವಳಿ	1955–56
94.	ಶಾಸ್ತ್ರಿ.ಎಂ.ಆರ್. ಎನ್.	ನಾಗಮಂಗಲ	ಶಿವಪುರ ಸತ್ಯಾಗ್ರಹ, ಕ್ವಿಟ್ ಇಂಡಿಯಾ, ಮೈಸೂರು ಚಲೋ ಚಳುವಳಿ, ಏಕೀಕರಣ ಚಳುವಳಿ	1938, 1942, 1947 1955–56

95.	ಶ್ರೀನಿವಾಸಗೌಡ	ಕೆನ್ನಾಳು, ಪಾಂಡವಪುರ	ಕ್ವಿಟ್ ಇಂಡಿಯಾ ಚಳುವಳಿ	1942
96.	ಶ್ರೀಕಂಠೇಗೌಡ	ಲಕ್ಷ್ಮೀಸಾಗರ, ಪಾಂಡವಪುರ	ಕ್ವಿಟ್ ಇಂಡಿಯಾ ಚಳುವಳಿ	1942
97.	ಶ್ರೀನಿವಾಸಯ್ಯಂಗರ.ಕೆ.	ಮೇಲುಕೋಟೆ, ಪಾಂಡವಪುರ	ಹ್ಯಾಮಿಲ್ಟನ್ ಸತ್ಯಾಗ್ರಹ, ಕ್ವಿಟ್ ಇಂಡಿಯಾ ಚಳುವಳಿ	1939, 1942
98.	ಶ್ರೀಕಂಠೇಗೌಡ.ಕೆ.ಎನ್.	ಕ್ಯಾತನಹಳ್ಳಿ, ಪಾಂಡವಪುರ	ಕ್ವಿಟ್ ಇಂಡಿಯಾ ಚಳುವಳಿ	1942
99.	ಶಂಕರಲಿಂಗೇಗೌಡ	ನಾಗಮಮಗಲ	ಕ್ವಿಟ್ ಇಂಡಿಯಾ, ಮೈಸೂರು ಚಲೋ ಚಳುವಳಿ	1942, 1947
100.	ಶಂಕರೇಗೌಡ.ಕೆ.ವಿ.	ಕೀಲಾರ, ಮಂಡ್ಯ	ಕ್ವಿಟ್ ಇಂಡಿಯಾ ಚಳುವಳಿ, ಮೈಸೂರು ಚಲೋ ಚಳುವಳಿ, ಮೈಸೂರು ವಿಲೀನ ವಿರೋಧಿ ಚಳುವಳಿ	1942, 1947, 1955–1956
101.	ಸತ್ಯನಾರಾಯಣರಾವ್. ಬಿ.ಎಚ್.	ಪಾಂಡವಪುರ	ಮೈಸೂರು ಚಲೋ ಚಳುವಳಿ	1947
	ಸಂಪತ್ತುಕುಮಾರ	ಮೇಲುಕೋಟೆ, ಪಾಂಡವಪುರ	ಏಕೀಕರಣ ಚಳುವಳಿ	1955–56
102.	ಸೀತಾರಾಮಯ್ಯ	ಪಾಲಹಳ್ಳಿ, ಶ್ರೀರಂಗಪಟ್ಟಣ	ಶಿವಪುರ ಸತ್ಯಾಗ್ರಹ, ಕ್ವಿಟ್ ಇಂಡಿಯಾ, ಮೈಸೂರು ಚಲೋ ಚಳುವಳಿ	1938, 1942, 1947
103.	ಸಿದ್ದಪ್ಪ.ಆರ್.ಎಂ.	ಬೋರೇಗೌನಪುರ, ಮಳವಳ್ಳಿ	ಕ್ವಿಟ್ ಇಂಡಿಯಾ ಚಳುವಳಿ	1942
104.	ಸಿದ್ದರಾಮಯ್ಯ.ಹೆಚ್.	ಇಂಡುವಾಳು, ಮಂಡ್ಯ.	ಶಿವಪುರ ಸತ್ಯಾಗ್ರಹ, ಕ್ವಿಟ್ ಇಂಡಿಯಾ, ಮೈಸೂರು ಚಲೋ ಚಳುವಳಿ	1938, 1942, 1947

105.	ಸೀತಾರಾಮಯ್ಯ.ಇ. ಎಸ್.	ಇಂಗಲಗಂಪು, ಪಾಂಡವಪುರ	ಕ್ವಿಟ್ ಇಂಡಿಯಾ ಚಳುವಳಿ	1942
106.	ಸೀತಾರಾಮಯ್ಯಶಾಸ್ತ್ರಿ ವೀರಕೇಸರಿ	ಮದ್ದೂರು	ಶಿವಪುರ ಸತ್ಯಾಗ್ರಹ, ಮೈಸೂರು ಚಲೋ ಚಳುವಳಿ	1938 1947
107.	ಸಿದ್ದೇಗೌಡಹಳ್ಳಿ	ಕ್ಯಾತನಹಳ್ಳಿ, ಪಾಂಡವಪುರ	ಕ್ವಿಟ್ ಇಂಡಿಯಾ ಚಳುವಳಿ	1942
108.	ಸುಬ್ಬೇಗೌಡ	ಚಲುವರಸನ ಕೊಪ್ಪಲು, ಪಾಂಡವಪುರ	ಶಿವಪುರ ಸತ್ಯಾಗ್ರಹ, ಕ್ವಿಟ್‌ಇಂಡಿಯಾ ಚಳುವಳಿ	1938, 1942
109.	ಸೂರ್ಯನಾರಾಯಣ	ನಾಗಮಂಗಲ	ಕ್ವಿಟ್ ಇಂಡಿಯಾ ಚಳುವಳಿ	1942
110.	ಹನುಮಂತೇಗೌಡ.ಬಿ.	ಶಂಭೂನಹಳ್ಳಿ, ಪಾಂಡವಪುರ	ಕ್ವಿಟ್ ಇಂಡಿಯಾ, ಮೈಸೂರುಚಲೋ ಚಳುವಳಿ	1942, 1947
111.	ಹನುಮಂತಯ್ಯ.ಎನ್. ಎಚ್.	ನಾಗಮಂಗಲ	ಏಕೀಕರಣ ಚಳುವಳಿ	1955–56
112.	ಹೊನ್ನಯ್ಯ ಮಂಡ್ಯ	ಇಂಡುವಾಳು, ಮಂಡ್ಯ	ಶಿವಪುರ ಸತ್ಯಾಗ್ರಹ, ಕ್ವಿಟ್ ಇಂಡಿಯಾ, ಮೈಸೂರು ಚಲೋ ಚಳುವಳಿ	1938, 1942, 1947

ಅನುಬಂಧ –2

ಅಧ್ಯಯನ ವಿಷಯಕ್ಕೆ ಸಂಬಂಧಿಸಿದ ಛಾಯಾಚಿತ್ರಗಳು



ಜನವರಿ 6, 1934 ರಂದು ಗಾಂಧೀಜಿ ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಸೋಮನಹಳ್ಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ವಿ.ವೆಂಕಟಪ್ಪ, ಬಾಲಕರಾದ ಬಿ.ವಿ.ತಮ್ಮಯ್ಯ ಮತ್ತು ಎಸ್.ಎಂ.ಕೃಷ್ಣ



ದಿನಾಂಕ ಏಪ್ರಿಲ್ 10, 1938 ರಂದು ಶಿವಪುರ ರಾಷ್ಟ್ರಕೂಟದ ಮೆರವಣಿಗೆಯಲ್ಲಿ ಅಧ್ಯಕ್ಷರಾದ ಟಿ.ಸಿದ್ದಲಿಂಗಯ್ಯನವರು







1938 ರಂದು ಶಿವಪುರ ರಾಷ್ಟ್ರಕೂಟದಲ್ಲಿ ಧ್ವಜಾರೋಹಣಕ್ಕೆ ಮುನ್ನ ನಾಯಕರಿಂದ ಸ್ಥಳ ವೀಕ್ಷಣೆ



ಶಿವಪುರ ರಾಷ್ಟ್ರಕೂಟದಲ್ಲಿ ಧ್ವಜಾರೋಹಣದ ತಯಾರಿ








ಶಿವಪುರ ರಾಷ್ಟ್ರಕೂಟದಲ್ಲಿ ನಾಯಕರೊಡನೆ ಮಾತುಕತೆ



ಶಿವಪುರ ರಾಷ್ಟ್ರಕೂಟದಲ್ಲಿ ಧ್ವಜಾರೋಹಣದಲ್ಲಿ ಭಾಗವಹಿಸಿದ ಸತ್ಯಾಗ್ರಹಿಗಳು







ಶಿವಪುರ ರಾಷ್ಟ್ರಕೂಟದ ಅಧ್ಯಕ್ಷೆ ಟಿ.ಸಿದ್ಧಲಿಂಗಯ್ಯ, ಯಶೋಧರಮ್ಮ ದಾಸಪ್ಪ



ಶಿವಪುರ ರಾಷ್ಟ್ರಕೂಟದ ಧಜ್ವಾರೋಹಣದಲ್ಲಿ ಭಾಗವಹಿಸಿದ ಪ್ರಮುಖ ನಾಯಕರು



ಟಿ. ಸಿದ್ದಲಿಂಗಯ್ಯ ಅವರೊಡನೆ ಪೋಲೀಸ್ ಅಧಿಕಾರಿಗಳ ಸಂಭಾಷಣೆ



1938ರ ಶಿವಪುರ ಧ್ವಜ ಸತ್ಯಾಗ್ರಹಕ್ಕೆ ಪೊಲೀಸ್‌ರಿಂದ ತಡೆಯಾಜ್ಞೆಗೆ ಪ್ರಯತ್ನ





[illegible]



ಶಿವಪುರ ಅಧಿವೇಶನದಲ್ಲಿ ಪಾಲ್ಗೊಂಡ ನಾಯಕರು



ಶಿವಪುರ ಧ್ವಜ ಮೈದಾನದಲ್ಲಿ ಎ. ವೆಂಕಟಪ್ಪ




ಯಶೋಧರ ದಾಸಪ್ಪ ಕಾರ್ಯಕರ್ತರೊಡನೆ ಶಿವಪುರದ ಧ್ವಜಸತ್ಯಾಗ್ರಹದಲ್ಲಿ



ಶಿವಪುರ ಸತ್ಯಾಗ್ರಹದಲ್ಲಿ ಪ್ರಮುಖ ನಾಯಕರುಗಳ ಜೊತೆಗೆ ಮಹಿಳೆಯರು, ವಿದ್ಯಾರ್ಥಿಗಳು



ಶಿವಪುರ ಸತ್ಯಾಗ್ರಹದಲ್ಲಿ ಭಾಗವಹಿಸಿದ ಪ್ರಮುಖ ನಾಯಕರುಗಳು



ದಸ್ತಗಿರಿಯಾದ ಕೆ.ಸಿ. ರೆಡ್ಡಿ, ಹೆಚ್.ಸಿ. ದಾಸಪ್ಪ, ಎ. ವೆಂಕಟಪ್ಪ

ದಿನಾಂಕ 12 ಏಪ್ರಿಲ್, 1938



ಕೆ.ಟಿ. ಭಾಷ್ಯಂ ಅವರು ದಸ್ತಗಿರಿಯಾದಾಗ ಭಾಷಣ ಮಾಡುತ್ತಿರುವುದು



ಶಿವಪುರ ಧ್ವಜ ಸತ್ಯಾಗ್ರಹದಲ್ಲಿ ಕಬ್ಬನ್ ಪೇಟೆ ರಾಮಸ್ವಾಮಿ ಮತ್ತು ಬಳ್ಳಾರಿ ಸಿದ್ದಮ್ಮ



ಶಿವಪುರ ರಾಷ್ಟ್ರಕೂಟದಲ್ಲಿ ಭಾಗವಹಿಸಿದ ಶ್ರೀ ಸಾಮಾನ್ಯರು




ಶಿವಪುರ ರಾಷ್ಟ್ರಕೂಟದ ಒಂದು ದೃಶ್ಯ



ಶಿವಪುರ ರಾಷ್ಟ್ರಕೂಟಕ್ಕೆ ಆಗಮಿಸಿದ್ದ ಜನಸಾಮಾನ್ಯರು



ಧ್ವಜರಕ್ಷಣೆಯಲ್ಲಿ ಸತ್ಯಾಗ್ರಹಿಗಳು









ಶಿವಪುರ ರಾಷ್ಟ್ರಕೂಟದಲ್ಲಿ ಭಾಗವಹಿಸಿದ್ದ ಸ್ವಯಂ ಸೇವಕಿಯರು



ಶಿವಪುರ ರಾಷ್ಟ್ರಕೂಟದಲ್ಲಿ ಭಾಗವಹಿಸಿದ್ದ ಮಹಿಳೆಯರು



ಶಿವಪುರ ರಾಷ್ಟ್ರಕೂಟದಲ್ಲಿ ಹಾರಾಡುತ್ತಿರುವ ರಾಷ್ಟ್ರಧ್ವಜ



ಮಂಡ್ಯ ಜಿಲ್ಲಾ ಕೇಂದ್ರದ ಉದ್ಘಾಟನೆಗೆ ಆಗಮಿಸಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು



ದಿನಾಂಕ ಆಗಸ್ಟ್ 27, 1939 ರಂದು ಮಂಡ್ಯ ಜಿಲ್ಲಾ ಕೇಂದ್ರದ ಉದ್ಘಾಟನೆಗೆ ಸಂದರ್ಭದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ದಿವಾನ್ ಮಿರ್ಜಾ ಇಸ್ಮಾಯಿಲ್‌ರವರು




ಜನವರಿ 1, 1956 ರಂದು ಮೈಸೂರು ವಿಲೀನ ವಿರೋಧಿ ಸಮ್ಮೇಳನ, ಮಂಡ್ಯ



ಮಂಡ್ಯದ ಮೈಸೂರು ವಿಲೀನ ವಿರೋಧಿ ಸಮ್ಮೇಳನಕ್ಕೆ ಭಾಗವಹಿಸಿದ ಚಳುವಳಿಗಾರರಿಗೆ
ಊಟದ ವ್ಯವಸ್ಥೆ



ಮಂಡ್ಯದ ಮೈಸೂರು ವಿಲೀನ ವಿರೋಧಿ ಸಮ್ಮೇಳನದ ಅಧ್ಯಕ್ಷರಾದ ಕೆ.ಲಕ್ಕಪ್ಪಗೌಡ, ಕೆ.ವಿ.ಶಂಕರಗೌಡ, ಹೆಚ್.ಕೆ.ವೀರಣ್ಣಗೌಡ ಹಾಗೂ ಇತರರು



ಮಂಡ್ಯದ ಮೈಸೂರು ವಿಲೀನ ವಿರೋಧಿ ಸಮ್ಮೇಳನಕ್ಕೆ ಭಾಗವಹಿಸಿದ ಚಳುವಳಿಗಾರರು